ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿ ಮಹಿಳಾ ಸಂಘರ್ಷದ ನೆಲೆಗಳು

(ಕನ್ನಡ ವಿಷಯದಲ್ಲಿ ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಲಕ್ಷ್ಮೀಕಾಂತ

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

೨೦೨೦

ಪಂಪ–ಕುಮಾರವ್ಯಾಸರ ಕಾವ್ಯಗಳಲ್ಲಿ ಮಹಿಳಾ ಸಂಘರ್ಷದ ನೆಲೆಗಳು

(ಕನ್ನಡ ವಿಷಯದಲ್ಲಿ ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಮಹಾಪ್ರಬಂಧ)

ಸಂಶೋಧಕರು

ಲಕ್ಷ್ಮೀಕಾಂತ

ಮಾರ್ಗದರ್ಶಕರು

ಡಾ. ಹೆಬ್ಬಾಲೆ ಕೆ. ನಾಗೇಶ್

ಪ್ರಾಧ್ಯಾಪಕರು

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ಜಾನಪದ ಅಧ್ಯಯನ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೨೦

ಸಂಶೋಧಕರ ಪ್ರಮಾಣ ಪತ್ರ

'ಪಂಪ–ಕುಮಾರವ್ಯಾಸರ ಕಾವ್ಯಗಳಲ್ಲಿ ಮಹಿಳಾ ಸಂಘರ್ಷದ ನೆಲೆಗಳು' ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು **ಡಾ. ಹೆಬ್ಬಾಲೆ ಕೆ. ನಾಗೇಶ್** ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ, ಹಂಪಿಯ ಸಮಾಜವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸುತ್ತಿದ್ದೇನೆ. ಈ ಸಂಶೋಧನ ಮಹಾಪ್ರಬಂಧವು ಮೂಲವಾಗಿದ್ದು, ಇಡಿಯಾಗಿ ಇಲ್ಲವೆ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿ ಅಥವಾ ಇತರೆ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

Lakshmikanta.

ಲಕ್ಷ್ಮೀಕಾಂತ

ಜಾನಪದ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಸ್ಥಳ : ವಿದ್ಯಾರಣ್ಯ

ದಿನಾಂಕ: ೦೨/೧೧/೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

ಲಕ್ಷ್ಮೀಕಾಂತ ಇವರು **'ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿ ಮಹಿಳಾ ಸಂಘರ್ಷದ ನೆಲೆಗಳು'** ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯ ಸಮಾಜ ವಿಜ್ಞಾನಗಳ ನಿಕಾಯದ **ಜಾನಪದ ಅಧ್ಯಯನ ವಿಭಾಗಕ್ಕೆ** ಸಲ್ಲಿಸಿದ್ದಾರೆ. ಈ ಮಹಾಪ್ರಬಂಧವು ಮೂಲವಾಗಿದ್ದು, ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇತರೆ ಉದ್ದೇಶಗಳಿಗಾಗಲಿ ಇವರು ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

ಹೆಬ್ಬಾಲೆ ಕೆ. ನಾಗೇಶ್
2/11/2020

ಡಾ. ಹೆಬ್ಬಾಲೆ ಕೆ. ನಾಗೇಶ್
ಪ್ರಾಧ್ಯಾಪಕರು
ಜಾನಪದ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ-೫೮೩೨೭೬

ಸ್ಥಳ : ವಿದ್ಯಾರಣ್ಯ
ದಿನಾಂಕ:

ಪರಿವಿಡಿ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

೧.೧. ಪ್ರಸ್ತಾವನೆ

೧.೨. ಅಧ್ಯಯನದ ಉದ್ದೇಶ

೧.೩. ಅಧ್ಯಯನದ ವ್ಯಾಪ್ತಿ

೧.೪. ಅಧ್ಯಯನದ ಸ್ವರೂಪ

೧.೫. ಅಧ್ಯಯನದ ವಿಧಾನ

೧.೬. ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

೧.೧. ಪ್ರಸ್ತಾವನೆ

ಕನ್ನಡ ಸಾಹಿತ್ಯವನ್ನು ಒಳಗೊಂಡ ಜಾಗತಿಕ ಸಾಹಿತ್ಯ ಮನುಕುಲದ ಜೀವನ ಕ್ರಮವನ್ನು ವಸ್ತುವಾಗಿರಿಸಿಕೊಂಡಿರುತ್ತದೆ. ಈ ಜೀವನ ಕ್ರಮದಲ್ಲಿ ಗುರುತಿಸಬಹುದಾದ ಅನೇಕ ನೆಲೆಗಳು ಸಿಗುತ್ತವೆ. ಅಲೆಮಾರಿ ಜೀವನದಿಂದ ಇಂದಿನ ವಿಭಕ್ತ ಕುಟುಂಬದವರೆಗೆ ಸಾಗಿ ಬಂದಿರುವ ಮನುಕುಲ ಅನ್ಯೋನ್ಯವಾಗಿರುವಷ್ಟೇ ಅನೇಕ ಸಂಘರ್ಷಗಳನ್ನೂ ಎದುರಿಸುತ್ತಿದೆ. ಸಾಮಾಜಿಕವಾದ ಈ ಸಂಘರ್ಷಗಳನ್ನು ಸಾಹಿತಿ ಸಂಘರ್ಷಾತ್ಮಕ ನೆಲೆಯಲ್ಲಿ ಕಾವ್ಯವಾಗಿಸುತ್ತಾನೆ. ಕವಿಯ ಕಾಣ್ಕೆಯ ಫಲವಾಗಿ ಬಿತ್ತರಗೊಳ್ಳುವ ಈ ಸಂಘರ್ಷಗಳು ಸಾಮಾಜಿಕ ಮತ್ತು ಜೀವನ ಮೌಲ್ಯಗಳಾಗಿ ಇವತ್ತಿಗೂ ಚರ್ಚೆಗೊಳ್ಳುತ್ತಿವೆ. ಆದಿ ಕವಿಯಿಂದ ಆರಂಭಿಸಿ ಇಲ್ಲಿಯವರೆಗಿನ ಕವಿಗಳವರೆಗೆ ಅನೇಕ ಸಂಘರ್ಷಗಳನ್ನು ನಾವು ಎದುರುಗೊಳ್ಳುತ್ತಿದ್ದೇವೆ. ಸಮಾಜದಲ್ಲಿ ಸಂಘರ್ಷಗಳು ಏರ್ಪಡಲು ಮನುಷ್ಯ ಸಂಘ ಜೀವಿಯಾಗಿರುವುದು ಮೊದಲ ಕಾರಣವಾದರೆ, ಅವರ ವೈಯಕ್ತಿಕ ಅಸ್ತಿತ್ವ ಎರಡನೆಯ ಕಾರಣವಾಗುತ್ತದೆ. ಈ ಎರಡೂ ನೆಲೆಗಳನ್ನು ಮುಖ್ಯವಾಗಿರಿಸಿಕೊಂಡು ವರ್ಗ ಸಂಘರ್ಷ, ವರ್ಣ ಸಂಘರ್ಷ, ಲಿಂಗಾಧಾರಿತ ಸಂಘರ್ಷ, ಬೌದ್ಧಿಕ ಸಂಘರ್ಷ, ರಾಜಕೀಯ ಸಂಘರ್ಷ, ಧಾರ್ಮಿಕ ಸಂಘರ್ಷ.. ಹೀಗೆ ಸಂಘರ್ಷದ ಹಲವು ಮಗ್ಗಲುಗಳನ್ನು ನಾವು ವ್ಯಾಖ್ಯಾನಿಸಿಕೊಳ್ಳಬಹುದಾಗಿದೆ.

ಸಾಹಿತ್ಯದ ಕಥಾನಕವು ಕವಿ ಸೃಜಿಸಿದ ಪಾತ್ರಗಳ ಉದಾತ್ತ ಚಿಂತನೆಗಳನ್ನು, ಪ್ರತಿರೋಧಾತ್ಮಕ ಗುಣಗಳನ್ನು ತನ್ನ ನಡಿಗೆಯ ಹೆಜ್ಜೆಯಾಗಿರಿಸಿಕೊಂಡಿರುತ್ತದೆ. ಮುಖ್ಯ ಪಾತ್ರಗಳ ನಿರ್ಧಾರಾತ್ಮಕ ಗುಣಗಳ ಜೊತೆಗೆ ಕಾವ್ಯದ ಪೂರಕ ಪಾತ್ರಗಳ ನೋವು – ನಲಿವು, ಪ್ರೀತಿ – ತಿರಸ್ಕಾರ, ಒಪ್ಪಿತ – ತಿರಸ್ಕೃತ, ಅಸಹಾಯಕತೆ, ಪ್ರತಿರೋಧ, ಪ್ರತಿಭಟನೆ ಮುಂತಾದವು ಕಾವ್ಯದ ಸಮಗ್ರ ಭೂಮಿಕೆಗೆ ಅಡಿಗಲ್ಲಾಗುತ್ತವೆ. ಜಾನಪದ ಸಾಹಿತ್ಯ, ರಾಮಾಯಣ, ಮಹಾಭಾರತವನ್ನೂ ಒಳಗೊಂಡ ನಮ್ಮ ಕಾವ್ಯ ಪರಂಪರೆ ನಾಯಕತ್ವದ ನಿರೂಪಣೆಯ ಜೊತೆಗೆ, ಪ್ರತಿನಾಯಕತ್ವವನ್ನೂ ಪೋಷಿಸಿಕೊಂಡು ಬಂದಿರುವುದು ಆ ಕಾವ್ಯಗಳ ಸಮಚಿತ್ತತೆಯನ್ನು ತೋರಿಸುತ್ತದೆ. ಜನಪದ ಸಾಹಿತ್ಯ ವಾಙ್ಮಯವು

ಸಾಮಾಜಿಕ ಜೀವನದ ಅನುಭವದ ಅಭಿವ್ಯಕ್ತಿಯಾದರೆ, ಅವುಗಳ ಮುಂದುವರಿಕೆಯಾದ ಶಿಷ್ಟ ಕಾವ್ಯಗಳು ಮಾನವೀಯ ನೆಲೆಯ ಸಂವೇದನೆಗಳನ್ನು ಪಾಂಡಿತ್ಯಪೂರ್ಣವಾಗಿ ಅಭಿವ್ಯಕ್ತಿಸಿವೆ.

"ಕಸವರಮೆಂಬುದು ನೆಱೆ ಸೈರಿಸಲಾರ್ಪೊಡೆ ಪರವಿಚಾರಮಂ ಧರ್ಮಮುಮಂ"[೧] ಎಂದು ಕವಿರಾಜಮಾರ್ಗಕಾರ ಹೇಳುತ್ತಿರುವುದರಲ್ಲಿನ ಒಳ ಅರ್ಥ ಸಂಘರ್ಷದಿಂದ ಕೂಡಿದ ಬದುಕು, ಆ ಬದುಕನ್ನು ವಸ್ತುವಾಗಿರಿಸಿಕೊಂಡಿರುವ ಕಾವ್ಯ ಎರಡರಲ್ಲಿಯೂ ಉದಾತ್ತತೆಯನ್ನು ಮತ್ತು ಸಮಚಿತ್ತತೆಯನ್ನು ಕಾಯ್ದುಕೊಳ್ಳಬೇಕು ಎಂಬುದಾಗಿದೆ. ಕನ್ನಡದಮಟ್ಟಿಗೆ ನಮ್ಮ ಮಹಾಕಾವ್ಯಗಳಾದ 'ರಾಮಾಯಣ' ಮತ್ತು 'ಮಹಾಭಾರತ'ಗಳು ಪ್ರಭಾವಿಸಿರುವಷ್ಟು ಬೇರಾವ ಕಾವ್ಯಗಳೂ ಪ್ರಭಾವವನ್ನು ಬೀರಿಲ್ಲ. ಈ ಎರಡೂ ಕಾವ್ಯಗಳು ಕಾಲದಿಂದ ಕಾಲಕ್ಕೆ ನಮ್ಮ ಸಾಮಾಜಿಕ ಜೀವನದ ಆಶೋತ್ತರಗಳಿಗೆ ಪೂರಕವಾಗಿ ಮರು ಸೃಜಿಸಲ್ಪಡುತ್ತಿವೆ. ಈ ಮರು ಸೃಜನೆಯಲ್ಲಿ ಕಾಲದ ಒತ್ತಡದಲ್ಲಿ ಮಾಗಿದ ಸೃಜನಶೀಲ ಕವಿ ಮನಸ್ಸು ಈ ಪೌರಾಣಿಕ ಕಾವ್ಯಗಳ ಕಥಾವಸ್ತುವಿನಲ್ಲಿ ವಿಜೃಂಭಿಸುವುದಕ್ಕಿಂತ ಸಾಮಾಜಿಕ ನ್ಯಾಯದ ನೆಲೆಯತ್ತ ಸಾಗಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

ಪಂಪನು ಲೌಕಿಕ ಹಾಗೂ ಆಗಮಿಕಗಳ ಆದರ್ಶವನ್ನು ಮುನ್ನೆಲೆಯಾಗಿರಿಸಿಕೊಂಡು ಕಾವ್ಯ ರಚಿಸಿದವನು. 'ವಿಕ್ರಮಾರ್ಜುನ ವಿಜಯ'ದಲ್ಲಿ ಕಂಡುಬರುವ ಲೌಕಿಕ ಅಭಿವ್ಯಕ್ತಿಗಿಂತ ಭಿನ್ನವಾದ ಲೌಕಿಕ ಅಭಿವ್ಯಕ್ತಿಯನ್ನು 'ಆದಿಪುರಾಣ'ದಲ್ಲಿಯೂ ಗುರ್ತಿಸಬಹುದಾಗಿದೆ. ಕಾಲಘಟ್ಟದ ನೆಲೆಯಲ್ಲಿ ಹತ್ತನೇ ಶತಮಾನ 'ವೀರ ರಸ'[೨] ಪ್ರಧಾನವಾದುದು. ಧರ್ಮಾತೀತವಾದ ಸಾಮಾಜಿಕ ಜೀವನ ಈ ಎರಡೂ ಕಾವ್ಯಗಳಲ್ಲಿ ಕಾಣಸಿಗುತ್ತದೆ. 'ವಿಕ್ರಮಾರ್ಜುನ ವಿಜಯ'ದಲ್ಲಿ ಅರಿಕೇಸರಿಯನ್ನು ಅರ್ಜುನನಿಗೆ ಸಮೀಕರಿಸುವಾಗ 'ವ್ಯಾಸಭಾರತ'ದ ಕಾವ್ಯಭಿತ್ತಿಯ ಪಾತ್ರಗಳನ್ನು ದುಡಿಸಿಕೊಳ್ಳುವಲ್ಲಿ ಪಂಪ ತೋರಿದ ಜಾಣ್ಮೆ ಮತ್ತು ಪ್ರೌಢಿಮೆಗಳು ಕನ್ನಡ ಸಾಹಿತ್ಯದುದ್ದಕ್ಕೂ ಮಾದರಿಯಾಗಿ ಉಳಿದಿವೆ. ಪಂಪನ ಮುಕ್ತವಾದ ಅಭಿಪ್ರಾಯಗಳನ್ನು 'ಆದಿಪುರಾಣ'ಕ್ಕಿಂತ 'ವಿಕ್ರಮಾರ್ಜುನ ವಿಜಯ'ದಲ್ಲಿ ಕಾಣಬಹುದಾಗಿದೆ. ಮಹಾಕಾವ್ಯದ ಅಷ್ಟಾದಶ ವರ್ಣನೆಗಳನ್ನು ಒಳಗೊಂಡೇ ವ್ಯಾಸನ ಕಥಾವಸ್ತುವನ್ನು ವೈಭವೀಕರಿಸದೆ ವಿವೇಚಿಸಿದ್ದಾನೆ. ಈ ಹಿಂದೆ ಹೇಳಿದ ಸಂಘರ್ಷದ ನೆಲೆಗಳನ್ನು 'ವಿಕ್ರಮಾರ್ಜುನ ವಿಜಯ'ದ ಉದ್ದಕ್ಕೂ ಎದುರುಗೊಳ್ಳಬಹುದಾಗಿದೆ. ಪಂಪ "ನೆನೆಯದಿರಣ್ಣ ಭಾರತದೊಳಿಂ ಪೆಱರಾರಮನೊಂದೆ ಚಿತ್ತದಿಂ ನೆನೆವೊಡೆ ಕರ್ಣನಂ ನೆನೆಯ"[೩] ಎಂದು ಹೇಳುವ ಮೂಲಕವೇ ಪ್ರಭುತ್ವಕ್ಕೆ ಸಂಘರ್ಷವನ್ನು ಒಡ್ಡಿದ್ದಾನೆ. ಪ್ರತಿ ನಾಯಕನನ್ನು ಸ್ತುತಿಗೊಳಿಸುವ ಈ ಕವಿ ಪ್ರತಿಭೆ ಅರಿಕೇಸರಿಗೆ ಅರ್ಥವಾಗಲಿಲ್ಲವೆಂದೇನೂ ಇಲ್ಲ. ಪ್ರಭುತ್ವವು ಈರ್ಷೆಗೊಳ್ಳದ ನೆಲೆಯಲ್ಲಿ ಪಂಪ ಆ ಕಾವ್ಯವನ್ನು ನಿರ್ವಹಿಸಿದ್ದಾನೆ. ಆದ್ದರಿಂದಲೇ ಅರಿಕೇಸರಿಯಿಂದ ಪಂಪ ಪುರಸ್ಕೃತನಾದನು.

ಪಂಪನ ನಂತರ ರನ್ನನು 'ಮಹಾಭಾರತ'ದ ಕಥಾನಕವನ್ನು ನಿರ್ವಹಿಸಿದವರಲ್ಲಿ ಪ್ರಮುಖನು. ಆದರೆ ಕೇವಲ ಯುದ್ಧದ ಸಂದರ್ಭವನ್ನು ಪ್ರಧಾನ ಮನೋಭೂಮಿಕೆಯಾಗಿಸಿಕೊಂಡು ರಚಿತವಾದ 'ಸಾಹಸಭೀಮ ವಿಜಯ'ಕ್ಕಿಂತ ಕುಮಾರವ್ಯಾಸನು ಮಹಾಭಾರತವನ್ನು ನಿರ್ವಹಿಸಿದ ರೀತಿ

ವಿನೂತನವಾದುದು.[೪] ಏಕೆಂದರೆ ಆ ವೇಳೆಗಾಗಲೇ ವಚನ ಸಾಹಿತ್ಯ ವಾಙ್ಮಯವು ಕಾವ್ಯ ಭಾಷೆಯನ್ನು ಸಂಸ್ಕೃತದಿಂದ ಬಿಡಿಸಿ ಜನರ ಕೈಗಿತ್ತಿತ್ತು. ಅಷ್ಟು ಮಾತ್ರವಲ್ಲ ಪಂಪನ ಕಾಲಕ್ಕಿಂತ ಭಿನ್ನವಾದ ದೃಷ್ಟಿಕೋನಗಳು ಕಾವ್ಯ ವಲಯವನ್ನು ಪ್ರಭಾವಿಸುತ್ತಿದ್ದವು. ಆದ್ದರಿಂದ ಪಂಪ, ರನ್ನರ ರೀತಿಯಲ್ಲೆ ಕುಮಾರವ್ಯಾಸನು ಮಹಾಭಾರತದ ಕಥಾನಕವನ್ನೇ ಮುಂದುವರೆಸಿದರೂ ಜನಪದ[೫] ಹಾಗೂ ದೇಸಿನಿಷ್ಠವಾದ ಇಲ್ಲವೆ ದೇಸಿಪ್ರಚುರವಾದ[೬] ಸಂಪ್ರದಾಯದ ಶೈಲಿ ಕುಮಾರವ್ಯಾಸನನ್ನು ಸಶಕ್ತಗೊಳಿಸಿದೆ. ಪಂಪ – ಕುಮಾರವ್ಯಾಸರು ಹೇಳಿರುವುದು ಒಂದೇ ಕಥಾನಕವಾದರೂ ಅವರ ಕವಿ ಪ್ರತಿಭೆಗಳು ಎರಕ ಹೊಯ್ದಿರುವ ಕಥೆ ಮಾತ್ರ ಭಿನ್ನವಾಗಿದೆ. ಪಂಪ ಸಮಸ್ತ ಭಾರತ[೭] ವನ್ನು ಹೇಳಿದರೆ, ಕುಮಾರವ್ಯಾಸ ಕೃಷ ಕಥೆ[೮] ಎನ್ನುತ್ತಾನೆ. ಈ ಎರಡೂ ಕಾವ್ಯಗಳಲ್ಲಿಯ ಸಾಮಾಜಿಕ ಜೀವನದ ಸಂಘರ್ಷಗಳನ್ನು ಅಧ್ಯಯನದ ವಸ್ತುವಾಗಿ ಇರಿಸಿಕೊಳ್ಳಬಹುದಾಗಿದೆ. ಈ ಸಾಮಾಜಿಕ ಜೀವನ ಎನ್ನುವುದು ಸಾರ್ವತ್ರಿಕವಾದದ್ದು. ಆದರೆ ಅದನ್ನು ಗ್ರಹಿಸುವ ದೃಷ್ಟಿಕೋನಗಳು ಮಾತ್ರ ಭಿನ್ನವಾಗಿರುತ್ತವೆ. "ಪಂಪನ ದೃಷ್ಟಿಯಲ್ಲಿ 'ಭಾರತ'ವು ಬಹುಶಃ ಒಂದು ಮಾನವೀಯ ಸಂಘರ್ಷದ ಚಿತ್ರವಾಗಿದೆ, ಕುಮಾರವ್ಯಾಸನು ಮಾನವೀಯತೆಯನ್ನು ಅಲ್ಲಗಳೆಯದೆ ಅದಕ್ಕೆ ಪ್ರೇರಕವಾದ ದೈವೀಶಕ್ತಿಯ ಲೀಲೆಯನ್ನು ಬಣ್ಣಿಸಿದ್ದಾನೆ"[೯] ಎಂಬ ಅಭಿಪ್ರಾಯವು ಪಂಪ ಹಾಗೂ ಕುಮಾರವ್ಯಾಸರ ಕಾವ್ಯರಚನಾ ದೃಷ್ಟಿಕೋನಗಳನ್ನು ನಮಗೆ ಮನಗಾಣಿಸುತ್ತವೆ.

ವರ್ತಮಾನದ ಸಂಘರ್ಷವನ್ನು ಸಾಹಿತ್ಯದ ಸಂಘರ್ಷದೊಂದಿಗೆ ತಾತ್ವೀಕರಿಸಿಕೊಂಡು ಸಮಾಜವನ್ನು ಎದುರುಗೊಳ್ಳುವ ಬಗೆಯನ್ನು ಅರಿಯುವುದು ನಮಗೆ ಅನಿವಾರ್ಯವಾಗಿದೆ. ಕಾಲದಿಂದ ಕಾಲಕ್ಕೆ ಮೌಲ್ಯಗಳು ಸತ್ವಹೀನವಾಗುತ್ತಿವೆ. ಛಲ, ನನ್ನಿ, ಧರ್ಮ, ತ್ಯಾಗ, ಬಲ, ಶೌರ್ಯ, ಉದಾತ್ತತೆ, ಆದರ್ಶ ಗುಣಗಳನ್ನು ಮರು ವ್ಯಾಖ್ಯಾನಗೊಳಿಸಿಕೊಳ್ಳುವ ಕಾಲವಿದು. ಸಮಾನತೆ ಎನ್ನುವ ಮಾತು ಸರ್ವ ವ್ಯಾಪಕವಾದರೂ ಅಸಮಾನತೆಯ ಮನಸ್ಥಿತಿಯಲ್ಲಿದ್ದೇವೆ. ಜಾತ್ಯಾತೀತ ಬದುಕನ್ನು ಎದುರು ನೋಡುತ್ತ ಮತಾಂಧರಾಗುತ್ತಿದ್ದೇವೆ. ಸ್ತ್ರೀ ಪುರುಷರ ಸಮಾನತೆಯ ನೆಲೆಗಳು ಅಪವ್ಯಾಖ್ಯಾನಗೊಳ್ಳುತ್ತಿವೆ. ಶತ ಶತಮಾನದಿಂದ ಅಸಮಾನತೆ, ಅತೃಪ್ತಿ, ಕೌಟುಂಬಿಕ ಬಂಧನದಲ್ಲಿದ್ದ ಸ್ತ್ರೀಲೋಕ ವರ್ತಮಾನದಲ್ಲಿ ಎದುರಿಸುತ್ತಿರುವ ಸಂಘರ್ಷಗಳು ಹಿಂದಿಗಿಂತ ಇಂದು ಹೆಚ್ಚು ಸಂಕೀರ್ಣವಾಗಿವೆ. ಮಹಿಳಾ ಆಶಾವಾದಿತನವನ್ನೇ ಅಸ್ತ್ರವಾಗಿರಿಸಿಕೊಂಡಿರುವ ಇಂದಿನ ಆಧುನಿಕ ಜಗತ್ತು ಪುರುಷಾಧಿಕಾರದ ಹೊಸ ಮಗ್ಗುಲಿಗೆ ಹೊರಳುತ್ತಿದೆ. ಇಂತಹ ಸಂದರ್ಭದಲ್ಲಿ ಪಂಪ–ಕುಮಾರವ್ಯಾಸರು ತಮ್ಮ ಕಾವ್ಯಗಳಲ್ಲಿ ಅಭಿವ್ಯಕ್ತಿಸಿದ ಮಹಿಳಾ ಸಂಘರ್ಷಗಳನ್ನು ಮರು ಓದಿಗೆ ಒಳಪಡಿಸುವ, ಮರು ವ್ಯಾಖ್ಯಾನಗೊಳಿಸಿಕೊಳ್ಳುವ ಜರೂರತ್ತು ಇದೆ. ಈ ತುರ್ತು ಕೇವಲ ಓದಿನ ಭಾಗವಾಗಿರದೆ ಬದುಕಿನ ಭಾಗವಾಗಿಸುವಲ್ಲಿ ನಮ್ಮ ಆಲೋಚನೆಗಳನ್ನು ನವೀಕರಣಗೊಳಿಸುವಂತಿರಬೇಕಾಗಿದೆ.

ಪಂಪ – ಕುಮಾರವ್ಯಾಸರ ಕಾವ್ಯಗಳಲ್ಲಿ ಸಮಾಜದ ಎಲ್ಲಾ ವರ್ಗದ ಮಹಿಳಾ ಸಂವೇದನೆಗಳನ್ನು, ಸಂಘರ್ಷಗಳನ್ನು ಕಾಣಬಹುದು. ಕಾಲಮಾನದ ದೃಷ್ಟಿಯಿಂದ ಇಬ್ಬರೂ ಕವಿಗಳು ಭಿನ್ನವಾಗಿರುವುದು

ಮತ್ತು ಇಬ್ಬರೂ ಕವಿಗಳನ್ನು ಓದುವ ನಮ್ಮ ವರ್ತಮಾನದ ಓದು ಕೃತಿಯ ಕಾಲಕ್ಕಿಂತಲೂ ಹೆಚ್ಚು ಆಧುನೀಕರಣಗೊಂಡಿದ್ದರೂ ಪುರುಷ ನಿರ್ಮಿತ ಸಮಾಜ ಮಹಿಳೆಯನ್ನು ಹಾಗೂ ಮಹಿಳಾ ಸಂವೇದನೆಗಳನ್ನು ಅರಿಯುವಲ್ಲಿ ಸೋತಿದೆ. ಅಲ್ಲದೆ ಮಹಿಳಾ ಸಂಘರ್ಷಗಳು ಕಾಲದಿಂದ ಕಾಲಕ್ಕೆ ಭಿನ್ನ ಸ್ವರೂಪ ಪಡೆಯುತ್ತಲೇ ಇವೆ.

೧.೨. ಅಧ್ಯಯನದ ಉದ್ದೇಶ

ವ್ಯಾಸ ಮಹರ್ಷಿಯ 'ಮಹಾಭಾರತ' ಕೃತಿಯು ಗೋವುಗಳ ಕಾರಣವಾಗಿ, ಭೂಮಿಗಾಗಿ, ರಾಜತ್ವದ ಪದವಿಗಾಗಿ ಅಣ್ಣ ತಮ್ಮಂದಿರಾದ ಕೌರವ-ಪಾಂಡವ ಹಾಗೂ ಹಲವು ರಾಜ ಮಹಾರಾಜರುಗಳ ಸಂಘರ್ಷಗಳ ಕಥನವಾಗಿದೆ. ಜೊತೆಗೆ ಅಪಮಾನಕ್ಕೆ ಒಳಗಾದ ದ್ರೌಪದಿಯ ಸೇಡಿನ, ಪ್ರತೀಕಾರದ ಮನೋಭಾವಗಳ ಕಥೆಯೂ ಆಗಿದೆ. ಈ ಕೃತಿಯ ಪ್ರಭಾವದಿಂದ ರಚಿತವಾಗಿರುವ 'ವಿಕ್ರಮಾರ್ಜುನ ವಿಜಯ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳಲ್ಲಿಯು ಸಹ ಅಣ್ಣ ತಮ್ಮಂದಿರ ನಡುವೆ ರಾಜತ್ವಕ್ಕಾಗಿ, ಭೂಮಿಗಾಗಿ, ಛಲ ಹಾಗೂ ಅಧಿಕಾರದ ಕಾರಣವಾಗಿ ನಡೆದ ಹೋರಾಟದ ವಿವರಗಳನ್ನು ಕಾಣಬಹುದಾಗಿದೆ. ಜೊತೆಗೆ ಇವೆರಡೂ ಕೃತಿಗಳಲ್ಲಿಯು ಸತ್ಯವತಿ, ಅಂಬೆ, ಅಂಬಿಕೆ, ಅಂಬಾಲಿಕೆ, ಕುಂತಿ, ಮಾದ್ರಿ, ಗಾಂಧಾರಿ, ಹಿಡಿಂಬೆ, ದ್ರೌಪದಿ, ಸುಭದ್ರೆ, ಭಾನುಮತಿ, ರಂಭೆ, ಊರ್ವಶಿ ಮೊದಲಾದ ಹೆಣ್ಣುಗಳ ಪ್ರೀತಿ, ಪ್ರೇಮ, ವಿರಹ, ತಿರಸ್ಕಾರ, ಅಸಹಾಯಕತೆ, ದುಃಖ, ಅಪಮಾನ, ನೋವು, ತೊಳಲಾಟ, ಸಂತೋಷ, ಅವರ ಪ್ರತಿರೋಧ ಮತ್ತು ಪ್ರತಿಭಟನಾತ್ಮಕ ಪ್ರತಿಕ್ರಿಯೆಗಳ ವಿವರಗಳಿವೆ. ಅಲ್ಲದೆ ಅಸ್ತಿತ್ವವಾದಿ ನೆಲೆಯಲ್ಲಿ ಇಲ್ಲಿನ ಬಹಳಷ್ಟು ಮಹಿಳೆಯರ ಸಂಘರ್ಷಗಳಿರುವುದು ತಿಳಿಯುತ್ತದೆ. ಸತ್ಯವತಿ, ಅಂಬೆ, ದ್ರೌಪದಿ, ಕುಂತಿ, ಗಾಂಧಾರಿ ಮೊದಲಾದವರೆಲ್ಲರೂ ತಮ್ಮ ಅಸ್ತಿತ್ವದ ಕಾರಣವಾಗಿಯೆ ಹಲವು ರೀತಿಯ ಸಂಘರ್ಷಗಳಿಗೆ ಒಳಗಾಗಿದ್ದಾರೆ. ಇವುಗಳಲ್ಲಿ ಮಹಿಳೆಯರ ಸಂಘರ್ಷದ ಪರಿಕಲ್ಪನೆಯು ತನ್ನದೇ ಆದ ಸ್ಥಾನ ಹಾಗೂ ಪಾತ್ರವನ್ನು ವಹಿಸುತ್ತದೆಯಲ್ಲದೆ, ಈ ಎರಡೂ ಕೃತಿಗಳಲ್ಲಿಯೂ ಮಹಿಳಾ ಸಂಘರ್ಷದ ನೆಲೆಗಳನ್ನು ಗುರುತಿಸಬಹುದಾಗಿದೆ.

'ಸಂಘರ್ಷ' ಎಂಬ ಪದವನ್ನು ಗಮನಿಸಿದಾಗ ನಮಗೆ ಇದರೊಳಗೆ ಹಲವು ರೀತಿಯ ಸಂಘರ್ಷಗಳು ಅಡಗಿರುವುದು ತಿಳಿಯುತ್ತದೆ. ಧಾರ್ಮಿಕ ಸಂಘರ್ಷ, ವರ್ಗ-ವರ್ಣ ಸಂಘರ್ಷ, ದೈಹಿಕ ಸಂಘರ್ಷ, ಮಾನಸಿಕ ಸಂಘರ್ಷ, ತಾತ್ವಿಕ ಸಂಘರ್ಷ, ಪುರುಷ ಸಂಘರ್ಷ, ಪ್ರಭುತ್ವಗಳ ಸಂಘರ್ಷ, ಭಾಷಿಕ ಸಂಘರ್ಷ, ಜನಾಂಗಿಕ ಸಂಘರ್ಷ, ಸಾಂಸ್ಕೃತಿಕ ಸಂಘರ್ಷ, ಮಹಿಳಾ ಸಂಘರ್ಷ, ವೈಯಕ್ತಿಕ ಸಂಘರ್ಷ, ಸಾಮುದಾಯಿಕ ಸಂಘರ್ಷ ಹೀಗೆ ಹಲವು ರೀತಿಯ ಸಂಘರ್ಷಗಳನ್ನು ಕಾಣಬಹುದಾಗಿದೆ. ಈ ಎಲ್ಲ ಸಂಘರ್ಷಗಳಿಗೆ ಅವುಗಳದೇ ಆದ ವ್ಯಾಖ್ಯಾನ, ವ್ಯಾಪ್ತಿ ಹಾಗೂ ಹರಹುಗಳಿವೆ.

ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ 'ಸಂಘರ್ಷ' ಎಂಬ ಪದವನ್ನು 'ತಿಕ್ಕಾಟ' ಅಥವಾ 'ಕಾದಾಟ'[೧೦] ಎಂಬ ಅರ್ಥಗಳಿಗಷ್ಟೇ ಸೀಮಿತವಾಗಿ ಪರಿಭಾವಿಸದೆ ಮನಸ್ಸಿನಲ್ಲಿ ಮೂಡುವ ಸಂತೋಷ, ಅಸಹಾಯಕತೆ, ದುಃಖ, ಸಿಟ್ಟು, ಅಸಹನೆ, ಪ್ರತೀಕಾರ, ಪ್ರತಿಭಟನೆ ಮೊದಲಾದ ಭಾವನೆಗಳ ಹಿನ್ನೆಲೆಯ ವಿಶಾಲವಾದ ಅರ್ಥದಲ್ಲಿ ಗ್ರಹಿಸಲಾಗಿದೆ. ಪ್ರಸ್ತುತ ವಿಷಯದ ಸಂದರ್ಭದಲ್ಲಿ 'ಸಂಘರ್ಷ' ಪದವನ್ನು ಮುಖ್ಯವಾಗಿ ಮಹಿಳೆಯರ ಮಾನಸಿಕ ಭಾವನೆಗಳ ಹಿನ್ನೆಲೆಯಲ್ಲಿ ಅರ್ಥೈಸಿಕೊಳ್ಳಲಾಗಿದೆ. ಅವರ ಮನಸ್ಸಿನ ತಾಕಲಾಟಗಳ, ಒಳತೋಟಿಗಳ ಹಿನ್ನೆಲೆಯಲ್ಲಿ, ಸನ್ನಿವೇಶ ಅಥವಾ ಸಂದರ್ಭಗಳಿಗೆ ಅವರಿಂದ ವ್ಯಕ್ತವಾಗುವ ಸಂತೋಷ, ಕೋಪ, ಭಯ, ದುಃಖ, ಅತೃಪ್ತಿ, ಅಸಹನೆ, ಅಸಮಾಧಾನ, ಅಸಹಕಾರ, ವ್ಯಗ್ರತೆ ಮೊದಲಾದ ಪ್ರತಿಕ್ರಿಯೆಗಳ ಹಿನ್ನೆಲೆಯಲ್ಲಿ ಪರಿಭಾವಿಸಿ ಅಧ್ಯಯನಕ್ಕೆ ತೊಡಗಲಾಗಿದೆ.

ಹೀಗಾಗಿ 'ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿ ಮಹಿಳಾ ಸಂಘರ್ಷದ ನೆಲೆಗಳು' ಎಂಬ ವಿಷಯದ ಅಧ್ಯಯಯನಕ್ಕೆ ತೊಡಗಲು ಇರುವ ಉದ್ದೇಶಗಳೆಂದರೆ

೧. ಪುರುಷ ಪ್ರಧಾನ ಸಮಾಜದಲ್ಲಿ ಜೀವಿಸಿದ್ದ ಪಂಪ ಹಾಗೂ ಕುಮಾರವ್ಯಾಸರಿಬ್ಬರೂ ತಮ್ಮ ಕಾವ್ಯಗಳಲ್ಲಿ ಹೆಣ್ಣನ್ನು ಅಧಿಕಾರ, ಪ್ರಭುತ್ವ, ಒಡೆತನದ ದೃಷ್ಟಿಯಲ್ಲಿ ಚಿತ್ರಿಸುತ್ತ ಈ ಇಬ್ಬರೂ ಕವಿಗಳು ತಳೆದಿರಬಹುದಾದ ಸ್ತ್ರೀಪರ ನಿಲುವುಗಳನ್ನು ಗುರುತಿಸುವುದು ಈ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

೨. ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿನ ಮಹಿಳಾ ಸಂಘರ್ಷಗಳನ್ನು ಪುರುಷ, ಪ್ರಭುತ್ವ, ಪ್ರಕೃತಿ, ಸಮಾಜ, ಸಂಸ್ಕೃತಿ ಮೊದಲಾದ ವಿವಿಧ ಆಯಾಮಗಳ ಹಿನ್ನೆಲೆಯಲ್ಲಿ ಚರ್ಚೆಗೆ ಒಳಗು ಮಾಡುವ ಮೂಲಕ ಪುರುಷ, ಪ್ರಭುತ್ವ, ಪ್ರಕೃತಿ, ಸಮಾಜ ಹಾಗೂ ಸಂಸ್ಕೃತಿಗಳೊಂದಿಗೆ ಇಲ್ಲಿನ ಮಹಿಳೆಯರು ಯಾವ ರೀತಿಯ ಸಂಘರ್ಷಗಳನ್ನು ಎದುರಿಸುತ್ತಾರೆ ಎಂಬ ಅಂಶಗಳನ್ನು ಇಲ್ಲಿ ಪರಾಮರ್ಶಿಸುವ ಉದ್ದೇಶವನ್ನು ಹೊಂದಲಾಗಿದೆ.

೩. ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳನ್ನು ಕುರಿತು ಇದುವರೆಗಿನ ಅಧ್ಯಯನಗಳು ಸಾಹಿತ್ಯಿಕ ದೃಷ್ಟಿಯಿಂದ, ಪಾತ್ರಗಳ ಹಿನ್ನೆಲೆ, ಕೃತಿಗಳ ಪಾಠಾಂತರಗಳ ವಿಶ್ಲೇಷಣೆ, ವಿಮರ್ಶೆ, ಅವುಗಳ ಛಂದಸ್ಸು, ಅಲ್ಲಿ ಬಳಕೆಯಾಗಿರುವ ರೂಪಕಗಳನ್ನು ಕುರಿತ ಅಧ್ಯಯನಗಳಾಗಿವೆ. ಅಲ್ಲದೆ ಪಾತ್ರಗಳನ್ನು ಕುರಿತ ಅಧ್ಯಯನಗಳಲ್ಲಿ ಕೃಷ್ಣ, ಕರ್ಣ, ಭೀಷ್ಮ ಹಾಗೂ ಸ್ತ್ರೀ ಪಾತ್ರಗಳಲ್ಲಿ ಕುಂತಿ, ದ್ರೌಪದಿಯಂತಹ ಪಾತ್ರಗಳು ಹೆಚ್ಚು ಚರ್ಚಿತವಾಗಿರುವುದು ಕಂಡುಬರುತ್ತದೆ. ಉಳಿದ ಪಾತ್ರಗಳು ಇಲ್ಲಿ ಗೌಣ ಅಥವಾ ಅವಜ್ಞೆಗೊಳಗಾಗಿವೆ. ಅಂತಹ ಅಲಕ್ಷಿತ ಹಾಗೂ ಅನಾಮಿಕ ಮಹಿಳಾ ಪಾತ್ರಗಳನ್ನು ಅವರ ಸಂಘರ್ಷಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಪ್ರಸ್ತುತ ಅಧ್ಯಯನದ ಉದ್ದೇಶವಾಗಿದೆ.

೪. ಮಹಿಳೆಯರನ್ನು ಕುರಿತು ಎರಡೂ ಕೃತಿಗಳಲ್ಲಿ ಸಾಂಪ್ರದಾಯಿಕ ದೃಷ್ಟಿಕೋನಗಳಿದ್ದರೂ ಸಹ ಇಲ್ಲಿನ ಅಂಬೆ, ದ್ರೌಪದಿ ಮೊದಲಾದ ಸ್ತ್ರೀ ಪಾತ್ರಗಳನ್ನು ಸ್ತ್ರೀವಾದಿ ದೃಷ್ಟಿಕೋನದ ಹಿನ್ನೆಲೆಯಲ್ಲಿ ವಿವೇಚಿಸಲು ಹಲವು ಸಾಧ್ಯತೆಗಳಿರುವ ಕಾರಣವಾಗಿ ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಲ್ಲಿ ಇಲ್ಲಿನ ಸ್ತ್ರೀ ಪಾತ್ರಗಳನ್ನು ಚರ್ಚೆಗೆ ಒಳಗುಮಾಡುವ ಉದ್ದೇಶವಿದೆ.

೫. ಈ ಕಾವ್ಯಗಳಲ್ಲಿನ ಹೆಣ್ಣುಗಳ ಮಾನಸಿಕ ತೊಳಲಾಟಗಳು, ಅವರು ಎದುರಿಸುವ ಸಂದಿಗ್ಧತೆಯ ಅಂಶಗಳ ವಿಶ್ಲೇಷಣೆ, ನೋವು, ನಲಿವು ಅವರ ತಾಕಲಾಟಗಳ ಅಧ್ಯಯನವೂ ಪ್ರಸ್ತುತ ನಿಬಂಧದ ಉದ್ದೇಶಗಳಲ್ಲೊಂದಾಗಿದೆ.

೬. ಸ್ತ್ರೀಯರ ವೈಯಕ್ತಿಕ ಸಂಘರ್ಷಕ್ಕಿಂತ ಸಾಮುದಾಯಿಕ ಅಥವಾ ಸಮುದಾಯದ ಹಿತದ ಉದ್ದೇಶವನ್ನು ಒಳಗೊಂಡ ಸಂಘರ್ಷವು ಹೆಚ್ಚು ಚರ್ಚಾರ್ಹವಾದುದು. ಇಂತಹ ಸಾಮೂಹಿಕ ಚಿಂತನೆಯ ಆಶಯದಿಂದ ಕೂಡಿದ ಸ್ತ್ರೀ ಸಂಘರ್ಷವನ್ನು ಅನುಭವಿಸುವ ಹಾಗೂ ಅಭಿವ್ಯಕ್ತಿಸುವ ಪಾತ್ರಗಳನ್ನು ಗುರುತಿಸುವುದೂ ಈ ಅಧ್ಯಯನದ ಉದ್ದೇಶಗಳಲ್ಲಿ ಒಂದು.

೭. ಸಮಕಾಲೀನ ಸಮಾಜದಲ್ಲಿನ ಮಹಿಳೆಯರ ಸ್ಥಿತಿಗತಿ ಹಾಗೂ ಅವರ ಸ್ಥಾನಮಾನಗಳನ್ನು ಮಾದರಿಯಾಗಿರಿಸಿಕೊಂಡು ಪಂಪ-ಕುಮಾರವ್ಯಾಸರ ಕಾವ್ಯಗಳ ಮಹಿಳೆಯರ ಸ್ಥಿತಿಗತಿ ಅಧ್ಯಯನಕ್ಕೆ ಒಳಪಡಿಸುವ ಉದ್ದೇಶವಿದೆ.

೮. ಬಾಂಧವ್ಯ, ಸಂಬಂಧಗಳ ಮೂಲಕ ತನ್ನ ಇರುವಿಕೆಯನ್ನು ಹಾಗೂ ಅಸ್ತಿತ್ವವನ್ನು ಅರ್ಥೈಸಲು ಅಥವಾ ಕಟ್ಟಿಕೊಳ್ಳಲು ನಡೆಸುವ ದ್ರೌಪದಿಯ ಸಂಘರ್ಷಗಳನ್ನು ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಲಾಗಿದೆ.

೯. ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಕುಂತಿಯ ಸಂಘರ್ಷಗಳನ್ನು ವರ್ತಮಾನದ ವಿವಾಹಪೂರ್ವದ ತಾಯ್ತನದ ಸಂಘರ್ಷಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗುವುದು.

೧.೩ ಅಧ್ಯಯನದ ವ್ಯಾಪ್ತಿ

ಪ್ರಸ್ತುತ ಅಧ್ಯಯನಕ್ಕೆ ಪಂಪನ 'ವಿಕ್ರಮಾರ್ಜುನ ವಿಜಯ' ಹಾಗೂ ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳನ್ನು ಆಯ್ದುಕೊಳ್ಳಲಾಗಿದೆ. ಪಂಪ ಮಹಾಕವಿಯು ತನ್ನ ಕೃತಿಗಳನ್ನು ರಚಿಸುವಲ್ಲಿ ಆಗಮಿಕ ಹಾಗೂ ಲೌಕಿಕ ಎಂಬ ಪ್ರಕಾರಗಳನ್ನು ಅನುಸರಿಸಿದ್ದಾನೆ. ಈ ರೀತಿ ಅನುಸರಿಸಿದ್ದರು ಈತನ ಎರಡೂ ಕೃತಿಗಳೊಳಗಿನ ವಸ್ತು, ವಿಚಾರ ಸ್ತ್ರೀಯರ ಸಂಘರ್ಷಗಳೇ ಆಗಿವೆ. ಅವಳನ್ನು ನೋಡುವ ಕ್ರಮ ಭೋಗದ ವಸ್ತುವೇ ಆಗಿದೆ. ಕುಮಾರವ್ಯಾಸನ ಕೃತಿಯು ಕೃಷ್ಣನ ಕಥೆಯನ್ನು ಹೇಳುವ ಮುಖ್ಯ ಉದ್ದೇಶವನ್ನು ಒಳಗೊಂಡಿದ್ದರು ಸಹ ದ್ರೌಪದಿಯ ಮೂಲಕ ಆ ಕಾಲಘಟ್ಟದ ಮಹಿಳೆಯರ ಸ್ಥಿತಿಗತಿಗಳನ್ನು ತಿಳಿಸಿಕೊಡುವ ಉದ್ದೇಶವೂ ಅಡಗಿರುವುದು ಗಮನಕ್ಕೆ ಬರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವು ಈ ಎರಡು ಕೃತಿಗಳ ವ್ಯಾಪ್ತಿಯನ್ನು

ಒಳಗೊಂಡಿದೆ. ಜೊತೆಗೆ ಸಾಂದರ್ಭಿಕವಾಗಿ ಅಧ್ಯಯನಕ್ಕೆ ಪೂರಕವಾಗುವ ಆಧುನಿಕ ವಾದಗಳನ್ನು ಬಳಸಿಕೊಳ್ಳಲಾಗಿದೆ.

೧.೪ ಅಧ್ಯಯನದ ಸ್ವರೂಪ

'ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿ ಮಹಿಳಾ ಸಂಘರ್ಷದ ನೆಲೆಗಳು' ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಳ್ಳಲಾಗಿದೆ. ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಪೂರಕವಾಗಿ ಈ ಅಧ್ಯಯನವು ಒಂಭತ್ತು ಅಧ್ಯಾಯಗಳಿಂದ ಕೂಡಿದೆ.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಹಾಗೂ ಅಧ್ಯಯನದ ವಿಧಾನಗಳನ್ನು ಕುರಿತು ವಿವರಿಸಲಾಗಿದೆ. ಜೊತೆಗೆ ಪ್ರಸ್ತುತ ವಿಷಯಕ್ಕೆ ಸಂಬಂಧಿಸಿದಂತೆ ಇದುವರೆಗಿನ ಅಧ್ಯಯನಗಳ ಸಮೀಕ್ಷೆಯ ಸಂಕ್ಷಿಪ್ತತೆಯನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯ 'ಮಹಿಳಾ ಸಂಘರ್ಷದ ನೆಲೆಗಳ ಪರಿಕಲ್ಪನಾತ್ಮಕ ಚರ್ಚೆ' ಈ ಅಧ್ಯಾಯದಲ್ಲಿ ಸಂಘರ್ಷದ ಅರ್ಥ ಮತ್ತು ವ್ಯಾಖ್ಯಾನಗಳು, ಸಂಘರ್ಷದ ವಿಕಾಸದ ನೆಲೆಗಳು, ಮಹಿಳಾ ಸಂಘರ್ಷದ ಸ್ವರೂಪ ಎಂಬ ಉಪಶೀರ್ಷಿಕೆಗಳನ್ನು ಮಾಡಿಕೊಂಡು ಅಧ್ಯಯನವನ್ನು ಮುಂದುವರಿಸಲಾಗಿದೆ.

ಮೂರನೆಯ ಅಧ್ಯಾಯವಾದ 'ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿನ ಮಹಿಳೆಯರ ನಿರ್ಣಯಾತ್ಮಕ ಆಶಯಗಳು' ಎಂಬ ಶೀರ್ಷಿಕೆಯಡಿ ತಾಯ್ತನದ ಸಂಘರ್ಷಗಳಲ್ಲಿ ಮತ್ಸ್ಯಗಂಧಿ ಮತ್ತು ಕುಂತಿಯರನ್ನು, ತಿರಸ್ಕಾರಾತ್ಮಕ ಸಂಘರ್ಷದ ನೆಲೆಗಳಲ್ಲಿ ಅಂಬಿಕೆ ಮತ್ತು ಅಂಬಾಲಿಕೆಯರನ್ನು, ಪ್ರತಿಭಟನಾತ್ಮಕ ಸಂಘರ್ಷದ ನೆಲೆಗಳಲ್ಲಿ ಅಂಬೆ ಮತ್ತು ದ್ರೌಪದಿಯರನ್ನು, ಅಸಹಾಯಕ ಸಂಘರ್ಷದ ನೆಲೆಗಳಲ್ಲಿ ಗಾಂಧಾರಿ, ಸುದೇಷ್ಣೆ ಮತ್ತು ಭಾನುಮತಿಯರನ್ನು, ವಿರಹ ಮತ್ತು ಮರಣದ ಸಂಘರ್ಷದ ನೆಲೆಗಳಲ್ಲಿ ಸುಭದ್ರೆ ಮತ್ತು ಮಾದ್ರಿಯರ ಸಂಘರ್ಷಗಳನ್ನು ಅಧ್ಯಯನ ಮಾಡಲಾಗಿದೆ.

ನಾಲ್ಕನೆಯ ಅಧ್ಯಾಯವಾದ 'ಬುಡಕಟ್ಟು ಹಾಗೂ ಜನಪದ ಸ್ತ್ರೀಯರ ಸಂಘರ್ಷಗಳು' ಎಂಬ ಅಧ್ಯಾಯದಲ್ಲಿ ಪ್ರೇಮ ನಿವೇದನಾ ಮಹಿಳೆಯಾಗಿ ಹಿಡಿಂಬೆ, ದ್ವಾರಾವತಿ ಪಟ್ಟಣ ನಿವಾಸಿ ಹೆಣ್ಣುಗಳ ಸಂಘರ್ಷಗಳು, ತಂಟಲು ದಾಸಿ ಹೆಣ್ಣುಗಳ ಸಂಘರ್ಷಗಳನ್ನು ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯವಾದ 'ದೇವಲೋಕದ ಸ್ತ್ರೀಯರ ಸಂಘರ್ಷಗಳ ಅನುಸಂಧಾನ' ಎಂಬ ಅಧ್ಯಾಯದಲ್ಲಿ ರಂಭೆ ಹಾಗೂ ಊರ್ವಶಿ, ಅರ್ಜುನನ್ನು ನೋಡಿದ ದೇವಲೋಕದ ಹೆಣ್ಣುಗಳು, ಅಪ್ಸರಾ ಸ್ತ್ರೀಯರು ಹಾಗೂ ಅರ್ಜುನನ ತಪಸ್ಸನ್ನು ಕೆಡಿಸಲು ಬಂದ ಅಪ್ಸರಾ ಸ್ತ್ರೀಯರ ಸಂಘರ್ಷಗಳನ್ನು ಅಧ್ಯಯನಕ್ಕೆ ಒಳಗುಮಾಡಲಾಗಿದೆ.

ಆರನೆಯ ಅಧ್ಯಾಯವಾದ 'ಅನಾಮಿಕ ಸ್ತ್ರೀಯರ ಸಂಘರ್ಷಗಳು' ಎಂಬ ಅಧ್ಯಾಯದಲ್ಲಿ ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿ ಹೆಸರೆ ಇಲ್ಲದೆ ಚರ್ಚಿತವಾಗಿರುವ ಸೈನಿಕರ

ಹೆಂಡತಿಯರು, ವಿದುರನ ತಾಯಿ, ಗಂಧರ್ವನ ಪತ್ನಿ ಮೊದಲಾದ ನಿರ್ಲಕ್ಷ್ಯಕ್ಕೆ ಒಳಗಾದ ಅನಾಮಿಕ ಸ್ತ್ರೀಪಾತ್ರಗಳನ್ನು ಅಧ್ಯಯನ ಮಾಡಲಾಗಿದೆ.

ಏಳನೆಯ ಅಧ್ಯಾಯವಾದ 'ಅಲಕ್ಷ್ಯಿತ ಹಾಗೂ ಇತರ ಸ್ತ್ರೀಪಾತ್ರಗಳ ಸಂಘರ್ಷಗಳು' ಎಂಬ ಅಧ್ಯಾಯದಲ್ಲಿ ಇಲ್ಲಿನವರೆಗಿನ ಅಧ್ಯಯನಗಳಿಂದ ವಂಚಿತರಾಗಿ ಅಲಕ್ಷ್ಯಕ್ಕೆ ಗುರಿಯಾಗಿರುವ ನಿಷಾದಿತಿ, ದುಶ್ಯಳೆ, ಮದನಲತೆ, ಉತ್ತರೆ, ತಾಪಸ ಕನ್ಯೆಯರು ಹಾಗೂ ಶಿಶುಪಾಲಕನ ತಾಯಿಯಂತಹ ಹೆಣ್ಣುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಎಂಟನೆಯ ಅಧ್ಯಾಯವಾದ 'ಪಂಪ-ಕುಮಾರವ್ಯಾಸರ ಕಾವ್ಯಗಳ ಸ್ತ್ರೀಪಾತ್ರಗಳ ವರ್ತಮಾನದ ಗ್ರಹಿಕೆಗಳು' ಎಂಬ ಅಧ್ಯಾಯದಲ್ಲಿ ಈ ಎರಡೂ ಕೃತಿಗಳಲ್ಲಿನ ಸ್ತ್ರೀಪಾತ್ರಗಳನ್ನು ಕುರಿತು ವರ್ತಮಾನದ ಕಾಲಘಟ್ಟದಲ್ಲಿ ನಡೆದಿರುವ ಚರ್ಚೆ, ಅಧ್ಯಯನಗಳು ಹಾಗೂ ಆ ಹೆಣ್ಣುಗಳ ಸಂಘರ್ಷಗಳನ್ನು ಗ್ರಹಿಸಿರುವ ಆಯಾಮಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಒಂಭತ್ತನೆಯ ಅಧ್ಯಾಯವಾದ 'ಸಮಾರೋಪ'ದಲ್ಲಿ ಅಧ್ಯಯನದ ಫಲಿತಗಳು, ಅಧ್ಯಯನದ ಹೊಸ ಸಾಧ್ಯತೆಗಳು, ಅನುಬಂಧದಲ್ಲಿ ಪಿಎಚ್.ಡಿ ಮಹಾಪ್ರಬಂಧಗಳ ಪಟ್ಟಿ ಮತ್ತು ಪರಾಮರ್ಶನ ಗ್ರಂಥಗಳನ್ನು ನೀಡಲಾಗಿದೆ.

೧.೫. ಅಧ್ಯಯನದ ವಿಧಾನಗಳು

'ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿ ಮಹಿಳಾ ಸಂಘರ್ಷದ ನೆಲೆಗಳು' ಎಂಬ ವಿಷಯವನ್ನು ಸಂಶೋಧನೆಗೆ ಆಯ್ದುಕೊಂಡಿದ್ದು, ಪ್ರಸ್ತುತ ಸಂಶೋಧನ ಮಹಾಪ್ರಬಂಧದ ಅಧ್ಯಯನಕ್ಕೆ ಈ ಕೆಳಕಂಡ ವಿಧಾನಗಳನ್ನು ಗುರುತಿಸಿಕೊಳ್ಳಲಾಗಿದೆ.

ಪ್ರಸ್ತುತ ವಿಷಯವು ಪಂಪ ಮತ್ತು ಕುಮಾರವ್ಯಾಸರ ಕಾವ್ಯಗಳಲ್ಲಿನ ಹೆಣ್ಣುಗಳ ಸಂಘರ್ಷಗಳನ್ನು ಕುರಿತ ಅಧ್ಯಯನವಾಗಿರುವ ಕಾರಣವಾಗಿ ತೌಲನಿಕ ಅಧ್ಯಯನ ವಿಧಾನವನ್ನು ಬಳಸಿಕೊಳ್ಳಲಾಗಿದೆ. ಈ ವಿಧಾನದ ಮೂಲಕ 'ವಿಕ್ರಮಾರ್ಜುನ ವಿಜಯ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳ ಮೂಲಕ ಪಂಪ ಹಾಗೂ ಕುಮಾರವ್ಯಾಸರು ಕಟ್ಟಿಕೊಟ್ಟಿರುವ ಸ್ತ್ರೀಪಾತ್ರಗಳನ್ನು ತುಲನಾತ್ಮಕ ಅಧ್ಯಯನಕ್ಕೆ ಒಳಗು ಮಾಡಲಾಗಿದೆ.

ಅಧ್ಯಯನದ ಸಂದರ್ಭದಲ್ಲಿ ಮಹಿಳಾ ಸಂಘರ್ಷಗಳನ್ನು ಗುರುತಿಸುವ ಕಾರಣವಾಗಿ ಅವರ ಮನಸ್ಸಿನ ಸಂವೇದನೆಗಳಿಗೆ ಹೆಚ್ಚಿನ ಒತ್ತು ನೀಡಿದ್ದು, ಅವರ ಮನದ ತಾಕಲಾಟಗಳು, ಹತಾಶೆ, ನೋವು, ನಲಿವು, ಕೋಪ, ಪ್ರತಿರೋಧ ಮೊದಲಾದ ಅಂಶಗಳನ್ನು ಗುರುತಿಸುವ ಕಾರಣವಾಗಿ ಮನೋವಿಶ್ಲೇಷಣಾ ಕ್ರಮವನ್ನು ಅನುಸರಿಸಲಾಗಿದೆ.

ಮಹಿಳಾ ಸಂಘರ್ಷಗಳನ್ನು ವಿಶ್ಲೇಷಣೆಗೆ ಒಳಪಡಿಸುವ ದೃಷ್ಟಿಯಿಂದ ಅಧ್ಯಯನದ ಸಂದರ್ಭದಲ್ಲಿ ವ್ಯಾಖ್ಯಾನಾತ್ಮಕ ವಿಮರ್ಶಾ ವಿಧಾನವನ್ನು ಅನುಸರಿಸಿ ವಿವರಿಸಲಾಗಿದೆ.

'ವಿಕ್ರಮಾರ್ಜುನ ವಿಜಯ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳಲ್ಲಿ ವ್ಯಕ್ತವಾಗಿರುವ ಸ್ತ್ರೀಯರ ಸಂಘರ್ಷಗಳ ವಿವಿಧ ನೆಲೆಯನ್ನು ಗುರುತಿಸುವ ಸಂದರ್ಭದಲ್ಲಿ ಬಳಕೆಯಾಗಿರುವ ದೇಸಿ ನುಡಿಗಟ್ಟುಗಳು ಹಾಗೂ ಅಚ್ಚಗನ್ನಡ ಪದಗಳನ್ನು ಅಧ್ಯಯನಕ್ಕೊಳಪಡಿಸುವ ಕಾರಣವಾಗಿ ದೇಸಿ ವಿಧಾನವನ್ನು ಅನುಸರಿಸಲಾಗಿದೆ.

೧.೬. ಇದುವರೆಗಿನ ಅಧ್ಯಯನದ ಸಮೀಕ್ಷೆ

ಕನ್ನಡ ಸಾಹಿತ್ಯದಲ್ಲಿ 'ಪಂಪ' ಹಾಗೂ 'ಕುಮಾರವ್ಯಾಸ'ರ ಕೃತಿಗಳಿಗೆ ಸಂಬಂಧಿಸಿದಂತೆ ಅನೇಕ ಅಧ್ಯಯನಗಳು ನಡೆದಿವೆ. ಈ ಇಬ್ಬರು ಕವಿಗಳು ಕನ್ನಡಿಗರ ಮೇಲೆ, ಕವಿಗಳು, ವಿಮರ್ಶಕರು, ಸಂಶೋಧಕರು ಮತ್ತು ವಿದ್ಯಾರ್ಥಿಗಳ ಮೇಲೆ ಅಪಾರ ಪ್ರಭಾವವನ್ನು ಬೀರಿದ್ದಾರೆ. ಇದಕ್ಕೆ ಅವರ ಕೃತಿಗಳ ಮೇಲೆ ನಡೆದಿರುವ ಚರ್ಚೆ, ಸಂಶೋಧನೆಗಳು ಹಾಗೂ ಪ್ರಕಟವಾಗಿರುವ ವಿಮರ್ಶಾ ಕೃತಿಗಳೆ ಸಾಕ್ಷಿಯಾಗಿವೆ. ಕಲಿತವರ ಕಾಮಧೇನುವಾದ ಪಂಪನಂತೆಯೆ, ಕಲಿಯದವರ ಕಾಮಧೇನುವಾದ ಕುಮಾರವ್ಯಾಸನೂ ಜನಮಾನಸದಲ್ಲಿ ಉಳಿದಿದ್ದಾನೆ. ಇವರಿಬ್ಬರ ಕಾವ್ಯಗಳ ಮೇಲೆ ಇದುವರೆಗೆ ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧಗಳು, ಡಿ.ಲಿಟ್ ಪ್ರಬಂಧಗಳು, ಎಂ.ಫಿಲ್ ಸಂಪ್ರಬಂಧಗಳು, ವಿಮರ್ಶಾ ಕೃತಿಗಳು ಹಾಗೂ ಬಿಡಿ ಲೇಖನಗಳು ಹೊರಬಂದಿವೆ. ಅವುಗಳನ್ನು ಈ ಮುಂದಿನಂತೆ ಅವಲೋಕಿಸಬಹುದಾಗಿದೆ.

ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧಗಳು

ರೇಣುಕಾರಾಧ್ಯ. ಎಸ್.ಎಸ್ ಅವರ ಸಂಶೋಧನಾ ಮಹಾಪ್ರಬಂಧ 'ಪಂಪನನ್ನು ಕುರಿತ ವಿಮರ್ಶೆ : ಒಂದು ಅಧ್ಯಯನ'. ಇದು ಪಂಪನನ್ನು ಕುರಿತ ವಿಮರ್ಶೆಗಳ ಅಧ್ಯಯನವಾಗಿದೆ. ಇದರಲ್ಲಿ ಪಂಪನ ಕಾವ್ಯಗಳು ಮತ್ತು ಅವುಗಳ ಪರಿಷ್ಕರಣಗಳನ್ನು ಚರ್ಚಿಸಲಾಗಿದೆ. ಪಂಪನಿಗೆ ಸಂಬಂಧಿಸಿದಂತೆ ನಡೆದಿರುವ ಅಧ್ಯಯನಗಳಲ್ಲಿನ ಸಂಶೋಧನೆಯ ನೆಲೆಗಳು, ಪಂಪನ ಕಾವ್ಯಗಳ ಭಾಷಿಕ ಅಧ್ಯಯನಗಳು ಹಾಗೂ ಸಾಮಾಜಿಕ ದೃಷ್ಟಿಕೋನಗಳ ಮೇಲಿನ ವಿಮರ್ಶೆಗಳನ್ನು ಪರಾಮರ್ಶಿಸಿದ್ದಾರೆ. ರನ್ನ, ಕುಮಾರವ್ಯಾಸರ ಕೃತಿಗಳ ಪದ್ಯಗಳೊಂದಿಗೆ ಪಂಪನ ಕೃತಿಗಳಲ್ಲಿನ ಪ್ರಸಂಗಗಳು, ಸನ್ನಿವೇಶಗಳು ಹಾಗೂ ಪಾತ್ರಚಿತ್ರಣಗಳ ತೌಲನಿಕ ದೃಷ್ಟಿಕೋನ ಮೊದಲಾದ ಅಂಶಗಳ ಮೇಲಿನ ವಿಮರ್ಶೆಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆದರೆ ಮಹಿಳಾ ಸಂಘರ್ಷಗಳಿಗೆ ಸಂಬಂಧಿಸಿದ ಚರ್ಚೆಗಳು ವಿರಳವಾಗಿವೆ.

ಶಂಕರನಾರಾಯಣ ಭಟ್ಟ.ಯು. ಅವರ ಸಂಶೋಧನಾ ಮಹಾಪ್ರಬಂಧ 'ಪಂಪನ ಕೃತಿಗಳ ಛಂದಸ್ಸಿನ ಶಿಲ್ಪ : ಒಂದು ಅಧ್ಯಯನ'. ಇದರಲ್ಲಿ ಪಂಪನ 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ' ಕೃತಿಗಳ ಕೃತಿಬಂಧ, ಪದ್ಯಜಾತಿಗಳು, ಗದ್ಯಖಂಡಗಳು ಮೊದಲಾದವುಗಳನ್ನು ವಿಸ್ತೃತವಾಗಿ ವಿವೇಚನೆಗೆ ಒಳಪಡಿಸಿದ್ದಾರೆ. ಪಂಪನು ತನ್ನ ಕಾವ್ಯಗಳ ನಿರ್ಮಾಣದಲ್ಲಿ ಛಂದಸ್ಸನ್ನು ಯಾವ ರೀತಿ

ದುಡಿಸಿಕೊಂಡಿದ್ದಾನೆ ಎಂಬುದರ ಅಧ್ಯಯನ ಈ ಪ್ರಬಂಧದ ವಿಷಯವಾಗಿದೆ. ಅಧ್ಯಯನದ ಸಂದರ್ಭದಲ್ಲಿ ಛಂದಸ್ಸಿಗೆ ಹೆಚ್ಚಿನ ಒತ್ತು ಕೊಟ್ಟಿರುವ ಕಾರಣವಾಗಿ ಮಹಿಳೆಯರನ್ನು ಹಾಗೂ ಅವರ ಸಂಘರ್ಷಗಳನ್ನು ಕುರಿತಾದ ಯಾವುದೇ ರೀತಿಯ ವಿವರಗಳಾಗಲಿ, ಚರ್ಚೆಗಳಾಗಲಿ ಇಲ್ಲ.

ಶಾಂತಿನಾಥ ದಿಬ್ಬದ ಅವರ ಸಂಶೋಧನಾ ಮಹಾಪ್ರಬಂಧ 'ಪಂಪಭಾರತ : ಒಂದು ಸಾಂಸ್ಕೃತಿಕ ಅಧ್ಯಯನ'. ಪ್ರಸ್ತುತ ಮಹಾಪ್ರಬಂಧದಲ್ಲಿ 'ಪಂಪಭಾರತ'ವನ್ನು ಚಾರಿತ್ರಿಕ, ಧಾರ್ಮಿಕ, ರಾಜಕೀಯ, ಕಲಾತ್ಮಕ ಹಾಗೂ ಸಾಮಾಜಿಕ ದೃಷ್ಟಿಕೋನಗಳ ಮೂಲಕ ವಿಶ್ಲೇಷಿಸಲಾಗಿದೆ. ಆ ಮೂಲಕ ಒಟ್ಟು ಸಂಸ್ಕೃತಿಯ ಚಿತ್ರಣವನ್ನು ಪುನರ್ ರೂಪಿಸಿಕೊಡುವ ಪ್ರಯತ್ನ ಇಲ್ಲಿದೆ. ಪ್ರಕರಣ ನಾಲ್ಕರ 'ಇತರ ಸಂಸ್ಕೃತಿ ಸೂಚಕ ವಿಚಾರಗಳು' ಎಂಬ ಅಧ್ಯಾಯದಲ್ಲಿನ 'ಪಂಪನ ಕಾಲದ ಸ್ತ್ರೀ ಸಮಾಜ : ಒಂದು ಚಿಂತನೆ' ಎಂಬ ಉಪ ಅಧ್ಯಾಯದಲ್ಲಿ ಸಂಶೋಧಕರು ಪಂಪನ ಕಾಲಘಟ್ಟದ ಮಹಿಳೆಯರ ಸ್ಥಿತಿಗತಿಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಇಲ್ಲಿ ದ್ರೌಪದಿಯು ವಸ್ತ್ರಾಪಹರಣದ ಸಂದರ್ಭದಲ್ಲಿ ಅನುಭವಿಸಿದ ನೋವು, ಅಪಮಾನಗಳನ್ನು ಕುರಿತು ಚರ್ಚಿಸಿದ್ದಾರೆ. ಸಂತತಿಗೆ ಹಿರಿಯ ಮಕ್ಕಳನ್ನು ತನಗಿಂತ ಮುಂಚೆಯೇ ಕುಂತಿ ಪಡೆದಳೆಂಬ ಮತ್ಸರದ ಮನಸ್ಥಿತಿಯ ಗಾಂಧಾರಿಯ ಮನೋಕ್ಷೋಭೆಗಳನ್ನು ವಿಶ್ಲೇಷಣೆಗೆ ಒಳಗುಮಾಡಿದ್ದಾರೆ. ಜೊತೆಗೆ ಸತಿ ಹೋಗುವ ಮಾದ್ರಿಯ ವಿವರಗಳಿವೆ. ಉಳಿದಂತೆ 'ತೊತ್ತಿ'ನ ಕಾರ್ಯ ನಿರ್ವಹಿಸುತ್ತಿದ್ದ ಹೆಣ್ಣುಗಳ ಉಲ್ಲೇಖಗಳಿದ್ದರೂ, ಅವರ ಸಂಘರ್ಷಗಳನ್ನು ಕುರಿತ ಯಾವುದೇ ಚರ್ಚೆಗಳಿಲ್ಲ.

ದಿವ್ಯ.ಕೆ.ಎಲ್ ಅವರ ಸಂಶೋಧನಾ ಮಹಾಪ್ರಬಂಧ 'ಮಧ್ಯಕಾಲೀನ ಸಾಹಿತ್ಯದಲ್ಲಿ ಸ್ತ್ರೀ ಪಾತ್ರಾಭಿವ್ಯಕ್ತಿ'. ಇದರಲ್ಲಿ 'ಸ್ತ್ರೀ ಪಾತ್ರಗಳ ವಿಭಿನ್ನ ಮಾದರಿಗಳ'ನ್ನು ಅಧ್ಯಯನಕ್ಕೊಳಪಡಿಸಿದ್ದಾರೆ. ರಾಘವಾಂಕನ 'ಹರಿಶ್ಚಂದ್ರ ಕಾವ್ಯ', ಚಾಮರಸನ 'ಪ್ರಭುಲಿಂಗಲೀಲೆ', ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳೊಳಗಿನ ಸ್ತ್ರೀ ಪಾತ್ರಗಳನ್ನು ವಿಶ್ಲೇಷಣೆಗೆ ಆಯ್ದುಕೊಂಡಿದ್ದಾರೆ. 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಲ್ಲಿನ ದ್ರೌಪದಿ, ಕುಂತಿ, ಗಾಂಧಾರಿ, ಮಾದ್ರಿ, ಊರ್ವಶಿ, ಸುಭದ್ರೆ, ಗಾಂಧಾರಿ ಹಾಗೂ ಉತ್ತರೆಯಂತಹ ಪ್ರಧಾನ ಸ್ತ್ರೀ ಪಾತ್ರಗಳನ್ನು ಅವಲೋಕಿಸಿದ್ದಾರೆ. ಉಳಿದಂತೆ ಸಾಮಾನ್ಯ ಮಹಿಳೆಯರನ್ನು ಕುರಿತ ಯಾವುದೇ ಚರ್ಚೆಗಳಿಲ್ಲ.

ಜಯಪ್ರಕಾಶ್ ಶೆಟ್ಟಿ.ಎಚ್ ಅವರ ಸಂಶೋಧನಾ ಮಹಾಪ್ರಬಂಧ 'ಪಂಪನ ಕಾವ್ಯಗಳ ವಿಭಿನ್ನ ಓದುಗಳು : ತಾತ್ವಿಕ ವಿಶ್ಲೇಷಣೆ'. ಇದರಲ್ಲಿ ಪಂಪನ ಕಾವ್ಯಗಳನ್ನು ಕುರಿತ ಚರಿತ್ರೆಯ ನೆಲೆ, ಧಾರ್ಮಿಕ, ಸಾಮಾಜಿಕ, ಸ್ತ್ರೀವಾದಿ ಹಾಗೂ ಶೈಕ್ಷಣಿಕ ಓದು ಮೊದಲಾದ ಭಿನ್ನ ಓದುಗಳನ್ನು ತಾತ್ವಿಕವಾಗಿ ವಿಶ್ಲೇಷಿಸಲಾಗಿದೆ. 'ಪಂಪನ ಕಾವ್ಯಗಳ ಸ್ತ್ರೀವಾದಿ ಓದುಗಳು' ಅಧ್ಯಾಯ ಮುಖ್ಯವಾಗಿದೆ. ಇದರಲ್ಲಿ ಪಂಪನ ಕಾವ್ಯ ಕೃತಿಗಳ ಸಮಾಜದೊಳಗಿನ ಹೆಣ್ಣಿನ ಸ್ವರೂಪಕ್ಕೆ ಸಂಬಂಧಿಸಿದಂತೆ ಇದುವರೆಗಿನ ವಿಮರ್ಶೆಗಳು ಎತ್ತದೇ ಇರುವ ಕೆಲವು ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಪಂಪನ ಕಾವ್ಯಗಳಲ್ಲಿನ ಹೆಣ್ಣಿನ ಗೈರು ಹಾಜರಿ, ಗಂಡಿನ ಲೈಂಗಿಕ ತೃಷೆ ಹಾಗೂ ಹೆಣ್ಣಿನ ಶೀಲ ಕುರಿತಾದ

ವಿಚಾರಗಳನ್ನು ಚರ್ಚೆಗೆ ಒಳಪಡಿಸಲಾಗಿದೆ. ಎಲ್ಲಾ ಕಾಲಘಟ್ಟಗಳಲ್ಲಿಯೂ ಪುನರಾವರ್ತನೆಯಾಗುವ ವಿಚಾರ ವಿವೇಚನೆ ಈ ಪ್ರಬಂಧದಲ್ಲಿ ಇದೆ.

ನಳಿನಿ ವೆಂಕಟೇಶ್ ಕೆ.ಎಸ್ ಅವರ ಸಂಶೋಧನಾ ಮಹಾಪ್ರಬಂಧ 'ರನ್ನನ ಮೇಲೆ ಪಂಪನ ಪ್ರಭಾವ – ಒಂದು ಅಧ್ಯಯನ'. ಇದು 'ಪಂಪಭಾರತ' ಹಾಗೂ 'ಸಾಹಸಭೀಮ ವಿಜಯ' ಕೃತಿಗಳ ತೌಲನಿಕ ಅಧ್ಯಯನವಾಗಿದೆ. ಪಂಪನು 'ವ್ಯಾಸಭಾರತ'ದಿಂದ ವಸ್ತುವನ್ನು ಆಯ್ಕೆಮಾಡಿಕೊಂಡರೂ, ತನ್ನ ಕೃತಿರಚನೆಯ ಸಂದರ್ಭದಲ್ಲಿ ಕೆಲವು ಅಂಶಗಳನ್ನು ಬದಲಿಸಿ ಅಳವಡಿಸಿಕೊಂಡಿದ್ದಾನೆ. ಅಂತಹವುಗಳಲ್ಲಿ ಘೋಷಯಾತ್ರೆ, ಭೀಮನ ಪ್ರತಿಜ್ಞೆ, ಆ ಪ್ರತಿಜ್ಞೆಯ ಪೂರೈಕೆ, ಕುಂತಿ ಕರ್ಣರ ಪ್ರಸಂಗ, ಸಂಜಯನ ಪ್ರಸಂಗ, ಗದಾಯುದ್ಧದ ಸಂದರ್ಭದಲ್ಲಿನ ಬಲರಾಮನ ಪ್ರಸಂಗ, ಅಶ್ವತ್ಥಾಮನ ಇರುಳ್ಗಾಳಗ ಮೊದಲಾದ ಪ್ರಸಂಗಗಳನ್ನು ರನ್ನನು ಪಂಪನಿಂದ ಸ್ವೀಕರಿಸಿರುವ ಬಗೆಯನ್ನು ನಿಬಂಧಕಾರರು ಚರ್ಚಿಸಿದ್ದಾರೆ. ಪ್ರಮುಖವಾಗಿ ಸಂಶೋಧಕರ ದೃಷ್ಟಿಯು ರನ್ನನ ಮೇಲೆ ಪಂಪನು ಬೀರಿರುವ ಪ್ರಭಾವವನ್ನು ಅಧ್ಯಯನ ಮಾಡುವುದಾಗಿರುವ ಕಾರಣವಾಗಿ ಮಹಿಳಾ ಸಂಘರ್ಷಗಳ ಚರ್ಚೆಗೆ ಹೆಚ್ಚಿನ ಒತ್ತನ್ನು ನೀಡಿಲ್ಲ. ದ್ರೌಪದಿಯು ಭೀಮನನ್ನು ಪ್ರಚೋದಿಸುವ ಸಮಯದಲ್ಲಿನ ಆಕೆಯ ಮಾನಸಿಕ ತೊಳಲಾಟಗಳನ್ನು ವಿಶ್ಲೇಷಣೆಗೆ ಒಳಗುಮಾಡಿರುವರಾದರೂ ಉಳಿದ ಮಹಿಳೆಯರ ಸಂಘರ್ಷಗಳನ್ನು ಕುರಿತು ಚರ್ಚಿಸಿಲ್ಲ.

ಕೋಕಿಲ.ಪಿ ಅವರ ಸಂಶೋಧನಾ ಮಹಾಪ್ರಬಂಧ 'ಜನಪದ ಮಹಾಭಾರತ, ಪಂಪಭಾರತ ಮತ್ತು ಕುಮಾರವ್ಯಾಸ ಭಾರತ : ಒಂದು ತೌಲನಿಕ ವಿಶ್ಲೇಷಣೆ'. ಇದರಲ್ಲಿ ಮಹಾಭಾರತದ ಕಥೆಯನ್ನೆ ಆಧಾರವಾಗಿಟ್ಟುಕೊಂಡು ಕೃತಿ ರಚಿತವಾಗಿದ್ದರೂ ಸಹ ಈ ಮೂರೂ ಕೃತಿಗಳಲ್ಲಿನ ಸಮಾನಾಂತರ ಅಂಶಗಳು ಅಲ್ಪ ಪ್ರಮಾಣದಲ್ಲಿರುವುದನ್ನು ಗುರ್ತಿಸಿದ್ದಾರೆ. 'ಪಾತ್ರಚಿತ್ರಣ' ಎಂಬ ಅಧ್ಯಾಯದಲ್ಲಿ ಮೂರೂ ಕೃತಿಗಳಲ್ಲಿನ ಮುಖ್ಯ ಪಾತ್ರಗಳಾದ ಕೃಷ್ಣ, ದ್ರೌಪದಿ, ಅರ್ಜುನ, ಕರ್ಣ, ದುರ್ಯೋಧನ, ಭೀಮ, ಭೀಷ್ಮ, ಕುಂತಿ, ಶಕುನಿ, ಧರ್ಮರಾಯನ ಪಾತ್ರಗಳನ್ನು ತೌಲನಿಕ ಅಧ್ಯಯನಕ್ಕೆ ಗುರಿಮಾಡಿರುತ್ತಾರೆ. ದ್ರೌಪದಿ ಪಾತ್ರ ವಿಶ್ಲೇಷಣೆಯಲ್ಲಿ ಜನಪದರಿಗೆ ದ್ರೌಪದಿ ಹೆಣ್ಣಾಗಿ, ಹೆಂಡತಿಯಾಗಿ, ತಾಯಿಯಾಗಿ, ದೇವತೆಯಾಗಿ ಕಂಡಿರುವ ಕ್ರಮವನ್ನು ಪ್ರಧಾನವಾಗಿ ಚರ್ಚಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಕೃತಿ ರಚನೆಯ ಪ್ರೇರಣೆ ಮತ್ತು ಮನೋಧರ್ಮಗಳ ತೌಲನಿಕ ಅಧ್ಯಯನಕ್ಕೆ ಹೆಚ್ಚಿನ ಒತ್ತು ಕೊಟ್ಟಿರುವ ಕಾರಣವಾಗಿ ಮಹಿಳೆಯರ ಸಂಘರ್ಷಗಳನ್ನು ಕುರಿತ ವಿವರಗಳು ಮೊಟುಕಾಗಿವೆ. ದ್ರೌಪದಿ ಹಾಗೂ ಕುಂತಿಯ ಚರ್ಚೆಗಳನ್ನು ಹೊರತುಪಡಿಸಿದರೆ ಇನ್ನುಳಿದ ಸ್ತ್ರೀಯರ ವಿವರಗಳಿಲ್ಲ.

ಧನಂಜಯ ಕುಂಬ್ಳೆ ಅವರ ಸಂಶೋಧನಾ ಮಹಾಪ್ರಬಂಧ 'ಅರುಣಾಬ್ಜ ಮತ್ತು ಕುಮಾರವ್ಯಾಸ ತೌಲನಿಕ ಅಧ್ಯಯನ'. ಇದರಲ್ಲಿ ತುಳುವಿನ ಮೊದಲ ಕವಿಯಾದ ಅರುಣಾಬ್ಜನ ಮೇಲೆ ಕುಮಾರವ್ಯಾಸನು ಬೀರಿರುವ ಪ್ರಭಾವವನ್ನು ಗ್ರಹಿಸಲಾಗಿದೆ. ಜೊತೆಗೆ ಕುಮಾರವ್ಯಾಸನ ಕಾಲ ನಿರ್ಣಯಕ್ಕೆ ಹೊಸ

ಬೆಳಕು ನೀಡುವ ಕೆಲವು ಅಂಶಗಳನ್ನು ಗುರುತಿಸಲು ಪ್ರಯತ್ನಿಸಿದ್ದಾರೆ. ಮಹಾಪ್ರಬಂಧದಲ್ಲಿ ಅರುಣಾಬ್ಜನ ಮೇಲಾಗಿರುವ ಕುಮಾರವ್ಯಾಸನ ಪ್ರಭಾವವನ್ನು ವಿಶ್ಲೇಷಣೆಗೆ ಒಳಪಡಿಸಿರುವ ಕಾರಣವಾಗಿ ಮಹಿಳಾ ಸಂಘರ್ಷಗಳನ್ನು ಕುರಿತ ಯಾವುದೇ ಚರ್ಚೆಗಳಿಲ್ಲ.

ಓಂಕಾರಪ್ಪ. ಸಿ. ಅವರ ಸಂಶೋಧನಾ ಮಹಾಪ್ರಬಂಧ 'ಕುಮಾರವ್ಯಾಸ ಭಾರತದ ಭಾಷಾ ವೈಜ್ಞಾನಿಕ ವಿಶ್ಲೇಷಣೆ'. ಇದು ಶ್ರೀಯುತರ 'Linguistic Analysis of kumaravyasa Bharatha' ಎಂಬ ಇಂಗ್ಲಿಷ್ ರಚನೆಯ ಕನ್ನಡಾನುವಾದವಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಕುಮಾರವ್ಯಾಸ ಭಾರತದಲ್ಲಿ ಕಂಡುಬರುವ ಭಾಷೆ ಹಾಗೂ ಭಾಷೆಯ ಸ್ವರೂಪವನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಇದು ಭಾಷೆಯನ್ನು ಕುರಿತ ಅಧ್ಯಯನವಾಗಿರುವ ಕಾರಣ ಮಹಿಳೆಯರನ್ನು ಹಾಗೂ ಅವರ ಸಂಘರ್ಷಗಳನ್ನು ಕುರಿತ ಯಾವುದೇ ವಿವರಗಳಿಲ್ಲ.

ಮಹಾದೇವ ಜಡ್ಡಿಮನಿ ಅವರ ಸಂಶೋಧನಾ ಮಹಾಪ್ರಬಂಧ 'ಕುಮಾರವ್ಯಾಸನ ಭೀಷ್ಮ'. ಇದು ವ್ಯಾಖ್ಯಾನಾತ್ಮಕ ಸಂಶೋಧನೆಯಾಗಿದೆ. ಬ್ರಹ್ಮಚಾರಿಯಾಗಿ, ಕುರುವಂಶದ ಏಳ್ಗೆಗೆ ಶ್ರಮಿಸಿದವನೂ, ವೀರ ಕ್ಷತ್ರಿಯನಾಗಿದ್ದು, 'ಆಚಾರ್ಯ' ಎನಿಸಿಕೊಂಡೂ ಸಹ ಹಲವು ಮುಖಗಳ ಅಭ್ಯಾಸ ಮತ್ತು ವಿಶ್ಲೇಷಣೆಗಳಿಂದ ವಂಚಿತವಾಗಿರುವ 'ಭೀಷ್ಮ'ನ ಪಾತ್ರವನ್ನು ಇಲ್ಲಿ ಸಂಶೋಧಕರು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದಾರೆ. ಇದು ಸಂಪೂರ್ಣವಾಗಿ ಭೀಷ್ಮನನ್ನು ಕೇಂದ್ರವಾಗಿಟ್ಟುಕೊಂಡ ಅಧ್ಯಯನವಾಗಿದ್ದು, ಮಹಿಳಾ ಸಂಘರ್ಷದ ಚರ್ಚೆಗಳಿಲ್ಲ.

ಮಣಿಮಾಲಿನಿ ವಿ.ಕೆ ಅವರ ಸಂಶೋಧನಾ ಮಹಾಪ್ರಬಂಧ 'ದ್ರೌಪದೀ ಸಮೀಕ್ಷೆ'. ಇದು 'ವ್ಯಾಸಭಾರತ'ವನ್ನು ಹಿನ್ನೆಲೆಯಾಗಿರಿಸಿಕೊಂಡು ಕನ್ನಡದ 'ಪರ್ವ' ಕಾದಂಬರಿ, ಮರಾಠಿಯ 'ಮೃತ್ಯುಂಜಯ' ಹಾಗೂ ಒರಿಯಾದ 'ಯಾಜ್ಞಸೇನಿ' ಕಾದಂಬರಿಗಳಲ್ಲಿ ಒಡಮೂಡಿರುವ ದ್ರೌಪದಿಯ ಪಾತ್ರದ ತೌಲನಿಕ ವಿವೇಚನೆಯಾಗಿದೆ. ಇಲ್ಲಿ ದ್ರೌಪದಿಯ ಪಾತ್ರವೊಂದನ್ನು ಅಧ್ಯಯನಕ್ಕೊಳಪಡಿಸಿದ್ದು, ಉಳಿದ ಸ್ತ್ರೀ ಪಾತ್ರಗಳನ್ನು ಚರ್ಚೆಗೆತ್ತಿಕೊಂಡಿಲ್ಲ. ದ್ರೌಪದಿಯ ಸಂಘರ್ಷಗಳನ್ನು, ಅವಳ ತಾಕಲಾಟಗಳನ್ನು ತುಲನಾತ್ಮಕವಾಗಿ ವಿಶ್ಲೇಷಣೆಗೆ ಒಳಗು ಮಾಡಲು ಪ್ರಯತ್ನಿಸಿದ್ದಾರೆ.

ನ.ಸುಬ್ರಮಣ್ಯಂ ಅವರ ಸಂಶೋಧನಾ ಮಹಾಪ್ರಬಂಧ 'ಪಂಪಭಾರತ–ಕುಮಾರವ್ಯಾಸಭಾರತ–ವ್ಯಾಸಭಾರತಗಳ ತೌಲನಿಕ ವಿಮರ್ಶೆ'. (ವ್ಯಾಸ, ಪಂಪ, ನಾರಣಪ್ಪರ ಮಹಾಭಾರತಗಳು : ಒಂದು ತೌಲನಿಕ ವಿಮರ್ಶೆ). ಈ ಅಧ್ಯಯನವು ವ್ಯಾಸಭಾರತದ ಕಥಾಚೌಕಟ್ಟಿನ ಹಿನ್ನೆಲೆಯಲ್ಲಿ ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿನ ಕಥಾಸರಣಿಯಲ್ಲಿರುವ ಸಂಬಂಧಾಂತರಗಳನ್ನು ವಿಶ್ಲೇಷಣೆಗೆ ಒಳಪಡಿಸುವುದಾಗಿದೆ. ಮಹಿಳಾ ಸಂಘರ್ಷಕ್ಕೆ ಸಂಬಂಧಿಸಿದ ಚರ್ಚೆಯ ವಿವರಗಳು ವಿರಳವಾಗಿವೆ.

ರಾಮಚಂದ್ರರಾವ್.ಬಿ ಅವರ ಸಂಶೋಧನಾ ಮಹಾಪ್ರಬಂಧ 'ಎ ಡಿಸ್ಕ್ರಿಪ್ಟಿವ್ ಗ್ರಾಮರ್ ಆಫ್ ಪಂಪಭಾರತ'. ಇದು ಪಂಪನ 'ವಿಕ್ರಮಾರ್ಜುನ ವಿಜಯ' ಕೃತಿಯ ಭಾಷೆಯನ್ನು ಕುರಿತ

ವರ್ಣನಾತ್ಮಕ ಭಾಷಾಶಾಸ್ತ್ರದ ನೆಲೆಯ ಅಧ್ಯಯನವಾಗಿದೆ. ಇಲ್ಲಿ ರಾಚನಿಕ ವಿಶ್ಲೇಷಣಾತ್ಮಕ ವಿಧಾನವನ್ನು ಅನುಸರಿಸಿದ್ದಾರೆ. 'ಪಂಪಭಾರತ'ದ ಭಾಷೆಯನ್ನು ಧ್ವನಿರಚನೆ, ಪದ ರಚನೆಗಳ ನಿಟ್ಟಿನಲ್ಲಿ ವಿಶ್ಲೇಷಿಸಲಾಗಿದೆ.

ಶ್ರೀನಿವಾಸಮೂರ್ತಿ ಕೆ.ವಿ ಅವರ ಸಂಶೋಧನಾ ಮಹಾಪ್ರಬಂಧ 'ಕುಮಾರವ್ಯಾಸ ಮತ್ತು ಕರ್ನಾಟಕ ಭಾರತ ಕಥಾ ಮಂಜರಿ : ಒಂದು ವಿಮರ್ಶಾತ್ಮಕ ಅಧ್ಯಯನ'. ಈ ಪ್ರಬಂಧದಲ್ಲಿ ಕುಮಾರವ್ಯಾಸನ ಕೃತಿಯನ್ನು ವಿಮರ್ಶಾತ್ಮಕವಾಗಿ ಅಧ್ಯಯನಕ್ಕೆ ಒಳಗುಮಾಡಲಾಗಿದೆ. ಕೃಷ್ಣನ ಪಾತ್ರಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಗಿರುವ ಕಾರಣವಾಗಿ ಸ್ತ್ರೀ ಸಂಘರ್ಷಗಳಿಗೆ ಸಂಬಂಧಿಸಿದ ಚರ್ಚೆಗಳು ವಿರಳವಾಗಿವೆ.

ಹೆಗಡೆ ಎಲ್.ಆರ್ ಅವರ ಸಂಶೋಧನಾ ಮಹಾಪ್ರಬಂಧ 'ಕುಮಾರವ್ಯಾಸನ ಪಾತ್ರಸೃಷ್ಟಿ'. ಇದರಲ್ಲಿ 'ಕುಮಾರವ್ಯಾಸ ಭಾರತ'ದಲ್ಲಿನ ಮುಖ್ಯ ಪಾತ್ರಗಳನ್ನು ತೌಲನಿಕವಾಗಿ ಅಭ್ಯಾಸ ಮಾಡಲಾಗಿದೆ. ಇದಕ್ಕಾಗಿ ನಿಬಂಧಕಾರರು ಮನೋವೈಜ್ಞಾನಿಕವಾದ ದೃಷ್ಟಿಯ ಅಭ್ಯಾಸವನ್ನು ಅಳವಡಿಸಿಕೊಂಡಿದ್ದಾರೆ. ಪ್ರಮುಖ ಪಾತ್ರಗಳ ಅಧ್ಯಯನದಲ್ಲಿ ಮಾರ್ಗದರ್ಶಕರ ಸಲಹೆಯಂತೆ ಪಾತ್ರ ವೈಶಿಷ್ಟ್ಯವನ್ನು ಕುರಿತಾದ 'ಹಕ್ಕಿನೋಟ'ದಂತಹ ಪಾತ್ರ ವೈಶಿಷ್ಟ್ಯ ದರ್ಶನವನ್ನು ಅಳವಡಿಸಿಕೊಂಡಿದ್ದಾರೆ. ನಿಬಂಧದಲ್ಲಿ ಕೃಷ್ಣನ ಪಾತ್ರದಿಂದ ಪ್ರಾರಂಭವಾಗಿ ಪ್ರಮುಖ ಪಾಂಡವರು, ಕೌರವರು, ಉತ್ತರ ಕುಮಾರ, ಕೌರವ ಸೇನಾಧಿಪತಿಗಳು, ಪ್ರಮುಖವಾದ ಸ್ತ್ರೀ ಪಾತ್ರಗಳು ಹಾಗೂ ಇತರ ಪಾತ್ರಗಳನ್ನು ಕುರಿತು ಸುದೀರ್ಘವಾಗಿ ಅಧ್ಯಯನವನ್ನು ನಡೆಸಿದ್ದಾರೆ. ಪ್ರಮುಖ ಸ್ತ್ರೀ ಪಾತ್ರಗಳಲ್ಲಿ ಸತ್ಯವತಿ, ಗಾಂಧಾರಿ, ಕುಂತಿ ಹಾಗೂ ದ್ರೌಪದಿಯರ ವಿಸ್ತೃತ ಅಧ್ಯಯನವಿದೆ. ಇತರ ಪಾತ್ರಗಳು ಎಂಬ ಅಧ್ಯಾಯದಲ್ಲಿ ಸುಭದ್ರ, ಭಾನುಮತಿ, ಊರ್ವಶಿ, ಹಿಡಿಂಬೆ, ಸುದೇಷ್ಣೆ, ಅಂಬೆ ಮೊದಲಾದ ಇತರ ಮುಖ್ಯ ಸ್ತ್ರೀ ಪಾತ್ರಗಳನ್ನು ವಿಶ್ಲೇಷಿಸಿದ್ದಾರೆ.

ಡಾ.ಶ್ರೀನಿವಾಸ ಕುಲಕರ್ಣಿ ಅವರ ಸಂಶೋಧನಾ ಮಹಾಪ್ರಬಂಧ 'ಕುಮಾರವ್ಯಾಸನ ರೂಪಕಗಳು : ಒಂದು ಅಧ್ಯಯನ'. ಪ್ರಸ್ತುತ ಮಹಾ ಪ್ರಬಂಧದಲ್ಲಿ ಕುಮಾರವ್ಯಾಸನ 'ಕರ್ನಾಟ ಭಾರತ ಕಥಾಮಂಜರಿ' ಕೃತಿಯಲ್ಲಿನ ರೂಪಕಗಳನ್ನು ಪರಿಶೀಲಿಸಿ, ಅವುಗಳ ವೈವಿಧ್ಯ, ಪರಿಣಾಮಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಜೊತೆಗೆ ಕುಮಾರವ್ಯಾಸನ ಅಭಿವ್ಯಕ್ತಿ ವಿಶೇಷ, ಅವನು ಭಾಷೆಯನ್ನು ದುಡಿಸಿಕೊಂಡಿರುವ ಬಗೆ, ರೂಪಕಗಳ ಸೃಷ್ಟಿ, ಅವುಗಳ ವೈಶಿಷ್ಟ್ಯ, ರೂಪಕಗಳ ಪ್ರಕಾರ ಮತ್ತು ಅವುಗಳ ಮಹತ್ವವನ್ನು ಕುರಿತಂತೆಯೂ ಅಧ್ಯಯನವನ್ನು ಕೈಗೊಂಡಿದ್ದಾರೆ.

ಪ್ರಸನ್ನ ಎ.ವಿ ಅವರ ಡಾಕ್ಟರ್ ಆಫ್ ಲಿಟರೇಚರ್ ಮಹಾಪ್ರಬಂಧ 'ಕುಮಾರವ್ಯಾಸನ ಕಾವ್ಯಚಿತ್ರಗಳು : ಒಂದು ಅಧ್ಯಯನ'. ಇದರಲ್ಲಿ ಕುಮಾರವ್ಯಾಸನ ಕಾವ್ಯಚಿತ್ರಗಳನ್ನು (ಸನ್ನಿವೇಶಗಳ ಚಿತ್ರಣ, ನಾಟಕೀಯ ಚಿತ್ರಗಳು, ಯುದ್ಧ ಚಿತ್ರಗಳು, ಚಿತ್ರವೈವಿಧ್ಯಗಳು) ಕುರಿತು ಅಧ್ಯಯನಕ್ಕೆ ತೊಡಗಿದ್ದು, ಪಂಪನ 'ವಿಕ್ರಮಾರ್ಜುನ ವಿಜಯ'ದ ಹದಿಮೂರನೆಯ ಆಶ್ವಾಸವನ್ನು

ಆಧಾರವಾಗಿಟ್ಟುಕೊಂಡಿದ್ದಾರೆ. ಜೊತೆಗೆ ರನ್ನನ 'ಗದಾಯುದ್ಧ' ಕೃತಿಯಲ್ಲಿನ ಕಾವ್ಯಚಿತ್ರಗಳೊಂದಿಗೆ ಕುಮಾರವ್ಯಾಸನ ಕಾವ್ಯಚಿತ್ರಗಳನ್ನು ತುಲನೆ ಮಾಡಲಾಗಿದೆ. 'ಸನ್ನಿವೇಶಗಳ ಚಿತ್ರಣ' ಎಂಬ ನಾಲ್ಕನೆ ಅಧ್ಯಾಯದ ದ್ರೌಪದಿ ಸ್ವಯಂವರ, ಸುಭದ್ರಾ ಪರಿಣಯ, ಸ್ತ್ರೀ ಶೋಕ ಎಂಬ ಉಪ ಅಧ್ಯಾಯಗಳಲ್ಲಿ ಹಾಗೂ ನಾಟಕೀಯ ಚಿತ್ರಗಳು ಎಂಬ ಐದನೇ ಅಧ್ಯಾಯದ 'ಊರ್ವಶೀ ಪ್ರಣಯ ಪ್ರಸಂಗ' ಎಂಬ ಉಪ ಅಧ್ಯಾಯದಲ್ಲಿ ಸ್ತ್ರೀಚಿತ್ರಣ ಕುರಿತ ಚರ್ಚೆ ಇದೆ.

ಎಂ.ಫಿಲ್ ಸಂಪ್ರಬಂಧಗಳು

ಹೇಮಾವತಿ ಸಿ.ಹೆಚ್ ಅವರ ಎಂ.ಫಿಲ್ ಸಂಪ್ರಬಂಧ 'ಕುಮಾರವ್ಯಾಸನ ಸ್ತ್ರೀಪಾತ್ರಗಳು : ಸ್ತ್ರೀವಾದಿ ಅಧ್ಯಯನ'. ಇದರಲ್ಲಿ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಲ್ಲಿನ ಸ್ತ್ರೀಪಾತ್ರಗಳನ್ನು ಸ್ತ್ರೀವಾದಿ ಚಿಂತನೆಯ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಗು ಮಾಡಲಾಗಿದೆ. ಸ್ತ್ರೀಪಾತ್ರಗಳಲ್ಲಿ ಮುಖ್ಯಪಾತ್ರವಾದ ಹಾಗೂ ಇಡೀ ಕೃತಿಯ ಉದ್ದಕ್ಕೂ ಹಲವು ಸಂಘರ್ಷಗಳನ್ನು, ಅಪಮಾನಗಳನ್ನು ಎದುರಿಸಿದ ದ್ರೌಪದಿಯ ಪಾತ್ರಕ್ಕೆ ಹೆಚ್ಚಿನ ಒತ್ತು ನೀಡಿದ್ದಾರೆ. ಜೊತೆಗೆ ಇದರಲ್ಲಿ ಇದುವರೆಗಿನ ಕನ್ನಡ ಸಂದರ್ಭದ ಸ್ತ್ರೀವಾದಿ ಚಿಂತನೆಯ ದೃಷ್ಟಿಕೋನಗಳನ್ನು ಗಮನಿಸಲಾಗಿದೆ. ಅಲ್ಲದೆ ಕುಮಾರವ್ಯಾಸನ ಕೃತಿಯ ಬಗ್ಗೆ ಬಂದಿರುವ ವಿಮರ್ಶಾ ಸಾಮಗ್ರಿಯ ಮಿತಿಗಳನ್ನು ಗುರ್ತಿಸಿಕೊಂಡಿದ್ದಾರೆ.

ಸಂಧ್ಯ.ವಿ ಅವರ ಎಂ.ಫಿಲ್ ಸಂಪ್ರಬಂಧ 'ಕುಮಾರವ್ಯಾಸನ ವಿರಾಟಪರ್ವದ ವಿವಿಧ ಆವೃತ್ತಿಗಳು-ಒಂದು ಅಧ್ಯಯನ'. ವಿರಾಟಪರ್ವವು ಪಾಂಡವರ ಬದುಕಿನಲ್ಲಿ ಭವಿಷ್ಯದ ತಿರುವನ್ನು ನೀಡುವಂತಹದ್ದು. ಇಂತಹ ಪರ್ವವನ್ನು ಕುರಿತು, ಅದರ ಪಾಠಾಂತರಗಳ ಬಗ್ಗೆ ಬಿಡಿ ಬಿಡಿಯಾಗಿ ಚರ್ಚೆ ಆಗಿದೆ. ಆದರೆ ಸಂಪಾದನಾ ದೃಷ್ಟಿಯಿಂದ ಪ್ರತ್ಯೇಕ ಸಂಪ್ರಬಂಧ ರಚನೆಯಾಗಿಲ್ಲ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಬಂಧದಲ್ಲಿ ವಿರಾಟಪರ್ವದ ಮುದ್ರಿತ ಆವೃತ್ತಿಗಳನ್ನು ಗ್ರಂಥ ಸಂಪಾದನಾ ದೃಷ್ಟಿಯಿಂದ ಸಮೀಕ್ಷಿಸಲು ಯತ್ನಿಸಿದ್ದಾರೆ. ಅದಕ್ಕಾಗಿ 'ಕರ್ಣಾಟಕ ಮಹಾಭಾರತ : ವಿರಾಟಪರ್ವ' (ಸಂ) ಆರ್.ಶ್ಯಾಮಶಾಸ್ತ್ರಿ, 'ಕರ್ಣಾಟ ಭಾರತ ಕಥಾಮಂಜರಿ' (ಸಂ) ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್, 'ವಿರಾಟಪರ್ವ ಸಂಗ್ರಹ' (ಸಂ) ತ.ಸು.ಶಾಮರಾಮ್, 'ಕುಮಾರವ್ಯಾಸ ಭಾರತ ಸಂಗ್ರಹ' (ಸಂ) ಎಂ.ವಿ.ಸೀತಾರಾಮಯ್ಯ ಹಾಗೂ 'ವಿರಾಟಪರ್ವ ಸಂಗ್ರಹ' (ಸಂ) ಕೆ.ಎಂ.ಕೃಷ್ಣರಾವ್ ಅವರುಗಳು ಸಂಪಾದಿಸಿರುವ ಈ ಆವೃತ್ತಿಗಳನ್ನು ಅಧ್ಯಯನಕ್ಕೊಳಪಡಿಸಿದ್ದಾರೆ. ಆದರೆ ಮಹಿಳೆಯರನ್ನು ಕುರಿತಂತೆ ಯಾವುದೇ ರೀತಿಯ ಚರ್ಚೆಗಳಿಲ್ಲ.

ರೇಖಾ.ಎಂ ಅವರ ಎಂ.ಫಿಲ್ ಸಂಪ್ರಬಂಧ 'ಕುಮಾರವ್ಯಾಸ ಭಾರತದ 'ಆದಿಪರ್ವ'ದಲ್ಲಿ ಪಾಠಾಂತರ ವಿಶ್ಲೇಷಣೆ'. ಇಲ್ಲಿ ಮೊದಲ ಪರ್ವವಾದ 'ಆದಿಪರ್ವ'ದ ಪಾಠಾಂತರಗಳನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಯನವು ಎಂ.ವಿ.ಸೀತಾರಾಮಯ್ಯ, ತ.ಸು.ಶಾಮರಾಯರು, ಮಾಸ್ತಿ ವೆಂಕಟೇಶ ಅಯ್ಯಂಗಾರ್, ಕೆ.ಆರ್.ಶೇಷಗಿರಿ ಹಾಗೂ ವಿ.ಶ್ಯಾಮಚಾರಿಯವರ ಸಂಪಾದನಾ ಕೃತಿಗಳನ್ನು ಆಧರಿಸಿದೆ. ಇವುಗಳಲ್ಲಿ ಬಳಕೆಯಾಗಿರುವ ಹಸ್ತಪ್ರತಿಗಳು, ಪಾಠಾಂತರಗಳು, ಪಾಠ ವಿಶ್ಲೇಷಣೆ,

ಸಾಮಗ್ರಿಗಳು, ಆಗಿರುವ ವ್ಯತ್ಯಾಸ, ಬಿಟ್ಟು ಹೋಗಿರುವ ಭಾಗಗಳು ಮೊದಲಾದವುಗಳನ್ನು ಗುರುತಿಸಲಾಗಿದೆ. ಈ ಅಧ್ಯಯನವು ಸಹ ಪಾಠಾಂತರಗಳ ವಿಶ್ಲೇಷಣೆಗೆ ಒತ್ತನ್ನು ಕೊಟ್ಟಿರುವುದರಿಂದ ಮಹಿಳೆಯರ ಬಗೆಗೆ ಯಾವುದೇ ರೀತಿಯ ವಿಶ್ಲೇಷಣೆಗಳಿಲ್ಲ.

ಎಚ್.ಎನ್.ರಾಮಕೃಷ್ಣ ಅವರ ಎಂ.ಫಿಲ್ ಸಂಪ್ರಬಂಧ 'ಪಂಪ ಮತ್ತು ರತ್ನಾಕರವರ್ಣಿಯ ಕಾವ್ಯಗಳಲ್ಲಿ ಭರತ-ಬಾಹುಬಲಿಯ ಪ್ರಸಂಗ'. ಇದರಲ್ಲಿ 'ಆದಿಪುರಾಣ' ಮತ್ತು 'ಭರತೇಶ ವೈಭವ' ಕೃತಿಗಳಲ್ಲಿ ಕಂಡುಬರುವ ಮುಖ್ಯ ಸನ್ನಿವೇಶವಾದ ಭರತ ಹಾಗೂ ಬಾಹುಬಲಿಯರ ಪ್ರಸಂಗವನ್ನು ತೌಲನಿಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಇಲ್ಲಿ ವಿಭಿನ್ನ ಕಾಲಘಟ್ಟಗಳಲ್ಲಿ ಜೀವಿಸಿದ್ದ ಈ ಇಬ್ಬರೂ ಕವಿಗಳು ಈ ಪ್ರಸಂಗವನ್ನು ಗ್ರಹಿಸಿರುವ ಹಾಗೂ ಒಂದೇ ವಸ್ತುವನ್ನು ಇಬ್ಬರೂ ತಮ್ಮ ಕೃತಿಗಳ ಮೂಲಕ ನಿರ್ವಹಿಸಿರುವ ರೀತಿಯನ್ನು, ಅಳವಡಿಸಿಕೊಂಡಿರುವ ಕ್ರಮವನ್ನು ಚರ್ಚಿಸಿದ್ದಾರೆ. ಪ್ರಸ್ತುತ ಸಂಪ್ರಬಂಧದಲ್ಲಿ ಭರತ ಮತ್ತು ಬಾಹುಬಲಿಯರ ಪ್ರಸಂಗಕ್ಕೆ ಪ್ರಾಮುಖ್ಯತೆಯನ್ನು ನೀಡಿರುವ ಕಾರಣವಾಗಿ ಮಹಿಳಾ ಸಂಬಂಧಿ ಚರ್ಚೆಗಳು ಕಂಡುಬರುವುದಿಲ್ಲ.

ಗೀತಾ.ಆರ್ ಅವರ ಎಂ.ಫಿಲ್ ಸಂಪ್ರಬಂಧ 'ಕುಮಾರವ್ಯಾಸನ ಉದ್ಯೋಗ ಪರ್ವದ ಗ್ರಂಥ ಸಂಪಾದನೆಗಳ ಸಮೀಕ್ಷೆ'. ಇದರಲ್ಲಿ 'ಕುಮಾರವ್ಯಾಸ ಭಾರತ'ದ ಉದ್ಯೋಗ ಪರ್ವದ ಗ್ರಂಥ ಸಂಪಾದನೆಗಳನ್ನು ಸಮೀಕ್ಷಿಸಲಾಗಿದೆ. ಇದಕ್ಕಾಗಿ ಸಂಶೋಧಕರು ಎಸ್.ಎನ್.ಕೃಷ್ಣ ಜೋಯಿಸ್ ಅವರ 'ಉದ್ಯೋಗ ಪರ್ವ' ಮತ್ತು ಎಂ.ವಿ.ಸೀತಾರಾಮಯ್ಯ ಅವರ 'ಕುಮಾರವ್ಯಾಸ ಭಾರತ ಸಂಗ್ರಹ' ಎಂಬ ಎರಡು ಕೃತಿಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಜೊತೆಗೆ ಇವೆರಡನ್ನೂ ತೌಲನಿಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ.

ಡಾ.ಧನವಂತ ಹಾಜವಗೋಳರ ಎಂ.ಫಿಲ್ ಸಂಪ್ರಬಂಧ 'ವಿರಾಟಪರ್ವ : ಸಾಂಸ್ಕೃತಿಕ ನೆಲೆ'. ಭಾರತ ಕಥೆಯಲ್ಲಿ ಪ್ರಮುಖ ಹಾಗೂ ವಿಶಿಷ್ಟವಾದ ವಿರಾಟಪರ್ವವನ್ನು ಸಮಗ್ರವಾಗಿ ಸಾಂಸ್ಕೃತಿಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಪಾಂಡವರು ವನವಾಸವನ್ನು ಮುಗಿಸಿ ಅಜ್ಞಾತವಾಸಕ್ಕಾಗಿ ವಿರಾಟ ನಗರಿಗೆ ಬರುವ ಸಂದರ್ಭ ಇದು. ಇಲ್ಲಿ ಪಾಂಡವರು ವಿರಾಟನ ಸೇವೆಗೆ ನಿಂತದ್ದು, ದ್ರೌಪದಿಗೆ ಕೀಚಕನ ಕಿರುಕುಳ, ಆತನ ವಧಾ ಪ್ರಸಂಗ, ಉತ್ತರನ ಪೌರುಷ, ದಕ್ಷಿಣ ಹಾಗೂ ಉತ್ತರ ಗೋಗ್ರಹಣದಲ್ಲಿ ಪಾಂಡವರ ವಿಜಯ, ಉತ್ತರೆ-ಅಭಿಮನ್ಯುವಿನ ವಿವಾಹ ಮೊದಲಾದ ಸಂದರ್ಭಗಳು ಈ ಭಾಗದಲ್ಲಿವೆ. ಇವುಗಳ ಹಿನ್ನೆಲೆಯಲ್ಲಿ ಅಡಕವಾಗಿರುವ ಕುಮಾರವ್ಯಾಸನ ಸಮಕಾಲೀನ ಸಂಸ್ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಅಲ್ಲಿನ ಜನರ ಧಾರ್ಮಿಕ ಬದುಕು, ದೇವರ ಬಗೆಗಿನ ಭಾವನೆಗಳು, ರಾಜಕೀಯ ಚಿತ್ರಣ, ರಾಜ ರಾಣಿಯರ ಗುಣ, ಶೀಲ, ಅವರ ಕರ್ತವ್ಯಗಳು, ಆ ಕಾಲದ ಸಾಮಾಜಿಕ ಸ್ಥಿತಿಗತಿಗಳು, ಆ ಸಮಾಜದ ವಿವಿಧ ಜಾತಿ ಜನಾಂಗ, ಮಾನವ ಸಂಬಂಧಗಳು, ಜೀವನ ವಿಧಾನ, ಅವರ ಭಾಷೆ ಮೊದಲಾದ ಅಂಶಗಳನ್ನು ತಮ್ಮ ಸಾಂಸ್ಕೃತಿಕ ಅಧ್ಯಯನದ ವ್ಯಾಪ್ತಿಯಲ್ಲಿ ವಿಶ್ಲೇಷಿಸಿದ್ದಾರೆ.

ವಿಮರ್ಶೆ, ಸಂಶೋಧನೆ ಮತ್ತು ಸಂಪಾದಿತ ಕೃತಿಗಳು

'ಕುಮಾರವ್ಯಾಸ ಭಾರತ ಕಥೆ ಮತ್ತು ಕಾವ್ಯ' ಕೃತಿಯು 'ನೀನಾಸಂ'ದವರು ನವದೆಹಲಿಯ ಕೇಂದ್ರ ಸಂಗೀತ ನಾಟಕ ಅಕಾಡೆಮಿಯ ಸಹಾಯದಿಂದ 'ಕರ್ಣಾಟ ಭಾರತ ಕಥಾಮಂಜರಿ'ಯನ್ನು ಕುರಿತು ಏರ್ಪಡಿಸಿದ್ದ ಕೀರ್ತಿನಾಥ ಕುರ್ತಕೋಟಿಯವರ ವ್ಯಾಖ್ಯಾನ ಮತ್ತು ಭಾಷಣಗಳ ಲಿಖಿತ ರೂಪವಾಗಿದೆ. ಆದಿಪರ್ವದಿಂದ ಹಿಡಿದು ಶಲ್ಯಪರ್ವ ಮತ್ತು ಗದಾಪರ್ವದವರೆಗಿನ ವ್ಯಾಖ್ಯಾನವಿದೆ. ಈ ವ್ಯಾಖ್ಯಾನದೊಳಗೆ ವಿವಾಹಪೂರ್ವದ ತಾಯ್ತನದ ಸಂಘರ್ಷಗಳನ್ನು ಎದುರಿಸುವ ಕುಂತಿಯ ಮಾನಸಿಕ ತೊಳಲಾಟಗಳು, ದ್ರೌಪದಿಯು ವಸ್ತ್ರಾಪಹರಣಕ್ಕೊಳಗಾಗಿ ಅನುಭವಿಸುವ ನೋವು, ಹತಾಶೆ, ಅಭದ್ರತೆಯ ಸಂಕಟಗಳು, ಕೀಚಕನಿಂದ ಎದುರಿಸುವ ದೈಹಿಕ ಹಾಗೂ ಮಾನಸಿಕ ಕಿರುಕುಳಗಳು, ತನ್ನ ಮನದ ಆಸೆ ಈಡೇರದ ಕಾರಣವಾಗಿ ಅರ್ಜುನನನಿಗೆ ಶಾಪ ನೀಡುವ ಊರ್ವಶಿಯ ಮನದ ಸಂಘರ್ಷಗಳನ್ನು ವಿವರವಾಗಿ ಚರ್ಚಿಸಿದ್ದಾರೆ.

'ಕುಮಾರವ್ಯಾಸ ಪ್ರಶಸ್ತಿ' ಕೃತಿಯು ಕುಮಾರವ್ಯಾಸ ಹಾಗೂ ಆತನ ಕೃತಿಯನ್ನು ಕುರಿತು ವಿವಿಧ ಲೇಖಕರು ರಚಿಸಿದ ವಿಮರ್ಶಾ ಲೇಖನಗಳ ಮಾಲೆ. ಇದರಲ್ಲಿ ಮಹಿಳೆಯರಿಗೆ ಸಂಬಂಧಿಸಿದಂತೆ ಸಿ.ಕೆ.ವೆಂಕಟರಾಮಯ್ಯ ಅವರ 'ಕುಮಾರವ್ಯಾಸನು ಚಿತ್ರಿಸಿರುವ ದ್ರೌಪದಿಯ ಪಾತ್ರ' ಎಂಬ ಲೇಖನವನ್ನು ಹೊರತುಪಡಿಸಿದರೆ ಉಳಿದ ಲೇಖನಗಳು ಕುಮಾರವ್ಯಾಸನಿಗೆ ಸಂಬಂಧಿಸಿದಂತೆ ಅವನ ಕಾಲ, ಮತ, ಮಹಿಮೆ, ಪಾತ್ರವರ್ಗ, ಶೈಲಿ, ಮಹಾಕಾವ್ಯದ ಗುಣ ಮೊದಲಾದ ವಿಷಯಗಳನ್ನು ಕುರಿತವಾಗಿವೆ. ವೆಂಕಟರಾಮಯ್ಯನವರು ತಮ್ಮ ಲೇಖನದಲ್ಲಿ ದ್ರೌಪದಿಯು ದ್ಯೂತದ ಪ್ರಸಂಗ, ವನವಾಸ ಹಾಗೂ ಕೀಚಕನಿಂದ ಅನುಭವಿಸುವ ಕಿರುಕುಳ ಹಾಗೂ ನೋವಿನ ಬಸವಳಿಕೆಗಳನ್ನು ವಿಶ್ಲೇಷಣೆಗೆ ಒಳಗುಮಾಡಿದ್ದಾರೆ. ಉಳಿದಂತೆ ಇತರ ಯಾವ ಮಹಿಳೆಯರನ್ನು ಕುರಿತು ಚರ್ಚಿಸಿಲ್ಲ.

ದೇ.ಜವರೇಗೌಡರ ಕೃತಿ 'ಗದುಗಿನ ಭಾರತ : ಒಂದು ಸಾಂಸ್ಕೃತಿಕ ಅಧ್ಯಯನ'. ಇದು ಕುಮಾರವ್ಯಾಸ ಭಾರತದ ಸಾಂಸ್ಕೃತಿಕ ಅಧ್ಯಯನವಾಗಿದೆ. ಇದು ದೇ.ಜ.ಗೌ ಅವರ ಮೂರು ಉಪನ್ಯಾಸಗಳನ್ನು ಮಿತಿಯಾಗಿರಿಸಿಕೊಂಡು ಸಿದ್ಧಪಡಿಸಿರುವ ಪ್ರಬಂಧ. ಇದರಲ್ಲಿ ವ್ಯಾಸ ಹಾಗೂ ಕುಮಾರವ್ಯಾಸರನ್ನು ತೌಲನಿಕ ವಿಶ್ಲೇಷಣೆಗೆ ಒಳಪಡಿಸಿಲ್ಲ. ಆದರೂ ರಾಜಕೀಯ, ಮತೀಯ, ಸಾಮಾಜಿಕ ಹಾಗೂ ಭಾಷಿಕ ಸಂಸ್ಕೃತಿಗಳಂತಹ ಮುಖ್ಯ ವಿಚಾರಗಳನ್ನು ಚರ್ಚೆಗೆ ಒಳಪಡಿಸಿದ್ದಾರೆ. ನಾಲ್ಕನೆ ಅಧ್ಯಾಯದಲ್ಲಿನ 'ಸ್ತ್ರೀ ಸ್ವಾತಂತ್ರ್ಯ' ಎಂಬ ಉಪ ಅಧ್ಯಾಯವು ಸ್ತ್ರೀಯರನ್ನು ಕುರಿತು ಹೊಸ ಒಳನೋಟಗಳನ್ನು ಕೊಡುತ್ತದೆ.

ಡಾ.ಜವಳಿ.ಬಿ.ಸಿ ಅವರ ಕೃತಿ 'ಕುಮಾರವ್ಯಾಸ ಭಾರತದಲ್ಲಿ ಕೃಷ್ಣಸಂಧಾನದ ಸನ್ನಿವೇಶ'. ಈ ಕಿರು ಕೃತಿಯು ಕರ್ನಾಟಕ ವಿಶ್ವವಿದ್ಯಾಲಯದ ಪ್ರಸಾರಾಂಗವು ಏರ್ಪಡಿಸಿದ್ದ ೩೪೧ನೇ ವ್ಯಾಸಂಗ ವಿಸ್ತರಣಾ ಉಪನ್ಯಾಸ ಮಾಲಿಕೆಯಲ್ಲಿ ಲೇಖಕರು ನೀಡಿದ ಉಪನ್ಯಾಸದ ಲಿಖಿತ ರೂಪವಾಗಿದೆ.

ಇದರಲ್ಲಿ ಕೃಷ್ಣ ಸಂಧಾನದ ಕಥಾವಸ್ತು, ಆ ಸನ್ನಿವೇಶದ ಕಥಾಕೌಶಲ್ಯಗಳನ್ನು ವಿಶ್ಲೇಷಿಸಿದ್ದಾರೆ. 'ಪಂಪಭಾರತ'ದಲ್ಲಿನ ಕೃಷ್ಣ ಸಂಧಾನ ಸನ್ನಿವೇಶ, 'ಪಂಪಭಾರತ' ಮತ್ತು 'ಕುಮಾರವ್ಯಾಸ ಭಾರತ'ಗಳಲ್ಲಿ ಈ ಕಥಾ ಸನ್ನಿವೇಶದ ವ್ಯತ್ಯಾಸಗಳು ಹಾಗೂ ಕೃಷ್ಣಸಂಧಾನ ಮುಖ್ಯ ವಿಷಯ : ರಾಜನೀತಿ ಮೊದಲಾದವುಗಳನ್ನು ಅಡಕಗೊಳಿಸಿದ್ದಾರೆ.

ಚನ್ನಬಸಪ್ಪ ಬೆಟ್ಟದೂರು ಅವರ ಸಂಶೋಧನಾ ಕೃತಿ 'ಕುಮಾರವ್ಯಾಸ–ಪುನರ್ ಪರಿಶೀಲನೆ'. ಇದು ಕುಮಾರವ್ಯಾಸ ಹಾಗೂ ಆತನ ಕೃತಿಯನ್ನು ಕುರಿತ ಪುನರ್ ಪರಿಶೀಲನೆಯ ಅಧ್ಯಯನವಾಗಿದೆ. ಆತನ ವೈಯಕ್ತಿಕ ವಿಚಾರಗಳು ಹಾಗೂ ಕೃತಿಯ ಮೇಲೆ ಹೊಸ ರೀತಿಯ ಬೆಳಕನ್ನು ಚೆಲ್ಲಿದೆ. ಲೇಖಕರೇ ಹೇಳಿಕೊಂಡಂತೆ ಕುಮಾರವ್ಯಾಸನ ಮೇಲೆ ನಡೆದಿರುವ ಆಕ್ರಮಣಗಳು, ಆತನು ಲಿಂಗವಂತನಾಗಿದ್ದರೂ ಅವನಿಗೆ ವೈದಿಕ ಧರ್ಮದ ಲೇಪನವನ್ನು ಹಚ್ಚಿ ಬ್ರಾಹ್ಮಣೀಕರಿಸಿರುವ ವಿಚಾರಗಳನ್ನು ಸೂಕ್ಷ್ಮವಾಗಿ ತಿಳಿಸುತ್ತ ಸಾಕ್ಷೀಕರಿಸಿದ್ದಾರೆ. ಅಲ್ಲದೆ ಈಗ ಇರುವ ಕೃತಿಯೂ ವಿಕೃತಿಗೊಳಗಾಗಿದ್ದು, ಮೂಲ ಕೃತಿಯನ್ನು ಮರೆ ಮಾಚಲಾಗಿದೆ ಎಂಬಂತಹ ವಿಚಾರಗಳನ್ನು ವಿಶ್ಲೇಷಿಸಿದ್ದಾರೆ. ಜೊತೆಗೆ ಕುಮಾರವ್ಯಾಸನ ಮತ ಹಾಗೂ ಸಾಹಿತ್ಯ ಚರಿತ್ರೆಯಲ್ಲಿನ 'ಕುಮಾರವ್ಯಾಸ ಯುಗ'ದ ಬಗ್ಗೆ ಚರ್ಚಿಸಿರುವ ಪಂ.ಸೂಗವೀರ ಶರ್ಮ, ಡಾ.ಆರ್.ಸಿ.ಹಿರೇಮಠ, ಬಿ.ಮಹಾದೇವಪ್ಪ ಮೊದಲಾದವರ ಸಂಶೋಧನೆಗಳನ್ನು ಆಧಾರವಾಗಿರಿಸಿಕೊಂಡು ಆತ ಲಿಂಗವಂತ ಕವಿಯೆಂದೂ ಹಾಗೂ ಕುಮಾರವ್ಯಾಸಯುಗ ಅಲ್ಲ, ಆತ ಬಸವಯುಗಕ್ಕೆ ಸೇರಿದವನು ಎಂದು ಪ್ರತಿಪಾದಿಸುವ ಈ ಕೃತಿ ವಿಮರ್ಶೆ ಹಾಗೂ ತೌಲನಿಕ ಅಧ್ಯಯನದಿಂದ ಕೂಡಿದ ವೈಚಾರಿಕ ಕೃತಿಯಾಗಿದೆ.

ಡಾ.ಎಲ್.ಆರ್.ಹೆಗಡೆ ಅವರ ಸಂಪಾದಿತ ಕೃತಿ 'ಕುಮಾರವ್ಯಾಸ'. ಇದು ಕನ್ನಡ ಸಾಹಿತ್ಯ ಪರಿಷತ್ತಿನ ಅಂದಿನ ಅಧ್ಯಕ್ಷರಾಗಿದ್ದ ಜಿ.ನಾರಾಯಣ ಅವರು ಉದಯೋನ್ಮುಖ ಲೇಖಕರಿಗಾಗಿ ಬೆಂಗಳೂರು ಮತ್ತು ಧಾರವಾಡಗಳಲ್ಲಿ ಏರ್ಪಡಿಸಿದ್ದ ಶಿಬಿರಗಳಲ್ಲಿನ ಅಭ್ಯರ್ಥಿಗಳಿಗೆ ಹೆಗಡೆಯವರು ಕುಮಾರವ್ಯಾಸ ಭಾರತವನ್ನು ಕುರಿತು ಮಾಡಿದ ಉಪನ್ಯಾಸದ ಗ್ರಂಥರೂಪವಾಗಿದೆ. ಕೃತಿಯಲ್ಲಿ ಕುಮಾರವ್ಯಾಸನ ಕಾಲ, ಆತನ ವ್ಯಕ್ತಿ ವಿಷಯಗಳು, ಕೃತಿ ರಚನೆ, ಆರಿಸಿಕೊಂಡ ಆಧಾರ ಗ್ರಂಥಗಳು, ಆತನ ಸನ್ನಿವೇಶ ರಚನೆ, ಹಾಸ್ಯ ಸಂದರ್ಭಗಳು, ಶೈಲಿ, ಜೀವನ ಚಿತ್ರಣ, ಸ್ವಪ್ನ ಸಂದರ್ಭಗಳು ಮೊದಲಾದ ವಿಚಾರಗಳನ್ನು ಕುರಿತು ಚರ್ಚಿಸಿದ್ದಾರೆ.

ಎನ್ಕೆ ಕುಲಕರ್ಣಿ ಅವರ ಕೃತಿ 'ಕುಮಾರವ್ಯಾಸ ಮತ್ತು ಕೃಷ್ಣ ಕಥೆ'. ಇದರಲ್ಲಿ ನಾರಣಪ್ಪನನ್ನು ಕುರಿತಾದ ಚಾರಿತ್ರಿಕ ಕಥೆ ಹಾಗೂ ಆತನ ಕಾವ್ಯ ರಚನೆಯಾದ ಕೃಷ್ಣನ ಕಥೆಯನ್ನು ವಿವೇಚಿಸಲಾಗಿದೆ. ಕುಮಾರವ್ಯಾಸನ ಕಥನ ಕೌಶಲವನ್ನು ಓದುಗರಿಗೆ ಪರಿಚಯಿಸುವುದು ಕೃತಿಯ ಮುಖ್ಯ ಉದ್ದೇಶವಾಗಿದೆ. ಇದಕ್ಕಾಗಿ ಕವಿವಾಣಿಯಲ್ಲಿಯೆ ಕಥೆಯನ್ನು ಹೇಳಲು ಇಲ್ಲಿ ಪ್ರಯತ್ನಿಸಿದ್ದಾರೆ. ಜೊತೆಗೆ ಶಾನುಭೋಗ ನಾರಣಪ್ಪನ ಊರಾದ ಕೋಳಿವಾಡಕ್ಕೆ ಎತ್ತಿನ ಗಾಡಿಯಲ್ಲಿ ಪ್ರಯಾಣಿಸಿ ಅದರ ಅನುಭವಗಳ ಹಿನ್ನೆಲೆಯಲ್ಲಿ ಕೃತಿಯನ್ನು ನಿರೂಪಿಸಿದ್ದಾರೆ. ಅಲ್ಲದೆ ಗ್ರಾಮಕ್ಕೆ ಭೇಟಿ ನೀಡಿದ ನಂತರ ಪರಿಚಿತರಾದ

ನಾರಣಪ್ಪನ ಬಳಗದವರಾದ 'ತಿಪ್ಪನಗೌಡ'ರ ಜೊತೆಗಿನ ಸಂಭಾಷಣೆ, ಚರ್ಚೆಯ ವಿವರಗಳೂ ಈ ಕೃತಿಯಲ್ಲಿ ದಾಖಲಾಗಿವೆ. ಈ ಕೃತಿ ಸಂಭಾಷಣಾ ಸ್ವರೂಪದಲ್ಲಿದೆ.

ಲೇಖಕರಾದ ಕೀರ್ತಿನಾಥ ಕುರ್ತಕೋಟಿ ಅವರ ಕೃತಿ 'ಕುಮಾರವ್ಯಾಸ'. ಇದರಲ್ಲಿ ಕುರ್ತಕೋಟಿಯವರು ಮುಖ್ಯವಾಗಿ ಕುಮಾರವ್ಯಾಸನ ಸ್ಥಳ, ಕಾಲ, ವ್ಯಕ್ತಿತ್ವ, ಕಾವ್ಯ ಸ್ವರೂಪ, ನಾಯಕ ಪಾತ್ರವಾದ ಶ್ರೀಕೃಷ್ಣ, ಕೃತಿಯಲ್ಲಿನ ಪಾತ್ರ ಪ್ರಪಂಚ, ಆತನ ನಿರೂಪಣೆಯ ಕೌಶಲ್ಯ ಹಾಗೂ ಕುಮಾರವ್ಯಾಸನ ಶೈಲಿಯನ್ನು ವಿಮರ್ಶಿಸಿದ್ದಾರೆ. 'ಪಾತ್ರ ಪ್ರಪಂಚ' ಎಂಬ ಐದನೇ ಅಧ್ಯಾಯದಲ್ಲಿ ದ್ರೌಪದಿಯ ಪಾತ್ರವನ್ನು ಕುರಿತ ವಿಶ್ಲೇಷಣೆಯಲ್ಲಿ ಹೊಸ ವಿಚಾರಗಳನ್ನು ಅಭಿವ್ಯಕ್ತಪಡಿಸಿದ್ದಾರೆ.

ಶ್ಯಾಮಸುಂದರ ಬಿದರಕುಂದಿ ಅವರು ಸಂಪಾದಿಸಿರುವ ಕೃತಿ 'ಕುಮಾರವ್ಯಾಸನ-ಕನ್ನಡ ಭಾರತ'. ಈ ಕೃತಿಯು ಕುಮಾರವ್ಯಾಸನನ್ನು ಕುರಿತು ಬಂದಿರುವ ಕೃತಿಗಳು, ಪ್ರಕಟವಾಗಿರುವ ಲೇಖನಗಳನ್ನು ಅಧ್ಯಯನ ಮಾಡಿ, ಒಂದು ಪರಿಮಿತಿಗೆ ಮತ್ತು ಶಿಸ್ತಿಗೆ ಒಳಪಡಿಸಿರುವ ಸಂಕಲನವಾಗಿದೆ. ಇಲ್ಲಿ ವಿಮರ್ಶಕರು ಬೇರೆ ಬೇರೆ ಸಂದರ್ಭಗಳಲ್ಲಿ, ನಿಯತಕಾಲಿಕೆ, ಸಂಭಾವನಾ ಗ್ರಂಥಗಳು ಹಾಗೂ ಇತರ ಗ್ರಂಥಗಳಲ್ಲಿ ಚರ್ಚಿಸಿದ್ದ ಕುಮಾರವ್ಯಾಸನಿಗೆ ಸಂಬಂಧಿಸಿದ ವಿಮರ್ಶಾ ಲೇಖನಗಳಲ್ಲಿ ಪ್ರಮುಖವಾದವುಗಳನ್ನು ಒಂದೆಡೆ ಇಡಿಯಾಗಿ ಪ್ರಕಟಿಸಲಾಗಿದೆ.

ವಿ.ಸೀತಾರಾಮಯ್ಯ ಅವರು ಸಂಪಾದಿಸಿರುವ ಕೃತಿ 'ಕುಮಾರವ್ಯಾಸ'. ಈ ಕೃತಿಯು ವಿವಿಧ ವಿದ್ವಾಂಸರು ರಚಿಸಿದ ಕುಮಾರವ್ಯಾಸನ 'ಕಾಲ, ಮತ, ವ್ಯಕ್ತಿತ್ವ', 'ಜೀವನ ದರ್ಶನ ಹಾಗೂ ಕಾವ್ಯ ಸ್ವರೂಪ' ಮತ್ತು 'ಕುಮಾರವ್ಯಾಸನ ಶೈಲಿ' ಎಂಬ ಮೂರು ಲೇಖನಗಳ ಸಂಕಲನವಾಗಿದೆ. ಇವುಗಳಲ್ಲಿ ಕವಿಯ ಕಾಲ, ಅವನ ಜೀವನ ಕತೆ, ಕೃತಿ, ಕೃತಿ ರಚನೆಗೆ ಆಧಾರ, ಜೀವನ ಮೀಮಾಂಸೆ, ಅವನ ಶೈಲಿ ಮೊದಲಾದವುಗಳನ್ನು ವಿಶ್ಲೇಷಿಸಲಾಗಿದೆ.

ಡಿ.ವಿ.ಶೇಷಗಿರಿರಾವ್ ಅವರು ಸಂಪಾದಿಸಿರುವ ಕೃತಿ 'ಕುಮಾರವ್ಯಾಸ ಸರಸವಾಣಿ'. ಪ್ರಸ್ತುತ ಕೃತಿಯಲ್ಲಿ 'ಕುಮಾರವ್ಯಾಸಭಾರತ'ದ ನಾಲ್ಕು ಪರ್ವಗಳಿಂದ ಆಯ್ದುಕೊಂಡ ನಾಲ್ಕು ಪ್ರಕರಣಗಳನ್ನು ಕುರಿತು ವಿಮರ್ಶಿಸಿದ್ದಾರೆ. ಜೊತೆಗೆ ಟಿಪ್ಪಣಿ ಹಾಗೂ ಕ್ಲಿಷ್ಟ ಪದಗಳಿಗೆ ಅರ್ಥಕೋಶವನ್ನು ನೀಡಿದ್ದಾರೆ. ಇಲ್ಲಿ ಸಭಾಪರ್ವದ ಭಾಗದಿಂದ ಆರಿಸಿಕೊಂಡಿರುವ ಧರ್ಮರಾಯನ ರಾಜಸೂಯ ಯಾಗ, ಅರಣ್ಯ ಪರ್ವದಿಂದ ಆಯ್ದುಕೊಂಡಿರುವ ದುರ್ಯೋಧನನು ದೂರ್ವಾಸರಿಂದ ವರಪಡೆದು ಪಾಂಡವರನ್ನು ಇಕ್ಕಟ್ಟಿಗೆ ಸಿಲುಕಿಸುವ ದೂರ್ವಾಸ ಆತಿಥ್ಯ ಎಂಬ ಭಾಗಗಳನ್ನು ವಿಮರ್ಶಿಸಿದ್ದಾರೆ. ಇವುಗಳ ಜೊತೆಗೆ ವಿರಾಟ ಪರ್ವದಿಂದ ಆಯ್ದುಕೊಂಡಿರುವ ವೀರ ಕುಮಾರ ಉತ್ತರನ ಪ್ರಸಂಗ ಮತ್ತು ಉದ್ಯೋಗ ಪರ್ವದಿಂದ ಆರಿಸಿಕೊಂಡಿರುವ ವನವಾಸದ ನಂತರ ಪಾಂಡವರ ಮುಂದಿನ ನಡೆಯನ್ನು ಕುರಿತು ಚರ್ಚಿಸಿ ಕೃಷ್ಣನನ್ನು ಸಂಧಾನಕ್ಕಾಗಿ ಕಳುಹಿಸುವ ಕೃಷ್ಣಸಂಧಾನದ ಭಾಗಗಳನ್ನು ವಿಮರ್ಶೆಗೆ ಒಳಪಡಿಸಿದ್ದಾರೆ.

ಸಿ.ಪಿ.ಕೆ ಅವರ ಕೃತಿ 'ಕುಮಾರವ್ಯಾಸ ಸಮೀಕ್ಷೆ'. ಲೇಖಕರು ಕುಮಾರವ್ಯಾಸನ ಮಹಾಕಾವ್ಯವನ್ನು ಕುರಿತು ಇದುವರೆಗೆ ನಡೆದಿರುವ ಅಧ್ಯಯನಗಳ ಫಲಿತಾಂಶಗಳನ್ನು ಕ್ರೋಢೀಕರಿಸುವುದು ಈ ಚಿಕ್ಕ ಪುಸ್ತಕದ ಮುಖ್ಯೋದ್ದೇಶ ಎಂದು ಹೇಳಿಕೊಂಡಿದ್ದಾರೆ. ಇದರಲ್ಲಿ 'ಕುಮಾರವ್ಯಾಸ ಭಾರತ'ದ ಕಥಾಸಾರ, ಅದರ ಕಾವ್ಯೋದ್ದೇಶ, ಕೃತಿ ರಚನೆಗೆ ಬಳಸಿಕೊಂಡಿರುವ ಆಕರ, ಕಾವ್ಯ ರಚನೆಯ ರೀತಿ, ವರ್ಣನೆಗಳು, ಸನ್ನಿವೇಶ ರಚನೆ, ಪಾತ್ರ ಚಿತ್ರಣ, ಆತನ ಭಾಷೆ ಹಾಗೂ ಶೈಲಿಯನ್ನು ಕುರಿತು ಸುದೀರ್ಘವಾಗಿ ಚರ್ಚಿಸಿದ್ದಾರೆ. ಸನ್ನಿವೇಶ ರಚನೆಯಲ್ಲಿನ 'ಊರ್ವಶೀ ಪ್ರಸಂಗ'ವು ಅರ್ಜುನನ ಮೇಲೆ ಮನಸೋತ ಊವರ್ಶಿಯ ಮಾನಸಿಕ ಸಂಘರ್ಷಗಳು ಹಾಗೂ ಅವಳ ಕೋರಿಕೆಯನ್ನು ನಿರಾಕರಿಸಿದ ನಂತರದ ಆಕೆಯ ಮನಸ್ಸಿನಲ್ಲಿ ಒಡಮೂಡಿದ ವ್ಯಗ್ರ ಭಾವಗಳ ವಿಶ್ಲೇಷಣೆ ಇದೆ. 'ಪಾತ್ರ ಚಿತ್ರಣ' ಎಂಬ ಅಧ್ಯಾಯದಲ್ಲಿ ದ್ರೌಪದಿಯ ಪಾತ್ರವನ್ನು ಕುರಿತು ಪ್ರಮುಖವಾಗಿ ಚರ್ಚಿಸಿದ್ದಾರೆ.

ಪ್ರೊ.ಎಂ.ಆರ್.ಲಕ್ಷ್ಮೀದೇವಿ ಅವರ ಕೃತಿ 'ಕುಮಾರವ್ಯಾಸ ಮತ್ತು ಜಾನಪದ'. ಪ್ರಸ್ತುತ ಕೃತಿಯಲ್ಲಿ 'ಕುಮಾರವ್ಯಾಸ ಭಾರತ' ಕೃತಿಯಲ್ಲಿರುವ ಜಾನಪದೀಯ ಅಂಶಗಳು ಯಾವುವು, ಅವು ಶಿಷ್ಟ ಕಾವ್ಯವಾದ 'ಕುಮಾರವ್ಯಾಸ ಭಾರತ'ದಲ್ಲಿ ಹೇಗೆ ಅಂತರ್ಗತವಾಗಿವೆ ಎಂಬುದನ್ನು ಚರ್ಚಿಸಲಾಗಿದೆ. ಅದಕ್ಕಾಗಿ ಕೃತಿಯಲ್ಲಿನ ಜಾನಪದ ಕಲೆ, ಭಾಷೆ, ಸಾಹಿತ್ಯ, ವೃತ್ತಿ ಹಾಗೂ ಜನಪದ ಜೀವನ, ನಂಬಿಕೆ, ಆಚರಣೆಗಳು ಮೊದಲಾದ ವರ್ಗೀಕರಣಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸಿದ್ದಾರೆ.

ಡಾ.ಪ್ರ.ಕೃ.ಗಾಯತ್ರೀ ಅವರ ಸಂಶೋಧನಾತ್ಮಕ ಲೇಖನದ ಕಿರು ಕೃತಿ 'ದ್ರೌಪದಿಯ ಛಲಸಾಧನೆ'. ಛಲಗಾತಿಯಾಗಿ, ಮಹಾಭಾರತ ಸಂಗ್ರಾಮಕ್ಕೆ ಕಾರಣೀಕರ್ತಳಾದ ದ್ರೌಪದಿಯ ಪಾತ್ರವನ್ನು ಇಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ವ್ಯಾಸ ಮಹರ್ಷಿ ಚಿತ್ರಿಸಿರುವ ದ್ರೌಪದೀ ಪಾತ್ರದ ಚಿತ್ರಣ ಇಲ್ಲಿದೆ. ರಾಜನೀತಿ ಕುಶಲಳಾಗಿ, ಕ್ರಿಯಾಶೀಲ ವ್ಯಕ್ತಿತ್ವದವಳಾದ ಹಾಗೂ ಮಹಾಭಾರತದ ಘಟನೆಗಳಿಗೆ ಕೇಂದ್ರ ಬಿಂದುವಾದ ದ್ರೌಪದಿಯ ಪಾತ್ರವನ್ನು ಇಲ್ಲಿ ವಿಮರ್ಶಿಸಿದ್ದಾರೆ. ದ್ರೌಪದಿಯ ಪಾತ್ರವನ್ನು ಇಲ್ಲಿ ಲೌಕಿಕ ಸ್ತರ ಹಾಗೂ ಆಧ್ಯಾತ್ಮಿಕ ಸ್ತರ ಎಂಬ ಎರಡು ದೃಷ್ಟಿಕೋನಗಳಿಂದ ವಿವೇಚಿಸಿದ್ದಾರೆ. ಪ್ರಾಸಂಗಿಕವಾಗಿ ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳ ಸಾಲುಗಳನ್ನು ಚರ್ಚೆಯಲ್ಲಿ ಬಳಸಿಕೊಂಡಿದ್ದಾರೆ.

ಸುಜನಾ ಅವರ ಕೃತಿ 'ಭಾರತ ಕಥಾಮಂಜರಿ'. ಪ್ರಸ್ತುತ ಕೃತಿಯಲ್ಲಿ 'ಕುಮಾರವ್ಯಾಸ ಭಾರತ'ದ 'ಕಿರಾತಾರ್ಜುನ ಪ್ರಸಂಗ'ದ ಆಯ್ದ ಭಾಗಗಳನ್ನು ಸಂಗ್ರಹಿಸಿ ಕೊಡಲಾಗಿದೆ. ಇಲ್ಲಿ ಧನಂಜಯನ ಉಗ್ರ ತಪಸ್ಸು, ಶಿವನು ಅರ್ಜುನನಿಗೆ ಒಲಿದು ಪಾಶುಪತಾಸ್ತ್ರವನ್ನು ನೀಡುವುದು, ತನ್ನ ಭಕ್ತನನ್ನು ಪರೀಕ್ಷಿಸುವ ಶಿವ, ಅರ್ಜುನನಲ್ಲಿ ಮೋಹಗೊಳ್ಳುವ ಊರ್ವಶಿ ಮೊದಲಾದ ಪ್ರಸಂಗಗಳ ಆಯ್ದ ಭಾಗಗಳನ್ನು ನೀಡಿದ್ದಾರೆ. ಮುಖ್ಯವಾಗಿ ಮುನ್ನುಡಿಯಲ್ಲಿ ಲೇಖಕರು ಚರ್ಚಿಸಿರುವ ಅಂಶಗಳು ಪ್ರಮುಖವಾಗಿವೆ. ಕವಿ ವಿಚಾರ, ವ್ಯಾಸ-ಕುಮಾರವ್ಯಾಸ, ಪಂಪ-ಕುಮಾರವ್ಯಾಸ, ಬಸವಣ್ಣನವರು-ಕುಮಾರವ್ಯಾಸ, ಕುಮಾರವ್ಯಾಸನ ದರ್ಶನ ಮೊದಲಾದ ಅಂಶಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸಿದ್ದಾರೆ.

ಎಸ್.ವಿ.ರಂಗಣ್ಣ ಅವರ ಕೃತಿ 'ಕುಮಾರವ್ಯಾಸ ವಾಣಿ' (ಉಪನ್ಯಾಸಮಾಲೆ ಕಿರು ಪುಸ್ತಕ). ಪ್ರಸ್ತುತ ಕೃತಿಯು ಕನ್ನಡ ಭಾರತದಿಂದ ಆಯ್ಕೆಮಾಡಿಕೊಂಡಿರುವ ಶ್ರೀಕೃಷ್ಣ, ದ್ರೌಪದಿ, ಕೀಚಕನ ಕಥೆ, ಉತ್ತರನ ಕಥೆ, ಉತ್ತರನ ಪೌರುಷ ಮೊದಲಾದ ಪಾತ್ರಗಳ ಹಾಗೂ ಹಾಸ್ಯಕ್ಕೆ ಸಂಬಂಧಿಸಿದ ಆಯ್ದ ಪದ್ಯ ಭಾಗಗಳ ಸಂಗ್ರಹವಾಗಿದೆ. ಇಲ್ಲಿನ ಪದ್ಯಭಾಗಗಳಲ್ಲಿ ಕೃಷ್ಣನ ವ್ಯಕ್ತಿತ್ವ, ದ್ರೌಪದಿಯ ಲಾವಣ್ಯ, ಮಹಾಪತಿವ್ರತೆಯಾಗಿ ಹಾಗೂ ಕೋಪದ ಸಂದರ್ಭದಲ್ಲಿನ ಆಕೆಯ ನುಡಿಗಳು, ಕೃಷ್ಣ ಭಕ್ತಿ ಮೊದಲಾದ ಸಂದರ್ಭದ ಪದ್ಯಗಳಿವೆ. ಕೀಚಕ ವೃತ್ತಾಂತದಲ್ಲಿ ಧರ್ಮರಾಯ, ಭೀಮ, ಕೀಚಕ, ದ್ರೌಪದಿಯರ ಸ್ವಭಾವ ಚಿತ್ರಣವಿದೆ. ಉತ್ತರನ ಪೌರುಷ ಭಾಗದಲ್ಲಿ ವಿರಾಟಪರ್ವದ ಗೋಗ್ರಹಣದ ಸಂದರ್ಭದಲ್ಲಿನ ಉತ್ತರಕುಮಾರನ ಪಾತ್ರ ಚಿತ್ರಣದ ಪದ್ಯಗಳಿವೆ. 'ಹಾಸ್ಯ' ಭಾಗದಲ್ಲಿ ಕುಮಾರವ್ಯಾಸನ ವಿನೋದೋಕ್ತಿಗಳು, ಗೇಲಿ, ಕುಚೋದ್ಯ, ಕಟಕಿ ಮೊದಲಾದವುಗಳು ಕಂಡುಬರುತ್ತವೆ.

ಡಾ.ಕೆ.ವಿ.ಶ್ರೀನಿವಾಸಮೂರ್ತಿ ಅವರ ಕೃತಿ 'ಕುಮಾರವ್ಯಾಸ'. ಪ್ರಸ್ತುತ ಕೃತಿಯಲ್ಲಿ 'ಕರ್ಣಾಟ ಭಾರತ ಕಥಾಮಂಜರಿ' ಕಾವ್ಯದ ಪ್ರಮುಖ ಪ್ರಸಂಗಗಳನ್ನು ಸಂಕ್ಷೇಪಿಸಿ ನೀಡಲಾಗಿದೆ. ಈ ಕಾವ್ಯದ ಓದುಗರಲ್ಲಿ ಮೂಲಕೃತಿಯನ್ನು ಓದುವ ಬಯಕೆಯನ್ನು ಪ್ರಚೋದಿಸುವ ಸಲುವಾಗಿ ಕುಮಾರವ್ಯಾಸನ ಶ್ರೇಷ್ಠ ಪ್ರಸಂಗಗಳನ್ನು ಗಾತ್ರದಲ್ಲಿ ಕುಗ್ಗಿಸಿ ಇಲ್ಲಿ ನೀಡಲಾಗಿದೆ. ಪಾಂಡುವಿನ ಅವಸಾನ, ದ್ರೌಪದೀ ಸ್ವಯಂವರ, ಸುಭದ್ರಾಹರಣ, ವಸ್ತ್ರಾಪಹರಣ ಯತ್ನ, ಇಂದ್ರಕೀಲ ಪ್ರಸಂಗ, ಕೀಚಕ ಪ್ರಸಂಗ, ಉತ್ತರ ಗೋಗ್ರಹಣ, ದ್ರೌಪದಿಯ ದೃಢತೆ, ಶ್ರೀಕೃಷ್ಣನ ರಾಯಭಾರ ಮೊದಲಾದ ಪ್ರಸಂಗಗಳನ್ನು ಸಂಕ್ಷೇಪಿಸಿ ಕೊಡಲಾಗಿದೆ.

ಎಂ.ಎಚ್.ಹರಿದಾಸ ಅವರ ಕೃತಿ 'ಮಹಾಕವಿ ಕುಮಾರವ್ಯಾಸ'. ಪ್ರಸ್ತುತ ಕೃತಿಯು ಕುಮಾರವ್ಯಾಸ ಹಾಗೂ ಆತನ ಕೃತಿಯನ್ನು ಕುರಿತ ವಿಮರ್ಶಾತ್ಮಕ ಬರಹವಾಗಿದೆ. ಇಲ್ಲಿ ಕುಮಾರವ್ಯಾಸನ ಕಾಲ, ಆತನ ಕೃತಿಯ ಮೂಲ ಪ್ರತಿ, ಕಥನ ಕ್ರಮ, ಕಥಾವಸ್ತು, ಆಶಯ, ಕಾವ್ಯ ವಿಮರ್ಶೆ, ಆತನ ಸಮರ ಚಿತ್ರಣ, ದ್ರೌಪದಿ ಸ್ವಯಂವರ, ಕೀಚಕ ಪ್ರಸಂಗ, ಕರ್ಣನ ದುರಂತ ಚಿತ್ರ, ಆತನ ರೂಪಕಗಳು, ಅನುವಾದ ನೈಪುಣ್ಯ ಮೊದಲಾದ ಅಂಶಗಳನ್ನು ವಿಮರ್ಶಾತ್ಮಕ ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಕೃತಿಯ ಕೊನೆಯಲ್ಲಿ ಲೇಖಕರು ನೀಡಿರುವ ಈವರೆಗೆ ಮುದ್ರಿತವಾದ 'ಕುಮಾರವ್ಯಾಸ ಭಾರತ' ಕುರಿತ ಕೃತಿ ಸೂಚಿ ಸಂಶೋಧಕರು ಹಾಗೂ ಅಧ್ಯಾಪಕರಿಗೆ ಬಹು ಉಪಯುಕ್ತವಾದುದಾಗಿದೆ.

ಸೀತಾರಾಮ ಜಾಗೀರ್‌ದಾರ್ ಅವರ ಸಂಶೋಧನಾತ್ಮಕ ಕೃತಿ 'ಸಾಪೇಕ್ಷ' (ಪಂಪನನ್ನು ಕುರಿತ ವಿಮರ್ಶಾತ್ಮಕ ಸಂಪ್ರಬಂಧಗಳು). ಇದು ಪಂಪನ ಬಗ್ಗೆ ಇತ್ತೀಚೆಗೆ ಹೊರಬಂದಿರುವ ಅನೇಕ ಹೊಸ ವಿಚಾರಗಳನ್ನು, ಹೊಸ ಸಂಗತಿಗಳನ್ನು ನಮ್ಮ ಗಮನಕ್ಕೆ ತರುತ್ತದೆ. ಹಿಂದಿನವರು ಪಂಪನ ಕೃತಿಗಳನ್ನು ಸರಿಯಾಗಿ ಓದದೆ ಮಾಡಿದ ಹಲವು ತಪ್ಪುಗಳನ್ನು ಇಲ್ಲಿ ಸರಿಪಡಿಸಲು ಪ್ರಯತ್ನಿಸಿದ್ದು, ಪಂಪನ ನಿಜ ಚಿತ್ರಣ ದೊರಕುತ್ತದೆ. ಆತನ ಕೃತಿಗಳು ಪ್ರಕಟಗೊಂಡ ಕಾಲ, ಜಿನವಲ್ಲಭನ ಶಾಸನದಲ್ಲಿನ 'ಪಂಪಭಾರತ'ದ ಪದ್ಯಗಳು, 'ಆದಿಪುರಾಣ'ದ ಒಂದು ಪದ್ಯ ಮತ್ತು

ಪಂಪನ ಜೀವನ ದೃಷ್ಟಿ, ಪಂಪ-ಅಭಿನವ ಪಂಪದಲ್ಲಿನ ಸಮಸ್ಯೆಗಳು ಹಾಗೂ ವೃಷಭಾದ್ರಿಯ ಶಿಲಾಶಾಸನ ಮೊದಲಾದ ವಿಷಯಗಳ ಮೇಲೆ ಹೊಸ ಬೆಳಕನ್ನು ಚೆಲ್ಲಲಾಗಿದೆ.

ವಿ.ಸೀತಾರಾಮಯ್ಯ ಅವರ ಕೃತಿ 'ಮಹಾಕವಿ ಪಂಪ'. ಈ ಕೃತಿಯು ೧೯೬೭ರಲ್ಲಿ ಪ್ರಕಟವಾದ ಪಂಪನನ್ನು ಕುರಿತ ವಿ.ಸೀ ಅವರ ಇಂಗ್ಲಿಷ್ ಪುಸ್ತಕದ ವಿಸ್ತೃತ ಕನ್ನಡ ಆವೃತ್ತಿಯಾಗಿದೆ. ಕೃತಿಯಲ್ಲಿ ಮೂಲದಲ್ಲಿನ ಹಲವು ಮಾತು ಮತ್ತು ನುಡಿ ಶಬ್ದಗಳನ್ನು, ಪದ್ಯ ಗದ್ಯಗಳನ್ನು ಯಥಾವತ್ತಾಗಿ ಬಳಸಿಕೊಂಡಿದ್ದಾರೆ. ಕೃತಿಯು ಪಂಪ ಹಾಗೂ ಆತನ ಕೃತಿಗಳ ಪರಿಚಯ, ವಿಶ್ಲೇಷಣೆಗಳನ್ನು ಒಳಗೊಂಡಿದೆ. ಆದಿಪುರಾಣ, ಪಂಪಭಾರತ, ಭಾರತದ ಲೋಕಪೂಜ್ಯರು, ಕೃತಿಗಳ ವರ್ಣ-ನೇಯ್ಗೆ, ಕ್ರಿಯಾಕಲ್ಪದ ಕೆಲವು ಅಂಶಗಳು ಹಾಗೂ ಪಂಪನ ಕೃತಿಗಳು ವ್ಯಕ್ತಪಡಿಸುವ ಮೌಲ್ಯಗಳನ್ನು ಕುರಿತು ವಿಶ್ಲೇಷಿಸಿದ್ದಾರೆ.

ವಸಂತ ಕುಮಾರ್ ಹ್ಯಾರಾನೆ ಅವರ ಕೃತಿ 'ಪಂಪ ಒಂದು ಅವಲೋಕನ'. ಈ ಕೃತಿಯು ಪಂಪನ ಕೃತಿಗಳನ್ನು ಕುರಿತ ನಾಲ್ಕು ವಿಮರ್ಶಾ ಲೇಖನಗಳ ಸಂಕಲನವಾಗಿದೆ. ಇಲ್ಲಿ ಸರಸ್ವತಿ, 'ಆದಿಪುರಾಣ'ದಲ್ಲಿನ ಧರ್ಮ-ಕಾವ್ಯಧರ್ಮಗಳ ಸಮನ್ವಯವನ್ನು ಕುರಿತು ಚರ್ಚಿಸಿದ್ದಾರೆ. ಜೊತೆಗೆ 'ವಿಕ್ರಮಾರ್ಜುನ ವಿಜಯ'ದಲ್ಲಿನ ಪ್ರಮುಖರಾದ ಕರ್ಣ ಮತ್ತು ಭೀಷ್ಮರಿಗೆ ಸಂಬಂಧಿಸಿದ 'ಪಿಡಿಯೆಂ ಪುರಿಗಣೆಯಂ' ಹಾಗೂ 'ಜಸಂ ನಿಲ್ವನ್ನೆಗಂ ಕಾದುವೆಂ' ಎಂಬ ವಿಚಾರಗಳ ಲೇಖನಗಳನ್ನು ವಿಶ್ಲೇಷಿಸಿದ್ದಾರೆ.

ಡಾ.ಪಾದೇಕಲ್ಲು ವಿಷ್ಣುಭಟ್ಟರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ ಕೃತಿ 'ಭಾನುಮತಿಯ ನೆತ್ತ' (ಪಂಪಭಾರತದ ಪದ್ಯವೊಂದನ್ನಾಧರಿಸಿದ ಸಂವಾದ ಸಂಚಯ). ಈ ಗ್ರಂಥವು 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿನ ಭಾನುಮತಿಯು ನೆತ್ತವನಾಡಿದ ಪದ್ಯವೊಂದನ್ನು ಆಧರಿಸಿ ವಿದ್ವಾಂಸರು ನಡೆಸಿದ ಚರ್ಚೆಯ ಸಂವಾದ ರೂಪದ ಲೇಖನಗಳ ಸಂಕಲನ. ದಿ॥ ಸೇಡಿಯಾಪು ಕೃಷ್ಣಭಟ್ಟರ 'ಭಾನುಮತಿಯ ನೆತ್ತ' ಎಂಬ ಲೇಖನವೇ ಈ ಸಂಪಾದಿತ ಕೃತಿಗೆ ಮೂಲ ಪ್ರೇರಣೆ. ಭಾನುಮತಿಯೊಡನೆ ನೆತ್ತವನಾಡಿದ ಸಂದರ್ಭದ ಪದ್ಯವನ್ನು ಹಿನ್ನೆಲೆಯಾಗಿಟ್ಟುಕೊಂಡು ಬಂದ ಒಟ್ಟು ೩೯ ಸಂಶೋಧನಾ ಲೇಖನಗಳು ಈ ಕೃತಿಯಲ್ಲಿ ದಾಖಲಾಗಿವೆ. ಈ ಎಲ್ಲಾ ಲೇಖನಗಳ ಮುಖ್ಯ ವಸ್ತುವಿಷಯ ದುರ್ಯೋಧನನ ಪತ್ನಿಯಾದ ಭಾನುಮತಿಯೊಂದಿಗೆ ನೆತ್ತವನ್ನು (ಪಗಡೆ ಆಟವನ್ನು) ಆಡಿದವರು ಯಾರು? ಎಂಬುದು. ಅಲ್ಲದೆ ದುರ್ಯೋಧನನೋ ಅಥವಾ ಕರ್ಣನೋ ಎಂಬ ವಿಚಾರವನ್ನು ಕುರಿತು ತಮ್ಮದೇ ಆದ ದೃಷ್ಟಿಕೋನಗಳಲ್ಲಿ ಚರ್ಚಿಸಿದ್ದಾರೆ.

ಕುವೆಂಪು ಅವರ ವಿಮರ್ಶಾ ಕೃತಿ 'ದ್ರೌಪದಿಯ ಶ್ರೀಮುಡಿ'. ಇದು ಕುವೆಂಪುರವರ ಸಾಹಿತ್ಯ ವಿಮರ್ಶೆಯ ಹಾಗೂ ಕಾವ್ಯ ಮೀಮಾಂಸೆಯ ಲೇಖನಗಳ ಸಂಕಲನವಾಗಿದೆ. 'ದ್ರೌಪದಿಯ ಶ್ರೀಮುಡಿ' ಎಂಬ ಲೇಖನವು ಈ ಸಂಕಲನದ ಮೊದಲ ವಿಮರ್ಶಾ ಲೇಖನವಾಗಿದೆ. ಇದರಲ್ಲಿ

ದ್ರೌಪದಿಯ ಮುಡಿಯನ್ನು ಬಿಚ್ಚಿ ಸಭಾ ಮಧ್ಯದಲ್ಲಿ ಅಪಮಾನಗೊಳಿಸಿದ ಸಂದರ್ಭವನ್ನು ಪಂಪ ಹಾಗೂ ಕುಮಾರವ್ಯಾಸರ ಕೃತಿಗಳ ಹಿನ್ನೆಲೆಯಲ್ಲಿ ತೌಲನಿಕವಾಗಿ ವಿಶ್ಲೇಷಿಸಿದ್ದಾರೆ.

ಪ್ರೊ.ರಾಧಾಕೃಷ್ಣ ಕೆ.ಈ ಅವರ ಸಂಪಾದಕತ್ವದಲ್ಲಿ ಪ್ರಕಟವಾಗಿರುವ ಕೃತಿ 'ಪಂಪಾಧ್ಯಯನ'. ಬಿ.ಎನ್.ಇ.ಎಸ್ ಕಾಲೇಜಿನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಪ್ರಬಂಧಗಳು ಇಲ್ಲಿ ಸಂಕಲಿತವಾಗಿವೆ. ಒಟ್ಟು ಮೂವತ್ತು ಲೇಖನಗಳಿವೆ. ಪಂಪನ ಕೃತಿಗಳಿಗೆ ಸಂಬಂಧಿಸಿದ ಲೇಖನಗಳು ಇವಾಗಿದ್ದು, ಸ್ತ್ರೀಪಾತ್ರಗಳಿಗೆ ಸಂಬಂಧಿಸಿದ ಯಾವುದೇ ಲೇಖನಗಳಿಲ್ಲ.

ಜಿ.ಎಚ್.ನಾಯಕ ಅವರ ವಿಮರ್ಶಾ ಕೃತಿ 'ಮತ್ತೆ ಮತ್ತೆ ಪಂಪ'. ಪ್ರಸ್ತುತ ಕೃತಿಯು ಪಂಪನನ್ನು ಕುರಿತು ಜಿ.ಎಚ್.ನಾಯಕರು ರಚಿಸಿದ 'ಪಂಪನ ಅಭಿವ್ಯಕ್ತಿ', 'ಪಂಪನ ಪದ್ಯವೊಂದರ ಪುನರ್ವಿಮರ್ಶೆ' ಮತ್ತು 'ಪಂಪಭಾರತಂ : ಮತ್ತೆ ಓದಿದಾಗ' ಎಂಬ ಮೂರು ವಿಮರ್ಶಾ ಲೇಖನಗಳ ಸಂಕಲನವಾಗಿದೆ. ಇಲ್ಲಿ ವಿಮರ್ಶಕರು ಬೇರೆ ಬೇರೆ ಕಾಲದಲ್ಲಿ ಬರೆದ 'ಪಂಪಭಾರತ'ವನ್ನು ಕುರಿತ ವಿಚಾರಗಳು ಇದರಲ್ಲಿ ಸಂಕ್ಷಿಪ್ತವಾಗಿ ದಾಖಲಾಗಿವೆ.

ಡಾ.ಪ್ರಭಾವತಿ ಎಸ್.ವಿ ಅವರ ಸಂಶೋಧನಾ ಕೃತಿ 'ದ್ರೌಪದಿ – ಒಂದು ಅಧ್ಯಯನ'. ಪ್ರಸ್ತುತ ಕೃತಿಯಲ್ಲಿ ಮಹಾಭಾರತದ ಕಥೆಯಲ್ಲಿ ಸಂಶೋಧಕರನ್ನು ಕಾಡಿದ ಕೇಂದ್ರ ಪಾತ್ರವಾದ 'ದ್ರೌಪದಿ' ಪಾತ್ರವನ್ನು ವಸ್ತುವಾಗಿಟ್ಟುಕೊಂಡು ಇಡೀ ಸಾಹಿತ್ಯ ಚರಿತ್ರೆಯಲ್ಲಿ ಅವಳನ್ನು ಹೇಗೆ ಚಿತ್ರಿಸಲಾಗಿದೆ ಎಂಬುದರ ಚಿತ್ರಣವನ್ನು ನೀಡಿದ್ದಾರೆ. ಇದಕ್ಕಾಗಿ 'ವ್ಯಾಸ ಭಾರತ', ಸಂಸ್ಕೃತ ಕಾವ್ಯ ನಾಟಕಗಳು (ಭಾರವಿಯ 'ಕಿರಾತಾರ್ಜುನೀಯ', ಭಟ್ಟನಾರಾಯಣನ 'ವೇಣಿಸಂಹಾರ', ಭಾಸನ ನಾಟಕಗಳು), ಪಂಪನ 'ವಿಕ್ರಮಾರ್ಜುನ ವಿಜಯ', ರನ್ನನ 'ಸಾಹಸಭೀಮ ವಿಜಯ', ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ' ಹಾಗೂ 'ಜೈನ ಭಾರತಗಳು' ಮೊದಲಾದವುಗಳನ್ನು ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ. ಇದಕ್ಕೆ ಕಾರಣ ಇವೆಲ್ಲ ಅಂಶಗಳು ಅಧಿಕೃತವಾಗಿ ದಾಖಲಾಗಬೇಕೆಂಬ ಉದ್ದೇಶವಾಗಿದೆ. ಈ ಕೃತಿಗಳಲ್ಲಿ ದ್ರೌಪದಿಯನ್ನು ಚಿತ್ರಿಸಿರುವ ರೀತಿ, ಅವಳನ್ನು ನಡೆಸಿಕೊಂಡಿರುವ ಕ್ರಮಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇಲ್ಲಿ ದ್ರೌಪದಿಯ ವ್ಯಕ್ತಿತ್ವದ ಅವಲೋಕನಕ್ಕೆ ಸಂಬಂಧಿಸಿದಂತೆ ಬರುವ ಎಲ್ಲ ಪ್ರಸಂಗಗಳನ್ನು ಅಧ್ಯಯನಕ್ಕೆ ಒಳಗು ಮಾಡಿ ವಿಶ್ಲೇಷಿಸಿ ಅಪಾರ ಮಾಹಿತಿಯನ್ನು ಕಲೆ ಹಾಕಿದ್ದಾರೆ.

ಡಾ.ವಸಂತಕುಮಾರ್ ಬಿ.ವಿ ಅವರು ಸಂಪಾದಿಸಿರುವ ಕೃತಿ 'ಪಂಪ ಪದ ಪ್ರಪಂಚ ಭಾಗ–೧'. ಈ ಕೃತಿಯಲ್ಲಿ ಪಂಪನ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿನ ಅನೇಕ ಕ್ಲಿಷ್ಟ ಪದಗಳಿಗೆ ಅರ್ಥವನ್ನು ನೀಡಲಾಗಿದೆ. ಪದ್ಯಗಳಿಗೆ ವಿನೂತನವಾದ ವ್ಯಾಖ್ಯಾನ ಮಾಡುವ ಪ್ರಯತ್ನ ಇಲ್ಲಿದ್ದು, ಒಟ್ಟು ೩೦ ಲೇಖನಗಳಿವೆ. ಡಿ.ಎಲ್.ಎನ್ ಅವರಾದಿಯಾಗಿ ಅನೇಕರು ಚರ್ಚಿಸಿರುವ ಶಬ್ದಗಳ ಅರ್ಥಕ್ಕೆ ಭಿನ್ನವಾದಂತಹ ಅರ್ಥವನ್ನು ನೀಡಲಾಗಿದೆ. ಇಲ್ಲಿನ ಸಂಶೋಧನಾ ಲೇಖನಗಳು

೧೯೮೭ರಿಂದ ೧೯೯೨ರ ಅವಧಿಯಲ್ಲಿ ರಚಿತವಾದವುಗಳಾಗಿವೆ. ಇಲ್ಲಿ 'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ಬರುವ ಪದ ಬಳಕೆಗಳನ್ನು ಮಾತ್ರ ಚರ್ಚಿಸಲಾಗಿದೆ.

ಡಾ.ಶ್ರೀನಿವಾಸ ಹಾವನೂರ ಅವರು ಸಂಪಾದಿಸಿರುವ ಕೃತಿ 'ಡಾ.ರಂ.ಶ್ರೀ.ಮುಗಳಿ ಚಿತ್ರಿಸಿದ ಪಂಪ ರನ್ನರು'. ಈ ಕೃತಿಯು ಪಂಪ ಹಾಗೂ ರನ್ನರ ಕಾವ್ಯಗಳನ್ನು ಅಭ್ಯಾಸ ಮಾಡಿ, ಆ ಕಾವ್ಯಗಳಲ್ಲಿನ ರಸ ಸನ್ನಿವೇಶಗಳು, ಕೃತಿಗಳ ಶೈಲಿ, ಭಾಷೆಯ ವೈಶಿಷ್ಟ್ಯ, ಕ್ಲಿಷ್ಟ ಹಾಗೂ ರಸಪೂರ್ಣ ಪದ್ಯಭಾಗಗಳ ಅರ್ಥೈಸುವಿಕೆಯ ಬಗೆಗೆ ಮತ್ತು ಹಲವು ವಿದ್ವಾಂಸರು ವ್ಯಕ್ತಪಡಿಸಿರುವ ಅಭಿಪ್ರಾಯಗಳ ಸಮೀಕ್ಷೆಯನ್ನೊಳಗೊಂಡಿದೆ. ಇದರಲ್ಲಿ 'ಪಂಪ-ಒಂದು ಸಮಗ್ರ ಚಿಂತನೆ', 'ಪಂಪನ ದೇಸಿ', 'ಪಂಪನ ದೃಷ್ಟಿಯಲ್ಲಿ ಭರತ-ಬಾಹುಬಲಿ', 'ರನ್ನ ಹಾಗೂ ಅವನ ಕೃತಿ ರತ್ನ-ಗದಾಯುದ್ಧ' ಮತ್ತು 'ಡಿ.ಎಲ್.ನರಸಿಂಹಾಚಾರ್ಯರ 'ಪಂಪಭಾರತ ದೀಪಿಕೆ'ಯ ಮುಂದುವರಿಕೆ' ಎಂಬ ಐದು ಲೇಖನಗಳಿವೆ.

'ಮಹಾಕವಿ ಪಂಪ ಹಾಗೂ ಅವನ ಕೃತಿಗಳು' ಕೃತಿಯು ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಸಂಗ ವಿಸ್ತರಣ ಮತ್ತು ಪ್ರಕಟಣಾ ಶಾಖೆಯಿಂದ ಪ್ರಕಟವಾಗಿದೆ. ಇದರಲ್ಲಿ ವಿವಿಧ ವಿದ್ವಾಂಸರು ನೀಡಿದ ಉಪನ್ಯಾಸಗಳ ಆರು ಲೇಖನಗಳಿವೆ. ಇವುಗಳಲ್ಲಿ ಪಂಪನು ಜೀವಿಸಿದ್ದ ಕಾಲ, ಆತನ ದೇಶ ಹಾಗೂ ವ್ಯಕ್ತಿತ್ವವನ್ನು ಚರ್ಚಿಸಲಾಗಿದೆ. 'ಆದಿಪುರಾಣ' ಕಾವ್ಯದಲ್ಲಿ ವ್ಯಕ್ತವಾಗುವ ದಯೆ, ದಮ, ದಾನ, ತತ್ವ, ಶೀಲ ಗುಣಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. 'ಆದಿಪುರಾಣ'ಕ್ಕಿಂತಲೂ ಹೆಚ್ಚು ವಾಚಕ ವರ್ಗವನ್ನು ಒದಗಿಸಿಕೊಟ್ಟ 'ವಿಕ್ರಮಾರ್ಜುನ ವಿಜಯ'ವನ್ನು, ಪಂಪನ ಪ್ರಕೃತಿ ವರ್ಣನೆಗಳನ್ನು ಕುರಿತು ಪರಾಮರ್ಶಿಸಿದ್ದಾರೆ. ಆತನು ಬಳಸಿರುವ ಶೈಲಿಯನ್ನು ಕುರಿತು ಹಾಗೂ ಕನ್ನಡ ಸಾಹಿತ್ಯದ ಮೇಲೆ ಪಂಪನು ಬೀರಿರುವ ಪ್ರಭಾವವನ್ನು ಕುರಿತು ಪ್ರಸ್ತುತ ಕೃತಿಯಲ್ಲಿ ಚರ್ಚಿಸಲಾಗಿದೆ.

ವಿ.ಸೀತಾರಾಮಯ್ಯ ಅವರು ಸಂಪಾದಿಸಿರುವ ಕೃತಿ 'ಪಂಪ'. ಇದರಲ್ಲಿ ಡಾ॥ ಜಿ.ಎಸ್.ಗಾಯಿ, ಜಿ.ಪಿ.ರಾಜರತ್ನಂ ಹಾಗೂ ವಿ.ಸೀತಾರಾಮಯ್ಯನವರ ನಾಲ್ಕು ಲೇಖನಗಳಿವೆ. ಕೊನೆಯಲ್ಲಿ ಕವಿವಾಣಿ ಎಂಬ ಐದನೆಯ ಅಧ್ಯಾಯದಲ್ಲಿ 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ'ದ ಆಯ್ದ ಪದ್ಯಗಳ ಕವಿವಾಣಿ ಇದೆ. ಡಾ.ಜಿ.ಎಸ್.ಗಾಯಿಯವರು ತಮ್ಮ ಲೇಖನದಲ್ಲಿ ಪಂಪನ ಕಾಲ, ಆತನ ಮನೆತನ, ಸುತ್ತಮುತ್ತಲಿನ ಸನ್ನಿವೇಶ, ರಾಷ್ಟ್ರಕೂಟರ ಆಳ್ವಿಕೆ ಮೊದಲಾದ ಅಂಶಗಳನ್ನು ಚರ್ಚಿಸಿದ್ದಾರೆ. ಪಂಪನ ಸಹೋದರ ಜಿನವಲ್ಲಭನ ಶಿಲಾಶಾಸನವನ್ನು ಪರಾಮರ್ಶಿಸಿದ್ದಾರೆ. ಸಾಹಿತ್ಯಿಕ ಸಂಗತಿಗಳಿಗಿಂತ ಚಾರಿತ್ರಿಕ ಸಂಗತಿಗಳನ್ನು ತಮ್ಮ ಲೇಖನದಲ್ಲಿ ಹೆಚ್ಚು ಉಲ್ಲೇಖಿಸಿದ್ದಾರೆ. 'ಆದಿಪುರಾಣ'ವನ್ನು ಕುರಿತ ಜಿ.ಪಿ.ರಾಜರತ್ನಂ ಅವರ ಲೇಖನ ಪ್ರಮುಖವಾಗಿದೆ. ಅವರು ನೀಡಿರುವ ಆದಿಪುರುಷರ ಭವಾವಳಿಯ ಪಟ್ಟಿ ಹಾಗೂ ಅದರ ವಿವರಣೆ ತುಂಬಾ ಉಪಯುಕ್ತವಾದುದಾಗಿದೆ. ಮೂರು ಮತ್ತು ನಾಲ್ಕನೆಯ ಭಾಗದಲ್ಲಿ ವಿ.ಸೀತಾರಾಮಯ್ಯ ಅವರ 'ವಿಕ್ರಮಾರ್ಜುನ ವಿಜಯ'ವನ್ನು ಕುರಿತ ವಿಮರ್ಶಾತ್ಮಕ ಲೇಖನ ಹಾಗೂ ಪಂಪನ ಎರಡೂ ಕೃತಿಗಳನ್ನು ಕುರಿತ ಸಮೀಕ್ಷೆಯ ವಿವರಗಳಿವೆ.

ತೀ.ನಂ.ಶ್ರೀಕಂಠಯ್ಯ ಅವರ ಪ್ರಮುಖ ಕೃತಿ 'ಪಂಪ'. ಇದು ಮೈಸೂರು ವಿಶ್ವವಿದ್ಯಾನಿಲಯದ ಪ್ರಚಾರ ಪುಸ್ತಕ ಮಾಲೆಯಲ್ಲಿ ಪ್ರಕಟವಾಗಿರುವ ಚಿಕ್ಕ ಕೃತಿ. ಇದರಲ್ಲಿ ಪಂಪನ 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಕೃತಿಗಳನ್ನು ಕುರಿತು ವಿಶ್ಲೇಷಿಸಲಾಗಿದೆ. ಅಲ್ಲದೆ ಪಂಪನ ಕವಿತೆಯ ರೀತಿಯನ್ನು ಸಹ ಚರ್ಚಿಸಿದ್ದಾರೆ.

ಡಾ.ಗುರುಲಿಂಗ ಕಾಪಸೆ ಅವರು ಸಂಪಾದಿಸಿರುವ ಕೃತಿ 'ಪಂಪ ೧೧೦೦'. ಪ್ರಸ್ತುತ ಕೃತಿಯು ಪಂಪನನ್ನು ಕುರಿತು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪೀಠದ ಸಹಯೋಗದೊಂದಿಗೆ ಆಯೋಜಿಸಿದ್ದ ಒಂದು ದಿನದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಐದು ಪ್ರಬಂಧಗಳನ್ನು ಒಳಗೊಂಡಿದೆ. ಸೀತಾರಾಮ್ ಜಾಗೀರ್‌ದಾರ್ ಅವರ 'ಪಂಪನ ಇತಿವೃತ್ತ-ಈವರೆಗಿನ ಸಂಶೋಧನೆಗಳು' ಎಂಬ ಲೇಖನದಲ್ಲಿ ಪಂಪನ ಇತಿವೃತ್ತವನ್ನು ಕುರಿತ ಸಂಶೋಧನೆಯಲ್ಲಿ ಹೊಸತನವಿದೆ. ಡಾ.ಹಂಪ ನಾಗರಾಜಯ್ಯ ಅವರು ತಮ್ಮ ಲೇಖನದಲ್ಲಿ 'ಆದಿಪುರಾಣ'ದ ಅನನ್ಯತೆಯ ವಿನ್ಯಾಸವನ್ನು ಕುರಿತು ಚರ್ಚಿಸಿದ್ದಾರೆ. ಡಾ.ಬಿ.ವ್ಹಿ.ಶಿರೂರ ಅವರ ಲೇಖನದಲ್ಲಿ 'ಆದಿಪುರಾಣ' ಕಾವ್ಯದಲ್ಲಿನ ಧರ್ಮ ಮತ್ತು ಕಾವ್ಯ ಧರ್ಮಗಳನ್ನು ಕುರಿತು ಚರ್ಚಿಸಿದ್ದಾರೆ. ಸಮಸ್ತ ಭಾರತವಾದ 'ಪಂಪಭಾರತ'ವನ್ನು ಕುರಿತ ಚರ್ಚೆ ಶಾಂತಿನಾಥ ದಿಬ್ಬದ ಅವರ ಲೇಖನದಲ್ಲಿದೆ. ಡಾ.ಟಿ.ವಿ. ವೆಂಕಟಾಚಲಶಾಸ್ತ್ರೀ ಅವರ ಕೊನೆಯ ಲೇಖನದಲ್ಲಿ ಪಂಪನ ಕೃತಿಗಳಲ್ಲಿನ ದೇಸಿ ಮಾರ್ಗ ಹಾಗೂ ಸಮನ್ವಯ ದೃಷ್ಟಿಗಳನ್ನು ಕುರಿತು ವಿಶ್ಲೇಷಿಸಿದ್ದಾರೆ.

ಟಿ.ವಿ.ವೆಂಕಟಾಚಲಶಾಸ್ತ್ರೀ ಅವರ ಕೃತಿ 'ಪಂಪ'. ಪಂಪ ಕವಿಯ ಚರಿತ್ರೆ ಹಾಗೂ ಶ್ರೇಷ್ಠ ಕಾವ್ಯಗಳ ವಸ್ತುವನ್ನು ಪರಿಚಯಿಸುವುದು ಈ ಚಿಕ್ಕ ಕೃತಿಯ ಉದ್ದೇಶವಾಗಿದೆ. ಇದರಲ್ಲಿ ೧೦ನೇ ಶತಮಾನದ ದಕ್ಷಿಣ ಭಾರತದ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಸ್ಥಿತಿಗತಿಗಳನ್ನು ಕುರಿತು ಚರ್ಚಿಸಿದ್ದಾರೆ. 'ಆದಿಪುರಾಣ' ಕೃತಿಯ ಕಥಾಸಾರವನ್ನು ನೀಡಿದ್ದು, ಆ ಕೃತಿಯನ್ನು ಸಮೀಕ್ಷಿಸಿದ್ದಾರೆ. ಅಲ್ಲದೆ 'ವಿಕ್ರಮಾರ್ಜುನ ವಿಜಯ' ಕೃತಿಯ ಕಥಾಸಾರವನ್ನು ಕೊಟ್ಟಿದ್ದು, ಪಂಪ 'ವ್ಯಾಸಭಾರತ'ದಿಂದ ಮಾಡಿಕೊಂಡಿರುವ ಮಾರ್ಪಾಡುಗಳನ್ನು ಕುರಿತು ಚರ್ಚಿಸಲಾಗಿದೆ. ಅಲ್ಲಲ್ಲಿ ಮಹಿಳೆಯರನ್ನು ಕುರಿತ ವಿವರಗಳಿದ್ದರೂ ಅಲ್ಪ ಪ್ರಮಾಣದಲ್ಲಿವೆ. ಕಥಾಸಾರದ ವಿಶ್ಲೇಷಣೆಯ ಕಡೆಗೆ ಹೆಚ್ಚಿನ ಗಮನವನ್ನು ನೀಡಿರುವ ಕಾರಣವಾಗಿ ಮಹಿಳಾ ಸಂಘರ್ಷಗಳಿಗೆ ಸಂಬಂಧಿಸಿದ ಸಂಗತಿಗಳು ವಿರಳವಾಗಿವೆ.

ಬಿ.ಎಸ್.ಸಣ್ಣಯ್ಯ ಅವರ ಕೃತಿ 'ಪಂಪ ಮಹಾಕವಿ'. ಪ್ರಸ್ತುತ ಕೃತಿಯು ಪಂಪನ 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ' ಕೃತಿಗಳಲ್ಲಿ ಬರುವ ವಸ್ತು ವೈವಿಧ್ಯತೆಯನ್ನು ಮತ್ತು ಪಾತ್ರ ಚಿತ್ರಣವನ್ನು ಕುರಿತು ರಚಿಸಿದ ವಿಮರ್ಶಾ ಲೇಖನದ ಕಿರು ಹೊತ್ತಿಗೆಯಾಗಿದೆ. 'ವಿಕ್ರಮಾರ್ಜುನ ವಿಜಯ'ದ ವಸ್ತು ವೈವಿಧ್ಯತೆಯ ಸಂದರ್ಭದಲ್ಲಿ ಮತ್ಸರದ ಗರ್ಭವತಿಯಾಗುವ ಗಾಂಧಾರಿ, ತನಗಿತ್ತ ಮಂತ್ರಾಕ್ಷರಗಳನ್ನು ಮಾದ್ರಿಗೂ ಉಪದೇಶಮಾಡಿ ಅವಳಲ್ಲಿಯು ತಾಯ್ತನದ ಕುಡಿಯೊಡಮೂಡುವಂತೆ

ಮಾಡುವ ಕುಂತಿಯ ವಿವರಗಳನ್ನು ಚರ್ಚಿಸಿದ್ದಾರೆ. ಅಪಮಾನಕ್ಕೊಳಗಾದ ದ್ರೌಪದಿಯ ಪ್ರತಿಜ್ಞಾ ರೂಪದ ಸಂಘರ್ಷಗಳನ್ನು ವಿಶ್ಲೇಷಿಸಿದ್ದಾರೆ.

ಡಾ.ಎನ್.ಎಸ್.ತಾರಾನಾಥ ಅವರು ಸಂಪಾದಿಸಿರುವ ಕೃತಿ 'ಪಂಪನ ಅಧ್ಯಯನಗಳು'. ಇದು ಪಂಪನನ್ನು ಕುರಿತು ಡಾ.ಎಂ.ಎಂ.ಕಲ್ಬುರ್ಗಿ ಅವರು ರಚಿಸಿದ ಪ್ರಬಂಧಗಳ ಸಂಕಲನವಾಗಿದೆ. ಒಟ್ಟು ೨೩ ಲೇಖನಗಳಿದ್ದು, ಇತಿವೃತ್ತ ಹಾಗೂ ಸಾಹಿತ್ಯ ಎಂಬ ಎರಡು ವಿಭಾಗಗಳಲ್ಲಿ ಇವುಗಳನ್ನು ದಾಖಲಿಸಿದ್ದಾರೆ. 'ಇತಿವೃತ್ತ'ದಲ್ಲಿನ ೧೧ ಲೇಖನಗಳಲ್ಲಿ ಪಂಪನ ಹಿನ್ನೆಲೆ, ಐತಿಹಾಸಿಕ ಹಾಗೂ ಧಾರ್ಮಿಕ ಹಿನ್ನೆಲೆ, ಭೌಗೋಳಿಕ ಪರಿಸರಗಳನ್ನು, ಪಂಪನ ಧರ್ಮಪುರವನ್ನು ಕುರಿತ ಕ್ಷೇತ್ರಕಾರ್ಯದ ವಿವರಗಳನ್ನು ಚರ್ಚಿಸಲಾಗಿದೆ. ಜೊತೆಗೆ ಸಾಹಿತ್ಯ, ಕುರ್ಕ್ಯಾಲ ಶಾಸನದ ಆಧಾರ ಹಾಗೂ ಲಿಪಿ ಬಲದ ಹಿನ್ನೆಲೆಯಲ್ಲಿ ಅಬ್ಬಣಬ್ಬೆ ಜೋಯಿಸಸಿಂಘನ ಮಗಳಲ್ಲ ಮೊಮ್ಮಗಳು ಎಂಬುದನ್ನು ಮೊದಲ ಬಾರಿಗೆ ಸರಿಪಡಿಸಿಕೊಟ್ಟ ಕಲ್ಬುರ್ಗಿಯವರ ಸಂಶೋಧನೆಯನ್ನು ಸ್ಮರಿಸಿದ್ದಾರೆ. ಅಲ್ಲದೆ ಗಂಗಾಧರಂ ಶಾಸನದಲ್ಲಿನ ಹೊಸ ವಿಚಾರಗಳು, ಪಂಪನ ತಮ್ಮ ಜಿನವಲ್ಲಭ, ಪಂಪನ ವಂಶಜರು, ಆತನ ಅಗ್ರಹಾರ, ಅರಿಕೇಸರಿ ಹೆಸರಿನ ನಿಜರೂಪ ಕುರಿತಾದ ಲೇಖನಗಳಿವೆ. 'ಸಾಹಿತ್ಯ' ಭಾಗದಲ್ಲಿ ೧೨ ಲೇಖನಗಳಿವೆ. ಇವುಗಳಲ್ಲಿ ಪಂಪಯುಗದ ವ್ಯಾಪ್ತಿ, 'ಪಂಪಭಾರತ'ದಲ್ಲಿನ ವೀರಸಿದ್ಧಾಂತ, ವೀರರ ಮರಣದ ಚಿತ್ರ, ಮಂಗಲ ಪದ್ಯ ಮೊದಲಾದವುಗಳನ್ನು ವಿವೇಚಿಸಲಾಗಿದೆ. ಕರೀಂ ನಗರ ಶಾಸನದಲ್ಲಿನ 'ಪಂಪಭಾರತ'ದ ಪದ್ಯಗಳನ್ನು ಚರ್ಚಿಸಿದ್ದಾರೆ. ದಾನಗುಣ ಹಾಗೂ ಸ್ವಾಮಿನಿಷ್ಠೆಗಳಿದ್ದ ಕರ್ಣನ ದುರಂತವನ್ನು ವಿಮರ್ಶಾತ್ಮಕವಾಗಿ ವಿವೇಚಿಸಿದ್ದಾರೆ. ಈ ಕೃತಿಯಲ್ಲಿ ಸಂಪಾದಿತವಾಗಿರುವ ಕಲ್ಬುರ್ಗಿಯವರ ಲೇಖನಗಳು ಅವರ ಪ್ರತಿಭೆ, ಪಾಂಡಿತ್ಯ, ಸಂಶೋಧನೆ ಹಾಗೂ ಅವರ ಪರಿಶ್ರಮಗಳಿಗೆ ಹಿಡಿದ ಕನ್ನಡಿಯಾಗಿವೆ.

ಡಾ.ಜಿ.ಎಸ್.ಶಿವರುದ್ರಪ್ಪ ಅವರ ಸಂಪಾದಕತ್ವದಲ್ಲಿ ಹೊರಬಂದಿರುವ ಕೃತಿ 'ಪಂಪ : ಒಂದು ಅಧ್ಯಯನ'. ಪ್ರಸ್ತುತ ಕೃತಿಯು ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರವು ೧೯೭೩ ರ ಮಾರ್ಚ್ ತಿಂಗಳಲ್ಲಿ ಪಂಪನನ್ನು ಕುರಿತು ಏರ್ಪಡಿಸಿದ್ದ ವಿಚಾರ ಸಂಕಿರಣದಲ್ಲಿ ಮಂಡಿತವಾದ ೧೫ ಲೇಖನಗಳ ಸಂಗ್ರಹ ಇದು. ಇವು ಪಂಪನನ್ನು ಕುರಿತ ವ್ಯಾಪಕವಾದ ಹಾಗೂ ಹೊಸದೃಷ್ಟಿಯ ವಿಮರ್ಶಾತ್ಮಕ ಲೇಖನಗಳಾಗಿದ್ದು, ಪಂಪನನ್ನು ಪುನರ್ ಮೌಲ್ಯಮಾಪನದ ಅಧ್ಯಯನಕ್ಕೆ ಒಳಪಡಿಸಿವೆ. ಇಲ್ಲಿನ ಲೇಖನಗಳು ಪಂಪನ ಸಂಸ್ಕೃತದ ಹಿನ್ನೆಲೆ, ಆತನ ಧಾರ್ಮಿಕ-ಐತಿಹಾಸಿಕ ಹಿನ್ನೆಲೆ, ಆತನ ಜೀವನ ಚಿತ್ರ, ನನ್ನಯ ಕವಿಯ ಮೇಲಿನ ಪಂಪನ ಪ್ರಭಾವ, ಧಾರ್ಮಿಕ ಕವಿಯಾಗಿ ಪಂಪ, 'ಪಂಪಭಾರತ' ಹಾಗೂ 'ಆದಿಪುರಾಣ'ದ ವಸ್ತುವಿನ್ಯಾಸ, ಆತನ ದೇಸಿ, ಅಭಿವ್ಯಕ್ತಿ, ಸಾಮಾಜಿಕ ಅರಿವು, ಜೀವನ ದೃಷ್ಟಿ, ಯುಗಧರ್ಮ ಹಾಗೂ ಪರಂಪರೆಯ ನಿರ್ಮಾಪಕ, ಆತನ ಕವಿತೆಯ ಅನುಸಂಧಾನಗಳು ಮೊದಲಾದ ವಿಷಯಗಳನ್ನು ಕುರಿತು ವಿವಿಧ ಲೇಖಕರು ತಮ್ಮ ಲೇಖನಗಳಲ್ಲಿ ವಿಮರ್ಶೆಗೊಳಪಡಿಸಿದ್ದಾರೆ. ಈ ಸಂಗ್ರಹ ವಿಮರ್ಶೆಯ ಕ್ಷೇತ್ರಕ್ಕೆ ಅಮೂಲ್ಯವಾದ ಕೊಡುಗೆಯಾಗಿದೆ.

ಡಾ.ಶಶಿಕಲಾ.ಎಸ್.ಡಿ, ಡಾ.ರತ್ನಮ್ಮ.ಕೆ.ಎಸ್ ಹಾಗೂ ಡಾ.ಮಂಜುಳ ಹುಲ್ಲಹಳ್ಳಿ ಇವರ ಸಂಪಾದಕತ್ವದಲ್ಲಿ ಹೊರಬಂದಿರುವ ಕೃತಿ 'ವಿಜಯಾನ್ವೇಷಣೆ'. ಡಾ.ವಿಜಯಾದಬ್ಬೆಯವರ ಅಭಿನಂದನ ಗ್ರಂಥವಾದ ಇದರಲ್ಲಿ ಪಂಪ ಹಾಗೂ ಕುಮಾರವ್ಯಾಸರ ಸ್ತ್ರೀ ಪಾತ್ರಗಳಿಗೆ ಸಂಬಂಧಿಸಿದ ಮೂರು ಲೇಖನಗಳಿವೆ. ಅವುಗಳೆಂದರೆ,

೧. ಪ್ರೊ.ಎಸ್.ಶಿವಾಜಿ ಜೋಯಿಸ್ ಅವರ ಲೇಖನ 'ಪಂಪನ ಕಾವ್ಯಗಳಲ್ಲಿ ಮಹಿಳಾ ಮನೋಭೂಮಿಕೆ'. ಈ ಲೇಖನದಲ್ಲಿ 'ವಿಕ್ರಮಾರ್ಜುನ ವಿಜಯ' ಹಾಗೂ 'ಆದಿಪುರಾಣ'ದಲ್ಲಿನ ಸ್ತ್ರೀಯರ ಮನಸ್ಥಿತಿಯನ್ನು ಕುರಿತು ಚರ್ಚಿಸಿದ್ದಾರೆ. ಯುದ್ಧ ಶಿಬಿರದಲ್ಲಿನ ಸೈನಿಕನ ಹೆಂಡತಿ, ಮಾದ್ರಿ, ಸತ್ಯವತಿ, ಕುಂತಿ, ಗಾಂಧಾರಿ, ದ್ರೌಪದಿ, ಭಾನುಮತಿ, ಶ್ರೀಮತಿ, ಅಂಬೆ ಮೊದಲಾದ ಹೆಣ್ಣುಗಳ ಮನಸ್ಸಿನ ತೊಳಲಾಟ, ಪರಿಸ್ಥಿತಿಯ ಹಿಡಿತಕ್ಕೆ ಸಿಕ್ಕಿದ ಅವರು ಅನುಭವಿಸುವ ನೋವು, ಸಂಕಟ, ಅಪಮಾನಗಳು, ಅವರಿಂದ ವ್ಯಕ್ತವಾಗುವ ಕೋಪ, ರೋಷ, ಪ್ರತಿಭಟನೆ, ಪ್ರತಿಜ್ಞೆಯ ನುಡಿಗಳು, ಅವರಲ್ಲಿನ ಅಸೂಯೆ ಈ ಮೊದಲಾದ ಮನೋಭಾವಗಳನ್ನು ವಿಶ್ಲೇಷಿಸಿದ್ದಾರೆ. ಪಂಪನಂತಹ ಕವಿ ಕೂಡ ಸ್ತ್ರೀಯನ್ನು ರಸಿಕ ಪ್ರಜ್ಞೆಯಿಂದ ವರ್ಣಿಸಿರುವ ಕ್ರಮವನ್ನು ಹಾಗೂ ಯುಗಧರ್ಮದ ಬೆಳಕಿನಲ್ಲಿ ಈತನ ಕೃತಿಗಳಲ್ಲಿನ ಹೆಣ್ಣುಗಳ ಪಾತ್ರ ಹಾಗೂ ಸ್ಥಾನಗಳೇನು ಎಂಬಂತಹ ಪ್ರಶ್ನೆಗಳನ್ನು ಚರ್ಚೆಗೆ ಎತ್ತಿಕೊಂಡಿದ್ದಾರೆ.

೨. ಡಾ.ಎಚ್.ಎಸ್.ಶ್ರೀಮತಿ ಅವರ ಲೇಖನ 'ಕುಮಾರವ್ಯಾಸನಲ್ಲಿ ಹೆಣ್ಣು–ಗಂಡು'. ಪ್ರಸ್ತುತ ಲೇಖನದಲ್ಲಿ ಕುಮಾರವ್ಯಾಸನು ತನ್ನ ಕೃತಿಯುದ್ದಕ್ಕೂ ಹೆಣ್ಣು ಹಾಗೂ ಗಂಡುಗಳನ್ನು ಪರಿಭಾವಿಸಿರುವ ಕ್ರಮಗಳನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಕುಮಾರವ್ಯಾಸನಲ್ಲಿ ಹೆಣ್ಣು ಮತ್ತು ಗಂಡುಗಳಿಗೆ ನಿಗದಿತವಾದವು ಎಂಬ ಗುಣ ಸ್ವಭಾವಗಳಿಲ್ಲ ಎಂಬುದನ್ನು ಗುರ್ತಿಸುವ ಪ್ರಯತ್ನ ಮಾಡಿದ್ದಾರೆ. ಅಲ್ಲದೆ ಹೆಣ್ಣು ಗುಣ – ಗಂಡು ಗುಣ ಎಂಬವು ಹೆಣ್ಣು ಮತ್ತು ಗಂಡುಗಳ ಜೈವಿಕ ಗುಣಕ್ಕೆ ಸೀಮಿತವಾಗುವುದಿಲ್ಲ ಎಂಬುದನ್ನು ತಿಳಿಸಿದ್ದಾರೆ. ಜೊತೆಗೆ ಗಂಡು ಮತ್ತು ಹೆಣ್ಣುಗಳಿಗೆ ಹುಟ್ಟು ಗುಣಗಳು ಕುಮಾರವ್ಯಾಸನ ಕಾವ್ಯದಲ್ಲಿ ಕಾಣಬರುವುದಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಕುಮಾರವ್ಯಾಸನಲ್ಲಿ ಜೀವ ಸಹಜ ಹಾಗೂ ಪ್ರಾಕೃತಿಕ ಮೂಲದ ಹಿನ್ನೆಲೆಯಲ್ಲಿ ಹೆಣ್ಣು ಮತ್ತು ಗಂಡುಗಳನ್ನು ಲೇಖಕರು ಇಲ್ಲಿ ಚರ್ಚೆಗೊಳಪಡಿಸಿರುವುದು ತಿಳಿಯುತ್ತದೆ. ಮತ್ತು ಇಲ್ಲಿನ ಸ್ತ್ರೀ ಪುರುಷರೆಲ್ಲರು ನಿಗದಿತ ರೂಪುರೇಷೆಗಳಲ್ಲಿ ವರ್ತಿಸದೆ ಪ್ರಾಕೃತಿಕ ಭಾವಗಳಲ್ಲಿ ಚಲಿಸುವವರೆಂಬುದನ್ನು ತಿಳಿಯಪಡಿಸಿದ್ದಾರೆ.

೩. ಎಸ್.ಆರ್.ವಿಜಯ ಶಂಕರ ಅವರ ಲೇಖನ 'ಅಕ್ಷಯ ವ್ಯಾಖ್ಯಾನಗಳ ದ್ರೌಪದಿ ವಸ್ತ್ರಾಪಹರಣ'. ರಾಜಮನೆತನದ ಸೊಸೆಯಾದ ದ್ರೌಪದಿಯ ಮೇಲಿನ ವಸ್ತ್ರಾಪಹರಣದ ಸಂದರ್ಭವನ್ನು ಕುರಿತು ಪ್ರಸ್ತುತ ಲೇಖನದಲ್ಲಿ ಚರ್ಚಿಸಲಾಗಿದೆ. ಈ ಸನ್ನಿವೇಶದಲ್ಲಿ ನೈತಿಕತೆಯನ್ನು, ನ್ಯಾಯ–ಅನ್ಯಾಯಗಳನ್ನು, ಅಧಿಕಾರದ ದುರುಪಯೋಗ ಮೊದಲಾದವುಗಳಿಗೆ ಉತ್ತರ ಕಂಡುಕೊಳ್ಳಲು

ನಿರಂತರವಾಗಿ ಪ್ರಯತ್ನಿಸಲಾಗಿದೆ. ಇದರ ಜೊತೆಗೆ ದ್ರೌಪದಿಯನ್ನು ಆಧುನಿಕ ಪ್ರಜ್ಞೆಯಲ್ಲಿ ವಿಭಿನ್ನ ನೆಲೆಗಳಲ್ಲಿ ಅರ್ಥೈಸಿಕೊಳ್ಳುವ ಪ್ರಯತ್ನಗಳೂ ನಡೆದಿವೆ. ಈ ಹಿನ್ನೆಲೆಯಲ್ಲಿ ಬಂದಿರುವ ಬಂಗಾಳಿ ಲೇಖಕಿ ಮಹಾಶ್ವೇತಾದೇವಿ ಅವರು ನಕ್ಸಲೀಯ ಹೋರಾಟದ ಹಿನ್ನೆಲೆಯಲ್ಲಿ ಬರೆದಿರುವ 'ದೋಪ್ದಿ' (ದ್ರೌಪದಿ) ಕಥೆಯನ್ನು ಚರ್ಚೆಗೆ ಎತ್ತಿಕೊಂಡಿದ್ದಾರೆ. ಜೊತೆಗೆ ಮುಕುಂದೂರು ಸ್ವಾಮಿಗಳ ವ್ಯಾಖ್ಯಾನವನ್ನು, ಕುಮಾರವ್ಯಾಸನ ದ್ರೌಪದಿಯ ಹಾಗೂ ವ್ಯಾಸನ ದ್ರೌಪದಿಯ ಪ್ರಾರ್ಥನೆಯ ಚಿತ್ರಣವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಸಂಗ್ರಹ, ಸರಳ ಅನುವಾದ ಹಾಗೂ ತಿಳಿಗನ್ನಡ ಅವತರಿಣಿಕೆಗಳು

ಜಿ.ಪಿ.ರಾಜರತ್ನಂ ಅವರು ಸಂಗ್ರಹಿರುವ ಕೃತಿ 'ಪಂಪಕವಿಯ ಕರ್ಣರಸಾಯನಂ'. ಇದು ಪಂಪ ಮಹಾಕವಿಯ 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿನ ಕರ್ಣನ ಕಥೆಯಾಗಿದೆ. 'ಪಂಪಭಾರತ'ದಲ್ಲಿ ತನ್ನ ಸತ್ಯ, ತ್ಯಾಗ, ವೀರತ್ವದ ಗುಣಗಳ ಕಾರಣವಾಗಿ ಮತ್ತೆ ಮತ್ತೆ ನೆನಪಾಗುವ ಕರ್ಣನ ಕತೆಯನ್ನು ಸಂಗ್ರಾಹಕರು ಇಲ್ಲಿ ಮೂಲದ ಮಾತುಗಳಲ್ಲೆ ಟಿಪ್ಪಣಿ ಸಹಿತ ಸಂಗ್ರಹಿಸಿ ಕೊಟ್ಟಿದ್ದಾರೆ.

ಎನ್.ಬಸವಾರಾಧ್ಯ, ಅ.ರಾ.ಮಿತ್ರ ಹಾಗೂ ಹಂಪ.ನಾಗರಾಜಯ್ಯ ಅವರುಗಳು ಸಂಗ್ರಹಿಸಿರುವ ಕೃತಿ 'ಪಂಪಭಾರತ ಸಂಗ್ರಹ'. ಇದು ಪಂಪನ ಕೃತಿಯನ್ನು ಸಮಗ್ರವಾಗಿ ವ್ಯಾಸಂಗ ಮಾಡುವ ಕನ್ನಡ ವಿದ್ಯಾರ್ಥಿಗಳನ್ನು ಗಮನದಲ್ಲಿರಿಸಿಕೊಂಡು ಸಿದ್ಧಪಡಿಸಲಾದ ಸಂಗ್ರಹವಾಗಿದೆ. ಇದರಲ್ಲಿ 'ಪಂಪಭಾರತ'ದ ಸಂಕ್ಷಿಪ್ತ ಪರಿಚಯವಿದೆ. ಕೃತಿಯಲ್ಲಿ ಪಂಪನು ಅಭಿರಾಮದೇವರಾಯನ ಮಗ ಎಂಬುದಾಗಿ ತಿಳಿಸಲಾಗಿದೆ.

ದಿ॥ ನಾಗರಾಜಪ್ಪ.ಡಿ ಹಾಗೂ ಬ್ರಹ್ಮಪ್ಪ.ಜಿ ಅವರು ಅನುವಾದಿಸಿರುವ ಕೃತಿ 'ಪಂಪನ ಆದಿಪುರಾಣ'. ಈ ಕೃತಿಯು 'ಆದಿಪುರಾಣ'ದ ಭಾವಾನುವಾದವಾಗಿದೆ. ಕೃತಿಯ ಹದಿನಾರು ಆಶ್ವಾಸಗಳ ಕತೆಯನ್ನು ಇಲ್ಲಿ ತಿಳಿಗನ್ನಡದಲ್ಲಿ ನೀಡಲಾಗಿದೆ.

ಡಾ.ಪಿ.ವಿ.ನಾರಾಯಣ ಅವರ ಕೃತಿ 'ಪಂಪ ಕಾವ್ಯಸಾರ'. ಪ್ರಸ್ತುತ ಕೃತಿಯು ಪಂಪನ 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ' ಕಾವ್ಯಗಳ ಸಂಕ್ಷಿಪ್ತ ರೂಪವಾಗಿದ್ದು, ಟಿಪ್ಪಣಿಗಳನ್ನು ನೀಡಲಾಗಿದೆ. ಮುಖ್ಯವಾಗಿ ಈ ಕೃತಿಯನ್ನು ಯುವ ಜನತೆಗೆ ಪಂಪನ ಕಾವ್ಯಗಳ ಪರಿಚಯವಾಗಬೇಕೆಂಬ ಉದ್ದೇಶದಿಂದ ರಚಿಸಲಾಗಿದೆ. ಜೊತೆಗೆ ಕೃತಿಯ ಕೊನೆಯಲ್ಲಿ ಕನ್ನಡ ಚಂಪೂ ಪರಂಪರೆಗೆ ಸಂಬಂಧಿಸಿದಂತಹ ಲೇಖನಗಳಿವೆ.

ಎಚ್.ಸಿದ್ಧಲಿಂಗಯ್ಯ ಅವರ ಕೃತಿ 'ವಚನ ಪಂಪಭಾರತ' (ವಚನ ವಿಕ್ರಮಾರ್ಜುನ ವಿಜಯ). ಈ ಕೃತಿಯು 'ವಿಕ್ರಮಾರ್ಜುನ ವಿಜಯಂ' ಕೃತಿಯನ್ನು ಸಂಪೂರ್ಣವಾಗಿ ಸಾಮಾನ್ಯರಿಗೂ ಅರ್ಥವಾಗುವ ರೀತಿಯಲ್ಲಿ ಸರಳವಾದ ಹೊಸಗನ್ನಡ ಗದ್ಯದಲ್ಲಿ ನಿರೂಪಿಸಿರುವ ಕೃತಿ.

ಎಚ್.ಎಸ್.ವೆಂಕಟೇಶಮೂರ್ತಿ ಅವರ ಕೃತಿ 'ಪಂಪನ ವಿಕ್ರಮಾರ್ಜುನ ವಿಜಯ ತಿಳಿಗನ್ನಡ ಅವತರಣ'. ಇದು 'ಪಂಪಭಾರತ'ವನ್ನು ಹೊಸ ಪೀಳಿಗೆಗೆ ತಲುಪಿಸುವ ಕೆಲಸವಾಗಿದ್ದು, ಹೊಸಗನ್ನಡದ ಗದ್ಯದಲ್ಲಿ ನಿರೂಪಿಸಿದ್ದಾರೆ. ಈ ಕಾರಣವಾಗಿ 'ಪಂಪಭಾರತ'ದ ಪ್ರಮುಖ ಪದ್ಯಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ.

ಪ್ರೊ.ಬಿ.ಆರ್.ಕುಲಕರ್ಣಿ ಅವರ ಕೃತಿ 'ಕುಮಾರವ್ಯಾಸ ವಚನಾಮೃತ' (ಪದ್ಯಗಳ ವರ್ಣಾನುಕ್ರಮ ಸಹಿತ). ಇದು 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯ ಪದ್ಯಗಳ ವರ್ಣಾನುಕ್ರಮ ಸೂಚಿಯಾಗಿದೆ. ಇದರಲ್ಲಿ ಕುವೆಂಪು ಮತ್ತು ಮಾಸ್ತಿಯವರು ಸಂಪಾದಿಸಿದ ಕಥಾಮಂಜರಿಯ ೮೪೨೮ ಪದ್ಯಗಳನ್ನು ಮೊದಲ ಭಾಗದಲ್ಲಿ ಹಾಗೂ ಮೈಸೂರು ಓರಿಯಂಟಲ್ ಲೈಬ್ರರಿ ಆವೃತ್ತಿಗಳ ಪ್ರಕಾರ ಕುವೆಂಪು ಮತ್ತು ಮಾಸ್ತಿಯವರ ಆವೃತ್ತಿಗಿಂತ ಹೆಚ್ಚಿದ್ದ ೨೬೫೦ ಪದ್ಯಗಳನ್ನು ಎರಡನೆಯ ಭಾಗದಲ್ಲಿ ಕೊಟ್ಟಿದ್ದಾರೆ. ಈ ಕೃತಿಯ ಸು.೩೫ ಪರಿಚ್ಛೇದಗಳಲ್ಲಿ ಕುಮಾರವ್ಯಾಸ ಕವಿಯ ಮಹಾಕಾವ್ಯದಲ್ಲಿನ ವಿಶ್ವೋತ್ಪತ್ತಿಶಾಸ್ತ್ರ, ಮಾನಸಶಾಸ್ತ್ರ, ಪರತತ್ವಶಾಸ್ತ್ರ, ನೀತಿಶಾಸ್ತ್ರ, ಅಪರೋಕ್ಷಾನುಭವ ಶಾಸ್ತ್ರ ಮೊದಲಾದ ವಿಷಯಗಳ ವಿಶ್ಲೇಷಣೆ ಇದೆ.

ಎಂ.ವಿ.ಸೀತಾರಾಮಯ್ಯ ಅವರು ಸಂಗ್ರಹಿಸಿ ಸಂಪಾದಿಸಿರುವ ಕೃತಿ 'ಕುಮಾರವ್ಯಾಸಭಾರತ ಸಂಗ್ರಹ'. ಈ ಸಂಗ್ರಹಕ್ಕೆ ಬಿ.ಎಂ.ಶ್ರೀ, ಟಿ.ಎಸ್.ವೆಂಕಣ್ಣಯ್ಯ ಅವರು ಎ.ಆರ್.ಕೃಷ್ಣಶಾಸ್ತ್ರಿಗಳು ಮತ್ತು ಡಿ.ಎಲ್.ನರಸಿಂಹಾಚಾರ್ಯರ ನೆರವಿನಿಂದ ಸಿದ್ಧಗೊಳಿಸಿದ ಹಸ್ತಪ್ರತಿಯನ್ನು ಮುಖ್ಯ ಆಕರವಾಗಿ ಬಳಸಿಕೊಂಡಿದ್ದಾರೆ. ಕಾವ್ಯ ಭಾಗಕ್ಕೆ ಮುನ್ನುಡಿಯಾಗಿ ಬರೆದಿರುವ ಉಪೋದ್ಘಾತ ಭಾಗ ಮಹತ್ವವಾದುದು. ಇದು ಎಂ.ವಿ.ಸೀತಾರಾಮಯ್ಯ ಅವರ ಆಳವಾದ ಅಧ್ಯಯನ ಹಾಗೂ ವಿದ್ವತ್ತುಗಳಿಗೆ ಹಿಡಿದ ಕನ್ನಡಿಯಾಗಿದೆ. ಇದರಲ್ಲಿ ಶ್ರೀಯುತರು ಕವಿಯ ಕಾಲವಿಚಾರ, ಕೃತಿಯ ಕಾವ್ಯ ಸಮೀಕ್ಷೆ, ಪರಿಷ್ಕರಣಗಳನ್ನು ಕುರಿತು ವಿಶ್ಲೇಷಿಸಿದ್ದಾರೆ. ಕೃತಿಯ ಕೊನೆಗೆ ಅನುಬಂಧದಲ್ಲಿ 'ಕುಮಾರವ್ಯಾಸ ಭಾರತ' ಮುದ್ರಿತ ಕೃತಿ ಸೂಚಿಯನ್ನು ನೀಡಿದ್ದಾರೆ.

ಕೊನೆ ಟಿಪ್ಪಣಿಗಳು

೧. ಕವಿರಾಜಮಾರ್ಗಂ, ತೃತೀಯ ಪರಿಚ್ಛೇದಂ, ಪದ್ಯ ಸಂಖ್ಯೆ–೧೭೬.

೨. ಕನ್ನಡ ಸಾಹಿತ್ಯ ಚರಿತ್ರೆ, ಪು.ಸಂ–೪೪.

೩. ವಿಕ್ರಮಾರ್ಜುನ ವಿಜಯ, ೧೨/೨೧೭.

೪. ಜನಪದ ಮಹಾಭಾರತ.

೫. ಕನ್ನಡ ಸಾಹಿತ್ಯ ಚರಿತ್ರೆ, ಪು.ಸಂ–೨೩೩.

೬ ಕನ್ನಡ ಸಾಹಿತ್ಯ ಚರಿತ್ರೆ, ಪು.ಸಂ–೨೦೫, ೨೧೯, ೨೨೪, ೨೨೮.

೭ ವಿಕ್ರಮಾರ್ಜುನ ವಿಜಯ, ೧/೧೧.

೮. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧/೨೫.

೯. ಕನ್ನಡ ಸಾಹಿತ್ಯ ಚರಿತ್ರೆ, ಪು.ಸಂ–೨೨೮.

೧೦. ಸಂಕ್ಷಿಪ್ತ ಕನ್ನಡ ನಿಘಂಟು, ಪು.ಸಂ–೧೨೨೬.

ಅಧ್ಯಾಯ : ಎರಡು

ಮಹಿಳಾ ಸಂಘರ್ಷದ ನೆಲೆಗಳ ಪರಿಕಲ್ಪನಾತ್ಮಕ ಚರ್ಚೆ

ಅಧ್ಯಾಯ : ಎರಡು

ಮಹಿಳಾ ಸಂಘರ್ಷದ ನೆಲೆಗಳ ಪರಿಕಲ್ಪನಾತ್ಮಕ ಚರ್ಚೆ

ಮನುಕುಲದ ಇತಿಹಾಸವು ಮಾನವ ಸಂಬಂಧಗಳಿಂದ ತುಂಬಿದೆ. ಸಾಮಾಜಿಕ ಬದುಕಿನಲ್ಲಿ ಸಹಕಾರ, ಅನ್ಯೋನ್ಯತೆ, ಆತ್ಮೀಯತೆಗಳಂತೆಯೆ ಸಂಘರ್ಷವೂ ಇದೆ. ಸಂಘರ್ಷವು ಸಾರ್ವತ್ರಿಕವಾದ ಪ್ರಕ್ರಿಯೆಯಾಗಿದ್ದು, ಜನರ ಅಭಿಪ್ರಾಯ, ಹೊಂದಾಣಿಕೆ, ಮೌಲ್ಯ, ಆದರ್ಶಗಳಿಗೆ ವಿರೋಧಗಳು ಎದುರಾದಾಗ ಹುಟ್ಟುವ ಘರ್ಷಣೆಗಳು ಸಂಘರ್ಷಕ್ಕೆ ದಾರಿಮಾಡಿಕೊಡುತ್ತವೆ. ಆ ಕಾರಣವಾಗಿಯೇ ಜೀವಿಗಳು ಯಾವಾಗಲೂ ಪರಸ್ಪರ ಹೊಂದಾಣಿಕೆಯಿಂದಲೇ ಬದುಕನ್ನು ಸಾಗಿಸುವರು ಎಂದು ಹೇಳಲು ಬರುವುದಿಲ್ಲ. ಸಂಘರ್ಷವು ವೈಯಕ್ತಿಕ ಕ್ರಿಯೆಯಾಗಿದ್ದು, ಒಂದಲ್ಲಾ ಒಂದು ರೀತಿಯಲ್ಲಿ ಕಾಣಿಸಿಕೊಳ್ಳುತ್ತಿರುತ್ತದೆ. ಜನರಲ್ಲಿ ಒಡಮೂಡುವ ಭಯ, ನಿರಾಸೆ, ಜಿಗುಪ್ಸೆ, ಆಶಾಭಂಗ, ಅಸಂತೃಪ್ತಿ, ಅಸುರಕ್ಷತೆ, ಅನಿಶ್ಚಿತತೆ, ಅಭದ್ರತೆ, ಆತಂಕ ಮೊದಲಾದವುಗಳು ಸಂಘರ್ಷಕ್ಕೆ ಕಾರಣೀಭೂತಗಳಾಗಿವೆ.

೨.೧. ಸಂಘರ್ಷದ ಅರ್ಥ ಮತ್ತು ವ್ಯಾಖ್ಯಾನಗಳು

'ಸಂಘರ್ಷ' ಎಂಬ ಪರಿಕಲ್ಪನೆಯು ವಿಶಾಲವಾದ ಅರ್ಥ ಸಾಧ್ಯತೆಗಳನ್ನು ಉಳ್ಳದ್ದು. ಅದನ್ನು ಇದಮಿತ್ಥಂ ಎಂದು ಹೇಳಲಿಕ್ಕೆ ಬರುವುದಿಲ್ಲ. ಅದು ಕೆಲವೊಮ್ಮೆ ಸಿಟ್ಟು, ಜಗಳ, ಒಡೆದಾಟ, ಗುದ್ದಾಟ, ಯುದ್ಧ ಮುಂತಾದ ರೀತಿಯಲ್ಲಿ ಬಾಹ್ಯವಾಗಿ ಗೋಚರಿಸಿದರೆ, ಬಹುತೇಕವಾಗಿ ಅತೃಪ್ತಿ, ಅಸಹನೆ, ಅಸಮಾಧಾನ, ನಿರಾಸೆ, ಹತಾಶೆ ಮುಂತಾದ ಮಾನಸಿಕ ವರ್ತನೆಗಳ ಮೂಲಕ ಅಭಿವ್ಯಕ್ತಿಗೊಳ್ಳುತ್ತದೆ. ಹಾಗಾಗಿ ಇದು ಮನಸ್ಸಿನ ಆಂತರಿಕ ಸಂಘರ್ಷಗಳಿಂದ ಹಿಡಿದು, ದೃಗ್ಗೋಚರವಾಗುವ ಹೋರಾಟಗಳವರೆಗೆ ತನ್ನ ಅರ್ಥ ವ್ಯಾಪ್ತಿಯನ್ನು ವಿಸ್ತರಿಸಿಕೊಂಡಿದೆ.

ರೆವರೆಂಡ್ ಎಫ್.ಕಿಟೆಲ್ ಅವರು ೧೮೯೪ರಲ್ಲಿ ಪ್ರಕಟಿಸಿದ ತಮ್ಮ 'ಕನ್ನಡ–ಇಂಗ್ಲಿಷ್ ಡಿಕ್ಷನರಿ'ಯಲ್ಲಿ 'ಸಂಘರ್ಷ' ಎಂಬ ಪದಕ್ಕೆ "Rubbing together, grinding, trituration, friction (ತಿಕ್ಕೋಣ G.); rubbing against (another), collision, mutual attrition, emulation, vying or contending for superiority; envy, see mr.463, where the text is corrept"[1] ಎಂಬ ಅರ್ಥಗಳನ್ನು ನೀಡಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದ 'ಇಂಗ್ಲಿಷ್-ಕನ್ನಡ ನಿಘಂಟು'ವಿನಲ್ಲಿ "ಹೋರಾಟ; ಬಡಿದಾಟ, ಕಾಳಗ; ಯುದ್ಧ; ಕದನ, ತಾಕುವುದು; ಬಡಿಯುವುದು; ಡಿಕ್ಕಿ; ಸಂಘಟ್ಟನೆ, (ರೂಪ) (ಪರಸ್ಪರ ವಿರುದ್ಧ ತತ್ವ ಮೊದಲಾದವುಗಳ) ತಿಕ್ಕಾಟ; ಘರ್ಷಣೆ, (ಮ.ಶಾ) ಸಂಘರ್ಷ; ಒಳತೋಟಿ; ಅಂತಸ್ತುಮುಲ; ವ್ಯಕ್ತಿಯೊಬ್ಬನಲ್ಲಿ ವಿರುದ್ಧವಾದ ಭಾವನೆಗಳು ಯಾ ಅಪೇಕ್ಷೆಗಳು ಪರಸ್ಪರ ಎದುರಾಗುವುದು, ಸಂಘರ್ಷ ಯಾತನೆ; ಹಾಗೆ ಎದುರಾದಾಗ ಅವನಿಗೆ ಆಗುವ ದುಃಖ, ವ್ಯಥೆ, ವೇದನೆ"[೨] ಎಂಬ ಅರ್ಥಗಳನ್ನು ನೀಡಲಾಗಿದೆ. ಇಲ್ಲಿ ಸಂಘರ್ಷ ಎಂಬ ಪದವು ದೈಹಿಕವಾಗಿ ಅನುಭವಕ್ಕೆ ಬರುವ ಹೋರಾಟ, ಬಡಿದಾಟಗಳಿಂದ ಹಿಡಿದು ಮನಸ್ಸಿನೊಳಗಿನ ಒಳತೋಟಿ, ಅಂತಸ್ತುಮುಲಗಳವರೆಗಿನ ಅರ್ಥವ್ಯಾಪ್ತಿಯನ್ನು ಮನಗಾಣಿಸುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ 'ಕನ್ನಡ ನಿಘಂಟು'ವಿನಲ್ಲಿ 'ಸಂಘರ್ಷ' ಎಂಬ ಪದಕ್ಕೆ "ಉಜ್ಜುವಿಕೆ; ತಿಕ್ಕಾಟ, ಕಾದಾಟ; ಬಡಿದಾಟ"[೩] ಎಂಬ ಅರ್ಥಗಳನ್ನು ನೀಡಲಾಗಿದೆ. ಡಾ.ಕೆ.ಶಿವರಾಮ ಕಾರಂತರು ತಮ್ಮ 'ಸಿರಿಗನ್ನಡ ಅರ್ಥಕೋಶ'ದಲ್ಲಿ 'ಸಂಘರ್ಷ' ಎಂಬುದಕ್ಕೆ "ಬಲವಾದ ಸೇರಿಕೆ; ತಾಕಲಾಟ, ತಿಕ್ಕಾಟ; ಒರಸೊರಸು"[೪] ಎಂಬ ಅರ್ಥಗಳನ್ನು ನೀಡಿದ್ದಾರೆ. ಪ್ರೊ.ಜಿ.ವೆಂಕಟಸುಬ್ಬಯ್ಯನವರು ತಮ್ಮ 'ಇಗೋ ಕನ್ನಡ' ಸಾಮಾಜಿಕ ನಿಘಂಟಿನ ಸಂಯುಕ್ತ ಸಂಪುಟದಲ್ಲಿ 'ಸಂಘರ್ಷ' ಪದಕ್ಕೆ "ಸಂಸ್ಕೃತದಲ್ಲಿ ಘರ್ಷ ಎಂದರೆ ತಿಕ್ಕಾಟ, ಜಗಳ, ಪುಡಿ ಮಾಡುವಿಕೆ, ಸಾಣೆ – ಹಿಡಿಯುವಿಕೆ ಮುಂತಾದ ಅರ್ಥಗಳಿವೆ. ಸಮ್ ಎಂಬುದು ಉಪಸರ್ಗ. ಉತ್ ಇದ್ದ ಹಾಗೆ, ಹೆಚ್ಚಾದ ತಿಕ್ಕಾಟ ಎಂದು ಅದರ ಅರ್ಥ. ಸಂಘರ್ಷ – ಘರ್ಷಣೆ ಎರಡಕ್ಕೂ ಒಂದೇ ಅರ್ಥ. ಘೃಷು ಧಾತುವಿನಿಂದ ಬಂದದ್ದು. ತಿಕ್ಕಾಟ, ಎರಡು ವಿರುದ್ಧ ಶಕ್ತಿಗಳ ತಾಕಲಾಟ"[೫] ಎಂದು ಸಂಘರ್ಷದ ನಿಷ್ಪತ್ತಿಯನ್ನು ಕುರಿತು ವಿವರಿಸಿದ್ದಾರೆ.

'ಇಂಗ್ಲಿಷ್-ಇಂಗ್ಲಿಷ್-ಕನ್ನಡ ನಿಘಂಟು'ವಿನಲ್ಲಿ "conflict- 1.struggle or fight; battle; clash ನಾ ಯುದ್ಧ; ಘರ್ಷಣೆ; ಹೋರಾಟ 2.Quarrel ಹೊಡೆದಾಟ; ಬಡಿದಾಟ; ಜಗಳ 3.strong disagreeent ತೀವ್ರ ಭಿನ್ನಾಭಿಪ್ರಾಯ; ವಿರಸ; ವಿರೋಧ"[೬] ಎಂಬ ಅರ್ಥಗಳನ್ನು ನೀಡಲಾಗಿದೆ.

'ಪ್ರಿಸಮ್ ಇಂಗ್ಲಿಷ್-ಕನ್ನಡ ನಿಘಂಟು'ವಿನಲ್ಲಿ "conflict ನಾ ೧)ವಿರಸ, ವಿರೋಧ, ಭಿನ್ನಾಭಿಪ್ರಾಯ, ೨)ಸಂಘರ್ಷಣೆ, ಹೋರಾಟ, ಯುದ್ಧ ೩)ಹೊಡೆದಾಟ, ಬಡಿದಾಟ. (ಕ್ರಿ) ೧).ವಿರೋಧಿಸು, ವಿರುದ್ಧವಾಗಿರು, ಒಪ್ಪದಿರು. ೨).ಹೋರಾಡು, ಘರ್ಷಿಸು"[೭] ಎಂಬ ಅರ್ಥಗಳನ್ನು ನೀಡಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ 'ಸಂಕಿಪ್ತ ಕನ್ನಡ – ಇಂಗ್ಲಿಷ್ ನಿಘಂಟು'ವಿನಲ್ಲಿ ಸಂಘರ್ಷ(ನಾ), ೧.)ಉಜ್ಜುವಿಕೆ, ತಿಕ್ಕಾಟ, friction; rubbing against ೨)ಕಾದಾಟ; ಬಡಿದಾಟ, conflict fight"[೮] ಎಂಬ ಅರ್ಥಗಳನ್ನು ನೀಡಲಾಗಿದೆ. ಗಂಗಾಧರ ಮಡಿವಾಳೇಶ್ವರ ತುರಮರಿ ಅವರ

ಸಟೀಕಿನ 'ಶಬ್ದಮಂಜರಿ ಕೋಶ'ದಲ್ಲಿ ಸಂಘರ್ಷ ಪದಕ್ಕೆ "ತಿಕ್ಕೋಣ"[೯] ಎಂಬ ಅರ್ಥವನ್ನು ನೀಡಲಾಗಿದೆ.

ಮೇಲೆ ಉಲ್ಲೇಖಿಸಿದ ಸಂಘರ್ಷದ ವಿವಿಧ ಅರ್ಥಗಳನ್ನು ಗಮನಿಸಿದಾಗ 'collision', 'ಒಳತೋಟಿ, ವ್ಯಕ್ತಿಯೊಬ್ಬನಲ್ಲಿ ವಿರುದ್ಧವಾದ ಭಾವನೆಗಳು ಯಾ ಅಪೇಕ್ಷೆಗಳು ಪರಸ್ಪರ ಎದುರಾಗುವುದು', 'ಬಲವಾದ ಸೇರಿಕೆ', 'ತೀವ್ರ ಭಿನ್ನಾಭಿಪ್ರಾಯ; ವಿರಸ; ವಿರೋಧ', 'ವಿರೋಧಿಸು, ವಿರುದ್ಧವಾಗಿರು, ಒಪ್ಪದಿರು' ಎನ್ನುವ ಈ ಅರ್ಥಗಳು ಮನುಷ್ಯನ ಮಾನಸಿಕ ಸಂಘರ್ಷದ ವಿಸ್ತರಣೆಗೆ ಪೂರಕವಾಗುತ್ತವೆ. ದೈಹಿಕ ಸಂಘರ್ಷಕ್ಕಿಂತ ಮಾನಸಿಕ ಸಂಘರ್ಷಗಳು ಹೆಚ್ಚು ಅಪಾಯಕಾರಿ. ಈ ಸಂಘರ್ಷಗಳು ಸೇಡಿನ ರೂಪವನ್ನು ತಾಳಿ, ದೈಹಿಕ ಸಂಘರ್ಷಕ್ಕೂ ಕಾರಣವಾಗುತ್ತವೆ.

ಮಹಿಳೆಯರ ಸಂಘರ್ಷಗಳು ಬಹುತೇಕವಾಗಿ ಮಾನಸಿಕ ನೆಲೆಯಿಂದ ಕೂಡಿರುವುದರಿಂದ ಪ್ರಸ್ತುತ ಅಧ್ಯಯನಕ್ಕೆ ಪೂರಕವಾಗಿ ಒಳತೋಟಿ, ಕಾದಾಟ, ಎರಡು ವಿರುದ್ಧ ಶಕ್ತಿಗಳ ತಾಕಲಾಟ ಈ ಅರ್ಥಗಳನ್ನು ಮಾನಸಿಕ ಸಂಘರ್ಷಗಳ ನೆಲೆಯಲ್ಲಿ ವಿಸ್ತರಿಸಿಕೊಳ್ಳುವ ಪ್ರಯತ್ನ ಮಾಡಲಾಗಿದೆ.

ವ್ಯಾಖ್ಯೆಗಳು

ಸಂಘರ್ಷ ಎನ್ನುವುದಕ್ಕೆ ಹಲವು ವಿದ್ವಾಂಸರು ತಮ್ಮದೇ ಆದ ವ್ಯಾಖ್ಯಾನಗಳನ್ನು ನೀಡಿದ್ದಾರೆ. ಅವುಗಳನ್ನು ಈ ಕೆಳಗಿನಂತೆ ನೋಡಬಹುದಾಗಿದೆ.

"ಸಂಘರ್ಷ' ಎನ್ನುವುದಕ್ಕೆ ತಿಕ್ಕಾಟ, ಗುದ್ದಾಟ, ಬಡಿದಾಟ, ಕಾದಾಟ ಎಂಬ ಅರ್ಥಗಳಿವೆ. ಈ ಅರ್ಥಗಳನ್ನು ಪರಿಶೀಲಿಸಿದರೆ, ಕೆಲವೊಮ್ಮೆ ಸಮಷ್ಟಿ ನೆಲೆಯಲ್ಲಿ ಮತ್ತು ಕೆಲವೊಮ್ಮೆ ವ್ಯಷ್ಟಿ ನೆಲೆಯಲ್ಲಿ ನಡೆದ ಬದುಕಿನ ಅಸ್ತಿತ್ವದ ಕ್ರಿಯೆಯೆನಿಸಿದೆ. ಅಂತೆಯೇ ಸಂಶೋಧಕರಾದ ಎಂ.ಎಂ.ಕಲಬುರ್ಗಿಯವರು ಸಂಘರ್ಷದ ಸ್ವರೂಪವನ್ನು ಎರಡು ನೆಲೆಯಲ್ಲಿ ಅರ್ಥೈಸಿದ್ದಾರೆ. ಒಂದು ಹೋರಾಟ, ಇನ್ನೊಂದು ಕಾದಾಟ ಎಂಬ ಅರ್ಥದಲ್ಲಿ ವ್ಯಾಖ್ಯಾನಿಸಿದ್ದಾರೆ. 'ಹೋರಾಟ ಅರ್ಥದ ಸಂಘರ್ಷಕ್ಕೆ ಸಾಮಾಜಿಕ ನ್ಯಾಯದ ಸಮಷ್ಟಿ ಹಿತಾಸಕ್ತಿ ಇದ್ದರೆ, ಕಾದಾಟ ಅರ್ಥದ ಸಂಘರ್ಷಕ್ಕೆ ಸಮುದಾಯ ನ್ಯಾಯದ ವೈಯಕ್ತಿಕ ಹಿತಾಸಕ್ತಿ ಇರುತ್ತದೆ' ಎಂದು ವ್ಯಾಖ್ಯಾನಿಸಿದ್ದಾರೆ."[೧೦] ಎಂದು ಡಾ.ಪಂಡಿತ ಕೆ. ರಾಠೋಡ ಅವರು 'ಕರ್ನಾಟಕದಲ್ಲಿ ಧಾರ್ಮಿಕ ಸಂಘರ್ಷ' ಎಂಬ ತಮ್ಮ ಸಂಶೋಧನೆಯಲ್ಲಿ ಎಂ.ಎಂ.ಕಲ್ಬುರ್ಗಿಯವರು ವ್ಯಾಖ್ಯಾನಿಸಿರುವ ಸಂಘರ್ಷದ ನೆಲೆಗಳನ್ನು ವ್ಯಷ್ಟಿ ಮತ್ತು ಸಮಷ್ಟಿಯ ನೆಲೆಯಲ್ಲಿ ಅರ್ಥೈಸಲು ಪ್ರಯತ್ನಿಸಿದ್ದಾರೆ. ಧಾರ್ಮಿಕ ಸಂಘರ್ಷವಾಗಿರಬಹುದು, ಸಾಮಾಜಿಕ ಸಂಘರ್ಷವಾಗಿರಬಹುದು, ರಾಜಕೀಯ ಸಂಘರ್ಷವಾಗಿರಬಹುದು ಮೊದಲಿಗೆ ವ್ಯಷ್ಟಿಯ ನೆಲೆಯಿಂದ ಆರಂಭವಾಗಿ ಬೆಳೆಯುತ್ತಾ ಸಮಷ್ಟೀ ನೆಲೆಗೆ ವ್ಯಾಪಿಸಿಕೊಳ್ಳುತ್ತವೆ. ಆರಂಭದಲ್ಲಿ ಆಂತರಿಕ ನೆಲೆಯ ಈ ಸಂಘರ್ಷ ಬಾಹ್ಯ ನೆಲೆಗೆ ಬಂದು ನಿಲ್ಲುತ್ತದೆ. ಆದ್ದರಿಂದ "ಸಂಘರ್ಷ' ಎನ್ನುವುದು ಮಾನವ ಲೋಕದ ವಿಚಾರ, ವ್ಯವಹಾರ ಅಥವಾ ವ್ಯಕ್ತಿಗಳ ಅಂತರ್ಗತ ಭಾವಲೋಕದೊಳಗೆ

ನಡೆಯುವ ವಿರುದ್ಧ ಶಕ್ತಿ ಕೇಂದ್ರಗಳೆರಡರ ಘರ್ಷಣ ಅಥವಾ ದೊಂಬಿ ಕಾಳಗವನ್ನು ಸೂಚಿಸುತ್ತದೆ"[೧೧] ಎಂದಿದ್ದಾರೆ.

"ಹಾರ್ಟನ್ ಮತ್ತು ಹಂಟ್‌ರವರ ಪ್ರಕಾರ 'ಎದುರಾಳಿಗಳನ್ನು ದುರ್ಬಲಗೊಳಿಸುವ ಅಥವಾ ನಾಶಪಡಿಸುವುದರ ಮೂಲಕ ಪ್ರತಿಫಲಗಳ ಮೇಲೆ ಏಕಸ್ವಾಮ್ಯವನ್ನು ಸ್ಥಾಪಿಸುವ ಪ್ರಕ್ರಿಯೆಯೇ ಸಂಘರ್ಷವಾಗಿದೆ'. (Conflict is a process of seeking to monopolise rewards by eliminating or weakening the competitors).

ಎ.ಡಬ್ಲ್ಯೂ.ಗ್ರೀನ್‌ರವರ ಪ್ರಕಾರ ಸಂಘರ್ಷವೆಂದರೆ, 'ಬೇರೆಯವನ ಅಥವಾ ಬೇರೆಯವರ ಇಚ್ಛೆಯನ್ನು ಉದ್ದೇಶಪೂರ್ವಕವಾಗಿ ವಿರೋಧಿಸುವ, ಪ್ರತಿಭಟಿಸುವ ಮತ್ತು ಒತ್ತಾಯಪೂರ್ವಕವಾಗಿ ಹತ್ತಿಕ್ಕುವ ಪ್ರಯತ್ನವಾಗಿದೆ'. (Conflict is the deliberate attempt to oppose, resist or coerce the will of anther or others).

ಜೆ.ಪಿ.ಗಿಲಿನ್ ಮತ್ತು ಜೆ.ಎ.ಗಿಲಿನ್ : 'ಸಂಘರ್ಷವೆಂಬುದು ಒಂದು ಪ್ರಕ್ರಿಯೆಯಾಗಿದ್ದು, ಇದರಲ್ಲಿ ವ್ಯಕ್ತಿಗಳು ಅಥವಾ ಸಮೂಹಗಳು ತಮ್ಮ ವಿರೋಧಿಯನ್ನು ಹಿಂಸಿಸುವ ಅಥವಾ ಹಿಂಸೆಯ ಬೆದರಿಕೆಯನ್ನೊಡ್ಡಿ ತಮ್ಮ ಗುರಿ ಸಾಧಿಸಿಕೊಳ್ಳುವ ಪ್ರಯತ್ನವಿರುತ್ತದೆ'. (Conflict is the process in which individuals or groups seak their ends by directly challenging the antagonist by violence or threat of violence).

ಪಾರ್ಕ್ ಮತ್ತು ಬರ್ಗೆಸ್ ಹೇಳುವಂತೆ 'ಸಂಘರ್ಷವು ಯಾವಾಗಲೂ ಪ್ರಜ್ಞಾಪೂರ್ವಕವಾದ ಕ್ರಿಯೆಯಾಗಿದ್ದು ಆಳವಾದ ಭಾವನೆಗಳನ್ನು ಮತ್ತು ಬಲವಾದ ಭಾವೋದ್ವೇಗಗಳನ್ನು ಉಂಟುಮಾಡುವುದು"[೧೨]

ಸಮಾಜಶಾಸ್ತ್ರೀಯ ನೆಲೆಯಲ್ಲಿ ಹಾರ್ಟನ್ ಮತ್ತು ಹಂಟ್, ಎ.ಡಬ್ಲ್ಯೂ.ಗ್ರೀನ್, ಜೆ.ಪಿ.ಗಿಲಿನ್ ಮತ್ತು ಜೆ.ಎ.ಗಿಲಿನ್, ಪಾರ್ಕ್ ಮತ್ತು ಬರ್ಗೆಸ್ ಅವರು ಹೇಳಿರುವ ಸಂಘರ್ಷದ ವ್ಯಾಖ್ಯಾನಗಳನ್ನು ಗಮನಿಸಿದಾಗ ಸಂಘರ್ಷ ಎನ್ನುವುದು ಪ್ರಜ್ಞಾಪೂರ್ವಕವಾಗಿದ್ದು, ಹಿಂಸೆಯನ್ನು, ಬೆದರಿಕೆಯನ್ನು ಒಡ್ಡುವಂತಿರುತ್ತದೆ. ಅಂದರೆ ಸಮಾಜದ ನಡುವೆ ಬದುಕುವ ಮನುಷ್ಯ ಅನಿವಾರ್ಯವಾಗಿಯಾದರೂ ಕೆಲವೊಮ್ಮೆ ಸಂಘರ್ಷಕ್ಕೆ ಒಳಗಾಗಬೇಕಾಗುತ್ತದೆ. ಆದರೆ ಬಾಹ್ಯ ಸಂಘರ್ಷವು ಆಂತರಿಕ ಸಂಘರ್ಷದಷ್ಟು ಯಾತನೆಯನ್ನು ತಂದುಕೊಡಲಾರದು. ಅಲ್ಲದೆ ಆಂತರಿಕ ಸಂಘರ್ಷದಲ್ಲಿ ವಿಚಲಿತನಾದಷ್ಟು ಬಾಹ್ಯ ಸಂಘರ್ಷದಿಂದ ಮನುಷ್ಯ ವಿಚಲಿತನಾಗಲಾರ ಎಂಬುದನ್ನು ಈ ಮೇಲಿನ ವ್ಯಾಖ್ಯಾನಗಳಿಂದ ಅರ್ಥೈಸಿಕೊಳ್ಳಬಹುದಾಗಿದೆ.

೨.೨. ಸಂಘರ್ಷದ ವಿಕಾಸದ ನೆಲೆಗಳು

'ಸಂಘರ್ಷ' ಪರಿಕಲ್ಪನೆಯ ಹುಟ್ಟು ಹಾಗೂ ಅದರ ಬೆಳವಣಿಗೆಯ ಚಾರಿತ್ರಿಕ ನೆಲೆಯನ್ನು ಗುರುತಿಸುವುದಕ್ಕಿಂತಲೂ, ಸಂಘರ್ಷದ ಸ್ವರೂಪದ ನೆಲೆಗಳನ್ನು ಅಧ್ಯಯನ ಮಾಡುವುದು ಅವಶ್ಯಕವಾಗಿದೆ.

ಸಂಘರ್ಷವು ದೈಹಿಕ ಹಾಗೂ ಮಾನಸಿಕ ವಲಯಗಳೆರಡರಲ್ಲು ಪ್ರಕಟವಾಗುವ ಕಾರಣವಾಗಿ ಇಂತಹುದೇ ಸಂದರ್ಭದಲ್ಲಿ ಸಂಘರ್ಷಗಳು ಹುಟ್ಟುತ್ತವೆ ಎಂದು ಹೇಳಲು ಬರುವುದಿಲ್ಲ. ಆಗ ತಾನೆ ಜನಿಸಿದ ಮಗು ಅಳುವುದು ಸಹ ಒಂದು ರೀತಿಯ ಸಂಘರ್ಷವೇ ಆಗಿದೆ. ತನ್ನ ಹಸಿವಿನ ಸಂಘರ್ಷವನ್ನು ಅದು ಅಳುವಿನ ಮೂಲಕ ಹೊರ ಹಾಕುತ್ತದೆ. ನಂತರ ಅದು ಸಮಾಜದೊಂದಿಗೆ ತಾನು ಜೀವಿಸಲು ಪ್ರಾರಂಭಿಸಿದಾಗ ಸಾಮಾಜಿಕವಾಗಿ, ತಾತ್ವಿಕವಾಗಿ ವಿವಿಧ ಬಗೆಯ ಸಂಘರ್ಷಗಳಿಗೆ ಒಳಗಾಗುತ್ತದೆ. ಬಡವ ತನಗಾಗಿರುವ ಅನ್ಯಾಯವನ್ನು ಅಥವಾ ತನ್ನ ಸ್ಥಿತಿಯನ್ನು ಕುರಿತು ಮನದಲ್ಲಿ ಮೂಡುವ ಕೋಪ, ಹತಾಶೆ, ಭಯ, ಸಿಟ್ಟುಗಳ ಮೂಲಕ ಸಂಘರ್ಷವನ್ನು ಹೊರ ಹಾಕುತ್ತಾನೆ. ಶ್ರೀಮಂತ ತನ್ನಲ್ಲಿನ ಹಣ, ಐಶ್ವರ್ಯಗಳನ್ನು ತೋರ್ಪಡಿಸುವ ಮೂಲಕ ಹಾಗೂ ಇತರರಿಗೆ ನೋವುಂಟು ಮಾಡುವ ಮೂಲಕ ತನ್ನ ಸಂಘರ್ಷಗಳನ್ನು ಹೊರ ಹಾಕುವುದು ಕಂಡುಬರುತ್ತದೆ.

ಹೀಗೆ ಸಾಮಾಜಿಕ ಸಂಘರ್ಷ, ಆರ್ಥಿಕ ಸಂಘರ್ಷ, ಸಾಂಸ್ಕೃತಿಕ ಸಂಘರ್ಷ, ಕೌಟುಂಬಿಕ ಸಂಘರ್ಷ, ಪ್ರಭುತ್ವದ ಸಂಘರ್ಷ, ಭಾಷಿಕ ಸಂಘರ್ಷ, ವರ್ಗ ಸಂಘರ್ಷ, ಜೈವಿಕ ಸಂಘರ್ಷ ಎನ್ನುವ ವಿವಿಧ ಸಂಘರ್ಷಗಳನ್ನು ದೈಹಿಕ ಮತ್ತು ಮಾನಸಿಕ ಸಂಘರ್ಷದ ಎರಡು ನೆಲೆಗಳಲ್ಲಿ ಗುರುತಿಸಿಕೊಳ್ಳಬಹುದಾಗಿದೆ.

೨.೩. ಮಹಿಳಾ ಸಂಘರ್ಷದ ಸ್ವರೂಪ

ಮೇಲೆ ಉಲ್ಲೇಖಿಸಿದ ಸಂಘರ್ಷದ ವಿವಿಧ ಪ್ರಕಾರಗಳಲ್ಲಿ ಪ್ರಸ್ತುತ ಸಂಶೋಧನಾ ವಿಷಯಕ್ಕೆ ಪೂರಕವಾಗಿ ವರ್ಗ ಮತ್ತು ಜೈವಿಕ ಸಂಘರ್ಷಗಳೆರಡನ್ನು ವಿವರಿಸಿಕೊಳ್ಳಬಹುದಾಗಿದೆ. ಏಕೆಂದರೆ ಮಹಿಳಾ ಸಂಘರ್ಷಗಳು ಈ ಎರಡೂ ನೆಲೆಗಳಲ್ಲಿ ಸಶಕ್ತವಾದ ರೀತಿಯಲ್ಲಿ ಅಭಿವ್ಯಕ್ತಿಗೊಳ್ಳುತ್ತಿರುತ್ತವೆ. ನಮ್ಮ ಸಾಮಾಜಿಕ ರಚನಾ ವಿನ್ಯಾಸವು ಏಣಿ ಶ್ರೇಣಿಗಳಿಂದ ಕೂಡಿದ ವ್ಯವಸ್ಥೆಯಾಗಿದೆ. ಇದರಲ್ಲಿ ಗಂಡು–ಹೆಣ್ಣು, ಮೇಲು–ಕೀಳು, ಬಡವ–ಬಲ್ಲಿದ, ಉಳ್ಳವ–ಇಲ್ಲದವ ಎಂಬಂತಹ ಅನೇಕ ವೈರುಧ್ಯಗಳಿವೆ. ಇಂತಹ ಸಾಮಾಜಿಕ ಜೀವನದಲ್ಲಿ ಮಹಿಳೆ ತಾನು ಗಂಡಿನಂತೆ ಜೈವಿಕ ಜೀವಿಯಾಗಿದ್ದರೂ ಕೂಡ ಅಲಕ್ಷ್ಯಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಯಾವುದೇ ರೀತಿಯ ಅಧಿಕಾರ, ಕೌಟುಂಬಿಕ ಪ್ರಾಧಾನ್ಯತೆ, ಮಹತ್ವದ ಸ್ಥಾನಮಾನಗಳನ್ನಾಗಲಿ ಈಕೆಗೆ ನೀಡಲಾಗಿಲ್ಲ. ಸಂಪೂರ್ಣವಾಗಿ ನಿರ್ಲಕ್ಷಿಸಿ ಕಡೆಗಣಿಸಲಾಗಿತ್ತು. ಇಂತಹ ಪರಿಸರದಲ್ಲಿ ಬದುಕನ್ನು ಪ್ರಾರಂಭಿಸುವ ಮಹಿಳೆ ತಾನು ಹುಟ್ಟಿದ ಸಮಯದಿಂದ ಹಿಡಿದು ಸಾವಿನ ಸಂದರ್ಭದ ಕೊನೆಯ ಕ್ಷಣಗಳವರೆಗೂ ಹಲವು ರೀತಿಯ ಸಂಘರ್ಷಗಳಿಗೆ ಒಳಗಾಗುತ್ತಿದ್ದಾಳೆ. ನಮ್ಮ ಸಾಂಸ್ಕೃತಿಕ ಪರಿಸರ ಕೂಡ ಗಂಡಿಗೆ ಕೊಟ್ಟಿರುವ ಪ್ರಾಧಾನ್ಯತೆಯನ್ನು ಮಹಿಳೆಗೆ ನೀಡಿಲ್ಲ. ಹಲವು ಮಿತಿಗಳನ್ನು ಹೇರಿ ಆಕೆ ನಾಲ್ಕು ಗೋಡೆಗಳ ನಡುವೆ ತನ್ನ ಬದುಕನ್ನು ಸಾಗಿಸುವಂತೆ ಮಾಡಲಾಯಿತು. ಯಾವುದೇ ಅಧಿಕಾರವಾಗಲಿ, ನಿರ್ಧಾರಗಳನ್ನು ಕೈಗೊಳ್ಳುವ ಸ್ವಾತಂತ್ರ್ಯವನ್ನಾಗಲಿ ಪುರುಷ ಪ್ರಧಾನ ಸಮಾಜ ಆಕೆಗೆ ನೀಡದೆ ನಿರಾಕರಿಸಿತು.

ಈ ರೀತಿಯ ಸಾಮಾಜಿಕ ವ್ಯವಸ್ಥೆಯು ಗಂಡು ಹಾಗೂ ಹೆಣ್ಣಿನ ಅಧಿಕಾರದ ಸಂದರ್ಭಗಳಲ್ಲಿ ಭಿನ್ನವಾದ ನಿರ್ವಚನಗಳನ್ನು ಹೊಂದಿದೆ. ಗಂಡು ಯಾವಾಗಲೂ ಅಧಿಕಾರದ ಕೇಂದ್ರ ಸ್ಥಾನದಲ್ಲಿದ್ದರೆ, ಹೆಣ್ಣು ಅಂತಹ ಅಧಿಕಾರಗಳಿಂದ ದೂರವಿದ್ದು ವಿನಯಶೀಲಳಾಗಿರುತ್ತಾಳೆ. ಜೊತೆಗೆ ಗಂಡಿಗಿಂತ ಹೆಣ್ಣು ಕೆಳಮಟ್ಟದ ಸ್ಥಾನಮಾನಗಳನ್ನೆ ಹೊಂದಿರುತ್ತಾಳೆ. ಹೆಣ್ಣಿನ ಆಲೋಚನೆ, ಭಾವನೆ, ಅಭಿಪ್ರಾಯಗಳಿಗೆ ಯಾವುದೇ ರೀತಿಯ ಮನ್ನಣೆಗಳು ಇರಲಿಲ್ಲ. ಈ ರೀತಿಯ ಅಂಶಗಳನ್ನು ಪ್ರತಿಭಟಿಸಿ ಹುಟ್ಟಿದ ಪ್ರಶ್ನೆಗಳೆ, ವಿರೋಧಗಳೆ ಆಕೆಯ ಸಂಘರ್ಷಗಳಾಗಿ ಹೊರಹೊಮ್ಮಿವೆ.

ಸಾಮಾಜಿಕವಾಗಿ, ಧಾರ್ಮಿಕವಾಗಿ, ರಾಜಕೀಯ, ಆರ್ಥಿಕ ಹಾಗೂ ಮಾನಸಿಕವಾದ ಹಲವು ನೆಲೆಗಳಲ್ಲಿ ಮಹಿಳೆಯ ಸಂಘರ್ಷಗಳು ಮೇಳೈಸಿಕೊಂಡಿರುವುದನ್ನು ಕಾಣಬಹುದಾಗಿದೆ. ಇವುಗಳ ಜೊತೆಗೆ ಪರಂಪರೆ, ಭಾಷೆ, ರೂಢಿ, ಸಂಪ್ರದಾಯ, ವರ್ಗ, ವರ್ಣ, ಧೋರಣೆ, ನೀತಿ, ನಿಯಮ, ಸಂಸ್ಕೃತಿ, ಆಚಾರ, ವಿಚಾರಗಳು ಸಹ ಮಹಿಳೆಯರಲ್ಲಿ ಹಲವು ರೀತಿಯ ಸಂಘರ್ಷಗಳು ರೂಪುಗೊಳ್ಳಲು ಕಾರಣವಾಗಿವೆ.

ಸಾಮಾಜಿಕವಾಗಿ ಮೂಡಿದ ಶ್ರೇಷ್ಠತೆಯ ಪರಿಕಲ್ಪನೆಯು ಗಂಡು-ಹೆಣ್ಣಿನ ನಡುವೆ ದೊಡ್ಡ ಕಂದಕವನ್ನು ನಿರ್ಮಿಸಿತು. ಅಧಿಕಾರ ಹಾಗೂ ಆರ್ಥಿಕ ಒಡೆತನದ ಕೇಂದ್ರ ವ್ಯಕ್ತಿಯಾದ ಗಂಡು ಅಧಿಕಾರವನ್ನು ಚಲಾಯಿಸುವ ನೆಲೆಯಲ್ಲಿ ನಿಂತರೆ, ಮಹಿಳೆ ಗಂಡಿಗೆ ಅಧೀನಳಾಗಿ ಬದುಕನ್ನು ಸಾಗಿಸುವುದು ಕಂಡುಬರುತ್ತದೆ. ಆದರೆ ಮಹಿಳೆಯ ಸೈರಣೆಗೂ ಒಂದು ಮಿತಿ ಇದೆ. ಅವುಗಳಿಂದ ಹೊರಬರಲು ಪ್ರಯತ್ನಿಸುವ ಭಾಗವಾಗಿ ಆಕೆಯ ಮನದಲ್ಲಿ ಮೂಡುವ ಭಯ, ಹತಾಶೆ, ದುಃಖ, ಸಂತೋಷ, ಕೋಪ, ಸೇಡಿನ ಭಾವಗಳು ಸಂಘರ್ಷದ ಪ್ರತೀಕಗಳಾಗಿ ಚರ್ಚೆಗೆ ಅನುವು ಮಾಡಿಕೊಡುತ್ತವೆ. ಮಹಿಳೆಯು ತಾಯಿಯಾಗಿ, ಹೆಂಡತಿಯಾಗಿ, ಗೆಳತಿಯಾಗಿ, ಅಕ್ಕಳಾಗಿ, ತಂಗಿಯಾಗಿ, ಅತ್ತೆಯಾಗಿ, ಸೊಸೆಯಾಗಿ ಹೀಗೆ ಸಾಮಾಜಿಕ ಬದುಕಿನ ಸಂದರ್ಭದಲ್ಲಿ ವಿವಿಧ ಪಾತ್ರಗಳನ್ನು ನಿರ್ವಹಿಸುತ್ತಾಳೆ ಎಂದು ಈ ಸಮಾಜ ಹೇಳುತ್ತಲೇ ಇದೆ. ಹೀಗೆ ಹೆಣ್ಣು ವಿವಿಧ ಜವಾಬ್ದಾರಿಗಳನ್ನು ಭಿನ್ನ ಸಾಮಾಜಿಕ ಆಯಾಮಗಳಲ್ಲಿ ನಿರ್ವಹಿಸುವ ಸಂದರ್ಭಗಳಲ್ಲಿ ಹಲವು ಬಗೆಯ ಭಾವಗಳ ತಾಕಲಾಟವಿದ್ದು, ಆ ಎಲ್ಲ ಸಂಘರ್ಷಗಳನ್ನು ಎದುರಿಸಿ ನಿಲ್ಲಬೇಕಾಗುತ್ತದೆ.

ಮಹಿಳಾ ಸಂಘರ್ಷದ ಸ್ವರೂಪಗಳು ಬಹುತೇಕವಾಗಿ ದೈಹಿಕ ಸಂಘರ್ಷಗಳಾಗಿರುವುದಕ್ಕಿಂತ ಮಾನಸಿಕ ಸಂಘರ್ಷಗಳ ನೆಲೆಯಲ್ಲಿ ಸಾಗುತ್ತವೆ. ಇದಕ್ಕೆ ಜೈವಿಕ ಸಂಘರ್ಷಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ನಮ್ಮ ಪರಂಪರೆ ಮಹಿಳೆಯನ್ನು ಜೈವಿಕವಾಗಿ ಪುರುಷನಿಗಿಂತ ಅಶಕ್ತಳು, ಮಾನಸಿಕವಾಗಿ ಅಸಮರ್ಥಳು ಎಂದು ಅಪವ್ಯಾಖ್ಯಾನಿಸಿರುವ ಕಾರಣಕ್ಕಾಗಿ ಎಚ್ಚೆತ್ತ ಮಹಿಳೆಯರು ಪರಂಪರಾಗತವಾದ ಈ ಅಪವ್ಯಾಖ್ಯಾನಗಳನ್ನು ಅಲ್ಲಗಳೆಯುವ ಕಾರಣಕ್ಕೆ ಮತ್ತದೇ ಪುರುಷ ಪ್ರಧಾನ ಸಮಾಜದಲ್ಲಿ ಶೋಷಣೆಯ ಕೇಂದ್ರವಾಗುತ್ತಿದ್ದಾಳೆ. ಈ ಎಲ್ಲವುಗಳ ಹಿನ್ನೆಲೆಯಲ್ಲಿ ಮಹಿಳೆ ತನ್ನ ಆಂತರ್ಯದ ಆಸೆ, ಆಕಾಂಕ್ಷೆಗಳನ್ನು, ಕಷ್ಟ, ತಿರಸ್ಕಾರಗಳನ್ನು ಕೆಲವೊಮ್ಮೆ ಅಸಹಾಯಕವಾಗಿ,

ಕೆಲವೊಮ್ಮೆ ತಿರಸ್ಕಾರಾತ್ಮಕವಾಗಿ, ಕೆಲವೊಮ್ಮೆ ಅಪರಾಧಿ ಭಾವದಲ್ಲಿ ಪುರುಷ ಪ್ರಧಾನ ಸಮಾಜದ ಪ್ರತಿನಿಧಿಗಳಾದ ಹೆಣ್ಣು ಮತ್ತು ಗಂಡುಗಳ ವಿರುದ್ಧ ಹೆಣ್ತನದ ಸಂಘರ್ಷಗಳು ಏರ್ಪಡುತ್ತಿವೆ.

ಈ ಹಿನ್ನೆಲೆಯಲ್ಲಿ ಮಹಿಳೆ ಮತ್ತು ಆಕೆಯ ಸಂಘರ್ಷಗಳನ್ನು ಬಹು ಎಚ್ಚರದ ಸೂಕ್ಷ್ಮ ದೃಷ್ಟಿಕೋನದಿಂದ ಗಮನಿಸಬೇಕಾದುದು ಪ್ರತಿ ಅಧ್ಯಯನದ ಮುಖ್ಯ ಜವಾಬ್ದಾರಿಯಾಗಿದೆ. ಹೀಗಾಗಿ ಈ ಹಿಂದೆ ವಿವರಿಸಲ್ಪಟ್ಟ ಸಂಘರ್ಷಗಳ ನೆಲೆಗಳಲ್ಲಿ ಪಂಪ-ಕುಮಾರವ್ಯಾಸರು ಚಿತ್ರಿಸಿದ ಮಹಿಳೆಯರು ಎದುರಿಸಿದ ವಿವಿಧ ಸಂಘರ್ಷಗಳನ್ನು ಕುರಿತು ಪರಿಕಲ್ಪನಾತ್ಮಕವಾಗಿ ಈ ಅಧ್ಯಯನವನ್ನು ಮುಂದುವರೆಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಕನ್ನಡ ಇಂಗ್ಲಿಷ್ ಡಿಕ್ಷನರಿ, ಪು.ಸಂ-೧೪೮೬.

೨. ಇಂಗ್ಲಿಷ್-ಕನ್ನಡ ನಿಘಂಟು, ಪು.ಸಂ-೧೦೬೬.

೩. ಕನ್ನಡ ನಿಘಂಟು, ೮ನೇ ಸಂಪುಟ, ಪು.ಸಂ-೮೨೧೧.

೪. ಸಿರಿಗನ್ನಡ ಅರ್ಥಕೋಶ, ಪು.ಸಂ-೪೬೭.

೫. ಇಗೋ ಕನ್ನಡ, ಸಾಮಾಜಿಕ ನಿಘಂಟು (ಸಂಯುಕ್ತ ಸಂಪುಟ), ಪು.ಸಂ-೬೫೦.

೬. ಇಂಗ್ಲಿಷ್-ಇಂಗ್ಲಿಷ್-ಕನ್ನಡ ನಿಘಂಟು, ಪು.ಸಂ-೨೬೯.

೭. ಪ್ರಿಸಮ್ ಇಂಗ್ಲಿಷ್-ಕನ್ನಡ ನಿಘಂಟು, ಪು.ಸಂ-೯೦.

೮. ಸಂಕ್ಷಿಪ್ತ ಇಂಗ್ಲಿಷ್-ಕನ್ನಡ ನಿಘಂಟು, ಪು.ಸಂ-೧೪೧೦.

೯. ಶಬ್ದಮಂಜರಿಕೋಶ, ಪು.ಸಂ-೧೭೬.

೧೦. ಕರ್ನಾಟಕದಲ್ಲಿ ಧಾರ್ಮಿಕ ಸಂಘರ್ಷ, ಪು.ಸಂ-viii.

೧೧. ಕರ್ನಾಟಕದಲ್ಲಿ ಧಾರ್ಮಿಕ ಸಂಘರ್ಷ, ಪು.ಸಂ-೦೫.

೧೨. ಸಮಾಜಶಾಸ್ತ್ರದ ಪರಿಚಯ, ಪು.ಸಂ-೧೨೨ ರಿಂದ ೧೨೩.

ಅಧ್ಯಾಯ : ಮೂರು

ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿನ ಮಹಿಳೆಯರ ನಿರ್ಣಯಾತ್ಮಕ ಆಶಯಗಳು

೩.೧. ತಾಯ್ತನದ ಮಹಿಳಾ ಸಂಘರ್ಷಗಳು

೩.೨. ತಿರಸ್ಕಾರಾತ್ಮಕ ಮಹಿಳಾ ಸಂಘರ್ಷದ ನೆಲೆಗಳು

೩.೩. ಪ್ರತಿಭಟನಾತ್ಮಕ ಮಹಿಳಾ ಸಂಘರ್ಷದ ನೆಲೆಗಳು

೩.೪ ಅಸಹಾಯಕ ಮಹಿಳಾ ಸಂಘರ್ಷದ ನೆಲೆಗಳು

೩.೫ ವಿರಹ ಮತ್ತು ಮರಣದಲ್ಲಿ ಮಹಿಳಾ ಸಂಘರ್ಷದ ನೆಲೆಗಳು

ಅಧ್ಯಾಯ : ಮೂರು

ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿನ ಮಹಿಳೆಯರ ನಿರ್ಣಯಾತ್ಮಕ ಆಶಯಗಳು

ಆದಿಕವಿ ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳು ವ್ಯಾಸನ ಸಂಸ್ಕೃತ ಕಾವ್ಯವಾದ 'ಮಹಾಭಾರತ'ದಿಂದ ಕಥಾವಸ್ತುವನ್ನು ಆಕರವನ್ನಾಗಿ ಪಡೆದುಕೊಂಡಿವೆ. ಹೀಗೆ ಪಡೆದುಕೊಂಡ ಆಕರವನ್ನು ತಮ್ಮದೇ ಆದ ಭಿನ್ನ ದೃಷ್ಟಿಕೋನಗಳಲ್ಲಿ ಅಳವಡಿಸಿಕೊಂಡಿದ್ದಾರೆ. ಈ ರೀತಿ ಅಳವಡಿಸಿಕೊಳ್ಳುವಾಗ ಆ ಕತೆಯನ್ನು ತಮ್ಮ ಕಾಲದ ಜೀವನ ವಿಧಾನದ ಜೊತೆಗೆ ಸಮೀಕರಿಸಿರುವುದು ಕಂಡುಬರುತ್ತದೆ. ಆ ಕಾರಣವಾಗಿ ಹತ್ತನೆ ಶತಮಾನದಲ್ಲಿ ರಚಿತವಾದ 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿನ ದ್ರೌಪದಿ ಮತ್ತಿತರ ಹೆಣ್ಣುಗಳ ನೋವು, ಸಂಕಟಗಳು ಕುಮಾರವ್ಯಾಸನು ತನ್ನ ಕೃತಿಯಲ್ಲಿ ಚಿತ್ರಿಸಿರುವ ಹೆಣ್ಣುಗಳಲ್ಲಿಯೂ ಕಂಡುಬರುತ್ತವೆ. ಪಂಪ ಹಾಗೂ ಕುಮಾರವ್ಯಾಸರ ಕಾಲದ ಹೆಣ್ಣಿನ ತಲ್ಲಣಗಳನ್ನು ನಮ್ಮ ಈ ಹೊತ್ತಿನ ಹೆಣ್ಣುಗಳಲ್ಲಿಯೂ ಕಾಣಬಹುದಾಗಿದೆ. ಈ ಹಿನ್ನೆಲೆಯಲ್ಲಿ ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳ ಸ್ತ್ರೀಯರಲ್ಲಿ ನಿರ್ಧಾರಾತ್ಮಕ ಆಶಯಗಳನ್ನು ಕಾಣಲಿಕ್ಕೆ ಸಾಧ್ಯವಿದೆ. ಈ ನಿರ್ಧಾರಾತ್ಮಕ ಆಶಯಗಳು ಅವರ ಛಲದ ಸ್ವರೂಪದಲ್ಲಿ, ಅವರು ತೆಗೆದುಕೊಳ್ಳುವ ನಿರ್ಧಾರ, ಕೋಪ, ರೋಷ, ಪ್ರತಿಭಟನೆ, ಪ್ರತಿಜ್ಞೆ, ಅಸಹಾಯಕ ಒಪ್ಪುವಿಕೆ, ತಿರಸ್ಕಾರ ಮುಂತಾದ ರೂಪದಲ್ಲಿಯೂ ಕಾಣಸಿಗುತ್ತವೆ.

೩.೧. ತಾಯ್ತನದ ಸಂಘರ್ಷಗಳು

ತಾಯ್ತನವೆಂಬ ನವಿರು ಭಾವವು ಭೂಮಿಯ ಮೇಲಿನ ಪ್ರತಿಯೊಂದು ಹೆಣ್ಣಿನ ಬಹುಮುಖ್ಯ ಅಭಿಲಾಷೆಯಾಗಿದೆ. ಹೆಣ್ಣು ಮಗುವನ್ನಾಗಲಿ ಅಥವಾ ಗಂಡು ಮಗುವನ್ನಾಗಲಿ, ತಾನೊಂದು ಮಗುವನ್ನು ಹಡೆದು ತಾಯ್ತನದ ಸವಿಯನ್ನು ಅನುಭವಿಸಬೇಕೆಂಬುದು ಎಲ್ಲ ಹೆಣ್ಣುಗಳ ಸಹಜ ಮನಸ್ಥಿತಿಯಾಗಿದೆ. ಇದಕ್ಕೆ ನಮ್ಮ ಸಾಮಾಜಿಕ ವ್ಯವಸ್ಥೆಯೂ ಕಾರಣವಾಗಿದ್ದು, ಮಕ್ಕಳಿಲ್ಲದ ಮಹಿಳೆಯರುಗಳನ್ನು ಬಂಜೆ, ಗೊಡ್ಡಿ ಮುಂತಾದ ಹಲವು ನಿಂದನಾತ್ಮಕ ನುಡಿಗಳಿಂದ ಅಪಹಾಸ್ಯ ಮಾಡುವುದು ನಿತ್ಯ ಸತ್ಯವಾಗಿದೆ. ಇಂತಹ ಅಪವಾದಗಳಿಂದ ಮುಕ್ತರಾಗಬೇಕೆಂದು ಚಿಂತಿಸುವ ಸಂದರ್ಭಗಳಲ್ಲಿ ಕೆಲವು ಹೆಣ್ಣುಮಕ್ಕಳು ಅನ್ಯ ಮಾರ್ಗಗಳನ್ನು ಹುಡುಕಿಕೊಳ್ಳುವುದೂ ಸಹ ತಿಳಿದಿರುವ ಸಂಗತಿಯೇ ಆಗಿದೆ. ಈ ಹಿನ್ನೆಲೆಯಲ್ಲಿ ತಾಯ್ತನವೆಂಬುದು ಹೆಣ್ಣಿನ ಸಾರ್ಥಕತೆಯ ಜೀವನದ

ಮೇಲೆ ಪ್ರಭಾವ ಬೀರುತ್ತಿರುವಂತೆಯೇ, ಈ ತಾಯ್ತನವೆಂಬುದು ಒಪ್ಪಿತ ನೆಲೆಯಲ್ಲಿ ಸಾಗಿದರೆ, ಕೆಲವೊಮ್ಮೆ ಬಲವಂತದ ತಾಯ್ತನಗಳೂ ಜರುಗುವುದು ಕಂಡುಬರುತ್ತದೆ. ಈ ತಾಯ್ತನದ ಪರಿಕಲ್ಪನೆಯೊಳಗೆ ಪರಾಶರನೊಂದಿಗೆ ಕೂಡಿ ವ್ಯಾಸನನ್ನು ಪಡೆಯುವ ಮತ್ಸ್ಯಗಂಧಿಯ ಸಂಘರ್ಷಗಳು ಒಂದು ರೀತಿಯವಾದರೆ, ಇವಳಂತೆಯೇ ವಿವಾಹ ಪೂರ್ವದಲ್ಲಿ ಸೂರ್ಯನಿಂದ ಕರ್ಣನನ್ನು ಪಡೆಯುವ ಕುಂತಿಯ ಮಾನಸಿಕ ಸಂಘರ್ಷಗಳು ಇನ್ನೊಂದು ನೆಲೆಯವಾಗಿವೆ.

ತನ್ನ ಮನದ ಸಹಜ ಬಯಕೆಯ ಕಾರಣವಾಗಿಯೋ, ಇಲ್ಲವೇ ಋಷಿಯ ಶಾಪದ ಭಯದಿಂದಲೋ ಪರಾಶರನೊಂದಿಗೆ ಕೂಡುವ ಮತ್ಸ್ಯಗಂಧಿಗೆ ತನ್ನ ಮಗನಾದ ವ್ಯಾಸನೊಂದಿಗೆ ತಾಯ್ತನವನ್ನು ಅನುಭವಿಸುವ ಅವಕಾಶಗಳಿಲ್ಲ. ಕಾರಣ ಪರಾಶರ ಆತನನ್ನು ತನ್ನ ಜೊತೆಗೆಯೇ ಕರೆದುಕೊಂಡು ಹೋಗುತ್ತಾನೆ. ಇಲ್ಲಿ ತಾಯಿಗೆ ಮಗುವಿನ ಸಂಸರ್ಗ ಇಲ್ಲವಾಗಿರುವಂತೆಯೇ, ಮಗುವಿಗೂ ತಾಯಿಯ ಸಂಸರ್ಗ ಇಲ್ಲವಾಗಿರುವುದು ತಿಳಿದುಬರುತ್ತದೆ. ಈ ಕ್ರಮವನ್ನು ಕುರಿತು ಮತ್ಸ್ಯಗಂಧಿ ಯಾವುದೇ ರೀತಿಯ ಪ್ರತಿಭಟನೆ ಅಥವಾ ಅಸಹಕಾರದ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸುವುದಿಲ್ಲ. ಇವಳಂತೆಯೆ ವಿವಾಹಪೂರ್ವದ ತಾಯ್ತನಕ್ಕೆ ಒಳಗಾಗುವ ಕುಂತಿಯ ಸಂಘರ್ಷಗಳು ಸಹ ಗಮನಾರ್ಹವಾದವು. ಮಗುವು ತನದ ಸಹಜ ಹುಡುಗಾಟಿಕೆಯ ಹಿನ್ನೆಲೆಯಲ್ಲಿ ಸೂರ್ಯನನ್ನು ಸ್ಮರಿಸಿ ಕರ್ಣನನ್ನು ಪಡೆದ ನಂತರದ ಈಕೆಯ ಭಯ, ಸಂಕಟ, ಮನಸ್ಸಿನಲ್ಲಿ ಮೂಡುವ ಆಲೋಚನೆಗಳು ಅವಳ ತಾಯ್ತನದ ಹಿನ್ನೆಲೆಯಲ್ಲಿಯೆ ಹೊರಬಂದವು. ಸಮಾಜದ ರೀತಿ ರಿವಾಜುಗಳು ಇವರ ತಾಯ್ತನದ ಭಾವಗಳಿಗೆ ಅಡ್ಡಿಯಾಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ವಿವಾಹಪೂರ್ವದ ತಾಯ್ತನವನ್ನು ಹೊಂದುವ ಮತ್ಸ್ಯಗಂಧಿ ಹಾಗೂ ಕುಂತಿಯರ ತಾಯ್ತನದ ಸಂಘರ್ಷಗಳನ್ನು ಅಧ್ಯಯನಕ್ಕೆ ಒಳಗುಮಾಡಲಾಗಿದೆ.

೩.೧.೧ ಮತ್ಸ್ಯಗಂಧಿಯ ತಾಯ್ತನದ ಸಂಘರ್ಷಗಳು

ಮತ್ಸ್ಯಗಂಧಿ-ಯೋಜನಾಗಂಧಿ-ಸತ್ಯವತಿ ಎನ್ನುವ ಈ ಮೂರೂ ಹೆಸರುಗಳು ಸ್ತ್ರೀಯೊಬ್ಬಳು ಸ್ಥಿತ್ಯಂತರಗೊಂಡಾಗ ಹೊಂದುವ ಹೆಸರುಗಳಾಗಿವೆ. ಅಲ್ಲದೆ ಅಪರಿಪೂರ್ಣಳಾದ ಹೆಣ್ಣು ಪರಿಪೂರ್ಣಳಾಗುವ ತಹತಹಿಕೆಯ ಮುಂದುವರಿದ ಭಾಗಗಳೇ ಆಗಿವೆ. ಅನಿರ್ಣಯಗಳಿಂದ ನಿರ್ಣಯಗಳ ಕಡೆಗೆ ಸಾಗುತ್ತಿರುವುದು ಕಂಡುಬರುತ್ತದೆ. 'ವಿಕ್ರಮಾರ್ಜುನ ವಿಜಯ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳ ಆರಂಭದಿಂದ ಪಾಂಡುವಿನ ಮರಣದ ನಂತರ ವ್ಯಾಸರ ಉಪದೇಶದಂತೆ ಸತ್ಯವತಿಯು ಅಂಬಿಕೆ, ಅಂಬಾಲೆ (ಅಂಬಾಲಿಕೆ) ಯರ ಜೊತೆ ತಪೋವನವನ್ನು ಆಶ್ರಯಿಸುವವರೆಗೆ ಮುಂದುವರೆಯುವ ಈ ಪಾತ್ರವನ್ನು ಪರಾಶರನೊಂದಿಗಿನ ಸಂಬಂಧದ ಮೂಲಕ, ಶಂತನುವಿನೊಂದಿಗಿನ ವಿವಾಹ ಮತ್ತು ಬದುಕಿನ ಮೂಲಕ, ಭರತ ವಂಶವನ್ನು ಮುನ್ನಡೆಸುವ ಸೂತ್ರಧಾರಿಯಾಗಿ ಅವಳ ನಿರ್ಣಯಾತ್ಮಕ ನಿಲುವುಗಳನ್ನು ಅಧ್ಯಯನ ಮಾಡಬಹುದಾಗಿದೆ. ಆರಂಭಿಕ ಹೆಜ್ಜೆಯಾದ ಮತ್ಸ್ಯಗಂಧಿಯ ಜನನವನ್ನು ಪಂಪನು ತನ್ನ 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ಈ ರೀತಿಯಾಗಿ ನಿರೂಪಿಸಿದ್ದಾನೆ.

> "...ಗಂಗಾದೇಶದೊಳುಪರಿಚರವಸುವೆಂಬರಸಂ
> ಮುಕ್ತಾವತಿಯೆಂಬ ತೊಱೆಯೊಳ್ ವಿಶ್ರಮಿಸಿರ್ದೊಡೆ ಕೋಳಾಹಳಮೆಂಬ ಪರ್ವತಕ್ಕೆ ಪುಟ್ಟಿದ ಗಿರಿಜೆಯೆಂಬ ಕನ್ನೆಯನಾತಂ ಕಂಡು ಕಣ್ಬೇಟಂಗೊಂಡು ಮದುವೆಯಂ ನಿಂದೊಂದು ದಿವಸ ಮಿಂದ್ರನೋಲಗಕ್ಕೆ ಪೋಗಿ ಋತುಕಾಲಪ್ರಾಪ್ತೆಯಾಗಿರ್ದ ನಲ್ಲಳಲ್ಲಿಗೆ ಬರಲ್ ಪಡೆಯ ದಾಕೆಯಂ ನೆನೆದಿಂದ್ರಿಯ ಕ್ಷರಣೆಯಾದೊಡದನೊಂದು ಕದಳೀಪತ್ರದೊಳ್ ಪುದಿದು ತನ್ನ ನಡಪಿದ ಗಿಳಿಯ ಕೈಯೊಳೋಪಳಲ್ಲಿಗಟ್ಟಿದೊಡದಂ ತರ್ಪಾಗಳಾ ಗಿಳಿಯ ನೊಂದು ಗಿಡುಗನೆಡೆಗೊಂಡು ಜಗುನೆಯಂ ಪಾಯ್ವಾಗಳುಗಿಬಗಿ ಮಾಡಿದಾಗಳದಱ ಕೈಯಿಂ ಬರ್ದುಂಕಿ ತೊಱೆಯೊಳಗೆ ಬಿಟ್ಟೊಡದನೊಂದು ಬಾಳೆಮೀನ್ನುಂಗಿ ಗರ್ಭಮಂ ತಾಳ್ದಿದೊಡೊಂದು ದಿವಸಮಾ ಮೀನನೊರ್ವ ಜಾಲಗಾಱಂ ಜಾಲದೊಳ್ ಪಿಡಿದಲ್ಲಿಗರಸಪ್ಪ ದಾಶನಲ್ಲಿಗುಯ್ದು ತೋಱಿದೊಡದಂ ವಿದಾರಿಸಿ ನೋಟ್ಪನ್ನೆಗಂ ಬಾಳೆಯ ಗರ್ಭದೊಳಿರ್ದ ಬಾಳೆಯಂ ಬಾಳನುಮಂ ಕಂಡೆತ್ತಿಕೊಂಡು ಮತ್ಸ್ಯಗಂಧಿಯುಂ ಮತ್ಸ್ಯಗಂಧನುಮೆಂದು ಪೆಸರನಿಟ್ಟು ನಡಪಿ ಯಮುನಾನದೀತೀರದೊಳಿರ್ಪನ್..."[೧]

ಎಂದು ಪಂಪ ಮತ್ಸ್ಯಗಂಧಿಯ ಜನನವನ್ನು ತನ್ನ ಕವಿ ಪ್ರತಿಭೆಯಿಂದ ಅಯೋನಿಜೆಯನ್ನಾಗಿಸಿದ್ದಾನೆ ಮತ್ತು ಅಪರಿಪೂರ್ಣಳನ್ನಾಗಿಸಿದ್ದಾನೆ. ಅಂಡಾಣುವಿನ ಸಂಯೋಗವಿಲ್ಲದ ಜನನದ ಈ ಉಲ್ಲೇಖ ಸೃಷ್ಟಿಶೀಲ ಕಾರ್ಯದಲ್ಲಿ ಹೆಣ್ಣನ್ನು ಅಪ್ರಸ್ತುತಗೊಳಿಸಿದೆ. ಅಷ್ಟು ಮಾತ್ರವಲ್ಲ ಹೆಣ್ಣನ್ನು ಕುಲ ಶ್ರೇಷ್ಠತೆಯಿಂದ ವಂಚಿಸಿ ಮೀನಿನ ಗರ್ಭದ ಮೂಲಕ ಸೃಷ್ಟಿಸಿ ಕುಲ ಹೀನಳನ್ನಾಗಿಸಿದೆ. ಇಲ್ಲಿನ ಮತ್ಸ್ಯಗಂಧಿಯನ್ನು ಜನನದಿಂದ, ತಾಯ್ತನದಿಂದ ಹಾಗೂ ಕನ್ಯತ್ವದಿಂದಲೂ ಅಪರಿಪೂರ್ಣಳನ್ನಾಗಿಸಲಾಗಿದೆ. ಅಸಹಜ ಕನ್ಯತ್ವವನ್ನು ಆರೋಪಿಸುವ ಮೂಲಕ ಹೆಣ್ಣಿನ ಶೀಲವನ್ನು ಶಂಕಿಸಲಾಗಿದೆ. ಮತ್ಸ್ಯಗಂಧಿಯ ಒಡನೆ ಹುಟ್ಟುವ ಅವಳ ಸೋದರನಾದ ಮತ್ಸ್ಯಗಂಧನ ಪಾತ್ರ ಬೆಳೆಸದೆ ಅಪರೋಕ್ಷವಾಗಿ ಮತ್ಸ್ಯಗಂಧಿಯ ಹುಟ್ಟಿನ ತರತಮಗಳನ್ನು ಮುಂದುವರೆಸಲಾಗಿದೆ. ಅಲ್ಲದೆ ಇಲ್ಲಿನ ಮತ್ಸ್ಯಗಂಧಿಗೆ ತಾಯಿ ತಂದೆಯರ ಸಂಸರ್ಗ ಇಲ್ಲ.

ಅಪರಿಪೂರ್ಣಳಾದ ಹೆಣ್ಣೊಬ್ಬಳು ಹಲವು ಹಂತಗಳಲ್ಲಿ ಪುರುಷನೊಂದಿಗಿನ ಕೂಡುವಿಕೆಯೊಂದಿಗೆ ಪೂರ್ಣತ್ವವನ್ನು ಹೊಂದುವ ನೆಲೆಯನ್ನು ಎರಡೂ ಕಾವ್ಯಗಳಲ್ಲಿ ಗುರ್ತಿಸಬಹುದು. ಪಂಪ ಮತ್ಸ್ಯಗಂಧಿಯ ಚರ್ಚೆಯನ್ನು ಮುಂದುವರೆಸುವ ನೆಲೆ ಜೀವನ ಪ್ರೀತಿಯನ್ನು ಸೂಚಿಸುತ್ತದೆ. ಏಕೆಂದರೆ ಪಂಪನದ್ದು ಸಮಗ್ರ ಭಾರತದ ಕಲ್ಪನೆ. ಆದರೆ ಕುಮಾರವ್ಯಾಸ ಕೃಷ್ಣನ ಕಥೆಯಾಗಿಸುಲ್ಲಿ ಮತ್ಸ್ಯಗಂಧಿಯಂತಹ ಸಾಮಾನ್ಯ ಪಾತ್ರಗಳಿಗೆ ಹೆಚ್ಚು ಅವಕಾಶವನ್ನು ಕೊಡದೆ ಸಂಕ್ಷಿಪ್ತಗೊಳಿಸಿದ್ದಾನೆ. ಜೊತೆಗೆ ಮತ್ಸ್ಯಗಂಧಿಯನ್ನು ಅಯೋನಿಜಳನ್ನಾಗಿಸಿ, ವ್ಯಾಸನನ್ನು ಪರಾಶರ ಮತ್ತು ಮತ್ಸ್ಯಗಂಧಿಯ ಸಂಸರ್ಗದಿಂದ ಯೋನಿಜನನ್ನಾಗಿಸಿರುವುದರ ಹಿಂದಿನ ರಾಜಕಾರಣಗಳು ಮಹಿಳೆಯರನ್ನು ಕುರಿತ ಸಾಂಪ್ರದಾಯಿಕ ದೃಷ್ಟಿಕೋನಗಳನ್ನೇ ತಿಳಿಸಿಕೊಡುತ್ತವೆ.

ನಂತರ ಈಕೆ ಯೌವ್ವನಸ್ಥೆಯಾಗಿ ದೋಣಿಯನ್ನು ನಡೆಸುತ್ತಿದ್ದಳು. ಹೀಗಿರಲು ಉತ್ತರ ದೇಶಕ್ಕೆ ಹೋಗುತ್ತ ನದಿಯ ದಡದಲ್ಲಿದ್ದ ಮತ್ಸ್ಯಗಂಧಿಯನ್ನು ವೃದ್ಧ ಪರಾಶರನೆಂಬ ಮುನಿಯು ನೋಡಿದನು. ಆತ ಆಕೆಯೊಡನೆ ಕೂಡಿ, ಆಕೆಯ ಶರೀರದಲ್ಲಿನ ದುರ್ವಾಸನೆ ಹೋಗುವಂತೆ ಮಾಡಿ ಯೋಜನ ದೂರದವರೆಗೆ ವ್ಯಾಪಿಸುವ ಸುವಾಸನೆಯನ್ನು ಕೊಟ್ಟ ಮೇಲೆ ಅವಳು ಯೋಜನಗಂಧಿಯಾಗುವಳು. ನಂತರ ಸತ್ಯವತಿ ಎಂಬ ಹೆಸರಿನಿಂದ ಶಂತನುವಿನೊಡನೆ ವಿವಾಹವಾಗುತ್ತಾಳೆ.

ಮಹಾಭಾರತದ ಮೂಲ ಕೇಂದ್ರ ಬಿಂದುವಾದ ಈಕೆಯ ಪ್ರಸ್ತಾಪ 'ಪಂಪಭಾರತ'ದಲ್ಲಿ ನಮಗೆ ಮೊದಲ ಆಶ್ವಾಸದ ೬೮ ನೇ ಪದ್ಯದ ವಚನ ಭಾಗದಲ್ಲಿ ಕಂಡುಬರುತ್ತದೆ. 'ಕುಮಾರವ್ಯಾಸ ಭಾರತ'ದಲ್ಲಿ ಆದಿಪರ್ವದ ೨ನೇ ಸಂಧಿಯ ೨೩ನೆ ಪದ್ಯದಲ್ಲಿ ಮತ್ಸ್ಯಗಂಧಿಯ ವಿವರಗಳು ನಮಗೆ ತಿಳಿಯುತ್ತವೆ. ಮತ್ಸ್ಯಗಂಧಿಯ ವಿವರಗಳು ಪಂಪನಲ್ಲಿ ದೀರ್ಘವಾಗಿದ್ದರೆ, ಕುಮಾರವ್ಯಾಸನಲ್ಲಿ ಸಂಕ್ಷಿಪ್ತವಾಗಿವೆ. ಆಕೆಯ ಜನನದ ಹಿನ್ನೆಲೆ, ಪರಾಶರನೊಂದಿಗಿನ ಕೂಡುವಿಕೆ, ಶಂತುನುವಿನೊಡನೆಯ ವಿವಾಹದ ವಿವರಗಳು ಪಂಪನಲ್ಲಿ ಕೆಲವೇ ಪದ್ಯಗಳಲ್ಲಿದ್ದರೂ ವಿಸ್ತಾರವಾಗಿವೆ. ಆದರೆ ಕುಮಾರವ್ಯಾಸ ಇವುಗಳನ್ನು ಸಂಕ್ಷಿಪ್ತವಾಗಿ ತಿಳಿಸಿದ್ದಾನೆ. ಇದಕ್ಕೆ ಇವರಿಬ್ಬರ ದೃಷ್ಟಿಕೋನಗಳು ಕಾರಣವಾಗಿವೆ. ಪಂಪ ಮಾನವೀಯ ನೆಲೆಯ ದೃಷ್ಟಿಕೋನದವನಾಗಿದ್ದರೆ, ಕುಮಾರವ್ಯಾಸ ಭಾಗವತ ಸಂಪ್ರದಾಯದ ದೃಷ್ಟಿಕೋನದವನಾಗಿದ್ದಾನೆ.

ಮತ್ಸ್ಯಗಂಧಿಯ ವ್ಯಕ್ತಿತ್ವ ಹಲವು ಹಂತಗಳಲ್ಲಿ ಬೆಳವಣಿಗೆ ಹೊಂದಿದೆ. ದಾಶನ ಮಗಳಾಗಿ, ಪರಾಶರನೊಂದಿಗಿನ ಸಂಬಂಧ, ಶಂತನುವಿನೊಂದಿಗಿನ ವಿವಾಹ ಮತ್ತು ಬಾಳ್ವೆ, ನಂತರದಲ್ಲಿ ಭರತ ವಂಶವನ್ನು ಮುನ್ನಡೆಸುವ ತಾಯಿಯಾಗಿ, ಸೂತ್ರಧಾರಿಯಾಗಿ ಈಕೆಯ ಪಾತ್ರ ತನ್ನ ಹರಹನ್ನು ಈ ಎರಡೂ ಕೃತಿಗಳಲ್ಲಿ ವಿಸ್ತರಿಸಿಕೊಂಡಿದೆ. ತನ್ನ ಬೆಳವಣಿಗೆಯ ಎಲ್ಲ ಕಾಲ ಘಟ್ಟಗಳಲ್ಲಿ ಆಕೆ ಎಲ್ಲವನ್ನು ನಿರಾಯಾಸವಾಗಿ ಪಡೆದುಕೊಂಡಳೆಂದು ತಿಳಿಯುವುದಕ್ಕಾಗುವುದಿಲ್ಲ. ಪ್ರತಿ ಸಂದರ್ಭದಲ್ಲಿಯೂ ಹಲವು ಸಂಘರ್ಷಗಳನ್ನು ಆಕೆ ಎದುರಿಸಿರುವುದು ಕಂಡುಬರುತ್ತದೆ. ಇಲ್ಲಿನ ಸಂಘರ್ಷಗಳು ಬಲ ಅಥವಾ ಹೋರಾಟಗಳು ಮಾತ್ರವೇ ಆಗಿರದೆ, ಆಕೆಯ ಮನಸ್ಸಿನಲ್ಲಿ ಮೂಡುವ ಭಯ, ಗೊಂದಲ, ತಳಮಳಗಳೂ ಕೂಡ ಸಂಘರ್ಷದ ಭಾಗಗಳೇ ಆಗಿವೆ. ಇವೆಲ್ಲವುಗಳ ನಡುವೆಯೂ ಆಕೆ ಅವುಗಳನ್ನು ಎದುರಿಸುವ ಮತ್ತು ದೃಢವಾದ ನಿಲುವುಗಳನ್ನು ವ್ಯಕ್ತಪಡಿಸುವ ಸಂಗತಿಗಳು ಇಲ್ಲಿ ಚರ್ಚಾರ್ಹವಾಗಿವೆ. ಈ ಅಂಶಗಳ ಆಧಾರದ ಮೇಲೆ ಆಕೆಯ ಸಂಘರ್ಷ ಹಾಗೂ ನಿಲುವುಗಳನ್ನು ಈ ಹಿಂದೆ ಗುರ್ತಿಸಿಕೊಂಡಿರುವ ಹಂತಗಳ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ತೊಡಗಲಾಗಿದೆ.

೩.೧.೧.ಅ. ಪರಾಶರನೊಂದಿಗಿನ ಸಂಬಂಧ

ಮತ್ಸ್ಯಗಂಧಿ ಹಾಗೂ ಪರಾಶರರ ಸಂಬಂಧವನ್ನು ಕುರಿತು ಚರ್ಚೆಗೆ ತೊಡಗುವ ಮುನ್ನ ಪಂಪ ಹಾಗೂ ಕುಮಾರವ್ಯಾಸರಿಬ್ಬರಲ್ಲಿಯೂ ಹೆಣ್ಣನ್ನು ಲೈಂಗಿಕ ಹಾಗೂ ಭೋಗದ ಸರಕಾಗಿಯೇ

ಪರಿಭಾವಿಸಿರುವುದು ಕಂಡುಬರುತ್ತದೆ. ಕಾರಣ ಕೃತಿಯ ಪ್ರತಿ ಸ್ತ್ರೀ ಪಾತ್ರಗಳೂ ಸಹ ಈ ನೆರಳಿನ ಆಧಾರದಲ್ಲಿಯೆ ರಚಿತವಾಗಿರುವುದು ನಮ್ಮ ಗಮನಕ್ಕೆ ಬರುತ್ತವೆ. ಪುರುಷ ಪ್ರಧಾನ ಸಮಾಜದ ಹಾಗೂ ಸನಾತನವಾದಿ ಮನಸ್ಥಿತಿಯ ನಿಲುವುಗಳು ಇಲ್ಲಿ ಪ್ರಭಾವ ಬೀರಿರುವುದು ಸ್ಪಷ್ಟವಾಗಿದೆ. ಆದಾಗ್ಯೂ ಪಂಪ–ಕುಮಾರವ್ಯಾಸರಲ್ಲಿ ಹೆಣ್ಣಿಗೆ ಕೆಲವೊಂದು ಪ್ರಮುಖ ಸ್ಥಾನಮಾನಗಳು ದೊರೆತಿದ್ದು, ಸ್ತ್ರೀವಾದಿ ಹಿನ್ನೆಲೆಯಲ್ಲಿ ಚರ್ಚಿಸಲು, ಅಧ್ಯಯನಕ್ಕೆ ತೊಡಗಲು ಅವಕಾಶಗಳಿವೆ. ಇದಕ್ಕೆ ಸಾಕ್ಷಿ ದೋಣಿ ನಡೆಸುವ ಹೆಣ್ಣುಮಗಳಾಗಿದ್ದ ಮತ್ಸ್ಯಗಂಧಿ ಭರತ ಕುಲವನ್ನು ಮುನ್ನಡೆಸುವ ಸಾರಥಿಯಾಗುವುದು.

ಮತ್ಸ್ಯಗಂಧಿ ಮತ್ತು ಪರಾಶರರ ಸಂಬಂಧ ಕೆಲವು ಗಂಟೆಗಳ ಅಥವಾ ಕೆಲವು ಹೊತ್ತಿನ ಸಂಬಂಧವಷ್ಟೇ ಆಗಿದೆ. ಏಕೆಂದರೆ ಈ ಸಂದರ್ಭವನ್ನು ಬಿಟ್ಟರೆ ಉಳಿದಂತೆ ಎಲ್ಲಿಯೂ ಪರಾಶರ ಹಾಗೂ ಮತ್ಸ್ಯಗಂಧಿಯರು ಒಟ್ಟಿಗಿರುವ ವಿವರಗಳಿಲ್ಲ. ಪರಾಶರ ಮೊದಲು ಮತ್ಸ್ಯಗಂಧಿಯನ್ನು ನೋಡುವುದು ಯಮುನಾ ನದಿ ತೀರದಲ್ಲಿ. ಇದರ ವಿವರಗಳು ಪಂಪನಲ್ಲಿ ಹೀಗಿವೆ.

"..ಮತ್ಸ್ಯಗಂಧಿಯುಂ ಮತ್ಸ್ಯಗಂಧನುಮೆಂದು ಪೆಸರನಿಟ್ಟು ನಡಪಿ
ಯಮುನಾನದೀತೀರದೊಳಿರ್ಪನ್ನೆಗಮಲ್ಲಿಗೊರ್ಮೆ ಬ್ರಹ್ಮರ ಮೊಮ್ಮನಪ್ಪ ವೃದ್ಧ ಪರಾಶರ
ಮುನೀಂದ್ರನುತ್ತರಾಪಥಕ್ಕೆ ಪೋಗುತ್ತುಂ ಬಂದು ತೊಱೆಯ ತಡಿಯೊಳೋಡಮಂ
ನಡೆಯಿಸುವ ಮತ್ಸ್ಯಗಂಧಿಯಂ ಕಂಡೆಮ್ಮನೀ ತೊಱೆಯಂ ಪಾಯಿಸೆಂಬುದುಂ
ಸಾಸಿರ್ವರೇಱಿ ದೊಡಲ್ಲದೀಯೋಡಂ ನಡೆಯದೆಂಬುದುಮಾಮನಿಬರ
ಬಿಣ್ಪುಮಪ್ಪೆಮೇಱಿಸೆಂದೊಡಂತೆ ಗೆಯ್ವೆನೆಂದೋಡಮೇಱಿಸಿ ನಡೆಯಿಸುವಲ್ಲಿ......"[೨]

ದಾಶನು ಆ ಮಕ್ಕಳಿಗೆ ಮತ್ಸ್ಯಗಂಧಿ ಹಾಗೂ ಮತ್ಸ್ಯಗಂಧ ಎಂಬ ಹೆಸರನ್ನು ಇಟ್ಟು ಸಲಹುತ್ತ ಯಮುನಾ ನದಿ ತೀರದಲ್ಲಿದ್ದನು. ಹೀಗಿರಲು ಅಲ್ಲಿಗೆ ಒಮ್ಮೆ ಬ್ರಹ್ಮನ ಮೊಮ್ಮಗನಾದ ವೃದ್ಧ ಪರಾಶರ ಮುನಿಯು ಉತ್ತರ ದೇಶಕ್ಕೆ ಹೋಗುತ್ತ ಬಂದು ನದಿಯ ದಡದಲ್ಲಿ ದೋಣಿಯನ್ನು ನಡೆಸುತ್ತಿದ್ದ ಮತ್ಸ್ಯಗಂಧಿಯನ್ನು ನೋಡಿದನು. ಆಕೆಯನ್ನು ಕಂಡು ನಮ್ಮನ್ನು ಈ ನದಿಯನ್ನು ದಾಟಿಸೆಂದು ಕೇಳಲು, ಆಕೆ ಸಾವಿರ ಜನರು ಹತ್ತದ ಹೊರತು ದೋಣಿಯನ್ನು ನಡೆಸುವುದಿಲ್ಲವೆಂದು ಹೇಳಿದಾಗ ಪರಾಶರ ತಾನೇ ಅಷ್ಟು ಜನರ ಭಾರವಾಗುವುದಾಗಿ ತಿಳಿಸುತ್ತಾನೆ. ಅದಕ್ಕೆ ಆಕೆ ಒಪ್ಪಿಗೆಯನ್ನಿತ್ತು ದೋಣಿಯನ್ನು ನಡೆಸಲು ಪ್ರಾರಂಭಿಸುತ್ತಾಳೆ. ಇದು ಪಂಪನು ಕೊಡುವ ಇವರಿಬ್ಬರ ಮೊದಲ ಪರಿಚಯದ ಭೇಟಿಯ ವಿವರ.

ನಂತರ ಮುನಿಯು ಆಕೆಗೆ ಸೋಲುವ ಮತ್ತು ಮೋಹದಿಂದ ಆಕೆಯೊಂದಿಗೆ ಕೂಡುವ ಪ್ರಸಂಗವನ್ನು ಪಂಪ ಈ ರೀತಿ ವರ್ಣಿಸಿದ್ದಾನೆ.

"ದಿವ್ಯ ಕನ್ಯೆಯನಟ್ಟಿರ್ತು ನೋಡಿ
ಮನದೊಳ್ ಸೋಲ್ತು ಮುನೀಂದ್ರನಾಕೆಯೊಡಲೀ ದುರ್ಗಂಧವೋಪಂತೆ ಯೋ

ಜನಗಂಧಿತ್ವಮನಿತ್ತು ಕಾಂಡ ಪಟದಂತಿರ್ಪನ್ನೆಗಂ ಮಾಡಿ ಮಂ
ಜನಲಂಪಟ್ಕಿಜನೀಯೆ ಕೂಡುವೆಡೆಯೊಳ್ ಜ್ಞಾನ ಸ್ವರೂಪಂ ಮಹಾ
ಮುನಿಪಂ ಪುಟ್ಟಿದನಂತು ದಿವ್ಯ ಮುನಿಗಳ್ಗೇಗೆಯ್ದೊಡಂ ತೀರದೇ”[೩]

ದಿವ್ಯ ಕನ್ಯೆಯನ್ನು ಪ್ರೀತಿಸಿ ನೋಡುತ್ತ ಮನಸ್ಸೋತು ಆಕೆಯನ್ನು ಮೋಹಿಸುತ್ತಾನೆ. ಆಕೆಯ ಒಡಲಿನ ದುರ್ಗಂಧವು ಹೋಗುವ ಹಾಗೆ ಸುವಾಸನೆಯನ್ನು ಕೊಟ್ಟನು. ನಂತರ ಮಂಜಿನ ತೆರೆಯನ್ನು ನಿರ್ಮಿಸಿ ಪ್ರೀತಿಯಿಂದ ಆಕೆಯೊಡನೆ ಕೂಡುವ ಸಮಯದಲ್ಲಿ ಜ್ಞಾನ ಸ್ವರೂಪಿಯು ಮಹಾಮುನಿಯು ಹುಟ್ಟಿದನು. ಹಾಗೆ ದಿವ್ಯ ಮುನಿಗಳು ಏನು ಮಾಡಿದರೂ ತಡೆಯುತ್ತದೆ ಅಲ್ಲವೆ ಎನ್ನುತ್ತಾನೆ ಪಂಪ.

ಇಲ್ಲಿ ಹಲವು ಪ್ರಶ್ನೆಗಳು ಉದ್ಭವಿಸುತ್ತವೆ. ಜೊತೆಗೆ ಮತ್ಸ್ಯಗಂಧಿಯ ಸಂಘರ್ಷದ ಭಾವಗಳು ಗೌಣ ಸ್ಥಿತಿಯಲ್ಲಿ ಪ್ರಕಟವಾಗುವುದು ಕಂಡುಬರುತ್ತದೆ. ಮೊದಲಿಗೆ ದೋಣಿಯಲ್ಲಿ ಮತ್ಸ್ಯಗಂಧಿಯನ್ನು ನೋಡಿ ಮೋಹಿತನಾಗುವ ಪರಾಶರನು ಕಾಮವನ್ನು, ಲೈಂಗಿಕತೆಯನ್ನು ನಿಗ್ರಹಿಸಿಕೊಳ್ಳಲಾರದಷ್ಟು ದುರ್ಬಲನಾಗಿದ್ದನೆ? ಸಾವಿರ ಜನರ ಭಾರ ತಾನೊಬ್ಬನೆ ಆಗುವಂತಹ ಸಿದ್ಧಿ ಹಾಗೂ ಸಾಧನೆಯನ್ನು ಮಾಡಿದ್ದಂತಹವನು ಪರಾಶರ ಮುನಿ. ಅಂತಹವನು ಹೆಣ್ಣೊಬ್ಬಳ ಮೋಹದಿಂದ ತನ್ನ ಮನಸ್ಸನ್ನು ನಿಗ್ರಹಿಸಿಕೊಳ್ಳಲಾರದಷ್ಟು ಮಾನಸಿಕವಾಗಿ ದುರ್ಬಲನಾಗಿದ್ದನೆ? ಅಲ್ಲದೆ ಒಂದು ಹೆಣ್ಣನ್ನು ನೋಡಿದ ತಕ್ಷಣ ಅವಳಿಗೆ ಶರಣಾಗುವ ಹಾಗೂ ಅವಳೊಂದಿಗೆ ಕೂಡುವ ಬಯಕೆಯನ್ನು ವ್ಯಕ್ತಪಡಿಸುವಂತಹದ್ದು ಮುನಿಯಾದವನಿಗೆ ಶೋಭೆ ಮತ್ತು ಕೀರ್ತಿಯನ್ನು ತರುವಂತಹದ್ದಲ್ಲ. ಹೀಗಾದರೆ ಇತರ ಸಾಮಾನ್ಯ ಮನುಷ್ಯನಿಗೂ ಮುನಿಗೂ ಏನು ವ್ಯತ್ಯಾಸವಿದೆ? ಏಕೆಂದರೆ ಮುನಿಯಾದವ ಕಾಮ, ಕ್ರೋಧ, ಮದ, ಮಾತ್ಸರ್ಯಗಳನ್ನು ಜಯಿಸಿ ಶ್ರೇಷ್ಠ ಮುನಿತ್ವವನ್ನು ಪಡೆದಿರುತ್ತಾರೆ. ಅಲ್ಲದೆ ಮುನಿಯಾದವನು ಇಂತಹವುಗಳನ್ನು ಜಯಿಸಿ ತಾನೆ ಅಂತಹ ಸಾಧನೆಯ ಎತ್ತರಕ್ಕೆ ಏರುವಂತಹದ್ದು? ಆದರೆ ಇಲ್ಲಿ ಈತನ ಸಾಧನೆ ಹೆಣ್ಣೊಬ್ಬಳನ್ನು ನೋಡಿದ ತಕ್ಷಣವೇ ಆಕೆಯ ಮೇಲೆ ಮೋಹಕ್ಕೊಳಗಾಗುವುದು, ಆಕೆಯೊಂದಿಗೆ ಕೂಡುವುದೇ ಅಲ್ಲಿಯವರೆಗೆ ಪರಾಶರನು ಸಂಪಾದಿಸಿದ್ದ ಹಾಗೂ ಸಾಧಿಸಿದ್ದ ವಿದ್ಯೆಯೇ? ಇಲ್ಲಿ ಆತನಲ್ಲಿ ಪ್ರೇಮಕ್ಕಿಂತ ಕಾಮದ ಭಾವಗಳಿರುವುದು ಕಂಡುಬರುತ್ತದೆ. ಮತ್ತು ಇಲ್ಲಿ ಹೆಣ್ಣು ಗಂಡು ಬಳಸಿ ಬಿಸಾಡುವ ಒಂದು ಪದಾರ್ಥದಂತೆ ಕಾಣುತ್ತಾಳೆ.

ಪರಾಶರನು ಮತ್ಸ್ಯಗಂಧಿಯ ದುರ್ಗಂಧವನ್ನು ಹೋಗಲಾಡಿಸಿ ಸುಗಂಧವನ್ನು ಕೊಡುವ ಸಂದರ್ಭ ಉನ್ನತ ವರ್ಗದವರು ಅಥವಾ ಆಚಾರ್ಯ ಶ್ರೇಷ್ಠರೆನಿಸಿಕೊಂಡವರು ಕೆಳವರ್ಗದ ಅಥವಾ ಸಾಮಾನ್ಯ ಹೆಣ್ಣೊಬ್ಬಳ ಜೀವನವನ್ನು ತಮಗೆ ಬೇಕಾದಂತೆ ಬಳಸಿ ಅವಳ ಜೀವನವನ್ನು ಪುನೀತಗೊಳಿಸಿದನೆಂಬ ಭಾವ ಗೋಚರವಾಗುತ್ತದೆ. ಮತ್ತು ಸುಗಂಧವನ್ನು ನೀಡುವುದೆಂದರೆ ಅವಳ ದೇಹಕ್ಕೆ ಅಥವಾ ಶೀಲಕ್ಕೆ ತೆತ್ತ ಬೆಲೆಯೇ? “ಬೆಸ್ತರ ಹೆಣ್ಣಿಗೆ ಋಷಿ ಮರುಳಾಗುವುದು, ಆ ಕಾಲದಲ್ಲಿ ಮೇಲ್ವರ್ಗದವರು ಕೆಳವರ್ಗದ ಹೆಣ್ಣುಗಳನ್ನು ತಮ್ಮ ಉಪಭೋಗದ ವಸ್ತುಗಳೆಂದು

ಭಾವಿಸಿದ್ದರ ಸಂಕೇತ. ಪರಾಶರ ಅವಳನ್ನು ಯೋಜನಗಂಧಿಯನ್ನಾಗಿ ಮಾಡಿದ ಎಂಬುದು ಕೇವಲ ಕಲ್ಪನೆ ಅಥವಾ ಅವಳು ಬೆಸ್ತ ಜೀವನವನ್ನು ತೊರೆದು ಸ್ವಲ್ಪ ಮಟ್ಟಿಗೆ ನಾಗರಿಕ ಜೀವನಕ್ಕೆ ಕಾಲಿಟ್ಟಳು ಎಂಬುದರ ಸಂಕೇತ"[೪] ಎಂದು ಎಂ.ಆರ್.ಲಕ್ಷ್ಮೀದೇವಿ ಅವರು ಮತ್ಸ್ಯಗಂಧಿ ನಾಗರೀಕ ಜೀವನಕ್ಕೆ ಮುಖಾಮುಖಿಯಾದ ನೆಲೆಯಲ್ಲಿ ಚರ್ಚಿಸುತ್ತ, ಅವಳ ಆಂತರ್ಯದ ಭಾವಾಪೇಕ್ಷೆಯನ್ನು ಕಡೆಗಣಿಸಿದ್ದಾರೆ.

ಎರಡನೆಯದು ಮಂಜಿನ ತೆರೆಯನ್ನು ನಿರ್ಮಿಸಿ ಕೂಡುವ ಸಂದರ್ಭ. ಕಾವ್ಯದಲ್ಲಿ ಈ ವರ್ಣನೆ ಕಲಾತ್ಮಕವಾಗಿದೆ. ಆದರೆ ಆ ಕಲಾತ್ಮಕತೆಯಿಂದ ಬಿಡುಗಡೆಗೊಂಡು ವಾಸ್ತವದ ನೆಲೆಯಲ್ಲಿ ನಿಂತು ಓದಿದಾಗ ಇದು ಋಷಿಯಾದವ ಜಗತ್ತಿನ ಕಣ್ಣಿಗೆ ಮಣ್ಣೆರಚುವಂತೆ ಕಾಣುತ್ತದೆ. ಜೊತೆಗೆ ತನ್ನ ಅನಾಚಾರ, ದುರಾಚಾರಗಳು ಹೊರ ಜಗತ್ತಿನ ಜನರ ಕಣ್ಣಿಗೆ ಕಾಣದಿರಲಿ ಎಂಬುದೂ ಇರಬಹುದು. ಇದನ್ನು ತಿಳಿಸಲು ಪಂಪ ಮಂಜಿನ ತೆರೆಯನ್ನು ಸಂಕೇತವಾಗಿ ಬಳಸಿದ್ದಾನೆ.

ಗಮನಿಸುವಂತಹ ಮತ್ತೊಂದು ಅಂಶ ಇವರಿಬ್ಬರೂ ಕೂಡಿದಾಗ ಜ್ಞಾನ ಸ್ವರೂಪಿಯೂ, ಮಹಾಋಷಿಯೂ ಆದ ಮಗುವಿನ ಜನನವಾಗುವ ಸಂದರ್ಭ. ಈ ರೀತಿ ಮಗು ಜನಿಸುವುದು ಅಸಂಭವವಾದರೂ ಇಡೀ ಮಹಾಭಾರತ ಕಥೆಯೆ ಸಂಭಾವ್ಯ-ಅಸಂಭಾವ್ಯಗಳ ಮೇಲೆ ನಿಂತಿರುವಂತಹದ್ದು. ಹಾಗಾಗಿ ಇಲ್ಲಿ ಅಸಂಭಾವ್ಯವು ಸಂಭಾವ್ಯವಾಗಿದೆ.

ಮುಖ್ಯವಾಗಿ ಈ ಪದ್ಯದ ಕೊನೆಯ ಸಾಲಾದ 'ದಿವ್ಯಮುನಿಗಳ್ಗೇಗೆಯ್ದೊಡಂ ತೀರದೇ' ಎಂಬ ಮಾತು ಪ್ರಸ್ತುತ ಚರ್ಚೆಗೆತ್ತಿಕೊಂಡಿರುವಂತದ್ದು. ಜೊತೆಗೆ ಮತ್ಸ್ಯಗಂಧಿಯ ಮಾನಸಿಕ ಮೊದಲಾದ ಸಂಘರ್ಷಗಳೂ ಕೂಡ ಇಲ್ಲಿಯೇ ಅಡಗಿವೆ. ಈ ಸಾಲನ್ನು ಕುರಿತು ಮೊದಲು ವಿವಿಧ ವಿದ್ವಾಂಸರು ನೀಡಿರುವ ಅರ್ಥಗಳನ್ನು ಗಮನಿಸಿ ನಂತರ ಮತ್ಸ್ಯಗಂಧಿಯ ಸಂಘರ್ಷಗಳಿಗೆ ಅಡಿಯಿಡಬಹುದು.

ಡಾ.ಡಿ.ಎಲ್.ನರಸಿಂಹಾಚಾರ್ ಅವರು ತಮ್ಮ 'ಪಂಪ ಭಾರತ ದೀಪಿಕೆ' ಎಂಬ ಕೃತಿಯಲ್ಲಿ ಈ ಸಾಲನ್ನು ಹೀಗೆ ಅರ್ಥೈಸಿದ್ದಾರೆ. "ಶ್ರೇಷ್ಠರಾದ ಋಷಿಗಳಿಗೆ ಏನು ಮಾಡಿದರೂ ಸಾಕಾಗುವುದಿಲ್ಲವೇ? ಎಂದರೆ ಏನು ಮಾಡಿದರೂ ತಡೆಯುತ್ತದೆ. ಪರವ ಇಲ್ಲ"[೫]. ಅಂದರೆ ಇಲ್ಲಿ ಶ್ರೇಷ್ಠರಾದ ಋಷಿಗಳು ಯಾವುದೇ ಕಾರ್ಯ ಮಾಡಿದರೂ ಸಹ ಅವರನ್ನು ಕೇಳುವವರು ಅಥವಾ ತಡೆಯುವವರು ಯಾರೂ ಇಲ್ಲ. ಅದು ನಡೆಯುತ್ತದೆ ಎಂಬ ಅರ್ಥವನ್ನು ಸ್ಫುರಿಸುತ್ತದೆ. ಮತ್ಸ್ಯಗಂಧಿಯ ಮಾನಸಿಕ ಸಂಘರ್ಷದ ಭಾವಗಳು ಈ ಸಾಲಿನಲ್ಲಿಯೆ ಅಡಗಿವೆ ಎಂದು ಮೊದಲೆ ಪ್ರಸ್ತಾಪಿಸಲು ಕಾರಣ ಆಕೆ ಇಲ್ಲಿ ಆತನೊಡನೆ ಪ್ರೀತಿಯಿಂದ ಅಥವಾ ಒಪ್ಪಿತವಾದ ಭಾವದಿಂದ ಕೂಡಿಲ್ಲವೆಂಬುದು ತಿಳಿಯುತ್ತದೆ. ಆತ ದೊಡ್ಡ ಮುನಿ. ಆತನ ಬಯಕೆ ಹಾಗೂ ಆಸೆಗಳಿಗೆ ವಿರೋಧವನ್ನು ವ್ಯಕ್ತಪಡಿಸಿದರೆ ಅವನ ಕೋಪ, ಶಾಪಗಳಿಗೆ ಒಳಗಾಗಬೇಕೆಂಬ ಭಯ ಸಹ ಮತ್ಸ್ಯಗಂಧಿಯಲ್ಲಿ ಮೂಡಿರಲೂಬಹುದು. ಮತ್ತೊಂದು ಆಕೆಗೆ ತನ್ನ ತಂದೆಯ ಬಗೆಗಿನ ಭಯ. ಆತನಿಗೆ ಈ ಸಂಬಂಧ ತಿಳಿದು ತನ್ನನ್ನು ಶಿಕ್ಷಿಸುವನೋ ಎಂಬ ಅಂಜಿಕೆ, ಆತಂಕಗಳು. ಈ ರೀತಿಯ ತಳಮಳ, ಗೊಂದಲ, ಭಯ, ಆತಂಕಗಳಲ್ಲೆ ಆಕೆ ಪರಾಶರನೊಂದಿಗೆ ಕೂಡಿರಬಹುದಾದ ಸಾಧ್ಯತೆಗಳಿವೆ.

ಸಾವಿರ ಜನ ಹತ್ತುವವರೆಗೂ ದೋಣಿ ನಡೆಸಲಾರೆ ಎಂದು ಧೈರ್ಯವಾಗಿ ಹೇಳುವ ಮತ್ಸ್ಯಗಂಧಿ ಅವನ ಕೂಡುವಿಕೆಯನ್ನು ಏಕೆ ನಿರಾಕರಿಸಲಿಲ್ಲ? ಅಥವಾ ವಿರೋಧಿಸಲಿಲ್ಲ? ಮುನಿಯೊಬ್ಬನೇ ಸಾವಿರ ಜನರ ತೂಕವಾಗಿದ್ದನ್ನು ಕಂಡು ಹೆದರಿ ಕೂಡಿದ್ದರೂ ಇರಬಹುದು. ಅಥವಾ ವಯೋಸಹಜ ಗುಣದಿಂದ ಅವನ ಶಕ್ತಿಗೆ ಮಾರುಹೋಗಿ ಕೂಡುವಿಕೆಗೆ ಸಹಕರಿಸಿರಬಹುದು. ಮತ್ಸ್ಯಗಂಧಿಯಲ್ಲಿ ದುರ್ಗಂಧವಿದ್ದುದರಿಂದ ಜನರು ಸಹಜವಾಗಿಯೆ ಇವಳನ್ನು ದೂರವಿಟ್ಟಿರುತ್ತಾರೆ. ಆ ಸಮಯದಲ್ಲಿ ಹತ್ತಿರವಾಗುವ ಮುನಿಯನ್ನು ವಯೋಸಹಜವಾದ ಮನೋ ಕಾಮನೆಗಳಿಂದ ಸ್ವೀಕರಿಸಿರಬಹುದಾದ ಸಾಧ್ಯತೆಗಳನ್ನೂ ಸಹ ತಳ್ಳಿಹಾಕುವಂತಿಲ್ಲ.

"ಮುನಿ ದೋಣಿಯಲ್ಲಿ ಸುತ್ತಲೂ ಮಂಜಿನ ತೆರೆ (ಕಾಂಡ ಪಟ) ಯನ್ನು ನಿರ್ಮಿಸುತ್ತಾನೆ. ಪ್ರೀತಿಯಿಂದ ಇಬ್ಬರೂ ಬೆರೆಯುತ್ತಾರೆ. ಈ ಅಮೋಘ ಸಂದರ್ಭದಲ್ಲಿ ಜ್ಞಾನಸ್ವರೂಪಿ ಮಹಾ ಮುನಿಯ ಜನನಕ್ಕೆ ಕಾರಣವಾಗುತ್ತದೆ. ದಿವ್ಯ ಮುನೀಶ್ವರ ಯಾವುದೇ ಸಮಯದಲ್ಲಿ ಕೈಗೊಳ್ಳುವ, ಯಾವುದೇ ಕಾರ್ಯವಾದರೂ ಒಪ್ಪತಕ್ಕದ್ದೇ ಸರಿ. ಎಂದು ಪಂಪನು ಸಣ್ಣಗೆ ನಗುವುದು ಅರಿವಾಗದೆ ಇಲ್ಲ"[೬] ಎನ್ನುವ ಶ್ರೀನಿವಾಸಶರ್ಮ ಎಚ್.ವಿ ಅವರ ಮಾತುಗಳಲ್ಲಿ 'ಯಾವುದೇ ಕಾರ್ಯವಾದರೂ ಒಪ್ಪತಕ್ಕದ್ದೇ ಸರಿ' ಎಂಬ ಆಲೋಚನೆ ಪುರುಷ ಪ್ರಧಾನ ಸಮಾಜವನ್ನು ಹಾಗೂ ಗಂಡಿನ 'ಡಾಮಿನೇಟ್' ಅನ್ನೇ ಪ್ರತಿಪಾದಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಇಲ್ಲಿ ಲೇಖಕರು ತಿಳಿಸುವ 'ಪಂಪನು ಸಣ್ಣಗೆ ನಗುವುದು ಅರಿವಾಗದೆ ಇಲ್ಲ' ಎಂಬ ಮಾತು ಚರ್ಚಿಸತಕ್ಕದ್ದು. ಅಂದರೆ ಮತ್ಸ್ಯಗಂಧಿಯ ಎಲ್ಲ ರೀತಿಯ ತೊಳಲಾಟ, ಸಂಘರ್ಷದ ಭಾವಗಳು ಇಲ್ಲಿ ಪಂಪನ ನಗುವಿನಲ್ಲಿ ಅಡಗಿರುವುದು ತಿಳಿಯುತ್ತದೆ. ಈ ನಗು ಸಾಮಾನ್ಯವಾದ ನಗುವಲ್ಲ. ಶತ ಶತಮಾನಗಳಿಂದಲೂ ಹೆಣ್ಣನ್ನು ಶೋಷಿಸುತ್ತಲೆ, ಭೋಗದ ವಸ್ತುವಾಗಿ ಪರಿಭಾವಿಸಿರುವಂತಹದ್ದು. ಇಲ್ಲಿ ಮತ್ಸ್ಯಗಂಧಿಯ ಒಪ್ಪಿಗೆಗೆ ಮೊದಲೇ ಬೆಲೆ ಇಲ್ಲ. ನಿರ್ಧಾರಗಳನ್ನು ಕೈಗೊಳ್ಳುವ ಅವಕಾಶಗಳಿಲ್ಲ. ವಿರೋಧಿಸಲೂ ಸಾಧ್ಯವಿಲ್ಲ. ಏಕೆಂದರೆ ಆಕೆ ಹೆಣ್ಣು. ಆ ಸಂದರ್ಭದಿಂದ ತಪ್ಪಿಸಿಕೊಳ್ಳಲು ಬೇರೆ ಮಾರ್ಗೋಪಾಯಗಳಿಲ್ಲ. ಕಾರಣ ಆತ ದೊಡ್ಡ ಮುನಿ.

ಕುಮಾರವ್ಯಾಸನಲ್ಲಿ ಈ ರೀತಿಯ ವಿಸ್ತೃತ ಚರ್ಚೆಗೆ ಅವಕಾಶವಿಲ್ಲ. ಪಂಪನು ಎರಡು-ಮೂರು ಪದ್ಯಗಳಲ್ಲಿ ಚರ್ಚೆಗೆ ಬಿತ್ತಿದ್ದ ಬೀಜವನ್ನು ಈತ ಒಂದೇ ಪದ್ಯದಲ್ಲಿ ಹೇಳಿ ಮುಗಿಸಿದ್ದಾನೆ. ಅದರ ವಿವರಗಳು ಹೀಗಿವೆ.

> "ಬಳಿಕ ಮತ್ಸ್ಯದ ಬಸುರಲುದಿಸಿದ
> ನಳಿನಲೋಚನೆ ಮತ್ಸ್ಯಗಂಧಿನಿ
> ಬೆಳೆವುತಿರ್ದಳು ಸಂಗವಾಯ್ತು ಪರಾಶರವ್ರತಿಯ
> ಬಳಿಕ ಯೋಜನಗಂಧಿಯಲ್ಲಿಂ
> ದಿಳಿದನಭ್ರಶ್ಯಾಮನುರು ಪಿಂ
> ಗಳ ಜಟಾಪರಿಬದ್ಧ ವೇದವ್ಯಾಸ ಮುನಿರಾಯ"[೭]

ಕುಮಾರವ್ಯಾಸ ಇಲ್ಲಿ ನೇರವಾಗಿ ಪರಾಶರನೊಂದಿಗೆ ಕೂಡುವ ಮತ್ತು ವ್ಯಾಸನ ಜನನದ ಸಂಗತಿಯನ್ನು ತಿಳಿಸುತ್ತಾನೆ. ('ವಿಕ್ರಮಾರ್ಜುನ ವಿಜಯ'ದಲ್ಲಿ ಭೀಮ ಮತ್ತು ಹಿಡಿಂಬೆ ಕೂಡಿದಾಗಲೂ ಸಹ ಯೌವ್ವನ ಪ್ರಾಪ್ತಿಯಾಗಿರುವ ಹದಿನಾರು ವರ್ಷದ ಘಟೋತ್ಕಚನ ಜನನವಾಗುವ ವಿವರಗಳಿವೆ)[೮] ಕುಮಾರವ್ಯಾಸ ಕವಿ ಇದನ್ನು ಹೊರತುಪಡಿಸಿ ಬೇರೆ ಯಾವುದೇ ವಿಚಾರಗಳನ್ನು ವ್ಯಕ್ತಪಡಿಸುವುದಿಲ್ಲ.

ಇದೇ ಸಂದರ್ಭದಲ್ಲಿ ಚರ್ಚಿಸಬೇಕಾದ ಮತ್ತೊಂದು ವಿಚಾರ ಪರಾಶರನು ಆಕೆಗೆ ಪುನಃ ಕನ್ಯತ್ವವನ್ನು ಕರುಣಿಸುವ ಸಂಗತಿ. ಜೊತೆಗೆ ವ್ಯಾಸನನ್ನು ತನ್ನೊಡನೆ ಕರೆದೊಯ್ಯುವ ಪ್ರಸಂಗ. ಇದು ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿ ಹೆಚ್ಚು ಕಡಿಮೆ ಒಂದೇ ರೀತಿ ವರ್ಣಿತವಾಗಿದೆ.

"ವ॥ ಅಂತು ನೀಲಾಂಬುದ ಶ್ಯಾಮನುಂ ಕನಕ ಪಿಂಗಳ ಜಟಾಬಂಧಕಳಾಪನುಂ ದಂಡ [ಕಪಾಳ] ಹಸ್ತನುಂ ಕೃಷ್ಣ ಮೃಗ[ತ್ವಕ್ಪ]ರಿಧಾನನುಮಾಗಿ ವ್ಯಾಸಭಟ್ಟಾರಕಂ ಪುಟ್ಟುವುದು ಮಾತನನೊಡಗೊಂಡು ಸತ್ಯವತಿಗೆ ಪುನಃ ಕನ್ಯಾಭಾವಮಂ ದಯೆಗೆಯ್ದು ಪರಾಶರಂ ಪೋದನ್"[೯]

ಇದು ಪಂಪನು ನೀಡುವ ವಿವರವಾದರೆ, ಕುಮಾರವ್ಯಾಸ

"ನೆನೆ ವಿಪತ್ತಿನೊಳೆಂದು ತಾಯನು
ತನುಜ ಬೀಳ್ಕೊಂಡನು ಪರಾಶರ
ಮುನಿ ಪುನಃ ಕನ್ಯತ್ವವನು ಕರುಣಿಸಿದನಾ ಸತಿಗೆ"[೧೦]

ಎಂದಿದ್ದಾನೆ. ಪಂಪನಲ್ಲಿ ವ್ಯಾಸನು ತನ್ನ ತಂದೆಯ ಜೊತೆ ಹೋಗುವಾಗ ತಾಯಿಯೊಂದಿಗೆ ಯಾವುದೇ ರೀತಿಯ ಪ್ರತಿಕ್ರಿಯೆ ನೀಡಿಲ್ಲ. ಹೇಳಿಯೂ ಸಹ ಹೋಗುವುದಿಲ್ಲ. ಆದರೆ ಕುಮಾರವ್ಯಾಸನಲ್ಲಿ ವ್ಯಾಸನು ತನ್ನ ತಾಯಿಗೆ ವಿಪತ್ತಿನ ಸಮಯದಲ್ಲಿ ತನ್ನನ್ನು ನೆನೆ ಎಂದು ಹೇಳಿ ಹೋಗುವ ಉಲ್ಲೇಖವಿದೆ. ಈ ಸಂಗತಿಗಳು ಇಬ್ಬರೂ ಕವಿಗಳ ಕಾಲಘಟ್ಟದ ಮನೋಧೋರಣೆಗಳನ್ನು ತಿಳಿಸುತ್ತವೆ. ಪಂಪನ ಕಾಲಘಟ್ಟದ ಸಮಾಜ ಕುಮಾರವ್ಯಾಸನ ಕಾಲದ ಹೊತ್ತಿಗೆ ಬದಲಾವಣೆಯ ಹಾದಿಯನ್ನು ಹಿಡಿದಿರುವುದು ಇದರಿಂದ ಸ್ಪಷ್ಟವಾಗುತ್ತದೆ. ಅಲ್ಲದೆ ಕಷ್ಟದ ಸಮಯದಲ್ಲಿ ತನ್ನನ್ನು ನೆನೆ ಎಂದು ಹೇಳುವ ಮಾತುಗಳು ಮತ್ತೆ ಪುರುಷನನ್ನೇ ಮೇಲ್ದರ್ಜೆಗೇರಿಸುವ ಚಿಂತನೆಯಾಗಿ ಕಂಡರೂ ತಾಯಿ ಮತ್ತು ಮಗನ ಬಹುಮುಖ್ಯ ಬಾಂಧವ್ಯದ ಸಂಬಂಧಗಳೂ ಇಲ್ಲಿ ಗೋಚರಿಸುತ್ತವೆ.

ಮುಂದುವರೆದು ಎರಡೂ ಕೃತಿಗಳಲ್ಲಿಯೂ ವ್ಯಾಸನನ್ನು ತನ್ನ ಜೊತೆ ಕರೆದೊಯ್ಯುವ ಹಾಗೂ ಪುನಃ ಕನ್ಯತ್ವವನ್ನು ನೀಡುವ ವಿವರಗಳಿವೆ. "ವ್ಯಾಸ ಭಾರತದಲ್ಲಿ ದ್ರೌಪದಿಯು ಒಬ್ಬರೊಡನೆ ವಿವಾಹವಾದ ನಂತರ ಮತ್ತೆ ಕನ್ಯಾವಸ್ಥೆಯನ್ನು ಪಡೆಯುತ್ತಿದ್ದಳೆಂಬ ಒಂದು ಅದ್ಭುತ ಸಂಗತಿಯು ವರ್ಣಿತವಾಗಿದೆ. ಇದಕ್ಕೆ ಕಾರಣ ಪೂರ್ವಜನ್ಮದಲ್ಲಿ ದ್ರೌಪದಿಯು ಮೌದ್ಗಲ್ಯ ಮುನಿಯ ಪತ್ನಿ 'ನಾಲಾಯನಿ'ಯಾಗಿದ್ದು, ಮಹೇಶ್ವರನಿಂದ ವರ ಪಡೆಯುವ ಸಂದರ್ಭದಲ್ಲಿ, ಇವಳು ತನಗೆ ಐವರು ಪತಿಯಂದಿರಿದ್ದರೂ, ಕನ್ಯಾವಸ್ಥೆಯನ್ನು ಹೊಂದಿರಬೇಕೆಂಬ ಆಶ್ವಾಸನೆಯನ್ನು ಪ್ರಾರ್ಥಿಸಿದ್ದಳೆಂದು

ತಿಳಿದುಬರುತ್ತದೆ"[೧೧]. ಮತ್ಸ್ಯಗಂಧಿ ಮತ್ತು ದ್ರೌಪದಿಯರ ಕನ್ಯತ್ವದ ವಿಚಾರದಲ್ಲಿ ಘಟಿಸುವ ಈ ಘಟನಾವಳಿಗಳು ಪ್ರಕೃತಿ ಸಹಜವಾದ ಕನ್ಯತ್ವವನ್ನು ಕೃತಕಗೊಳಿಸುವ ನೆಲೆಯನ್ನು ತಿಳಿಸುತ್ತದೆ. ಹಾಗೆಯೇ ಈ ಇಬ್ಬರ ತಾಯ್ತನವನ್ನು ಮರೆಮಾಚುವ ಹುನ್ನಾರಗಳೂ ಆಗಿವೆ. ದ್ರೌಪದಿ ತನ್ನ ಹಿಂದಿನ ಜನ್ಮದಲ್ಲಿ ಕನ್ಯತ್ವವನ್ನು ಅಪೇಕ್ಷಿಸುವುದು ಸ್ತ್ರೀ ಸಹಜ ಮನೋಧರ್ಮದ ವೈರುಧ್ಯವೇ ಆಗಿದೆ.

ಹೀಗೆಯೆ ಕುಮಾರವ್ಯಾಸನಲ್ಲಿ ಕುಂತಿಯು ಸೂರ್ಯನನ್ನು ಪ್ರಾರ್ಥಿಸಿ ಮಗುವನ್ನು ಬೇಡಿದಾಗ, ಸೂರ್ಯನು ತನ್ನ ತೂಕದ ಮಗನನ್ನು ಕೊಟ್ಟ ನಂತರ 'ಮುನ್ನಿನ ಕನ್ನೆತನ ಕೆಡದಿರಲಿ' ಎಂದು ಹರಸಿ, ಮರಳಿ ಆಕೆಗೆ ಕನ್ಯತ್ವವನ್ನು ನೀಡುವ ಪ್ರಸಂಗವಿದೆ.

ಪಂಪನು ಈ ವಿವರಗಳನ್ನು ತಿಳಿಸುವಾಗ 'ದಯೆಗೆಯ್ದ' ಎಂಬ ಪದವನ್ನು ಬಳಸಿದ್ದರೆ, ಕುಮಾರವ್ಯಾಸ 'ಕರುಣಿಸಿದನು' ಎಂಬ ಪದವನ್ನು ಬಳಸಿದ್ದಾನೆ. ಈ ಎರಡೂ ಪದಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ನಮಗೆ ಇಲ್ಲಿನ ಇನ್ನಷ್ಟು ಒಳಸುಳಿಗಳು ತೆರೆದುಕೊಳ್ಳುತ್ತವೆ. ಏಕೆಂದರೆ ಕನ್ಯತ್ವವನ್ನು ನೀಡುವಂತೆ ಮಗನನ್ನು ಏಕೆ ಬಿಟ್ಟು ಹೋಗಲಿಲ್ಲ. ಇದು ಮತ್ಸ್ಯಗಂಧಿಗೆ ಮಾಡುವ ಮೋಸವಲ್ಲವೆ? ಅಲ್ಲದೆ ಆಕೆಯನ್ನು ಕೇವಲ ಲೈಂಗಿಕ ತೃಷೆಗಾಗಿ ಬಳಸಿಕೊಂಡು, ತನ್ನ ಇಷ್ಟಾರ್ಥಗಳು ಈಡೇರಿದ ನಂತರ ಅವಳನ್ನು ಕೈ ಬಿಟ್ಟು ಹೋಗುವುದು ಅಧರ್ಮವಲ್ಲವೆ? ಮಗನನ್ನು ಜೊತೆಯಲ್ಲಿ ಕರೆದೊಯ್ದಂತೆ ಆಕೆಯನ್ನು ಕರೆದುಕೊಂಡು ಹೋಗಬಹುದಿತ್ತಲ್ಲವೆ? ಅಲ್ಲದೆ ಇಲ್ಲಿ ಮಗುವನ್ನು ತಾಯಿಯಿಂದ ದೂರ ಮಾಡಿದಂತಾಗಲಿಲ್ಲವೆ. ಅದಕ್ಕೆ ಆಕೆ ಮಾಡಿದ ತಪ್ಪಾದರೂ ಏನು? ಎಂಬಂತಹ ಅನೇಕ ಪ್ರಶ್ನೆಗಳು ಹುಟ್ಟುತ್ತವೆ. ಆದರೆ ಇವೆಲ್ಲ ಪ್ರಶ್ನೆಗಳಿಗೆ ಪಂಪ ಕೊಡುವ ಉತ್ತರ ಒಂದೆ, ಅದು 'ದಿವ್ಯ ಮುನಿಗಳ್ಗೇಗೆಯ್ದೊಡಂ ತೀರದೇ'. ಅಲ್ಲದೇ ಸೂಕ್ಷ್ಮವಾಗಿ ಗಮನಿಸುವಂತಹದ್ದು ಸತ್ಯವತಿಗೆ ಪುನಃ ಕನ್ಯತ್ವವನ್ನು ನೀಡುವ ಹಿಂದೆ ಪುರುಷನ ಹೆಚ್ಚುಗಾರಿಕೆಯೇ ಇದೆ. ಆತನನ್ನೆ ಮುನ್ನೆಲೆಗೆ ತರುವ ಅಂಶಗಳೂ ಅಡಗಿರುವುದು ಕಂಡುಬರುತ್ತದೆ.

ಇಲ್ಲಿ ಮತ್ಸ್ಯಗಂಧಿಯನ್ನು ಪರಾಶರ ಮುನಿ ಮೋಹಿಸಿ ಕೂಡಿದಾಗಲೂ, ಸುಗಂಧವನ್ನು ನೀಡಿದಾಗಲೂ, ಮಗನನ್ನು ಪಡೆದಾಗಲೂ, ಪುನಃ ಅವಳಿಗೆ ಕನ್ಯತ್ವ ನೀಡಿದಾಗಲೂ, ಮುನಿಯು ತನ್ನ ಮಗನನ್ನು ತನ್ನೊಂದಿಗೆ ಕರೆದುಕೊಂಡು ಹೋದಾಗಲೂ ಮತ್ಸ್ಯಗಂಧಿಯ ಯಾವುದೇ ಪ್ರತಿಕ್ರಿಯೆಗಳಿಲ್ಲ. ಅವಳನ್ನು ನಿರ್ಜೀವ ಮತ್ತು ಬಳಸಿ ಬಿಸಾಡುವ ವಸ್ತುವನ್ನಾಗಿ ಚಿತ್ರಿಸಲಾಗಿದೆ. ಇವರಿಬ್ಬರ ಪರಿಚಯದಲ್ಲಿ ಮತ್ಸ್ಯಗಂಧಿಯ ಭಾವನೆ ಮತ್ತು ಅವಳ ನಿಲುವುಗಳ ಬಗೆಗೆ ಪಂಪನು ಏನನ್ನೂ ಸ್ಪಷ್ಟಪಡಿಸಿಲ್ಲ. ಹೆಣ್ಣನ್ನು ಭೋಗದ ವಸ್ತುವಾಗಿ ಮಾತ್ರವಲ್ಲದೆ ಮಗುವನ್ನು ಹೆತ್ತು ಕೊಡುವ ಯಂತ್ರದಂತೆ ಚಿತ್ರಿಸಲಾಗಿದೆ. ಅವಳ ಕನ್ಯತ್ವದ ಬಗೆಗೆ ಮತ್ತು ತಾಯ್ತನದ ಬಗೆಗೆ ಅಲಕ್ಷ್ಯ ಧೋರಣೆ ತಳೆದಿದ್ದಾರೆ. ಕನ್ಯತ್ವ ಮರಳಿ ನೀಡುವುದು ಮತ್ತು ತಾಯಿಯಿಂದ ಮಗುವನ್ನು ಬೇರ್ಪಡಿಸುವುದು ಸ್ವಾಭಾವಿಕ ಎಂಬಂತೆ ಚಿತ್ರಿಸಲಾಗಿದೆ.

೩.೧.೧.ಆ. ಶಂತನುವಿನೊಂದಿಗಿನ ವಿವಾಹ ಮತ್ತು ಬದುಕು

ಇದುವರೆಗಿನ ಚರ್ಚೆಗಳು ಪರಾಶರನೊಂದಿಗಿನ ಆಕೆಯ ಸಂಬಂಧ ಹಾಗೂ ಅದರೊಳಗೆ ಅಡಗಿರಬಹುದಾದ ಗೌಣ ಸಂಘರ್ಷದ ಭಾವಗಳನ್ನು ಕುರಿತದ್ದಾಗಿವೆ. ನಂತರದ ಚರ್ಚೆ ಶಂತನು ಮಹಾರಾಜನೊಡನೆ ವಿವಾಹವಾಗುವ ಮತ್ತು ಆತನ ಜೊತೆಗೆ ಜೀವನ ಸಾಗಿಸುವ ಸನ್ನಿವೇಶಗಳು. ಈ ಸಂದರ್ಭ ಪಂಪ ಹಾಗೂ ಕುಮಾರವ್ಯಾಸರಿಬ್ಬರಲ್ಲಿಯೂ ಚರ್ಚಿತವಾಗಿದೆ. ಪಂಪ ಈ ರೀತಿ ತಿಳಿಸುತ್ತಾನೆ.

"ಮೃಗಯಾ ವ್ಯಾಜದಿನೊರ್ಮೆ ಶಂತನು ತೊಟಿಲ್ತರ್ಪಂ ಪಳಂಚಲ್ಕೆತ ।
ನ್ಮೃಗಶಾಬಾಕ್ಷಿಯ ಕಂಪು ತಟ್ಟೆ ಮಧು ಪಂಬೋಲ್ ಸೋಲ್ತು ಕಂಡೊಲ್ದು ನ ॥
ಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು ನೀನ್ ಬಾ ಪೋಪಮೆಂದಂಗೆ ಮೆ ।
ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ"[೧೨]

ಅಂದರೆ ಬೇಟೆಯ ನೆವದಿಂದ ಒಂದು ದಿನ ಸುತ್ತಾಡಿ ಬರುತ್ತಿದ್ದ ಶಂತನು ಮಹಾರಾಜನು ಜಿಂಕೆಯ ಕಣ್ಣಿನಂತೆ ಕಣ್ಣುಳ್ಳ ಯೋಜನಗಂಧಿಯ ವಾಸನೆಗೆ ದುಂಬಿಯಂತೆ ಸೋತು ಅವಳನ್ನು ಪ್ರೀತಿಸಿದನು. ಪ್ರೀತಿಗೆ ಸಾಕ್ಷಿ ಎಂಬಂತೆ 'ದಿವ್ಯ'[೧೩] ವನ್ನು ಹಿಡಿಯುವ ಹಾಗೆ ಅವಳ ಕೈಯನ್ನು ಹಿಡಿದುಕೊಂಡು ನೀನು ಬಾ ಹೋಗೋಣ ಎಂದ. ಆತನಿಗೆ ಮೆಲ್ಲನೆ ನಾಚಿ ಆ ಕನ್ಯೆಯು ನನ್ನನ್ನು ಬೇಡುವುದಾದರೆ ನೀವು ನನ್ನ ತಂದೆಯನ್ನು ಕೇಳುವುದು ಎಂದು ನುಡಿಯುತ್ತಾಳೆ.

ಪಂಪನ ಈ ಪದ್ಯ ಹಲವು ವಿದ್ವಾಂಸರು, ವಿಮರ್ಶಕರಿಂದ ಬಹುವಾಗಿ ಚರ್ಚೆಗೊಳಪಟ್ಟಿದೆ. ಇಲ್ಲಿ 'ನಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು', 'ನೀನ್ ಬಾ ಪೋಪಮ್', 'ತನ್ಕನ್ಯಕೆ ನಾಣ್ಚಿ', 'ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ' ಎಂಬ ಸಾಲುಗಳನ್ನು ಪ್ರಮುಖವಾಗಿ ಚರ್ಚಿಸಬೇಕಾಗಿದೆ. ಹೆಣ್ಣನ್ನು ನೋಡಿದ ತಕ್ಷಣ ಅವಳ ಮೇಲೆ ಪ್ರೀತಿ ಉಂಟಾಗುತ್ತದೆ. ಅದನ್ನು ಸಾಬೀತು ಪಡಿಸಲು ಅವಳ ಕೈಯನ್ನು ಹಿಡಿದುಕೊಳ್ಳುವುದು ಹಾಗೂ 'ನೀನು ಬಾ ಹೋಗೋಣ' ಎಂಬ ಮಾತುಗಳಲ್ಲಿ ಪ್ರಭುತ್ವದ ಹಾಗೂ ಪುರುಷಾಧಿಕಾರದ ವಾಸನೆಗಳಿರುವುದು ತಿಳಿಯುತ್ತದೆ. ಭೂಮಿಯ ಮೇಲಿರುವ ಚೆಲುವಿನ ವ್ಯಕ್ತಿ ಹಾಗೂ ವಸ್ತುಗಳೆಲ್ಲವು ರಾಜನಿಗೆ ಸೇರಿದ್ದು ಎಂಬ ಸ್ವಯಂಘೋಷಿತ ನಿಲುವಿನಲ್ಲಿರುವಂತೆ ಇಲ್ಲಿ ಶಂತನುವಿನ ವರ್ತನೆ ಕಂಡುಬರುತ್ತದೆ. 'ನೀನು ಬಾ ಹೋಗೋಣ' ಎಂಬ ಮಾತಿನಲ್ಲಿ ಇದು ತನ್ನ ವಸ್ತು, ತನಗೆ ಮಾತ್ರ ಸೇರಿದ್ದು ಎಂಬ ನಿರ್ಧಾರಿತವಾದ ಅಧಿಕಾರದ ಮುದ್ರೆಯೊತ್ತಿದ ಮನಸ್ಥಿತಿ ಇರುವುದು ಕಾಣುತ್ತದೆ. ಮುಂದಿನ ಮಾತುಗಳಾದ 'ತನ್ಕನ್ಯಕೆ ನಾಣ್ಚಿ' ಹಾಗೂ 'ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ' ಎಂಬ ಮಾತುಗಳಲ್ಲಿ ಆಕೆಯ ಮಾನಸಿಕ ಸಂಘರ್ಷದ ಜೊತೆಗೇ ದೃಢ ನಿರ್ಧಾರವೂ ಮೇಳೈಸಿರುವುದು ಕಂಡುಬರುತ್ತದೆ.

'ನಾಣ್ಚಿ' ಪದದಲ್ಲಿ ಆಕೆಯ ಮನಸ್ಸಿನ ತೊಳಲಾಟ ಹಾಗೂ ಆತ 'ನೀನು ಬಾ ಹೋಗೋಣ' ಎಂದ ತಕ್ಷಣ ಉದ್ಭವಿಸಿದ ತಲ್ಲಣ, ದಿಗ್ಭ್ರಮೆ, ಸಂತೋಷ ಹಾಗೂ ಗೊಂದಲದ ಭಾವಗಳು

ಅಡಗಿರುವುದು ತಿಳಿಯುತ್ತದೆ. ಕಾರಣ 'ನಾಚಿಕೆ' ಎಂಬುದು ಮನೋವ್ಯಾಪಾರ. ಅದು ಮನಸ್ಸಿನ ಭಾವನೆಗಳಿಗೆ ಸಂಬಂಧಿಸಿದ್ದು. ಸಹಜವಾಗಿ ಹೆಣ್ಣು ನಾಚುವುದು ತಮಗೆ ಒಪ್ಪಿತ ವಿಷಯಗಳಲ್ಲಿ. ಶಂತನು ಕೈಹಿಡಿದಾಗ ಸತ್ಯವತಿಯ ನಾಚುವಿಕೆಯು ಅವಳ ಇಷ್ಟವನ್ನು ತಿಳಿಸಿದರೆ, ತಂದೆಯನ್ನು ಕೇಳಿರೆನ್ನುವುದು ತನ್ನ ನಿರ್ಧಾರಗಳಿಗೆ ಸ್ವಾತಂತ್ರ್ಯಗಳಿಲ್ಲ ಎಂಬುದನ್ನು ತಿಳಿಸುತ್ತದೆ. ಜೊತೆಗೆ "ಕರೆದವರ ಹಿಂದೆಲ್ಲಾ ಹೋಗುವಾಕೆಯಲ್ಲ ಆಕೆ. ಪರಾಶರನೊಂದಿಗಿನ ಸಂಬಂಧದಂತೆ ಕ್ಷಣಿಕ ಸಂಬಂಧ ಆಕೆಗೆ ಬೇಡವಾಗಿದೆ. ಶಾಶ್ವತ ಸಂಬಂಧಕ್ಕೆ ತಂದೆಯ ಒಪ್ಪಿಗೆ ಬೇಕು. ಸತ್ಯವತಿ ಇಡೀ ಮಹಾಭಾರತದ ಕತೆಗೆ ಒಂದು ರೀತಿಯಲ್ಲಿ ಬೀಜವಾಗುತ್ತಾಳೆ"[೧೪] ಎಂಬ ಮಾತುಗಳು ಗಮನಿಸತಕ್ಕವು. ಏಕೆಂದರೆ ಕ್ಷಣಿಕವಾದ ಸಂಬಂಧ ಹಾಗೂ ಅದರ ಪರಿಣಾಮ ಈಗಾಗಲೇ ಆಕೆಯ ಅನುಭವಕ್ಕೆ ಬಂದಿದೆ. ಈ ಅನುಭವದ ಅರಿವಿನ ಕಾರಣವಾಗಿ ಆಕೆ ಶಾಶ್ವತವಾದ ಸ್ಥಾನ ಹಾಗೂ ಸಂಬಂಧಗಳಿಗಾಗಿ ಈ ನಿರ್ಧಾರವನ್ನು ಕೈಗೊಳ್ಳುತ್ತಾಳೆ. ಅಲ್ಲದೆ ಇಲ್ಲಿ ಸತ್ಯವತಿ ಶಂತನುವಿಗೆ ಹೇಳುವ ಮಾತುಗಳಲ್ಲಿ ಅವಳ ಪ್ರಬುದ್ಧ ಆಲೋಚನೆಯನ್ನು ಕಾಣಬಹುದು.

ಇಲ್ಲಿ ಕಂಡುಬರುವ ಮತ್ತೊಂದು ವಿಚಾರ ಪರಾಶರನೊಂದಿಗೆ ಕೂಡಿದ್ದ ಮತ್ಸ್ಯಗಂಧಿಯು ಸತ್ಯವತಿಯಾದಾಗ ಶಂತನು 'ನೀನು ಬಾ ಹೋಗೋಣ' ಎಂದಾಗ ಪ್ರೀತಿಯ ಆವೇಶದಲ್ಲಿ ಮುಳುಗಿ ಮೈಮರೆಯುವುದಿಲ್ಲ. ಸತ್ಯವತಿಯ ಈ ಆಲೋಚನೆಯು ಆಕೆಯ ಮುಂದಿನ ಆಯ್ಕೆಗಳೇನು ಎಂಬುದನ್ನು ಚರ್ಚಿಸುವಂತೆ ಮಾಡಿದೆ. ತನ್ನ ತಂದೆಯು ನೀಡುವ ಒಪ್ಪಿಗೆಯ ಮೌಲ್ಯಕ್ಕೆ ಕಾಯುತ್ತಾಳೆ. ಆಕೆಯ ಈ ನಿರ್ಧಾರದಲ್ಲಿ ದೃಢತೆಯ ಆಶಯಗಳು ಗೋಚರಿಸುತ್ತವೆ.

"ಬೇಟೆಯ ನೆವದಿಂದ ಬಂದಂತಹ ಶಂತನು ಅರಸು, ಬೆಸ್ತರ ದಾಶರಾಜನ ಮಗಳು ಸತ್ಯವತಿಯನ್ನು ಕಂಡು, ಒಲ್ದು ಕೈಹಿಡಿದು ಕರೆದಾಗ ಆಕೆ ಹಸ್ತಿನಾವತಿಯ ಅರಸನಿಗೆ ಹೇಳುವ ಮಾತು 'ಬೇಡುವಡೆ ನೀವೆಮ್ಮಯ್ಯನಂ ಬೇಡಿರೆ' ಎಂದು ಹೇಳುವ ಮೂಲಕವೇ ಶಂತನುವಿನ ರಾಜತ್ವದ ಎಲ್ಲ ಅಧಿಕಾರ, ವೈಭವಾಡಂಬರಗಳನ್ನು ನಿರಾಕರಿಸುತ್ತಾ ಆತನನ್ನು ಒಬ್ಬ 'ಸಾಮಾನ್ಯ ಮನುಷ್ಯ'ನ ನೆಲೆಗೆ ಇಳಿತರಿಸುತ್ತಾಳೆ. ಸಾಮಾನ್ಯ ಮನುಷ್ಯನೊಬ್ಬ ತನ್ನ ಒಲವನ್ನು 'ಬೇಡು'ವಂತೆ, ಆತ ತನ್ನನ್ನು ಬೇಡುವಂತೆ ಮಾಡುತ್ತಾಳೆ. ಈ ಇಡೀ ಸನ್ನಿವೇಶದಲ್ಲಿ ಕಥನವು ರಾಜತ್ವ ಮತ್ತು ಅದರ ಸರ್ವ ಪರಿವೇಷಗಳನ್ನು ಕಳಚುವ ಪ್ರಯತ್ನವನ್ನು ಕಟ್ಟಿಕೊಡುತ್ತಿದೆ. ಅಂದರೆ ಪಂಪ ಇಲ್ಲಿ ಪ್ರಭುತ್ವದ ಅಧಿಕಾರದ ಪ್ರಕ್ರಿಯೆಯನ್ನು ಭಂಜಿಸುತ್ತ, ಅದಕ್ಕೆ ಸರಿಮಿಗಿಲಾಗಿ 'ಮಾನವೀಯ'ವಾದ ಮನುಷ್ಯ ಸಂಬಂಧಗಳನ್ನು ಉದ್ದೀಪಿಸುವ ಕಾಣ್ಕೆಯೊಂದನ್ನು ಕಟ್ಟುವ ಕ್ರಿಯೆಯಲ್ಲಿ ತೊಡಗಿದ್ದಾನೆ."[೧೫] ಎಂಬ ಡಾ. ರವಿಚಲವಾದಿಯವರ ಅಭಿಪ್ರಾಯವನ್ನು ಸಂಪೂರ್ಣವಾಗಿ ಒಪ್ಪಲಾಗದು. ಇಲ್ಲಿ ಶಂತನುವಿನಿಂದ ಆಕೆಯಲ್ಲಿ ಬೇಡುವಂತೆ ಮಾಡುವ ಕ್ರಿಯೆಗಳನ್ನು ಅವರು 'ಮಾನವೀಯ'ವಾದ ಮನುಷ್ಯ ಸಂಬಂಧವೆಂದು ಕರೆದಿದ್ದಾರೆ, ಆದರೆ 'ಬೇಡುವಡೆ ನೀವೆಮ್ಮಯ್ಯನಂ ಬೇಡಿರೆ' ಎಂಬ ವಾಕ್ಯದ ಹಿಂದಿನ ವಾಕ್ಯವಾದ 'ನಲ್ಮೆಗೆ ದಿಬ್ಯಂಬಿಡಿವಂತೆವೋಲ್ ಪಿಡಿದು ನೀನ್ ಬಾ ಪೋಪಮೆಂದಂಗೆ'

ಎಂಬ ಮಾತುಗಳಲ್ಲಿ ಯಾವ ಮಾನವೀಯ ಅಂಶಗಳನ್ನು ಕಾಣಲು ಸಾಧ್ಯವಿದೆ. ಆಕೆಯ ಕೈಯನ್ನು ಹಿಡಿದು ಬಾ ಹೋಗೋಣ ಎಂದು ಕರೆಯುವುದಾದರೆ ಶಂತನುವಿನ ದೃಷ್ಟಿಯಲ್ಲಿ ಆಕೆ ಒಂದು ವಸ್ತುವೋ ಅಥವಾ ವ್ಯಕ್ತಿಯೋ ಅಥವಾ ಸರಕೋ ಎಂಬುದು ಚರ್ಚಿಸಬೇಕಾದ ಅಂಶ. ಇಲ್ಲಿ ಹೆಣ್ಣನ್ನು ಯಥಾಪ್ರಕಾರ ಪುರುಷ ಪ್ರಧಾನ ಹಾಗೂ ರಾಜಪ್ರಭುತ್ವ, ಅಧಿಕಾರದ ದರ್ಪಗಳ ಹಿನ್ನೆಲೆಯಲ್ಲಿಯೆ ಕಾಣಲಾಗುತ್ತಿದೆ ಎಂಬುದು ಸ್ಪಷ್ಟವಾಗುತ್ತದೆ. ಜೊತೆಗೆ ಒಂದು ರೀತಿಯ ಸರ್ವಾಧಿಕಾರಿ ಧೋರಣೆಯು ಕಂಡುಬರುತ್ತದೆ.

ಕುಮಾರವ್ಯಾಸ ಈ ಸನ್ನಿವೇಶವನ್ನು ವರ್ಣಿಸಿರುವ ರೀತಿ...

"ವಿನುತ ಯಮುನಾ ತೀರದಲ್ಲಿ ಮಾ
ನಿನಿಯ ಕಂಡನು ಬೇಂಟೆಯಾಡುತ
ಜನಪ ಶಂತನು ಮರುಳುಗೊಂಡನು ಮದನನೆಸುಗೆಯಲಿ"[೧೬]

ಯಮುನಾ ನದಿ ತೀರದಲ್ಲಿ ಬೇಟೆಯಾಡುತ್ತ ಬಂದ ಶಂತನು ಸತ್ಯವತಿಯನ್ನು ನೋಡಿ ಮದನನೆಸುಗೆಯಲ್ಲಿ ಮರುಳುಗೊಳ್ಳುತ್ತಾನೆ. ಇಲ್ಲಿ ಯಾವುದೇ ರೀತಿಯ ಚಿಂತನೆಗಳಿಗೆ ಅವಕಾಶವಿಲ್ಲದಿರುವುದು ತಿಳಿಯುತ್ತದೆ. ಏಕೆಂದರೆ ಆಕೆಯನ್ನು ನೋಡಿದ ತಕ್ಷಣವೇ ಮರುಳಾಗುವ ಚಿತ್ರಣಗಳು ಇಲ್ಲಿ ಕಂಡುಬರುತ್ತವೆ.

"ಪರಿಮಳದ ಬಳಿವಿಡಿದು ಬಂದೀ
ತರುಣಿಯನು ಕಂಡಾರು ನೀನೆಂ
ದರಸ ಬೆಸಗೊಳುತೆಸುವ ಕಾಮನ ಶರಕೆ ಮೈಯೊಡ್ಡಿ
ಅರಮನೆಗೆ ನಡೆಯೆನಲು ತಂದೆಯ
ಪರಮ ವಚನವಲಂಘ್ಯವೆನೆ ಕಾ
ತರಿಸಿ ಭಗ್ನ ಮನೋರಥನು ಮರಳಿದನು ಮಂದಿರಕೆ"[೧೭]

ಕುಮಾರವ್ಯಾಸನಲ್ಲಿಯು ಶಂತನು ಸತ್ಯವತಿಯನ್ನು ಪರಿಭಾವಿಸಿರುವ ಕ್ರಮ ಯಥಾಪ್ರಕಾರ ಪುರುಷ ಪ್ರಧಾನ ಸಮಾಜ ಹಾಗೂ ಸನಾತನವಾದಿ ಚಿಂತನೆಯ ಪ್ರತೀಕವೇ ಆಗಿದೆ. ಏಕೆಂದರೆ ಆಕೆಯನ್ನು ಕಂಡ ತಕ್ಷಣ ನೀನು ಯಾರು? ಎಂದು ಕೇಳಿ ಮನ್ಮಥನ ಬಾಣಗಳಿಗೆ ತನ್ನ ಮೈಯೊಡ್ಡಿದವನಾದ ಅರಸ ಹೇಳುವ 'ಅರಮನೆಗೆ ನಡೆ' ಎಂಬ ಮಾತು ಪಂಪನ 'ನೀನ್ ಬಾ ಪೋಪಮ್' ಎಂಬುದಕ್ಕೆ ಸಂವಾದಿಯಾಗಿದೆ. ಇಲ್ಲಿಯೂ ಕೂಡ ಹೆಣ್ಣನ್ನು ಭೋಗದ ವಸ್ತುವೆಂಬಂತೆ ಮತ್ತು ತನ್ನ ಖಾಸಗಿ ಆಸ್ತಿಯೆಂಬಂತೆ ಗ್ರಹಿಸಿರುವುದು ತಿಳಿಯುತ್ತದೆ. ಈ ರೀತಿಯ ಮಾತುಗಳು ಪ್ರಭುತ್ವ ಹಾಗೂ ಅಧಿಕಾರದ ಪ್ರತಿನಿಧಿಯಾದ ಒಬ್ಬ ರಾಜನಿಂದ ಬರಲು ಸಾಧ್ಯವೆ ಹೊರತು, ಸಾಮಾನ್ಯ ವ್ಯಕ್ತಿಯೊಬ್ಬ ಹೆಣ್ಣೊಬ್ಬಳನ್ನು ಕಂಡು 'ನಡೆ ಮನೆಗೆ ಹೋಗೋಣ' ಎನ್ನಲು ಸಾಧ್ಯವಿಲ್ಲ. ಏಕೆಂದರೆ ಇಲ್ಲಿ ಕೆಲಸ ಮಾಡುತ್ತಿರುವುದು ಪ್ರಭುತ್ವ. ಇದಕ್ಕೆ ಸತ್ಯವತಿ ಕೊಡುವ ಉತ್ತರ ಹಾಗೂ ಆಕೆ ನೀಡುವ ಪ್ರತಿಕ್ರಿಯೆ 'ತಂದೆಯ ಪರಮವಚನವಲಂಘ್ಯ'. ಅಂದರೆ ತಂದೆಯ ಪರಮ ವಚನವಿದೆ ಅದನ್ನು ಮೀರಲಾಗದು.

ಅಥವಾ ಆತನಿಗೆ ವಚನವನ್ನು ನೀಡಿದ್ದೇನೆ ಎಂದು ಹೇಳುತ್ತಿರಬೇಕು. ಕಾರಣ ಇಲ್ಲಿನ 'ಅಲಂಘ್ಯ' ((ಗು)ದಾಟಲಾಗದ, ಮೀರಲಾಗದ)[೧೮] ಎಂಬ ಪದ ನಮ್ಮನ್ನು ಚರ್ಚೆಗೆ ಪ್ರೇರೇಪಿಸುತ್ತದೆ. ಏಕೆಂದರೆ ಆಕೆ 'ತಂದೆಯ ಪರಮವಚನವಲಂಘ್ಯ'ವೆಂದು ಹೇಳುತ್ತಾಳೆ.

ಈ ರೀತಿ ಹೇಳಲು ಆಕೆಯು ಹಿಂದೆ ಪರಾಶರನೊಂದಿಗೆ ಸೇರಿದ್ದ ವಿವರಗಳು ಆಕೆಯ ತಂದೆಗೆ ಗೊತ್ತಾಗಿರಬೇಕು. ಹೀಗಾಗಿ ಮತ್ತೊಮ್ಮೆ ಈ ರೀತಿಯ ಘಟನೆಗಳು ಮರುಕಳಿಸದ ಹಾಗೆ ಮೀರದಂತೆ ವಚನವನ್ನು ಪಡೆದಿರಬೇಕು. ಹಾಗಾದರೆ ಅಲಂಘ್ಯವಾದ ಆ ಪರಮ ವಚನ ಯಾವುದಿರಬೇಕು? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ. ಆದರೆ ಇವು ಇಲ್ಲಿ ಅಸ್ಪಷ್ಟ. ಇವೇನೇ ಇದ್ದರೂ ಆತ 'ಅರಮನೆಗೆ ನಡೆ' ಎಂದ ತಕ್ಷಣ ಆಕೆಯ ಮನಸ್ಸಿನಲ್ಲಿ ತಳಮಳಗಳು, ಗೊಂದಲದಂತಹ ಮಾನಸಿಕ ಸಂಘರ್ಷಗಳು ಉದ್ಭವ ಆಗಿರುವುದಂತೂ ಸ್ಪಷ್ಟ ಹಾಗೂ ಸತ್ಯ. ಅಲ್ಲದೆ ಪರಾಶರನೊಂದಿಗಿನ ಕೂಡುವಿಕೆಯ ಸಂದರ್ಭ ತಂದೆಗಷ್ಟೇ ಅಲ್ಲದೆ ಸಮಾಜಕ್ಕೂ ತಿಳಿಯುವ ಸಾಧ್ಯತೆಗಳಿವೆ. ಏಕೆಂದರೆ ಸುಗಂಧವೆಲ್ಲ ಹರಡುತ್ತಿರುವಾಗ ಸಹಜವಾಗಿಯೇ ಎಲ್ಲರಲ್ಲಿಯೂ ಪ್ರಶ್ನೆ ಹಾಗೂ ಅನುಮಾನಗಳು ಮೂಡುತ್ತವೆ. ಇದು ಹೇಗೆ ಎಂದು ಎಲ್ಲರಿಗೂ ಉತ್ತರಿಸದಿದ್ದರೂ ತನ್ನ ತಂದೆಗೆ ಉತ್ತರಿಸಿರುವ ಸಾಧ್ಯತೆಗಳಿವೆ. ಹೀಗಾಗಿ ತಂದೆಯ ಒಪ್ಪಿಗೆ ಇಲ್ಲದೆ ಯಾವ ಗಂಡಸಿನೊಂದಿಗೂ ಸಂಬಂಧ ಬೆಳೆಸುವುದಿಲ್ಲ ಎಂದಿರಬಹುದು.

೩.೧.೧.೩. ಭರತ ವಂಶವನ್ನು ಮುನ್ನಡೆಸುವ ಸೂತ್ರಧಾರಿ

ಸತ್ಯವತಿಯ ಪಾತ್ರದ ಮುಂದುವರೆದ ಹಂತ ಭರತ ವಂಶವನ್ನು ಮುನ್ನಡೆಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳುವುದು. ಅದಕ್ಕಾಗಿ ಆಕೆ ತೆಗೆದುಕೊಳ್ಳುವ ನಿರ್ಣಯಗಳ ಮುಖ್ಯ ಘಟ್ಟ. ಶಂತನುವನ್ನು ವಿವಾಹವಾಗಿ ಚಿತ್ರಾಂಗದ ಹಾಗೂ ವಿಚಿತ್ರವೀರ್ಯ ಎಂಬ ಇಬ್ಬರು ಮಕ್ಕಳನ್ನು ಪಡೆಯುತ್ತಾಳೆ. ನಂತರದ ದಿನಗಳಲ್ಲಿ ಇವರಿಬ್ಬರು ನಿಧನರಾಗುತ್ತಾರೆ. ಈ ಸಂದರ್ಭವನ್ನು ಪಂಪ ಹೀಗೆ ತಿಳಿಸಿದ್ದಾನೆ.

> "...ಭೀಷ್ಮರ ಬೆಂಬಲದೊಳ್ ವಿಚಿತ್ರವೀರ್ಯನು ಮವಾರ್ಯವೀರ್ಯನುಮಾಗಿ ಕೆಲವು ಕಾಲಂ ರಾಜ್ಯಲಕ್ಷ್ಮಿಯಂ ತಾಳ್ದಿ ರಾ[ಜಯಕ್ಷ್ಮ] ತಪ್ತಶರೀರನಾತ್ಮಜ ವಿಗತಜೀವಿಯಾಗಿ ಪರಲೋಕ ಪ್ರಾಪ್ತನಾದೊಡೆ ಗಾಂಗೇಯನುಂ ಸತ್ಯವತಿಯುಮತ್ಯಂತ ಶೋಕಾನಲ ದಹ್ಯಮಾನ ಮಾನಸರ್ಕಳಾಗಿ ಆತಂಗೆ ಪರಲೋಕ ಕ್ರಿಯೆಗಳಂ ಮಾಡಿ ರಾಜ್ಯಂ ನಷ್ಟರಾ[ಜ]ಮಾದುದರ್ಕೆ ಮಮ್ಮಲ ಮಱುಗಿ ಯೋಜನಗಂಧಿ ಸಿಂಧುಪುತ್ರನನಿಂತೆಂದಳ್"[೧೯]

ಇಲ್ಲಿ ಚಿತ್ರಾಂಗದನು ಗಂಧರ್ವರೊಡನೆ ಕಾದು ಮರಣ ಹೊಂದಿದನು. ನಂತರದ ದಿನಗಳಲ್ಲಿ ವಿಚಿತ್ರವೀರ್ಯನು ಅಮರ ಸ್ತ್ರೀಯರಲ್ಲಿ ಸೇರಿದ ನಂತರ ಭರತ ವಂಶವನ್ನು ಮುನ್ನಡೆಸುವವರಾರೂ ಇಲ್ಲದೆ ಸತ್ಯವತಿ ಚಿಂತೆಗೀಡಾಗುತ್ತಾಳೆ. ತನ್ನ ಕಣ್ಣ ಮುಂದೆಯೆ ಭರತ ಕುಲ ವಾರಸುದಾರರಿಲ್ಲದೆ ನಾಶ ಹೊಂದುವುದನ್ನು ನೆನೆದು ಕಳವಳಿಸುತ್ತಾಳೆ. ಇಂತಹ ಸಂದಿಗ್ಧ ಸಂದರ್ಭದಲ್ಲಿ ಈಕೆ ತಾಳುವ

ನಿರ್ಧಾರಗಳು ಬಹು ಮುಖ್ಯವಾಗಿ ಗಮನಿಸುವಂತಹವು. ರಾಜಮಾತೆಯಾಗಿ ರಾಜ್ಯವನ್ನು ಮುನ್ನೆಡೆಸುವ ಮತ್ತು ತನ್ನ ರಾಜ್ಯದ ಭವಿಷ್ಯದ ಬಗ್ಗೆ ನಿರ್ಧಾರ ತೆಗೆದುಕೊಳ್ಳುವ ಮಹತ್ತರ ಜವಾಬ್ದಾರಿಯು ಅವಳ ಮೇಲಿರುವುದು ತಿಳಿಯುತ್ತದೆ. ಮಕ್ಕಳನ್ನು ಕಳೆದುಕೊಂಡ ದುಃಖ ಒಂದೆಡೆ, ತಮ್ಮ ವಂಶಕ್ಕೆ ವಾರಸುದಾರರಿಲ್ಲದೆ ಇರುವ ಕೊರಗು ಇನ್ನೊಂದು ಕಡೆ. ಇಂತಹ ಸ್ಥಿತಿಯಲ್ಲಿ ರಾಜ್ಯದ ಆಡಳಿತದ ಬಗ್ಗೆ ಆಲೋಚಿಸುವ ಚಿಂತನೆಗಳು ಇವಳ ದಿಟ್ಟತನವನ್ನು ತೋರಿಸುತ್ತವೆ. ಮುಂದುವರೆದು ರಾಜ್ಯವನ್ನು ಮುನ್ನಡೆಸುವಂತೆ ಭೀಷ್ಮನನ್ನು ಈ ರೀತಿಯಾಗಿ ಕೇಳಿಕೊಳ್ಳುತ್ತಾಳೆ.

"ಮಗನೆಂಬಂತು ಧರಿತ್ರಿ ನಿನ್ನನುಜರಂ ಕೈಕೊಂಡು ಮುಂ ಪೂಣ್ದ ನ
ನ್ನಿಗೆ ಬನ್ನಂ ಬರಲೀಯದಾರ್ತೆಸಗಿದೀ ವಿಖ್ಯಾತಿಯುಂ ಕೀರ್ತಿಯುಂ
ಮುಗಿಲಂ ಮುಟ್ಟಿದುದಲ್ತೆ ನಮ್ಮ ಕುಲದೊಳ್ ಮಕ್ಕಳ್ಪೆಱರ್ ನೀನೇ ಜ
ಟ್ಟಿಗನ್ನೈ ಮುನ್ನಿನೊರಂಟುವೇಡ ಮಗನೇ ಕೈಕೊಳ್ ಧರಾಭಾರಮಂ"[೨೦]

ಎಂದು ರಾಜ್ಯಭಾರವನ್ನು ವಹಿಸಿಕೊಳ್ಳುವಂತೆ ಭೀಷ್ಮನಿಗೆ ಹೇಳುವ ಮಾತುಗಳಲ್ಲಿ ಆಕೆಯ ಮನದಲ್ಲಿನ ತಳಮಳಗಳ ಅರಿವು ನಮಗಾಗುತ್ತದೆ. ಜೊತೆಗೆ ಸತ್ಯವತಿಯಲ್ಲಿಯೂ ಸಹ ಹಿಂದಿನ ಒರಟುತನಗಳು ಇಲ್ಲದಿರುವುದು ತಿಳಿಯುತ್ತದೆ. ಮುಖ್ಯವಾಗಿ ಬದಲಾಗಿರುವ ಹಾಗೂ ಬೆಳವಣಿಗೆಯನ್ನು ಹೊಂದಿರುವ ಆಕೆಯ ಮನಸ್ಥಿತಿ ನಮ್ಮ ಗಮನವನ್ನು ಸೆಳೆಯುತ್ತದೆ.

ರಾಜ್ಯವನ್ನು ಮುನ್ನಡೆಸೆಂದು ಭೀಷ್ಮನನ್ನು ಕೇಳಿಕೊಂಡಾಗ ಆತ ತಾನು ಮಾಡಿದ ಪ್ರತಿಜ್ಞೆಯನ್ನು ಯಾವುದೇ ಕಾರಣಕ್ಕೂ ಭಂಗಗೊಳಿಸುವುದಿಲ್ಲ. ಆ ಮೂಲಕ ಅಸತ್ಯಕ್ಕೆ ಒಳಗಾಗುವುದಿಲ್ಲ ಎಂದು ಖಡಾಖಂಡಿತವಾಗಿ ನುಡಿಯುತ್ತಾನೆ. ಭೀಷ್ಮನ ಸ್ಪಷ್ಟ ನಿರ್ಧಾರವನ್ನು ಅರಿತ ನಂತರ ಆಕೆ ತನ್ನ ವಂಶದ ಮುಂದುವರಿಕೆಗಾಗಿ ಬೇಕಿರುವ ಕುಡಿಗಳನ್ನು ಪಡೆಯಲು ತನ್ನ ಮೊದಲ ಮಗನಾದ ವ್ಯಾಸನನ್ನು ಸ್ಮರಿಸುತ್ತಾಳೆ.

"ವ॥ ಅಂತಚಲಿತ ಪ್ರತಿಜ್ಞಾರೂಢನಾದ ಗಾಂಗೇಯನನೇಗೆಯ್ದುಮೊಡಂಬಡಿಸಲಾಱದೆ
ಸತ್ಯವತಿ ತಾನುಮಾತನುಮಾಳೋಚಿಸಿ ನಿಶ್ಚಿತ ಮಂತ್ರರಾಗಿ ಕೃಷ್ಣದ್ವೈಪಾಯನನಂ ನೆನೆದು
ಬರಿಸಿದೊಡೆ ವ್ಯಾಸಮುನೀಂದ್ರನೇಗೆಯ್ವುದೇನಂ ತೀರ್ಚುವುದೆಂದೊಡೆ ಸತ್ಯವತಿಯಿಂತೆಂದಳ್
ಹಿರಣ್ಯಗರ್ಭ ಬ್ರಹ್ಮರಿಂ ತಗುಳ್ದವ್ಯವಚ್ಛಿನ್ನಮಾಗಿ ಬಂದ ಸೋಮವಂಶಮಿಾಗಳೆಮ್ಮ
ಕುಲಸಂತತಿಗಮಾರುಮಿಲ್ಲದೆಡೆವಱಿದು ಕಿಡುವಂತಾಗಿರ್ದುದದು ಕಾರಣದಿಂ ನಿಮ್ಮ ತಮ್ಮಂ
ವಿಚಿತ್ರವೀರ್ಯನ ಕ್ಷೇತ್ರದೊಳಂಬಿಕೆಗಮಂಬಾಲೆಗಂ ಪುತ್ರರಪ್ಪಂತು ವರಪ್ರಸಾದಮಂ
ದಯೆಗೆಯ್ವುದೆನೆ ಅಂತೆಗೆಯ್ವೆನೆಂದು"[೨೧]

ಆಕೆ ಏಕಪ್ರಕಾರವಾಗಿ ನಡೆದು ಬಂದ ನಮ್ಮ ಸೋಮವಂಶದ ಸಂತತಿಯನ್ನು ಮುನ್ನಡೆಸುವವರು ಯಾರೂ ಇಲ್ಲದೆ ನಾಶವಾಗುತ್ತದೆ. ಆದ ಕಾರಣದಿಂದ ನೀನು ನಿನ್ನ ತಮ್ಮನಾದ ವಿಚಿತ್ರವೀರ್ಯನ ಕ್ಷೇತ್ರದಲ್ಲಿ ಅಂಬಿಕೆಗೂ ಅಂಬಾಲಿಕೆಗೂ ಮಕ್ಕಳಾಗುವ ಹಾಗೆ ವರಪ್ರಸಾದವನ್ನು ಕರುಣಿಸು ಎಂದು

ಹೇಳುವ ಮಾತುಗಳು ಬಹು ಪ್ರಮುಖವಾದವು. ಏಕೆಂದರೆ ಹೆಣ್ಣು ಪುರುಷಾಧೀನದಲ್ಲಿಯೆ ಬಾಳುವ, ವ್ಯವಹರಿಸುವ ಕ್ರಮದಲ್ಲಿ ಕೃತಿಗಳು ರಚಿತವಾಗಿದ್ದರೂ ಇಲ್ಲಿ ಸತ್ಯವತಿಯ ಪಾತ್ರ ಇದನ್ನು ಮೀರಿ ನಿಲ್ಲುತ್ತದೆ. ಅಲ್ಲದೆ ಪುರುಷ ಪ್ರಧಾನ ಸಮಾಜ ಹಾಗೂ ಪುರುಷ ಹೇಳಿದ್ದನ್ನೆ ಒಪ್ಪಿತವೆಂದು ತೀರ್ಮಾನಿಸಿ ಅದನ್ನು ಕಾರ್ಯರೂಪಕ್ಕೆ ಇಳಿಸುತ್ತಿದ್ದ ಹೆಣ್ಣೊಬ್ಬಳು ಇಲ್ಲಿ ಇಡೀ ವಂಶವನ್ನು ಮುನ್ನಡೆಸುವ ಜವಾಬ್ದಾರಿಯ ಮುಂಗಾಣ್ಕೆಯಾಗಿ ಕಂಡುಬರುತ್ತಾಳೆ. ಇಲ್ಲಿ ಆಕೆ ನಿರ್ದೇಶನ ನೀಡುವ, ಆಜ್ಞಾಪಿಸುವ ಅಧಿಕಾರಸ್ಥೆಯಾಗಿ ಕಾಣುತ್ತಾಳೆ. ವ್ಯಾಸ ಇಲ್ಲಿ ಈಕೆ ಹೇಳಿದ ರೀತಿ ನಡೆದುಕೊಳ್ಳುವುದು ಗಮನಿಸುವ ಸಂಗತಿ. ಇದು ಈ ಪಾತ್ರಕ್ಕೆ ಸಿಕ್ಕಿರುವ ಹೆಚ್ಚುಗಾರಿಕೆಯೂ ಹೌದು. ಈ ಹಿನ್ನೆಲೆಯಲ್ಲಿ "ಮಹಾಭಾರತ ವೀರರ ವಂಶಜನನಿಯೆಂದು ಖ್ಯಾತಳಾದ ಸತ್ಯವತಿ ವ್ಯವಹಾರನೀತಿಯಂತೆ ನಡೆವವಳು. ನೀತಿಭಂಗವಾಗುವ ಮೊದಲಿನ ಪ್ರಸಂಗದಲ್ಲಿ ರಹಸ್ಯವನ್ನು ಕಾಪಾಡಿಕೊಂಡರೆ ಸಾಕು; ಆದರೆ ಪಾಪಪುಣ್ಯದ ಗೊಡವೆ ಬೇಡವೆಂಬ ಸಮಯನೀರೆ (Expediency) ಅವಳದಾಗಿತ್ತು. ಅವಳ ಜನ್ಮರಹಸ್ಯವು ಅದ್ಭುತಕಥೆಯಿಂದಾವೃತವಾಗಿದೆ. ದಾಶರಾಜನ ಮನೆಯಲ್ಲಿ ಬೆಳೆದ ಪರಿಸರದ ಪ್ರಭಾವದಿಂದಲೂ ಅವಳ ತಂದೆ (ಉಪರಿಚರವಸು)ಯ ಅಪ್ಸರೆಯ ಮೋಹದ ಮೂಲಕ ಜನ್ಮತಳೆದ ಅನುವಂಶಿಕತೆಯ ಪರಣಾಮವಾಗಿಯೂ ನೀತಿವಿಚಾರವನ್ನು ಅಷ್ಟಾಗಿ ತಲೆಗೆ ಹಚ್ಚಿಕೊಂಡವಳಲ್ಲ. ಅದರಿಂದ ಅನಿವಾರ್ಯ ಪರಿಸ್ಥಿತಿಯಲ್ಲಿ ಭೀಷ್ಮರು ಪ್ರತಿಜ್ಞೆಯನ್ನು ತ್ಯಜಿಸಿ, ವಿಚಿತ್ರವೀರ್ಯನ ಕ್ಷೇತ್ರದಲ್ಲಿ ಪ್ರಜೋತ್ಪತ್ತಿಯನ್ನು ಮಾಡಬೇಕೆಂದು ಒತ್ತಾಯಿಸಿದಳು"[೨೨] ಎಂಬ ಮಾತುಗಳು ಸತ್ಯವತಿಯ ವ್ಯಕ್ತಿತ್ವವನ್ನು ಪರಿಚಯಿಸುತ್ತವೆ.

ಕುಮಾರವ್ಯಾಸನಲ್ಲಿ ಈ ಸಂದರ್ಭವು ಈ ರೀತಿಯಾಗಿ ಚಿತ್ರಿತವಾಗಿದೆ.

"ಮರುಗಿ ಯೋಜನಗಂಧಿ ಚಿಂತೆಯ
ಲುಕಿದಲೊಂದು ರಾತ್ರಿಯೊ
ಳರಿದು ನೆನೆದಳು ಪೂರ್ವ ಸೂಚಿತ ಪುತ್ರಭಾಷಿತವ
ಮುರಿದ ಭರತಾನ್ವಯದ ಬೆಸುಗೆಯ
ತೆರನು ತೋರಿತೆ ಪುಣ್ಯವೆನುತೆ
ಚ್ಚರಿತು ನುಡಿದಳು ಮಗನೆ ವೇದವ್ಯಾಸ ಬಹುದೆಂದು"[೨೩]

ವಂಶ ನಿರ್ವಂಶವಾದುದರ ಬಗೆಗಿನ ಸಂಕಟಗಳು ಈಕೆಯಲ್ಲಿರುವುದು ಕಂಡುಬರುತ್ತವೆ. ವೇದವ್ಯಾಸನನ್ನು ನೆನೆದು ಆತನಿಗೆ ಈ ರೀತಿಯಾಗಿ ಹೇಳುತ್ತಾಳೆ.

"ನೆನೆದಿರೇನೌತಾಯೆ ಕೃತ್ಯವ
ನೆನಗೆ ಬೆಸಸೆನೆ ಮಗನೆ ಭಾರತ
ವಿನುತಕುಲ ಜಲರಾಶಿಯೆಡೆವರಿತುದು ವಿಚಿತ್ರನಲಿ

ತನುಜ ನೀನೇ ಬಲ್ಲೆಯೆನೆ ಕೇಳ್
ಜನನಿ ನಿಮ್ಮಡಿಯಾಜ್ಞೆಯಲಿ ಸಂ
ಜನಿಪುವೆನು ವೈಚಿತ್ರವೀರ್ಯ ಕ್ಷೇತ್ರದಲಿ ಸುತರ"[೨೪]

ಇಲ್ಲಿಯೂ ಸಹ ವ್ಯಾಸನು ಸತ್ಯವತಿಯ ಆಣತಿಯಂತೆ ನಡೆಯುವುದು ಕಂಡುಬರುತ್ತದೆ. ಇಲ್ಲಿನ ಸತ್ಯವತಿಯ ಪಾತ್ರ ಹಾಗೂ ವ್ಯಕ್ತಿತ್ವಗಳು ಬೆಳವಣಿಗೆಯ ಹಂತವನ್ನು ಕಂಡಿರುವುದು ನಮಗೆ ಗೋಚರಿಸುತ್ತದೆ. ಇಲ್ಲಿ ಸತ್ಯವತಿ ಪ್ರಭುತ್ವದ ಪ್ರತಿನಿಧಿಯಾಗಿ ವರ್ತಿಸುತ್ತಾಳೆ. ಹೆಣ್ಣು ಯಾವ ಕಾಲಕ್ಕಾದರೂ ಪರಿಸ್ಥಿತಿಗಳಿಗೆ ತನ್ನನ್ನು ಒಗ್ಗಿಸಿಕೊಂಡು, ತನಗೆ ಎದುರಾದ ಸಮಸ್ಯೆಗಳಿರಬಹುದು, ಜವಾಬ್ದಾರಿಗಳಿರಬಹುದು, ಎಲ್ಲವನ್ನೂ ಸಮರ್ಥವಾಗಿ ನಿಭಾಯಿಸುವ ಒಂದು ಶಕ್ತಿಯಾಗಿ ಪರಿಣಮಿಸುತ್ತಾಳೆ. ಪಂಪ ಹಾಗೂ ಕುಮಾರವ್ಯಾಸರಿಬ್ಬರೂ ಒಂದೆಡೆ ಬೆಸ್ತರ ಹುಡುಗಿಯಾಗಿದ್ದ ಮತ್ಸ್ಯಗಂಧಿಯನ್ನು ಕೇವಲ ಯಂತ್ರದಂತೆ ಅಥವಾ ಮೂಕ ಪ್ರಾಣಿಯಂತೆ ಚಿತ್ರಿಸಿ, ಇನ್ನೊಂದೆಡೆ ರಾಜಮಾತೆಯಾಗಿ ಸತ್ಯವತಿಯ ದಿಟ್ಟ ನಿರ್ಧಾರಗಳನ್ನೂ ನಿರೂಪಿಸಿದ್ದಾರೆ. ಅಂದರೆ ಕೆಳಜಾತಿಯ ಅಥವಾ ಸಾಮಾನ್ಯ ವರ್ಗದ ಹೆಣ್ಣು ಮಗಳಿಗೆ ಆ ದಿಟ್ಟತನ ಇರುವುದಿಲ್ಲವೆ? ಇಲ್ಲಿ ಮತ್ತದೇ ಪ್ರಭುತ್ವದ ನೆಲೆಗಟ್ಟಿನಲ್ಲಿ ಮೇಲ್‌ಸ್ತರದ ಹೆಣ್ಣು ಮಕ್ಕಳಿಗೆ ಮಾತ್ರವೇ ಇಂತಹ ಅಧಿಕಾರಗಳಿರುವಂತೆ ಭಾಸವಾಗುತ್ತದೆ. ಇಲ್ಲವೇ ತಮ್ಮ ವಂಶದ ಮುಂದುವರಿಕೆಗಾಗಿ ಅನಿವಾರ್ಯ ಸಂದರ್ಭಕ್ಕೆ ಮಾತ್ರವೇ ಹೆಣ್ಣನ್ನು ಸಮರ್ಥಳನ್ನಾಗಿ ನಿರೂಪಿಸಲಾಗಿದೆಯೇ? ವ್ಯಾಸನು ತಾಯಿಯ ಬೇಡಿಕೆಯನ್ನು ಈಡೇರಿಸುವುದು ಅವಳ ತಾಯ್ತನಕ್ಕೆ ಸಂದ ಗೌರವವಾಗಿ ಕಾಣುತ್ತದೆ. ಒಟ್ಟಿನಲ್ಲಿ ಕವಿಯು ಮತ್ಸ್ಯಗಂಧಿಯ ವ್ಯಕ್ತಿತ್ವವನ್ನು ಸಂದರ್ಭಕ್ಕೆ ತಕ್ಕಂತೆ ಬದಲಾಯಿಸುತ್ತಾ ಹೋಗಿದ್ದಾರೆ. ಪುರುಷರು ತಮ್ಮ ಅನಿವಾರ್ಯ ಸಂದರ್ಭಕ್ಕೆ ತಕ್ಕ ಹಾಗೆ ಹೆಣ್ಣನ್ನು ಹೇಗೆ ಬೇಕಾದರೂ ನಡೆಸಿಕೊಳ್ಳಬಹುದೆಂಬುನ್ನು ಮತ್ಸ್ಯಗಂಧಿಯ ಮೂಲಕ ನಿರೂಪಿಸಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗುವುದಿಲ್ಲ.

೩.೧.೨ ಕುಂತಿಯ ತಾಯ್ತನದ ಸಂಘರ್ಷಗಳು

ಪಂಪ–ಕುಮಾರವ್ಯಾಸರ ಕಾವ್ಯಗಳಲ್ಲಿನ ಸ್ತ್ರೀಯರಲ್ಲಿ ಕುಂತಿಯು ಬಹುವಿಚಿತ್ರವಾದ ಸಂಘರ್ಷಗಳ ಸಂದರ್ಭವನ್ನು ಎದುರಿಸುವವಳು. ವಿವಾಹಪೂರ್ವದಲ್ಲಿಯೆ ಮಗುವನ್ನು ಹೆತ್ತು ಆ ವಿಚಾರವನ್ನು ಸಮಾಜದೆದುರು ಧೈರ್ಯವಾಗಿ ಹೇಳಿಕೊಳ್ಳಲಾರದೆ ಮಾನಸಿಕವಾಗಿ ಕುಗ್ಗಿಹೋದವಳು. ಪಾಂಡುರಾಜನನ್ನು ಕೈಹಿಡಿದರೂ ಬಹುಬೇಗ ವೈಧವ್ಯವನ್ನು ಪಡೆದು, ತನ್ನ ಮಕ್ಕಳೊಂದಿಗೆ ಕಾಡು ಮೇಡುಗಳನ್ನು ಅಲೆಯುವ ಮೂಲಕ ಸಾಮಾನ್ಯ ಸ್ತ್ರೀಯಂತೆ ಕಷ್ಟಗಳ ಸರಮಾಲೆಯನ್ನು ಉಂಡವಳು. ಕರ್ಣನು ತಾನು ಹೆತ್ತ ಮಗ ಎಂಬುದು ತಿಳಿದ ನಂತರ ಮನದೊಳಗೆಯೇ ಕೊರಗುತ್ತ, ತನ್ನ ಉಳಿದ ಮಕ್ಕಳಿಗೂ ಆ ವಿಚಾರವನ್ನು ತಿಳಿಸಲಾರದೆ ಸಂಕಟಪಡುವ ಕುಂತಿ, ಸಮಕಾಲೀನ ಸಮಾಜದಲ್ಲಿನ ಅವಿವಾಹಿತ ತಾಯಿಯರ ಪ್ರತಿನಿಧಿಯಾಗಿ ನಮ್ಮ ಗಮನವನ್ನು ಸೆಳೆಯುತ್ತಾಳೆ. ಸಮಾಜ, ಸಂಸ್ಕೃತಿ, ಪ್ರಭುತ್ವಗಳ ಕಟ್ಟಳೆಗಳನ್ನು ಕುರಿತು ಚಿಂತಿಸುವ ಕುಂತಿ ತಾನು ಹೆತ್ತ ಮಗುವಿನ ಭವಿಷ್ಯದ ಬದುಕನ್ನು ಚಿಂತಿಸದಿರುವುದು ವಿಪರ್ಯಾಸವಾಗಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಆಕೆಯ ಸಂಘರ್ಷಗಳು ಬಹು ಆಯಾಮಗಳದ್ದಾಗಿವೆ.

ಕುಂತಿಯು "ಯದು ವಂಶದ ಶೂರರಾಜನ ಮಗಳು. ವಸುದೇವನ (ಕೃಷ್ಣನ ತಂದೆ) ಒಡಹುಟ್ಟಿದವಳು. ಶೂರ ರಾಜನ ಸೋದರತ್ತೆಯ ಮಗನಾದ ಕುಂತಿಭೋಜನು ಕುಂತಿ ದೇಶದಲ್ಲಿ ರಾಜ್ಯಭಾರ ಮಾಡುತ್ತಿದ್ದ. ಇವನಿಗೆ ಮಕ್ಕಳಿಲ್ಲವಾಗಿ ಶೂರರಾಜನ ಮಗಳಾದ ಪೃಥೆಯನ್ನು ಸಾಕು ತೆಗೆದುಕೊಂಡ. ಈ ಕಾರಣದಿಂದಲೇ ಪೃಥೆಗೆ ಕುಂತಿಯೆಂಬ ಹೆಸರು ಬಂತು"[೨೫] ಎಂಬ ಮಾತುಗಳು ಕುಂತಿಯ ವೈಯಕ್ತಿಕ ವಿವರಗಳ ಕಡೆ ಬೆಳಕು ಚೆಲ್ಲುತ್ತವೆ.

ಈಕೆ ಕುಂತಿಭೋಜನ ಮನೆಯಲ್ಲಿ ಬೆಳೆಯುತ್ತಿರುವಾಗ ಒಮ್ಮೆ ದೂರ್ವಾಸ ಮುನಿಗೆ ಈಕೆಯು ಮಾಡಿದ ಶುಶ್ರೂಷೆಯಿಂದ ಸಂತೋಷಗೊಂಡ ಆತ ಇವಳಿಗೆ ಐದು ಮಂತ್ರಾಕ್ಷರಗಳನ್ನು ಉಪದೇಶ ಮಾಡುತ್ತಾನೆ. ಈ ಮಂತ್ರಗಳನ್ನು ಪಠಿಸಿ ಅವುಗಳ ಮೂಲಕ ಆಹ್ವಾನಿಸಿದರೆ ನಿನ್ನ ಮನಸ್ಸಿಗೆ ಬಂದ ಹೋಲಿಕೆಯ ಮಕ್ಕಳನ್ನು ಪಡೆಯುತ್ತೀಯೆ ಎಂದು ಆತ ಕುಂತಿಗೆ ಹರಸಿ ಹೋಗುತ್ತಾನೆ. ಬಾಲ್ಯದ ವಯೋ ಸಹಜವಾದ ತುಂಟಾಟದ ಕಾರಣವಾಗಿ ಕುಂತಿಯು ದೂರ್ವಾಸನು ನೀಡಿದ ವರಗಳನ್ನು ಪರೀಕ್ಷೆಗೆ ಒಳಪಡಿಸುವ ಮನಸ್ಸಿನಿಂದ ಸೂರ್ಯನನ್ನು ಆಹ್ವಾನಿಸುತ್ತಾಳೆ. ಈತನಿಂದ ಮಗುವನ್ನು (ಕರ್ಣ) ಪಡೆಯುವುದು, ನಂತರ ಲೋಕದ ಅಪವಾದಗಳ ಭೀತಿಗೆ ಹೆದರಿ ಆ ಮಗುವನ್ನು ಗಂಗೆಯಲ್ಲಿ ತೇಲಿ ಬಿಡುವ ವಿವರಗಳು ತಿಳಿದುಬರುತ್ತವೆ.

ಮುಂದಿನ ದಿನಗಳಲ್ಲಿ ಕುಂತಿಯನ್ನು ಹಾಗೂ 'ಮದ್ರ'ರಾಜನ ಮಗಳಾದ ಮಾದ್ರಿಯನ್ನು ಒಂದೇ ಹಸೆಮಣೆಯಲ್ಲಿ ಪಾಂಡುರಾಜನಿಗೆ ಗಾಂಗೇಯನು ಮದುವೆ ಮಾಡಿಸುವ ವಿವರಗಳು 'ವಿಕ್ರಮಾರ್ಜುನ ವಿಜಯಂ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳಲ್ಲಿ ಕಂಡುಬರುತ್ತವೆ. ಇಲ್ಲಿ ವಯೋ ಸಹಜವಾದ ಹುಡುಗಾಟಿಕೆಯ ಕಾರಣವಾಗಿ ಸೂರ್ಯನನ್ನು ಸ್ಮರಿಸಿ ಆತನಿಂದ ಕರ್ಣನನ್ನು ಪಡೆಯುವ ಅವಿವಾಹಿತಳಾದ ಕುಂತಿ ತದನಂತರದಲ್ಲಿ ಅನುಭವಿಸುವ ಮಾನಸಿಕ ಯಾತನೆಗಳು, ತಲ್ಲಣಗಳು ಇಲ್ಲಿ ಗಮನಿಸಬೇಕಾದ ಅಂಶಗಳಾಗಿವೆ. ಈ ವಿವರಗಳನ್ನು ಪಂಪ ಹಾಗೂ ಕುಮಾರವ್ಯಾಸರು ತಮ್ಮ ಕೃತಿಗಳಲ್ಲಿ ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ಕುಂತಿಯ ಇಲ್ಲಿಯ ತಲ್ಲಣಗಳು ಅವಳೊಬ್ಬಳವು ಮಾತ್ರವೇ ಆಗಿರದೆ, ಸಮಕಾಲೀನ ಸಂದರ್ಭದಲ್ಲಿ ವಿವಾಹಪೂರ್ವದ ತಾಯ್ತನವನ್ನು ಹೊಂದುವ ಹೆಣ್ಣುಗಳ ತಲ್ಲಣಗಳೂ ಆಗಿರುವುದು ಕಂಡುಬರುತ್ತದೆ.

೩.೧.೨.ಅ. ಕರ್ಣನ ಜನನದ ಸಂದರ್ಭದ ಸಂಘರ್ಷಗಳು

'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಕುಂತಿಯ ವಿವರಗಳು ಪ್ರಥಮಾಶ್ವಾಸದ ೮೮ನೆ ಪದ್ಯದಲ್ಲಿ ಕಂಡುಬರುತ್ತವೆ. ಕುಂತಿಯು ತಾನು ದೂರ್ವಾಸನ ಶುಶ್ರೂಷೆಯಿಂದ ಪಡೆದ ಐದು ಮಂತ್ರಗಳನ್ನು ಪರೀಕ್ಷೆಗೆ ಒಳಪಡಿಸುವ ಬಾಲತನದ ಬುದ್ಧಿಯಿಂದ ಸೂರ್ಯನನ್ನು ಪ್ರಾರ್ಥಿಸುತ್ತಾಳೆ. ಪ್ರತ್ಯಕ್ಷನಾದ ಸೂರ್ಯನನ್ನು ಕಂಡ ಕುಂತಿಯ ಮನದಲ್ಲಿ ಮೂಡಿದ ಭಾವನೆಗಳನ್ನು ಪಂಪನು ಈ ರೀತಿಯಾಗಿ ತಿಳಿಸಿದ್ದಾನೆ.

"ಕೊಡಗೂಸುತನದ ಭಯದಿಂ
ನಡುಗುವ ಕನ್ನಿಕೆಯ ಬೆಮರ ನೀರ್ಗಳ ಪೊನಲೊ
ಟ್ಟುಡಿಯಲೊಡಗೂ[ಡೆ] ಗಂಗೆಯ
ಮಡು ಕರೆಗಣ್ಮಿದುದು ನಾಣ ಪೆಂಪೇಂ ಪಿರಿದೋ"[೨೬]

ತಾನಿನ್ನೂ ಕನ್ಯೆ ಎಂಬ ಭಯದಿಂದ ಆ ಕನ್ನಿಕೆಯ ಬೆವರ ಹನಿಯ ನೀರಿನ ಪ್ರವಾಹವು ತುಂಬಿ ಹರಿದು ಒಡಗೂಡಿ ಗಂಗಾ ನದಿಯ ಮಡುವೂ ದಡವನ್ನು ಮೀರಿ ಹರಿಯಿತು ಎನ್ನುತ್ತಾನೆ ಕವಿ. ಕುಂತಿ ಇಲ್ಲಿ ಭಯದಿಂದ ನಡುಗುವ ಸನ್ನಿವೇಶ ಗಮನಿಸುವಂತಹದ್ದು. ತಾನು ಮದುವೆಯಾಗದೆ ಇನ್ನೂ ಕನ್ಯೆಯಾಗಿರುವಾಗಲೆ ಮಗು (ಕರ್ಣ)ವನ್ನು ಪಡೆದದ್ದು ಆಕೆಗೆ ಅಪರಾಧದಂತೆ ಕಂಡುಬರುತ್ತದೆ. ಅಲ್ಲದೆ ಸಮಾಜದ ಕಟ್ಟಳೆಗಳಿಗೆ ತಾನು ವಿರುದ್ಧವಾಗಿ ನಡೆಯುತ್ತಿದ್ದೇನೆಂಬ ಆತಂಕ ಅವಳಲ್ಲಿ ಮೂಡಿ ಭಯದಿಂದ ನಡುಗುತ್ತಾಳೆ.

ಇಲ್ಲಿ ಗಮನಿಸುವಂತಹದ್ದು ಪಂಪನ ಕೃತಿಯಲ್ಲಾಗಲಿ, ಕುಮಾರವ್ಯಾಸನ ಕೃತಿಯಲ್ಲಾಗಲಿ ಪರಾಶರನಿಂದ ಮಗುವನ್ನು ಪಡೆದ ಮತ್ಸ್ಯಗಂಧಿ ಯಾವುದೇ ಭಯಗಳಿಗೆ ಒಳಗಾಗದೆ ಅದನ್ನು ಸಹಜವಾಗಿ ತೆಗೆದುಕೊಳ್ಳುತ್ತಾಳೆ. ಕುಂತಿಯಂತೆ ಸಮಾಜ, ಸಂಸ್ಕೃತಿಗೆ ಹೆದರುವಂತಹ, ಭಯಗೊಳ್ಳುವಂತಹ ಸನ್ನಿವೇಶಗಳು ಆಕೆಯಲ್ಲಿ ಕಂಡುಬರುವುದಿಲ್ಲ. ಜೊತೆಗೆ ಮಗುವನ್ನು ಪರಾಶರನೆ ತನ್ನ ಜೊತೆಯಲ್ಲಿ ಕೊಂಡೊಯ್ದು ಈಕೆಗೆ ಪುನಃ ಕನ್ಯತ್ವವನ್ನು ನೀಡುತ್ತಾನೆ. ನಂತರದಲ್ಲಿ ಮತ್ಸ್ಯಗಂಧಿ ತಾನು ಶಂತನುವನ್ನು ವಿವಾಹವಾಗಿ ಬದುಕನ್ನು ಮುಂದುವರೆಸುತ್ತಾಳೆ. ಇಲ್ಲೆಲ್ಲಿಯೂ ವ್ಯಾಸನಾಗಲಿ, ತಾನು ಮದುವೆಗೆ ಮುನ್ನ ಮಗುವನ್ನು ಪಡೆದ ಸಂಗತಿಗಳಾಗಲಿ ತೊಡಕಾಗುವುದಿಲ್ಲ. ಆದರೆ ಕುಂತಿಗೆ ಮಾತ್ರವೇ ಈ ರೀತಿಯ ತೊಡಕುಗಳು ಉಂಟಾಗಲು ಕಾರಣವೇನು? ತಾನು ಕೂಡ ಮತ್ಸ್ಯಗಂಧಿಯಂತೆ ಆ ಸಂದರ್ಭವನ್ನು ಸರಳವಾಗಿ ತೆಗೆದುಕೊಳ್ಳಬಹುದಿತ್ತು. ಆದರೆ ಅದರ ಬದಲು ಹೆದರಿಕೆಯಿಂದ ಮಗುವನ್ನು ಗಂಗೆಯಲ್ಲಿ ಬಿಡುವ ಪ್ರಮೇಯವೇನಿತ್ತು? ಎಂಬ ಚರ್ಚೆಯನ್ನು ಎತ್ತಿದರೆ ಪ್ರಭುತ್ವದ ನೆಲೆಗಳು ನಮಗೆ ಎದುರಾಗುತ್ತವೆ. ಮತ್ಸ್ಯಗಂಧಿಯಂತೆ ಹೆಣ್ತನದ ಅಭೀಪ್ಸೆಗಳನ್ನು ಒಳಗೊಂಡ ಕುಂತಿ ಮಾತ್ರ ಭಯದಿಂದ ನಡುಗುವ ಹಾಗೂ ತನಗೆ ಮತ್ತೆ ಕನ್ಯತ್ವ ಲಭಿಸಿದರೂ ಕೂಡ ತನ್ನ ಮುಂದಿನ ಭವಿಷ್ಯದ ದಿನಗಳನ್ನು ನೆನೆದು ಆತಂಕದಿಂದ ತಲ್ಲಣಿಸುವ ಸಂಗತಿಯಾದರೂ ಏನಿತ್ತು? ಎಂಬಂತಹ ಹಲವಾರು ಪ್ರಶ್ನೆಗಳು ಕಾಡುತ್ತವೆ.

ಈ ರೀತಿಯಾಗಿ ಹೆದರಿಕೆಯಿಂದ ನಡುಗುತ್ತ ನಿಂತಿದ್ದ ಕುಂತಿಯನ್ನು ಸೂರ್ಯನು ಸಮಾಧಾನಪಡಿಸಿ ತನ್ನನ್ನು ಬರಿಸಿದ ಕಾರಣವೇನು ಎಂದು ಕೇಳಿದನು. ಅದಕ್ಕೆ ಕುಂತಿಯು ಈ ಮುನ್ನ ದೂರ್ವಾಸನು ಕೊಟ್ಟ ಮಂತ್ರಗಳ ಫಲವನ್ನು ಪರೀಕ್ಷಿಸಲು ಅರಿಯದವಳೂ, ಭ್ರಮೆಗೊಂಡವಳೂ ಆದ ನಾನು ತಿಳಿದೋ ತಿಳಿಯದೆಯೋ ನಿನ್ನನ್ನು ಬರಮಾಡಿದೆನು ಇನ್ನು ನೀನು ಹೋಗು ಎಂದು ಬೇಡಿಕೊಳ್ಳುತ್ತಾಳೆ. ಅದಕ್ಕೆ ಸೂರ್ಯನು ನೀನು ಬೇಡಿದ ವರವನ್ನು ಕೊಡದೆ ನಾನು ತೆರಳುವುದಿಲ್ಲ. ನನ್ನ ಸಮಾನನಾದ ಮಗನು ನಿನಗೆ ಜನಿಸಲಿ ಎಂದು ನುಡಿದನು. ಆಗ

"ಒಡವುಟ್ಟಿದ ಮಣಿಕುಂಡಲ
ಮೊಡವುಟ್ಟಿದ ಸಹಜ ಕವಚಮಮರ್ದಿರೆ ತನ್ನೊಳ್
ತೊಡರ್ದಿರೆಯುಂ ಬಂದಾಕೆಯ
ನಡುಕಮನೊಡರಿಸಿದನಾಗಳಾ ಬಾಲಿಕೆಯಾ"[೨೭]

ಜೊತೆಯಲ್ಲಿಯೆ ಮಣಿಕುಂಡಲ, ಸಹಜ ಕವಚಗಳೊಂದಿಗೆ ಹುಟ್ಟಿದ ಆ ಮಗುವು ಆ ಬಾಲಿಕೆಗೆ ನಡುಕವನ್ನು ಉಂಟು ಮಾಡಿದನು ಎನ್ನುತ್ತಾನೆ ಕವಿ. ಇಲ್ಲಿ ಕವಿ ಕುಂತಿಯನ್ನು ಕುರಿತು ಬಳಸಿರುವ 'ಬಾಲಿಕೆ' ಎಂಬ ಪದ ಗಮನಿಸುವಂತಹದ್ದು. ಏಕೆಂದರೆ ಈ ಪದವು ಕುಂತಿಯ ವಿವಾಹಪೂರ್ವದ ತಾಯ್ತನವನ್ನು ಕುರಿತು ಚರ್ಚಿಸುವಂತೆ ಮಾಡುತ್ತದೆ.

"ಅಂತು ನಡನಡ ನಡುಗಿ ಜಲದೇವತೆಗಳಪ್ಪೊಡಂ ಮನಂಗಾಣ್ಬರೆಂದು ನಿಧಾನ ಮನೀಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳಿತ್ತ ಗಂಗಾದೇವಿಯುಮಾ ಕೂಸಂ ಮುಳುಗಲೀಯದೆ ತನ್ನ ತೆರೆಗಳೆಂಬ ನಳಿತೋಳ್ಗಳಿನೊಯ್ಯನೊಯ್ಯನೆ ತಳ್ಕೈಸಿ ತರೆ ಗಂಗಾತೀರದೊಳಿರ್ಪ ಸೂತನೆಂಬವಂ ಕಂಡು"[೨೮]

ಆ ರೀತಿಯಾಗಿ ಬಂದ ಮಗುವನ್ನು ನೋಡಿ ವಿಶೇಷವಾದ ಹೆದರಿಕೆಯಿಂದ ನಡುಗಿ ನನ್ನ ಮನಸ್ಸನ್ನು ಜಲ ದೇವತೆಗಳೂ ಕೂಡ ತಿಳಿದುಕೊಳ್ಳುವರು ಎಂದು ಭಾವಿಸಿ ತನ್ನಯ ನಿಧಾನ (ಐಶ್ವರ್ಯ) ವನ್ನು ಬಿಸಾಡುವಂತೆ ಆ ಮಗುವನ್ನು ಗಂಗೆಯಲ್ಲಿ ಎಸೆದು ಬರುತ್ತಾಳೆ. ಮುಂದೆ ಈ ಮಗು ಗಂಗಾ ತೀರದಲ್ಲಿದ್ದ 'ಸೂತ' ಎಂಬುವನ ಕೈಸೇರಿ 'ವಸುಷೇಣ'ನೆಂಬ ಹೆಸರನ್ನು ಪಡೆದು, ನಂತರದ ದಿನಗಳಲ್ಲಿ 'ಕರ್ಣ'ನೆಂಬ ಅಭಿದಾನದಿಂದ ಪ್ರಸಿದ್ಧನಾಗುತ್ತಾನೆ.

ಇಲ್ಲಿ ಪ್ರಧಾನವಾಗಿ ಗಮನಿಸುವಂತಹ ಸಂಗತಿಯೆಂದರೆ ಇದೇ ಕುಂತಿ ಮುಂದೆ ಪಾಂಡುವಿನಿಂದ ಪುತ್ರ ಸಂತಾನವಾಗದಿದ್ದಾಗ ತಾನು ಆತನ ಸಲಹೆಯಂತೆ 'ನಿಯೋಗ ಪದ್ಧತಿ'ಯ ಮುಖೇನ ಮಕ್ಕಳನ್ನು ಪಡೆಯುತ್ತಾಳೆ. ಸೂಕ್ಷ್ಮವಾಗಿ ಗಮನಿಸಿದರೆ ಕುಂತಿ ನಿಯೋಗಕ್ಕೆ ಒಳಪಡುವ ಸಮಯದಲ್ಲಿ ಕೂಡ ಇನ್ನೂ ಕನ್ಯೆಯಾಗಿಯೆ ಉಳಿದಿದ್ದಳೆಂಬುದು. ಏಕೆಂದರೆ ಪಾಂಡುವಿನಿಂದ ಮಕ್ಕಳನ್ನು ಪಡೆದಿಲ್ಲವೆಂದರೆ ಆಕೆ ಇನ್ನು ಕನ್ಯೆಯಾಗಿಯೇ ಉಳಿದಿದ್ದಳೆಂಬುದು ಸ್ಪಷ್ಟವಾಗುತ್ತದೆ. ಆದರೆ ನಿಯೋಗಕ್ಕೆ ಒಳಪಟ್ಟು ಮಕ್ಕಳನ್ನು ಪಡೆಯುವಾಗ ಇದ್ದ ಮುಕ್ತ ಅವಕಾಶ, ಸ್ವಾತಂತ್ರ್ಯಗಳು ಸೂರ್ಯನಿಂದ ಮಗುವನ್ನು ಪಡೆದಾಗ ಏಕೆ ಇರಲಿಲ್ಲ ಎಂಬುದು. ಏಕೆಂದರೆ ಈ ಎರಡೂ ಸಂದರ್ಭದಲ್ಲಿಯೂ ಆಕೆ ಕನ್ಯೆಯಾಗಿಯೆ ಉಳಿದಿರುವ ಸಂಗತಿಗಳು ನಮಗೆ ತಿಳಿದುಬರುತ್ತವೆ. ಹೀಗಿರುವಾಗ ಸೂರ್ಯನಿಂದ ಮಗುವನ್ನು ಪಡೆಯುವಾಗ ಸಮಸ್ಯೆ ತಂದೊಡ್ಡುವ ಸಮಾಜ, ಸಂಸ್ಕೃತಿಗಳು ನಿಯೋಗದಿಂದ ಮಕ್ಕಳನ್ನು ಪಡೆದುಕೊಳ್ಳುವಾಗ ಏಕೆ ಸಮಸ್ಯೆಯಾಗಿ ಕಾಣಲಿಲ್ಲ? ಇವೆಲ್ಲ ಸಂಗತಿಗಳನ್ನು ಗಮನಿಸಿದರೆ ಇಲ್ಲೆಲ್ಲ ಸಾಂಸ್ಕೃತಿಕ ರಾಜಕಾರಣಗಳು ಕೆಲಸ ಮಾಡುತ್ತಿರುವ ಅಂಶಗಳು ಗೋಚರಿಸುತ್ತವೆ. ಇಲ್ಲಿ ಪುರುಷ ತನ್ನ ಅನಿವಾರ್ಯ ಮತ್ತು ಅನುಕೂಲತೆಗಳಿಗೆ ತಕ್ಕಂತೆ

ಸಾಮಾಜಿಕ ಪದ್ಧತಿಗಳನ್ನು ಅಲಿಖಿತ ಶಾಸನಗಳಂತೆ ರೂಪಿಸಿಕೊಂಡಿರುವುದನ್ನು ಗಮನಿಸಬಹುದು. ಅಲ್ಲದೆ ಕುಂತಿ ತಾನು ವಿವಾಹ ಪೂರ್ವದಲ್ಲಿ ಪಡೆದ ಮಗುವಿನ ವಿವರಗಳನ್ನು ಯುದ್ಧಭೂಮಿಯ ಸಮಯದಲ್ಲಿ ಹೊರತುಪಡಿಸಿ, ಉಳಿದೆಲ್ಲಿಯೂ ಬಹಿರಂಗಪಡಿಸುವುದೇ ಇಲ್ಲ. ಇದಕ್ಕೆ ಕಾರಣಗಳೇನು? ಪಾಂಡುವಿನಿಂದ ಮಕ್ಕಳನ್ನು ಪಡೆಯಲಾಗದಿದ್ದಾಗ ಋಷಿಯಿಂದ ಪಡೆದ ಮಂತ್ರಗಳ ವಿಚಾರವನ್ನು ಕುರಿತು ಹೇಳಿಕೊಳ್ಳುವ ಕುಂತಿ ಈ ವಿಚಾರವನ್ನೇಕೆ ಪಾಂಡುವಿನಲ್ಲಿ ಪ್ರಸ್ತಾಪಿಸುವುದಿಲ್ಲ?

ಕರ್ಣನ ಜನನದ ಸಂದರ್ಭದಲ್ಲಿನ ಕುಂತಿಯ ಸಂಘರ್ಷಗಳನ್ನು ಕುಮಾರವ್ಯಾಸ ಕವಿಯು ಈ ರೀತಿಯಾಗಿ ಚಿತ್ರಿಸಿದ್ದಾನೆ. ದೂರ್ವಾಸ ಮುನಿಯಿಂದ ವರಗಳನ್ನು ಪಡೆದ ನಂತರ ಕುಂತಿಯು ಮಗುವುತನದಲ್ಲಿ ಬೊಂಬೆಯಾಟಕ್ಕೆ ನಿಜವಾದ ಮಗುವನ್ನೇ ತಾನು ತರುತ್ತೇನೆ ಎಂದುಕೊಂಡು ಒಂದು ದಿನ ಗಂಗಾತಟಕ್ಕೆ ಬಂದಳು. ಪಂಪ ಈ ಘಟನೆಯನ್ನು ವಿದ್ವತ್ಪೂರ್ಣವಾಗಿ ವಿವರಿಸಿದರೆ, ಕುಮಾರವ್ಯಾಸನಲ್ಲಿ ಜೀವಪರವಾದ ಕಾಳಜಿಯ ಕಡೆ ಹೆಚ್ಚು ಆಸಕ್ತಿ ಇರುವುದು ಕಂಡುಬರುತ್ತದೆ. ನದಿಯಲ್ಲಿ ಮಿಂದು ಮುನಿ ಉಪದೇಶಿಸಿದ ಮಂತ್ರವನ್ನು ಉಚ್ಚರಿಸಿ ಸೂರ್ಯ ದೇವನನ್ನು ಸ್ಮರಿಸಲು ಕೂಡಲೇ ಸೂರ್ಯ ಪ್ರತ್ಯಕ್ಷನಾದನು. ಆತನ ಕಿರಣ ಲಹರಿಯ ಹೊಯ್ಲಿನಲ್ಲಿ ಕುಂತಿ ಬೆಚ್ಚಿದಳು. ಆತನನ್ನು ಹಿಂದೆ ಹೋಗುವಂತೆ ಕೇಳಿಕೊಂಡಾಗ ಸೂರ್ಯನು

> "ಎನ್ನ ಬಾರದಲೇ ಋಷಿಪ್ರತಿ
> ಪನ್ನ ಮಂತ್ರವಮೋಘವದರಿಂ
> ದೆನ್ನ ತೂಕದ ಮಗನಹನು ನೀನಂಜಬೇಡೆನುತ
> ಕನ್ನಿಕೆಯ ಮುಟ್ಟಿದನು ಮುನ್ನಿನ
> ಕನ್ನೆತನ ಕೆಡದಿರಲಿಯೆನುತವೆ
> ತನ್ನ ರಥವಿದ್ದೆಡೆಗೆ ರವಿ ತಿರುಗಿದನು ವಹಿಲದಲಿ"[೨೯]

ಹೀಗೆನ್ನಬಾರದು, ಋಷಿ ಕೊಟ್ಟ ಮಂತ್ರಗಳು ಅಮೋಘವಾದವು. ಆದುದರಿಂದ ನಿನಗೆ ನನ್ನ ತೂಕದ ಮಗನನ್ನು ನೀಡುವೆನೆಂದು ತಿಳಿಸಿ, ನೀನು ಅಂಜಬೇಡ ಎಂದು ಆ ಕನ್ನಿಕೆಯನ್ನು 'ಮುಟ್ಟಿದನು ಮುನ್ನಿನ ಕನ್ನೆತನ ಕೆಡದಿರಲಿಯೆನುತವೆ' ಎನ್ನುತ್ತಾನೆ ಕವಿ. ಆ ಮಗುವನ್ನು ಕಂಡ ಕುಂತಿ ಬೆರಗಿನೊಳಿದ್ದಳು. ನಂತರ

> "ಅಳುವ ಶಿಶುವನು ತೆಗೆದು ತೆಕ್ಕೆಯ
> ಪುಳಕ ಜಲದಲಿ ನಾದಿ ಹರುಷದ
> ಬಳಿಯ ಲಜ್ಜೆಯ ಭಯದ ಹೋರಟೆಗಳುಕಿ ಹಳುವಾಗಿ
> ಕುಲದ ಸಿರಿ ತಪ್ಪುವುದಲಾ ಸಾ
> ಕಿಳುಹ ಬೇಕೆಂದೆನುತ ಗಂಗಾ
> ಜಲದೊಳಗೆ ಹಾಯ್ಕಿದಳು ಜನದಪವಾದ ಭೀತಿಯಲಿ"[೩೦]

ಅಳುತ್ತಿರುವ ಶಿಶುವನ್ನು ಎತ್ತಿ ತಬ್ಬಿಕೊಂಡು ತೆಕ್ಕೆಯ ಪುಳಕ ಜಲದಲ್ಲಿ ನಾದಿದಳು. ಹರುಷ, ಲಜ್ಜೆ, ಭಯಗಳು ಅವಳ ಮನವನ್ನು ಆವರಿಸಿದವು. ಇವುಗಳಿಂದ ಬಳಲಿ ಹೋದ ಕುಂತಿಯು ಕುಲದ ಸಿರಿ ತಪ್ಪುವುದಲ್ಲಾ ಎಂದು ಯೋಚಿಸಿ ಸಾಕು ಇನ್ನು ಈ ಮಗುವನ್ನು ಬಿಡಬೇಕೆಂದು ತೀರ್ಮಾನಿಸುತ್ತಾಳೆ. ಅಲ್ಲದೆ ತಾನು ಈ ಮಗುವನ್ನು ತನ್ನ ಬಳಿಯಲ್ಲಿಯೇ ಇಟ್ಟುಕೊಂಡರೆ ಜನದ ಅಪವಾದವನ್ನು ಎದುರಿಸಬೇಕಾಗುವುದಲ್ಲ ಎಂಬ ಭೀತಿಯಿಂದ ಆ ಮಗುವನ್ನು ಗಂಗಾ ಜಲದೊಳಗೆ ಹಾಕಿದಳು. ಕವಿ ಇಲ್ಲಿ ಕುಂತಿ ಮಗುವನ್ನು ತ್ಯಜಿಸಲು ಬಹುಮುಖ್ಯವಾದ ಎರಡು ಕಾರಣಗಳನ್ನು ನೀಡುತ್ತಾನೆ. ಒಂದು – ಕುಲದ ಸಿರಿ ತಪ್ಪುತ್ತದೆ. ಎರಡು – ಜನದ ಅಪವಾದ ಭೀತಿಯನ್ನು ಎದುರಿಸಬೇಕಾಗುತ್ತದೆ ಎಂಬವು.

ಕವಿಯೆ ಇಲ್ಲಿ ತಿಳಿಸಿರುವಂತೆ ಸೂರ್ಯ ಆಕೆಯ ಕನ್ನೆತನ ಕೆಡದಿರುವಂತೆ ಅವಳನ್ನು ಮುಟ್ಟಿದ್ದಾನೆ. ಹಾಗೂ ಅವಳಿಗೆ ಪುನಃ ಕನ್ಯತ್ವವನ್ನು ನೀಡಿರುವಾಗ ಆಕೆಗೆ ಈ ಭೀತಿಗಳು ಕಾಡಲು ಸಕಾರಣಗಳಿಲ್ಲ. ಒಂದೊಮ್ಮೆ ಮದುವೆಗೆ ಮುಂಚೆ ಮಗುವನ್ನು ಪಡೆದಿದ್ದೇನೆ ಎಂಬ ಭಯ, ಆತಂಕಗಳು ಆಕೆಯಲ್ಲಿವೆಯಾದರೂ ಕೂಡ ಅದು ಆಕೆ ಉದ್ದೇಶಪೂರ್ವಕವಾಗಿ ಪಡೆದದ್ದಲ್ಲ. ಕವಿಯೆ ಹೇಳುವಂತೆ ಮಗುವುತನದಲಿ ಪಡೆದದ್ದು. ಎಲ್ಲಕ್ಕಿಂತ ಮುಖ್ಯವಾಗಿ ನಿಯೋಗತನದ ಮೂಲಕ ಪತಿಯಲ್ಲದವರಿಂದ ಮಕ್ಕಳನ್ನು ಪಡೆದಾಗ ಬಾರದ ಭೀತಿ ಇಲ್ಲಿ ಸೂರ್ಯನಿಂದ ಮಗುವನ್ನು ಪಡೆದಾಗ ಬರಲು ಕಾರಣವೇನೆಂಬುದು ಗಮನಿಸುವ ಸಂಗತಿ. ಒಂದು ವೇಳೆ ನಿಯೋಗ ಪದ್ಧತಿಯನ್ನು ಆ ಕಾಲದ ಸಮಾಜ ಒಪ್ಪಿಕೊಂಡಿತ್ತು ಎನ್ನುವುದಾದರೆ ಮತ್ಸ್ಯಗಂಧಿ ಹೆತ್ತ ವ್ಯಾಸನನ್ನು ಒಪ್ಪಿಕೊಂಡ ಸಮಾಜ ಕುಂತಿಯು ಹಡೆದ ಕರ್ಣನನ್ನು ಏಕೆ ಒಪ್ಪಿಕೊಳ್ಳಲಿಲ್ಲ. ಆತನನ್ನು ಸೂತಪುತ್ರನೆಂದು ಜರಿಯಲು ಕಾರಣವೇನು? ಜನರ ಅಪವಾದ ಭೀತಿ ಮತ್ಸ್ಯಗಂಧಿಗಿಂತ ಕುಂತಿಯನ್ನು ಹೆಚ್ಚಾಗಿ ಕಾಡಲು ಕಾರಣವೇನು? ಎಂಬ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳದ ಹೊರತು ಈ ಸನ್ನಿವೇಶಗಳನ್ನು ಅರ್ಥೈಸಿಕೊಳ್ಳಲು ಸಾಧ್ಯವಿಲ್ಲ. ಮುಂದುವರೆದು ಕುಂತಿಯು

"ತಾಯೆ ಬಲ್ಲಂದದಲಿ ಕಂದನ
ಕಾಯಿ ಮೇಣ್ ಕೊಲ್ಲೆನುತ ಕಮಲ ದ
ಳಾಯತಾಕ್ಷಿ ಕುಮಾರಕನ ಹಾಯ್ಕಿದಳು ಮಡುವಿನಲಿ"[೩೧]

ತಾಯೇ, ಈ ಕಂದನನ್ನು ಕಾಪಾಡು ಇಲ್ಲವೇ ಕೊಲ್ಲು ಎನ್ನುತ್ತ, ಗಂಗೆಯನ್ನು ಪ್ರಾರ್ಥಿಸಿ ಆ ಮಗುವನ್ನು ಮಡುವಿನಲ್ಲಿ ಹಾಕುತ್ತಾಳೆ. ಇಲ್ಲಿ ಪ್ರಧಾನವಾಗಿ ಗಮನಿಸುವಂತಹದ್ದು ಕುಂತಿ ಜನದಪವಾದ ಹಾಗೂ ಕುಲದ ಸಿರಿ ತಪ್ಪುವ ಕಾರಣವಾಗಿ ಆ ಮಗುವನ್ನು ತ್ಯಜಿಸುವುದು ಕಂಡುಬರುತ್ತದೆ. ನಂತರದ ದಿನಗಳಲ್ಲಿ ಗಾಂಗೇಯನು 'ಕುಂತಿ' ಹಾಗೂ ಮದ್ರ ರಾಜನ ಮಗಳೂ, ಶಲ್ಯನ ಒಡಹುಟ್ಟಿದವಳೂ ಆದ 'ಮಾದ್ರಿ' ದೇವಿಯನ್ನು ಒಂದೇ ಹಸೆಯಲ್ಲಿ ಪಾಂಡುರಾಜನಿಗೆ ಮದುವೆ ಮಾಡುತ್ತಾನೆ.

"ಪಂಪಭಾರತದ ಕುಂತಿ ಕಠಿಣ ಹೃದಯಳು. ಮಗುವನ್ನು ಗಂಗೆಯಲ್ಲಿ ಹಾಗೆಯೇ ಈಡಾಡಿ ಬಂದಳು. ಇಲ್ಲಿ ಶಿಶು ಸತ್ತರೂ ಸಾಯಲೆಂಬ ಭಾವವಿದ್ದಂತಿದೆ"[೩೨] ಎಂಬ ಎಲ್.ಆರ್.ಹೆಗಡೆಯವರ ಮಾತುಗಳಲ್ಲಿ ತಾಯ್ತನವನ್ನರಿಯದ ಆಲೋಚನೆಗಳನ್ನು ಕಾಣಬಹುದು. ಯಾವುದೇ ಹೆಣ್ಣು ಸಮಾಜದ ಇತರ ಎಲ್ಲಾ ಸಂಬಂಧಗಳೊಟ್ಟಿಗೆ ನಡೆದುಕೊಳ್ಳುವಷ್ಟು ಕಠಿಣವಾಗಿ ತನ್ನ ಕರುಳ ಬಳ್ಳಿಯೊಂದಿಗೆ ನಡೆದುಕೊಳ್ಳಲಾರಳು ಎಂಬುದನ್ನು ಹೆಗಡೆಯವರು ಅರಿಯದವರೇನಲ್ಲ. ಆದರೆ ಕುಂತಿಯ ಬಗೆಗಿನ ಅವರ ಈ ವ್ಯಾಖ್ಯಾನ ಪುರುಷಾಲೋಚನೆಯ ನೆಲೆಯಲ್ಲಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಏಕೆಂದರೆ ಇದೇ ಪುರುಷ ಪ್ರಧಾನ ಸಮಾಜ ಅವಳ ತಾಯ್ತನದ ಮುಕ್ತತೆಯನ್ನು ಮರೆಮಾಚುವಂತೆ ಮಾಡಿದ್ದು. ವೈವಾಹಿಕ ಬದುಕು ಮತ್ತು ತಾಯ್ತನವನ್ನು ಸಮೀಕರಿಸಿರುವುದೇ ನಮ್ಮ ಆಲೋಚನೆಯ ತೊಡಕು. ಈ ತೊಡಕಿನಲ್ಲಿಯೆ ಹೆಗಡೆಯವರು ಕಠಿಣ ಹೃದಯದವಳೂ ಮತ್ತು ಈಡಾಡಿ ಬಂದಳು ಎಂಬ ನೆಲೆಯಲ್ಲಿ ಯೋಚಿಸಿರುವಂತಿದೆ.

೩.೧.೨.ಆ. ಮಕ್ಕಳನ್ನು ಪಡೆಯುವಾಗಿನ ಸಂದರ್ಭದಲ್ಲಿನ ಸಂಘರ್ಷಗಳು.

ಪಾಂಡುವನ್ನು ವಿವಾಹವಾದ ನಂತರ ಒಮ್ಮೆ ಪಾಂಡುವು ತೋಹಿನ ಬೇಂಟೆಗೆಂದು ಕಾಡಿಗೆ ಹೋಗಿ 'ಕಿಂದಮ' ಎಂಬ ಋಷಿಯಿಂದ ಶಾಪಗ್ರಸ್ಥನಾಗುತ್ತಾನೆ. ಇದರಿಂದ ಉಂಟಾದ ದುಃಖದಿಂದ ಆತನು ಅರಮನೆಯನ್ನು ತ್ಯಜಿಸಿ ಕಾಡಿಗೆ ಬಂದು ತಪೋವನದಲ್ಲಿ ಆಶ್ರಮದ ಗುರುವಿನಂತೆ ಕಾಲ ಕಳೆಯುತ್ತಿದ್ದನು. ಇತ್ತ ಧೃತರಾಷ್ಟ್ರನ ಮಹಾರಾಣಿಯಾದ ಗಾಂಧಾರಿಯು ನೂರು ಮಕ್ಕಳನ್ನು ಪಡೆಯುವಂತೆ ವ್ಯಾಸ ಮಹರ್ಷಿಯಿಂದ ವರವನ್ನು ಪಡೆದಳು ಎಂಬುದು ಕುಂತಿಗೆ ತಿಳಿಯುತ್ತದೆ. ಆ ಸಂದರ್ಭವನ್ನು ಪಂಪ ಹೀಗೆ ವಿವರಿಸಿದ್ದಾನೆ.

> "ಎಂದು ಮೆಚ್ಚುತ್ತುಮೆನಗೆ ನೆಲಸಿರಲೀ ತಪೋವನಮೆ ಪಾವನಮೆಂದು ತಪೋವನದ
> ಮುನಿಜನದ ಪರಮಾನುರಾಗಮಂ ಪೆರ್ಚಿಸಿ ಕಾಮಾನುರಾಗಮಂ ಬೆರ್ಚಿಸಿ
> ತದಾಶ್ರಮದೊಳಾಶ್ರಮಕ್ಕೆ ಗುರುವಾಗಿ ಪಾಂಡುರಾಜನಿರ್ಪನ್ನೆಗಮಿತ್ತ ಧೃತರಾಷ್ಟ್ರನ
> ಮಹಾದೇವಿಯಪ್ಪ ಗಾಂಧಾರಿ ನೂರ್ವರ್ಮಕ್ಕಳಂ ಪಡೆವಂತು ಪರಾಶರ ಮುನೀಂದ್ರನೊಳ್
> ಬರಂಬಡೆದಳೆಂಬುದಂ ಕುಂತಿ ಕೇಳ್ದು ತಾನುಂ ಪುತ್ರಾರ್ಥಿನಿಯಾಗಲ್ ಬಗೆದು"[೩೩]

ಈ ರೀತಿ ಇರುವಾಗ ಧೃತರಾಷ್ಟ್ರನ ಮಹಾದೇವಿಯಾದ ಗಾಂಧಾರಿಯು ನೂರು ಜನ ಮಕ್ಕಳನ್ನು ಪಡೆಯುವಂತಹ ವರವನ್ನು ಪರಾಶರನಿಂದ ಪಡೆದಳು ಎಂಬುದನ್ನು ಕುಂತಿಯು ಕೇಳಿ ತಿಳಿದು ತಾನೂ ಕೂಡ ಮಕ್ಕಳನ್ನು ಪಡೆಯಲು ಬಯಸುತ್ತಾಳೆ. ಈ ಸನ್ನಿವೇಶ ಮಾತ್ಸರ್ಯಕ್ಕೆ ಮೊದಲ ಬುನಾದಿಯಾಗಿ ಕೌರವ ಮತ್ತು ಪಾಂಡವರ ಜನನದ ಸಂದರ್ಭಗಳನ್ನು ತಿಳಿಸುತ್ತದೆ. ಇಲ್ಲಿ ಕುಂತಿಯ ಮನಸ್ಸಿನಲ್ಲಿ ಮೂಡುವ ಭಾವನೆಗಳು ಏಕ ಕಾಲದಲ್ಲಿ ಹೆಣ್ಣೊಬ್ಬಳ ತಾಯ್ತನದ ಸಹಜ ಅಭಿಲಾಷೆಯನ್ನು ವ್ಯಕ್ತಪಡಿಸುತ್ತವೆ. ಗಾಂಧಾರಿ ತನಗಿಂತ ಮೊದಲೆ ಮಕ್ಕಳನ್ನು ಹೆರುತ್ತಾಳಲ್ಲ ಎಂಬ ಮತ್ಸರದ ಭಾವಗಳು ಕುಂತಿಯಲ್ಲಿ ಉಂಟಾದದ್ದನ್ನು ಗಮನಿಸಿದರೆ ತಾಯ್ತನದ ಹೆಬ್ಬಯಕೆಯ

ಜೊತೆಗೆ ಅಧಿಕಾರದ ಭಾವಗಳೂ ಅವಳಲ್ಲಿ ಮೂಡಿರುವುದು ವ್ಯಕ್ತವಾಗುತ್ತದೆ. ಇದು ಮಾತೆಯಾಗುವುದರ ಜೊತೆಗೆ ರಾಜಮಾತೆಯಾಗುವ ಹಂಬಲ. ಅದರಂತೆಯೆ ತನಗಿಂತಲೂ ಮೊದಲೆ ಮಕ್ಕಳನ್ನು ಹಡೆಯುವಳಲ್ಲ ಎಂಬ ಮತ್ಸರದ ಭಾವನೆಗಳ ಹೊಯ್ದಾಟವು ಗಮನಿಸುವಂತಹದ್ದು.

ಈ ರೀತಿಯ ಭಾವ ವ್ಯಾಪಾರದಲ್ಲಿ ತೊಡಗಿದ ಕುಂತಿಯು

"ವಿಕಸನದೊಳ್ ವಿರೋಧಿ ನೃಪರಂ ತಱಿದೊಟ್ಟಲುಮರ್ಥಿಗರ್ಥಮಂ
ಕಸವಿನ ಲೆಕ್ಕಮೆಂದು ಕುಡಲುಂ ವಿಪುಳಾಯತಿಯಂ ದಿಗಂತದೊಳ್
ಪಸರಿಸಲುಂ ಕರಂ ನೆಱೆವ ಮಕ್ಕಳನೀಯದೆ ನೋಡೆ ನಾಡೆ ನೋ
ಯಿಸಿದಪುದಿಕ್ಷು ಪುಷ್ಪದವೊಲೆನ್ನಯ ನಿಷ್ಫಲ ಪುಷ್ಪದರ್ಶನಂ"[೩೪]

ಇಲ್ಲಿ ಎಂತಹ ಮಕ್ಕಳನ್ನು ಹಡೆಯಬೇಕೆಂಬ ಬಯಕೆಯು ಅವಳಲ್ಲಿರುವುದನ್ನು ನಾವು ಗಮನಿಸಬಹುದು. ಯುದ್ಧಭೂಮಿಯಲ್ಲಿ ವಿರೋಧಿ ರಾಜರನ್ನು ಕತ್ತರಿಸಿ ರಾಶಿ ಹಾಕುವ ಸಾಮರ್ಥ್ಯವುಳ್ಳ ಅರ್ಥಿಗಳಿಗೆ ದ್ರವ್ಯವನ್ನು ಕಸಕ್ಕೆ ಸಮನಾಗಿ ಎಣಿಸಿ ನೀಡುವಂತಹ ಸಮರ್ಥ ಮಕ್ಕಳನ್ನು ಕೊಡದೆ ನೋಡು ನೋಡುತ್ತಿರುವ ಹಾಗೆಯೇ ನನ್ನ ರಜಸ್ವಲೆತನವು ಕಬ್ಬಿನ ಹೂವಿನಂತೆ ನಿಷ್ಫಲವಾಯಿತು ಎಂಬ ಚಿಂತೆಯಿಂದ ಕೂಡಿದವಳಾಗುತ್ತಾಳೆ ಕುಂತಿ. ಇಲ್ಲಿ ಆಕೆ ಹೇಳುವ 'ಇಕ್ಷುಪುಷ್ಪದವೊಲೆನ್ನಯ ನಿಷ್ಫಲ ಪುಷ್ಪದರ್ಶನಂ' ಎಂಬ ಸಾಲು ವೈದ್ಯಕೀಯ ಪರಿಭಾಷೆಯ ಹಿನ್ನೆಲೆಯಲ್ಲಿ ಚರ್ಚೆಗೆ ಈಡುಮಾಡುತ್ತದೆ. ಕಬ್ಬಿನ ಜೊಲ್ಲೆಯಂತೆ ತಾನೂ ಕೂಡ ಮಕ್ಕಳನ್ನು ಹಡೆಯಲು ದೈಹಿಕವಾಗಿ ಸಮರ್ಥಳಿದ್ದೇನೆ. ಕಬ್ಬು ಹೂವು ಬಿಡುವ ಮೊದಲು ಅಥವಾ 'ಸೂಲಂಗಿ' ಒಡೆಯುವ ಮುನ್ನ ಅದನ್ನು ಕತ್ತರಿಸಿದರೆ ಬಳಕೆಗೆ ಬರುತ್ತದೆ. ಒಂದು ವೇಳೆ ಹೂ ಬಿಟ್ಟರೆ ಅದು ಪ್ರಯೋಜನಕ್ಕೆ ಬರುವುದಿಲ್ಲ. ಕಬ್ಬಿನ ಹೂವಿನ ರೀತಿಯೇ ನನ್ನ ರಜಸ್ವಲೆತನವು ಕೂಡ ನಿಷ್ಪ್ರಯೋಜಕವಾಗಿ ನಾನು ಮಕ್ಕಳನ್ನು ಹಡೆಯಲಾರದವಳಾಗುತ್ತೇನೆ ಎಂಬ ಆತಂಕದ ಭಾವ ಆಕೆಯಲ್ಲಿರುವುದು ಈ ಸಂದರ್ಭದಲ್ಲಿ ಕಂಡುಬರುತ್ತದೆ.

'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಲ್ಲಿಯೂ ಕಿಂದಮ ಋಷಿಯಿಂದ ಪಾಂಡುರಾಜನು ಶಾಪಗ್ರಸ್ತನಾಗಿ ಅರಣ್ಯವನ್ನು ಸೇರುವ ಸಂದರ್ಭವಿದೆ. ಈ ರೀತಿ ಅರಣ್ಯ ಸೇರಿದ ಪಾಂಡುವು ಪರಮ ವೈರಾಗ್ಯ ನಿಧಿಯಾಗಿ ಭಗವದ್ಧ್ಯಾನ ಮಾಡುತ್ತಿದ್ದರೆ ಇತ್ತ ಕುಂತಿ ಹಾಗೂ ಮಾದ್ರಿಯರು ದುಃಖದಿಂದ ಮರುಗುತ್ತಿದ್ದರು. ಒಂದು ಕಡೆ ಪತಿಯಿಂದ ದೊರಕಬೇಕಾದ ದಾಂಪತ್ಯ ಸುಖ ಹಾಗೂ ದೈಹಿಕ ಸುಖಗಳಿಂದ ವಂಚಿತವಾದ ನೋವು, ಮತ್ತೊಂದು ಕಡೆ ರಾಜ್ಯ, ವೈಭೋಗಗಳನ್ನು ಬಿಟ್ಟು ಅರಣ್ಯದಲ್ಲಿರುವ ದುಗುಡ. ಇನ್ನೊಂದು ಕಡೆ ತಾಯ್ತನಕ್ಕಾಗಿ ಹಪಹಪಿಸುತ್ತಿರುವ ಮಾನಸಿಕ ತುಮುಲಗಳ ಹೊಯ್ದಾಟಗಳು. ಇವುಗಳನ್ನು ಕವಿ ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದ್ದಾನೆ.

"ನಾರಿಯರು ಮರುಗಿದರಕಟ ಮುದಿ
ಹಾರುವನ ತನಿಬೇಂಟೆ ನಮ್ಮಯ
ಬೇರುಗೊಲೆಯಾಗಿರ್ದುದೇ ಹಾಯೆನುತ ಬಿಸುಸುಯ್ದು

ವಾರಿಜಾನನೆ ಕುಂತಿ ಮೆಲ್ಲನೆ
ಸಾರಿದಳು ನಯದಲಿ ರಹಸ್ಯದ
ಲಾರುವರಿಯದವೋಲು ಬಿನ್ನಹ ಮಾಡಿದಳು ಪತಿಗೆ"[೩೫]

ಅಯ್ಯೋ ! ಆ ಮುದಿ ಹಾರುವನ ತನಿಬೇಂಟೆ ನಮ್ಮಯ ಬೇರುಗೊಲೆಯಾಗಿರ್ದುದೇ ಹಾಯೆನುತ ಬಿಸುಸುಯ್ದು ಮರುಗಿದರು ನಾರಿಯರು. ಇಲ್ಲಿ ಕವಿಯು ಬಳಸಿರುವ 'ಬೇರುಗೊಲೆ' ಪದ ಚರ್ಚಾರ್ಹವಾದುದು. ಕುಂತಿ ಮತ್ತು ಮಾದ್ರಿಯರ ದುಃಖಕ್ಕೆ ಕಾರಣವನ್ನು ಈ ಪದವು ಧ್ವನಿಸುತ್ತದೆ. ಏಕೆಂದರೆ ಬೇರುಗೊಲೆ ಎಂದರೆ ಕುರುವಂಶದ ಬೇರು ನಾಶವಾಯಿತೆ ಹಾಗೂ ಪಾಂಡುವು ಪುತ್ರ ಸಂತಾನವನ್ನು ನೀಡಲಾಗದ ಅಶಕ್ತನನ್ನಾಗಿಸಿತೆ ಮುನಿಶಾಪ ಎಂಬ ಭಾವಗಳು ಇಲ್ಲಿ ಅಡಗಿವೆ. ಹೀಗಿರುವಾಗ ಕುಂತಿ ಮೆಲ್ಲನೆ ಪಾಂಡುವಿನಲ್ಲಿ ಬಂದು ರಹಸ್ಯವಾಗಿ ಹೀಗೆ ಬಿನ್ನಹ ಮಾಡಿದಳು.

"ಭರತ ವಂಶಕೆ ಪುತ್ರ ಶತವವ
ತರಿಸುವುದು ಗಾಂಧಾರಿ ದೇವಿಗೆ
ವರ ಮುನೀಶ್ವರನಿತ್ತ ವರವದು ನಿಮ್ಮಡಿಗಳರಿಯೆ
ದುರುಳ ಮುನಿಪನ ಶಾಪವೇ ಸ್ತ್ರೀ
ಪುರುಷ ಸಂಗ ವಿರೋಧ ನಮಗಿ
ನ್ನರಸ ನಾಪುತ್ರಸ್ಯಗತಿಯೆಂದಿರದೆ ಶ್ರುತಿವಚನ"[೩೬]

ಭರತ ವಂಶಕ್ಕೆ ಗಾಂಧಾರಿ ದೇವಿಗೆ ಮುನೀಶ್ವರನು ನೀಡಿದ ವರದಿಂದ ನೂರು ಜನ ಮಕ್ಕಳು ಜನಿಸುವರು ಎಂಬುದು ನಿಮಗೆ ತಿಳಿದಿದೆ. ದುರುಳ ಮುನಿಕೊಟ್ಟ ಶಾಪದಿಂದ ಸ್ತ್ರೀ ಪುರುಷ ಸಂಗ ನಮಗೆ ವಿರೋಧವಾಗಿದೆ. ಶ್ರುತಿ ವಚನವು ನಾಪುತ್ರಸ್ಯಗತಿಯೆಂದಿದೆ ಎಂದು ನುಡಿಯುತ್ತಾಳೆ. ಮುಂದುವರೆದು

"ಧರೆಯ ರಾಜ್ಯಸ್ಥಿತಿಗೆ ಸುತರವ
ತರಿಸುವರು ಗಾಂಧಾರಿಗಾ ಪು
ತ್ರರಿಗೆ ಸುತರಾ ಸುತರ ಸುತರಾ ಸುತರ ಸೂನುಗಳು
ಧರೆ ಪರಂಪರೆಯಿಂದಲತ್ತಲೆ
ಸರಿವುದೀ ನಿಮ್ಮಡಿಗೆ ದರ್ಭಾ
ಸ್ತರಣ ಸಮಿಧಾಧಾನವೇ ಕಡೆಗೆಂದಳಾ ಕುಂತಿ"[೩೭]

ಈ ಧರೆಯ ರಾಜ್ಯಭಾರಕ್ಕೆ ಗಾಂಧಾರಿಗೆ ಪುತ್ರರು ಜನಿಸುವರು. ಆ ಮಕ್ಕಳಿಗೆ, ಅವರ ಮಕ್ಕಳಿಗೆ, ಅವರ ಮಕ್ಕಳಿಗೆ, ಅವರ ಮಕ್ಕಳ ಮಕ್ಕಳಿಗೆ ಹೀಗೆ ಈ ಧರೆ ಎಂಬುದು ಪರಂಪರೆಯಿಂದ ಅವರತ್ತಲೆ ಸರಿಯುವುದು. ನಿಮ್ಮವರೆಗೂ ಬರುವುದಿಲ್ಲ. ಕೊನೆಗೆ ನಿಮಗೆ ಈ ದರ್ಭಾಸ್ತರಣ ಸಮಿಧಾಧಾನವೇ

ಗತಿಯಾಗುವುದು ಎಂದು ಹೇಳುವಳು. ಇಲ್ಲಿ ಕುಂತಿ ಹೇಳುವ 'ಆ ಪುತ್ರರಿಗೆ ಸುತರಾ ಸುತರ ಸುತರಾ ಸುತರ ಸೂನುಗಳು ಧರೆ ಪರಂಪರೆಯಿಂದಲತ್ತಲೆ ಸರಿವುದ್' ಎಂಬ ಮಾತುಗಳು ಗಮನಿಸತಕ್ಕವು. ಏಕೆಂದರೆ ರಾಜ್ಯ ಪದವಿ ಎಂಬುದು ತಂದೆ, ತಂದೆಯಿಂದ ಮಕ್ಕಳಿಗೆ, ಮಕ್ಕಳಿಂದ ಅವರ ಮಕ್ಕಳಿಗೆ ವಂಶಪಾರಂಪರ್ಯವಾಗಿ ಮುಂದುವರೆಯುವಂತಹದ್ದು. ಆದ್ದರಿಂದ ಗಾಂಧಾರಿಗೆ ಮೊದಲು ಮಕ್ಕಳಾದರೆ ಹಿರಿತನದಲ್ಲಿ ರಾಜ್ಯ ಅವರ ಕೈ ಸೇರುತ್ತದೆ ಎಂಬ ಆತಂಕ ಹಾಗೂ ತಲ್ಲಣಗಳು ಸಹಜವಾಗಿಯೆ ಕುಂತಿಯಲ್ಲಿ ಮೂಡಿಬರುವುದು ಇಲ್ಲಿ ಕಂಡುಬರುತ್ತದೆ. ಅಲ್ಲದೆ ಪಂಪನು ಸಹ ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾನೆ. ಶಂತನು ಸತ್ಯವತಿಯನ್ನು ಮದುವೆಯಾಗಲು ಬಯಸಿದಾಗ ಸತ್ಯವತಿಯ ತಂದೆ ಕೇಳುವ ಪ್ರಶ್ನೆಗಳು, ವ್ಯಕ್ತಪಡಿಸುವ ಅಭಿಪ್ರಾಯಗಳು ಹಾಗೂ ಸತ್ಯವತಿಯ ಮಕ್ಕಳಿಗೆ ರಾಜ್ಯಪಟ್ಟ ಕಟ್ಟುವುದಾದರೆ ನನ್ನ ಸಮ್ಮತಿ ಇದೆ ಎಂಬ ಮಾತುಗಳು ಕೂಡ ಇದೇ ಸಂದರ್ಭವನ್ನು ಕುರಿತ ವಿಚಾರಗಳಾಗಿವೆ.

ನಂತರ ಕುಂತಿಯನ್ನು ಸಮಾಧಾನಿಸಿ ತನ್ನ ಕರ್ತವ್ಯವೇನೆಂದು ಪಾಂಡುರಾಜನು ಕೇಳಲು, ಕುಂತಿಯು ನಾವು ನಾರಿಯರು, ಮತ್ತಲ್ಲಿ ರಾಜಕುಮಾರಿಯರು. ಜೊತೆಗೆ ಛಲವಾದಿಗಳು. ಗಾಂಧಾರಿಗೆ ಪುತ್ರ ಸಂತಾನವಾಗುವುದೆಂಬ ಬೇಧದಲಿ ಈ ರೀತಿಯಾಗಿ ನುಡಿದೆನು. ವಿಕಾರಿಯೆನ್ನದಿರಿ, ಮುನ್ನಿನ ಕಾರ್ಯಭಾರವನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತಾಳೆ. ಇದನ್ನು ಗಮನಿಸಿದಾಗ ನಾರಿಯರಿಗೆ ತಾಯಿಯಾಗಬೇಕೆಂಬ ಬಯಕೆ ಸಹಜ. ಆದರೆ ರಾಜಕುಮಾರಿಯರು ಎಂಬಲ್ಲಿ ಕ್ಷತ್ರಿಯ ಕುಲದಲ್ಲಿ ಜನಿಸಿದ ಹೆಣ್ಣು ಮಕ್ಕಳ ಬಯಕೆ, ಅವಳ ಆಶಯದ ಬಗ್ಗೆ ಪಾಂಡುವಿಗೆ ಎಚ್ಚರಿಸುವುದು ತಿಳಿಯುತ್ತದೆ. ಅದಕ್ಕೆ ಪಾಂಡುರಾಜನು ಭೃಗು, ಜಾಬಾಲಿ, ಜಮದಗ್ನ್ಯಾದಿ ದಿವ್ಯ ಮುನೀಂದ್ರರ ಋಷಿಗಣವಿದೆ. ಅವರಲ್ಲಿ ಯಾರಾದರೊಬ್ಬರನ್ನು ಓಲೈಸಿದರೆ ನಮ್ಮ ದುಷ್ಕೃತಿ ಕೊನೆಗಾಣುವುದೆಂದು ಹೇಳಿದಾಗ ಕುಂತಿ ನುಡಿಯುವ ಈ ಮಾತುಗಳು ವಿಚಾರಾರ್ಹವಾದವು.

"ಭವದನುಗ್ರಹದಿಂದ ಸುತರು
ದ್ಭವಿಸಿದರೆ ಲೇಸನ್ಯಥಾ ಸಂ
ಭವಿಸಿದರೆ ದುಷ್ಕೀರ್ತಿವಧುವೆಂಜಲಿಸಳೇ ಕುಲವ
ಅವನಿಪತಿ ಕೇಳ್ ನಹುಷ ನಳ ಪೌ
ರವ ಸುಹೋತ್ರಾದ್ಯರ ನಿಜಾತ್ಮೋ
ದ್ಭವರ ಪಾರಂಪರೆಗೆ ಗತಿಯೇನೆಂದಳಾ ಕುಂತಿ"[೩೮]

ಭವದ ಅನುಗ್ರಹದಿಂದ ಮಕ್ಕಳು ಜನಿಸಿದರೆ ಅದು ಲೇಸು. ಬೇರೆ ಮಾರ್ಗದಿಂದ ಸಂಭವಿಸಿದರೆ ಕುಲಕ್ಕೆ ದುಷ್ಕೀರ್ತಿಯ ಎಂಜಲು ಉಂಟಾಗುವುದಿಲ್ಲವೇ. ಅವನಿಪತಿ ಕೇಳು ನಹುಷ, ನಳ, ಪೌರವ, ಸುಹೋತ್ರಾ ಮೊದಲಾದ ನಿಜಾತ್ಮೋದ್ಭವರ ಪರಂಪರೆಯ ಗತಿ ಏನಾಗುವುದು ಎಂದು ನುಡಿಯುತ್ತಾಳೆ. ಇಲ್ಲಿ ಗಮನಿಸುವಂತಹದ್ದು ಋಷಿ ಮುನಿಗಳ ವರದಿಂದ ಮಕ್ಕಳು ಜನಿಸಿದರೆ ಪರಂಪರೆಗೆ

ದುಷ್ಕೀರ್ತಿ ಉಂಟಾಗುತ್ತದೆ ಎನ್ನುವ ಕುಂತಿ ಅದೇ ದೂರ್ವಾಸ ಮುನಿ ನೀಡಿದ ಐದು ವರಗಳಿಂದ ಮಕ್ಕಳನ್ನು ಪಡೆದಾಗ ಪರಂಪರೆ ಹಾಳಾಗಲಿಲ್ಲವೇ? ಅಲ್ಲದೆ ಕುಂತಿಯ ಮನದಲ್ಲಿ ಇದ್ದ ಬೇರೆ ಆಲೋಚನೆಯಾದರೂ ಏನು? ಎಂಬುದು ಚರ್ಚಿಸತಕ್ಕ ಸಂಗತಿಯಾಗಿದೆ. ಈ ರೀತಿ ನುಡಿದ ಕುಂತಿಗೆ ಪಾಂಡುವು ಬೀಜ ಪರಂಪರೆ ಮುರಿದು ಹೋದ ಕ್ಷೇತ್ರದಲ್ಲಿ ಮುನಿಗಳ ಕಾರುಣ್ಯದಿಂದ ಪುತ್ರ ಸಂತಾನವನ್ನು ಪಡೆಯುವುದು ವಿಹಿತ. ಅದು ಪರಮ ವೈದಿಕ ಸಿದ್ಧ. ಹಾಗಾಗಿ ಮುನಿಗಳ ಮಂತ್ರೋಪದೇಶವನ್ನು ಧರಿಸು ಎಂದು ತಿಳಿಸಲು ಕುಂತಿ ತನಗೆ ಬಾಲ್ಯದಲ್ಲಿ ದೂರ್ವಾಸ ಮುನಿಯು ಕೊಟ್ಟ ಐದು ಮಂತ್ರಗಳ ವಿವರಗಳನ್ನು ಪಾಂಡುವಿಗೆ ತಿಳಿಸುತ್ತಾಳೆ. ಪಾಂಡುವಿನ ಅನುಮತಿಯಂತೆ ಮುನಿಯ ಮಂತ್ರೋಪದೇಶಕ್ಕೆ ಸಿದ್ಧಳಾಗಿ ಯಮನನ್ನು ನೆನೆದಳು.

"ಸತಿಯ ಸಮ್ಮುಖನಾಗಿ ವೈವ
ಸ್ವತನು ನುಡಿದನಿದೇಕೆ ನಮ್ಮ
ಕ್ಷಿತಿಗೆ ಬರಿಸಿದೆಯೆನಲು ಲಜ್ಜಾವನತಮುಖಿಯಾಗಿ
ಸುತನ ಕರುಣಿಪುದೆನಲು ಭಯ ಪರಿ
ವಿತತ ವಿಮಲ ಸ್ವೇದಜಲ ಕಂ
ಪಿತೆಯ ಮುಟ್ಟಿ ತಥಾಸ್ತುವೆನುತ ಕೃತಾಂತ ಬೀಳ್ಕೊಂಡ"[೩೯]

ನೆನೆದ ತಕ್ಷಣವೇ ಯಮನು ಸತಿಯ ಸಮ್ಮುಖನಾಗಿ ಬಂದು ನನ್ನನ್ನು ಭೂಮಿಗೆ ಬರಿಸಲು ಕಾರಣವೇನು ಎಂದು ಕೇಳಿದನು. ಲಜ್ಜಾವನತಮುಖಿಯಾಗಿ ಕುಂತಿಯು ಸುತನನ್ನು ಕರುಣಿಸಬೇಕೆಂದು ಕೇಳಿಕೊಂಡಳು. ಕೇಳಿ ಭಯದಿಂದ ಮೈ ನಡುಗುತ್ತ ಸ್ವೇದಜಲ ಸಾಲಿಟ್ಟಿತು. ಆ ರೀತಿ ಇರುವ ಕುಂತಿಯನ್ನು ಮುಟ್ಟಿ ತಥಾಸ್ತು ಎಂದು ನುಡಿದು ಕೃತಾಂತನು ಅಲ್ಲಿಂದ ಬೀಳ್ಕೊಂಡನು. ಈ ರೀತಿಯಾಗಿ ಕುಂತಿ ದೂರ್ವಾಸ ಮುನಿ ನೀಡಿದ ಮಂತ್ರಗಳಿಂದ ಮಕ್ಕಳನ್ನು ಪಡೆಯುತ್ತಾಳೆ.

೩.೧.೨.ಇ. ಪಾಂಡುವಿನ ಮರಣದ ಸಂದರ್ಭದಲ್ಲಿನ ಸಂಘರ್ಷಗಳು

'ಕಿಂದಮ' ಋಷಿಯ ಶಾಪದ ಕಾರಣವಾಗಿ ಪಾಂಡುರಾಜನು ಅರಣ್ಯವನ್ನು ಸೇರಿ ಕಾಲ ಕಳೆಯುತ್ತಿದ್ದನು. ಹೀಗಿರಲು ಒಮ್ಮೆ ಬಂದ ವಸಂತ ಕಾಲದಲ್ಲಿ ಶೃಂಗಾರ ಪೂರಿತಳಾದ ಮಾದ್ರಿಯನ್ನು ಸೇರಲಾಗಿ ಪಾಂಡುವು ಸಾವನ್ನಪ್ಪುತ್ತಾನೆ. ಈ ಸಂದರ್ಭದಲ್ಲಿನ ಕುಂತಿಯ ದುಃಖ ಹಾಗೂ ನೋವುಗಳು ಮನಮಿಡಿಯುವಂತಹವು. ಆ ಸನ್ನಿವೇಶವನ್ನು ಪಂಪ ಹೀಗೆ ತಿಳಿಸುತ್ತಾನೆ. ಪಾಂಡುವಿನ ಮರಣದಿಂದ ಅಳುತ್ತಿದ್ದ ಮಾದ್ರಿಯ ಧ್ವನಿಯನ್ನು ಕೇಳಿದ ಕುಂತಿ ತಕ್ಷಣವೇ ಆತಂಕಕ್ಕೊಳಗಾಗುತ್ತಾಳೆ.

"ಆ ದೆಸೆಯೊಳ್ ಭೂಭುಜನೋ
ಆ ದೆಸೆಯೊಳ್ ಮಾದ್ರಿ ನೆಗೆವ ಕರುಣಾರವಮಂ
ತಾ ದೆಸೆಯೊಳ್ ಭೂಪತಿಗೇ
ನಾದುದೊ ಪೇಟ್ ಬಿದಿಯೆ ಕೆಟ್ಟೆನಟಿದೆನೆನುತ್ತುಂ"[೪೦]

ರಾಜನು ಯಾವ ದಿಕ್ಕಿಗೆ ಹೋದನೋ ಆ ದಿಕ್ಕಿನಿಂದಲೇ ಮಾದ್ರಿಯ ಕರುಣಾಮಯವಾದ ಧ್ವನಿಯು ಕೇಳಿಸುತ್ತಿದೆ. ಅಯ್ಯೋ ಭೂಪತಿಗೆ ಏನು ಕೇಡಾದುದೋ? ಹೇಳು ವಿಧಿಯೆ ಕೆಟ್ಟೆನು, ಅಳಿದೆನು ಎಂದು ಚೀರುತ್ತಾಳೆ. ಇದರ ಜೊತೆಗೆಯೆ ಮಕ್ಕಳು ಸಹ ಅಳುತ್ತ ಶಬ್ದ ಮಾಡಿಕೊಂಡು ಅವಳ ಬೆನ್ನ ಹಿಂದೆಯೇ ಬರಲು, ತಲೆಯ ಕೂದಲು ಬಿಚ್ಚಿ ಕೆಳಗೆ ಎಳೆಯುತ್ತಿರಲು, ಕಣ್ಣೀರು ಸುರಿಸುತ್ತ ಕುಂತಿ ಓಡಿ ಬಂದಳು. ತನ್ನ ನಲ್ಲನ ಕಳೇ ಬರಹವನ್ನು ತಬ್ಬಿಕೊಂಡು ತನ್ನ ಸಾವನ್ನೂ ನಿಶ್ಚಯಿಸಿಕೊಂಡು ಹಲ್ಲನ್ನು ಸುಲಿಯುತ್ತಿದ್ದ ಮಾದ್ರಿಯನ್ನು ಕಂಡು ಕುಂತಿಯು ನೆಲದಲ್ಲಿ ಬಿದ್ದು ಹೊರಳಾಡಿ ಅತ್ತಳು.

"ಅಡವಿಯೊಳೆನ್ನುಮನೆನ್ನೀ
ನಡಪಿದ ಶಿಶುಗಳುಮನಿರಿಸಿ ನೀಂ ಪೇೞದೆ ಪೋ
ದೊಡಮೇನೋ ನಿನ್ನ ಬೞಿಯನೆ
ನಡೆತರ್ಪೆಂ ನಿನ್ನರಸ ಬಿಸುಟೆಂತಿರ್ಪೆಂ"[೪೧]

ಈ ಅಡವಿಯಲ್ಲಿ ನನ್ನನ್ನು ಹಾಗೂ ನಾನು ಸಾಕಿದ ಈ ಮಕ್ಕಳನ್ನೂ ಬಿಟ್ಟು ನೀವು ಹೇಳದೆ ಹೋದರೆ ಏನಾಯಿತು? ನಾನೂ ನಿನ್ನನ್ನು ಹಿಂಬಾಲಿಸಿ ನಿನ್ನ ಹಿಂದೆಯೇ ಬರುತ್ತೇನೆ. ಅರಸ ನಿನ್ನನ್ನು ಬಿಟ್ಟು ನಾನು ಹೇಗಿರಬಲ್ಲೆ? ಎಂದು ಅತಿಯಾಗಿ ದುಃಖಿಸುತ್ತಾಳೆ. ಅಳುತ್ತ ಮಾದ್ರಿಯನ್ನು ಕುರಿತು ನೀನು ಈ ಮಕ್ಕಳನ್ನು ಸ್ವೀಕರಿಸಿ ಇವರನ್ನು ರಕ್ಷಿಸು. ನನಗೆ ಪ್ರಿಯಕರನನ್ನೊಪ್ಪಿಸು, ಅವನು ಸಾಗಿದ ದಾರಿಯಲ್ಲೆ ನಾನೂ ಸಾಗುತ್ತೇನೆ ಎನ್ನಲು, ಮಾದ್ರಿಯು ಇಂದಿನ ಸರದಿಯನ್ನು ಪತಿಯು ನನಗೆ ನೀಡಿದ್ದಾನೆ. ನೀನು ಮಕ್ಕಳನ್ನು ಸಲಹು ಎಂದು ನುಡಿದು ನೆರೆದಿದ್ದ ಋಷಿ ಮುನಿಗಳೆಲ್ಲ ಹೊಗಳಲು ಮಾದ್ರಿ ಪಾಂಡುವಿನೊಂದಿಗೆ ಅಗ್ನಿ ಪ್ರವೇಶಿಸಿದಳು.

ಕುಮಾರವ್ಯಾಸನಲ್ಲಿ ಪಾಂಡುವಿನ ಮರಣದ ಸಂದರ್ಭದಲ್ಲಿನ ಕುಂತಿಯ ನೋವುಗಳನ್ನು ಈ ರೀತಿಯಾಗಿ ಕಾಣಬಹುದು. ಪಾಂಡುವಿನ ಸಾವಿನ ದುಃಖದಿಂದ ರೋಧಿಸುತ್ತಿರುವ ಮಾದ್ರಿಯ ಧ್ವನಿಯನ್ನು ಕೇಳಿದ ಕುಂತಿಯು

"ಏನಿದೆತ್ತಣ ರಭಸ ಮಾದ್ರೀ
ಮಾನಿನಿಯೊ ಹಾ ರಾಯನಾವೆಡೆ
ಹಾನಿ ಹಿರಿದುಂಟರಿವೆನಂಗಸ್ಫುರಿತ ಶಕುನದಲಿ
ಏನು ಮಾರಿಯೊ ಶಿವಶಿವಾಯೆನು
ತಾ ನಿತಂಬಿನಿ ಗಾಢ ಗತಿಯಲಿ
ಕಾನನದೊಳೈತಂದಳಕ್ಕೆಯ ಸರದ ಬಳಿವಿಡಿದು"[೪೨]

ಏನಿದು? ಎತ್ತಣದ ರಭಸ? ಮಾದ್ರೀ ಮಾನಿನಿಯೋ? ಹಾ ಪಾಂಡುರಾಯನೆಲ್ಲಿ. ಏನೋ ಹಾನಿ ಕಾದಿದೆ. ಅಂಗವದುರುವ ಶಕುನದಿಂದ ತಿಳಿಯುತ್ತಿದೆ. ಏನು ಮಾರಿಯೋ ಶಿವಶಿವಾ ಎನ್ನುತ್ತ

ಕುಂತಿಯು ಕಾನನವನ್ನು ಪ್ರವೇಶಿಸಿದಳು. ಅಳುವಿನ ದನಿಯ ದಾರಿಯನ್ನೆ ಹಿಡಿದು ಬಂದು ನೋಡುತ್ತಾಳೆ. ಪಾಂಡು ನಿಧನ ಹೊಂದಿದ್ದಾನೆ. ಅದನ್ನು ಕಂಡು ಎಚ್ಚರ ತಪ್ಪಿ ಮೂರ್ಛೆ ಹೋದಳು. ಚಂಡಿಕೆಗಳಲ್ಲಾಡುತ್ತಿದ್ದ ಪಾಂಡು ನಂದನರೈವರೂ ಬಂದು ಅಪ್ಪಾ ನಾವು ಅನಾಥರಾದೆವೇ, ವಿಧಿ ನಮ್ಮ ಭಾಗ್ಯವನ್ನು ತಪ್ಪಿಸಿತೆ ಎಂದು ದುಃಖಿಸಿದರು. ಮೂರ್ಛೆಯಿಂದ ಎದ್ದ ಕುಂತಿ ಧರಣೀಪಾಲಕನನ್ನು ನೋಡಿದಳು. ನನ್ನನ್ನು ಬಿಸುಟು ಬಿಟ್ಟೆಯಾ? ಎಂದು ಶೋಕಿಸಿದಳು.

"ಅರಸ ತನಗರುಹದೆ ಸುರಸ್ತ್ರೀ
ಯರಿಗೆ ಹರಿದೈ ನಿನ್ನ ವಧುಗಳ
ತುರುಬು ಕೊಯ್ಸುವೆನವರ ತೊತ್ತಿರ ಮಾಡುವೆನು ತನಗೆ
ಅರಸಿ ನೀನೀ ಮಕ್ಕಳನು ಸಂ
ವರಿಸಿಕೊಂಡಿಹುದೆಂದು ಮಾದ್ರಿಯ
ಕರವ ಹಿಡಿದರೆ ಕುಂತಿಗೆಂದಳು ಕಾಂತೆ ವಿನಯದಲಿ"[೪೩]

ಅರಸಾ ತನಗೆ ತಿಳಿಸದೆಯೇ ನೀನೊಬ್ಬನೆ ಸುರಸ್ತ್ರೀಯರ ಬಳಿಗೆ ಓಡಿ ಹೋದೆಯಾ ನಿನ್ನ ವಧುಗಳ ತುರುಬು ಕೊಯ್ಸುವೆನು. ಅವರನ್ನು ತೊತ್ತುಗಳಾಗುವಂತೆ ಮಾಡುವೆನು ಎಂದು ನಿಶ್ಚಯಿಸಿ ನುಡಿದಳು. ಮಾದ್ರಿಯನ್ನು ಕುರಿತು ಅರಸಿ ನೀನು ಮಕ್ಕಳನ್ನು ಸಲಹಿಕೊಂಡಿರುವುದು ಎಂದು ನುಡಿದ ಮಾತಿಗೆ ಮಾದ್ರಿಯು ಅಕ್ಕ ಈ ಮಕ್ಕಳು ನಿಮ್ಮ ಕೈಯೆಡೆ. ಮಹಾರಾಜನು ನನ್ನ ಕಾರಣವಾಗಿ ನಿಧನನಾಗಿದ್ದಾನೆ. ಆದ್ದರಿಂದ ಆತನ ಜೊತೆ ಹೋಗುವ ಸರದಿ ತನ್ನದೆಂದು ತಿಳಿಸಿ ಸಹಗಮನವನ್ನು ಮಾಡುತ್ತಾಳೆ.

೩.೧.೨.ಈ. ಕರ್ಣನನ್ನು ನೋಡಿದ ಸಂದರ್ಭದ ಸಂಘರ್ಷಗಳು.

'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಕುಂತಿ ಕರ್ಣನನ್ನು ಭೇಟಿ ಮಾಡುವ ಸಂದರ್ಭ ೯ನೇ ಆಶ್ವಾಸದ ೭೪ನೇ ಪದ್ಯದಲ್ಲಿ ಕಂಡುಬರುತ್ತದೆ. ಇವರಿಬ್ಬರು ಮುಖಾಮುಖಿಯಾಗುವ ಸಮಯ ಇಬ್ಬರಿಗೂ ಕ್ಲಿಷ್ಟಕರವಾದ ಮಾನಸಿಕ ಸಂಘರ್ಷಗಳನ್ನು ತಂದೊಡ್ಡಿರುವ ಸಂದರ್ಭ. ಏಕೆಂದರೆ ಪಾಂಡವ ಹಾಗೂ ಕೌರವರ ನಡುವಿನ ಸಂಧಿ ಕ್ರಿಯೆಯು ಮುರಿದು ಬಿದ್ದು, ಯುದ್ಧ ಮಾಡುವುದು ನಿಶ್ಚಯವಾಗಿದೆ. ಹೀಗಿರುವಾಗ ಎರಡು ಪಕ್ಷದವರಲ್ಲಿಯೂ ತಮ್ಮ ತಮ್ಮ ಪಕ್ಷಗಳಿಗೆ ವೀರರನ್ನು ಸೆಳೆದುಕೊಳ್ಳುವ ಹಾಗೂ ಮಾನಸಿಕವಾಗಿ ವೀರರ ಮನವನ್ನು ವಿಘಟಿಸುವ ಕ್ರಿಯೆಗಳು ನಡೆಯುತ್ತಿದ್ದವು. ಕುಂತಿಯು ಸಹ ಇದೇ ಮನಸ್ಥಿತಿಯ ಹಿನ್ನೆಲೆಯಲ್ಲಿ ಕರ್ಣನನ್ನು ಭೇಟಿ ಮಾಡಲು ಆಗಮಿಸುತ್ತಾಳೆ. ಇಲ್ಲಿ ಪ್ರಧಾನವಾಗಿ ವಿಶ್ಲೇಷಿಸತಕ್ಕ ಸಂಗತಿಯೆಂದರೆ ಕರ್ಣ ಮಹಾನ್ ಪರಾಕ್ರಮಿ. ದುರ್ಯೋಧನನ ಪಕ್ಷದಲ್ಲಿದ್ದವ. ಪಾಂಡವ ಸೈನ್ಯಕ್ಕೆ ಅಭೇದ್ಯವಾದ ರೀತಿಯ ಪೌರುಷವಂತ. ಕೃಷ್ಣನ ರಾಜತಾಂತ್ರಿಕ ತಂತ್ರಗಳಿಗನುಗುಣವಾಗಿ ಕುಂತಿ ಕರ್ಣನನ್ನು ಕಾಣಲು ಬರುತ್ತಾಳೆ.

ಇದಕ್ಕೆ ಮೊದಲೇ ಕೃಷ್ಣ ಕರ್ಣನನ್ನು ಭೇಟಿಯಾಗಿ ಆತನ ಜೀವನ ವೃತ್ತಾಂತ ಹಾಗೂ ಜನ್ಮ ರಹಸ್ಯವನ್ನು ತಿಳಿಸಿ ಆತನನ್ನು ಭೇದಿಸಿದ್ದಾನೆ. ಇದರ ಜೊತೆಗೆ ಕರ್ಣನ ಮನಸ್ಸನ್ನು ಇನ್ನಷ್ಟು ಭೇದಿಸಿ ಆತನ ಶಕ್ತಿ ಕುಂದಿಸುವ ಕಾರ್ಯ ಮಾಡುವ ಸಲುವಾಗಿ ಕುಂತಿಯನ್ನು ಕಳುಹಿಸುತ್ತಾನೆ. ಇಲ್ಲಿ ಕರ್ಣನನ್ನು ಕಂಡ ಕುಂತಿಯ ಆನಂದ, ನೋವು, ಮನಸ್ಸಿನ ವಿಷಣ್ಣತೆಗಳು, ನಿರ್ಧಾರವನ್ನು ಕೈಗೊಳ್ಳಲಾಗದ ದ್ವಂದ್ವದ ಪರಿಸ್ಥಿತಿಯ ಕರಾಳತೆಗಳು ಕಂಡುಬರುತ್ತವೆ. ಏಕೆಂದರೆ ಇಲ್ಲಿ ಕರ್ಣನನ್ನೂ ಕಳೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಮತ್ತೊಂದು ಕಡೆ ತನ್ನ ಐವರು ಮಕ್ಕಳನ್ನೂ ಕಳೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಇಂತಹ ಇಕ್ಕಟ್ಟಿನ ಸಂದರ್ಭದ ಒತ್ತಡದಲ್ಲಿರುವ ಕುಂತಿ ಅಂತಿಮವಾಗಿ ಕರ್ಣನಿಂದ ಭಾಷೆಯನ್ನು ತೆಗೆದುಕೊಳ್ಳುವ ಸಂದರ್ಭಗಳು ಆಕೆಯ ಮನದ ತೊಳಲಾಟಗಳನ್ನು ನಮ್ಮ ಗಮನಕ್ಕೆ ತಂದುಕೊಡುತ್ತವೆ. ಕರ್ಣ, ಕುಂತಿಯರ ಭೇಟಿಯನ್ನು ಪಂಪ ಈ ರೀತಿಯಾಗಿ ಚಿತ್ರಿಸಿದ್ದಾನೆ.

ತಾಯಿಯನ್ನು ಕಂಡು ಆಕೆಗೆ ಸಾಷ್ಟಾಂಗ ನಮಸ್ಕಾರ ಮಾಡಿದ ಮಗನನ್ನು ಪ್ರೀತಿಯಿಂದ ಅಪ್ಪಿಕೊಂಡು ಪರಮಾಶೀರ್ವಚನಂಗಳಿಂದ ಹರಸಿದಳು. ನಂತರ

"ತೊರೆದ ಕುಚಯುಗಳವಂದಂ
ಬಿರಿವಿಡೆ ಮೊಲೆವಾಲನಟ್ಟಿಜೆಂದಂ ಮೆಯ್ಯಂ
ಕುರಿಸೆ ಸುರಿವಶ್ರುಜಲಮು
ಬ್ಬರಿಸಿ ಪೊನಲ್ ಪೊನಲನಟ್ಟೆ ಜನನುತೆಗಾಗಳ್"೪೪

ತೊರೆದ ಕುಚಯುಗಗಳೆರಡು ಆಗ ಎದೆಯ ಹಾಲನ್ನು ಸುರಿಸಿದವು. ಅವಳ ಮನದಲ್ಲಿ ಮೂಡಿದ ಪ್ರೀತಿಯ ಕಾರಣವಾಗಿ ಶರೀರದಲ್ಲಿ ರೋಮಾಂಚನ ಉಂಟಾಯಿತು. ಉಂಟಾದ ಸಂತೋಷದ ಕಾರಣವಾಗಿ ಹರಿಯುತ್ತಿರುವ ಕಣ್ಣೀರು ಅಧಿಕವಾಗಿ ಗಂಗೆಯ ಪ್ರವಾಹವನ್ನೂ ಹೆಚ್ಚಿಸಿತು. ಜನರ ಗೌರವಾದರಗಳಿಗೆ ಪಾತ್ರಳಾದ ಕುಂತಿಗೆ ಎನ್ನುತ್ತಾನೆ ಕವಿ. ಅಂದರೆ ಕರ್ಣನನ್ನು ನೋಡಿದಾಗಿನ ಆಕೆಯ ಮನದ ಭಾವಗಳು ಪ್ರಕಟವಾಗುವುದನ್ನು ತಿಳಿಸುತ್ತಾನೆ ಕವಿ. ಮುಂದುವರೆದು

"ಆಗಳೆ ಮಗನಂ ಪೆತ್ತವೊ
ಲಾಗಿ ಲತಾಲಲಿತೆ ನೊಸಲ ಕಣ್ಬೆತ್ತವೊಲಂ
ತಾಗಡೆ ರಾಗಕ್ಕಾಗರ
ಮಾಗೆ ದಿನಾಧಿಪ ತನೂಜನೊಸೆದಿರ್ಪಿನೆಗಂ"೪೫

ಕರ್ಣನನ್ನು ಕಂಡ ಆ ಕುಂತಿದೇವಿಗೆ ಆಗಳೆ ಮಗನನ್ನು ಹೆತ್ತಂತಾಯಿತು. ಲತಾಲಲಿತೆಗೆ ಹಣೆಗಣ್ಣನ್ನು ಪಡೆದಷ್ಟು ಸಂತೋಷವಾಯಿತು. ರಾಗಕ್ಕೆ ಆಗರವಾದ ರೀತಿಯಾಗಿ ಸೂರ್ಯ ಪುತ್ರನಾದ ಕರ್ಣನು ಸಂತೋಷಪಡುತ್ತಿದ್ದನು ಆ ಸಮಯದಲ್ಲಿ. ಇಲ್ಲಿ ಕುಂತಿಯ ಮನದ ಸಂತೋಷಗಳನ್ನು ಗಮನಿಸಬೇಕು. ಸಣ್ಣ ಮಗುವನ್ನು ಸಮಾಜದ ನಿಂದನೆಗಳಿಗೆ ಹೆದರಿ ಗಂಗೆಯಲ್ಲಿ ಹಾಕಿ ಹೋದ ನಂತರ, ಮತ್ತೆ ಬೆಳೆದು ನಿಂತಿರುವ ಅದೇ ಮಗನನ್ನು ನೋಡಿದ ತಾಯಿಯ ಆನಂದ ಆಕೆಯ ಮನದಲ್ಲಿ

ಪ್ರಕಟಗೊಳ್ಳುತ್ತಿರುವುದು ಕಂಡುಬರುತ್ತದೆ. ಆಕೆ ಕರ್ಣನನ್ನು ಭೇಟಿ ಮಾಡಲು ಬಂದಿರುವ ಉದ್ದೇಶಗಳು ಏನೇ ಇದ್ದರೂ ಕೂಡ ಆಕೆಯು ಆತನ ತಾಯಿ. ಕರ್ಣ ಆಕೆಯ ಮಗ. ಎಂತಹವರೇ ಆದರೂ ಕರುಳ ಕುಡಿಯನ್ನು ನೋಡಿದ ಮೇಲೆ ಈ ರೀತಿಯಾಗಿ ಸಂತೋಷಿಸದೆ ಇರಲು ಸಾಧ್ಯವಿಲ್ಲ.

ನಂತರದಲ್ಲಿ ಕುಂತಿ ಕರ್ಣನಿಂದ ಭಾಷೆಯನ್ನು ಪಡೆಯುತ್ತಾಳೆ. ಅಲ್ಲದೆ ನಿನ್ನ ತಮ್ಮಂದಿರು ನಿನ್ನನ್ನು ಒಪ್ಪಿಕೊಳ್ಳುತ್ತಾರೆ. ನೀನೇ ರಾಜನಾಗಿ ರಾಜ್ಯಭಾರ ಮಾಡುವಿಯಂತೆ ನಮ್ಮೊಡನೆ ಬಾ ಎಂದು ತಿಳಿಸಿದಾಗ ಕರ್ಣ ಅವೆಲ್ಲವನ್ನು ನಿರಾಕರಿಸಿ ದುರ್ಯೋಧನನ ಪರವಾಗಿಯೇ ಉಳಿಯುವುದಾಗಿ ತನ್ನ ನಿರ್ಧಾರವನ್ನು ತಿಳಿಸುತ್ತಾನೆ. ತಾಯಿ ಮಗನ ಸಮಾಗಮದ ಸಂತೋಷದ ಸಂದರ್ಭದಲ್ಲಿ ಕರ್ಣನು ದುರ್ಯೋಧನನನ್ನು ತೊರೆಯುವುದಿಲ್ಲ ಎಂದಾಗ ಅವಳಲ್ಲಾಗುವ ಮನೋವ್ಯಥೆ ಅವಳನ್ನು ಸಂದಿಗ್ಧತೆಗೆ ದೂಡುತ್ತದೆ. ಆದರೆ ಅಲ್ಲಿಯೂ ತನ್ನ ವಂಶ ರಕ್ಷಣೆಗೆ ನಿಲ್ಲುತ್ತಾಳೆ. ಐದು ಜನರ ಉಳಿವಿಗಾಗಿ ಬೇಡುವ ಕುಂತಿ ಕರ್ಣನ ಒಳಿತಿನ ಬಗ್ಗೆ ಏಕೆ ಯೋಚಿಸಲಿಲ್ಲ? ವಿವಾಹಪೂರ್ವ ಮಗನ ವಿಷಯ ಬಹಿರಂಗವಾಗುತ್ತದೆ ಎಂಬ ಅಳುಕಿತ್ತೇ? ಕರ್ಣನ ಬಳಿ ತನ್ನ ತಮ್ಮಂದಿರ ಬಗ್ಗೆ ತಿಳಿಸಿದ ಹಾಗೆ ಪಾಂಡವರಿಗೂ ತಮ್ಮ ಅಣ್ಣನ ಬಗ್ಗೆ ತಿಳಿಸಲಿಲ್ಲವೇಕೆ?

ಆಗ ಕುಂತಿ ಭೋಂಕನೆರ್ದದೆಱೆದು

> "ಅಜಿದೆಂ ನೆಟ್ಟನೆ ಬೆಟ್ಟನಿಂತು ನುಡಿವೈ ನೀಂ ಕಂದ ಪೋಗಿಂದೆ ಕೆ
> ಟ್ಟಟಿದತ್ತಾಗದೆ ಸೋಮವಂಶಮೆನಗಿಂ ಬಾಟ್ವಾಸೆಯೆಲ್ಲಿತ್ತೊ ಬಿ
> ಟ್ಟುಟಿದೆಂ ಮತ್ತಿನ ಮಕ್ಕಳಾಸೆಯುಮನಾನೆಂದಳ್ಗೆ ಶೋಕಾಗ್ನಿ ಪೊಂ
> ಪುಟಿವೋಗುತ್ತಿರೆ ಕರ್ಣನೆಂದನಿನಿತೇಂ ಪೇಟಬ್ಬೆ ಚಿಂತಾಂತರಂ"[೪೬]

ಕರ್ಣನು ನುಡಿದ ಮಾತುಗಳಿಗೆ ಅಯ್ಯೋ ನಾನು ಅಳಿದೆ ಕಂದ. ನೀನು ಇಷ್ಟು ನೇರವಾಗಿ, ಒರಟಾಗಿ ಮಾತನಾಡುತ್ತಿದ್ದೀಯೇ. ಹೋಗು, ಇಂದೇ ಸೋಮ ವಂಶವು ಕೆಟ್ಟು ನಾಶವಾಗುವುದಿಲ್ಲವೇ. ಇನ್ನು ಮೇಲೆ ನನಗೂ ಬದುಕುವ ಆಸೆಯಿಲ್ಲ. ಮತ್ತೆ ಉಳಿದ ಮಕ್ಕಳ ಮೇಲಿನ ಆಸೆಯನ್ನು ಬಿಟ್ಟು ಬಿಟ್ಟೆನು ಎಂದಳು. ಈ ರೀತಿಯಾಗಿ ಕುಂತಿಯಲ್ಲಿ ಶೋಕಾಗ್ನಿಯು ವೃದ್ಧಿಯಾಗುತ್ತಿರಲು ಕರ್ಣನು ಆಕೆಯನ್ನು ಸಂತೈಸಿ ಪುರಿಗಣೆಯನ್ನು ಹಿಡಿಯುವುದಿಲ್ಲ, ನಿನ್ನ ಮಕ್ಕಳನ್ನು ಗಾಯಪಡಿಸಿದರೂ ಅವರನ್ನು ಕೊಲ್ಲುವುದಿಲ್ಲ ಎಂದು ಆಕೆಯನ್ನು ಸಮಾಧಾನಪಡಿಸಿ ಕಳುಹಿಸುತ್ತಾನೆ.

'ಕರ್ಣಾಟ ಭಾರತ ಕಥಾಮಂಜರಿ'ಯಲ್ಲಿ ಕರ್ಣಭೇದನಕ್ಕು ಮುಂಚೆಯೆ ಕುಂತಿ ಕರ್ಣನನ್ನು ಕಂಡು ದುಃಖಿಸುವ ಹಾಗೂ ಆತನ ಜನನದ ಸಂದರ್ಭದ ವಿವರಗಳು ನೆನಪಾಗುವುದು ಕಂಡುಬರುತ್ತದೆ. ಪಾಂಡವ ಕೌರವರೆಲ್ಲರು ತಾವು ಕಲಿತ ಶಸ್ತ್ರಾಸ್ತ್ರ ವಿದ್ಯೆಗಳನ್ನು ಎಲ್ಲರ ಮುಂದೆ ಪ್ರದರ್ಶಿಸುವ ಸಮಯದಲ್ಲಿ ಕರ್ಣ, ಅರ್ಜುನನೊಡನೆ ತನ್ನ ಬಿಲ್ವಿದ್ಯೆಯನ್ನು ಪ್ರದರ್ಶಿಸಲು ಬಂದಾಗ ಕುಂತಿ ಕರ್ಣನನ್ನು ನೋಡುತ್ತಾಳೆ. ಆತ ತನ್ನ ಮಗನೆಂಬುದು ಸ್ಪಷ್ಟವಾಗುತ್ತದೆ. ಆ ಸಂದರ್ಭವನ್ನು ಕವಿ ಈ ರೀತಿಯಾಗಿ ಚಿತ್ರಿಸಿದ್ದಾನೆ.

"ಈತನಾವನು ಕರ್ಣನೆಂಬವ
ನೀತನರ್ಜುನನೊಡನೆ ತಾ ಮಾ
ರಾತು ಕೈಮಾಡಿದನು ಕೈಕೊಳ್ಳನು ಧನಂಜಯನ
ಈತ ತಪ್ಪಲ್ಲೆನುತ ಮಿಗೆ ಮೈ
ಯಾತನಾ ಧೃತರಾಷ್ಟ್ರನೀತನ
ಮಾತೆ ಕಂಡಳು ಕುಂತಿ ನೆನೆದಳು ಪೂರ್ವಸಂಗತಿಯ"[೪೭]

ಅರ್ಜುನನೊಡನೆ ಶಸ್ತ್ರಾಸ್ತ್ರ ವಿದ್ಯೆಯನ್ನು ಪ್ರದರ್ಶಿಸಲು ನಿಂತ ಕರ್ಣನನ್ನು ಸಭೆಯಲ್ಲಿದ್ದವರು ಈತನಾವನು?, ಕರ್ಣನೆಂಬುವವನು. ಈತನು ಅರ್ಜುನನೊಡನೆ ತಾನು ಮಾರಾತು ಕೈ ಮಾಡಿದನು. ಇವನು ಧನಂಜಯನನ್ನು ಕೈಕೊಳ್ಳನು (ಗಣಿಸುವುದಿಲ್ಲ) ತಪ್ಪಲ್ಲ ಎಂಬ ಧೃತರಾಷ್ಟ್ರನ ಮಾತನ್ನು ಕೇಳಿದ ಕುಂತಿಯು ತನ್ನ ಪೂರ್ವ ಸಂಗತಿಯನ್ನು ನೆನಪಿಸಿಕೊಳ್ಳುತ್ತಾಳೆ. ತಾನು ಸೂರ್ಯನಿಂದ ಮಗುವನ್ನು ಪಡೆದದ್ದು, ಕುಲ ಹಾಗೂ ಸಮಾಜದ ಅಪವಾದಗಳಿಗೆ ಹೆದರಿ ಆ ಮಗುವನ್ನು ಗಂಗೆಯಲ್ಲಿ ಹಾಕಿದ ವಿವರಗಳೆಲ್ಲವನ್ನು ನೆನಪು ಮಾಡಿಕೊಳ್ಳುತ್ತಾಳೆ.

"ಎನ್ನ ಮಗನೆನೆ ಬಂದುದಿಲ್ಲದು
ತನ್ನ ವಶವೇ ವಿಷ್ಣುಮಾಯೆಯ
ಬಿನ್ನಣವಲೇ ಮಾತು ಬಿಗಿದುದು ಮನವನೊಳಗಿಕ್ಕಿ
ತನ್ನ ತಾನೇ ಮರುಗಿ ಮೂರ್ಛಾ
ಪನ್ನೆಯಾದಳು ಕುಂತಿಯಿತ್ತಲು
ಖಿನ್ನನಾದನು ಕೃಪನ ನುಡಿಯಲಿ ದುಗುಡ ಮಿಗೆ ಕರ್ಣ"[೪೮]

"ಶಸ್ತ್ರಾಸ್ತ್ರ ಸ್ಪರ್ಧೆಯಲ್ಲಿ ಕರ್ಣನು ಮಧ್ಯೆ ಪ್ರವೇಶಿಸಿದಾಗ ಕರ್ಣಾರ್ಜುನರ ಕಲಹವನ್ನು ನೋಡಿ, ಅವಳು ಮೂರ್ಛಿತಳಾದಳು. ಆ ಆಘಾತದ ಮೂಲಕ ಎಚ್ಚೆತ್ತ ಮೇಲೂ ಕರ್ಣನು ತನ್ನ ಮಗನೆಂದು ಸಾರಲು ಅವಳ ಬಳಲಿದ ಮೆದುಳಿಗೆ ಸೂಚನೆಯಾಗಿರಲಿಕ್ಕಿಲ್ಲ. ಅಥವಾ ಇತರ ಪುತ್ರರ ಮೋಹವೂ ಅಕೀರ್ತಿಯ ಹೆದರಿಕೆಯೂ ಅದನ್ನು ತಡೆದಿರಬಹುದು. (ಕುಂತಿ ವಿಷ್ಣು ಮಾಯೆಯಿಂದ ಆವೃತಳಾಗಿ ಮೌನದಿಂದಿದ್ದಾಳೆಂದು ಕುಮಾರವ್ಯಾಸನು ನವೀನ ಕಾರಣವನ್ನು ಹೇಳಿದ್ದಾನೆ)"[೪೯] ಎಂಬ ಈ ಚರ್ಚೆಯ ಜೊತೆಗೆ ಪುತ್ರ ವ್ಯಾಮೋಹವನ್ನು ಅನುಭವಿಸುವ ಸಂದರ್ಭ ಅದಾಗಿರಲಿಲ್ಲ. ಇದೆಲ್ಲವು ಕೃಷ್ಣನ ಆಣತಿಯಲ್ಲಿ ನಡೆಯುತ್ತಿರುವಂತಹದ್ದು. ಇಡೀ ಮಹಾಭಾರತವೇ ಕೃಷ್ಣನಿಂದ ನಿರ್ದೇಶಿಸಲ್ಪಟ್ಟಿದ್ದಾಗಿದೆ. ಹೀಗಿರುವಾಗ ಕುಂತಿ ಅದನ್ನು ಮೀರುವುದಾದರೂ ಹೇಗೆ? ತನ್ನ ಮನದ ಅಭಿಲಾಷೆಯನ್ನು ಹೇಳಿಕೊಳ್ಳಲಾರದ ಸಂದಿಗ್ಧತೆಯಲ್ಲಿ ಕುಂತಿ ಇದ್ದಾಳೆ.

ಹಾಗೆಯೇ "ಈ ಸಮಯದಲ್ಲಿಯಾದರೂ ಕುಂತಿಯು ನಿಜವನ್ನು ಸಾರಿ ಹಡೆದ ಮಗನನ್ನು ಮರಳಿ ಪಡೆಯಬಹುದಾಗಿತ್ತು; ರಾಧೇಯನನ್ನು ಕೌಂತೇಯನನ್ನಾಗಿ ಮಾಡಬಹುದಾಗಿತ್ತು. ಆದರೆ

ಲೋಕಾಪವಾದ ಭೀತಿಯೆಂಬ ಭೂತವು ತಾಯ್ತನವನ್ನು ಕರುಣೆಯಿಲ್ಲದೆ ಮುರಿದು ನುಂಗಿತು. ಆಕೆಯು ಸುಮ್ಮನಿದ್ದಳು"[೫೦] ಎಂಬ ಮಾತುಗಳು ಮೇಲಿನ ಅಭಿಪ್ರಾಯಕ್ಕೆ ಪೂರಕವಾಗಿದ್ದರೂ ಕುಂತಿಯ ಸಂದಿಗ್ಧತೆ ಇಬ್ಬಗೆಯಿಂದ ಕೂಡಿದೆ. ಹೆತ್ತ ದಿನವೇ ಕಳೆದುಕೊಂಡ ಮಗ ಒಂದು ಕಡೆಯಾದರೆ ಜೀವನದುದ್ದಕ್ಕೂ ಆಡಿ ಬೆಳೆಸಿದ ಪಂಚ ಪಾಂಡವರು ಮತ್ತೊಂದು ಕಡೆ. ಯಾರನ್ನು ಪಡೆಯುವುದು ಮತ್ತು ಯಾರನ್ನು ಬಿಡುವುದು ಎನ್ನುವ ಅಸಹಾಯತೆ ಅವಳ ಬಾಯನ್ನು ಕಟ್ಟಿಹಾಕಿದೆ.

ಇದರ ನಂತರದಲ್ಲಿ ಕರ್ಣಭೇದನದ ಸಂದರ್ಭದಲ್ಲಿ ಕರ್ಣನನ್ನು ಭೇಟಿಮಾಡಿದಾಗಿನ ಕುಂತಿಯ ಸಂದಿಗ್ಧ ಮನಸ್ಥಿತಿ ನಮ್ಮ ಗಮನ ಸೆಳೆಯುತ್ತದೆ. ಏಕೆಂದರೆ ಕರ್ಣ ತನ್ನ ಮಗ ಎಂದು ಹೇಳಿಕೊಳ್ಳಲಾಗದ ಧರ್ಮ ಸಂಕಟದ ವಿಷಮ ಪರಿಸ್ಥಿತಿಯಲ್ಲಿ ಕುಂತಿ ಇದ್ದಾಳೆ. ಮತ್ತೊಂದು ಕಡೆ ತನ್ನ ಇತರ ಮಕ್ಕಳಾದ ಪಾಂಡವರಿದ್ದಾರೆ. ಕರ್ಣನಂತೆಯೇ ಪಾಂಡವರಲ್ಲಿ ಯಾರನ್ನೂ ಕಳೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಹಾಗೆಯೇ ಪಾಂಡವರ ಬದಲಿಗೆ ಕರ್ಣನನ್ನು ಕಳೆದುಕೊಂಡರೂ ದುಃಖಿಸುವವಳು ಕುಂತಿಯೇ ಆಗಿದ್ದಾಳೆ. ಆದರೂ ಕೂಡ ಆ ಕಾಲದ ರಾಜಕೀಯ ಬಿಕ್ಕಟ್ಟುಗಳಿಗೆ ಸಿಲುಕಿ ಹಾಗೂ ತನ್ನ ಮೇಲೆ ಬರುವ ಅಪಕೀರ್ತಿಗೆ ಹೆದರಿ ಕುಂತಿ ಕರ್ಣನನ್ನು ಬಲಿಕೊಡುವುದು ಕಂಡುಬರುತ್ತದೆ. ಆಕೆ ಕೃಷ್ಣನ ನಿರ್ದೇಶನದಂತೆ ಕರ್ಣನನ್ನು ಕಂಡು ಆತನಿಂದ ತನ್ನ ಉಳಿದ ಮಕ್ಕಳಿಗೆ ಯಾವುದೇ ಅನಾಹುತಗಳಾಗದಂತೆ ನೋಡಿಕೊಳ್ಳುವ ಕಾರಣವಾಗಿ ಕರ್ಣನಿಂದ ಭಾಷೆಯನ್ನು ಪಡೆಯಲು ಬರುತ್ತಾಳೆ. ಆ ಸಂದರ್ಭವನ್ನು ಕುಮಾರವ್ಯಾಸ ಕವಿಯು ಹೀಗೆ ವಿವರಿಸಿದ್ದಾನೆ.

"ಬರಲು ತಾಯ್ಗಿದಿರಾಗಿ ರವಿಸುತ
ನಿರದೆ ಬಂದನು ದಂಡದಂತಿರೆ
ಚರಣದಲಿ ಮೈಯಿಕ್ಕಲಾತನ ನೊಸಲ ನೆಗಹಿದಳು
ಬರಸೆಳೆದು ಬಿಗಿದಪ್ಪಿದಳು ನೀ
ರುರವಣಿಸಿದವು ನಯನದಲಿ ಸೆರೆ
ಕೊರಳಿಗೌಕಿ ತಾನಳಲಿನಬುಧಿಯೊಳಾಳ್ದಳಾ ಕುಂತಿ"[೫೧]

ಕುಂತಿಯು ಕರ್ಣನನ್ನು ಕಾಣಲೆಂದು ಭಾಗೀರಥಿ ನದಿಯ ಬಳಿಗೆ ಬಂದಳು. ಆಕೆ ಬರಲು ಕರ್ಣನು ತಾಯಿಗೆ ಎದುರಾಗಿ ಬಂದನು. ಆಕೆಯ ಚರಣದಲ್ಲಿ ದಂಡದಂತೆ ಮೈಯಿಕ್ಕಿ ನಮಸ್ಕರಿಸಿದನು. ಆ ರೀತಿ ಇರುವ ತನ್ನ ಮಗನ ಹಣೆಯನ್ನು ಹಿಡಿದೆತ್ತಿ ಬರಸೆಳೆದು ಬಿಗಿದಪ್ಪಿದಳು. ಆಕೆಯ ಕಣ್ಣುಗಳಲ್ಲಿ ನೀರು ಉಕ್ಕಿ ಉಕ್ಕಿ ಬಂತು. ಕೊರಳ ನರಗಳು ಉಬ್ಬಿ ಒತ್ತಿ ಹಿಡಿದವು. ಇತ್ತ ಕುಂತಿ ಅಳಲಿನ ಅಬುಧಿಯೊಳಗೆ ಮುಳುಗಿದಳು. ಇಲ್ಲಿ ಕುಂತಿಗೆ ತನ್ನ ಮಗನನ್ನು ನೋಡಿದ ಆನಂದ ಒಂದೆಡೆಯಾದರೆ, ಯುದ್ಧದಲ್ಲಿ ತನ್ನ ಉಳಿದ ಮಕ್ಕಳನ್ನು ರಕ್ಷಿಸಿಕೊಳ್ಳುವ ಅನಿವಾರ್ಯತೆ ಮತ್ತೊಂದೆಡೆ. ಆ ಕಾರಣವಾಗಿ ಈಗ ಕರ್ಣಭೇದನಕ್ಕಾಗಿ ಬಂದಿದ್ದಾಳೆ. ಇದು ಅವಳ ಸಂಕಟಕ್ಕೆ

ಕಾರಣವಾಗಿರುವಂತಹದ್ದು. ಇದನ್ನು ಯಾರಲ್ಲಿಯೂ ನೇರವಾಗಿ ಹೇಳಿಕೊಳ್ಳಲಾಗದ ಅಸಹಾಯಕ ಪರಿಸ್ಥಿತಿಯಲ್ಲಿ ಸಮಯವನ್ನು ದೂಡುತ್ತಿದ್ದಾಳೆ ಕುಂತಿ.

ಇದೇ ಸಮಯದಲ್ಲಿ ಗಂಗೆ ನಾರೀ ರೂಪವನ್ನು ತಾಳಿ ಬಂದು ಕುಂತಿ ನೀನು ಕೈಯೆಡೆಯೆಂದು ನನಗೊಪ್ಪಿಸಿದ ಕಂದನನ್ನು ಇಷ್ಟು ದಿನ ಸಲಹಿದ್ದೇನೆ. ಇನ್ನು ನಿನಗೆ ನಿನ್ನ ಮಗನನ್ನು ಕೊಡುತ್ತಿದ್ದೇನೆ ಎಂದು ತಿಳಿಸಿದಳು. ಇತ್ತ ಸೂರ್ಯನು ಬಂದು ಕರ್ಣನನ್ನು ಕುರಿತು ಕುಂತಿಯು ನಿನ್ನ ತಾಯಿ. ಅವಳು ಮುರಹರನ ಮತದಿಂದ ನಿನ್ನಯ ಸರಳುಗಳನ್ನು ಬೇಡಲು ಬಂದಿದ್ದಾಳೆ. ಹಾಗಾಗಿ ಅಂದು ಹರಿಗೆ ಕವಚವನ್ನಿತ್ತಂತೆ ಮರುಳಾಗದಿರೆಂದು ಎಚ್ಚರಿಸುತ್ತಾನೆ. ಇದಕ್ಕೆ ಒಪ್ಪಿಕೊಂಡ ಕರ್ಣ ಸೂರ್ಯನು ವಾಪಸ್ಸಾದ ನಂತರ ಭಯಭರಿತ ಭಕ್ತಿಯಲ್ಲಿ ಮಾತೆಯನ್ನು ಕಾಣಲು ಕುಂತಿ ಕರ್ಣನನ್ನು ತೆಗೆದು ಬಿಗಿದಪ್ಪಿ ಈ ರೀತಿ ಹೇಳುತ್ತಾಳೆ.

"ಮಗನೆ ತಮ್ಮಂದಿರನು ಪಾಲಿಸು
ವಿಗಡತನವನು ಮಾಣು ನೀನೋ
ಲಗಿಸುವರೆ ಕುರುಪತಿಯ ನಿನಗವರಿದಿರೆಯಿತ್ತಂಡ
ಸೊಗಸು ತಾನೆಂದುದನು ಹಿಸುಣರ
ಬಗೆಯ ನೀ ಕೇಳದಿರು ನೀ ಮನ
ಬಿಗಿಸದಿರು ಸಲಿಸೆನ್ನ ವಚನವನೆಂದಳಾ ಕುಂತಿ"[೫೨]

ಮಗನೆ ಉಳಿದ ನಿನ್ನ ತಮ್ಮಂದಿರನ್ನು ಪಾಲಿಸು. ವಿಗಡತನವನ್ನು ಬಿಟ್ಟು ಬಿಡು. ನೀನು ಆ ಕುರುಪತಿಯಲ್ಲಿ ಓಲಗಿಸುವುದೇ? ನಿನಗೆ ಅವರು ಸರಿಸಮಾನರೆ, ಹಿಸುಣರ ಬಗೆಯನ್ನು ನೀನು ಕೇಳದಿರು. ಮನಸ್ಸನ್ನು ಕಠಿಣಮಾಡಿಕೊಳ್ಳದೆ ನನ್ನ ಮಾತನ್ನು ನಡೆಸಿಕೊಡು. ನಾನು ಹೇಳಿದ್ದನ್ನು ಒಪ್ಪಿಕೋ ಎಂದು ಕರ್ಣನನ್ನು ಕೇಳಿಕೊಳ್ಳುತ್ತಾಳೆ.

"ಆದೊಡೈವರ ಮಕ್ಕಳನು ತಲೆ
ಗಾಯ್ದು ತೋರೈ ಕಂದ ನಿನಗಿ
ನ್ನೀ ದುರಾಗ್ರಹವೊಪ್ಪುವುದೆ ಕೌರವನ ಸೇವೆಯಲಿ
ಹೋದ ಬಾಣವ ಮರಳಿ ತೊಡದಿರು
ಮಾದು ಕಳೆ ವೈರವನೆನಲ್ಕೆ ಹ
ಸಾದವೆಂದನು ಬೀಳುಕೊಟ್ಟನು ಬಂದನರಮನೆಗೆ"[೫೩]

ಹಾಗಾದರೆ, ಮಗನೆ ನನ್ನ ಐವರು ಮಕ್ಕಳನು ತಲೆಯುಳಿಸಿ ಕಾಪಾಡು. ತೋರಯ್ಯ? ಇನ್ನು ಮುಂದೆ ಕೌರವನ ಸೇವೆಯಲ್ಲಿ ನಿನಗೆ ಈ ದುರಾಗ್ರಹವು ಒಪ್ಪುತ್ತದೆಯೇ? ಹಾಗಾಗಿ ಹೋದ ಬಾಣವನ್ನು ಮತ್ತೆ ತೊಡಬೇಡ, ವೈರತ್ವದ ಭಾವನೆಯನ್ನು ಬಿಟ್ಟು ಬಿಡು ಎಂದು ಕರ್ಣನನ್ನು ಬೇಡಿಕೊಳ್ಳುತ್ತಾಳೆ.

೩.೧.೨.೮. ಯುದ್ಧಭೂಮಿಯಲ್ಲಿ ಕರ್ಣಾವಸಾನವನ್ನು ನೋಡಿದ ಸಂದರ್ಭದಲ್ಲಿನ ಸಂಘರ್ಷಗಳು

ಮಹಾಭಾರತ ಯುದ್ಧ ನಡೆದು ಯುದ್ಧ ಭೂಮಿಯಲ್ಲಿ ಕುಂತಿ–ಗಾಂಧಾರಿಯಾದಿಯಾಗಿ ಎಲ್ಲರೂ ದುಃಖಿಸುತ್ತಾರೆ. ಗಾಂಧಾರಿಯು ದುರ್ಯೋಧನನ್ನೂ ಒಳಗೊಂಡಂತೆ ತನ್ನ ನೂರು ಜನ ಮಕ್ಕಳನ್ನು ಕಳೆದುಕೊಂಡು ದುಃಖಪಡುತ್ತಿರುತ್ತಾಳೆ. ಇತ್ತ ಕುಂತಿ ಅಲ್ಲಿಯವರೆಗೂ ತಾನು ಬಚ್ಚಿಟ್ಟುಕೊಂಡಿದ್ದ ಕರ್ಣನ ಹುಟ್ಟಿನ ಬಗೆಗಿನ ಸತ್ಯವನ್ನು ಹೊರಹಾಕುತ್ತಾಳೆ. ಕೌರವರೆಲ್ಲ ನಿಧನರಾದ ಮೇಲೆ ಅವರ ಕಳೆಬರಹಗಳನ್ನು ನೋಡುತ್ತ ಯುದ್ಧಭೂಮಿಯಲ್ಲಿ ಗಾಂಧಾರಿ ಹಾಗೂ ಧೃತರಾಷ್ಟ್ರರು ಶೋಕಿಸುತ್ತಿರುತ್ತಾರೆ. ಆಗ ಧರ್ಮರಾಜನು ನೀವು ದುಃಖಪಡಬೇಡಿರಿ ನಾನೇ ಪಕ್ಕದಲ್ಲಿದ್ದು ಅವರೆಲ್ಲರ ಸಂಸ್ಕಾರ ವಿಧಿಯನ್ನು ಮಾಡಿಸುತ್ತೇನೆ ಎಂದು ಸಮಾಧಾನ ಪಡಿಸುತ್ತಿರುತ್ತಾನೆ. ಹೀಗಿರುವಾಗ ಕುಂತಿದೇವಿಯು ಅಲ್ಲಿಗೆ ಬಂದು ಕರ್ಣನ ಕಳೆಬರಹವನ್ನು ತಬ್ಬಿಕೊಂಡು ಪಾಂಡವರೈದು ಜನರನ್ನೂ ಬರಮಾಡಿಕೊಂಡು ಹೀಗೆ ನುಡಿಯುತ್ತಾಳೆ. ಈತನು

"ನಿಮ್ಮಣ್ಣನೆನ್ನ ಪಿರಿಯ ಮ
ಗಮ್ಮಾತೇಂ ಕರ್ಣನಾಂ ಮಹಾಪಾತಕಿಯೆಂ
ನಿಮ್ಮಯ ಮೋಹದಿನೀತಂ
ಗಾಮ್ಮಾಡಿಸಿದೆನಿನಿತನೆಂದು ಶೋಕಂಗೆಯ್ದಳ್"[೫೪]

ಕರ್ಣನು ನಿಮ್ಮಣ್ಣ, ನನ್ನ ಹಿರಿಯ ಮಗ, ಮಾತೇನು? ನಾನು ಮಹಾಪಾತಕಿ. ನಿಮ್ಮಗಳ ಮೇಲಿನ ಮೋಹದಿಂದ ಈತನಿಗೆ ಇಷ್ಟೆಲ್ಲಾ ದುಸ್ಥಿತಿಗಳು ಒದಗುವಂತೆ ಮಾಡಿದವಳು ನಾನೇ ಎಂದು ದುಃಖಿಸುತ್ತಾಳೆ. ಇಲ್ಲಿ ಕುಂತಿಗೆ ಕರ್ಣನ ಜನ್ಮ ರಹಸ್ಯವನ್ನು ಗೌಪ್ಯವಾಗಿಡಲು ಸಾಧ್ಯವಾಗುವುದಿಲ್ಲ. ಯಾವ ತಾಯಿಯೂ ತನ್ನ ಕಣ್ಣೆದುರೇ ತನ್ನ ಮಕ್ಕಳ ಸಾವನ್ನು ನೋಡಿ ಸಹಿಸಲಾರಳು. ಕರ್ಣನ ಸಾವು ಕುಂತಿಯನ್ನು ಜರ್ಜರಿತಳನ್ನಾಗಿಸಿದೆ. ಮರ್ಯಾದೆ, ವಂಶ ಪ್ರತಿಷ್ಠೆ, ಅಪಕೀರ್ತಿಯ ಭಯ ಇವೆಲ್ಲಕ್ಕಿಂತಲೂ ಪ್ರಾಣ ಮುಖ್ಯ ಎಂಬ ಸತ್ಯ ಮಗನ ಸಾವನ್ನು ಕಂಡ ಕುಂತಿಯಲ್ಲಿ ಉಂಟಾಗಿದೆ. ಕರ್ಣನ ದುಸ್ಥಿತಿಗೆ ಪರೋಕ್ಷವಾಗಿ ಕುಂತಿಯೇ ಕಾರಣಳಾಗಿದ್ದಾಳೆ. ಅದು ಕುಂತಿಯಲ್ಲಿ ಪಾಪ ಪ್ರಜ್ಞೆಯಾಗಿ ಕಾಡುತ್ತಿದೆ. ರಾಜ್ಯಾಧಿಕಾರಕ್ಕಾಗಿ, ತನ್ನ ವಂಶದ ಉಳಿವಿಗಾಗಿ ತನ್ನ ಮಗನನ್ನು ತಾನೇ ಬಲಿ ಕೊಡುವುದು ವಿಪರ್ಯಾಸವೇ ಸರಿ. ಆತ ತನ್ನ ಮಗನೆಂಬುದನ್ನು ಎಲ್ಲರ ಮುಂದೆ ಹೇಳಿಕೊಳ್ಳುತ್ತಾಳೆ.

ಈ ವಿಚಾರ ತಿಳಿದ ಐವರೂ ಸಹೋದರರು ದುಃಖವನ್ನು ಸಹಿಸಲಾರದೆ ಕುಂತಿಗೆ ನೀನು ಮೊದಲೇ ಈತ ನಮಗಣ್ಣನೆಂದು ತಿಳಿಸಿದ್ದರೆ ಪಟ್ಟವನ್ನು, ರಾಜ್ಯವನ್ನೂ ಈತನಿಗೆ ಕೊಟ್ಟು ಕೌರವ ಮುಖ್ಯಸ್ಥನಾದ ದುರ್ಯೋಧನನಲ್ಲಿ ಶಾಶ್ವತವಾಗಿ ದ್ವೇಷವನ್ನು ತ್ಯಜಿಸುತ್ತಿದ್ದೆವು. ನೀನು ಹೇಳಿದಂತೆ ನಾವು ಕಾರ್ಯ ನಿರ್ವಹಿಸುತ್ತಿದ್ದೆವು ಎಂದು ದುಃಖಿಸುತ್ತಿರಲು ಕೃಷ್ಣನು ಅವರನ್ನೆಲ್ಲ ಸಮಾಧಾನಪಡಿಸಿ ಯುದ್ಧ ರಂಗದಲ್ಲಿ ಶಾಸ್ತ್ರರೀತಿಯಲ್ಲಿ ದುರ್ಯೋಧನ, ಕರ್ಣ ಮೊದಲಾದ ಎಲ್ಲ ವೀರರ ಕಳೆಬರಹಗಳನ್ನು

ವಿಧಿಪೂರ್ವಕವಾಗಿ ಸಂಸ್ಕಾರ ಮಾಡಿದರು. ಧೃತರಾಷ್ಟ್ರ ಹಾಗೂ ಗಾಂಧಾರಿಯು ಮಕ್ಕಳನ್ನು ಕಳೆದುಕೊಂಡ ಅತೀವ ದುಃಖದಿಂದ ಋಷಿಗಳ ತಪೋವನವನ್ನು ಆಶ್ರಯಿಸಿದರು. ಇತ್ತ ಕುಂತಿಯು ಸಹ ಧರ್ಮರಾಯನ ಅನುಮತಿ ಪಡೆದು ಕರ್ಣನ ಸಾವಿನ ದುಃಖದಿಂದ ಹೊರಟು ತಪಸ್ಸಿನಲ್ಲಿ ನಿರತಳಾದಳು.

'ಕರ್ಣಾಟ ಭಾರತ ಕಥಾಮಂಜರಿ'ಯಲ್ಲಿ ಗದಾಪರ್ವದ ೧೨ನೆ ಸಂಧಿಯಲ್ಲಿ ಕರ್ಣನ ಕಳೆಬರಹವನ್ನು ಕಂಡು ಕುಂತಿ ದುಃಖಿಸುವ ವಿವರಗಳಿವೆ.

"ಜನಪ ಕೇಳೀಚೆಯಲಿ ಕುಂತೀ
ವನಿತೆ ಕರ್ಣನ ಮೇಲೆ ಹೊರಳಿದ
ಳಿನತನುಜ ಹಾ ಕರ್ಣ ಹಾ ಹಾ ಕರ್ಣ ಹಾಯೆನುತ
ನಿನಗೆ ಧರ್ಮಸುತಾದಿ ಭೂಮಿಪ
ರನುಜರೈ ಮಾಯಾವಿ ಮಧುಸೂ
ದನನೆ ಮರಯಿಸಿ ಕೊಂದನಕಟೆಂದೊರಲಿದಳು ಕುಂತಿ"[೫೫]

ಜನಪ ಕೇಳು ಈಚೆಯಲಿ ಕುಂತೀ ವನಿತೆಯು ಕರ್ಣನ ಮೇಲೆ ಬಿದ್ದು ದುಃಖದಿಂದ ಹೊರಳಾಡಿದಳು. ಇನತನುಜ ಹಾ ಕರ್ಣ ಹಾ ಹಾ ಕರ್ಣ ಹಾಯೆನುತ ಅಳುತ್ತ ನಿನಗೆ ಧರ್ಮಸುತಾದಿ ಭೂಮಿಪರು ತಮ್ಮಂದಿರಯ್ಯಾ. ಆ ಮಾಯಾವಿ ಮಧುಸೂದನನು ಇದನ್ನು ನಿನ್ನಿಂದ ಮರೆಯಿಸಿ (ನಿನಗೆ ತಿಳಿಯದಂತೆ ಮಾಡಿ) ನಿನ್ನನ್ನು ಕೊಂದನು ಅಯ್ಯೋ ಎಂದು ಒರಲಿದಳು. ಕೊನೆಯ ಸಾಲನ್ನು ಇಲ್ಲಿ ಗಮನಿಸುವುದು ಉಚಿತ. ಕುಂತಿ ಅಲ್ಲಿಯವರೆಗು ಸುಮ್ಮನಿದ್ದು ಕೊನೆಯಲ್ಲಿ ಕರ್ಣನ ಕಳೆಬರಹವನ್ನು ಕಂಡು ದುಃಖಿಸುವಾಗ ನಿನ್ನ ಸಾವಿಗೆ ಕಾರಣ ಕೃಷ್ಣ ಎಂದು ಹೇಳುತ್ತಾಳೆ. ಏಕೆಂದರೆ ಪಾಂಡವರು ನಿನ್ನ ತಮ್ಮಂದಿರು ಎಂಬ ಸತ್ಯವನ್ನು ನಿನ್ನಿಂದ ಮರೆ ಮಾಚಿ ಪಾಂಡವರಿಂದಲೆ ನಿನ್ನನ್ನು ಕೊಲ್ಲಿಸಿದನು ಎಂದು ಮರುಗುತ್ತಾಳೆ.

ಅಲ್ಲದೆ ಕೃಷ್ಣನ ತಂಗಿಯಾದ ಸುಭದ್ರೆಯು ಅರ್ಜುನನನ್ನು ವಿವಾಹವಾಗಿದ್ದಳು. ಯುದ್ಧದ ಸಮಯದಲ್ಲಿ ಒಂದು ವೇಳೆ ಕರ್ಣನಿಂದ ಅರ್ಜುನನಿಗೇನಾದರೂ ಅಪಾಯಗಳು ಸಂಭವಿಸಿದರೆ ತನ್ನ ತಂಗಿ ಅನಾಥಳಾಗುತ್ತಾಳೆ. ಅವಳು ದುಃಖದಲ್ಲಿ ಮುಳುಗುವಳು ಎಂಬ ಆಲೋಚನೆ ಕೃಷ್ಣನಲ್ಲಿ ಇದ್ದಿರಲೂಬಹುದು. ಆದರೆ ಇಲ್ಲಿ ಕುಂತಿ ಕರ್ಣನನ್ನು ಕೃಷ್ಣನು ಕೊಂದನೆಂದು ಹೇಳುವ ಮಾತಿನಲ್ಲಿನ ಔಚಿತ್ಯವೇನಿದೆ ಎಂಬುದು ಚರ್ಚೆಸತಕ್ಕದ್ದು. ಏಕೆಂದರೆ ಕರ್ಣನ ಸಾವಿನಲ್ಲಿ ಕೃಷ್ಣನಂತೆಯೆ ಕುಂತಿಗೂ ಕೂಡ ಪಾಲಿದೆ. ಏಕೆಂದರೆ ಕರ್ಣ ತನ್ನ ಮಗನೆಂದು ಗೊತ್ತಿದ್ದರೂ ಕೂಡ ಕರ್ಣನಲ್ಲಿ 'ತೊಟ್ಟ ಬಾಣವನ್ನು ತೊಡದಿರುವಂತೆ' ಹಾಗೂ 'ತನ್ನ ಐವರು ಮಕ್ಕಳನ್ನು ಕೊಲ್ಲದೆ ರಕ್ಷಿಸುವಂತೆ' ಭಾಷೆ ತೆಗೆದುಕೊಳ್ಳುತ್ತಾಳೆ. ಜೊತೆಗೆ ಕರ್ಣ ತನ್ನ ಮಗನೆಂಬುದನ್ನು ಯಾರಿಗೂ ಕೂಡ ಕೊನೆಯವರೆಗು ತಿಳಿಸುವುದೇ ಇಲ್ಲ. ಹೀಗಿರುವಾಗ ಕರ್ಣನ ಸಾವಿಗೆ ಕೃಷ್ಣನೊಬ್ಬನೇ ಹೇಗೆ ಕಾರಣನಾಗುತ್ತಾನೆ?

ಕುಂತಿ ಕರ್ಣನ ಕಳೆಬರಹವನ್ನು ನೋಡಿ ದುಃಖಿಸಿ ತನ್ನ ಉಳಿದ ಮಕ್ಕಳಿಗೆ ಕರ್ಣನ ವೃತ್ತಾಂತವನ್ನು ತಿಳಿಸುತ್ತಾಳೆ. ಆಗ ಧರ್ಮರಾಯನು ದುಃಖಿಸುತ "ಮುನ್ನೆಚ್ಚರಿಸದಕಟಾ ತಾಯಿ ಕೆಡಿಸಿದಳೆಂದು"[೫೬] ಬಿಸುಸುಯ್ಯುತ್ತಾನೆ. ಅಂದರೆ ಕರ್ಣ ನಿಮಗೆ ಅಣ್ಣ ಎಂದು ಮೊದಲೆ ಎಚ್ಚರಿಸದೆ ತಾಯಿ ನಮ್ಮನ್ನು ಕೆಡಿಸಿದಳು ಎಂದು ಅಳುತ್ತಾನೆ. ಆದರೆ ಇಲ್ಲಿ ಗಮನಿಸತಕ್ಕ ಸಂಗತಿ ಎಂದರೆ ಎಲ್ಲ ಅನರ್ಥಗಳಿಗೂ ತಾಯಿಯೆ ಕಾರಣ ಎಂಬಂತಹ ಅಭಿಪ್ರಾಯದಲ್ಲಿ ಅಂತಕಸೂನು ಮಾತನಾಡುವುದು ತಿಳಿಯುತ್ತದೆ. ಅಂದರೆ ಎಲ್ಲ ಕೆಟ್ಟ ಕಾರ್ಯಗಳಿಗೆ ಹೆಣ್ಣೇ ಮೂಲ ಕಾರಣ ಎನ್ನುವಂತಿದೆ ಆತನ ಮಾತು. ಜೊತೆಗೆ ಸಂದರ್ಭದ ಪರಿಣಾಮಗಳನ್ನು ಬೇರೆಯವರ ಮೇಲೆ ಹಾಕುತ್ತ ಅವರನ್ನು ಹೊಣೆಗಾರರನ್ನಾಗಿಸುವುದು ಕಂಡುಬರುತ್ತದೆ.

೩.೨. ತಿರಸ್ಕಾರಾತ್ಮಕ ಸಂಘರ್ಷದ ನೆಲೆಗಳು

ಸಂಘರ್ಷದ ಮೂಲ ಸೆಲೆ ಇರುವುದೇ ತಿರಸ್ಕಾರದಲ್ಲಿ. ನಕಾರಾತ್ಮಕ ಆಲೋಚನೆಗಳು ಇಲ್ಲಿ ಕೆಲಸ ಮಾಡುತ್ತವೆ. ತಿರಸ್ಕಾರ ಮತ್ತು ನಿರಾಕರಣೆಗಳು ಮೇಲ್ನೋಟಕ್ಕೆ ಒಂದೇ ಎಂಬಂತೆ ಕಂಡುಬಂದರೂ ಆಂತರ್ಯದ ಪರಿಣಾಮದಲ್ಲಿ ಭಿನ್ನವಾದ ಭಾವಾಭಿವ್ಯಕ್ತಿಯನ್ನು ಒಳಗೊಂಡಿವೆ. ನಿರಾಕರಣೆ ತತ್‌ಕ್ಷಣದ ಅಸಮ್ಮತಿಯನ್ನು, ಅತೃಪ್ತಿಯನ್ನು, ಅಸಹಕಾರವನ್ನು ಪ್ರತಿನಿಧಿಸಿದರೆ, ತಿರಸ್ಕಾರವು ಶಾಶ್ವತವಾದ ಭಿನ್ನಾಭಿಪ್ರಾಯವನ್ನು ಒಳಗೊಂಡಿರುತ್ತದೆ. ನಿರಾಕರಣೆಯು ಪುನರಾವಲೋಕನಕ್ಕೆ ಅವಕಾಶ ಮಾಡಿಕೊಟ್ಟರೆ, ತಿರಸ್ಕಾರ ಪೂರ್ವ ನಿರ್ಧಾರಿತಕ್ಕೆ ಬದ್ಧವಾಗಿರುತ್ತದೆ. ನಿರಾಕರಿಸಲ್ಪಟ್ಟ ವಸ್ತು, ವಿಷಯಕ್ಕೆ ಸ್ಪಷ್ಟ ವಿವರಣೆ ಸಿಗದಿದ್ದ ಸಂದರ್ಭದಲ್ಲಿ ಅದು ತಿರಸ್ಕಾರವಾಗಿಯೂ ಮಾರ್ಪಡಬಹುದು. ನಿರಾಕರಣೆ ತಿರಸ್ಕಾರವಾದಷ್ಟು, ತಿರಸ್ಕಾರವು ನಿರಾಕರಣೆಯಾಗುವ ಸಂಭವ ಅತಿ ವಿರಳ. ತಿರಸ್ಕಾರದಲ್ಲಿ ದುಡುಕಿನ ಮನಸ್ಥಿತಿ ಹೆಚ್ಚು ಕೆಲಸ ಮಾಡುತ್ತದೆ. ಇಂತಹ ತಿರಸ್ಕಾರಾತ್ಮಕ ಸಂಘರ್ಷದ ನೆಲೆಯಲ್ಲಿ ಅಂಬಿಕೆ, ಅಂಬಾಲಿಕೆಯರ ಆಲೋಚನಾ ಕ್ರಮಗಳನ್ನು ಪ್ರಸ್ತುತ ಉಪಶೀರ್ಷಿಕೆಯ ಅಡಿಯಲ್ಲಿ ಚರ್ಚಿಸಲಾಗುವುದು.

೩.೨.೧ ಅಂಬಿಕೆ ಮತ್ತು ಅಂಬಾಲಿಕೆಯರ ಸಂಘರ್ಷ

ಭೀಷ್ಮನು ಅಪಹರಿಸಿ ತಂದ ಕಾಶಿರಾಜನ (ಪಂಪಭಾರತ) ಮೂರು ಜನ ಮಕ್ಕಳಲ್ಲಿ ಅಂಬಿಕೆ ಮತ್ತು ಅಂಬಾಲಿಕೆಯರು ಕಿರಿಯವರು. ಹಿರಿಯವಳಾದ ಅಂಬೆಯಂತೆ ಇವರಿಬ್ಬರಲ್ಲಿ ಯಾವುದೇ ರೀತಿಯ ಪ್ರತಿಭಟನೆ ಹಾಗೂ ವಿರೋಧಗಳು ಕಂಡುಬರುವುದಿಲ್ಲ. ಎಲ್ಲವನ್ನೂ ಮೌನವಾಗಿ ಅನುಭವಿಸುವ ಅಸಹಾಯಕರಾಗಿ ಇವರಿಬ್ಬರೂ ಸಹ ನಮ್ಮ ಗಮನವನ್ನು ಸೆಳೆಯುತ್ತಾರೆ. ಆದರೆ ಇವರ ವರ್ತನೆಗಳಲ್ಲಿ ಮೌನ ಪ್ರತಿಭಟನೆ ಹಾಗೂ ಪ್ರತಿರೋಧದ ಅಂಶಗಳು ಗೋಚರಿಸುತ್ತವೆ. ಸ್ವಯಂವರ ಮಂಟಪದಿಂದ ಅಪಹರಿಸಿದ ತಂದು ವಿಚಿತ್ರವೀರ್ಯನಿಗೆ ಭೀಷ್ಮನು ವಿವಾಹ ಮಾಡಲು ಅನುವಾದಾಗಲೂ ಸಹ ಇವರಿಬ್ಬರು ವಿರೋಧಿಸುವುದಿಲ್ಲ. ಅಲ್ಲದೆ ಭೀಷ್ಮನ ಆ ನಡೆಯನ್ನು ಪ್ರಶ್ನಿಸುವುದೂ ಇಲ್ಲ. ನಂತರ ವಿಚಿತ್ರವೀರ್ಯನು ನಿಧನವಾದ ಮೇಲೆ ಭರತ ವಂಶದ ಮುಂದುವರಿಕೆಗಾಗಿ

ಸತ್ಯವತಿಯು ವ್ಯಾಸನೊಡನೆ ಕೂಡುವಂತೆ ತಿಳಿಸಿದಾಗಲೂ ಸತ್ಯವತಿಯ ಮಾತುಗಳನ್ನು ವಿರೋಧಿಸುವುದಿಲ್ಲ. ಆದರೆ ಅವರು ತಮ್ಮೊಳಗೇ ಅನುಭವಿಸುವ ಮಾನಸಿಕ ಸಂಘರ್ಷಗಳ, ನೋವಿನ ತಲ್ಲಣಗಳು ಓದುಗರ ಅರಿವಿಗೆ ಬರುತ್ತವೆ. ಇಲ್ಲಿ ಇವರಿಬ್ಬರ ಸಂಘರ್ಷಗಳು ನೇರವಾಗಿ ವಿರೋಧ ಅಥವಾ ಪ್ರತಿಭಟನಾ ಸ್ವರೂಪದಲ್ಲಿ ವ್ಯಕ್ತವಾಗದೆ, ಗೌಣವಾಗಿ ಅವರು ಅನುಭವಿಸುವ ನೋವಿನ ಯಾತನೆಗಳು ವ್ಯಾಸನನ್ನು ನೋಡಿದ ಕ್ಷಣ ಹಾಗೂ ಆತನೊಂದಿಗೆ ಕೂಡುವಾಗಿನ ಸಂದರ್ಭದಲ್ಲಿನ ಅವರ ಪ್ರತಿಕ್ರಿಯೆಯಲ್ಲಿ ಪ್ರಕಟವಾಗುತ್ತವೆ.

ಮೊದಲೇ ಪ್ರಸ್ತಾಪಿಸಿದಂತೆ, ನಮಗೆ ಇವರ ಉಲ್ಲೇಖಗಳು 'ಪಂಪಭಾರತ'ದ ಪ್ರಥಮಾಶ್ವಾಸದ ೭೪ ನೆ ಪದ್ಯದಲ್ಲಿಯೆ ಕಂಡುಬರುತ್ತವೆ. ವಿಚಿತ್ರವೀರ್ಯನೊಡನೆ ತಾನು ವಿವಾಹವಾಗುವುದಿಲ್ಲ ಎಂದು ನುಡಿದ ಅಂಬೆ ಭೀಷ್ಮನಿಗೆ ಅಪಹರಿಸಿ ತಂದ ನೀನೇ ತನ್ನನ್ನು ವರಿಸಬೇಕೆಂದು ಹಠ ಹಿಡಿಯುತ್ತಾಳೆ. ಆಗ ಭೀಷ್ಮನು ಅಂಬೆಯನ್ನು ಹೊರತುಪಡಿಸಿ ಉಳಿದ ಇಬ್ಬರು ಕನ್ಯೆಯರಾದ ಅಂಬಿಕೆ ಹಾಗೂ ಅಂಬಾಲಿಕೆಯರನ್ನು ವಿಚಿತ್ರವೀರ್ಯನಿಗೆ ಮದುವೆ ಮಾಡುತ್ತಾನೆ. ಇಲ್ಲಿ ಅಂಬಿಕೆ ಹಾಗೂ ಅಂಬಾಲಿಕೆಯರ ಒಪ್ಪಿಗೆ ಅಥವಾ ಅನುಮತಿಯನ್ನಾಗಲಿ ಕೇಳುವುದಿಲ್ಲ. ಇವರೂ ಸಹ ಅಲ್ಲಿ ವಿರೋಧವನ್ನು ವ್ಯಕ್ತಪಡಿಸುವುದಿಲ್ಲ. ಇವರಿಬ್ಬರ ವಿವಾಹ ಸಂದರ್ಭವು ಕುಮಾರವ್ಯಾಸನಲ್ಲಿಯೂ ಸಹ ಪಂಪನಂತೆಯೆ ಚಿತ್ರಿತವಾಗಿದೆ. ಅವರ ಯಾವುದೇ ರೀತಿಯ ಒಪ್ಪಿಗೆಗೆ ಕಾಯದೆ, ಪುರುಷ ಪ್ರಧಾನ ಸಮಾಜದ ನಡವಳಿಕೆಗಳಿಗನುಗುಣವಾಗಿ ವಿವಾಹ ಕಾರ್ಯ ಏರ್ಪಡಿಸುವುದು ಕಂಡುಬರುತ್ತದೆ.

"ಆಕೆ ಮಾಣಲಿ ಮಿಕ್ಕವರು ಬರ
ಲೀ ಕುಮಾರಂಗೆಂದು ವೈದಿಕ
ಲೌಕಿಕೋತ್ಸವದಿಂದ ಮದುವೆಯ ಮಾಡಿದನು ಭೀಷ್ಮ"[೫೭]

ಅಂದರೆ ಆಕೆಯನ್ನು ಬಿಟ್ಟು, ಉಳಿದವರನ್ನು ಈತನಿಗೆ ವಿವಾಹ ಮಾಡೋಣ ಎಂದು ನಿರ್ಣಯಿಸಿ ಭೀಷ್ಮನು ವೈದಿಕ ಲೌಕಿಕೋತ್ಸವದಿಂದ ಮದುವೆಯನ್ನು ಮಾಡಿದನು. ಅಂದರೆ ಅಂಬೆ ವಿರೋಧಿಸಿದ್ದಕ್ಕಾಗಿ ಆಕೆಯನ್ನು ಬಿಟ್ಟು ಉಳಿದವರನ್ನು ಮದುವೆ ಮಾಡುತ್ತಾನೆ ಭೀಷ್ಮ. ಒಂದು ವೇಳೆ ಅಂಬೆಯಂತೆ ಇವರೂ ಸಹ ಆ ಒಲ್ಲದ ಮದುವೆಯನ್ನು ವಿರೋಧಿಸಿದ್ದರೆ ಭೀಷ್ಮನ ಮುಂದಿನ ನಿಲುವು ಏನಾಗಬಹುದಿತ್ತೆಂಬುದು ಚರ್ಚಿಸತಕ್ಕ ವಿಚಾರ.

ವಿವಾಹವಾಗುವಾಗಿನ ವಿಚಾರಗಳು ಹೀಗಿದ್ದರೆ ಅವರು ವ್ಯಾಸನೊಡನೆ ಕೂಡುವಾಗಿನ ಸನ್ನಿವೇಶಗಳು ಇಲ್ಲಿ ಪ್ರಧಾನವಾಗಿ ವಿಶ್ಲೇಷಿಸುವಂತಹ ಅಂಶಗಳು. ವಿಚಿತ್ರವೀರ್ಯನ ಮರಣದ ನಂತರ ತಾಯಿಯಾದ ಯೋಜನಗಂಧಿ ಭರತ ಕುಲದ ಮುಂದುವರಿಕೆಗಾಗಿ ಯೋಚಿಸಿ ಭೀಷ್ಮನನ್ನು ರಾಜ್ಯಭಾರ ವಹಿಸಿಕೊಳ್ಳುವಂತೆ ಕೇಳಿಕೊಳ್ಳುತ್ತಾಳೆ. ಆತ ತನ್ನ ಪ್ರತಿಜ್ಞೆಯ ಕಾರಣವಾಗಿ ನಿರಾಕರಿಸಿದಾಗ, ಆಕೆ ತನ್ನ ಮೊದಲ ಮಗನಾದ ವ್ಯಾಸನನ್ನು ಸ್ಮರಿಸುತ್ತಾಳೆ. ಆತ ಪ್ರತ್ಯಕ್ಷನಾದಾಗ ಆತನಿಗೆ ವಿಚಿತ್ರವೀರ್ಯನ ಸ್ಥಾನದಲ್ಲಿ ನಿಂತು ಅಂಬಿಕೆ ಹಾಗೂ ಅಂಬಾಲಿಕೆಯರಿಗೆ ಸಂತಾನವನ್ನು

ಕರುಣಿಸಬೇಕೆಂದು ಕೇಳಿಕೊಳ್ಳುತ್ತಾಳೆ. ಅದರಂತೆ ಆತ ಒಪ್ಪಿಗೆಯನ್ನು ನೀಡುತ್ತಾನೆ. ಇಲ್ಲಿಂದ ಮುಂದಿನ ಘಟನೆಗಳು ಸೂಕ್ಷ್ಮವಾಗಿ ಅವಲೋಕಿಸುವಂತಹವು.

ವ್ಯಾಸ ಒಪ್ಪಿಗೆ ನೀಡಿದ ನಂತರ ಸತ್ಯವತಿ ಮುನಿಯ ಏಕಾಂತ ಮಂದಿರಕ್ಕೆ ತನ್ನ ಸೊಸೆಯಂದಿರನ್ನು ಕಳುಹಿಸುತ್ತಾಳೆ. ಇಲ್ಲಿ ನಿಜವಾಗಿ ಅವರ ಮನದ ಸಂಘರ್ಷಗಳು ಪ್ರಾರಂಭವಾಗುತ್ತವೆ. ಕಾರಣ ಪರ ಪುರುಷನೊಟ್ಟಿಗಿನ ಕೂಡುವಿಕೆ ಒಂದು ಕಡೆಯಾದರೆ, ತನ್ನ ಅತ್ತೆಯೇ ಇಂತಹ ಕಾರ್ಯಗಳಿಗೆ ಪ್ರಚೋದಿಸುವುದು ಇಲ್ಲಿ ಗಮನಿಸುವಂತಹ ವಿಚಾರಗಳು. ಇಲ್ಲಿ ಸತ್ಯವತಿ ಅವರ ಮನಸ್ಸಿಗೆ ವಿರುದ್ಧವಾದ ಕಾರ್ಯಗಳಿಗೆ ಅವರನ್ನು ಅಣಿಮಾಡಿ ಕಳುಹಿಸುತ್ತಾಳೆ. ಅವರಿಗೆ ಈ ಕೆಲಸ ಒಪ್ಪಿಗೆ ಇದೆಯೇ ಅಥವಾ ಇಲ್ಲವೇ ಎಂದು ಕೇಳುವುದಿಲ್ಲ. ಮುಖ್ಯವಾಗಿ ವ್ಯಾಸ ಮಹರ್ಷಿಯು ಸತ್ಯವತಿಗೆ ಮಗನಿರಬಹುದು. ಆ ಕಾಲದ ಸಮಾಜವು ನಿಯೋಗ ಪದ್ಧತಿಯನ್ನು ಒಪ್ಪಿಕೊಂಡಿರಬಹುದು. ಆದರೆ ಒಬ್ಬ ಸ್ತ್ರೀಯಾದವಳು ಪರ ಪುರುಷನೊಟ್ಟಿಗೆ ತನ್ನನ್ನು ತಾನು ತನ್ನ ಮನಸ್ಸಿನ ಒಪ್ಪಿತ ಮೌಲ್ಯಗಳಿಗೆ ವಿರುದ್ಧವಾಗಿ ಸೇರುವುದು ಇಲ್ಲಿ ಗಮನಿಸುವ ವಿಚಾರ. ಆಕೆಯ ಮನಸ್ಸಿನ ಅಭೀಪ್ಸೆಗಳೇನು ಎಂಬುದನ್ನು ಯಾರೂ ಇಲ್ಲಿ ತಿಳಿದುಕೊಳ್ಳಲು ಹೋಗಿಲ್ಲ. ಅವರವರ ಮನಸ್ಸಿನ ಕಾರ್ಯ ಸಿದ್ಧಿಗಳಷ್ಟೇ ಅವರಿಗೆ ಇಲ್ಲಿ ಈಡೇರಬೇಕಾಗಿರುವುದು.

ಪಂಪನು ಅಂಬಿಕೆ ಮತ್ತು ಅಂಬಾಲಿಕೆಯರು ಗರ್ಭವತಿಯರಾಗುವ ಸಂದರ್ಭವನ್ನು ಈ ರೀತಿಯಾಗಿ ತಿಳಿಸಿದ್ದಾಳೆ.

"ತ್ರಿದಶ ನರಾಸುರೋರಗ ಗಣ ಪ್ರಭು ನಿಶ್ಚಿತ ತತ್ತ್ವಯೋಗಿ ಯೋ ।
ಗದ ಬಲಮುಣ್ಮೆ ಪೊಣ್ಮೆ ನಿಲೆ ಪುತ್ರ ವರಾರ್ಥಿಗಳಾಗಿ ತನ್ನ ಕ ।
ಟ್ಟಿದಿರೊಳೆ ನಿಂದರಂ ನಯದೆ ನೋಡೆ ಮುನೀಂದ್ರನ ದಿವ್ಯ ದೃಷ್ಟಿ ಮಂ।
ತ್ರದೊಳೆ ಪೊದಟ್ಟುದಾ ಸತಿಯರಿರ್ವರೊಳಂ ನವ ಗರ್ಭ ವಿಭ್ರಮಂ"[೫೭]

ಇಲ್ಲಿ ವ್ಯಾಸಮುನಿಯು ತನ್ನೆದುರಿನಲ್ಲಿ ನಿಂತಿರುವವರನ್ನು ನಯದಿಂದ ನೋಡಲಾಗಿ ಅವರು ಗರ್ಭವತಿಯರಾದರೆಂದು ಹೇಳಲಾಗಿದೆ. ಇಲ್ಲಿ ಗಮನಿಸುವಂತಹದ್ದು ಈ ರೀತಿಯ ದೃಷ್ಟಿಗಳಿಗೆಲ್ಲ ಪುತ್ರ ಸಂತಾನವಾಗದು ಎಂಬುದು ನಮಗೆ ತಿಳಿದಿರುವ ಸಂಗತಿ. ಬಹುಶಃ ಪಂಪ ಅವರ ಕೂಡುವಿಕೆಯ ಸಂದರ್ಭವನ್ನು ತಿಳಿಸುವ ಬದಲು ಈ ರೀತಿ ಹೇಳಿರಬಹುದು. ಇಲ್ಲಿ ಅವರಿಬ್ಬರ ಸೇರುವಿಕೆಯನ್ನು ಪಂಪ ಬೇರೆಯದೆ ಆದ ರೀತಿಯಲ್ಲಿ ಹೇಳುತ್ತಿದ್ದಾನೆ ಅಷ್ಟೇ.

ಮುಂದುವರೆದು ಸತ್ಯವತಿಯು ಮತ್ತೊಬ್ಬ ಮಗನನ್ನು ಬೇಡಿಕೊಳ್ಳೆಂದು ಅಂಬಿಕೆಗೆ ಹೇಳಿದಾಗ ಆಕೆ ತಾನು ಹೋಗದೆ ತನ್ನ ಬದಲಿಗೆ ದಾಸಿಯನ್ನು ಕಳುಹಿಸುತ್ತಾಳೆ. ಅದರ ವಿವರಗಳು ಪಂಪಭಾರತದಲ್ಲಿ ಹೀಗಿವೆ.

"ಅಂತು ದಿವ್ಯ ಸಂಯೋಗದೊಳಿರ್ವರುಂ ಗರ್ಭಮಂ ತಾಳ್ದಿರ್ ಮತ್ತೊರ್ವ ಮಗನಂ ವರಮಂ ಬೇಡೆಂದಂಬಿಕೆಗೆ ಪೇಳ್ದೊಡಾಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ

ಸೂಟಿಯಾಯ್ತೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡಾಕೆಗೆ ವರದನಾಗಿ ವ್ಯಾಸಮುನೀಂದ್ರಂ ಸತ್ಯವತಿಗಂ ಭೀಷ್ಮಂಗಮಿಂತೆಂದನೆನ್ನ ವರಪ್ರಸಾದ ಕಾಲದೊಳೆನ್ನಂ ಕಂಡಂಬಿಕೆ ಕಣ್ಣಂ ಮುಚ್ಚಿದಳಪ್ಪುದಱಿಂದಾಕೆಗೆ ಧೃತರಾಷ್ಟ್ರನೆಂಬ ಮಗನತ್ಯಂತ ಸುಂದರಾಂಗನಾಗಿಯುಂ ಜಾತ್ಯಂಧನಕ್ಕುಮಂಬಾಲೆ ಮದ್ರೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳಪ್ಪುದಱಿಂದಾಕೆಗೆ ಪಾಂಡುರೋಗ ಸಂಗತನುಮನೇಕ ಭದ್ರ ಲಕ್ಷಣ ಲಕ್ಷಿತನುಮತ್ಯಂತ ಪ್ರತಾಪನುಮಾಗಿ ಪಾಂಡುರಾಜನೆಂಬ ಮಗನಕ್ಕುಮಂಬಿಕೆಯ ಸೂಟಿಯಾಯ್ತೆಯಪ್ಪಾಕೆ ದರಹಸಿತ ವದನಾರವಿಂದೆಯಾಗಿ ಬರವಂ ಕೈಕೊಂಡಳಪ್ಪುದಱಿಂದಾಕೆಯ ಮಗಂ ವಿದುರನೆಂಬನನಂಗಾಕಾರನುಮಾಚಾರವಂತನುಂ ಬುದ್ಧಿವಂತನುಮಕ್ಕುಮೆಂದು ಪೇಟ್ದು ಮುನಿಪುಂಗವಂ ಪೋದನ್"[೫೯]

ಅಂದರೆ "ಹಾಗೆ ದಿವ್ಯವಾದ (ಋಷಿ ಶ್ರೇಷ್ಠನ) ಸಂಯೋಗದಿಂದ ಇಬ್ಬರೂ ಗರ್ಭವನ್ನು ಧರಿಸಿದರು. ಇನ್ನೊಬ್ಬ ಮಗನ ವರವನ್ನು ಕೇಳು ಎಂದು ಅಂಬಿಕೆಗೆ ಹೇಳಲು ಅವಳು ವ್ಯಾಸಭಟ್ಟಾರಕರ ಹತ್ತಿರ ಹೋಗುವುದಕ್ಕೆ ಆಯಾಸಪಟ್ಟು ತನ್ನ ದಾಸಿಯನ್ನು ತನ್ನ ಹಾಗೆಯೇ ಅಲಂಕರಿಸಿ ವರವನ್ನು ಪ್ರಾರ್ಥಿಸುವಂತೆ ಹೇಳಿಕಳುಹಿಸಲು (ವ್ಯಾಸ ಮಹರ್ಷಿಯು) ಅವಳಿಗೂ ವರವನ್ನು ಕೊಟ್ಟು ಸತ್ಯವತಿ ಮತ್ತು ಭೀಷ್ಮರನ್ನು ಕುರಿತು ನನ್ನ ವರಪ್ರಸಾದ ಕಾಲದಲ್ಲಿ ನನ್ನನ್ನು ನೋಡಿ ಅಂಬಿಕೆಯು ಕಣ್ಣನ್ನು ಮುಚ್ಚಿದಳಾದುದರಿಂದ ಆಕೆಗೆ ಧೃತರಾಷ್ಟ್ರನೆಂಬ ಮಗನು ಅತ್ಯಂತ ಸುಂದರನಾಗಿಯೂ ಹುಟ್ಟುಗುರುಡನಾಗಿಯೂ ಹುಟ್ಟುತ್ತಾನೆ. ಅಂಬಾಲೆ (ಅಂಬಾಲಿಕೆ) ಯು ನನ್ನ ರೂಪವನ್ನು ಕಂಡು ಮುಖವನ್ನು ಬೆಳ್ಳಗೆ ಮಾಡಿಕೊಂಡಿದ್ದರಿಂದ ಆಕೆಯ ಮಗನು ಪಾಂಡುರೋಗದಿಂದ ಕೂಡಿದವನೂ ಅನೇಕ ಶುಭ ಲಕ್ಷಣಗಳಿಂದ ಗುರುತು ಮಾಡಲ್ಪಟ್ಟವನೂ, ಅತ್ಯಂತ ಶೌರ್ಯಶಾಲಿಯೂ ಆಗಿ ಪಾಂಡುರಾಜನೆಂಬ ಮಗನಾಗುತ್ತಾನೆ. ಅಂಬಿಕೆಯ ದಾಸಿಯಾದವಳು ಹುಸಿನಗೆಯಿಂದ ಕೂಡಿದ ಮುಖಕಮಲವುಳ್ಳವಳಾಗಿ ಬಂದುದರಿಂದ ಆಕೆಯ ಮಗನಾದ ವಿದುರನು ಮನ್ಮಥಾಕಾರವುಳ್ಳವನೂ, ಆಚಾರವಂತನೂ ಬುದ್ಧಿವಂತನೂ ಆಗುತ್ತಾನೆ ಎಂದು ಹೇಳಿ ಋಷಿ ಶ್ರೇಷ್ಠನು ಹೊರಟು ಹೋದನು."[೬೦] ಇಲ್ಲಿ ಪಂಪನು ಬಳಸುವ 'ಸಂಯೋಗ' ಎಂಬ ಪದವನ್ನು ಗಮನಿಸಬೇಕು. ಮೊದಲು ಋಷಿಯ ದಿವ್ಯ ದೃಷ್ಟಿಯಿಂದ ಗರ್ಭವತಿಯರಾದರೆಂದು ತಿಳಿಸಿದವ ನಂತರ ಋಷಿಯ ಸಂಯೋಗದಿಂದ ಅವರು ಪುತ್ರವತಿಯರಾಗುವರು ಎನ್ನುತ್ತಾನೆ.

ಇಲ್ಲಿ 'ಸಂಯೋಗ' ಎಂದರೆ "ಕೂಡುವಿಕೆ"[೬೧] ಎಂದು ಅರ್ಥ. ಮುಖ್ಯವಾಗಿ ಈ ಸಂದರ್ಭವನ್ನು ಅಂಬಿಕೆ ಮತ್ತು ಅಂಬಾಲಿಕೆಯರ ಮನಸ್ಸಿನ ಒಳತೋಟಿಗಳ ತಳಮಳಗಳ ಹಿನ್ನೆಲೆಯಲ್ಲಿ ವಿವೇಚಿಸಿದರೆ ನಮಗೆ ಅವರ ಮನಸ್ಸಿನಲ್ಲಿನ ದುಗುಡ ಹಾಗೂ ಸಂಘರ್ಷಗಳು ತಿಳಿಯುತ್ತವೆ. ಅಂಬಿಕೆಗೆ ಮತ್ತೊಂದು ಮಗುವನ್ನು ಪಡೆಯುವಂತೆ ಸತ್ಯವತಿ ಹೇಳಿದಾಗ ಆಕೆ ಮುನಿಯ ಹತ್ತಿರ ಹೋಗಲು ಆಯಾಸಪಟ್ಟು ತನ್ನ ದಾಸಿಯನ್ನು ಕಳುಹಿಸಿದಳೆಂದು ಪಂಪನು ಹೇಳುತ್ತಾನೆ. ಇಲ್ಲಿ ಚರ್ಚಿಸತಕ್ಕದ್ದು ಮುನಿಯ ಬಳಿ ಹೋಗಲು ಆಕೆಗೆ ಮನಸ್ಸಿಲ್ಲ. ತನ್ನ ಮನಸ್ಸಿಗೆ ವಿರುದ್ಧವಾಗಿ ಹೋಗಬೇಕಾದ

ಕಾರಣ ಆ ಕೆಲಸಕ್ಕೆ ತನ್ನ ದಾಸಿಯನ್ನು ಕಳುಹಿಸುತ್ತಾಳೆ. ಈ ಮಾತುಗಳಿಗೆ ಪೂರಕವಾಗಿ ವ್ಯಾಸನು ಭೀಷ್ಮ ಮತ್ತು ಸತ್ಯವತಿಯವರಿಗೆ ಹೇಳುವ ಮಾತುಗಳಲ್ಲಿ ಅಂಬಿಕೆ ಮತ್ತು ಅಂಬಾಲಿಕೆಯರ ನಿಜವಾದ ಮಾನಸಿಕ ಸಂಘರ್ಷದ ವಿವರಗಳಿವೆ.

'ವರ ಪ್ರಸಾದ ಕಾಲದೊಳೆನ್ನಂ ಕಂಡಂಬಿಕೆ ಕಣ್ಣಂ ಮುಚ್ಚಿದಳ್', 'ಅಂಬಾಲೆ ಮದ್ರೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳ್' ಎಂದು ವ್ಯಾಸನು ಅಂಬಿಕೆ ಮತ್ತು ಅಂಬಾಲಿಕೆಯರನ್ನು ಕುರಿತು ಅವರು ತನ್ನೊಂದಿಗಿನ ಕೂಡುವಿಕೆಯ ಸಂದರ್ಭದ ವರ್ತನೆಗಳನ್ನು ತಿಳಿಸುತ್ತ ಅವರು ಒಪ್ಪಿತವಲ್ಲದ ಕ್ರಿಯೆಗೆ ಪ್ರತಿಕ್ರಿಯಿಸುವ ರೀತಿ ಮತ್ತು ಅದರಿಂದ ಸಿಗುವ ಫಲ ಎರಡಕ್ಕೂ ತಾನು ಕಾರಣನಲ್ಲವೆಂದೂ, ಅದಕ್ಕೆ ಅವರ ಮಾನಸಿಕ ಗೊಂದಲಗಳೇ ಮುಖ್ಯ ಕಾರಣವೆಂದು ಹೇಳುತ್ತಾನೆ.

ಸತ್ಯವತಿಯ ಮಾತಿನಂತೆ ವ್ಯಾಸನು ವಂಶೋದ್ಧಾರಕ ಕೆಲಸದಲ್ಲಿ ತೊಡಗಿದರೂ ಅಂಬಿಕೆ ಮತ್ತು ಅಂಬಾಲಿಕೆಯರ ಮನೋವೃತ್ತಿಗಳನ್ನು ವಂಶದ ನೆಲೆಯಲ್ಲಿ ಚಿಂತಿಸುವ ಸತ್ಯವತಿಯಾಗಲಿ, ಸತ್ಯವತಿಯ ಮಾತನ್ನು ಕೇಳುತ್ತಿರುವ ವ್ಯಾಸನಾಗಲಿ ಗ್ರಹಿಸುವುದಿಲ್ಲ. ಇಬ್ಬರೂ ಪ್ರಭುತ್ವದ ನೆಲೆಯಲ್ಲಿ ನಿಂತು ಯೋಚಿಸುವ ಭರದಲ್ಲಿ ಅಂಬಿಕೆ ಮತ್ತು ಅಂಬಾಲಿಕೆಯರಿಬ್ಬರನ್ನೂ ಬಲವಂತದ ಕೂಟಕ್ಕೆ ಒಳಗುಮಾಡುತ್ತಾರೆ. ಇದು ಸಹಜವಾಗಿಯೆ ಈ ಇಬ್ಬರ ಹೆಣ್ತನದ ಬಯಕೆಗಳು ಮತ್ತು ನಿರ್ಧಾರಗಳಿಗೆ ವ್ಯತಿರಿಕ್ತವಾಗಿದ್ದ ವ್ಯಾಸನ ಬಾಹ್ಯ ಸ್ವರೂಪ ಅವರಲ್ಲಿ ಭಯ ಹುಟ್ಟಿಸಿರಬಹುದು. ಈ ಭಯಕ್ಕೆ ಅವರನ್ನು ಬಲವಂತವಾಗಿ ಇದರಲ್ಲಿ ಒಳಗು ಮಾಡುತ್ತಿರುವುದು ಮೊದಲ ಕಾರಣವಾದರೆ, ಗಂಡನಲ್ಲದ ಗಂಡೊಬ್ಬನನ್ನು ಕೂಡಬೇಕೆಂಬ ಆತಂಕ ಎರಡನೆಯ ಕಾರಣವಾಗಿದೆ.

ಈ ಸನ್ನಿವೇಶ ಕುಮಾರವ್ಯಾಸನಲ್ಲಿ ಮತ್ತಷ್ಟು ಚರ್ಚಾರ್ಹವಾಗಿದೆ.

"ಎಂದು ಬಳಿಕೇಕಾಂತ ಭವನದೊ
ಳಂದು ಮುನಿಯಿರಲಂಬಿಕೆಯನರ
ವಿಂದಮುಖಿಯಟ್ಟಿದಳು ಸೊಸೆಯನು ಮುನಿಯ ಪೊರೆಗಾಗಿ
ಬಂದು ಮುನಿಪನ ದಿವ್ಯರೂಪವ
ನಿಂದುಮುಖಿ ಕಂಡಕ್ಷಿಗಳ ಭಯ
ದಿಂದ ಮುಚ್ಚಿದಳಾಕೆ ತಿರುಗಿದಳರಸ ಕೇಳೆಂದ"[೭೨]

ಕುಮಾರವ್ಯಾಸನಲ್ಲಿಯೂ ಸತ್ಯವತಿಯೇ ಅಂಬಿಕೆಯನ್ನು ಮುನಿಯ ಬಳಿಗೆ ಕಳುಹಿಸುವ ವಿವರಗಳಿವೆ. ಈ ರೀತಿ ಬಂದ ಅಂಬಿಕೆಯು ವ್ಯಾಸನ ರೂಪನ್ನು ನೋಡಿ ಭಯದಿಂದ ಕಣ್ಣು ಮುಚ್ಚುತ್ತಾಳೆ. ಇಲ್ಲಿ ಅಂಬಿಕೆಗೆ ವ್ಯಾಸನೊಟ್ಟಿಗೆ ಸೇರಲು ಇಷ್ಟವಿರಲಿಲ್ಲ ಎಂಬುದು ಅವಳ ಈ ಪ್ರತಿಕ್ರಿಯೆಯಿಂದ ತಿಳಿಯುತ್ತದೆ. ಅಲ್ಲದೆ ಆಕೆ ಬಲವಂತದಿಂದ ಆತನಲ್ಲಿಗೆ ಬಂದಿರುವ ಸಾಧ್ಯತೆಗಳನ್ನು ಸಹ ಈ ಸಂದರ್ಭವು ತಿಳಿಸಿಕೊಡುತ್ತದೆ.

ಇಲ್ಲಿ 'ಅಟ್ಟಿದಳು' ಎಂಬ ಪದ ಚರ್ಚಾರ್ಹವಾದುದು. ಇಲ್ಲಿ ಸತ್ಯವತಿ ತನ್ನ ಸೊಸೆಯಂದಿರನ್ನು ಬಲವಂತದಿಂದ ಅವರ ಇಷ್ಟಕ್ಕೆ ವಿರೋಧವಾಗಿ ವ್ಯಾಸನಲ್ಲಿಗೆ ಕಳುಹಿಸಿಕೊಟ್ಟಿರುವ ಸೂಚನೆಗಳಿವೆ. ಅಲ್ಲದೆ "ಅಟ್ಟಿದಳು ಸೊಸೆಯನು ಮುನಿಯ 'ಪೊರೆ'ಗಾಗಿ; ಎಂಬಲ್ಲಿ ನಾರಾಣಪ್ಪ 'ಒಲ್ಲದ ಸಂಭೋಗ ಹೊರೆ' ಎಂಬ ಅರ್ಥದಲ್ಲಿ ಹೇಳಿರಲು ಸಾಧ್ಯವಿದೆ. 'ಪೊರೆ' ಎಂಬುದಕ್ಕೆ 'ಸಂರಕ್ಷಿಸು', 'ಕಾಪಾಡು', 'ಸೇರು', 'ಕೂಡು', 'ಭಾರ' ಮೊದಲಾದ ಅರ್ಥಗಳಿವೆ. ಹೀಗಾಗಿಯೇ ಅಂಬಿಕೆ ಕಣ್ಣು ಮುಚ್ಚಿಕೊಂಡದ್ದು"[೬೩] ಎಂಬ ಅಭಿಪ್ರಾಯಕ್ಕೆ ಪೂರಕವಾಗಿ ಯೋಚಿಸಿದಾಗ ಅಂಬಿಕೆಗೆ ಇಷ್ಟವಿಲ್ಲದಿದ್ದರೂ ಆಕೆಯನ್ನು ಮುನಿಯ ಬಳಿ ಕಳುಹಿಸಲಾಗಿದೆ. ಅವಳು ಆತನನ್ನು ನೋಡಿ ಭಯದಿಂದ ಕಣ್ಣು ಮುಚ್ಚಿಕೊಳ್ಳುವ ಸನ್ನಿವೇಶ ತಿರಸ್ಕಾರಾತ್ಮಕವಾಗಿ ಅಂಬೆಯ ಮನದಲ್ಲಿ ಮೂಡುವ ಸಂಘರ್ಷ ಮತ್ತು ಹೊಯ್ದಾಟಗಳಿಗೆ ಸಾಕ್ಷಿಯಾಗಿದೆ.

ಅಂಬಾಲಿಕೆಯ ಸ್ಥಿತಿ ಕೂಡ ಇದಕ್ಕಿಂತ ಭಿನ್ನವಾಗಿಯೇನೂ ಇಲ್ಲ. ಅವಳದೂ ಕೂಡ ಬಲವಂತದ ಸೇರುವಿಕೆ. ಅದನ್ನು ಕುಮಾರವ್ಯಾಸ ಈ ರೀತಿ ತಿಳಿಸಿದ್ದಾನೆ.

> "ಬಳಿಕಲಂಬಾಲಿಕೆಯನಲ್ಲಿಗೆ
> ಕಳುಹಲಾಕೆಗೆ ಭಯದಿ ಮುಖದಲಿ
> ಬಿಳುಪು ಮಸಗಿತು ಮುನಿಯ ರೌದ್ರಾಕಾರದರ್ಶನದಿ
> ಲಲನೆ ಮರಳಿದಳೊಬ್ಬ ಸತಿಯನು ಕಳುಹಲಾ ವಧು ಚಪಲದೃಷ್ಟಿಯೊ
> ಳಳುಕದೀಕ್ಷಿಸಲಾಯ್ತು ಗರ್ಭಾಧಾನವನಿಬರಿಗೆ"[೬೪]

ನಂತರ ಬಂದ ಅಂಬಾಲಿಕೆಯ ಪ್ರತಿಕ್ರಿಯೆಗಳು ಸಹ ಅಂಬಿಕೆಗಿಂತ ಭಿನ್ನವಾಗಿಲ್ಲ. ಆತನ ರೌದ್ರಾಕಾರ ದರ್ಶನದಿಂದ ಆಕೆಯಲ್ಲಿ ಭಯ ಹುಟ್ಟಿ ಆಕೆಯ ಮುಖ ಬಿಳುಪೇರಿತು. ಇಲ್ಲಿ ವ್ಯಾಸನನ್ನು ನೋಡಿದ ಕೂಡಲೆ ಅಂಬಾಲಿಕೆಯ ಮುಖ ಬಿಳುಚಿಕೊಳ್ಳುವುದು ಆತನನ್ನು ನೋಡಿದ ಮನದಲ್ಲಿನ ತಿರಸ್ಕಾರ ಹಾಗೂ ಬಲವಂತದ ಸೇರುವಿಕೆಯ ಪ್ರತೀಕವಾಗಿದೆ. ಆದರೆ ಇಲ್ಲಿ ಇವರಾರು ಕೂಡ ಪ್ರತಿಭಟಿಸಲು ಸಾಧ್ಯವಾಗಿಲ್ಲ.

ಇವರಿಗಿಂತ ಭಿನ್ನರೀತಿಯಲ್ಲಿ ಚಿತ್ರಿತವಾಗಿರುವ ಪಾತ್ರ ಅಂಬಾಲಿಕೆಯ ದಾಸಿಯದು. ಪಂಪ ಹಾಗೂ ಕುಮಾರವ್ಯಾಸರಿಬ್ಬರಲ್ಲಿಯೂ ಈಕೆ ತನ್ನ ಒಡತಿಯ ಆಣತಿಯಂತೆ ವ್ಯಾಸರಲ್ಲಿ ಸೇರುತ್ತಾಳೆ. ಈಕೆಗೆ ಇಲ್ಲಿ ಒಂದು ಸ್ವತಂತ್ರ ಅಸ್ತಿತ್ವವಿದ್ದಂತೆ ಕಂಡುಬರುವುದಿಲ್ಲ. ಇಲ್ಲಿ ಹೆಣ್ಣಿನಿಂದಲೇ ಮತ್ತೊಂದು ಹೆಣ್ಣಿನ ಮೇಲೆ ಶೋಷಣೆ ನಡೆಯುವುದು ಕಂಡುಬರುತ್ತದೆ. ಸತ್ಯವತಿ ಭರತ ವಂಶ ನಿರ್ವಂಶವಾಗುವುದು ಎಂಬ ಕಾರಣವಾಗಿ, ಆ ವಂಶದ ಮುಂದುವರಿಕೆಗಾಗಿ ಒಲ್ಲದ ಮನಸ್ಸಿನ ಸೊಸೆಯರನ್ನು ವ್ಯಾಸನೊಂದಿಗೆ ಕೂಡಲು ಪ್ರೇರೇಪಿಸುತ್ತಾಳೆ. ಆ ಮೂಲಕ ತನ್ನ ಸೊಸೆಯರ ಶೋಷಿತಳಾದರೆ, ಅಂಬಿಕೆ ತನ್ನ ದಾಸಿಯನ್ನು ಮುನಿಯ ಬಳಿ ಕಳುಹಿಸುವ ಮೂಲಕ ಈಕೆ ಮತ್ತೊಂದು ರೀತಿಯ ಶೋಷಕಳಾಗುತ್ತಾಳೆ. ಅಲ್ಲದೆ ಅಧಿಕಾರ ಅಥವಾ ಅರಸೊತ್ತಿಗೆಯಲ್ಲಿರುವ ಮಹಿಳೆಯರು ತಮ್ಮ

ಶೋಷಿತ ಸನ್ನಿವೇಶಗಳನ್ನು ತಮ್ಮ ದಾಸಿಯರಿಗೆ ವರ್ಗಾಯಿಸುವ ಮೂಲಕ ತಾವು ಪಾರಾಗಿ ತನ್ನಂತೆಯೇ ಮತ್ತೊಂದು ಹೆಣ್ಣನ್ನು ಶೋಷಿಸುವ ನೆಲೆ ಇಲ್ಲಿ ಬಹುಮುಖ್ಯವಾಗಿ ಗಮನಿಸಬೇಕಾದ ವಿಚಾರವಾಗಿದೆ.

ಪಂಪಭಾರತದಲ್ಲಿ ಅಂಬಿಕೆ, ಅಂಬಾಲಿಕೆ ಹಾಗೂ ಸತ್ಯವತಿಯ ಪಾತ್ರಗಳು ಮತ್ತೆ ಕಂಡು ಬರುವುದು ಪಾಂಡುವಿನ ಮರಣದ ಸಂದರ್ಭದಲ್ಲಿನ ದುಃಖದ ಸನ್ನಿವೇಶದಲ್ಲಿ. ಪಂಪ ಆ ಸನ್ನಿವೇಶವನ್ನು ಹೀಗೆ ವರ್ಣಿಸಿದ್ದಾನೆ.

> "ಆಗಳ್ ಪುತ್ರ ಸ್ನೇಹದಿಂದತಿ ಪ್ರಳಾಪಂಗೆಯ್ವಂಬಾಲೆಯುಮಂ ಬಂಧು ಜನ
> ನಿರೀಕ್ಷಣದಿಂ ಶೋಕಂ ಮಱುಕಣಿಸೆ ಬಾಯಟಿದು ಪಳಯಿಸುವ ಕುಂತಿಯುಮಂ ಗಾಂಗೇಯ
> ಧೃತರಾಷ್ಟ್ರ ವಿದುರರ್ಕಳುಮಂ ಸತ್ಯವತೀದೇವಿಯುಮಂ ಸಂತೈಸಿ ಪಾಂಡುರಾಜಂಗೆ
> ಜಳದಾನಾದಿ ಕ್ರಿಯೆಗಳಂ ನಿರ್ವರ್ತಿಸಿ ತದನಂತರದೊಳದುವೆ ನಿರ್ವೇಗಮಾಗೆ ವ್ಯಾಸವಚನ
> ದೊಳ್ ಸತ್ಯವತಿಯುಮಂಬಿಕೆಯುಮಂಬಾಲೆಯುಂ ಸಂಸಾರವಿಶೀರ್ಣೆಯರಾಗಿ
> ಮುನಿವಶಮನಾ ಶ್ರಯಿಸಿದರ್.."[೨೭]

ಪಾಂಡುವಿನ ಮರಣದ ನೋವಿನ ಕಾರಣವಾಗಿ ಅವರ ಮನದಲ್ಲಿ ಮೂಡಿದ ವೈರಾಗ್ಯಭರಿತ ಸಂಘರ್ಷದ ಭಾವಗಳು ಇಲ್ಲಿ ಗಮನವನ್ನು ಸೆಳೆಯುತ್ತವೆ. ಇಲ್ಲಿನ ದುಃಖವೇ ವಿರಕ್ತಿಗೆ ಕಾರಣವಾಗಿ ಅವರೆಲ್ಲ ವ್ಯಾಸನ ಉಪದೇಶದಂತೆ ತಪೋವನವನ್ನು ಆಶ್ರಯಿಸುತ್ತಾರೆ.

ಇಲ್ಲಿನ ಮೂವರೂ ಸ್ತ್ರೀಯರ ಸಂಘರ್ಷಗಳು ಅತ್ಯಂತ ಕ್ಲಿಷ್ಟ ಹಾಗೂ ಸಂಕೀರ್ಣವಾದವು. ಏಕೆಂದರೆ ಒಬ್ಬರ ಸಂಘರ್ಷ ಹೆಚ್ಚು, ಮತ್ತೊಬ್ಬರ ಸಂಘರ್ಷಗಳು ಕಡಿಮೆ ಎನ್ನುವಂತಿಲ್ಲ. ಅವರು ಎದುರಿಸುವ ಸನ್ನಿವೇಶಗಳಿಗೆ ಅನುಗುಣವಾಗಿ ಅವರ ನೋವು, ಭಯ, ಆತಂಕಗಳಿಂದ ಕೂಡಿದ ಸಂಘರ್ಷಗಳು ಕ್ಲಿಷ್ಟಕರವಾಗಿವೆ. ಅಂಬೆಯು ತನ್ನ ಮನದ ನೋವು ಹಾಗೂ ಕೋಪಗಳನ್ನು ಪ್ರತಿಜ್ಞೆಯ ಮೂಲಕ ಹೊರಹಾಕಿ ಅವುಗಳನ್ನು ಶಮನ ಮಾಡಿಕೊಳ್ಳಲು ಪ್ರಯತ್ನಿಸಿದರೆ, ಅಂಬಿಕೆ ಮತ್ತು ಅಂಬಾಲಿಕೆಯರ ಪ್ರತಿಕ್ರಿಯೆಗಳು ಇದಕ್ಕಿಂತ ಭಿನ್ನವಾಗಿವೆ. ಅವರಿಬ್ಬರು ಅಂಬೆಯ ರೀತಿಯಲ್ಲಿ ಕೋಪದ ಮೂಲಕ ಪ್ರತಿಜ್ಞೆಯನ್ನು ಮಾಡುವ ನಿರ್ಧಾರಗಳನ್ನು ಪ್ರಕಟಿಸದೆ ಮೌನವಾಗಿ ತಮ್ಮ ಪ್ರತಿಕ್ರಿಯೆಗಳನ್ನು ಹೊರಹಾಕಿದ್ದಾರೆ.

ಅಂಬೆಗೆ ಹೋಲಿಸಿದರೆ ಅಂಬಿಕೆ ಮತ್ತು ಅಂಬಾಲಿಕೆಯರು ಮಾನಸಿಕವಾಗಿ ಹೆಚ್ಚು ತಲ್ಲಣಕ್ಕೆ ಒಳಗಾಗುವುದು ಕಂಡುಬರುತ್ತದೆ. ಏಕೆಂದರೆ ಅಂಬಿಕೆ ಹಾಗೂ ಅಂಬಾಲಿಕೆಯರು ವಿವಾಹಿತರಾಗಿ ನಂತರ ವಿಧವೆಯರಾಗಿ, ಪರಪುರುಷನೊಂದಿಗೆ ಕೂಡುವ ವ್ಯತಿರಿಕ್ತವಾದ ಪರಿಸ್ಥಿತಿಯಲ್ಲಿ ಬದುಕನ್ನು ಸಾಗಿಸುವವರಾಗಿದ್ದಾರೆ. ಆದರೆ 'ಅಂಬೆ'ಗೆ ಈ ರೀತಿಯ ಸಂದಿಗ್ಧ ಸನ್ನಿವೇಶಗಳು ಎದುರಾಗಿಲ್ಲ. ಏಕೆಂದರೆ ಆಕೆ ಯಾರನ್ನೂ ವಿವಾಹವಾಗಿಲ್ಲ. ಸಾಲ್ವಲ ಮತ್ತು ಭೀಷ್ಮರು ಆಕೆಯ ಮನದ ಕೋರಿಕೆಯನ್ನು ನಿರಾಕರಿಸಿದ್ದರೂ ಸಹ ಅಂಬೆಗೆ ತನ್ನ ಮನಸ್ಸಿಗೊಪ್ಪಿದ ಬೇರೊಬ್ಬನನ್ನು ವಿವಾಹವಾಗಲು

ಮುಕ್ತ ಆಯ್ಕೆಯ ಅವಕಾಶಗಳಿವೆ. ಆದರೆ ಅಂಬಿಕೆ ಹಾಗೂ ಅಂಬಾಲಿಕೆಯರಿಗೆ ಈ ರೀತಿಯ ಆಯ್ಕೆ ಮತ್ತು ಅವಕಾಶಗಳಿಲ್ಲ. ಇವರಿಬ್ಬರೂ ಪ್ರಭುತ್ವದ ಅಡಿಯಾಳುಗಳಾಗಿದ್ದಾರೆ. ಆ ಕಾರಣವಾಗಿಯೆ ತಮಗೆ ಇಷ್ಟವಿಲ್ಲದಿದ್ದರೂ ವ್ಯಾಸನೊಂದಿಗೆ ಕೂಡಬೇಕಾಗಿದೆ. ಈ ದೃಷ್ಟಿಯಿಂದಾಗಿ ಪಂಪ ಹಾಗೂ ಕುಮಾರವ್ಯಾಸರಿಬ್ಬರೂ ಅಂಬೆಯ ಮೂಲಕ ಪ್ರತಿಭಟನಾತ್ಮಕವಾಗಿಯೂ, ಅಂಬಿಕೆ ಮತು ಅಂಬಾಲಿಕೆಯರ ಮೂಲಕ ತಿರಸ್ಕಾರಾತ್ಮವಾಗಿಯೂ ಅವರ ಮನದ ಸಂಘರ್ಷಗಳನ್ನು ವ್ಯಕ್ತಪಡಿಸಿದ್ದಾರೆ. ಆ ಮೂಲಕ ಪುರುಷ ಹಾಗೂ ಪ್ರಭುತ್ವದ ತಳಪಾಯಗಳನ್ನು ಅಲುಗಾಡಿಸುವ ಪ್ರಯತ್ನವನ್ನು ಮಾಡಿದ್ದಾರೆ. ಪ್ರಭುತ್ವದ ಪ್ರತಿನಿಧಿಯಾಗಿ ಕಂಡುಬರುವ ಸತ್ಯವತಿಯು ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳೆರಡರಲ್ಲಿಯೂ ಅಧಿಕಾರವನ್ನು ಚಲಾಯಿಸುವ ಮತ್ತು ಪ್ರಭುತ್ವವನ್ನು ನಿರ್ವಚಿಸುವ ಹೆಣ್ಣಾಗಿ ಕಂಡುಬರುತ್ತಾಳೆ.

೩.೩. ಪ್ರತಿಭಟನಾತ್ಮಕ ಸಂಘರ್ಷದ ನೆಲೆಗಳು

ನಿರಾಕರಣೆ ಮತ್ತು ತಿರಸ್ಕಾರಗಳ ಜೊತೆಗೆ ಪ್ರತಿಭಟನೆ ಆಂಶಿಕವಾಗಿ ಸೇರಿಕೊಂಡಿರುತ್ತದೆ. ಪ್ರತಿಭಟನೆಯನ್ನು ಆಂತರಿಕ ಮತ್ತು ಬಾಹ್ಯ, ತಾತ್ವಿಕ ಮತ್ತು ಅನುಕೂಲವಾದಿ, ವೈಯಕ್ತಿಕ ಮತ್ತು ಸಾಮೂಹಿಕ ಎಂದು ಭಿನ್ನ ಆಯಾಮಗಳಲ್ಲಿ ಗುರುತಿಸಿಕೊಳ್ಳಬಹುದು. ವ್ಯಕ್ತಿಯ ಮನಸ್ಸಿನ ಆಲೋಚನೆಗಳಿಗೆ ವಿರುದ್ಧವಾದ ವಿಷಯಾಸಕ್ತಿಗಳಿಗೆ ಅಸಹಕರಿಸುವ, ನಿರಾಕರಿಸುವ, ನಿರ್ಲಿಪ್ತವಾಗಿರುವ ಮೂಲಕ ವ್ಯಕ್ತಿಯ ಮನಸ್ಸು ಆಂತರಿಕತೆಯಿಂದ ಬಾಹ್ಯ ಪ್ರತಿಭಟನೆಗೆ ರೂಪಾಂತರಗೊಳ್ಳುತ್ತದೆ. ವೈಯಕ್ತಿಕ ಲಾಭ, ನಷ್ಟಗಳಿಂದ ಉಂಟಾಗುವ ಪ್ರತಿಭಟನೆ ತನ್ನ ಸ್ವರೂಪವನ್ನು ವಿಸ್ತರಿಸಿಕೊಂಡು ಸಾಮಾಜಿಕ ಅನುಕೂಲವಾದಿ ಸ್ವರೂಪವನ್ನು ಪಡೆಯುತ್ತದೆ. ವೈಯಕ್ತಿಕತೆಯಲ್ಲಿ ವ್ಯಕ್ತಿಯ ಲಾಭ, ನಷ್ಟಗಳಿಂದ ಉಂಟಾಗುವ ಪ್ರತಿಭಟನೆ ತನ್ನ ಸ್ವರೂಪವನ್ನು ವಿಸ್ತರಿಸಿಕೊಂಡು ಸಾಮಾಜಿಕ ಅನುಕೂಲವಾದಿ ಸ್ವರೂಪವನ್ನು ಪಡೆಯುತ್ತದೆ. ವೈಯಕ್ತಿಕತೆಯಲ್ಲಿ ವ್ಯಕ್ತಿಯ ಲಾಭ, ನಷ್ಟಗಳು ಮುಖ್ಯವಾದರೆ ಸಾಮೂಹಿಕ ಪ್ರತಿಭಟನೆ ಇಡೀ ಸಮುದಾಯದ ಆಶೋತ್ತರಗಳಿಗೆ ಸ್ಪಂಧಿಸುವ ನೆಲೆಯದ್ದಾಗಿರುತ್ತದೆ.

ಇವುಗಳಿಗಿಂತಲೂ ಭಿನ್ನವಾದದ್ದು ತಾತ್ವಿಕ ಮತ್ತು ಅನುಕೂಲವಾದಿ ಪ್ರತಿಭಟನೆಯ ನೆಲೆಗಳು. ಯಾವುದೇ ವ್ಯಕ್ತಿ ತಾನು ನಂಬಿದ ತತ್ವ ಸಿದ್ಧಾಂತಗಳಿಗೆ ಬದ್ಧನಾಗಿ ಅವುಗಳಿಗೆ ಘಾಸಿಯಾಗುವ ಸಂದರ್ಭಗಳಲ್ಲಿ ತನ್ನ ವೈಯಕ್ತಿಕ ಹಿತಾಸಕ್ತಿಗಳನ್ನು ಲೆಕ್ಕಿಸದೆ ಪ್ರತಿಭಟಿಸುತ್ತಾನೆ. ಈ ಪ್ರತಿಭಟನೆಯಲ್ಲಿ ವ್ಯಕ್ತಿಗಿಂತ ಸಿದ್ಧಾಂತ ಮುನ್ನೆಲೆಯಲ್ಲಿರುತ್ತದೆ. ವೈಯಕ್ತಿಕ ಹಿತಾಸಕ್ತಿ ಯಾವುದೇ ಚಿಂತನೆಗಳಿಗೂ ಒಳಗಾಗದೆ ತನ್ನ ಆ ಸಂದರ್ಭದ ಅನುಕೂಲಗಳಿಗಷ್ಟೇ ಸೀಮಿತವಾಗಿರುತ್ತದೆ. ಇದರಿಂದ ಸಮುದಾಯಕ್ಕಾಗಲಿ, ಸಮಾಜಕ್ಕಾಗಲಿ ಯಾವುದೇ ಅನುಕೂಲಗಳಿಲ್ಲ. ಒಂದು ಅರ್ಥದಲ್ಲಿ ವ್ಯಕ್ತಿ ತನ್ನ ತನವನ್ನೇ ಮಾರಿಕೊಂಡಂತೆ ವರ್ತಿಸುವುದನ್ನು ಈ ಪ್ರತಿಭಟನೆಯ ನೆಲೆಯಲ್ಲಿ ಗುರ್ತಿಸಬಹುದು.

ಈ ಎಲ್ಲಾ ಪ್ರತಿಭಟನಾ ಚಿಂತನೆಗಳನ್ನು ಆಧರಿಸಿ ಪಂಪ-ಕುಮಾರವ್ಯಾಸರ ಕೃತಿಗಳಲ್ಲಿ ಮಹಿಳೆಯರು ಎದುರಿಸುವ ಸಂಘರ್ಷಗಳ ಪ್ರತಿಭಟನೆಯ ನೆಲೆಗಳನ್ನು ಚರ್ಚಿಸಬಹುದು.

೩.೩.೧ ಅಂಬೆಯ ಸಂಘರ್ಷಗಳು

ಭೀಷ್ಮನು ಅಪಹರಿಸಿ ತಂದ ಮೂರು ಜನ ಸಹೋದರಿಯರಲ್ಲಿ ಈಕೆ ಹಿರಿಯವಳು. ಇಡೀ ಮಹಾಭಾರತ ಕಥೆಗೆ ಸೇಡಿನ ಕಿಡಿಯ ತಳಪಾಯದ ಮುನ್ನುಡಿಯನ್ನು ಬರೆದವಳು. ಜೊತೆಗೆ ಸೇಡು ತೀರಿಸಿಕೊಳ್ಳಲು ಪಣ ತೊಟ್ಟ ಹೆಣ್ಣುಗಳಲ್ಲಿ ಅಂಬೆ ಮೊದಲನೆಯವಳು. ಪಂಪ ಹಾಗೂ ಕುಮಾರವ್ಯಾಸರ ಕೃತಿಗಳಲ್ಲಿ ಈ ಪಾತ್ರ ಬಹಳ ಪ್ರತಿಭಟನಾತ್ಮಕ ಸ್ವರೂಪದಲ್ಲಿಯೆ ತನ್ನ ವ್ಯಕ್ತಿತ್ವವನ್ನು ಓದುಗನ ಮುಂದೆ ತೆರೆದಿಟ್ಟಿರುವುದು ಕಂಡುಬರುತ್ತದೆ. ಅದಕ್ಕೆ ಸಕಾರಣವೂ ಇದೆ. ಈಕೆಯ ನಿಲುವುಗಳು ಹಾಗೂ ವರ್ತನೆಗಳು ಈಕೆಯನ್ನು ಸ್ತ್ರೀವಾದಿ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಗುಮಾಡಲು ಪ್ರೇರೇಪಿಸುತ್ತವೆ. ಏಕೆಂದರೆ ಇದುವರೆಗಿನ ಅಧ್ಯಯನಗಳೆಲ್ಲ ಕೇಂದ್ರೀಕೃತವಾಗಿರುವುದು 'ದ್ರೌಪದಿ', 'ಕುಂತಿ', 'ಕರ್ಣ', ಹಾಗೂ 'ಕೃಷ್ಣ'ರಂತಹ ಪ್ರಧಾನ ನೆಲೆಯ ಪಾತ್ರಗಳ ಮೇಲೆ. ಅಂಬೆ ಹಾಗೂ ಆಕೆಯ ಸಹೋದರಿಯರು, ಮತ್ಸ್ಯಗಂಧಿಯಂತಹ ಬೆಸ್ತರ ಹೆಣ್ಣು ಮಗಳು, ಹಿಡಿಂಬೆಯಂತಹ ಕಾನನ ಜೀವಿಗಳು ಇಲ್ಲಿ ನಿರ್ಲಕ್ಷ್ಯಕ್ಕೊಳಗಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಅಂಬೆಯ ಪಾತ್ರವನ್ನು ಸ್ತ್ರೀಪರ ಚಿಂತನೆಯ ಹಿನ್ನೆಲೆಯಲ್ಲಿ ಅಧ್ಯಯನಕ್ಕೆ ಒಳಪಡಿಸುವುದು ಸೂಕ್ತವಾಗಿದೆ.

ಪುರುಷ ಪ್ರಧಾನ ಸಮಾಜ ಹಾಗೂ ಊಳಿಗಮಾನ್ಯ ವ್ಯವಸ್ಥೆಗಳು ಜಾರಿಯಲ್ಲಿದ್ದ ಸಂದರ್ಭದಲ್ಲಿ ಹೆಣ್ಣುಗಳನ್ನು ನಡೆಸಿಕೊಳ್ಳುತ್ತಿದ್ದ ಕ್ರಮಕ್ಕೆ ಅಂಬೆ ಹಾಗೂ ಆಕೆಯ ಸೋದರಿಯರ ಅಪಹರಣವೇ ಸಾಕ್ಷಿ. ಅವರನ್ನು ಅಪಹರಿಸಿ ತರುವುದು ಆ ಕಾಲದ ಮನಸ್ಥಿತಿಯನ್ನು ತಿಳಿಸಿಕೊಡುತ್ತದೆ. ಈ ಹಿನ್ನೆಲೆಯಲ್ಲಿ ಇಂತಹ ಕ್ರಮದ ವಿರುದ್ಧ ಪ್ರತಿಭಟಿಸಿ ನಿಲ್ಲುವ ಅಂಬೆಯು ಸ್ತ್ರೀವಾದಿ ಚಿಂತನೆಯ ಸಂದರ್ಭದಲ್ಲಿ ಮುಖ್ಯಳಾಗಿ ಕಾಣುತ್ತಾಳೆ.

'ಪಂಪಭಾರತ'ದಲ್ಲಿ ನಮಗೆ ಅಂಬೆಯ ಪ್ರಸ್ತಾಪವಾಗುವುದು ಮೊದಲಿಗೆ ಪ್ರಥಮಾಶ್ವಾಸದ ೭೨ನೇ ಪದ್ಯದಲ್ಲಿ. ವಿಚಿತ್ರವೀರ್ಯನಿಗೆ ರಾಜ್ಯಭಾರವನ್ನು ವಹಿಸಿಕೊಳ್ಳಲು ಸಮರ್ಥನನ್ನಾಗಿ ಮಾಡಿ ಭೀಷ್ಮನು ಘೋಷ ಯಾತ್ರೆಗೆ ಹೊರಡುವನು. ಈ ರೀತಿ ಹೊರಟ ಆತ ಅಂಬೆ, ಅಂಬಿಕೆ ಮತ್ತು ಅಂಬಾಲಿಕೆಯರೆಂಬ ಸೋದರಿಯರನ್ನು ಅಪಹರಿಸಿ ತರುವನು. ಆ ಸನ್ನಿವೇಶವನ್ನು ಪಂಪ ಹೀಗೆ ತಿಳಿಸಿದ್ದಾನೆ.

> "ಸಕಳ ಕ್ಷತ್ರಿಯ ಮೋಹದಿಂ ನಿಜಭುಜ ಪ್ರಾರಂಭದಿಂ ಪೋಗಿ ತಾ।
> ಗಿ ಕೆಲರ್ ನೊಂದೊಡೆ ಕಾದಿ ರಾಜಸುತರೊಳ್ ತನ್ನಂಕದೊಂದುಗ್ರಸಾ॥
> ಯಕದಿಂ ನಾಯಕರಂ ಪಡಲ್ವಡಿಸುತುಂ ತಾಂ ತಂದನಂದಂಬೆಯಂ।
> ಬಿಕೆಯಂಬಾಲೆಯರೆಂಬ ಬಾಲೆಯ[ರನೇಂ] ಭೀಷ್ಮಂ ಯಶೋಭಾಗಿಯೋ॥"[೬೬]

ಸಕಲ ಕ್ಷತ್ರಿಯರಿಗೂ ಮೋಹದಿಂದ ತನ್ನ ಬಾಹುಬಲ ಪ್ರದರ್ಶನಕ್ಕಾಗಿ ಹೋಗಿ ಮೇಲೆ ಬಿದ್ದ ರಾಜನ ಮಕ್ಕಳಲ್ಲಿ ಕೆಲವರು ನೋಯುವ ಹಾಗೆ ತನ್ನ ಭಯಂಕರವಾದ ಬಾಣದಿಂದ ಸೇನಾನಾಯಕರನ್ನೆಲ್ಲಾ ಬೀಳುವ ಹಾಗೆ ಮಾಡಿ ಅಂಬೆ, ಅಂಬಿಕೆ ಮತ್ತು ಅಂಬಾಲಿಕೆಯರೆಂಬ

ಬಾಲೆಯರನ್ನು ಅಪಹರಿಸಿಕೊಂಡು ಬಂದನು. ಭೀಷ್ಮನು ಎಂತಹ ಕೀರ್ತಿಗೆ ಭಾಗಿಯೋ ಎಂಬಲ್ಲಿ ಪಂಪನು ವಿವರಿಸಿರುವಂತೆ ಮೂವರು ಸಹೋದರಿಯರನ್ನು ಅಪಹರಿಸಿ ತಂದ ಭೀಷ್ಮನನ್ನು 'ಏಂ ಭೀಷ್ಮಂ ಯಶೋಭಾಗಿಯೋ' ಎಂದು ಕುಹಕವಾಡಿದಂತೆ ತೋರುತ್ತದೆ. ಭೀಷ್ಮನು ಎಂತಹ ಕೀರ್ತಿಗೆ ಭಾಗಿಯೋ? ಎಂಬ ಈ ಸಾಲು ಹಲವು ಚರ್ಚೆಗಳನ್ನು ಹುಟ್ಟುಹಾಕುತ್ತದೆ. ಏಕೆಂದರೆ ಪಂಪ ಸ್ತ್ರೀಯರನ್ನು ಅಪಹರಿಸಿ ತಂದದ್ದಕ್ಕೆ ಆತನಿಗೆ ಈ ಕೀರ್ತಿ ಬಂದಿತು ಎಂದು ಹೇಳುತ್ತಿರುವನೋ ಅಥವಾ ಸ್ತ್ರೀಯರನ್ನು ಅಪಹರಿಸಿ ತಂದು ಅಪಕೀರ್ತಿಗೆ ಒಳಗಾದನು ಎಂಬ ಅರ್ಥದಲ್ಲಿ ಪಂಪನು ಈ ಸಾಲನ್ನು ಬಳಸಿದ್ದಾನೋ? ಇದಕ್ಕಿಂತ ಮುಖ್ಯವಾದುದು ಈ ಮೂವರು ಸೋದರಿಯರ ಅಪಹರಣದ ವಿಚಾರ. ಇಲ್ಲಿ ಪ್ರಧಾನವಾಗಿ ಕಂಡುಬರುವುದು ಹೆಣ್ಣು ಭೋಗದ ವಸ್ತು. ಅದು ಗಂಡಿನ ಆಸ್ತಿ ಎಂಬ ಪರಂಪರಾಗತವಾದ ಮನಸ್ಥಿತಿ. ಭೀಷ್ಮನಂತಹ ಶ್ರೇಷ್ಠ ವ್ಯಕ್ತಿ ಕೂಡ ಸ್ತ್ರೀ ಅಪಹರಣದಂತಹ ಕೆಲಸಕ್ಕೆ ಇಳಿದಿದ್ದು ಇಲ್ಲಿ ಆತನ ವ್ಯಕ್ತಿತ್ವಕ್ಕೆ ಶೋಭೆ ತರುವಂತಹದ್ದಲ್ಲ. ಇಲ್ಲಿ ಆ ಹೆಣ್ಣುಗಳ ಆಸೆ, ಆಕಾಂಕ್ಷೆಗಳಿಗೆ ಮನ್ನಣೆ ಕೊಟ್ಟಿಲ್ಲ. ಅವರ ಮಾನಸಿಕ ಅಭಿಲಾಷೆಗಳಿಗೆ ವಿರುದ್ಧವಾಗಿ ಅವರನ್ನು ಕರೆತರಲಾಗಿದೆ.

ಪ್ರಭುತ್ವದ ನೆಲೆಗಟ್ಟಿನಲ್ಲಿ ನಿಂತು ವೀರೋಚಿತವಾಗಿ ಮಾತನಾಡುವ ಪಂಪ ಭೀಷ್ಮನನ್ನು ಪೌರುಷತ್ವದ ನೆಲೆಯಲ್ಲಿಯೇ ಚಿತ್ರಿಸುತ್ತ ಅಂಬೆ, ಅಂಬಿಕೆ ಮತ್ತು ಅಂಬಾಲಿಕೆಯರನ್ನು ಅಪಹರಿಸಿ ತಂದದ್ದು ಅವನ ಶಕ್ತಿ, ಸಾಮರ್ಥ್ಯಗಳಿಗೆ ತಕ್ಕುದಾದುದಲ್ಲ ಎಂಬ ನೆಲೆಗಟ್ಟಿನಲ್ಲಿ ಕುಹಕವಾಗಿ 'ಏಂ ಭೀಷ್ಮಂ ಯಶೋಭಾಗಿಯೋ' ಎಂದಿದ್ದಾನೆ. 'ಯಶೋಭಾಗಿಯೋ' ಎಂಬುದು ಸಮರ್ಥನೊಬ್ಬನು ಮಾಡಬಾರದ ಕಾರ್ಯವನ್ನು ಭೀಷ್ಮ ಮಾಡಿ ಅಪಕೀರ್ತಿಗೆ ಒಳಗಾಗಿದ್ದಾನೆ ಎಂಬುದನ್ನು ಸೂಚಿಸುತ್ತದೆ. ಸಮರ್ಥನಾದವನೊಬ್ಬ ಇಂತಹ ಕೀಳುಮಟ್ಟದ ಕೆಲಸಕ್ಕೆ ಕೆಲಸಕ್ಕೆ ಕೈಹಾಕಬಾರದಿತ್ತೆಂದನ್ನು ಸಹ ಈ ಮಾತು ಧ್ವನಿಸುತ್ತದೆ.

ಕುಮಾರವ್ಯಾಸ ಈ ಸಂದರ್ಭವನ್ನು ಹೀಗೆ ಚಿತ್ರಿಸಿದ್ದಾನೆ.

"ರಾಯ ಕೇಳೈ ಸಕಲ ರಾಜ್ಯ
ಶ್ರೀಯನಾತಂಗಿತ್ತು ಭೀಷ್ಮನು
ತಾಯ ಚಿತ್ತವ ಪಡೆದು ಮೆಚ್ಚಿಸಿದನು ಜಗತ್ರಯವ
ರಾಯ ಕುರುವನ ಮದುವೆಗಬ್ಬ ದ
ಳಾಯತಾಕ್ಷಿಯರನು ವಿಚಾರಿಸಿ
ಹಾಯಿದನು ದಳದುಳದೊಳೊಂದು ವಿವಾಹ ಮಂಟಪಕೆ"[೬೭]

ಸಕಲ ರಾಜ್ಯಶ್ರೀಯನ್ನು ವಿಚಿತ್ರವೀರ್ಯನಿಗೆ ಕೊಟ್ಟು ಆತನಿಗೆ ಪಟ್ಟಾಭಿಷೇಕವನ್ನು ಮಾಡಿ ತಾಯಿಯ ಮನಸ್ಸಿಗೊಪ್ಪುವಂತೆ ನಡೆದುಕೊಂಡನು. ಈ ರೀತಿ ನಡೆದುಕೊಂಡು ಮೂರು ಲೋಕವನ್ನೂ

ಮೆಚ್ಚಿಸಿದನು. ರಾಜಕುಮಾರನಿಗೆ ವಿವಾಹ ಮಾಡಲು ಅವನಿಗೆ ತಕ್ಕ ಕನ್ಯೆಯರನ್ನು ವಿಚಾರಿಸುತ್ತ, ಹುಡುಕುತ್ತ ಬಂದ ಭೀಷ್ಮನು ದಳದುಳದಿಂದ ಒಂದು ವಿವಾಹ ಮಂಟಪದ ಒಳಹೊಕ್ಕನು.

"ಅಲ್ಲಿ ನೆರೆದಾ ಕ್ಷತ್ರವರ್ಗವ
ಚೆಲ್ಲ ಬಡಿದು ವಿವಾಹ ಶಾಲೆಯ
ಚೆಲ್ಲೆಗಂಗಳ ಕಮಲಮುಖಿಯರ ಮೂವರನು ಪಿಡಿದು
ಘಲ್ಲಣೆಯ ಖಂಡೆಯದ ಚೌಪಟ
ಮಲ್ಲ ಭೀಷ್ಮನು ಪುರಕೆ ತಂದವ
ರೆಲ್ಲರನು ತಮ್ಮಂಗೆ ಮದುವೆಯ ಮಾಡಲನುವಾದ"[೬೮]

ಅಲ್ಲಿ ನೆರೆದಿದ್ದ ಕ್ಷಾತ್ರ ವರ್ಗದವರನ್ನೆಲ್ಲ ಚೆಲ್ಲಾಪಿಲ್ಲಿಯಾಗುವಂತೆ ಬಡಿದು, ವಿವಾಹ ಶಾಲೆಯಲ್ಲಿದ್ದ ಮೂವರು ಕಮಲಮುಖಿಯರನ್ನು 'ಹಿಡಿದು' ಹೊರಟನು. ಕತ್ತಿಯನ್ನು ಝಳಪಿಸುತ್ತ, ಎದುರಾದವರನ್ನು ಎದುರಿಸಿ, ಖಂಡೆಯದ ಚೌಪಟ ಮಲ್ಲನಾದ ಭೀಷ್ಮನು ಆ ಮೂವರೂ ಕನ್ಯೆಯರನ್ನು ಪುರಕ್ಕೆ ಕರೆತಂದು ತಮ್ಮನಾದ ವಿಚಿತ್ರವೀರ್ಯನಿಗೆ ಮದುವೆ ಮಾಡುವುದಕ್ಕೆ ಅನುವಾದನು. ಎದುರಾಳಿಗಳನ್ನು ಗೆಲ್ಲುವುದು, ಸೋಲಿಸುವುದು ಕ್ಷಾತ್ರಧರ್ಮ. ಕ್ಷಾತ್ರಧರ್ಮದ ನೆಲೆಯಲ್ಲಿರುವ ಭೀಷ್ಮ ಮನುಷ್ಯ ನೆಲೆಗೆ ಇಳಿದು ತಾನು ಅಪಹರಿಸುವ ಸ್ತ್ರೀಯರ ಮನೋಭಿಲಾಷೆಗಳನ್ನು ಒಮ್ಮೆಯಾದರೂ ಕೇಳಬೇಕಿತ್ತು. ಸಾಂಸಾರಿಕ ಬದುಕು ರಣರಂಗದ ಯುದ್ಧಗಳಲ್ಲಿನ ಸೋಲು ಗೆಲುವುಗಳಿಂದ ನಿರ್ಧಾರಿತವಾಗುವುದಿಲ್ಲ. ಜೀವನವನ್ನು ಕಟ್ಟಿಕೊಳ್ಳುವ ಯಾರೇ ಆಗಲಿ ತಮ್ಮ ಸಂಗಾತಿಗಳ ಬಗ್ಗೆ ಅವರ ಆಸೆ, ಕನಸುಗಳಿಗೆ ಪೂರಕವಾಗಿ ಆಯ್ಕೆಯ ಸ್ವಾತಂತ್ರ್ಯವನ್ನು ಹೊಂದಿರುತ್ತಾರೆ. ಭೀಷ್ಮ ಭರತ ವಂಶವನ್ನು ಮುನ್ನಡೆಸುವ ಉತ್ಸಾಹದಲ್ಲಿ ವಿಚಿತ್ರವೀರ್ಯನಿಗೆ ಒಳ್ಳೆಯ ಹೆಣ್ಣಗಳನ್ನು ವಿವಾಹ ಮಾಡಲು ತೋರಿದ ಆಸಕ್ತಿಯನ್ನು ಈ ಮೂವರು ಹೆಣ್ಣುಗಳ ಆಲೋಚನೆಯ ಅಭಿವ್ಯಕ್ತಿಗೆ ತೋರಲಿಲ್ಲ.

ಇಲ್ಲಿ ಗಮನಿಸಬೇಕಾದುದು 'ವಿಕ್ರಮಾರ್ಜುನ ವಿಜಯ' ಹಾಗೂ 'ಕುಮಾರವ್ಯಾಸ ಭಾರತ' ಎರಡೂ ಕಾವ್ಯಗಳಲ್ಲಿಯೂ ಈ ಮೂರು ಜನರನ್ನು ವಿವಾಹ ಮಂಟಪದಿಂದ ಅಪಹರಿಸಿ ತರಲಾಗಿದೆ. ಜೊತೆಗೆ ಆ ರೀತಿ ತರುವ ಸಂದರ್ಭವನ್ನು ಪಂಪನು 'ತಂದನ್' ಎಂಬ ಪದದ ಮೂಲಕ ತಿಳಿಸಿದರೆ, ಕುಮಾರವ್ಯಾಸ 'ಪಿಡಿದು' ಎಂಬ ಪದವನ್ನು ಬಳಸಿದ್ದಾನೆ. ಈ ಎರಡೂ ಪದಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ತಾಯ್ತನದ ನೆಲೆಯ ಹೆಣ್ಣೊಬ್ಬಳನ್ನು ಸಮಾಧಾನಪಡಿಸುವ ಹಾಗೂ ಮೆಚ್ಚಿಸುವ ಬರದಲ್ಲಿ ಅದೇ ಸ್ತ್ರೀಕುಲದ ಉಳಿದ ಹೆಣ್ಣುಗಳ ಅಭಿಲಾಷೆಗಳಿಗೆ ಮನಕೊಡದ ಭೀಷ್ಮನ ಪೌರುಷವನ್ನು ಪಂಪ ವ್ಯಂಗ್ಯ ಮಾಡಿರುವುದು ವೇದ್ಯವಾಗುತ್ತದೆ. ಅಲ್ಲದೆ ಈ ಸಮಯದಲ್ಲಿ ಆ ಮೂವರು ಸಹೋದರಿಯರನ್ನೂ ಮಾನುಷ ಜೀವಿಗಳೆಂದು ಬಗೆಯದೆ, ವಸ್ತುವಿನಂತೆ ಪರಿಭಾವಿಸಿರುವುದು ಕಂಡುಬರುತ್ತದೆ. ಅಲ್ಲದೆ ಅವರನ್ನು ಕರೆತರುವಾಗ ತಡೆಯಲು ಬಂದವರೊಡನೆ ಕಾದಾಡಲಾಗಿದೆ. ಅವರನ್ನು ನೋಯಿಸಿ ಬಲವಂತದಿಂದ ಕರೆತಂದಿರುವುದು ಸ್ಪಷ್ಟವಾಗಿ ತಿಳಿಯುತ್ತದೆ.

ಈ ರೀತಿ ಅವರನ್ನು ತಂದ ನಂತರ ಭೀಷ್ಮ ತಮ್ಮನಾದ ವಿಚಿತ್ರವೀರ್ಯನಿಗೆ ಕೊಟ್ಟು ವಿವಾಹ ಮಾಡಲು ಮುಂದಾಗುತ್ತಾನೆ. ಆಗ ಹಿರಿಯವಳಾದ 'ಅಂಬೆ' ಅದನ್ನು ಪ್ರತಿಭಟಿಸಿ ನಿಲ್ಲುತ್ತಾಳೆ. ಇದು ಪ್ರಮುಖವಾಗಿ ಚರ್ಚಿಸುವಂತಹ ಸಂಗತಿ. ಇಲ್ಲಿ ಆಕೆಯ ನಿಜವಾದ ಸಂಘರ್ಷಗಳು ಅಡಗಿರುವುದು ತಿಳಿಯುತ್ತದೆ. ಏಕೆಂದರೆ ಈ ಪ್ರತಿಭಟನೆ ಹಾಗೂ ವಿರೋಧಗಳ ಹಿಂದೆ ಛಿದ್ರವಾಗಿರುವ ಅವಳ ಮಾನಸಿಕ ಅಭಿಲಾಷೆಗಳಿವೆ. ಆ ಸನ್ನಿವೇಶವನ್ನು ಪಂಪ ಈ ರೀತಿಯಾಗಿ ತಿಳಿಸಿದ್ದಾನೆ.

"ವ॥ ಅಂತು ತಂದು ತನ್ನ ತಮ್ಮಂ ವಿಚಿತ್ರವೀರ್ಯಂಗಾ ಮೂವರ್ಕನ್ನೆಯರಂ
ಪಾಣಿಗ್ರಹಣಂಗೆ ಯ್ವಾಗಳೆಲ್ಲರಿಂ ಪಿರಿಯಾಕೆ ನಿನ್ನನಲ್ಲದೆ ಪೆಱರನೊಲ್ಲೆನೆಂದಿರ್ದೊಡೆ
ಮತ್ತಿನಿರ್ವರುಮಂ ಮದುವೆಯಂ ಮಾಡಿ ಗಾಂಗೇಯನಂಬೆಯನಿಂತೆಂದಂ"[೭೯]

ಈ ಸಂದರ್ಭವು ಕುಮಾರವ್ಯಾಸನಲ್ಲಿ ವರ್ಣಿತವಾಗಿರುವ ಬಗೆ ಹೀಗಿದೆ.

"ಆ ಕಮಲಲೋಚನೆಯರೊಳು ಮೊದ
ಲಾಕೆ ಭೀಷ್ಮನ ಗಂಡನೆಂದೇ
ನೂಕಿ ಭಾಷೆಯ ಮಾಡಿ ನಿಂದಳು ಛಲದ ಬಿಗುಹಿನಲಿ
ಆಕೆ ಮಾಣಲಿ ಮಿಕ್ಕವರು ಬರ
ಲೀ ಕುಮಾರಂಗೆಂದು ವೈದಿಕ
ಲೌಕಿಕೋತ್ಸವದಿಂದ ಮದುವೆಯ ಮಾಡಿದನು ಭೀಷ್ಮ"[೮೦]

ಪಂಪನಲ್ಲಿ ಅಂಬೆಯು 'ನಿನ್ನನಲ್ಲದೆ ಪೆಱರನೊಲ್ಲೆ' ಎಂದು ತಿಳಿಸಿದರೆ, ಕುಮಾರವ್ಯಾಸನಲ್ಲಿ 'ಭೀಷ್ಮನನ್ನು ಗಂಡನೆಂದೇ ನೂಕಿ ಭಾಷೆಯ ಮಾಡಿ' ಆತನೇ ತನ್ನನ್ನು ವಿವಾಹವಾಗಬೇಕು ಎನ್ನುತ್ತಾಳೆ. ಈ ರೀತಿ ಸ್ಪಷ್ಟವಾಗಿ ತಿಳಿಸುವ ಮೂಲಕ ತನಗೆ ಇಷ್ಟವಿಲ್ಲದವನ ಜೊತೆಗಿನ ಮದುವೆಯನ್ನು ಖಂಡಿಸುತ್ತಾಳೆ. ಜೊತೆಗೆ ಬಲವಂತದ ವಿವಾಹವನ್ನು ಮಾಡಲು ಹೊರಟ ಭೀಷ್ಮನ ವರ್ತನೆಗಳನ್ನು ವಿರೋಧಿಸುತ್ತಾಳೆ. 'ನಿನ್ನನಲ್ಲದೆ ಬೇರೆಯವರನ್ನು ಅಂಗೀಕರಿಸುವುದಿಲ್ಲ' ಎಂದು ಹೇಳುವ ಮಾತುಗಳಲ್ಲಿ ಅವಳ ಮನಸ್ಸಿನ ಒಳಬೇಗುದಿಗಳು ಹಾಗೂ ಸಂಕಟಗಳು ಅರಿವಿಗೆ ಬಾರದೆ ಇರುವುದಿಲ್ಲ. ಕಾರಣ ಎಲ್ಲರಿಗೂ ತಿಳಿಯುವಂತೆ ಭೀಷ್ಮ ಈಕೆಯನ್ನು ಅಪಹರಿಸಿ ತಂದಿದ್ದಾನೆ. ಆತನೇ ಅವಳನ್ನು ವಿವಾಹವಾಗಬೇಕಾದದ್ದು ಧರ್ಮ. ಅಂಬೆಯ ಈ ನಿರ್ಧಾರದಲ್ಲಿ ನ್ಯಾಯವಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲರನ್ನೂ ಜಯಿಸಿ ತಂದವನೇ ತನ್ನನ್ನು ವಿವಾಹವಾಗಬೇಕೆಂಬುದು ಎಲ್ಲ ನಾರಿಯರ ಸಹಜ ಅಭಿಲಾಷೆ ಕೂಡ. ಏಕೆಂದರೆ ಅದು ಕ್ಷಾತ್ರಯುಗ. ಅದು ಕ್ಷತ್ರಿಯ ಧರ್ಮ ಕೂಡ ಹೌದು. ಅಲ್ಲದೆ ಅದು ಸತ್ಪುರುಷರ ಲಕ್ಷಣವೂ ಸಹ. ಆದರೆ ಭೀಷ್ಮ ಇಲ್ಲಿ ಆ ರೀತಿ ಮಾಡದೆ ತನ್ನ ತಮ್ಮನಿಗೆ ವಿವಾಹ ಮಾಡಲು ಹೊರಟಾಗ ಸಹಜವಾಗಿಯೆ ಅಂಬೆಯ ಮನದಲ್ಲಿ ತಳಮಳಗಳು ಉಂಟಾಗಿ ಅದನ್ನು ವಿರೋಧಿಸುತ್ತಾಳೆ. ಜೊತೆಗೆ "ಭೀಷ್ಮನ ಸ್ಪರ್ಶದಿಂದ ಅಂಬೆಯ ದೇಹ ಅರ್ಥಾತ್ ಶೀಲ ನಷ್ಟವಾಯಿತೆಂದು ತಿಳಿಯುವುದು ಲೋಕ ವ್ಯವಹಾರದ ದೃಷ್ಟಿಯಿಂದ

ಸರಿಯಾದುದೇ"[೨೧] ಎಂಬ ಅಭಿಪ್ರಾಯ ಕೂಡ ಒಪ್ಪುವಂತಹದ್ದೇ ಆಗಿದೆ. ಏಕೆಂದರೆ ಇದು ಆಕೆಯ ಮಾನದ ಪ್ರಶ್ನೆ. ತನ್ನನ್ನು ಇತರರಿಂದ ಜಯಿಸಿ ತಂದವನೇ ವಿವಾಹವಾಗಬೇಕೆಂಬ ಬೇಡಿಕೆ ಇಲ್ಲಿ ಅಂಬೆಯದು. ಕಾರಣ ಜಯಿಸಿ ತಂದವ ಒಬ್ಬ, ವಿವಾಹವಾಗುವವ ಬೇರೊಬ್ಬನಾದರೆ ಅರ್ಥದ ಛಾಯೆಗಳೆ ಬದಲಾಗುತ್ತವೆ ಎಂಬುದು ಅಂಬೆಯ ನಿಲುವಾಗಿದೆ.

ಕುಮಾರವ್ಯಾಸನ ಕೃತಿಯಲ್ಲಿಯೂ ಸಹ ಅಂಬೆಯಲ್ಲಿ ಇದೇ ರೀತಿಯ ಮನಸ್ಥಿತಿಯನ್ನು ಕಾಣುತ್ತೇವೆ. ಭೀಷ್ಮನೇ ನನಗೆ ಗಂಡನಾಗಬೇಕೆಂದು ಆಣೆ ಮಾಡಿ ಆಕೆ ಛಲದ ಬಿಗುವಿನಿಂದ ನಿಲ್ಲುತ್ತಾಳೆ. ಈ ಛಲದ ಭಾವವೇ ಮುಂದೆ ಅವಳಲ್ಲಿ ವ್ಯಗ್ರ ಭಾವನೆಗಳಿಗೆ ಕಾರಣವಾಗುತ್ತದೆ.

ಇಲ್ಲಿ ಪ್ರಧಾನವಾಗಿ ಗಮನಿಸಬೇಕಾದದ್ದು ಅಂಬೆಗೂ ಮನಸ್ಸು ಎಂಬುದು ಒಂದಿದೆ. ಆಕೆಗೂ ಭಾವನೆಗಳಿವೆ, ಆಸೆ ಆಕಾಂಕ್ಷೆಗಳಿವೆ ಎಂಬ ವಿಚಾರಗಳನ್ನು. ಏಕೆಂದರೆ ವಿವಾಹ ಎಂಬುದು ಪ್ರತಿಯೊಂದು ಜೀವಿಗು ಅದು ಗಂಡಾಗಿರಬಹುದು, ಹೆಣ್ಣಾಗಿರಬಹುದು ಅದೊಂದು ಮಧುರ ನೆನಪು. ಆದರೆ ಇಲ್ಲಿ ಅಂಬೆ ಸ್ವಯಂವರದಲ್ಲಿ ತನ್ನ ಮನಸ್ಸಿಗೆ ಒಪ್ಪುವ ವರನನ್ನು ಆಯ್ಕೆ ಮಾಡಿಕೊಳ್ಳುವಂತಹ ಸಮಯ. ಅಂತಹ ಸಂದರ್ಭದಲ್ಲಿ ಭೀಷ್ಮ ಅವಳನ್ನು ಅಪಹರಿಸಿ (ಪಿಡಿದು) ತರುತ್ತಾನೆ. ತಾನು ಇಷ್ಟಪಟ್ಟವನೊಡನೆ ವಿವಾಹವಾಗದೆ ತನ್ನ ಮನದ ಆಸೆಗಳಿಗೆ ವಿರುದ್ಧವಾಗಿ ತನಗಿಷ್ಟವಿಲ್ಲದವನೊಟ್ಟಿಗೆ ಮದುವೆಯಾಗಬೇಕಾಗಿ ಬಂದ ಕಾರಣವಾಗಿ ಅಂಬೆ ಈ ರೀತಿಯ ನಿರ್ಧಾರಗಳನ್ನು ವ್ಯಕ್ತಪಡಿಸುತ್ತಾಳೆ.

ಅಂಬೆಯ ಈ ರೀತಿಯ ಅಪೇಕ್ಷೆಯನ್ನು ಭೀಷ್ಮ ತಿರಸ್ಕರಿಸುತ್ತಾನೆ. ಕಾರಣ ತಾನು ಮೂರು ಲೋಕಗಳಿಗೂ ತಿಳಿಯುವಂತೆ ಪ್ರತಿಜ್ಞೆ ಮಾಡಿದ್ದೇನೆ. ಕಾಮ ಸುಖಕ್ಕೆ ಸೋಲಲಾಗದು. ನನ್ನ ಬ್ರಹ್ಮಚರ್ಯ ವ್ರತವು ನಾಶವಾಗುತ್ತದೆ ಎಂದು ತಿಳಿಸುತ್ತಾನೆ. ಅಲ್ಲದೆ ಭೀಷ್ಮ ಹೇಳುವ ಈ ಮಾತು ಚರ್ಚೆಗೆ ಗ್ರಾಸವನ್ನು ಒದಗಿಸುತ್ತವೆ. "ಅಬ್ಬೆಯೆಂದತ್ತಿಗೆಯೆಂಬ ಮಾತನೆನಗೇನೆನಲಕ್ಕುಮೊ ಪಂಕಜಾನನೇ"[೨೨] ಅಂದರೆ "ಎಲೆ ಕಮಲಮುಖಿ ಮೊದಲು ತಾಯಿ ಎಂದು ಕರೆದು ನಂತರ ಪ್ರೀತಿಪಾತ್ರಳಾದವಳು ಎಂದು ಹೇಳಲು ಸಾಧ್ಯವಾಗುತ್ತದೆಯೇ?"[೨೩] ಎಂದು ತಿಳಿಸಿ ಅಂಬೆಯನ್ನು ತಾಯಿಯ ಸ್ಥಾನದ ಎತ್ತರದಲ್ಲಿ ಕಾಣುತ್ತಾನೆ. ಭೀಷ್ಮನ ಈ ಗುಣವೇ ಆತನನ್ನು ಔನತ್ಯಕ್ಕೆ ಏರಿಸಿದೆ. ಜೊತೆಗೆ ಸ್ತ್ರೀಪಾತ್ರ ಚಿತ್ರಣದಲ್ಲಿ ಪರಂಪರಾಗತ ದೃಷ್ಟಿಕೋನ ಇದ್ದಾಗ್ಯೂ ಕೂಡ ಪಂಪನು ಈ ರೀತಿಯ ಅಂಶಗಳನ್ನು ಕಟ್ಟಿಕೊಟ್ಟಿರುವುದು ಸ್ತ್ರೀವಾದಿ ಹಿನ್ನೆಲೆಯಲ್ಲಿ ಬಹುಮುಖ್ಯವಾಗುತ್ತವೆ.

ಅಲ್ಲದೆ ಈ ಸಾಲಿಗೆ ಗದ್ಯಾನುವಾದವನ್ನು ನೀಡಿರುವ ಪ್ರೊ.ಎಚ್.ವಿ.ಶ್ರೀನಿವಾಸ ಶರ್ಮರು ಇಲ್ಲಿ ಸಂಸ್ಕೃತಿಯ ಅಂಶಗಳ ಕಡೆ ನಮ್ಮ ಗಮನವನ್ನು ಸೆಳೆಯುತ್ತಾರೆ. ಅವರು ಈ ಸಾಲನ್ನು ಹೀಗೆ ಅರ್ಥೈಸಿದ್ದಾರೆ. "ಈಗ ನನ್ನ ದೃಷ್ಟಿಯಲ್ಲಿ ನೀನು ತಾಯಿ ಮಾತ್ರ. ನೀನು ಎಂದಿಗೂ ಅತ್ತಿಗೆ ಅಥವಾ ನಲ್ಲೆ ಆಗಲಾರೆ. ಈಗ ಹೇಳು ನಿನ್ನನ್ನು ಏನೆಂದು ಕರೆಯಲಿ"[೨೪] ಇಲ್ಲಿ 'ನೀನು ಎಂದಿಗೂ ಅತ್ತಿಗೆ ಅಥವಾ ನಲ್ಲೆ ಆಗಲಾರೆ' ಎಂಬ ಮಾತು ಚರ್ಚಿಸತಕ್ಕದ್ದು. ಬುಡಕಟ್ಟು ಸಂಸ್ಕೃತಿಯ ಅಥವಾ

ದ್ರಾವಿಡ ಸಂಸ್ಕೃತಿಯ ಬಹುಮುಖ್ಯವಾದ ಜೀವನ ಕ್ರಮದ ಸಂಗತಿಯೊಂದು ಭೀಷ್ಮನ ಮಾತುಗಳಲ್ಲಿ ತಿಳಿಯುತ್ತದೆ. ಅಂಬೆಗೆ ನೀನು ಎಂದಿಗೂ 'ಅತ್ತಿಗೆ' ಆಗಲಾರೆ, ಎಂಬ ಮಾತಿನಲ್ಲಿ ಹಿಂದೆ ಬುಡಕಟ್ಟು ಹಾಗೂ ದ್ರಾವಿಡ ಸಮುದಾಯಗಳಲ್ಲಿ ಅಣ್ಣ ತೀರಿಕೊಂಡರೆ ಅಣ್ಣನ ಪತ್ನಿಯನ್ನು ತಮ್ಮನಾದವನು ಮರು ಮದುವೆ ಮಾಡಿಕೊಳ್ಳುತ್ತಿದ್ದ ಅಥವಾ 'ಕೂಡಿಕೆ' ಮಾಡಿಕೊಳ್ಳುತ್ತಿದ್ದ ಸಂಸ್ಕೃತಿ ಪ್ರಚಲಿತದಲ್ಲಿದ್ದುದು ತಿಳಿದಿರುವ ಸಂಗತಿ. ಭೀಷ್ಮ ಒಂದು ವೇಳೆ ಈ ಅರ್ಥದಲ್ಲಿ ಏನಾದರೂ ಹೇಳಿರಬಹುದೆ? ಇಲ್ಲಿ ಭೀಷ್ಮನ ಮಾತುಗಳು ಪಂಪನ ಕಾಲಘಟ್ಟದ ಸಮಕಾಲೀನ ಸಮಾಜವನ್ನು ತಿಳಿಸಿಕೊಡುತ್ತವೆ.

ಅಂಬೆಯ ಮಾನಸಿಕ ತೊಳಲಾಟಗಳು 'ಕುಮಾರವ್ಯಾಸಭಾರತ'ಕ್ಕಿಂತ 'ಪಂಪಭಾರತ'ದಲ್ಲಿ ಹೆಚ್ಚಾಗಿ ಅಭಿವ್ಯಕ್ತಗೊಂಡಿವೆ. ಪಂಪನಲ್ಲಿ ಭೀಷ್ಮನ ಮಾತುಗಳಿಂದ ತನ್ನ ಮನಸ್ಸಿನ ಅಭಿಲಾಷೆ ಈಡೇರುವುದಿಲ್ಲ ಎಂಬುದು ಖಚಿತವಾದಾಗ ಅಂಬೆಯು ತನಗೆ ಬಾಲ್ಯದಲ್ಲಿ ಮದುವೆಯಾಗುವುದಾಗಿ ಉಂಗುರವನ್ನು ತೊಡಿಸಿದ್ದ 'ಸಾಲ್ವಲ' ಎಂಬ ರಾಜನಲ್ಲಿಗೆ ಬರುತ್ತಾಳೆ. ಈ ಸನ್ನಿವೇಶವನ್ನು ಗಮನಿಸಿದರೆ ಅಂಬೆಯ ಅತಂತ್ರ ಸ್ಥಿತಿ, ಅವಳ ನೋವುಗಳು ನಮ್ಮ ಅರಿವಿಗೆ ಬರುತ್ತವೆ. ಅದನ್ನು ಪಂಪ ಈ ಕೆಳಗಿನಂತೆ ತಿಳಿಸಿದ್ದಾನೆ.

"ವ॥ ಎಂದು ನುಡಿದ ಗಾಂಗೇಯನ ನುಡಿಯೊಳವಸರಮಂ ಪಸರಮಂ ಪಡೆಯದೆ ತನಗೆ ಕಿಱಿಯಂದುಂಗುರವಿಟ್ಟ ಸಾಲ್ವಲನೆಂಬರಸನಲ್ಲಿಗೆ ಪೋಗಿ ನೀನೆನ್ನಂ ಕೈಕೊಳ ವೇೞ್ಕುಮ್..."[೭೫]

ಎಂದು ಸಾಲ್ವಲನನ್ನು ಕೇಳಿಕೊಳ್ಳುತ್ತಾಳೆ. ಆಗ ಸಾಲ್ವಲನು ಹೇಳುವ ಈ ಮಾತುಗಳು ಗಮನಿಸತಕ್ಕವು.

"ಬಂಡಣದೊಳೆನ್ನನೋಡಿಸಿ ।
ಕೊಂಡುಯ್ದಂ ನಿನ್ನನಾ ಸರಿತ್ಸುತನಾನುಂ ॥
ಪೆಂಡತಿಯೆನಾದೆನದಱಿಂ ।
ಪೆಂಡಿರ್ ಪೆಂಡಿರೊಳದೆಂತು ಬೆರಸುವರಬಲೇ"[೭೬]

ಸ್ವಯಂವರದ ದಿನದ ಯುದ್ಧದಲ್ಲಿ ಭೀಷ್ಮನು ನನ್ನನ್ನು ಓಡಿಸಿ ನಿನ್ನನ್ನು ಅಪಹರಿಸಿಕೊಂಡು ಹೋದನು. ಅದರಿಂದಾಗಿ ನಾನೂ ಕೂಡ ಹೆಂಗಸಾಗಿದ್ದೇನೆ. ಆದ್ದರಿಂದ ಎಲೆ ಹೆಣ್ಣೆ ಹೆಂಗಸರು ಹೆಂಗಸರಲ್ಲಿ ಸೇರುವುದು ಹೇಗೆ ಸಾಧ್ಯ? ಎಂದು ತನ್ನ ಸೋಲಿನ ಸ್ಥಿತಿಯನ್ನು ಅಭಿವ್ಯಕ್ತಪಡಿಸುತ್ತಾನೆ. ಇದರಲ್ಲಿ ಗಮನಿಸುವಂತಹ ಅಂಶ 'ಪೆಂಡಿರ್ ಪೆಂಡಿರೊಳದೆಂತು ಬೆರಸುವಬಲೇ' ಎಂಬ ಮಾತು. ಇಲ್ಲಿಯೂ ಸಹ ಯಥಾ ಪ್ರಕಾರ ಹೆಣ್ಣು ಗಂಡಿನ ಭೋಗಕ್ಕಾಗಿಯೆ, ಲೈಂಗಿಕ ತೃಷೆಗಾಗಿಯೇ ಇರುವ ಸರಕು ಎಂಬ ಮನೋಭಾವವಿರುವುದು ಖಚಿತವಾಗುತ್ತದೆ.

ಆದರೆ ಇಲ್ಲಿ ಸಾಲ್ವಲ ತನ್ನ ಅಸಹಾಯಕತೆಯ ಜೊತೆಗೆ ತನ್ನ ಮನದ ಭಾವನೆಗಳನ್ನು ಹೇಳಿಕೊಳ್ಳುತ್ತಾನೆಯೇ ಹೊರತು ಅಂಬೆಯ ಭಾವನೆಗಳಿಗೆ ಲಕ್ಷ್ಯ ಅಥವಾ ಗಮನ ನೀಡಿಲ್ಲದಿರುವುದು ಕಂಡುಬರುತ್ತದೆ. ಯುದ್ಧದಲ್ಲಿ ಸೋತ ಮಾತ್ರಕ್ಕೆ ಗಂಡ ಹೆಣ್ಣಾಗಲು ಸಾಧ್ಯವಿಲ್ಲ. ಅಲ್ಲದೆ ಸೋಲೆನ್ನುವುದು ಹೆಣ್ಣಿಗೆ ಮಾತ್ರ ಸೀಮಿತವಾಗಿದೆಯೇ? ಪ್ರಭುತ್ವ ಹಾಗೂ ಕ್ಷಾತ್ರಧರ್ಮದ ನೆಲೆಯಲ್ಲಿ ಅಂಬೆಯನ್ನು

ತಿರಸ್ಕರಿಸುವುದು ಎಷ್ಟು ಸರಿ? ಬಾಲ್ಯ ಸಂಗಾತಿಯಾದ ಅವಳಿಗೆ ಜೀವನದ ಬಗೆಗಿನ ಉತ್ಸಾಹವನ್ನು ತುಂಬುವ ಹಾಗೂ ಆಕೆಯನ್ನು ಸಮಾಧಾನಿಸುವ ಅವಕಾಶಗಳಿರಲಿಲ್ಲವೇ?

ಈ ರೀತಿಯಾಗಿ ಸಾಲ್ವಲನೂ ಸಹ ವಿವಾಹವಾಗಲು ನಿರಾಕರಿಸಿದಾಗ ಅಂಬೆ ನೇರವಾಗಿ ಪರಶುರಾಮನಲ್ಲಿಗೆ ಬರುತ್ತಾಳೆ. ಕುಮಾರವ್ಯಾಸನಲ್ಲಿ 'ಸಾಲ್ವಲ'ನ ಪ್ರಸಂಗವಿಲ್ಲ. ಅಲ್ಲಿ ಅಂಬೆ ಭೀಷ್ಮನು ನಿರಾಕರಿಸಿದ ನಂತರ ಪರಶುರಾಮನಲ್ಲಿಗೆ ಬಂದು ಭೀಷ್ಮನು ತನ್ನನ್ನು ವಿವಾಹವಾಗುವಂತೆ ಒಡಂಬಡಿಸಬೇಕೆಂದು ಕೇಳಿಕೊಳ್ಳುವ ಸನ್ನಿವೇಶವಿದೆ. ಪಂಪ ಅಂಬೆಯು ಪರಶುರಾಮನಲ್ಲಿಗೆ ಬಂದು ಭಿನ್ನವಿಸುವ ಸಂದರ್ಭವನ್ನು ಹೀಗೆ ಚಿತ್ರಿಸಿದ್ದಾನೆ.

"ಸಾಲ್ವಲಂ ತನ್ನ ಪರಿಭವದೊಳಾದ ಸಿಗ್ಗಂ ಸಾಲ್ವಿನಮುಂಟು
ಮಾಡಿದೊಡಾತನ ಮನಮನೊಡಂಬಡಿಸಲಾಱದೆ ಪರಶುರಾಮನಲ್ಲಿಗೆ ಪೋಗಿ ಭೀಷ್ಮನೆನ್ನ
ಸ್ವಯಂವರದೊಳ್ ನೆರೆದರಸುಮಕ್ಕಳೆಲ್ಲರುಮನೋಡಿಸಿಕೊಂಡು ಬಂದೆನ್ನ(ಂ)ಮದುವೆಯಂ
ನಿಲಲೊಲ್ಲದಟ್ಟಿ ಕಳೆದೊಡೆನ್ನ ದೆವಸಮುಂ ಜವ್ವನಮುಮಡವಿಯೊಳಗೆ ಪೂತ ಪೂವಿನಂತೆ
ಕಿಡಲೀಯದಾತನನೆನ್ನಂ ಪಾಣಿಗ್ರಹಣಂ ಗೆಯ್ವಂತು ಮಾಡು ಮಾಡಲಾಱದೊಡೆ ಕಿಚ್ಚಂ
ದಯೆಗೆಯ್ವುದೆಂದಂಬೆ ಕಣ್ಣನೀರಂ ತುಂಬೆ..."[೭೭]

ಸಾಲ್ವಲನನ್ನು ಒಪ್ಪಿಸಲಾಗದೆ, ಪರಶುರಾಮನ ಬಳಿ ಬಂದು ಭೀಷ್ಮನು ಸ್ವಯಂವರದಲ್ಲಿ ನೆರೆದಿದ್ದ ರಾಜಕುಮಾರರನ್ನೆಲ್ಲ ಓಡಿಸಿ, ಅಪಹರಿಸಿಕೊಂಡು ಬಂದು ಈಗ ನನ್ನನ್ನು ಮದುವೆಯಾಗದೆ ಓಡಿಸಿದನು. ನನ್ನ ಯೌವ್ವನವು ಕಾಡಿನಲ್ಲಿ ಹರಳಿರುವ ಹೂವಿನಂತೆ ವ್ಯರ್ಥವಾಗದ ಹಾಗೆ ಆತನು ನನ್ನನ್ನು ವಿವಾಹವಾಗುವಂತೆ ಮಾಡಿ. ಇಲ್ಲವೆ ನಾನು ಸಾಯಲು ಕಿಚ್ಚನ್ನು ದಯಪಾಲಿಸಿ ಎಂದು ಕಣ್ಣ ನೀರು ತುಂಬಿದ ಸ್ಥಿತಿಯಲ್ಲಿ ಬೇಡಿಕೊಳ್ಳುತ್ತಾಳೆ. ಸಮಾಜದಲ್ಲಿ ಗಂಡಿನ ಸಾಂಗತ್ಯವಿಲ್ಲದ ಹೆಣ್ಣಿನ ಬದುಕು ವ್ಯರ್ಥ ಎಂದು ಅಂಬೆ ಹೇಳಿದರೂ ತನ್ನನ್ನು ಗೆದ್ದು ತಂದವನು, ಇಲ್ಲವೇ ಮಾನಸಿಕವಾಗಿ ಗೆದ್ದವನು ಇಬ್ಬರಲ್ಲಿ ಒಬ್ಬರನ್ನು ವರಿಸಲು ಬಯಸುತ್ತಾಳೆ.

ಇಲ್ಲಿ ಅಂಬೆ ಪರಶುರಾಮನಿಗೆ ಹೇಳುವ 'ಎನ್ನ ದೆವಸಮುಂ ಜವ್ವನಮುಮಡವಿಯೊಳಗೆ ಪೂತ ಪೂವಿನಂತೆ ಕಿಡಲೀಯದ್' ಎಂಬ ಮಾತು ಬಹು ಮುಖ್ಯವಾದುದು. ಕಾರಣ ಸ್ವಯಂವರ ಮಂಟಪದಲ್ಲಿ ಕುಳಿತು ತನ್ನ ದಾಂಪತ್ಯದ ಹೊಸ ಬದುಕಿನ ಕನಸನ್ನು ಕಾಣುತ್ತಿದ್ದವಳು ಅಂಬೆ. ಅಂತಹವಳು ಇಂದು ಭೀಷ್ಮನಿಂದ ತಿರಸ್ಕೃತಳಾಗಿದ್ದಾಳೆ. ತನ್ನ ಬಾಲ್ಯದ ಪ್ರಿಯಕರ ಸಾಲ್ವಲನಿಂದಲೂ ಈಕೆಗೆ ಪರಿಹಾರ ಸಿಗಲಿಲ್ಲ. ಇವಳ ಸ್ಥಿತಿಯೂ ಕಾಡಿನಲ್ಲಿ ಬಿಡುವ ಹೂವಿನಂತಾಗಿದೆ. ಅಂದರೆ ಕಾಡಿನ ಹೂವನ್ನು ಯಾರೂ ಕೂಡ ಮುಡಿಯುವುದಿಲ್ಲ. ಹಾಗೆಯೇ ತನ್ನ ಬದುಕನ್ನು ಇಷ್ಟಪಟ್ಟವನೊಂದಿಗೆ ಕಳೆಯಲಾಗದೆ ಇರುವಂತಹ ಕೊರಗು ಆಕೆಯಲ್ಲಿದೆ. ಹಾಗಾಗಿಯೆ ಆಕೆ ಪರಶುರಾಮನಲ್ಲಿ ನೀವು ಒಂದು ವೇಳೆ ಭೀಷ್ಮನನ್ನು ವಿವಾಹಕ್ಕೆ ಒಪ್ಪಿಸಲಾಗದಿದ್ದರೆ ತಾನು ಸಾವನ್ನಪ್ಪಲು ಕಿಚ್ಚನ್ನು ದಯಪಾಲಿಸಿ ಎಂದು ಕೇಳಿಕೊಳ್ಳುತ್ತಾಳೆ. ಅಂದರೆ ಇಬ್ಬರಿಂದಲೂ ತಿರಸ್ಕೃತಳಾದ

ಮೇಲೆ ಬದುಕುವುದು ವ್ಯರ್ಥ ಎಂಬ ನಿರ್ಧಾರಕ್ಕೆ ಆಕೆ ಬರುವುದನ್ನು ಕಾಣಬಹುದು. ಇದಕ್ಕೆ ಮತ್ತೊಂದು ಕಾರಣ ಆಕೆಯ ಮಾನಸಿಕ ಹತಾಶೆಗಳು.

ಕುಮಾರವ್ಯಾಸನಲ್ಲಿ ಈ ಸಂದರ್ಭ ಸಂಕ್ಷಿಪ್ತವಾಗಿದೆ.

"ಅರಸ ಚಿತ್ತೈಸಂಬೆಯೆಂಬಳು
ದುರುಳೆ ಭೀಷ್ಮನ ಕೂಟವಲ್ಲದೆ
ಮರಣದೆಡೆಯಲಿ ಬೆರಸಿದಲ್ಲದೆ ಪಂಥವಿಲ್ಲೆಂದು
ಪರಶುರಾಮನ ಭಜಿಸಿ ಹಸ್ತಿನ
ಪುರಕೆ ತಂದಳು ಹೇಳಿಸಿದಳೀ
ಸುರನದೀನಂದನನು ಮಾಡಿದ ಪರಿಯ ಕೇಳೆಂದ"[೭೮]

ಅಂಬೆಯು ಭೀಷ್ಮನ ಕೂಟವಿಲ್ಲದಿದ್ದರೆ ತಾನು ಮರಣಿಸುವುದಾಗಿ ತನ್ನ ಮನದ ನಿರ್ಧಾರಗಳನ್ನು ಸ್ಪಷ್ಟವಾಗಿ ಪರಶುರಾಮನಿಗೆ ತಿಳಿಸುತ್ತ, ತನ್ನ ನೋವನ್ನು ತೋಡಿಕೊಳ್ಳುತ್ತಾಳೆ. ಆದರೆ ಇಲ್ಲಿ ಕವಿ ಅಂಬೆಯನ್ನು ಕುರಿತು ಮಾತನಾಡುವಾಗ ಆಕೆಗೆ 'ದುರುಳೆ' ಎಂಬ ಪದವನ್ನು ಬಳಸಿದ್ದಾನೆ. ಈ ರೀತಿಯಾಗಿ ಅಂಬೆಯನ್ನು ದುಷ್ಟೆ ಎಂದು ಕರೆಯುವ ಔಚಿತ್ಯವೇನಿತ್ತು ಎಂಬುದಕ್ಕೆ ಕುಮಾರವ್ಯಾಸನಲ್ಲಿ ಉತ್ತರವಿಲ್ಲ. ತನ್ನನ್ನು ಅಪಹರಿಸಿದವ ಅಥವಾ ಗೆದ್ದು ತಂದವನೆ ಮದುವೆಯಾಗಬೇಕು ಎಂದು ಹಠ ಹಿಡಿದು ಕೇಳಿದ್ದಕ್ಕೋ? ಅಥವಾ ತಾನು ತೋರಿಸಿದವನನ್ನು ಯಾವುದೇ ಪ್ರಶ್ನೆಗಳಿಲ್ಲದೆ ಮದುವೆಯಾಗಲಿಲ್ಲವೆಂಬ ಕಾರಣಕ್ಕೋ? ತಿಳಿಯದು. ಈ ರೀತಿ ಆಕೆಯನ್ನು ದುರುಳೆಯೆಂದು ಅಪಮಾನಿಸುವ ಅಗತ್ಯತೆಯಾದರೂ ಏನಿತ್ತು? ಎಂಬ ಪ್ರಶ್ನೆಗಳಿಗೆ ಕೃತಿಯಲ್ಲಿ ಉತ್ತರವಿಲ್ಲ.

ನಂತರ ಪರಶುರಾಮನು ಭೀಷ್ಮನು ವಿನಯವನ್ನು ಆಶ್ರಯಿಸುವುದಾದರೆ ನಾನು ಹೇಳಿದ ಸ್ತ್ರೀಯನ್ನು ಮದುವೆಯಾಗುತ್ತಾನೆ. ಇಲ್ಲದಿದ್ದರೆ ನನ್ನೊಡನೆ ಭಯಂಕರವಾದ ಯುದ್ಧದಲ್ಲಿ ಪಾಲ್ಗೊಳ್ಳುವನು. "ಎನ್ನಂ ಕರಂ ನಂಬಿದಂಬೆಯೊಳೆನ್ನಂಬೆವಲಂ ವಿವಾಹವಿಧಿಯಂ ಮಾಳ್ಪಿಂ ಪೆಱರ್ ಮಾಳ್ಪರೇ"[೭೯] ಎಂದು ತೀರ್ಮಾನಿಸಿ ಹಸ್ತಿನಾಪುರಕ್ಕೆ ಬರುತ್ತಾನೆ. ಬಂದು ಅಂಬೆಯನ್ನು ವಿವಾಹವಾಗುವಂತೆ ತಿಳಿಸಿ, ಮದುವೆಯಾಗುವುದಿಲ್ಲವಾದರೆ ತನ್ನೊಡನೆ ಯುದ್ಧಕ್ಕೆ ಸಿದ್ಧನಾಗಬೇಕೆಂದು ತಿಳಿಸುತ್ತಾನೆ. ಭೀಷ್ಮನು ತಾನು ಮಾಡಿರುವ ಪ್ರತಿಜ್ಞೆಯನ್ನು ಅವರಿಗೆ ತಿಳಿಸಿಕೊಟ್ಟು, ಯಾವುದೇ ಕಾರಣಕ್ಕೂ ನಾನು ವಚನ ಭ್ರಷ್ಟನಾಗಲಾರೆ ಎಂಬುದನ್ನು ಖಡಾಖಂಡಿತವಾಗಿ ತಿಳಿಸಿ ಅಂಬೆಯನ್ನು ವಿವಾಹವಾಗಲು ನಿರಾಕರಿಸುತ್ತಾನೆ. ಅಂತಿಮವಾಗಿ ಇಬ್ಬರ ನಡುವೆಯೂ ಘೋರ ಯುದ್ಧವಾಗುತ್ತದೆ. ಯುದ್ಧದಲ್ಲಿ ಪರಶುರಾಮನು ಭೀಷ್ಮನನ್ನು ಗೆಲ್ಲಲಾಗದೆ ಶಕ್ತಿಗುಂದಿ ಮೂರ್ಛಿತನಾಗುತ್ತಾನೆ.

"ಅಂತು ಗಾಂಗೇಯನೊಳ್ ಪರಶುರಾಮಂ ಕಾದಿ ಬಸವಟಿದುಸಿರಲಪ್ಪೊಡಮಾಜಿದೆ ಮೂರ್ಛೆವೋಗಿರ್ದನಂ ಕಂಡಂಬೆಯೆಂಬ ದಂಡುರುಂಬೆ ನಿನಗೆ ವಧಾರ್ಥಮಾಗಿ ಪುಟ್ಟುವೆ ನಕ್ಕೆಂದು ಕೋಪಾಗ್ನಿಯಿಂದಮಗ್ನಿಶರೀರೆಯಾಗಿ ದ್ರುಪದನ ಮಹಾದೇವಿಗೆ ಮಗನಾಗಿ ಪುಟ್ಟಿ ಕಾರಣಾಂತರದೊಳ್ ಶಿಖಂಡಿಯಾಗಿರ್ದಳ್..."[೮೦]

ಮೂರ್ಛಿತನಾದ ಪರಶುರಾಮನನ್ನು ಕಂಡ ಅಂಬೆಯು, ಭೀಷ್ಮನಿಗೆ 'ನಿನ್ನ ಸಾವಿಗೆ ಕಾರಣವಾಗಿ ಹುಟ್ಟುತ್ತೇನೆ' ಎಂದು ಪ್ರತಿಜ್ಞೆಯನ್ನು ಕೈಗೊಳ್ಳುತ್ತಾಳೆ. ನಂತರ ಸೇಡಿನ ಮನೋಭಾವದಿಂದ ಅಗ್ನಿಪ್ರವೇಶವನ್ನು ಮಾಡುತ್ತಾಳೆ. ದ್ರುಪದನ ಮಹಾದೇವಿಗೆ ಮಗನಾಗಿ ಹುಟ್ಟಿ ಕಾರಣಾಂತರದಿಂದ 'ಶಿಖಂಡಿ'ಯಾಗಿದ್ದಳೆಂದು ಪಂಪ ತಿಳಿಸಿಕೊಡುತ್ತಾನೆ.

ಪಂಪ ಇಲ್ಲಿ ಅಂಬೆಯನ್ನು ಕುರಿತು 'ದಂಡುರುಂಬೆ' ಎಂಬ ಪದವನ್ನು ಬಳಸಿದ್ದಾನೆ. ಈ ಪದಕ್ಕೆ ಡಿ.ಎಲ್.ನರಸಿಂಹಾಚಾರ್ಯರು ತಮ್ಮ 'ಪಂಪ ಭಾರತ ದೀಪಿಕೆ'ಯಲ್ಲಿ "ತುಂಟೆ", "ದಿಟ್ಟೆ"[೮೧] ಎಂಬ ಅರ್ಥಗಳನ್ನು ನೀಡಿದ್ದಾರೆ. ಎನ್.ಅನಂತರಂಗಾಚಾರ್ ಅವರು ತಮ್ಮ 'ಪಂಪಭಾರತಂ'ನ ಗದ್ಯಾನುವಾದದಲ್ಲಿ "ಗಯ್ಯಾಳಿ"[೮೨] ಎಂಬ ಅರ್ಥವನ್ನು ಕೊಟ್ಟಿದ್ದಾರೆ. ಈ ಪದಗಳು ಅಂಬೆಯ ವ್ಯಕ್ತಿತ್ವವನ್ನು ಚಿತ್ರಿಸುವಲ್ಲಿ ಸೋತಿರುವಂತೆ ಕಂಡುಬರುತ್ತವೆ. 'ತುಂಟೆ', 'ದಿಟ್ಟೆ', 'ಗಯ್ಯಾಳಿ' ಎಂಬ ಪದಗಳು ಆಕೆಯ ವ್ಯಕ್ತಿತ್ವವನ್ನು ಕೆಳದರ್ಜೆಗೆ ಇಳಿಸಿರುವಂತೆ ಭಾಸವಾಗುತ್ತದೆ. ಅಲ್ಲದೆ ಮನಸ್ಸಿನ ಅಭಿಪ್ರಾಯಗಳನ್ನು ಮುಕ್ತವಾಗಿ ಹೇಳಿಕೊಂಡರೆ ಹೆಣ್ಣು ಹೇಗೆ 'ತುಂಟೆ' ಅಥವಾ 'ಗಯ್ಯಾಳಿ'ಯಾಗುವಳು? ಇಲ್ಲಿ ಅಂಬೆಯ ಮನಸ್ಸಿನ ಒಳತುಮುಲಗಳ ಹಿನ್ನೆಲೆಯಲ್ಲಿ ಅವಳ ಮನಸ್ಸಿನ ಒಳಹೊಕ್ಕರೆ ನಮಗೆ ಆಕೆಯ ನಿಜವಾದ ನೋವುಗಳು, ಆತಂಕಗಳು, ಸಂಘರ್ಷಗಳು ಅರಿವಾಗುತ್ತವೆ. ಹೀಗಾಗಿ ಆಕೆ ಭೀಷ್ಮನನ್ನು ಕುರಿತು ನಿನ್ನ ಸಾವಿಗೆ ಕಾರಣವಾಗಿ ಹುಟ್ಟುತ್ತೇನೆ ಎಂದು ಪ್ರತಿಜ್ಞೆಗಯ್ಯುವುದು ಸ್ವಾಭಾವಿಕವೇ ಆಗಿದೆ. ಆ ಕಾರಣವಾಗಿ ಪಂಪ ಇಲ್ಲಿ ಆಕೆಯನ್ನು ಕುರಿತು 'ದಂಡುರುಂಬೆ' ಎಂಬ ಪದ ಬಳಸಿರುವುದು ಅಷ್ಟು ಸೂಕ್ತವಾಗಿಲ್ಲ. ಏಕೆಂದರೆ ಅಂಬೆಯು ಯಾವುದೇ ತಪ್ಪನ್ನು ಮಾಡಿಲ್ಲ. ಪುರುಷ ಪ್ರಧಾನ ಸಮಾಜ ಹಾಗೂ ಪ್ರಭುತ್ವದ ಕಪಿಮುಷ್ಟಿಗೆ ಸಿಲುಕಿ ಆಕೆ ನಲುಗಿರುವುದು ನಮಗೆ ಕಂಡುಬರುತ್ತದೆ.

ಭೀಷ್ಮ ತನ್ನ ಪ್ರತಿಜ್ಞೆಗಾಗಿ ಅಂಬೆಯನ್ನು ಗೆದ್ದು ತಂದಿದ್ದರೂ ಮದುವೆಯಾಗಲು ನಿರಾಕರಿಸಿ ಕ್ಷಾತ್ರಧರ್ಮವನ್ನು ಮುರಿದ. ಬಾಲ್ಯದಲ್ಲಿಯೇ ಮದುವೆಯಾಗುವುದಾಗಿ ಉಂಗುರ ತೊಡಿಸಿದ್ದ ಸಾಲ್ವಲ ಅಸಹಾಯಕನಾಗಿ ತನ್ನ ಪ್ರೀತಿಯನ್ನು ಬಿಟ್ಟುಕೊಟ್ಟ. ಇವರಿಬ್ಬರ ತೀರ್ಮಾನಗಳಿಂದಾಗಿ ಅಂಬೆಯ ಜೀವನ ದುರಂತ ಅಂತ್ಯ ಕಂಡರೂ ಅವಳದ್ದೇ ತಪ್ಪು ಎನ್ನುವಂತೆ 'ದಂಡುರುಂಬೆ' ಎಂಬ ಪದ ಬಳಸಿ ಗಂಡಿನ ಪ್ರಾಬಲ್ಯವನ್ನೆ ಸೂಚಿಸಲಾಗಿದೆ. ದಾಶನನ್ನು ಓಲೈಸಿ ಮತ್ಸ್ಯಗಂಧಿಗೂ ಶಂತನುವಿಗೂ ವಿವಾಹ ಮಾಡಿದಂತೆ, ಅಂಬೆಯನ್ನು ವಿವಾಹವಾಗುವಂತೆ ಸಾಲ್ವಲನಿಗೆ ಓಲೈಸಲಿಲ್ಲವೇಕೆ? ಎಲ್ಲಕ್ಕಿಂತ ಮುಖ್ಯವಾಗಿ ಭೀಷ್ಮನಿಂದ ಅಂಬೆಗೆ ಅನ್ಯಾಯ ಆಗಿರುವುದಂತೂ ಸ್ಪಷ್ಟ ಹಾಗೂ ಸತ್ಯ. ಹೆಣ್ಣೊಬ್ಬಳ ಮನಸ್ಸಿನ ಆಸೆ ಆಕಾಂಕ್ಷೆಗಳನ್ನು ಪುರಸ್ಕರಿಸದ, ಗೌರವಿಸದ ಪುರುಷ ಪ್ರಧಾನ ಸಮಾಜ ತನ್ನೆಲ್ಲ ತಪ್ಪುಗಳನ್ನು ಹಾಗೂ ನ್ಯೂನತೆಗಳನ್ನು ಮುಚ್ಚಿ ಹಾಕಲು ಅಂಬೆಯನ್ನು 'ದಂಡುರುಂಬೆ'ಯನ್ನಾಗಿಸಿರುವಂತಿದೆ.

ಕುಮಾರವ್ಯಾಸನಲ್ಲಿ ಭೀಷ್ಮನನ್ನು ತಾನೆ ಒಡಂಬಡಿಸಿಕೊಳ್ಳುವಂತೆ ಅಂಬೆಗೆ ತಿಳಿಸಿ ಪರಶುರಾಮನು ಆಶ್ರಮಕ್ಕೆ ತೆರಳುವ ವಿವರಗಳಿವೆ.

"ನುಡಿಯ ಭಂಗಿಸಲೆಂದು ಗುರುವವ
ಗಡಿಸಿ ಹೊಕ್ಕರೆ ಸರಳಮೊನೆಯಲಿ
ಕೊಡಹಿ ಬಿಸುಟನು ಬಿಟ್ಟುದಿಲ್ಲ ಮಹಾವ್ರತಸ್ಥಿತಿಯ
ನುಡಿಯ ಮೀರದ ನಮ್ಮ ಶಿಷ್ಯನ
ನೊಡಬಡಿಸಿಕೊಳ್ಳೆಂದು ನಾರಿಗೆ
ನುಡಿದು ತನ್ನಾಶ್ರಮಕೆ ಸರಿದನು ಪರಶುರಾಮಮುನಿ"[೮೩]

ಇಲ್ಲಿಯೂ ಅಂಬೆಗೆ ಪರಶುರಾಮನಿಂದಲೂ ನ್ಯಾಯ ದೊರಕುವುದಿಲ್ಲ. ಅಂತಿಮವಾಗಿ ಅವಳು ರೋಷದಿಂದ ಪ್ರತಿಜ್ಞೆ ಮಾಡುವುದು ಕಂಡುಬರುತ್ತದೆ.

"ಅಂಬೆ ಭೀಷ್ಮನ ಬೈದು ಕಂಬನಿ
ದುಂಬಿ ಹೋದಳು ತಪಕೆ .."[೮೪]

ಕುಮಾರವ್ಯಾಸನು ಅಂಬೆಯು ಭೀಷ್ಮನನ್ನು ಬೈದು ಕಣ್ಣೀರಿಡುತ್ತ ತಪಸ್ಸಿಗೆ ಹೋದಳೆಂದು ತಿಳಿಸುತ್ತಾನೆ. ಈಕೆಯ ಕಣ್ಣೀರು ಅವಳ ಮನಸ್ಸಿನ ನೋವಿನ ಪ್ರತೀಕವಾಗಿದೆ. ಈ ಸಂದರ್ಭ ಪಂಪ ಹಾಗೂ ಕುಮಾರವ್ಯಾಸರ ಕಾಲಘಟ್ಟದ ಸಮಕಾಲೀನ ಸಮಾಜದ ಸಾಮಾಜಿಕ ಜನಜೀವನ ವ್ಯವಸ್ಥೆಯನ್ನು ಸಹ ನಮ್ಮ ಗಮನಕ್ಕೆ ತಂದುಕೊಡುತ್ತದೆ. ಈಕೆಗೆ ಯಾರಿಂದಲೂ ಇಲ್ಲಿ ನ್ಯಾಯ ಸಿಗದೇ ಇರುವುದು ಕಂಡುಬರುತ್ತದೆ. ಅಪಹರಿಸಿ ತಂದ ಭೀಷ್ಮನು ಮದುವೆಯಾಗಲು ನಿರಾಕರಿಸಿದರೆ, ಮದುವೆಯಾಗುವುದಾಗಿ ಉಂಗುರವಿಟ್ಟಿದ್ದ ಸಾಲ್ವಲ ತಾನು ಯುದ್ಧದಲ್ಲಿ ಸೋತು ಹೆಣ್ಣಾಗಿರುವೆನೆಂಬ ಕಾರಣ ನೀಡುತ್ತಾನೆ. ಇನ್ನು ಗುರುವಾದ ಪರಶುರಾಮನೂ ಸಹ ಭೀಷ್ಮನನ್ನು ವಿವಾಹಕ್ಕೆ ಒಪ್ಪಿಸಲಾರದೆ ಹೋಗುತ್ತಾನೆ. ಪುರುಷ, ಪ್ರಭುತ್ವ ಮತ್ತು ಸಮಾಜದಿಂದಲೂ ಈಕೆಗೆ ಅನ್ಯಾಯವಾಗಿದೆ. ಏಕೆಂದರೆ ಸಮಾಜ ಆಕೆಯನ್ನು ಅಪಹೃತಳು ಎಂದು ನೋಡುತ್ತದೆಯೇ ವಿನಃ ಆಕೆಯನ್ನು ಬೇರೆ ದೃಷ್ಟಿಕೋನಗಳಿಂದ ಕಾಣುವುದಿಲ್ಲ. ಜೊತೆಗೆ ಈ ರೀತಿ ಅನ್ಯಾಯಕ್ಕೊಳಗಾದ ಹೆಣ್ಣುಗಳಿಗೆ ಯಾವುದೇ ರೀತಿಯ ಸ್ವಾತಂತ್ರ್ಯಗಳಿಲ್ಲದಿರುವುದೂ ಕಂಡುಬರುತ್ತದೆ. ಗಂಡಿನ ನಿರ್ಧಾರಗಳನ್ನು ಒಪ್ಪಿಕೊಳ್ಳದಿದ್ದರೆ ಹೆಣ್ಣಿನ ಬದುಕು ಯಾವ ರೀತಿಯಾಗಿ ದುರಂತ ಅಂತ್ಯವನ್ನು ಕಾಣುತ್ತದೆ ಎಂಬುದನ್ನು ಅಂಬೆಯ ಪಾತ್ರದ ಮುಖೇನ ನಿರೂಪಿಸಲಾಗಿದೆ. ಒಟ್ಟಾರೆ ಇಲ್ಲಿ ಅಂಬೆ ಎಲ್ಲರಿಂದಲೂ ಅನ್ಯಾಯಕ್ಕೊಳಗಾಗುವ ಮೂಲಕ ಇಡೀ ಪ್ರಭುತ್ವ ಹಾಗೂ ಪುರುಷ ಪ್ರಧಾನ ಸಮಾಜವನ್ನು ಪ್ರತಿಭಟಿಸಿ ನಿಲ್ಲುತ್ತಾಳೆ. ಪುರುಷನ ನಿಲುವುಗಳನ್ನು ವಿರೋಧಿಸುವ ಮೂಲಕ ಸ್ತ್ರೀವಾದಿ ಚಿಂತನೆಗಳಿಗೆ ಮುನ್ನುಡಿಯಾಗಿದ್ದಾಳೆ.

೩.೩.೨ ದ್ರೌಪದಿಯ ಸಂಘರ್ಷಗಳು

ದ್ರೌಪದಿಯು ದ್ರುಪದ ರಾಜನ ಮಗಳು. ಪಾಂಡವರ ಪತ್ನಿ. ದ್ರುಪದನು ಅರ್ಜುನನ ಸಂಬಂಧಕ್ಕಾಗಿ ಅಗ್ನಿಯಿಂದ ಪಡೆದ ಸ್ತ್ರೀ. ಈಕೆ ಅಯೋನಿಜೆ. ಕೃಷ್ಣೆ ಎಂಬುದು ಈಕೆಯ ಮತ್ತೊಂದು ಹೆಸರು. ಮಹಾಭಾರತ ಕಥೆಯ ಕೇಂದ್ರ ಬಿಂದು. ಪಂಪ ಹಾಗೂ ಕುಮಾರವ್ಯಾಸರ

ಕಾವ್ಯಗಳಲ್ಲಿ ಪ್ರಧಾನ ಭೂಮಿಕೆಯಲ್ಲಿರುವವಳು. ಈ ಎರಡೂ ಕೃತಿಗಳ ಸಂದರ್ಭದಲ್ಲಿ ಈಕೆಯ ಸಂಘರ್ಷಗಳ ಸ್ವರೂಪವನ್ನು ವಿವಿಧ ಆಯಾಮಗಳ ಹಿನ್ನೆಲೆಯಲ್ಲಿ ಗಮನಿಸಬಹುದಾಗಿದೆ. ಈಕೆಯ ಸಂಘರ್ಷಗಳು ಮನಸ್ಸಿಗೆ ಸಂಬಂಧಿಸಿದ್ದು, ಕೆಲವೊಮ್ಮೆ ವೈಯಕ್ತಿಕ ನೆಲೆಯಲ್ಲಿದ್ದರೆ, ಮತ್ತೆ ಕೆಲವೊಮ್ಮೆ ಸಾಮೂಹಿಕ ಅಥವಾ ಸಮಾಜಮುಖಿಯಾದ ಸಮುದಾಯದ ಹಿತದ ಉದ್ದೇಶವುಳ್ಳ ಸಂಘರ್ಷಗಳಾಗಿವೆ. ಪಾಂಡವರ ಪತ್ನಿ, ಮಹಾರಾಣಿ ಎನಿಸಿಕೊಂಡರೂ ಒಬ್ಬಳು ಸಾಮಾನ್ಯ ಹೆಣ್ಣಿನ ಹಾಗೆ ಶೋಷಣೆಗೆ ಒಳಗಾಗಿ, ನೋವಿನ ಬದುಕನ್ನು ಸಾಗಿಸುವುದು ಇಲ್ಲಿ ನಮಗೆ ತಿಳಿದು ಬರುತ್ತದೆ. ಮಹಾಭಾರತದ ಉಳಿದ ಹೆಣ್ಣುಗಳು ಅನುಭವಿಸುವ ನೋವು, ತಲ್ಲಣ, ಬಯಕೆ, ಆಸೆ ಮೊದಲಾದ ಭಾವಗಳ ಸಂಘರ್ಷಗಳಿಗಿಂತ ಭಿನ್ನವಾದ ಸಂಘರ್ಷಗಳನ್ನು ದ್ರೌಪದಿ ಇಲ್ಲಿ ಎದುರಿಸುತ್ತಾಳೆ. ಅಲ್ಲದೆ ದ್ರೌಪದಿ ಇಲ್ಲಿ ಎದುರಿಸುವ ಸಂಘರ್ಷಗಳು ಅವಳೊಬ್ಬಳವೇ ಆಗದೆ ಅವು ಆ ಕಾಲಘಟ್ಟದ ಸಮಾಜದಲ್ಲಿನ ಪ್ರತಿಯೊಂದು ಹೆಣ್ಣಿನ ಸಂಘರ್ಷಗಳೂ ಆಗಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಆಕೆಯ ಸಂಘರ್ಷಗಳು ಈ ಅಧ್ಯಯನದಲ್ಲಿವೆ. ಪಂಪನಿಗೆ ಹೋಲಿಸಿದರೆ ಕೆಲವು ಸಂದರ್ಭಗಳಲ್ಲಿ ಕುಮಾರವ್ಯಾಸ ದ್ರೌಪದಿಯ ಮೂಲಕ ಪುರುಷ, ಪ್ರಭುತ್ವ ಹಾಗೂ ಸಮಕಾಲೀನ ಸಮಾಜದ ವಿರುದ್ಧ ತೀಕ್ಷ್ಣವಾಗಿ ಪ್ರತಿಕ್ರಿಯಿಸಿರುವುದು ಕಂಡುಬರುತ್ತದೆ.

ದ್ರೌಪದಿ ಪ್ರಧಾನವಾಗಿ ವ್ಯಕ್ತಿ ಸಂಬಂಧಗಳನ್ನು ವಿವೇಚಿಸುವ ಮಹತ್ವದ ಹೆಣ್ಣಾಗಿ ಕಂಡುಬರುತ್ತಾಳೆ. ಅಲ್ಲದೆ "ತೀ.ನಂ.ಶ್ರೀ ಯವರು ಗುರುತಿಸುವಂತೆ "ಭಾರತದ ಕ್ರಿಯಾಶಕ್ತಿ" ದ್ರೌಪದಿ ಎಂಬ ಮಾತು ಸತ್ಯವಾಗಿದೆ. ಭಾರತದೊಳಗೆ ದ್ರೌಪದಿ ಚಿತ್ರಣಗೊಂಡಿರುವಷ್ಟು ಮತ್ತ್ಯಾವ ಮಹಿಳಾ ಪಾತ್ರಗಳು ಈ ಪರಿಯಲ್ಲಿ ಸ್ಥಾನ ಪಡೆದಿಲ್ಲ ಎಂದು ಹೇಳಬಹುದು"[೬೫] ಎಂಬ ಮಾತುಗಳು ದ್ರೌಪದಿಯ ಪಾತ್ರವು 'ವಿಕ್ರಮಾರ್ಜುನ ವಿಜಯಂ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳನ್ನು ಆವರಿಸಿರುವ ರೀತಿಯನ್ನು ನಮಗೆ ಮನದಟ್ಟು ಮಾಡಿಕೊಡುತ್ತದೆ.

೩.೩.೨.ಅ. ಸ್ವಯಂವರ ಸಂದರ್ಭದಲ್ಲಿನ ಸಂಘರ್ಷಗಳು

ದ್ರೌಪದಿಯ ಮನದ ಸಂಘರ್ಷ ಭಾವಗಳನ್ನು ಆಕೆಯು ವಧುವಾಗಿ ಸ್ವಯಂವರ ಮಂಟಪದಲ್ಲಿ ನಿಂತಿರುವ ಸಂದರ್ಭದಿಂದಲೆ ಮೊದಲುಗೊಂಡಂತೆ ಗಮನಿಸಬಹುದಾಗಿದೆ. ಸ್ವಯಂವರ ಮಂಟಪಕ್ಕೆ ಆಗಮಿಸುತ್ತಿರುವ ಆಕೆಯ ಮನದ ಭಾವ ಹಾಗೂ ಆ ಸಂದರ್ಭವನ್ನು ಪಂಪ ಹೀಗೆ ವಿವರಿಸಿದ್ದಾನೆ.

"ಒಡನೆ ನೆರೆದರಸುಮಕ್ಕಳ
ನಿಡುಗಣ್ಗಳ ಬಳಗಮೆಱಗೆ ತನ್ನಯ ಮೆಯ್ಯೊಳ್ ।
ನಡೆ ಬಳಸಿ ಪಲರುಮಂಬಂ
ತುಡೆ ನಡುವಿರ್ದೊಂದು ಪುಲ್ಲೆಯಿರ್ಪಂತಿರ್ದಳ್"[೬೬]

ಕೂಡಲೆ ಅಲ್ಲಿ ನೆರೆದಿದ್ದ ರಾಜಕುಮಾರರ ನೀಳವಾದ ಕಣ್ಣುಗಳ ಸಮೂಹವು ತನ್ನ ಶರೀರದ ಮೇಲೆ ಎರಗಿ ನಾಟಿಕೊಳ್ಳಲು, ಸುತ್ತಲೂ ಅನೇಕರು ಪ್ರಯೋಗ ಮಾಡಿದ ಬಾಣಗಳ ಮಧ್ಯೆ ಸಿಕ್ಕಿದ

ಹುಲ್ಲೆಯಂತೆ ದ್ರೌಪದಿ ತೋರಿದಳು ಎನ್ನುತ್ತಾನೆ ಕವಿ. ಇಲ್ಲಿ ಬಳಸಿರುವ 'ಪುಲ್ಲೆ' ಎಂಬ ಪದ ಗಮನಿಸುವಂತಹದ್ದು. ಈ ಪದವು ಸೌಂದರ್ಯ, ಭಯ ಹಾಗೂ ಲೈಂಗಿಕತೆಯನ್ನು ಸಂಕೇತಿಸುತ್ತದೆ.

ಈ ರೀತಿಯಾಗಿ ಆಕೆ ಸ್ವಯಂವರ ಮಂಟಪವನ್ನು ಪ್ರವೇಶಿಸಿದಳು. ನಂತರ ಯಾರೂ ಕೂಡ ಬಿಲ್ಲನ್ನೇರಿಸಲು ಶಕ್ತರಾಗದಾಗ ದ್ರುಪದನು ಈ ಜನದ ಗುಂಪಿನಲ್ಲಿರುವ ಯಾರು ಬೇಕಾದರೂ ಈ ಬಿಲ್ಲನ್ನೇರಿಸಬಹುದೆಂದು ತಿಳಿಸುತ್ತಾನೆ. ಆಗ ಬ್ರಾಹ್ಮಣ ವೇಷದಲ್ಲಿದ್ದ ಅರ್ಜುನನು ಬಿಲ್ಲನ್ನೇರಿಸುತ್ತಾನೆ. ಆ ಕ್ಷಣದಲ್ಲಿ ಅರ್ಜುನನನ್ನು ನೋಡಿದ ದ್ರೌಪದಿಯಲ್ಲಿ ಮೂಡಿದ ಭಾವಗಳನ್ನು ಕವಿ ಈ ರೀತಿಯಾಗಿ ಅಭಿವ್ಯಕ್ತಿಸಿದ್ದಾನೆ.

"ನಡೆ ಕಡೆಗಣ್ ಮನಂ ಬಯಸೆ ತಳ್ತಮರ್ದಪ್ಪಲೆ ತೋಳ್ಗಳಾಸೆಯೊಳ್
ತೊಡರ್ದಿರೆ ಪೊಣ್ಮೆ ಘರ್ಮಜಲಮುಣ್ಮೆ ಭಯಂ ಕಿಡೆ ನಾಣ್ ವಿಕಾರದೊಳ್ ।
ತೊಡರ್ದಿರೆ ಕೆಯ್ತುವುಮ್ಮಳಿಪ ಕನ್ನೆಗೆ ಸುಂದರಮಾಲೆ ಮಾಲೆಯಂ
ತಡೆಯದೆ ನೀಡೆ ಮಾಣದೆ ಗುಣಾರ್ಣವನಂ ಸತಿ ಮಾಲೆ ಸೂಡಿದಳ್"[೮೭]

ದ್ರೌಪದಿಯ ಕಡೆಗಣ್ಣು ಅರ್ಜುನನಲ್ಲಿ ನಾಟಿತು. ಮನಸ್ಸು ಅವನನ್ನು ಬಯಸಿತು. ಅವಳ ತೋಳುಗಳು ಆತನ ಗಾಢಾಲಿಂಗನವನ್ನು ಆಶಿಸಿದವು. ಬೆವರು ಹೆಚ್ಚುತ್ತ ಭಯವು ಉಂಟಾಯಿತು. ನಾಚಿಕೆ ಮಾಯವಾಯಿತು, ಅಂಗ ವಿಕಾರಗಳು ಶರೀರದಲ್ಲಿ ತಲೆದೋರಿದವು. ಸುಂದರಮಾಲೆ ಎಂಬುವಳು ಸ್ವಯಂವರ ಮಾಲೆಯನ್ನು ತಡಮಾಡದೆ ಅವಳ ಕೈಗೆ ನೀಡಿದಳು. ಸತಿ ಮಾಲೆಯನ್ನು ಗುಣಾರ್ಣವನಿಗೆ ಹಾಕಿದಳು. ತಾನು ಒಲಿದು ವಿವಾಹವಾಗಲಿರುವ ಗಂಡನ್ನು ನೋಡಿದ ಪ್ರತಿ ಹೆಣ್ಣಿನಲ್ಲಿಯೂ ಮೂಡುವಂತಹ ಭಾವನೆಗಳ ಸಂಘರ್ಷಗಳನ್ನು ಪಂಪ ಇಲ್ಲಿ ತಿಳಿಸಿದ್ದಾನೆ.

'ಕುಮಾರವ್ಯಾಸ ಭಾರತ'ದಲ್ಲಿ ದ್ರೌಪದಿಯ ಸ್ವಯಂವರ ಸಂದರ್ಭದಲ್ಲಿನ ಆಕೆಯ ಸಂಘರ್ಷದ ಭಾವಗಳನ್ನು ಕವಿ ಹೀಗೆ ವರ್ಣಿಸಿದ್ದಾನೆ. ದ್ರುಪದ ನಂದನನು (ದೃಷ್ಟದ್ಯುಮ್ನ) ಸ್ವಯಂವರ ಮಂಟಪಕ್ಕೆ ಬಂದ ದ್ರೌಪದಿಗೆ ಅಲ್ಲಿದ್ದವರನ್ನು ಪರಿಚಯ ಮಾಡಿಕೊಡುತ್ತ ಹೋಗುತ್ತಾನೆ. ಈ ರೀತಿಯಾಗಿ ಪರಿಚಯಿಸುವಾಗ ಕರ್ಣನನ್ನು ನೋಡಿದ ದ್ರೌಪದಿಯ ಮನದಲ್ಲಿ ಉಂಟಾದ ಸಂಘರ್ಷ ಗಮನಿಸತಕ್ಕದ್ದು. ಅದನ್ನು ಕವಿ ಹೀಗೆ ತಿಳಿಸಿದ್ದಾನೆ.

"ಭೂತಳದ ರವಿಯಂತೆ ಹೊಳೆಹೊಳೆ
ವಾತ ಕರ್ಣನು ತನುಜರೀತಂ
ಗೀತಗಳು ವೃಷಸೇನನಗ್ಗದ ಚಿತ್ರಸೇನಕರು
ಈತನಾಹನೆ ನೋಡೆನಲು ಭಾ
ವಾತಿಶಯ ಸಂಬಂಧ ಭಾವದೊ
ಳೀತನನು ನೋಡಿದಳು ತಿರುಹಿದಳಬಲೆ ಲೋಚನವ"[೮೮]

ಭೂತಳದ ರವಿಯಂತೆ ಹೊಳೆಯುವಾತನು ಕರ್ಣನು. ಮಕ್ಕಳಿವರು ವೃಷಸೇನ ಚಿತ್ರಸೇನಕರು. ಈತನಾಗಬಹುದೇ ನೋಡು ಎನ್ನಲು ದ್ರೌಪದಿಯು 'ಭಾವಾತಿಶಯ ಸಂಬಂಧ ಭಾವದಿಂದ ಈತನನ್ನು ನೋಡಿದಳು', 'ನೋಡಿ ಕಣ್ಣುಗಳನ್ನು ಅತ್ತ ತಿರುಗಿಸಿದಳು' ಎನ್ನುತ್ತಾನೆ ಕವಿ. ಇಲ್ಲಿ ಕುಮಾರವ್ಯಾಸನು ಅರ್ಜುನನಿಗೆ ಒಲಿಯುವ ಮೊದಲು ದ್ರೌಪದಿ ಕರ್ಣನನ್ನು ಇಷ್ಟಪಟ್ಟಿದ್ದಳೆ? ಎಂಬ ಅಂಶದ ಕಡೆ ಗಮನಹರಿಸುವಂತೆ ಮಾಡುತ್ತಾನೆ. ದ್ರೌಪದಿ ಕರ್ಣನನ್ನು ನೋಡಿದ ಸಂದರ್ಭದಲ್ಲಿ 'ಭಾವಾತಿಶಯ ಸಂಬಂಧ ಭಾವದೊಳೀತನನು ನೋಡಿದಳು' ಎಂಬ ಮಾತನ್ನು ಬಳಸಿದ್ದಾನೆ. ಇದರ ಅರ್ಥ ಏನು? ಎಂಬುದು ಗಮನಿಸುವಂತಹದ್ದು. ಅಂದರೆ ಇಲ್ಲಿ ಆಕೆ ಒಂದು ಕ್ಷಣ ಕರ್ಣನನ್ನು ಮನಸ್ಸಿನ ತೀವ್ರವಾದ ಭಾವನೆಗಳ ಹಿನ್ನೆಲೆಯಲ್ಲಿ ನೋಡಿರುವಂತೆ ಕಂಡುಬರುತ್ತದೆ. ಆತನನ್ನು ಇಷ್ಟಪಟ್ಟಂತೆ ಕಂಡುಬರುತ್ತದೆ.

ಮುಂದುವರಿದು ದೃಷ್ಟದ್ಯುಮ್ನನು ಕೃಷ್ಣನನ್ನು ತೋರಿಸಿ 'ಈತನಾಗಬಹುದೇ ನೋಡು' ಎಂದನು.

"ಎನಲು ಭಕುತಿಯ ಭಾವರಸದಲಿ
ನೆನೆದು ಹೊಂಪುಳಿವೋಗಿ ರೋಮಾಂ
ಚನದ ಮೈಯುಬ್ಬಿನಲಿ ತನು ಪುಳಕಾಂಬು ಪೂರದಲಿ
ಮನದೊಳಗೆ ವಂದಿಸಿದಳೆನಗೀ
ತನಲಿ ಗುರುಭಾವನೆಯ ಮತಿ ಸಂ
ಜನಿಸಿತೇನೆಂದರಿಯೆನೆಂದಳು ಕಮಲಮುಖಿ ನಗುತ"[59]

ಅಣ್ಣನ ಮಾತನ್ನು ಕೇಳಿ ದ್ರೌಪದಿ ಭಕ್ತಿಯ ಭಾವರಸದಲ್ಲಿ ಮುಳುಗಿದಳು. ರೋಮಾಂಚನದಿಂದ ಮೈಯುಬ್ಬಿದಳು; ಮನಸ್ಸಿನಲ್ಲಿಯೇ ಕೃಷ್ಣನಿಗೆ ವಂದಿಸಿದಳು. ನಂತರ ಅಣ್ಣನಿಗೆ ಈ ರೀತಿ ಹೇಳುತ್ತಾಳೆ. 'ನನಗೆ ಈತನಲ್ಲಿ ಗುರುಭಾವನೆಯ ಬುದ್ಧಿ ಹುಟ್ಟಿತು. ಏಕೆಂದು ನನಗೆ ತಿಳಿಯುತ್ತಿಲ್ಲ' ಎಂದಳು. ಆಕೆಯ ಮನದಲ್ಲಿ ಕೃಷ್ಣನನ್ನು ಕುರಿತು ಗುರುವಿನ ಭಾವ ಮೂಡಿರುವುದು ಕಂಡುಬರುತ್ತದೆ.

ನಂತರದಲ್ಲಿ ಯಾರೂ ಬಿಲ್ಲನ್ನು ಏರಿಸಲಾಗದೆ ಇದ್ದಾಗ ಅರ್ಜುನನು ವಿಪ್ರವೇಷ ತಾಳಿ ತಾನು ಬಿಲ್ಲನ್ನೇರಿಸಲು ಬಂದಾಗ ಅಲ್ಲಿ ನೆರೆದಿದ್ದವರೆಲ್ಲ ನಗುತ್ತ ಛೇಡಿಸಿದಾಗ ಆ ಮಾತುಗಳಿಗೆ "ತಲೆಗುತ್ತಿ ನಾಚಿದಳುಂಗುಟದೊಳೌಕುತ ಮಹೀತಳವ"[60] ಎನ್ನುತ್ತಾನೆ ಕವಿ. ಆಕೆ ನಾಚಿ ಉಂಗುಷ್ಠದಿಂದ ನೆಲವನ್ನೌಕುತ್ತ ತಲೆ ತಗ್ಗಿಸಿದಳು. ಇದು ಕವಿ ಕೊಡುವ ಅದ್ಭುತವಾದ ಹೋಲಿಕೆ. ಇದರಲ್ಲಿ ಆಕೆಯ ಮನದಲ್ಲಿ ನಡೆಯುತ್ತಿರುವ ಭಾವವ್ಯಾಪಾರಗಳ ತಾಕಲಾಟಗಳು ತಿಳಿಯುತ್ತದೆ. ಆಕೆಯ ಮನದ ಅಭಿಲಾಷೆಗಳನ್ನು ತಿಳಿಸಲು ಇದಕ್ಕಿಂತ ಹೆಚ್ಚಿನ ಹೋಲಿಕೆ ಇನ್ನೊಂದಿಲ್ಲ.

ಅರ್ಜುನನು ಬಿಲ್ಲಿನ ಎದೆಯನ್ನೇರಿಸಿದ ನಂತರ ದ್ರೌಪದಿ ಆತನಿಗೆ ಮಾಲೆಯನ್ನು ಹಾಕಲು ಬರುವ ಚಿತ್ರಣ ಹೀಗಿದೆ.

"ತೊಲ ತೊಲಗು ಮನ್ಮಥನ ಹೊಗರಿ
ಟ್ಟಲಗು ಬರುತಿದೆ ಸಾರು ಸಾರೆಂ
ದುಲಿದು ಕಂಚುಕಿ ನಿಕರ ಹೊಯ್ದುದು ಮುಂದೆ ಸಂದಣಿಯ
ನಳಿನಮುಖಿ ದಂಡಿಗೆಯೊಳೈತಂ
ದಿಳಿದಳೀತನ ಹೊರೆಯೊಳಾಗಳೆ
ಕಳಕಳದಲೊಳತೋಟಿ ಮಸಗಿತು ಹರುಷ ಲಜ್ಜೆಯಲಿ"[೯೧]

ದಂಡಿಗೆಯನ್ನಿಳಿದು ಬಂದು ಆತನ ಪಕ್ಕದಲ್ಲಿ ನಿಂತಳು. ಆ ಕ್ಷಣವೇ ಅವಳ ಮನಸ್ಸಿನಲ್ಲಿ ಹರ್ಷ ಲಜ್ಜೆಗಳ ಒಳತೋಟಿ ಮೊದಲಾಯಿತು. ಅಲ್ಲದೆ

"ಲಲಿತ ಮಧುರಾಪಾಂಗದಲಿ ಮು
ಕ್ಕುಳಿಸಿ ತಣಿಯವು ಕಂಗಳುಬ್ಬಿದ
ಪುಳಕ ಜಲದಲಿ ಮುಳುಗಿ ಮೂಡಿತು ಮೈ ನಿತಂಬಿನಿಯ
ತಳಿತ ಲಜ್ಜಾಭರಕೆ ಕುಸಿದ
ವ್ವಳಿಸಿತಂತಃಕರಣವಾಂಗಿಕ
ಲುಳಿತ ಸಾತ್ವಿಕ ಭಾವವವಗಡಿಸಿತ್ತು ಮಾನಿನಿಯ"[೯೨]

ಲಲಿತವಾದ ಮಧುರ ಭಾವಗಳಿಂದ ಅರ್ಜುನನನ್ನು ಎಷ್ಟು ನೋಡಿದರೂ ಕಣ್ಣುಗಳಿಗೆ ತೃಪ್ತಿಯಾಗಲಿಲ್ಲ. ಮನದಲ್ಲಿ ಪುಳಕ ಜಲವುಕ್ಕಿತು. ಮೂಡಿ ಬಂದ ಲಜ್ಜಾಭರಕೆ ಅಂತಃಕರಣವು ಕುಸಿಯಿತು. ಆಕೆಯಲ್ಲಿನ ಸಾತ್ವಿಕ ಭಾವವು ಅವಳನ್ನು ತಬ್ಬಿಬ್ಬು ಮಾಡಿತು. ಆಕೆಯ ಮನದಲ್ಲಿ ಆಗುತ್ತಿರುವ ಭಾವಗಳ ಘರ್ಷಣೆಯಿಂದಾಗಿ ತಾನೇನು ಮಾಡಬೇಕೆಂಬುದೇ ತಿಳಿಯದೆ ಒಂದು ಕ್ಷಣ ತಬ್ಬಿಬ್ಬಾದಳು. ಆ ಸ್ಥಿತಿಯಲ್ಲಿಯೆ

"ಧರಣಿಪತಿ ಕೇಳ್ ಬಹಳ ಲಜ್ಜಾ
ಭರದ ಭಯದಲಿ ಬೆಮರಿಡುತ ಕುಚ
ಭರದಿ ಮೇಲುದು ಜಾರೆ ಜೋಡಿಸಿ ನಿಮಿರಿ ನಡನಡುಗಿ
ತರುಣಿ ನಿಜತನು ಪರಿಮಳದಲುರೆ
ಹೊರೆದ ಹೂವಿನ ದಂಡೆಯನು ನಿಜ
ವರನ ಕೊರಳಲಿ ಹಾಯ್ಕಿದಳು ಜಯವೆನೆ ಸುರಸ್ತೋಮ"[೯೩]

ಲಜ್ಜಾಭಾವದ ಭರದ ಭಯದಲ್ಲಿಯೆ ಬೆಮರಿಡುತ್ತ, ಎದೆಯ ಅಲುಗಾಟದಲ್ಲಿ ಜಾರುವ ಮೇಲುದನ್ನು ಸರಿಮಾಡಿಕೊಳ್ಳುತ್ತ ನಡನಡುಗಿ ತರುಣಿ ಹೂವಿನ ದಂಡೆಯನ್ನು ಕೊರಳಲ್ಲಿ ಹಾಕಿದಳು.

ನಂತರ ದ್ರೌಪದಿಯ ಸಂಘರ್ಷಗಳಲ್ಲಿ ಪ್ರಮುಖವಾದ ಘಟನೆ ಕುಂತಿಗೆ ಅರ್ಜುನನು 'ಧರಣಿಯ ರಾಜರನ್ನೆಲ್ಲಾ ಸೋಲಿಸಿ ಸರ್ವಶ್ರೇಷ್ಠವಾದ ಮೌಲ್ಯಯುತವಾದ ಮೌಕ್ತಿಕವನ್ನು ತಂದಿದ್ದೇನೆ'

ಎಂದದ್ದಕ್ಕೆ 'ಒಳ್ಳೆಯದಾಯಿತು, ಐವರೂ ಕೂಡಿ ಭೋಗಿಸಿರಿ' ಎಂಬ ಮಾತು. ಇಲ್ಲಿ ಅರ್ಜುನನು ಮೌಲ್ಯಯುತವಾದ ವಸ್ತುವನ್ನು ಗೆದ್ದು ತಂದಿದ್ದೇನೆ ಎಂದು ಹೇಳುವುದಾದರೂ ಏಕೆ? ರಾಜರ ದೃಷ್ಟಿಯಲ್ಲಿ ಹೆಣ್ಣು ಮತ್ತು ವಸ್ತು ಒಂದೇ ಆಗಿತ್ತೇ? ಇದರಿಂದಾಗಿ ತಾಯಿಯ ಮಾತಿನಂತೆ ಪಾಂಡವರೈವರೂ ದ್ರೌಪದಿಯನ್ನು ಪತ್ನಿಯೆಂದು ಸ್ವೀಕರಿಸಬೇಕಾಗಿ ಬರುತ್ತದೆ. ಇದರ ಜೊತೆಗೆ ವ್ಯಾಸಮುನಿಯು ದ್ರೌಪದಿಯ ಪೂರ್ವಜನ್ಮದ ಕಥೆಯನ್ನು ಹೇಳುತ್ತಾನೆ. ಈಕೆ ಹಿಂದೆ 'ನಾರಾಯಣಿ'[೯೪] ಯೆಂಬ ಹೆಸರಿನಿಂದ ಕುಷ್ಠರೋಗದಿಂದ ಕೂಡಿದ ಮುನಿಯೊಬ್ಬನ ಹೆಂಡತಿಯಾಗಿದ್ದಳು. ಒಮ್ಮೆ ತನ್ನ ಗಂಡನನ್ನು ದಿವ್ಯರೂಪದಿಂದ ಕೂಡುವಂತೆ ಬೇಡಿ ಅದರಂತೆ ಕೂಡುತ್ತಾಳೆ. ಇಲ್ಲಿ ದಣಿಯದ ಆಸೆಯಿಂದಾಗಿ ಆಕೆ ಚಂದ್ರಶೇಖರನನ್ನು ಭಜಿಸಿದಳು. ಪ್ರತ್ಯಕ್ಷನಾದ ಶಿವ ವರವನ್ನು ಬೇಡಿಕೋ ಎಂದಾಗ ಆಕೆ 'ಹರಾ, ಪತಿಯನ್ನು ಕೊಡು ಪ್ರಭುವೆ' ಎಂದು ಐದು ಬಾರಿ ಕೇಳಿಕೊಂಡ ಕಾರಣವಾಗಿ ಶಿವನು 'ನಿನಗೆ ಐವರು ಪತಿಗಳಾಗುವರು' ಎಂದು ವರವನ್ನು ಕೊಟ್ಟನು. ಈ ಸಂದರ್ಭವನ್ನು ಕವಿ ಹೀಗೆ ತಿಳಿಸುತ್ತಾನೆ.

"ಆದಡೈವರು ಪತಿಗಳಹರು ತ
ಳೋದರಿಯೆ ನಿನಗೆನಲು ಬೆಚ್ಚಿದ
ಳೀ ದುರಿತ ತನಗೇಕೆನುತ ಸತಿ ಮುಚ್ಚಿದಳು ಕಿವಿಯ
ಆದಡಂಜದಿರಂಜದಿರು ವರ
ವೇದಬಾಹಿರವಲ್ಲ ಸತಿಯರೊ
ಳಾದಿ ಪಾತಿವ್ರತ್ಯ ನಿನಗೆಂದನು ಮುಖಧ್ವಂಸಿ"[೯೫]

ಶಿವನು ತಳೋದರೀ, ನಿನಗೆ ಐದು ಜನ ಪತಿಗಳಾಗುತ್ತಾರೆ ಎನ್ನಲು ಆ ಸತಿ ಬೆಚ್ಚಿದಳು. ಈ ದುರಿತ ನನಗೇಕೆ? ಎಂದು ಸತಿ ಕಿವಿಯನ್ನು ಮುಚ್ಚಿದಳು. ಇದನ್ನು ಕಂಡು ಮುಖಧ್ವಂಸಿಯಾದ ಶಿವನು ಅಂಜದಿರು, ನಾನು ಕೊಟ್ಟ ಈ ವರವು ವೇದ ಬಾಹಿರವಲ್ಲ. ಸತಿಯರಲ್ಲಿ ಪ್ರಥಮ ಪ್ರಾಶಸ್ತ್ಯ ಲಭಿಸುವುದು. ಆದಿಪಾತಿವ್ರತ್ಯ ಉಂಟಾಗುವುದು ಎಂದು ಹೇಳುತ್ತಾನೆ. ಇಲ್ಲಿ ಮುಖ್ಯವಾಗಿ ಗಮನಿಸುವಂತಹದ್ದು ಒಬ್ಬನಿಗಿಂತ ಹೆಚ್ಚು ಪತಿಗಳನ್ನು ಹೊಂದಲು ವೇದಗಳು ಅನುಮತಿ ನೀಡಿದ್ದವು ಎಂಬುದು. ಇದು ಸರಿಯೆನಿಸಿದರೂ ಸಹ ಹೆಣ್ಣೊಬ್ಬಳ ನೆಲೆಯಲ್ಲಿ ನಿಂತು ನೋಡಿದರೆ ಆ ಹೆಣ್ಣಿನ ಮನಸ್ಸಿನ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದು ತಿಳಿಯುತ್ತದೆ. ಏಕೆಂದರೆ ಹೆಣ್ಣೊಬ್ಬಳು ಐವರಿಗೆ ಪತ್ನಿಯಾಗಿ ಮಾನಸಿಕವಾಗಿ ಹಾಗೂ ದೈಹಿಕವಾಗಿ ಬದುಕನ್ನು ಸಾಗಿಸುವುದು ಅಷ್ಟು ಸುಲಭದ ಮಾತಲ್ಲ. ಇದು ಹೆಣ್ಣೊಬ್ಬಳ ಅಸ್ತಿತ್ವದ ಪ್ರಶ್ನೆ. ಹಿಂದಿನ ವೃತ್ತಾಂತ, ವೇದಗಳು ಏನನ್ನೇ ಹೇಳಿದರೂ ದಿಟ್ಟೆ ರಾಜಕುವರಿ ದ್ರೌಪದಿ ಪ್ರಶ್ನಿಸಲಿಲ್ಲವೇಕೆ? ಇಲ್ಲಿ ರಾಜಮಾತೆ, ರಾಜರ ನಿರ್ಧಾರಗಳೇ ಅಂತಿಮವಾಯಿತೆ? ಕವಿಯು ಸಹ ಐವರು ಪತಿಗಳನ್ನು ಪಡೆದುದಕ್ಕೆ ಕಾರಣಗಳನ್ನು ತಿಳಿಸಿದ್ದಾರೆಯೇ ಹೊರತು ಅವಳಲ್ಲುಂಟಾದ ಭಾವನೆಗಳ ಬಗ್ಗೆ ತಿಳಿಸಿಲ್ಲ.

೩.೩.೨.ಆ. ವಸ್ತ್ರಾಪಹರಣ ಸಂದರ್ಭದಲ್ಲಿನ ಸಂಘರ್ಷಗಳು

ದ್ಯೂತದ ನಂತರದ ವಸ್ತ್ರಾಪಹರಣ ಪ್ರಸಂಗ ದ್ರೌಪದಿಯ ಸಂಘರ್ಷಗಳ ಪ್ರಧಾನ ಘಟ್ಟ. ಪಂಪನ 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ದ್ರೌಪದಿಯ ವಸ್ತ್ರಾಪಹರಣದ ಪ್ರಸಂಗವಿಲ್ಲ. ಅಲ್ಲಿ ಆಕೆಯ ಮುಡಿಯನ್ನು ಹಿಡಿದು ಎಳೆದು ತಂದು ಸಭಾಮಧ್ಯದಲ್ಲಿ ಅಪಮಾನಗೊಳಿಸುವ ಪ್ರಸಂಗವಿದೆ. ಇದಕ್ಕೆ ಪಂಪನ ಮೇಲೆ ಪ್ರಭಾವ ಬೀರಿರುವ ಹಲವು ಅಂಶಗಳು ಕಾರಣವಾಗಿವೆ. ಆದರೆ ಕುಮಾರವ್ಯಾಸನಲ್ಲಿ ವಸ್ತ್ರಾಪಹರಣ ಪ್ರಸಂಗವಿದೆ. ದ್ರೌಪದಿಯ ಬಹುಮುಖ್ಯವಾದ ಸಂದಿಗ್ಧತೆಯ ಹಾಗೂ ಅಸಹಾಯಕತೆಯ ಸಂದರ್ಭವನ್ನು ಕುಮಾರವ್ಯಾಸ ಸುದೀರ್ಘವಾಗಿ ಚರ್ಚಿಸಿದ್ದಾನೆ.

ಪಂಪನಿಗೆ ಹೋಲಿಸಿದರೆ ಕುಮಾರವ್ಯಾಸ ದ್ರೌಪದಿಯ ಸಂಘರ್ಷಗಳನ್ನು ವಿವರಿಸುವಾಗ ದ್ರೌಪದಿಯ ಮೂಲಕ ಉಗ್ರವಾದ ಪ್ರತಿಭಟನೆ ಹಾಗೂ ಪ್ರತಿರೋಧವನ್ನೇ ವ್ಯಕ್ತಪಡಿಸಿದ್ದಾನೆ. ಪುರುಷ, ಪ್ರಭುತ್ವ, ಸಮಾಜ ಹಾಗೂ ಸಂಸ್ಕೃತಿಗಳನ್ನು ದ್ರೌಪದಿಯ ಮಾತುಗಳ ಮೂಲಕ ಕಟುವಾದ ವಿಮರ್ಶೆಯ ಒರೆಗೆ ಹಚ್ಚಿದ್ದಾನೆ. ಹಿಂದೆಯೆ ಚರ್ಚಿಸಿದಂತೆ ಪಂಪನಲ್ಲಿ ವಸ್ತ್ರಾಪಹರಣದ ಸನ್ನಿವೇಶವಿಲ್ಲ. ಧರ್ಮರಾಯನು ದುರ್ಯೋಧನನೊಡನೆ ಜೂಜಾಟವನ್ನು ಆಡಿ ಸಮಸ್ತವನ್ನೂ ಸೋಲುತ್ತಾನೆ. ನಂತರದಲ್ಲಿ ತನ್ನನ್ನೂ, ತಮ್ಮಂದಿರನ್ನೂ, ಕೊನೆಗೆ ದ್ರೌಪದಿಯನ್ನೂ ಪಣವಾಗಿಟ್ಟು ಸೋತು ಹನ್ನೆರಡು ವರ್ಷ ಅರಣ್ಯವಾಸ, ಒಂದು ವರ್ಷ ಅಜ್ಞಾತವಾಸದ ಕರಾರಿಗೂ ಒಳಗಾಗುತ್ತಾನೆ. ಈ ರೀತಿ ಎಲ್ಲವನ್ನೂ ಗೆದ್ದ ದುರ್ಯೋಧನನು ಗೆಲುವಿನ ಅಹಂ ಭಾವದಲ್ಲಿ ಗೊಡ್ಡಾಟ ಆಡುವ ಮನಸ್ಸಿನವನಾಗಿ ದ್ರೌಪದಿಯನ್ನು ಎಳೆದು ತರುವಂತೆ ಆಜ್ಞೆ ಮಾಡುತ್ತಾನೆ. ಆ ಸನ್ನಿವೇಶದ ವಿವರಗಳನ್ನು ಪಂಪ ಕವಿಯು ಈ ರೀತಿಯಾಗಿ ಕಟ್ಟಿಕೊಟ್ಟಿದ್ದಾನೆ.

> "ವ॥ಅಂತು ದುರ್ಯೋಧನನಜಾತಶತ್ರುವಿನ ಸರ್ವಸ್ವಮೆಲ್ಲಮಂ ಗೆಲ್ದು ಗೆಲ್ದ ಕಸವರಮೆಲ್ಲಂ ಬಂದುದು ಪಾಂಚಾಳರಾಜ ತನೂಜೆಯೊರ್ವಳ್ ಬಂದಳಿಲ್ಲಾಕೆಯಂ ತನ್ನಿಮೆಂದು ಯುಧಿಷ್ಠಿರಂ ಕೊಟ್ಟ ನನ್ನಿಯ ಬಲದೊಳ್ ತನಗೆ ಲಯಮಿಲ್ಲದುದನಜೆದು ಮೇಗಿಲ್ಲದ ಗೊಡ್ಡಾಟಮಾಡಲ್ ಬಗೆದು ಕರ್ಣನ ಲೆಂಕಂ ಪ್ರಾತಿಕಾಮಿಯೆಂಬನುಮಂ ತನ್ನ ತಮ್ಮಂ ದುಶ್ಯಾಸನನುಮಂ ಪೇಟ್ದೊಡವಂದಿರಾಗಳೆ ಬೀಡಿಂಗೆ ವರಿದು ರಜಸ್ವಲೆಯಾಗಿರ್ದೆಂ ಮುಟ್ಟಲಾಗದೆನೆಯುಮೊತ್ತಂ ಬದಿಂದೊಳಗಂ ಪೊಕ್ಕು ಪಾಂಚಾಳಿಯಂ ಕಣ್ಗಿಡೆ ಜಡಿದು ಮುಡಿಯಂ ಪಿಡಿದು ತನ್ಮಧ್ಯದಿಂ ಸುಯೋಧನನ ಸಭಾಮಧ್ಯಕ್ಕೆ ತಂದು"[೬]

ಆ ರೀತಿಯಾಗಿ ದುರ್ಯೋಧನನು ಯುಧಿಷ್ಠಿರನ ಸರ್ವಸ್ವವನ್ನೂ ಗೆದ್ದು, ಗೆದ್ದ ಎಲ್ಲ ವಸ್ತುಗಳೂ ಬಂದವು, ದ್ರೌಪದಿಯೊಬ್ಬಳು ಮಾತ್ರ ಬಂದಿಲ್ಲ. ಆಕೆಯನ್ನು ಕರೆತನ್ನಿ ಎಂದು ಧರ್ಮರಾಯನು ಕೊಟ್ಟ ಸತ್ಯವಾಕ್ಯದ ಬಲದಿಂದ ದುರ್ಯೋಧನನು ಗೊಡ್ಡಾಟವಾಡಲು ಬಯಸಿ ದುಶ್ಯಾಸನನನ್ನು ಹಾಗೂ ಕರ್ಣನ ಸೇವಕನಾದ ಪ್ರಾತಿಕಾಮಿಯೆಂಬನಿಗೆ ಆಜ್ಞೆ ಮಾಡಿದನು. ಅವರು ಆಗಲೇ ಹೋಗಿ ಅಂತಃಪುರದಲ್ಲಿದ್ದ ದ್ರೌಪದಿಯು ತಾನು 'ರಜಸ್ವಲೆಯಾಗಿದ್ದೇನೆ' ಆ ಕಾರಣವಾಗಿ 'ನನ್ನನ್ನು

ಮುಟ್ಟಕೂಡದು' ಎಂದು ಹೇಳಿದರೂ ಕೂಡ ಬಲಾತ್ಕಾರದಿಂದ ಒಳಗೆ ಪ್ರವೇಶಿಸಿ ದ್ರೌಪದಿಯನ್ನು ಭಯಗೊಳ್ಳುವಂತೆ ಗದರಿಸಿ ಅವಳ ತುರುಬನ್ನು ಹಿಡಿದು ಅರಮನೆಯ ಸಭಾಭವನದ ಮಧ್ಯಭಾಗಕ್ಕೆ ಎಳೆದು ತಂದನು. ಇಲ್ಲಿ ಪಂಪ ಬಳಸಿರುವ 'ರಜಸ್ವಲೆಯಾಗಿರ್ದೆಂ ಮುಟ್ಟಲಾಗದ್' ಎಂಬ ಧ್ವನಿಪೂರ್ಣವಾದ ಮಾತು ಗಮನಾರ್ಹವಾದುದು. ಈ ಮಾತಿನಲ್ಲಿ ದ್ರೌಪದಿಯು ಎದುರಿಸುತ್ತಿರುವ ದೈಹಿಕ ಸಂಘರ್ಷವನ್ನು ಕವಿ ನಮ್ಮ ಅರಿವಿಗೆ ತರಲು ಪ್ರಯತ್ನಿಸುತ್ತಿದ್ದಾನೆ. 'ರಜಸ್ವಲೆ' ಎಂದರೆ "ಮುಟ್ಟಾದ ಹೆಂಗಸು"[೬೭] ಎಂಬುದು. ನಮ್ಮ ಸಂಸ್ಕೃತಿಯಲ್ಲಿ ಮುಟ್ಟಾಗುವಿಕೆ ಕ್ರಿಯೆಯನ್ನು ಸೂತಕದ ಪರಿಕಲ್ಪನೆಯಡಿ ಪರಿಭಾವಿಸಲಾಗಿದೆ. ಅಂತಹ ಸ್ತ್ರೀಯರು ದೇವಾಲಯ, ಸಭಾಭವನ ಮೊದಲಾದ ಸ್ಥಳಗಳಿಗೆ ಪ್ರವೇಶಿಸುವುದು ನಿಷಿದ್ಧ. ಇದಕ್ಕಿಂತ ಮುಖ್ಯವಾದುದು ಆಕೆ ದೈಹಿಕವಾಗಿ ಎದುರಿಸುತ್ತಿರುವ 'ರಜಸ್ವಲೆ'ತನದ ನೋವು ಹಾಗೂ ಸಂಘರ್ಷಗಳು.

ಇಂತಹ ದೈಹಿಕ ಸಂಘರ್ಷದ ಸ್ಥಿತಿಯಲ್ಲಿರುವ ದ್ರೌಪದಿಯನ್ನು ಅವಳ ಸ್ಥಾನಮಾನಗಳನ್ನು ಪರಿಗಣಿಸದೆ ಹಾಗೂ ಆಕೆ ತನ್ನನ್ನು 'ಮುಟ್ಟಲಾಗದು' ಎಂದು ಹೇಳಿದರೂ ಆ ಮಾತುಗಳನ್ನು ಲಕ್ಷ್ಯಕ್ಕೆ ತಂದುಕೊಳ್ಳದೆ ಅವಳನ್ನು ಸಭಾಮಧ್ಯಕ್ಕೆ ಎಳೆದು ತರುತ್ತಾರೆ. ಸಾಲದ್ದು ಎಂಬಂತೆ ದುಶ್ಯಾಸನನು ಆಕೆಯನ್ನು ಹಲವು ರೀತಿಯಲ್ಲಿ ನಿಂದಿಸಿ, ಅವಳ ಉಟ್ಟ ಸೀರೆಯವರೆಗೂ ಕೈ ಹಾಕಿ ತನಗೆ ಸಾವು ಹತ್ತಿರವಾಗಿರಲು ಅವಳ ತುರುಬನ್ನು ಹಿಡಿದು ಸೆಳೆದನು. ಪರಸ್ತ್ರೀಯರಲ್ಲಿ ಅಸಭ್ಯವಾಗಿ ವರ್ತಿಸುವುದೇ ಹೇಯಕರ ಸಂಗತಿ. ಅದೂ ಅನೇಕ ಪೌರುಷವಂತರೂ, ಕುರುಕುಲಾಗ್ರಣಿಗಳು ತುಂಬಿದ ಸಭೆಯಲ್ಲಿ ಅಸಹಾಯಕ ಹೆಣ್ಣೊಬ್ಬಳನ್ನು ಹೀಗೆ ಹೀನಾಯವಾಗಿ ಅಪಮಾನಗೊಳಿಸುವಲ್ಲಿ ಕೌರವರ ದುಷ್ಟತೆಯ ಪರಮಾವಧಿಯನ್ನು ಕಾಣಬಹುದು.

ಅಲ್ಲದೆ ತಮ್ಮ ಕುಲದ ಸೊಸೆ, ಪಾಂಡವರ ಪಟ್ಟದರಸಿಯಾದ ಉನ್ನತ ಸ್ಥಾನದ ಹೆಣ್ಣೊಬ್ಬಳನ್ನು ತಮ್ಮ ರಾಜಸಭೆಯಲ್ಲೇ ಅವಮಾನಗೊಳಿಸುವಂತಹದ್ದು ನಿಜಕ್ಕೂ ಶೋಚನೀಯ ಸಂಗತಿ. ಇಡೀ ಕುರುಸಭೆಯಲ್ಲಿ ತಮ್ಮ ವಂಶದ ಮರ್ಯಾದೆಯನ್ನು ತಾವೇ ದುಸ್ಥಿತಿಗೆ ಎಳೆದರೇ? ದ್ರೌಪದಿಯಂತಹವಳ ಸ್ಥಿತಿಯೇ ಹೀಗಾದರೆ ಸಾಮಾನ್ಯ ಹೆಣ್ಣುಗಳ ಸ್ಥಿತಿ ಏನು? ಎಂಬುದು ಪರಾಮರ್ಶಿಸತಕ್ಕ ವಿಚಾರ. ಇಲ್ಲಿ ದ್ರೌಪದಿಯ ಮಾನಾಪಮಾನಗಳಿಗಿಂತ ಧರ್ಮರಾಯ ಮೊದಲಾದವರಿಗೆ ತಾನು ಕೊಟ್ಟ ಮಾತು, ಸತ್ಯ ಮುಖ್ಯವಾಗಿ ನಿಲ್ಲುತ್ತದೆ. ಅದಕ್ಕಾಗಿಯೆ ಎಲ್ಲರೂ ಒಳಗೊಳಗೆ ಕುದಿಯುತ್ತ ಸುಮ್ಮನಿದ್ದರು. ಆದರೆ ದ್ರೌಪದಿ ಆ ಅಪಮಾನಗಳಿಗೆ ಪ್ರತಿಯಾಗಿ ತನ್ನ ಪ್ರತಿಜ್ಞೆಯನ್ನು ಮಾಡುತ್ತಾಳೆ.

> "ಆಗಳ್ ದ್ರೌಪದಿ ತನ್ನ ಕೇಶಪಾಶಮಂ ದುಶ್ಯಾಸನಂ ಪಿಡಿದು ತೆಗೆದನೆಂಬ ಸಿಗ್ಗಗ್ಗಳಂ
> ಪೆರ್ಚೆ ಸಭೆಯೊಳಿಂತೆಂದಳ್"[೬೮]

ಆ ಸಂದರ್ಭದಲ್ಲಿ ದುಶ್ಯಾಸನನು ತನ್ನ ಕೇಶಪಾಶವನ್ನು ಹಿಡಿದು ಸೆಳೆದನೆಂಬ ನಾಚಿಕೆಯು ವಿಶೇಷವಾಗಿ ಹೆಚ್ಚಿದ ಕಾರಣವಾಗಿ ದ್ರೌಪದಿಯು ಸಭೆಯಲ್ಲಿ ಈ ರೀತಿಯಾಗಿ ಪ್ರತಿಜ್ಞೆಗೈಯ್ಯುತ್ತಾಳೆ. ಇಲ್ಲಿ ಪಂಪನು ಬಳಸಿರುವ 'ಕೇಶಪಾಶಮಂ' ಎಂಬ ಪದ ಮುಂದೆ ತನ್ನ ಕೇಶದ ಕಾರಣವಾಗಿ

ದುಶ್ಶ್ಯಾಸನನಿಗೆ ಒದಗುವಂತಹ 'ಪಾಶ' (ಹಗ್ಗ, ನೇಣು, ಬಂಧನ)[೯೯] ವನ್ನು ಕುರಿತು ದ್ರೌಪದಿ ತನ್ನ ಕೋಪವನ್ನು ಪ್ರಕಟಪಡಿಸುವುದು ಕಂಡುಬರುತ್ತದೆ.

"ಮುಡಿಯಂ ಪಿಡಿದೆಳೆದವನಂ
ಮಡಿಯಿಸಿ ಮತ್ತವನ ಕರುಳ ಪಿಣಿಲಿಂದೆನ್ನಂ ।
ಮುಡಿಯಿಸುವಿನೆಗಂ ಮುಡಿಯಂ
ಮುಡಿಯೆಂ ಗಡ ಕೇಳಿಮಿಾಗಳಾನ್ ನುಡಿ ನುಡಿದೆಂ"[೧೦೦]

ದ್ರೌಪದಿ ಇಲ್ಲಿ ಅತ್ಯಂತ ಕೋಪಾವಿಷ್ಟಳಾಗಿ ನುಡಿಯುತ್ತಾಳೆ. ಸಭಾಮಧ್ಯದಲ್ಲಿ ತನ್ನ ಮುಡಿಯನ್ನು ಹಿಡಿದು ಎಳೆದು ಅಪಮಾನಗೊಳಿಸಿದವನನ್ನು ಕೊಂದು, ಅವನ ಕರುಳಿನ ಪಿಣಿಲಿಂದ (ಗುಂಪು) ನನ್ನ ಮುಡಿಯನ್ನು ಮುಡಿಯಿಸುವವರೆಗೂ ಆ ಮುಡಿಯನ್ನು ಪುನಃ ಮುಡಿಯುವುದಿಲ್ಲ. ಕೇಳಿ, ನೀವೆಲ್ಲರೂ ಕೇಳಿ ನಾನು ಇಂದು ಪ್ರತಿಜ್ಞೆಯನ್ನು ಮಾಡುತ್ತಿದ್ದೇನೆ ಎನ್ನುತ್ತಾಳೆ. ಅಂದರೆ ಇಲ್ಲಿ ಆತನ ಕರುಳುಗಳನ್ನು ಹೂವಿನ ರೀತಿ ಮುಡಿಯುವವರೆಗೂ ತನ್ನ ತಲೆಯಲ್ಲಿ ಏನನ್ನೂ ಧರಿಸುವುದಿಲ್ಲ ಎಂಬಂತಹ ಕಠಿಣ ನಿರ್ಧಾರವನ್ನು ದ್ರೌಪದಿ ತಳೆಯುತ್ತಾಳೆ. ಈ ಮಾತುಗಳಲ್ಲಿ ಅವಳ ನೋವು ಮಡುಗಟ್ಟಿರುವುದು ತಿಳಿಯುತ್ತದೆ. ಅಲ್ಲದೆ ಆ ಘಟನೆಯಿಂದಾಗಿ ಆಕೆಯ ಮನಸ್ಸು ಇಷ್ಟು ಕಠಿಣವಾದ ನಿರ್ಧಾರಗಳಿಗೆ ಬರಲು ಎಷ್ಟು ದುಃಖಪಟ್ಟಿದೆ ಎಂಬುದು ನಮಗೆ ಮನಗಾಣುತ್ತದೆ.

"ಪಂಪನು ಕೃಷ್ಣನನ್ನು ಉಪೇಕ್ಷೆ ಮಾಡಿದಷ್ಟು ಸುಲಭವಾಗಿ ಕೃಷ್ಣೆಯನ್ನು ಉಪೇಕ್ಷೆ ಮಾಡಲು ಸಾಧ್ಯವಾಗಿಲ್ಲ. ಅವಳು ಕೇವಲ ಕಾಲ್ಪನಿಕ ಶಕ್ತಿಯಲ್ಲ. ಜೀವಂತ ವ್ಯಕ್ತಿ. ಈ ವ್ಯಕ್ತಿಯ ಶಕ್ತಿ ಮಾತ್ರ ಸರ್ವವ್ಯಾಪ್ತಿ, ಮಹಾಭಾರತಕ್ಕೆ ಆದಿ, ಪಂಪನ ದೃಷ್ಟಿಯಲ್ಲಿ ಸುಭದ್ರೆ ಪ್ರಿಯಗಳ್ಳನ ವಿಲಾಸವನಿತೆ; ದ್ರೌಪದಿ ವಿಕ್ರಮಾರ್ಜುನನ ವೀರವನಿತೆ; ಕ್ಷಾತ್ರ ಧರ್ಮಪತ್ನಿ"[೧೦೧] ಎಂಬ ಮಾತುಗಳಲ್ಲಿ ಪಂಪನು ದ್ರೌಪದಿಯ ಮೂಲಕ ಆ ಕಾಲದ ಸಮಾಜವನ್ನು ನಮಗೆ ದರ್ಶಿಸುತ್ತಿರುವ ವಿಚಾರಗಳು ತಿಳಿಯುತ್ತವೆ. ಅಲ್ಲದೆ ದ್ರೌಪದಿಯ ಕೋಪ, ತಾಪ, ಛಲ, ಆಕೆಯ ಅಸಾಧಾರಣವಾದ ದೃಢ ಮನಸ್ಥಿತಿಯನ್ನು ತಿಳಿಸುತ್ತದೆ.

ಜೊತೆಗೆ "ಮಹಾಭಾರತದಲ್ಲಿ ಚಲ ಎನ್ನುವುದು ಯಾರಿಗಾದರೂ ಇದ್ದರೆ ಅದು ದ್ರೌಪದಿಗೆ ಮೊದಲು"[೧೦೨] ಎಂಬ ಅಭಿಪ್ರಾಯ ದ್ರೌಪದಿಯ ವ್ಯಕ್ತಿತ್ವವನ್ನು ಸಮರ್ಥವಾಗಿ ನಿರೂಪಿಸುತ್ತದೆ. ಏಕೆಂದರೆ ತುಂಬಿದ ಸಭೆಯಲ್ಲಿ ತನಗಾದ ಅವಮಾನದಿಂದ ಕ್ರೋಧಗೊಂಡ ದ್ರೌಪದಿಯ ಸಿಟ್ಟು ಅಂತಹ ತೀವ್ರ ಸ್ವರೂಪದ ಛಲಗಳು ರೂಪುಗೊಳ್ಳಲು ಆಕೆಗೆ ಪ್ರೇರಣೆಕೊಡುತ್ತದೆ ಎಂಬ ನೆಲೆಯಲ್ಲಿ ಸಿ.ವೀರಣ್ಣನವರ ವಿಚಾರ ಸರಣಿಯನ್ನು ಒಪ್ಪಬಹುದಾಗಿದೆ.

ನಂತರ ಅರಣ್ಯವಾಸದ ಸಮಯದಲ್ಲಿ ದುರ್ಯೋಧನನ ಮೈದುನನೂ ಸಿಂಧುದೇಶದ ಅಧಿಪತಿಯೂ ಆದ ಸೈಂಧವನು ಪಾಂಡವರನ್ನು ಭೇದಿಸಲೆಂದು ಬಂದು ಪಾಂಡವರು ಬೇಟೆಗೆ

ಹೋಗಿರುವ ಸಮಯವನ್ನೇ ನೋಡಿ ದ್ರೌಪದಿಯನ್ನು ಅಪಹರಿಸಿಕೊಂಡು ಹೋಗುತ್ತಾನೆ. ಭೀಮಾರ್ಜುನರು ಸೈಂಧವನನ್ನು ಕೋಡಗಗಟ್ಟು ಗಟ್ಟಿ ದ್ರೌಪದಿಯನ್ನು ಬಿಡಿಸಿಕೊಂಡು ಬರುತ್ತಾರೆ.

ದ್ಯೂತದ ಪ್ರಸಂಗ ಹಾಗೂ ದ್ರೌಪದಿಯ ವಸ್ತ್ರಾಪಹರಣದ ವಿವರಗಳನ್ನು ಕುಮಾರವ್ಯಾಸನು ದೀರ್ಘವಾಗಿ ವರ್ಣಿಸಿದ್ದಾನೆ. ಈ ಭಾಗವು ದ್ರೌಪದಿಯ ಮನದಲ್ಲಿ ಮೂಡುವ ಭಯ, ಆತಂಕ, ತಲ್ಲಣ, ಅಸಹಾಯಕತೆ, ರೋಷ ಮೊದಲಾದ ಭಾವಗಳು ಪ್ರಕಟವಾಗುವ ಸಂದರ್ಭವಾಗಿದೆ. ಅಲ್ಲದೆ ಇಲ್ಲಿನ ದ್ರೌಪದಿಯ ಸಂಘರ್ಷಗಳು ಆರಂಭದಲ್ಲಿ ವೈಯಕ್ತಿಕ ನೆಲೆಯಲ್ಲಿರುವಂತೆ ಗೋಚರಿಸಿದರೂ ನಂತರದಲ್ಲಿ ಅವು ಸಾಮೂಹಿಕ ಸಂಘರ್ಷದ ನೆಲೆಯನ್ನು ಪಡೆಯುತ್ತವೆ. ಪ್ರತಿ ಹೆಣ್ಣಿನ ನೋವು ಕೂಡ ಆಗುತ್ತವೆ. ಈ ಹಿನ್ನೆಲೆಯಲ್ಲಿ ಈ ಭಾಗವು ಬಹಳ ಮಹತ್ವವಾದುದು. ಇಲ್ಲಿ ಕುಮಾರವ್ಯಾಸ ಪಂಪನನ್ನು ಮೀರಿ ನಿಲ್ಲುವುದು ಕಂಡುಬರುತ್ತದೆ. ಕೃಷ್ಣನ ಮಹಿಮೆಯನ್ನು ಹೇಳುವುದು ಮುಖ್ಯ ಉದ್ದೇಶವಾಗಿದ್ದರೂ ಸಹ ಅದರ ಜೊತೆಗೆಯೇ ಸಮಕಾಲೀನ ಸಮಾಜದಲ್ಲಿ ಸ್ತ್ರೀಯರ ಮೇಲೆ ನಡೆಯುವ ಶೋಷಣೆಯನ್ನು ಹಾಗೂ ಅದರಿಂದ ಒದಗುವ ಅನರ್ಥಗಳ ದುಷ್ಪರಿಣಾಮಗಳನ್ನು ಕವಿ ಏಕಕಾಲದಲ್ಲಿ ಕಟ್ಟಿಕೊಡುತ್ತಾನೆ. ಈ ಹಿನ್ನೆಲೆಯಲ್ಲಿ ಈ ಸಂದರ್ಭವನ್ನು ದ್ರೌಪದಿಯು ಪ್ರಭುತ್ವ ಪುರುಷ ಹಾಗೂ ಸಮಾಜದೊಂದಿಗೆ ನಡೆಸುವ ಸಂಘರ್ಷದ ಭಾಗವಾಗಿಯೂ ಚರ್ಚಿಸಲಾಗಿದೆ.

"ಮಹಾಭಾರತದ ವೀರರಮಣಿಯರಲ್ಲಿ ದ್ರೌಪದಿ ಶ್ರೇಷ್ಠಳು. ಅಸಾಮಾನ್ಯ ಸ್ತ್ರೀಯಾದ ಅವಳು ಅಸಾಮಾನ್ಯ ಪರಿಸ್ಥಿತಿಗಳನ್ನು ತೇಜಸ್ವಿನಿಯಾಗಿ ಇದಿರಿಸಿದಳು. ಅವಳ ಸ್ವಾಭಿಮಾನ, ಕಷ್ಟ ಸಹಿಷ್ಣುತೆ, ಕರ್ತವ್ಯ ಜಾಗ್ರತಿ, ಸೇಡಿನ ಬುದ್ಧಿ ಅಪೂರ್ವವಾದವು"[೧೦೩] ಎಂಬ ಮಾತುಗಳು ದ್ರೌಪದಿ ಅನುಭವಿಸಿದ ಮಾನಸಿಕ ಯಾತನೆಗಳ ಕ್ಲಿಷ್ಟ ಸಂದರ್ಭಗಳನ್ನು ತಿಳಿಸಿಕೊಡುವ ಜೊತೆಗೆ ಅವೆಲ್ಲವುಗಳನ್ನೂ ಧೈರ್ಯದಿಂದ ಎದುರಿಸಿದ ಆಕೆಯ ಸದೃಢ ವ್ಯಕ್ತಿತ್ವವನ್ನು ಮನಗಾಣಿಸುತ್ತವೆ.

ಧರ್ಮರಾಯನು ಜೂಜಿನಲ್ಲಿ ದ್ರೌಪದಿಯಾದಿಯಾಗಿ ಎಲ್ಲವನ್ನೂ ಸೋತ ನಂತರ ದುರ್ಯೋಧನನು ತೊತ್ತಾಗಿರುವ ದ್ರೌಪದಿಯನ್ನು ಎಳೆದು ತರುವಂತೆ ಪ್ರಾತಿಕಾಮಿಕನಿಗೆ ಅಪ್ಪಣೆ ಮಾಡುತ್ತಾನೆ. ಅದರಂತೆ ದ್ರೌಪದಿಯ ಮಂದಿರಕ್ಕೆ ಬಂದ ಪ್ರಾತಿಕಾಮಿಕ ಜೂಜಿನಲ್ಲಿ ನಡೆದ ಸಂಗತಿಗಳನ್ನು ಅರುಹುತ್ತಾನೆ. ಆಕೆ ದ್ಯೂತದಲ್ಲಿ ಮೊದಲು ಏನನ್ನೊಡ್ಡಿದನು? ಏನನ್ನು ಸೋತನು? ಎಂಬ ವಿವರಗಳನ್ನು ಕೇಳಿ ತಿಳಿದುಕೊಳ್ಳುತ್ತಾಳೆ. ಧರ್ಮರಾಯ ಮೊದಲು ತನ್ನನ್ನು ಸೋತು ಬಳಿಕ ನನ್ನನ್ನು ಸೋತರೆ ಅದು ಸಲ್ಲುತ್ತದೆಯೆ? ವಿಮಲ ಜ್ಞಾನವಂತರಿದ್ದಾರೆ. ಅವರು ನನ್ನ ಪ್ರಶ್ನೆಗೆ ಉತ್ತರಿಸಲಿ. ನನಗೆ ಸಮಾಧಾನವಾಗುವಂತೆ ಉತ್ತರಿಸಿದರೆ ನಾನೇ ಬರುತ್ತೇನೆ ಹೋಗು ಎಂದು ಆತನನ್ನು ಕಳುಹಿಸುತ್ತಾಳೆ. ಇದನ್ನು ಕೇಳಿದ ದುರ್ಯೋಧನ ಕೋಪಾವಿಷ್ಟನಾಗಿ ದುಶ್ಯಾಸನನಿಗೆ ಆಕೆಯನ್ನು ಹಿಡಿದೆಳೆದುಕೊಂಡು ಬರುವಂತೆ ಆಜ್ಞಾಪಿಸುತ್ತಾನೆ. ಬಂದಂತಹ ದುಶ್ಯಾಸನ ಅತ್ಯಂತ ಧೂರ್ತತನದಿಂದ ವರ್ತಿಸುತ್ತಾನೆ. ಬಾಗಿಲು ಕಾವಲುಗಾರರನ್ನು ಕಠಾರಿಯಿಂದ ತಿವಿದನು. ದ್ರೌಪದಿಯ ಎದುರಿಗೆ ನಿಂತು 'ಎಲೆಗೇ, ಮೊದಲು ನಿನಗೆ ಈ ಗರುವತನ ಸಲ್ಲುತ್ತಿತ್ತು. ಇಂದು ಈ ಕುರುರಾಯ

ಭವನದಲ್ಲಿ ಸಲ್ಲದು. ನಮ್ಮ ತೊತ್ತುಗಳ ಮುಂದೆ ಮೆರೆಯುವಂತೆ ನಡೆ' ಎಂದು ಜರೆದು ನುಡಿಯುತ್ತಾನೆ. ಅದಕ್ಕೆ ದ್ರೌಪದಿ ಕೊಡುವ ಉತ್ತರ ಹೀಗಿದೆ.

"ಜನಪನನುಜನು ನೀನೆನಗೆ ಮೈ
ದುನನಲೇ ತಪ್ಪೇನು ಯಮ ನಂ
ದನನು ಸೋಲಲಿ ನನ್ನ ಪ್ರಶ್ನೆಗೆ ಕೊಡಲಿ ಮರುಮಾತ
ಅನುಜಕೇಳ್ಳೆ ಪುಷ್ಪವತಿ ತಾ
ನೆನಗೆ ರಾಜಸಭಾ ಪ್ರವೇಶವ
ದನುಚಿತವಲೇ ಹೇಳೆನಲು ಖಳರಾಯ ಖತಿಗೊಂಡ"[೧೦೪]

ಮಹಾರಾಜನ ತಮ್ಮ ನೀನು. ನೀನು ನನಗೆ ಮೈದುನನಾಗಬೇಕು. ತಪ್ಪೇನು? ಧರ್ಮರಾಯನು ಸೋಲಲಿ. ನನ್ನ ಪ್ರಶ್ನೆಗೆ ಮರುಮಾತನ್ನು ಕೊಡಲಿ. ಅನುಜಾ (ತಮ್ಮ) ಕೇಳು ನಾನು ಪುಷ್ಪವತಿಯಾಗಿದ್ದೇನೆ. ಆ ಕಾರಣವಾಗಿ ರಾಜಸಭೆಯನ್ನು ಪ್ರವೇಶಿಸುವುದು ನನಗೆ ಅನುಚಿತವಲ್ಲವೇ? ಹೇಳು ಎನ್ನುತ್ತಾಳೆ. ದ್ರೌಪದಿ ದುಶ್ಯಾಸನನನ್ನು ಮೃದು ಹಾಗೂ ಆತ್ಮೀಯವಾದ ನುಡಿಗಳಲ್ಲಿ ಮಾತನಾಡಿಸುತ್ತಾಳೆ. ಅಲ್ಲದೆ ತಾನು 'ಪುಷ್ಪವತಿಯಾಗಿದ್ದೇನೆ' ಆ ಕಾರಣವಾಗಿ ನನಗೆ ರಾಜಸಭೆ ಪ್ರವೇಶ ನಿಷಿದ್ಧ ಎಂಬುದನ್ನೂ ಸ್ಪಷ್ಟಪಡಿಸುತ್ತಾಳೆ.

ಈ ಮಾತುಗಳಿಂದ ಕೋಪಗೊಂಡ ದುಶ್ಯಾಸನ ಎಲ್ಲಿಯದು ದುಷ್ಟ ಪ್ರಶ್ನೆ? "ನೀ ಪುಷ್ಪವತಿಯಾಗಲ್ಲಿ ಫಲವತಿಯಾಗು ನಡೆ ಕುರುರಾಯ ಭವನದಲಿ"[೧೦೫] ಎಂದು ಅತ್ಯಂತ ಕೀಳು ನುಡಿಗಳನ್ನು ನುಡಿಯುತ್ತ ಅವಳ ಸಿರಿಮುಡಿಗೆ ಕೈ ಹಾಕಿದನು. ಅವಳನ್ನು ಮುಡಿ ಹಿಡಿದೆಳೆದು ತರುಬಿಕೊಂಡು ರಾಜಸಭೆಗೆ ಕರೆತಂದನು.

ದುರ್ಯೋಧನನು ತಮ್ಮನ ಕೈಯಿಂದ ದ್ರೌಪದಿಯನ್ನು ಬಿಡಿಸಿ 'ನೆತ್ತದಲ್ಲಿ ನಿನ್ನನ್ನೊಡ್ಡಿ ಸೋತನು ನೃಪೋತ್ತಮನು. ಒಡ್ಡಿ ಪೂರ್ತಿಯಾಗಿ ಮಾರಿಬಿಟ್ಟನು. ಈಗ ಅತ್ತರೇನು ಪ್ರಯೋಜನ? ಎಲೆಗೇ, ತೊತ್ತಿರ ಹಿಂಡಿನಲ್ಲಿ ಹೋಗಿ ಸೇರಿಕೋ' ಎನ್ನುತ್ತಾನೆ. ಇಲ್ಲಿ ದುರ್ಯೋಧನ ಹಾಗೂ ದುಶ್ಯಾಸನ ಬಳಸುವ 'ಎಲೆಗೇ' ಎಂಬ ಪದ ಗಮನಿಸತಕ್ಕದ್ದು.

ಆಗ ದ್ರೌಪದಿ ಸಭೆಯನ್ನು ಕುರಿತು ಈ ರೀತಿ ನುಡಿಯುತ್ತಾಳೆ.

"ಲಲಿತ ಬುದ್ಧಿಗಳೀಗ ನೋಡಿರಿ
ಲಲನೆಯನು ಸತಿ ದಿಟ್ಟೆಯೆನ್ನದಿ
ರೆಲೆ ಸುಯೋಧನ ರಾಜಸಭೆಯಿದು ದೋಷರಹಿತವಲೆ
ಗೆಲವಿದೆಂತುಟೊ ತನ್ನ ಸೋಲಿದು
ಬಳಿಕ ಸೋತರೆ ಧರ್ಮಗತಿಯನು
ತಿಳಿದು ಹೇಳಲಿ ತತ್ಸಭಾಸದರೆಂದಳಿಂದುಮುಖಿ"[೧೦೬]

ಕೋಮಲವಾದ ಮನಸ್ಸು ಹಾಗೂ ಅರಿವನ್ನು ಹೊಂದಿರುವ ಹಿರಿಯರೆ ಈಗ ನೋಡಿರಿ, ಲಲನೆಯನು. ಈ ಹೆಂಗಸು ದಿಟ್ಟೆ ಎನ್ನಬೇಡಿ. ಎಲೆ ದುರ್ಯೋಧನಾ ಇದು ರಾಜಸಭೆ, ಇಲ್ಲಿ ಯಾವುದೇ ದೋಷಗಳಿಲ್ಲ. ತನ್ನನ್ನು ಮೊದಲು ಸೋತು ಬಳಿಕ ನನ್ನನ್ನು ಸೋತರೆ? ಅದು ಹೇಗೆ ಗೆಲುವಾಗುತ್ತದೆ. ಈ ಸಭೆಯಲ್ಲಿರುವವರು ಧರ್ಮಗತಿಯನು ತಿಳಿದು ಹೇಳಲಿ ಎನ್ನುತ್ತಾಳೆ. ಇಲ್ಲಿ ದ್ರೌಪದಿ ಪ್ರಭುತ್ವದ ಸಂಕೇತವಾದ ದುರ್ಯೋಧನ ಹಾಗೂ ಅದರ ಪ್ರತಿನಿಧಿಗಳೆಂಬಂತಿದ್ದ ಸಭಾಸದರನ್ನು ನೇರವಾಗಿ ಪ್ರಶ್ನಿಸುತ್ತಾಳೆ. ವ್ಯಕ್ತಿ ಮೊದಲು ತಾನು ಸೋತ ನಂತರ ಮತ್ತೊಬ್ಬರನ್ನು ಪಣವಾಗಿ ಇಡಲು ಆತನು ಅರ್ಹನೆ? ಅಥವಾ ಆತನಿಗೆ ಸ್ವಾತಂತ್ರ್ಯ ಇದೆಯೇ? ಅಥವಾ ಆ ರೀತಿ ಮತ್ತೊಬ್ಬರನ್ನು ಪಣವಾಗಿ ಇಡಬಹುದೇ? ಎಂಬಂತಹ ವಿಚಾರಗಳನ್ನು ಧರ್ಮ ರೀತಿಯಲ್ಲಿ ಪರಾಮರ್ಶಿಸಿ ತಿಳಿಸಬೇಕೆಂದು ಆಕೆ ಕೇಳಿಕೊಳ್ಳುತ್ತಾಳೆ. ಮುಂದುವರೆದು

> "ಹಿರಿಯರಿಲ್ಲದ ಸಭೆ ಮನುಷ್ಯರ
> ನೆರವಿಯದು ಸಭೆಯಲ್ಲ ಮೂರ್ಖರು
> ಹಿರಿಯರಲ್ಲ ಯಥಾರ್ಥ ಭಾಷಣ ಭೀತಚೇತನರು
> ಹಿರಿಯರಿದೆ ಸಾಮಾಜಿಕರು ಸ
> ಚ್ಚರಿತರಿದೆಲಾ ಸ್ತ್ರೀಮತವನು
> ತ್ತರಿಸಲಾಗದೆ ಧರ್ಮಶಾಸ್ತ್ರದೊಳೆಂದಳಿಂದುಮುಖಿ"[೧೦೭]

ದ್ರೌಪದಿ ಹೇಳುವ ಈ ಪದ್ಯದಲ್ಲಿನ ಮಾತುಗಳು ಬಹು ಚರ್ಚಿತವಾದವು. ಇಲ್ಲಿ ಆಕೆಯು ಇಡೀ ಪ್ರಭುತ್ವ, ವ್ಯವಸ್ಥೆ ಹಾಗೂ ಧರ್ಮದ ನೆಲೆಗಟ್ಟುಗಳನ್ನು ಕುರಿತು ನೇರವಾಗಿ ಟೀಕಿಸುತ್ತಾಳೆ. ಎಲ್ಲಕ್ಕಿಂತ ಮುಖ್ಯವಾಗಿ 'ಸ್ತ್ರೀಮತವನುತ್ತರಿಸಲಾಗದೆ ಧರ್ಮಶಾಸ್ತ್ರದೊಳ್' ಎಂಬ ಮಾತು ಹೆಚ್ಚು ಚರ್ಚೆಗೆ ಗ್ರಾಹ್ಯವಾದುದು. ಹಿರಿಯರಿಲ್ಲದ ಸಭೆ ಅದು ಕೇವಲ ಮನುಷ್ಯರ ಗುಂಪು. ಅಂತಹ ಸಮೂಹ ಸಭೆಯಲ್ಲ. ಸತ್ಯವನ್ನು ನುಡಿಯಲು ಹೆದರಿ ಹಿಂಜರಿಯುವಂತಹ ಮೂರ್ಖರು ಹಿರಿಯರಲ್ಲ. ಈ ಸಭೆಯಲ್ಲಿ ಬಲ್ಲಂತಹ ಹಿರಿಯರಿದ್ದೀರಿ, ಸಚ್ಚರಿತರಾದ ಸಾಮಾಜಿಕರಿದ್ದೀರಿ, ಹೆಂಗಸು ಕೇಳಿದ ಪ್ರಶ್ನೆಗೆ ಧರ್ಮಶಾಸ್ತ್ರಬದ್ಧವಾಗಿ ಉತ್ತರವನ್ನು ಹೇಳಲಾಗದೆ? ಎಂದು ಪ್ರಶ್ನಿಸುತ್ತಾಳೆ. ಇಲ್ಲಿ ದ್ರೌಪದಿಯ ಈ ಪ್ರಶ್ನೆ ಬಹಳ ಮಹತ್ವವಾದುದು. ಹೆಂಗಸು ಕೇಳುವ ಪ್ರಶ್ನೆಗೆ ಧರ್ಮಬದ್ಧರಾಗಿ ಉತ್ತರಿಸಿ ಎಂಬ ಆಶಯ ಒಂದು ಕಡೆಯಾದರೆ, ಹೆಣ್ಣು ಎಂಬ ಕಾರಣವಾಗಿ ಧರ್ಮಶಾಸ್ತ್ರಬದ್ಧರಾದ ನೀವು ನನ್ನನ್ನು ಅಲಕ್ಷ್ಯ ಮಾಡದೆ ಉತ್ತರಿಸದೆ ಇರದಿರಿ ಎಂಬ ಆಶಯವೂ ಇದೆ. ಮತ್ತೊಂದು, ಸ್ತ್ರೀಯಾದ ನಾನು ಕೇಳುವ ಪ್ರಶ್ನೆಗೆ ನಿಮ್ಮ ಧರ್ಮಶಾಸ್ತ್ರದಲ್ಲಿ ಉತ್ತರವೇ ಇಲ್ಲವೆ? ಎಂಬ ಅರ್ಥವೂ ಇರಬಹುದು.

ಇತ್ತ ಕರ್ಣ, ಶಕುನಿ ಮೊದಲಾದವರು ದ್ರೌಪದಿಯನ್ನು ಕುರಿತು ಮೂದಲಿಸುತ್ತಿದ್ದರು. ಭೀಷ್ಮನ ಮಾತುಗಳನ್ನು ಕೇಳುವ ತಾಳ್ಮೆಯೂ ಇಲ್ಲದೆ ದುರ್ಯೋಧನ ಧರ್ಮರಾಯನನ್ನು ಹಂಗಿಸುತ್ತಾನೆ. ಭೀಮ, ಅರ್ಜುನ ಮೊದಲಾದವರು ತನ್ನ ರಕ್ಷಣೆಗೆ ಬರದೆ ಇದ್ದಾಗ ದ್ರೌಪದಿಯು ಬಹಳ ಸಂಕಟದಿಂದ ಈ ರೀತಿಯಾಗಿ ನುಡಿಯುತ್ತಾಳೆ.

"ಅಕಟ ಧರ್ಮಜ ಭೀಮ ಫಲುಗುಣ
ನಕುಲ ಸಹದೇವಾದ್ಯರಿರ ಬಾ
ಲಕಿಯನೊಪ್ಪಿಸಿ ಕೊಟ್ಟಿರೇ ಮೃತ್ಯುವಿನ ತಾಳಿಗೆಗೆ
ವಿಕಳರಾದಿರೆ ನಿಲ್ಲಿ ನೀವೀ
ಗಕುಟಿಲರಲಾ ಭೀಷ್ಮ ಗುರು ಬಾ
ಹ್ಲಿಕ ಕೃಪಾದಿಗಳುತ್ತರವ ಕೊಡಿಯೆಂದಳಬುಜಾಕ್ಷಿ"೧೦೮

ಅಯ್ಯೋ; ಧರ್ಮನಂದನ, ಭೀಮ, ಫಲುಗುಣ, ನಕುಲ ಸಹದೇವಾದ್ಯರಾಗಿ ಎಲ್ಲರೂ ಬಾಲಕಿಯನ್ನು ಮೃತ್ಯುವಿನ ಬಾಯಿಗೆ ಒಪ್ಪಿಸಿ ಬಿಟ್ಟಿರಾ? ಸತ್ಯತನದ ಭ್ರಾಂತರಾದಿರಾ? ಎಂದು ಪತಿಗಳಲ್ಲಿ ಮೊರೆಯಿಡುತ್ತಾಳೆ. ನಂತರ 'ನಿಲ್ಲಿ, ನೀವು ಈಗ, ನೀವು ಮೋಸವನ್ನು ತಿಳಿಯದವರಲ್ಲವೆ ಎಂದು ಭೀಷ್ಮ, ದ್ರೋಣ, ಬಾಹ್ಲಿಕ, ಕೃಪ ಮೊದಲಾದ ಹಿರಿಯರನ್ನು ನೀವು ನನ್ನ ಪ್ರಶ್ನೆಗೆ ಉತ್ತರವನ್ನು ಕೊಡಿ' ಎಂದು ಅವಳು ಕೇಳುತ್ತಾಳೆ. ಇಲ್ಲಿ ಕುಮಾರವ್ಯಾಸ ಬಳಸಿರುವ 'ಬಾಲಕಿಯನೊಪ್ಪಿಸಿಕೊಟ್ಟಿರೇ ಮೃತ್ಯುವಿನ ತಾಳಿಗೆಗೆ' ಎಂಬ ಸಾಲು ಚರ್ಚಾರ್ಹವಾದುದು. ಇಲ್ಲಿ ದ್ರೌಪದಿ ತನ್ನ ಸ್ಥಿತಿಯನ್ನು ಕುರಿತು ಚರ್ಚಿಸುವಾಗ ಬಾಲಕಿಯನ್ನು ಮೃತ್ಯುವಿನ ಬಾಯಿಗೆ ನೂಕಿದಿರಾ? ಎಂದು ಕೇಳುವ ಬದಲು 'ಪತ್ನಿಯನ್ನು ಮೃತ್ಯುವಿನ ಬಾಯಿಗೆ ನೂಕಿದಿರಾ?' ಎಂದು ಏಕೆ ಕೇಳಲಿಲ್ಲ? ಎಂಬುದು. ಏಕೆಂದರೆ ಆಕೆ ಅವರೆಲ್ಲರಿಗೂ ಪತ್ನಿಯಾಗಿದ್ದಳು. ಅವರ ಕಷ್ಟ ಸುಖದಲ್ಲಿ ಭಾಗಿಯಾಗಿರುವವಳು. ಹೆಂಡತಿ ಅಥವಾ ಪತ್ನಿ ಎಂಬ ಶಬ್ದ ಬಿಟ್ಟು ಕವಿ 'ಬಾಲಕಿ' ಎಂಬ ಪದವನ್ನು ಬಳಸಿರುವ ಔಚಿತ್ಯವಾದರೂ ಏನು? ಎಂಬುದು ಚರ್ಚಿಸತಕ್ಕದ್ದು. ಏಕೆಂದರೆ 'ಪತ್ನಿ' ಎಂಬುದಕ್ಕಿಂತ 'ಬಾಲಕಿ' ಎಂಬ ಪದವು ಸಮಸ್ತ ಸ್ತ್ರೀ ಕುಲವನ್ನು ಪ್ರತಿನಿಧಿಸುತ್ತದೆ.

ಯಾರೂ ಉತ್ತರ ಕೊಡದಿದ್ದಾಗ ದುರ್ಯೋಧನನ ತಮ್ಮನಾದ ವಿಕರ್ಣ ದ್ರೌಪದಿಯ ಮಾತುಗಳಿಗೆ ಬೆಂಬಲವಾಗಿ ನಿಲ್ಲುತ್ತಾನೆ. ಅವಳ ಪ್ರಶ್ನೆಗೆ ಉತ್ತರಿಸಿ ಎಂದು ಸಭೆಯಲ್ಲಿದ್ದವರನ್ನು ಕೇಳಿದಾಗ ಕರ್ಣನಿಗೂ ಆತನಿಗೂ ವಾಗ್ವಾದಗಳು ನಡೆದು ದುರ್ಯೋಧನ ಕರ್ಣನನ್ನೇ ಸಮರ್ಥಿಸಿಕೊಳ್ಳುತ್ತಾನೆ. ವಿಕರ್ಣ ಅಸಹಾಯಕನಾಗಿ ಸುಮ್ಮನಾಗುತ್ತಾನೆ. ದುರ್ಯೋಧನನ ಅಹಂ ಹೆಚ್ಚಾಗಿ ಪಾಂಡವರಿಗೆ ಹಾರ, ಪದಕ, ಕಿರೀಟ ಮೊದಲಾದ ಆಭರಣಗಳೆಲ್ಲ ಭಾರವಲ್ಲವೇ? ಅವೆಲ್ಲವನ್ನು ತೆಗೆಯ ಹೇಳು ಅದಕ್ಕೆ ದಾಕ್ಷಿಣ್ಯವೇನು? ಎಂದು ಕಠಿಣವಾಗಿ ನುಡಿದನು. ಪಾಂಡವರೆಲ್ಲ ತಮ್ಮ ಆಭರಣಗಳನ್ನೆಲ್ಲ ತೆಗೆದಿರಿಸಲು ಇತ್ತ ದುಷ್ಟನಾದ ದುಶ್ಯಾಸನನು ದ್ರೌಪದಿಯ ಸೆರಗನ್ನು ಹಿಡಿದು ಸೆಳೆದನು. ಇದರಿಂದಾಗಿ ಆಘಾತಕ್ಕೊಳಗಾಗುತ್ತಾಳೆ ದ್ರೌಪದಿ. ಆಕೆ ಇಂತಹ ಸನ್ನಿವೇಶವನ್ನು ಕಲ್ಪನೆಯಲ್ಲಿಯೂ ಊಹಿಸಿಕೊಂಡಿರಲಿಲ್ಲ.

"ಅಳುಕಿದನೆ ಸುಡಲವನ ಮೇಲುದ
ಸೆಳೆದನುನ್ನತ ಕುಚವ ನಳಿತೋ
ಳ್ಗಳಲಿ ಮುಚ್ಚಿದಳಬಲೆ ಬೆಚ್ಚಿದಳವನ ನಿಷ್ಠುರಕೆ

ಕಳವಳಿಸಿದಳು ಬೆರಳಿನಲಿ ದೃಗು
ಜಲವ ಬಿದುರತ ನೋಡಿದಳು ನೃಪ
ತಿಲಕನನು ಭೀಮಾರ್ಜುನರ ಮಾದ್ರೀಕುಮಾರಕರ"[೧೦೯]

ದುಷ್ಟನಾದ ದುಶ್ಯಾಸನನು ಅಳುಕಲಿಲ್ಲ. ಸುಡಲಿ ಅವನನ್ನು, ಸೆರಗನ್ನು ಸೆಳೆದನು. ಒಡನೆಯೆ ಅಬಲೆಯಾದ ದ್ರೌಪದಿಯು ತನ್ನ ನಳಿತೋಳುಗಳಲ್ಲಿ ಉನ್ನತವಾದ ಕುಚಗಳನ್ನು ಮುಚ್ಚಿಕೊಂಡಳು. ಅವನ ನಿಷ್ಠುರವಾದ ಈ ಕೃತ್ಯಕ್ಕೆ ಬೆಚ್ಚಿದಳು, ಕಳವಳಿಸಿದಳು. ಬೆರಳಿನಿಂದ ಕಣ್ಣೀರ ಹನಿಗಳನ್ನು ಒರೆಸಿಕೊಳ್ಳುತ್ತ ನೃಪ ತಿಲಕನನ್ನು, ಭೀಮಾರ್ಜುನರನ್ನು ಹಾಗೂ ಮಾದ್ರೀ ಕುಮಾರನ್ನು ತನ್ನನ್ನು ರಕ್ಷಿಸುವಂತೆ ದೈನ್ಯದ ನೋಟದಲ್ಲಿ ಅವರೆಲ್ಲರನ್ನು ನೋಡಿದಳು ದ್ರೌಪದಿ. ಇಲ್ಲಿ ಆಕೆ ದುಶ್ಯಾಸನನ ಕೃತ್ಯದಿಂದ ಆಘಾತಕ್ಕೆ ಒಳಗಾಗಿದ್ದಾಳೆ. ಒಬ್ಬ ಮಹಾರಾಣಿಯಾದವಳನ್ನು ನಡೆಸಿಕೊಳ್ಳುತ್ತಿರುವ ಪರಿ ಇಲ್ಲಿ ಚರ್ಚಾರ್ಹವಾದುದು. ನಂತರ ಆಕೆ ಸಭೆಯಲ್ಲಿದ್ದವರೆಲ್ಲರನ್ನೂ ತನ್ನನ್ನು ರಕ್ಷಿಸುವಂತೆ ಮೊರೆಯಿಡುತ್ತಾಳೆ.

"ಕ್ರೂರನಿವ ದುಶ್ಯಾಸನನು ಗಾಂ
ಧಾರಿ ಬಿಡಿಸೌ ಸೆರಗ ಸೊಸೆಯ
ಲ್ಲಾರು ಹೇಳೌ ತಂಗಿಯಲ್ಲಾ ನಿಮಗೆ ಭಾನುಮತಿ
ವೀರ ಸೈಂಧವನರಸಿ ರಾಜ ಕು
ಮಾರಿ ನೀ ನಾದಿನಿಯಲಾ ಖಳ
ರೌರವದೊಳದ್ದುವನು ಬಿಡಿಸೆಂದೊರಲಿದಳು ತರಳೆ"[೧೧೦]

ಕ್ರೂರನಿವನು ಈ ದುಶ್ಯಾಸನ. ಗಾಂಧಾರೀ ನೀವಾದರೂ ಬಿಡಿಸವ್ವಾ ನನ್ನ ಸೆರಗನ್ನು, ಸೊಸೆಯಲ್ಲವೇ ನಾನು?, ಭಾನುಮತೀ, ನಾನು ಯಾರು ಹೇಳು? ತಂಗಿಯಲ್ಲವೇ ನಿನಗೆ, ವೀರ ಸೈಂಧವನ ಅರಸಿ, ರಾಜಕುಮಾರೀ, ನೀನು ನನಗೆ ನಾದಿನಿಯಲ್ಲವೇ? ಈ ದುಷ್ಟನು ನನ್ನನ್ನು ರೌರವದಲ್ಲಿ (ಭಯಂಕರವಾದ ನರಕ) ಮುಳುಗಿಸಿಬಿಡುತ್ತಾನೆ. ನನ್ನನ್ನು ಬಿಡಿಸಮ್ಮಾ' ಎಂದು ಒರಲಿದಳು. ಇಲ್ಲಿಯ ದ್ರೌಪದಿಯ ಸ್ಥಿತಿ ಮನಕರಗುವಂತಹದ್ದು. ತನ್ನ ಎಲ್ಲ ಬಂಧು ಸ್ತ್ರೀಯರನ್ನು ಬೇಡಿಕೊಳ್ಳುತ್ತಾಳೆ. ಮುಂದುವರೆದು

"ಎಲೆ ವಿಲಾಸಿನಿಯರಿರ ಭೂಪನ
ತಿಳಿಹಿರೌ ತಾಯ್ಗಳಿರ ನೀವಿಂ
ದೆಲೆ ಪಸಾಯ್ತೆಯರಿರ ಸಹೋದರಿಯೆಂದು ಕೌರವನ
ತಿಳುಹಿರೌ ಶರಣಾಗತರ ತಾ
ನುಳುಹಿ ಕೊಂಬುದು ಧರ್ಮವಕಟಾ
ಕಲುಹೃದಯರೌ ನೀವೆನುತ ಹಲುಬಿದಳು ತರಳಾಕ್ಷಿ"[೧೧೧]

ಎಲೆ ವಿಲಾಸಿನಿಯರೆ ನಿಮ್ಮ ಭೂಪನಿಗೆ ತಿಳಿಯ ಹೇಳಿರಮ್ಮಾ, ತಾಯಿಗಳಿರಾ, ಎಲೆ ಪಸಾಯ್ತೆಯರಿರ, ನಾನು ನಿಮ್ಮ ಸೋದರಿಯೆಂದು ತಿಳಿದು ಕೌರವನಿಗೆ ತಿಳಿಯ ಹೇಳಿರಿ. ಶರಣಾಗತರಾದವರನ್ನು ಉಳಿಸಿಕೊಳ್ಳುವುದು ಧರ್ಮ. ಅಯ್ಯೋ ಕಲ್ಲು ಹೃದಯದವರಾದಿರೆ ನೀವು, ಎನ್ನುತ್ತ ಆಕೆ ದುಃಖಿಸಿದಳು. ಬಂಧು ಸ್ತ್ರೀಯರಿಂದ ಯಾವುದೇ ಸಹಾಯ ಲಭಿಸದಿದ್ದಾಗ ಸಭೆಯಲ್ಲಿದ್ದವರನ್ನು ಕುರಿತು ಬೇಡಿಕೊಳ್ಳುತ್ತಾಳೆ.

"ಧಾರುಣೀಪತಿಗಳಿರ ರಾಜ ಕು
ಮಾರರಿರ ಮಂತ್ರಿಗಳಿರಾ ಪರಿ
ವಾರಕಿದು ಪಂಥವೆ ವಿಚಾರಿಸಿ ನಿರಪರಾಧಿಯನು
ನಾರಿಯೊಬ್ಬಳನಕಟ ಸಭೆಯಲಿ
ಸೀರೆಯುಡಿಯುರ್ಚುವರು ಕೆಟ್ಟೆನು
ಕಾರಣಿಕರಿಲ್ಲಾ ಶಿವಾಯೆಂದೊರಲಿದಳು ತರಳೆ"[೧೧೨]

ಧಾರಣೀಪತಿಗಳೇ, ರಾಜಕುಮಾರರೇ, ಮಂತ್ರಿಗಳೆ, ಪರಿವಾರಕಿದು ಪಂಥವೇ ವಿಚಾರಿಸಿ. ನಿರಪರಾಧಿಯಾದ ನಾರಿಯೊಬ್ಬಳನ್ನು ಅಯ್ಯೋ ಸಭೆಯಲ್ಲಿ ಸೀರೆ ಸೆಳೆದು ಹಾಕುತ್ತಿರುವರಲ್ಲ, ಕೆಟ್ಟೆನು. ನನ್ನನ್ನು ಕಾಪಾಡುವ ಅವತಾರ ಪುರುಷರಿಲ್ಲವೇ ಶಿವ ಎಂದು ಒರಲಿದಳು.

"ಪತಿಗಳೆನ್ನನು ಮಾರಿ ಧರ್ಮ
ಸ್ಥಿತಿಯ ಕೊಂಡರು ಭೀಷ್ಮ ಮೊದಲಾ
ದತಿರಥರು ಪರಹಿತವ ಬಿಸುಟರು ವ್ಯರ್ಥಭೀತಿಯಲಿ
ಸುತನ ಸಿರಿ ಕಡುಸೊಗಸಲಾ ಭೂ
ಪತಿಗೆ ಗಾಂಧಾರಿಗೆ ಅನಾಥೆಗೆ
ಗತಿಯ ಕಾಣೆನು ಶಿವ ಶಿವಾಯೆಂದೊರಲಿದಳು ತರಳೆ"[೧೧೩]

ಕುಮಾರವ್ಯಾಸನ ಈ ಪದ್ಯ ದ್ರೌಪದಿಯ ಸ್ಥಿತಿಯನ್ನು ಸಮರ್ಥವಾಗಿ ಅಭಿವ್ಯಕ್ತಿಸುತ್ತದೆ. ದ್ರೌಪದಿ ತನ್ನ ಪತಿಗಳ ಕಾರ್ಯವನ್ನು ನೇರವಾಗಿ ಟೀಕಿಸುತ್ತಾಳೆ. ಪತಿಗಳು ನನ್ನನ್ನು ಮಾರಿ ಧರ್ಮಸ್ಥಿತಿಯನ್ನು ಕೊಂಡುಕೊಂಡರು. ಭೀಷ್ಮ ಮೊದಲಾದ ಶ್ರೇಷ್ಠ ಯೋಧರು, ಪರಾಕ್ರಮಿಗಳೂ ಸಹ ವ್ಯರ್ಥ ಭೀತಿಯಲ್ಲಿ ಪರಹಿತವನ್ನು ಬಿಸುಟರು. ಭೂಪತಿಯಾದ ಧೃತರಾಷ್ಟ್ರನಿಗೂ ಗಾಂಧಾರಿಗೂ ಮಗನ ಸಿರಿಯೆ ಬಹು ಸೊಗಸಾಗಿ ಕಾಣುತ್ತಿದೆ. ಇನ್ನು ನನ್ನಂಥಹ ಅನಾಥೆಗೆ ಯಾರು ಗತಿ? ಎಂದು ಶಿವನಲ್ಲಿ ಮೊರೆಯಿಡುತ್ತಾಳೆ. ಇಲ್ಲಿನ 'ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು' ಎಂಬ ಮಾತು ಬಹು ಚರ್ಚೆಗೆ ಗ್ರಾಸವಾಗುವಂತಹದ್ದು. ಇಲ್ಲಿನ ಪತಿಗಳಿಗೆ ಧರ್ಮ ಮುಖ್ಯವಾಯಿತೆ ಹೊರತು ಪತ್ನಿಯಲ್ಲ ಎಂಬುದರ ಸ್ಪಷ್ಟ ನಿರೂಪಣೆಯಿದೆ.

ಜೊತೆಗೆ ಇಲ್ಲಿ ಬಳಕೆಯಾಗಿರುವ 'ಮಾರು' ಎಂಬ ಪದ ಸಹ ಗಮನಿಸಬೇಕಾದದ್ದು. ಹೆಣ್ಣನ್ನು ಜೈವಿಕ ಜೀವಿ ಎಂದು ಪರಿಭಾವಿಸದೆ ಬೆಲೆ ಕೊಟ್ಟು ಕೊಂಡುಕೊಳ್ಳುವ ವಸ್ತು ಅಥವಾ ಸರಕಿನ ರೀತಿಯಲ್ಲಿ ಪರಿಭಾವಿಸಿರುವ ಅಂಶ ಕಂಡುಬರುತ್ತದೆ. ಹಾಗಾಗಿಯೇ ದ್ರೌಪದಿ ಹೇಳುವುದು 'ಧರ್ಮವನ್ನು ಕೊಂಡುಕೊಳ್ಳಲು ಪತಿಗಳು ನನ್ನನ್ನೇ ಮಾರಿದರು' ಎಂಬ ಮಾತು ಬಹುಮುಖ್ಯವಾದುದು. ಈ ಮಾತು ಪುರುಷ ಪ್ರಧಾನ ಸಮಾಜ ಹೆಣ್ಣಿಗೆ ಯಾವುದೇ ರೀತಿಯ ಸ್ವಾತಂತ್ರ್ಯಗಳನ್ನಾಗಲೀ, ಅಸ್ತಿತ್ವವನ್ನಾಗಲೀ ನೀಡಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಅಲ್ಲದೆ, ಪತಿಗಳಿಗೆ ಒಂದು ಹೆಣ್ಣಿನ ಮಾನ ಸಂರಕ್ಷಣೆಗಿಂತ ಮಿಗಿಲಾದ ಅವರು ಕೊಂಡುಕೊಂಡ 'ಧರ್ಮ'ವಾದರೂ ಯಾವುದು? ಎಂಬುದರ ಕಡೆಗೂ ಕೂಡ ಪ್ರಶ್ನಾರ್ಹ ನೋಟವನ್ನು ಬೀರುತ್ತದೆ.

"ಒಂದು ದೃಷ್ಟಿಯಿಂದ ಮಹಾಭಾರತ ದ್ರೌಪದಿಯ ಗೋಳಿನ ನೀಳ್ಗತೆ. 'ಪತಿಗಳೆನ್ನನು ಮಾರಿ ಧರ್ಮಸ್ಥಿತಿಯ ಕೊಂಡರು' ಎಂಬ ಅವಳ ಆಕ್ರಂದನದಲ್ಲಿ ಅವಳ ಬಾಳ್ವೆಯೆಲ್ಲ ಹೆಪ್ಪುಗಟ್ಟಿದೆ. ಅವಳಿಗಾದ ಅನ್ಯಾಯದ ಸ್ವರೂಪ ಈ ನುಡಿಯಲ್ಲಿ ಸುವ್ಯಕ್ತ. ದ್ರೌಪದಿ ಪಾಂಡವರ ಧರ್ಮಪತ್ನಿಯಲ್ಲವೆ? ಅವಳನ್ನು ಕೈಬಿಟ್ಟು ಅವರು ಧರ್ಮಕ್ಕೆ ಬೆಲೆ ಕೊಟ್ಟುದರಲ್ಲಿ ಏನು ಅರ್ಥವಿದೆ? ಧರ್ಮಪತ್ನಿಯನ್ನು ಗೋಳಾಡಿಸುವ ಧರ್ಮವಾದರೂ ಎಂತಹುದು? ಈ ವಿಡಂಬನ ದ್ರೌಪದಿಯ ಮಾತಿನಲ್ಲಿ ಇಂಗಿತವಾಗಿರತಕ್ಕದ್ದು"[೧೧೪] ಎಂಬ ವಿ.ಕೆ.ಮಣಿಮಾಲಿನಿ ಅವರ ಮಾತುಗಳನ್ನು ಮುಂದುವರೆಸಿ ಹೇಳುವುದಾದರೆ ಧರ್ಮ ನಿರಪೇಕ್ಷಿತವಾದ ಈ ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣು ಗಂಡಿನಿಂದ ರಕ್ಷಿಸಲ್ಪಡುವವಳು. ಇದನ್ನು ಎಲ್ಲಾ ಭಾರತೀಯ ಚಿಂತನೆಗಳು ಪುರಸ್ಕರಿಸುತ್ತಲೇ ಬಂದಿವೆ. ಇಂತಹ ಸಂದರ್ಭದಲ್ಲಿ ಪಾಂಚಾಲಿ ಐವರು ಗಂಡಂದಿರನ್ನು ಒಳಗೊಂಡರೂ ಕೂಡ ಅಸುರಕ್ಷಿತಳು. ಹಾಗೆಂದ ಮಾತ್ರಕ್ಕೆ ಪಾಂಡವರು ಶಕ್ತಿಹೀನರೇನಲ್ಲ. ಅವರು ವೈಯಕ್ತಿಕ ಬದುಕಿಗಿಂತ ಧರ್ಮದ ದಾರಿಯಲ್ಲಿ ನಡೆಯುತ್ತಿರುವವರು. ಇದೇ ದ್ರೌಪದಿಗೆ ವಿಷಮ ಪರಿಸ್ಥಿತಿಯಾಗಿಯೂ ಪರಿಣಮಿಸುತ್ತದೆ. ತಾವು ನಂಬಿದ ಧರ್ಮ ಮಾರ್ಗದಲ್ಲಿ ತಮ್ಮನ್ನೇ ನಂಬಿದ ಹೆಣ್ಣನ್ನು (ದ್ರೌಪದಿ) ರಕ್ಷಿಸಿಕೊಳ್ಳಬೇಕೆಂಬ ಸಾಮಾನ್ಯ ತಿಳಿವನ್ನೂ ನಿರ್ಲಕ್ಷಿಸುವ ಸಂದರ್ಭದಲ್ಲಿ ದ್ರೌಪದಿ ಹೇಳುವ 'ಪತಿಗಳೆನ್ನನು ಮಾರಿ ಧರ್ಮಸ್ಥಿತಿಯಕೊಂಡರು' ಎಂಬ ಮಾತಿನಲ್ಲಿ ಕೇವಲ ಆಕ್ರಂದನಗಳಿಲ್ಲ. ಅದರೊಳಗೆ ತಿರಸ್ಕೃತವಾದ ಭಾವಾಭಿವ್ಯಕ್ತಿಗಳಿವೆ.

"ಮೈದೆಗೆದವೀ ಪ್ರಾಣವಾಯುಗ
ಳೈದು ಬಳಿಕೆನಗಾರು ಮರುಗುವ
ರೈದೆತನವೊಂದುಳಿಯಲುಳಿವುದು ಮಿಕ್ಕ ಮಹಿಮೆಗಳು
ಬೈದು ಫಲವೇನಿನ್ನು ನಿನ್ನಯ
ಮೈದುನರ ಮರುಳಾಟಕೆನ್ನನು
ಕಾಯ್ದುಕೊಳ್ಳೈ ಕೃಷ್ಣಯೆಂದೊರಲಿದಳು ಲಲಿತಾಂಗಿ"[೧೧೫]

ಪ್ರಾಣವಾಯುಗಳು ಇವೈದೂ ತೊರೆದು ಹೋದವು. ಅಂದರೆ ನನ್ನ ಪ್ರಾಣವಾಯುಗಳಂತಿದ್ದ ಈ ಐದೂ ಜನರೂ ನನ್ನನ್ನು ರಕ್ಷಿಸುವ ಬದಲು ಅಸಹಾಯಕರಾಗಿ ನಿಂತಿದ್ದಾರೆ. ಇಂತಹ ಪ್ರಾಣವಾಯುಗಳೇ ನನ್ನನ್ನು ತೊರೆದು ಹೋದ ಬಳಿಕ ನನಗೆ ಇನ್ನಾರು ಮರುಗುತ್ತಾರೆ. ಮುತ್ತೈದೆತನ ಒಂದು ಉಳಿದರೆ ಸಾಕು. ಅದು ಉಳಿದರೆ ಮಿಕ್ಕ ಮಹಿಮೆಗಳೆಲ್ಲ ಉಳಿಯುತ್ತವೆ. ಯಾರನ್ನು ಬೈದು ಏನು ಪ್ರಯೋಜನ? ಕೃಷ್ಣ ನಿನ್ನ ಮೈದುನರ ಮರುಳಾಟದಿಂದ ನಾನು ತೊಂದರೆಗೆ ಸಿಲುಕಿದ್ದೇನೆ ನನ್ನನ್ನು ಕಾಪಾಡು ಎಂದು ಬೇಡಿಕೊಂಡಳು. ಇಲ್ಲಿ ದ್ರೌಪದಿ ನನ್ನ ಐದೆತನ ಹಾಗೂ ಮಾನ ಉಳಿಯಲಿ ಎಂದು ಬೇಡಿಕೊಳ್ಳುವುದು ಒಂದು ಹೆಣ್ಣಿನ ಬಹುಮುಖ್ಯವಾದ ಅರ್ಥಪೂರ್ಣ ಬದುಕಿನ ಅಭಿಮಾನವನ್ನು ತಿಳಿಸುತ್ತದೆ.

ಊರ ನಡುವೆ ಉಟ್ಟಿರುವ ಸೀರೆಯನ್ನು ಸುಲಿಯುತ್ತಿದ್ದಾರೆ. ಮುರಾಂತಕನಾದ ಕೃಷ್ಣನೆ ನನ್ನನ್ನು ರಕ್ಷಿಸೈ, ಸೀರೆಯನ್ನು ಸೆಳೆದು ಹಾಕಿದರೆ ನಾನು ಜೀವದಿಂದ ಉಳಿಯಲಾರೆ. ಗತಿವಿಹೀನರಿಗೆ ನೀನೆ ಗತಿ. ಶತೃಗಳಿಂದ ತೊಂದರೆಗೆ ಒಳಗಾದವರಿಗೆ ನೀನು ಪರಮಬಂಧು. ನನ್ನನ್ನು ಕಾಪಾಡು ಎಂದು ಪರಿಪರಿಯಾಗಿ ಕೃಷ್ಣನನ್ನು ಬೇಡಿಕೊಳ್ಳುತ್ತಾಳೆ.

"ಅಭಿಮಾನಶಾಲಿನಿಯಾಗಿ, ಸ್ತ್ರೀತ್ವದ ಕಾಠಿಣ್ಯ ಗುಣದ ನೆಲೆಯೆನಿಸಿ, ಪುರುಷರಿಗೆ ಸಮವಾಗಿ ಹೋರಾಡುವ ವೀರರಮಣಿಯಾದ ದ್ರೌಪದಿಯು ಅವರೆಲ್ಲರನ್ನೂ ಹಳಿದು ಭಗವಂತನಿಗೆ ಮೊರೆಯಿಟ್ಟುದು ಸಹಜವೇ ಸರಿ"[೧೧೬] ಏಕೆಂದರೆ ತನ್ನ ಪತಿಗಳಿದ್ದರೂ ವ್ಯತಿರಿಕ್ತ ಪರಿಸ್ಥಿತಿಗಳನ್ನು ಎದುರಿಸುವ ದ್ರೌಪದಿಯಂತಹ ಅಸಹಾಯಕ ಹೆಣ್ಣುಗಳು ತಮ್ಮನ್ನು ಕಾಪಾಡುವಂತೆ ತಮ್ಮ ಇಷ್ಟ ದೈವಗಳನ್ನು ಬೇಡಿಕೊಳ್ಳುವುದು ಸಹಜವೇ ಆಗಿದೆ.

ರಾಕ್ಷಸರ ತಲೆಚೆಂಡಾಡಿ ಜಾನಕಿಯನ್ನು ಕಾಪಾಡಿದೆ. ದಾನವನಿಂದ ಭೂತಧಾತ್ರಿಯನ್ನು ಕಾಪಾಡಿದೆ. ಯೋಗಿಣಿಗೆ ಹೆದರುವ ದಕ್ಷಸುತೆಯನ್ನು ರಕ್ಷಿಸಿದೆ. ರೇಣುಕೆಯನ್ನು ಕಾಪಾಡಿದೆ. ದೇವಕೀ ದೇವಿಯರನ್ನು ಸೆರೆಯಿಂದ ವಿಮುಕ್ತಿಗೊಳಿಸಿದೆ. ಈ ಕೌರವರನ್ನು ಧ್ವಂಸಗೊಳಿಸಿ ದೇವ ನನ್ನ ಸೆರಗನ್ನು ಬಿಡಿಸಯ್ಯಾ ಎಂದು ಬೇಡಿಕೊಳ್ಳುತ್ತಾಳೆ. ಇಲ್ಲಿ ಕವಿ ದ್ರೌಪದಿಯ ಮೂಲಕ ಕೃಷ್ಣನ ಮಹಿಮೆಗಳನ್ನು ತಿಳಿಸುತ್ತ ಅವಳ ಮನದ ನೋವನ್ನು ನಮಗೆ ತಿಳಿಯಪಡಿಸುತ್ತಾನೆ. ಪಂಪನಿಗೆ ಹೋಲಿಸಿದರೆ ಕುಮಾರವ್ಯಾಸನು ದ್ರೌಪದಿಯ ಅಂತರಂಗವನ್ನು ಹೊಕ್ಕಿ ಅವಳ ನೋವನ್ನು ಬಲ್ಲವನಂತೆ ಕಂಡುಬರುತ್ತಾನೆ. ಕೃಷ್ಣ ಮಹಿಮೆಯನ್ನು ತಿಳಿಯಪಡಿಸುವುದು ಆತನ ಉದ್ದೇಶವಾಗಿದ್ದರೂ ದ್ರೌಪದಿಯ ಸಂಘರ್ಷಗಳನ್ನು ತಿಳಿಸುವಲ್ಲಿ ಅಷ್ಟೇ ಪ್ರಾಮಾಣಿಕತೆಯನ್ನು ಮೆರೆದಿದ್ದಾನೆ.

ದ್ವಾರಾವತಿಯಲ್ಲಿ ರುಕ್ಮಿಣಿ, ಸತ್ಯಭಾಮೆಯರೊಡನೆ ನೆತ್ತವನ್ನಾಡುತ್ತಿದ್ದ ಕೃಷ್ಣನಿಗೆ ದ್ರೌಪದಿಯ ಮೊರೆ ಕೇಳಿಸಿ 'ಉಟ್ಟ ಸೀರೆ ಸೆಳೆದೊಡನೆಯೇ ಅಕ್ಷಯ ಸೀರೆಯಾಗಲಿ' ಎಂದು ಅನುಗ್ರಹಿಸಿ ದ್ರೌಪದಿಯನ್ನು ರಕ್ಷಿಸುತ್ತಾನೆ. ಇಲ್ಲಿ ಪ್ರಧಾನವಾಗಿ ಗಮನಿಸಬೇಕಾದ್ದು ಪಾಂಚಾಲ ನಂದನೆಯ

ಮನದ ತಲ್ಲಣಗಳನ್ನು ಸಭೆಯಲ್ಲಿದ್ದವರು, ಬಂಧು ಜನರು ಎಲ್ಲರು ಆಕೆಯನ್ನು ಇಲ್ಲಿ ಕೈ ಬಿಡುತ್ತಾರೆ. ಪತ್ನಿಯಾಗಿ ಸ್ವೀಕರಿಸಿದ ಪತಿಗಳೂ ಅಸಹಾಯಕರಾದಾಗ ಆ ಹೆಣ್ಣು ಏನು ಮಾಡಬೇಕು? ಇದು ಪಂಪ ಹಾಗೂ ಕುಮಾರವ್ಯಾಸರ ಕಾಲಘಟ್ಟದ ಸ್ತ್ರೀಯರ ಸಮಸ್ಯೆ ಅಥವಾ ನೋವು ಮಾತ್ರವಲ್ಲ. ಇಂದಿನ ಸಮಾಜದ ಈ ಹೊತ್ತಿನಲ್ಲಿ ಬದುಕುತ್ತಿರುವ ಹೆಣ್ಣುಗಳ ನೋವು ಆಗಿದೆ. ಈಕೆ ಕೂಡ ತನ್ನ ಮಾನ ಪ್ರಾಣಗಳನ್ನು ಉಳಿಸಿಕೊಳ್ಳಲಿಕ್ಕಾಗಿ ನಿರಂತರವಾಗಿ ಸಂಘರ್ಷಗಳನ್ನು ಎದುರಿಸುತ್ತಿರುವುದನ್ನು ಕಾಣಬಹುದಾಗಿದೆ.

"ಇಡೀ ಕುರುಕ್ಷೇತ್ರದ ಮುನ್ನುಡಿ ಎನ್ನಬಹುದಾದ ಜೂಜು ಮತ್ತು ವಸ್ತ್ರಾಪಹರಣ ಬಹುಶಃ ಇಡೀ ಭಾರತೀಯ ಪರಂಪರೆ, ಸಾಂಸ್ಕೃತಿಕ ಭವ್ಯತೆ, ಮಾನವೀಯತೆ ಉತ್ಕರ್ಷ ಎನ್ನಬಹುದಾದ ಹಿರಿಮೆಗಳಿಗೆಲ್ಲ ಕಪ್ಪು ಚುಕ್ಕೆ ಇಟ್ಟಂತಹುದು. ಹೆಣ್ಣನ್ನು ಒಂದು ಜಡವಸ್ತುವಿಗಿಂತ ಕೀಳಾಗಿ ನಡೆಸಿಕೊಂಡ ಶೋಷಣೆಯ ಉತ್ಕರ್ಷ ಅದಕ್ಕೆ ತಕ್ಕನಾಗಿ ಎಲ್ಲರ ತಲೆದಂಡವಾಗುವುದು ಆಗಲೇಬೇಕಿದ್ದ ಫಲಿತ. ಧರ್ಮರಾಯನಾದರೂ ಅಧಿಕಾರ ರಾಜಕಾರಣದ ಕಾಳ್ಗಿಚ್ಚಿನಲ್ಲಿ ತನ್ನ ಬುದ್ಧಿ ವ್ಯಕ್ತಿತ್ವಗಳನ್ನೆಲ್ಲಾ ಕಳೆದುಕೊಂಡಂತೆ ದ್ರೌಪದಿಯನ್ನು ಪಣಕ್ಕಿಡುತ್ತಾನೆ. ತನ್ನನ್ನು ತನ್ನ ಸಹೋದರರನ್ನು ಪಣಕ್ಕಿಟ್ಟವನಿಗೆ ದ್ರೌಪದಿಯನ್ನಿಡುವುದು ವಿಶೇಷ ಎನಿಸಿರಲಿಲ್ಲ. 'ದಾಸಿ' ತನದ ಉತ್ಕರ್ಷವೇ ಇದಾಗುತ್ತದೆ. ಆದರೆ ಮುಂದೆ ನಡೆದದ್ದೇನು ಯಾವ ಅರಿವೂ ಇಲ್ಲದೆ ತನ್ನ ಪಾಡಿಗೆ ತಾನಿದ್ದ ದ್ರೌಪದಿಗೆ ಹಿಂದೆಂದೂ ಈ ನೆಲದಲ್ಲಿ ಯಾವ ಹೆಣ್ಣು ಅನುಭವಿಸಿರಲಾರದ ಮಾನಸಿಕ, ದೈಹಿಕ ಆಘಾತ, ಒಬ್ಬರಿಬ್ಬರಲ್ಲ ಐವರೂ ಗಂಡಂದಿರೂ ಸಾಲದಕ್ಕೆ ಎಲ್ಲರೂ ಜಗದೇಕ ವೀರರೇ, ಎಲ್ಲರೂ ನಪುಂಸಕರಂತೆ ಉಳಿದು ಬಿಡುವ ದುಃಸ್ಥಿತಿ ಯಾರನ್ನೂ ನಂಬುವಂತಿಲ್ಲ. ಜಗತ್ತಿನ ಮಹಾ ಮನುಷ್ಯರೆಲ್ಲ ನೆರೆದಿರುವ ಸಭೆಯಲ್ಲಿ ಅವಳಿಗೆ ನ್ಯಾಯ ದೊರೆಯುವಂತಿಲ್ಲ. ತನ್ನನ್ನೇ ತಾನು ಪಾರು ಪಡಿಸಿಕೊಳ್ಳಬೇಕಾದ ಅನಿವಾರ್ಯತೆ ಅವಳು ಪಾರಾದ ಪವಾಡವೇ ಇರಲಿ, ಈ ಘಟನೆ ಅವಳ ಮೇಲೆ ಬೀರಿರಬಹುದಾದ ಪರಿಣಾಮವೇನು? ಅದಕ್ಕೆ ಮಾನದಂಡಗಳಿವೆಯೇ ಹಾಗೆಂದು ಬದುಕಿಗೆ ಪಲಾಯನವಾದ ಹೂಡುವಂತಿಲ್ಲ. ಅವಳು ಹಠದ ಹೆಣ್ಣಾಗಿ ಪರಿವರ್ತನೆಯಾಗಲೇ ಬೇಕಿತ್ತು"[೧೧೭] ಎಂಬ ಮಾತುಗಳು ದ್ರೌಪದಿಯ ಅಂದಿನ ಸ್ಥಿತಿಯನ್ನು ಸಶಕ್ತವಾಗಿ ಹಿಡಿದಿಡುತ್ತವೆ. ತನ್ನ ಪತಿಗಳೆದುರೇ ಆ ರೀತಿಯ ಅಪಮಾನಗಳಿಗೆ ಒಳಗಾದ ಯಾವ ಹೆಣ್ಣು ಸಹ ಸುಮ್ಮನಿರಲು ಸಾಧ್ಯವಿಲ್ಲ. ಆದ್ದರಿಂದ ದ್ರೌಪದಿ ಇಲ್ಲಿ ಅತ್ಯಂತ ಕೋಪಗೊಂಡವಳಾಗಿ ನುಡಿಯುವ ಮಾತುಗಳು ಅವಳಿಗಾದ ಅಪಮಾನಗಳಿಗೆ ಪ್ರತಿಯಾಗಿ ಹೊರಬಂದ ಬಿರುಸು ನುಡಿಗಳಾಗಿವೆ. ಎಲ್ಲಕ್ಕಿಂತ ಮುಖ್ಯವಾಗಿ ದ್ರೌಪದಿಯ ಸಂದರ್ಭದಲ್ಲಿ ಗಮನಿಸಬೇಕಾದ ವಿಚಾರವೆಂದರೆ ಅಶ್ವತ್ಥಾಮ, ದ್ರೋಣ, ಧೃತರಾಷ್ಟ್ರ, ಕರ್ಣ, ಭೀಷ್ಮರಂತಹ ಉನ್ನತ ವ್ಯಕ್ತಿತ್ವದವರ ಎದುರಿನಲ್ಲಿ ಹಾಗೂ ಸಭಾ ಮಧ್ಯದಲ್ಲಿಯೇ ಹೆಣ್ಣೊಬ್ಬಳಿಗೆ ಈ ರೀತಿಯ ಅಪಮಾನ, ಅವಮಾನಗಳು ಒದಗಿದರೆ, ಹೊರಗಿನ ಸಾಮಾನ್ಯ ಹೆಣ್ಣುಗಳ ಸ್ಥಿತಿ ಏನು ? ಅವರನ್ನು ರಕ್ಷಿಸುವ ಹೊಣೆಗಾರಿಕೆ ಯಾರದು ? ಎಂಬ ನೆಲೆಯಲ್ಲಿಯೂ ಅರ್ಥೈಸಿಕೊಳ್ಳಬಹುದು.

ಕೃಷ್ಣನ ದಯೆಯಿಂದ ಅಕ್ಷಯ ವಸ್ತ್ರವಾಗಿ ದ್ರೌಪದಿಯ ಮಾನ ಸಂರಕ್ಷಣೆಯಾಯಿತು. ಆದರೆ ಕರ್ಣ ಮೊದಲಾದವರ ಜರಿಯುವಿಕೆ ನಿಲ್ಲಲಿಲ್ಲ.

"ಎಲೆಗೆ ಭಜಿಸಾ ಕೌರವಾನ್ವಯ
ತಿಲಕನನು ನಿನ್ನವರ ಮರೆ ನಿ
ನ್ನುಳಿವ ನೆನೆಯಾ ಸಮಯದಲಿ ಕಾಲೋಚಿತ ಕ್ರಮವ
ಬಳಸು ನೀನೆನೆ ಗಜರಿದಳು ಕುರು
ತಿಲಕನನು ತರಿದೊಟ್ಟಿ ರಣದಲಿ
ತಿಳಿರಕುತದಲಿ ದಣಿವನನಿಲಜನೆಂದಳಿಂದುಮುಖಿ"[೧೧೮]

ಕರ್ಣನು ಎಲೆಗೆ ನೀನು ದುರ್ಯೋಧನನನ್ನು ಭಜಿಸು. ನಿನ್ನವರನ್ನು ಮರೆತು ಬಿಡು, ನೀನು ಬದುಕುಳಿಯುವ ರೀತಿಯನ್ನು ಯೋಚಿಸು ಎಂದು ನುಡಿಯಲು, ಕೋಪೋದ್ರಿಕ್ತಳಾದ ದ್ರೌಪದಿಯು ಯುದ್ಧ ಭೂಮಿಯಲ್ಲಿ ಕುರುತಿಲಕನಾದ ದುರ್ಯೋಧನನನ್ನು ತರಿದೊಟ್ಟಿ ಅವನ ತಿಳಿರಕ್ತದಲ್ಲಿ ದಣಿಯುತ್ತಾನೆ 'ಅನಿಲಜ' ಎಂದು ಗರ್ಜಿಸುತ್ತಾಳೆ. ಜೊತೆಗೆ ಕೋಪಗೊಂಡ ಭೀಮನನ್ನು ಧರ್ಮರಾಯ ಅರ್ಜುನರು ಸಮಾಧಾನಪಡಿಸಿದರು. ಇತ್ತ ಕರ್ಣನು ತೊತ್ತಾಗಿರುವ ದ್ರೌಪದಿಯನ್ನು ತೊತ್ತಿರ ಮನೆಗೆ ನೂಕಿಸು ಎನ್ನಲು ದುರ್ಯೋಧನ ತನ್ನ ತಮ್ಮನಾದ ದುಶ್ಯಾಸನನಿಗೆ ಆ ಕೆಲಸವನ್ನು ನೇಮಿಸಿದನು. ಆ ಖಳನು ಅವಳನ್ನು ಹಿಡಿದೆಳೆದಾಗ ಆಕೆ ಹಲುಬುತ್ತ ಮತ್ತೆ ಭೀಷ್ಮಾದಿಗಳನ್ನು ಬೇಡಿಕೊಳ್ಳುತ್ತಾಳೆ.

"ಮಾಣಿಸೈ ಗಾಂಗೇಯ ಗುರು ನಿ
ಮ್ಮಾಣೆಯಡಿ ಕೃಪ ಕೃಪೆಯ ಮಾಡೈ
ರಾಣಿವಾಸಂಗಳಿರ ನಿಲಿಸಿರೆ ನಿಮ್ಮ ಮೈದುನನ
ಪ್ರಾಣವಿದ ಕೊಳ ಹೇಳಿರೌ ಸಾ
ಕೂಣೆಯವ ಹೊರಲಾರೆನೆನುತಾ
ರಾಣಿ ಹಲುಬಿದಳೊಡೆಮುರುಚಿ ಹೆಣಗಿದಳು ಖಳನೊಡನೆ"[೧೧೯]

ನಿಮ್ಮಾಣೆ ಇಟ್ಟು ನನ್ನ ಬಿಡಿಸಯ್ಯಾ ಗಾಂಗೇಯ, ಗುರುವೇ, ಕೃಪೆಯನ್ನು ಮಾಡಿ ಕೃಪಾಚಾರ್ಯರೆ. ರಾಣಿ ವಾಸದಲ್ಲಿರುವವರೆ ನಿಲ್ಲಿಸಿರೇ ನಿಮ್ಮ ಮೈದುನನನ್ನು, ಪ್ರಾಣವನ್ನು ಬೇಕಾದರೆ ತೆಗೆದುಕೊಳ್ಳ ಹೇಳಿ ಎನ್ನುತ್ತಾಳೆ. ಗಂಡಾಗಲಿ, ಹೆಣ್ಣಾಗಲಿ ಪ್ರಾಣಕ್ಕಿಂತ ಮಾನವೇ ಮುಖ್ಯ ಎಂಬ ನಮ್ಮ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತದೆ. ಅದರಲ್ಲೂ ಮಾನ ಕಳೆದುಕೊಂಡ ಹೆಣ್ಣು ಸಮಾಜದೆದುರು ನಿಂದನೆಗೆ ಒಳಗಾಗಬೇಕಾಗುತ್ತದೆ ಎಂಬ ಸಂಕಟದಿಂದ ಸಾಕು ಈ ಕುಂದನ್ನು ಹೊರಲಾರೆ ಎಂದು ಆತನಿಂದ ಬಿಡಿಸಿಕೊಳ್ಳಲು ಹೆಣಗಿದಳು.

"ಮಾವ ನಿಮ್ಮಯ ನೇತ್ರವಂತ
ಭಾರ್ಗವದಲಿ ಬೆರಸಿದೊಡೆ ವಿಜ್ಞಾ
ನಾವಲಂಬನ ದಿಟ್ಟಿ ಬೆಂದುದೆ ನಿಮ್ಮ ಹೃದಯದಲಿ
ದೇವಿಯರಿಗಿದು ಸೊಗಸಲಾ ಸ
ಖ್ಯಾವಳಿಗೆ ಸೇರುವುದಲಾ ನಿ
ರ್ಜೀವರಾದಿರೆ ನೀವೆನುತ ಹಲುಬಿದಳು ಲಲಿತಾಂಗಿ"[೧೨೦]

ಧೃತರಾಷ್ಟ್ರನನ್ನು ಬೇಡಿಕೊಳ್ಳುತ್ತಾಳೆ. ಮಾವ ಹೊರಗಣ್ಣು ಕಾಣದಾದರೂ ಜ್ಞಾನ ಸ್ವರೂಪವಾದ ಒಳಗಣ್ಣು ಬೆಂದು ಹೋಯಿತೆ? ದೇವಿಯರಿಗೆ ಇದು ಸೊಗಸುಂಟು ಮಾಡುವುದೆ, ನೀವೆಲ್ಲರೂ ನಿರ್ಜೀವರಾದಿರೆ ಎಂದು ಬೇಡಿಕೊಳ್ಳುತ್ತಾಳೆ. ಮುಂದುವರಿದು

"ಕ್ಷಿತಿಯೆ ಬಿಡಿಸಾ ಸೆರಗನೆಲೆ ಪಾ
ರ್ವತಿಯೆ ತನ್ನದು ಧರ್ಮವಾದೊಡೆ
ಗತಿ ತನಗೆ ನೀವಾಗಿರೌ ಕಮಲಾದಿಶಕ್ತಿಗಳೆ
ಸತಿಯಹಲ್ಯಾದಿತಿ ವರಾರುಂ
ಧತಿ ಮಹಾ ಮಾಯಾದಿ ದೇವ
ಪ್ರತತಿ ಬಿಡಿಸಿರೆ ಸೆರಗನೆಂದೊರಲಿದಳು ಪಾಂಚಾಲೆ"[೧೨೧]

ತನ್ನ ಸೆರಗನ್ನು ಬಿಡಿಸುವಂತೆ ಭೂಮಿ ತಾಯಿಯನ್ನು, ಪಾರ್ವತಿಯನ್ನು ಹಾಗೂ ಕಮಲಾದಿ ಶಕ್ತಿಗಳನ್ನು ಬೇಡಿಕೊಳ್ಳುತ್ತಾಳೆ. ಅಹಲ್ಯೆ, ಅರುಂಧತಿ ಮೊದಲಾದವರ ಸೆರಗ ಬಿಡಿಸಿದಂತೆ ನನ್ನಯ ಈ ಕಷ್ಟವನ್ನು ಪರಿಹರಿಸಿ ಎಂದು ಕೇಳಿಕೊಳ್ಳುತ್ತಾಳೆ.

"ಅಂಧನೊಬ್ಬನೆ ಮಾವ ನೀವೇ
ನಂಧರಾದಿರೆ ಪಾಂಡು ಕರುಣಾ
ಸಿಂಧು ನೀ ಸೈರಿಸುವುದೇ ತನ್ನೀ ವಿಪತ್ತಿನಲಿ
ಅಂಧಕಾಸುರಮಥನ ನೀನೇ
ಬಂಧಿಸಿದೆಲಾ ಪೂರ್ವ ವರ ಸಂ
ಬಂಧವನು ನೀ ಸೆರಗ ಬಿಡಿಸೆಂದೊರಲಿದಳು ತರಳೆ"[೧೨೨]

ನನ್ನಯ ಮಾವನು ಒಬ್ಬ ಕುರುಡನು ನಿಜ. ಆದರೆ ನೀವೂ ಕುರುಡರಾದಿರೆ. ಪಾಂಡು ? ಕರುಣಾಸಿಂಧು ನನ್ನ ವಿಪತ್ತಿನಲ್ಲಿ ನೀವೂ ಸೈರಿಸುವುದೇ ಅಂಧಕಾಸುರ ಮಥನ ಶಿವ ಕಾಪಾಡು ಎಂದು ಹಲುಬಿದಳು.

"ಸೊಸೆಯಲಾ ದೇವೇಂದ್ರಯೆನ್ನಯ
ಘಸಣಿ ಯಾರದು ಹಿರಿಯ ಮಾವನ
ವಶವಲಾ ತ್ರೈಜಗದ ಜೀವರ ಜೀವ ವಿಭ್ರಮಣ

ಉಸುರು ನಿನ್ನಾಧೀನವೀ ದು
ರ್ವ್ಯಸನಿಗಳ ಕೊಂಡಾಡುವರೆ ಕರು
ಣಿಸು ಸಮೀರಣಯೆಂದು ಹಲುಬಿದಳಶ್ವಿನೇಯರಿಗೆ"[೧೨೩]

ದೇವೇಂದ್ರನನ್ನು ಕುರಿತು ಬೇಡಿಕೊಳ್ಳುತ್ತಾಳೆ. ನಾನು ನಿಮ್ಮ ಸೊಸೆಯಲ್ಲವೆ. ನನ್ನಯ ಕಷ್ಟ ಯಾರದು? ಮೂರು ಲೋಕದ ಜೀವಿಗಳ ರಕ್ಷಣೆ ಹಿರಿಯ ಮಾವನ ವಶವಲ್ಲವೆ. ಈ ಲೋಕದ ಉಸುರು ನಿನ್ನಾಧೀನವಲ್ಲವೆ. ಈ ದುರ್ವ್ಯಸನಿಗಳನ್ನು ಕೊಂಡಾಡುವುದೇ ಕರುಣಿಸು ಸಮೀರಣ ಎಂದು ಅಶ್ವಿನೀ ದೇವತೆಗಳನ್ನು ಬೇಡಿಕೊಂಡಳು.

"ಮಾವದಿರು ಮೊದಲಾದ ದಿಕ್ಪಾ
ಲಾವಳಿಗೆ ನಮಿಸಿದೆನು ನೈದಿಲ
ತಾವರೆಯ ಮಿತ್ರರಿಗೆ ಮಂಡೆಯೊಳಿಟ್ಟೆನಂಜುಳಿಯ
ಕಾವುದೆನ್ನನು ಹೆಂಗುಸಲ್ಲಾ
ಹಾವು ಹಲಬರ ನಡುವೆ ಸಾಯದು
ದೇವರಿಗೆ ದೂರೈದಲೆಂದೊರಲಿದಳು ಲಲಿತಾಂಗಿ"[೧೨೪]

ಮಾವಂದಿರು ಮೊದಲಾದ ದಿಕ್ಪಾಲಕರಿಗೆ ನಮಿಸಿದೆನು. ನೈದಿಲೆಯ ತಾವರೆಯ ಮಿತ್ರರಿಗೆ ಮಂಡೆಯ ಮೇಲೆ ಅಂಜುಳಿಯನಿಟ್ಟೆನು. ಕಾಪಾಡಬೇಕು ನನ್ನನ್ನು. ನಾನು ಹೆಂಗಸಲ್ಲವೇ? ಕಾಪಾಡುವುದು ನಿಮ್ಮ ಕರ್ತವ್ಯವಲ್ಲವೆ? ಎಂದು ಹಲವು ಪರಿಯಲ್ಲಿ ಹಂಬಲಿಸಿದಳು. ಕೊನೆಗೆ ರಕ್ಷಣೆ ಕಾಣದಿರಲು 'ಹಾವು ಹಲವರ ನಡುವೆ ಸಾಯುವುದಿಲ್ಲ', ದೇವರಿಗೆ ಮುಟ್ಟಲಿ ದೂರು ! ಎಂದು ನಿಟ್ಟುಸಿರು ಬಿಟ್ಟಳು. ಈ ವಿಚಾರಗಳೆಲ್ಲವು ರಕ್ಷಣೆಗಾಗಿ ಬೇಡಿಕೊಳ್ಳುತ್ತಿರುವ ದ್ರೌಪದಿಯ ಸಂಘರ್ಷಗಳನ್ನು ನಮಗೆ ಮನಗಾಣಿಸುತ್ತವೆ.

"ಎಲೆಗೆ ನಿನ್ನವರೇನ ಮಾಡುವ
ರೊಲೆಯೊಳಡಗಿದ ಕೆಂಡವಿವರ
ಗ್ಗಳಿಕೆ ನಂದಿದುದೆನುತ ಮುಂಜೆರಗೆತ್ತಿ ಮಾನಿನಿಗೆ
ಖಳನು ತೊಡೆಗಳ ತೋರಿಸಿದೊಡತಿ
ಮುಳಿದು ಕೊಟ್ಟಳು ಶಾಪವನು ನಿ
ನ್ನಳಿವು ತೊಡೆಯಲಿ ಮುಗಿವುದೆಂದಳು ಮುಗುದೆ ಖಾತಿಯಲಿ"[೧೨೫]

ದುರ್ಯೋಧನನು ಎಲೆಗೆ, ನಿನ್ನವರು ಏನು ಮಾಡುತ್ತಾರೆ. ಅವರು ಒಲೆಯಲ್ಲಿ ಅಡಗಿರುವ ಕೆಂಡದಂತೆ. ಅವರ ಅಗ್ಗಳಿಕೆ ನಂದಿ ಹೋಯಿತು ಎಂದು ಹೇಳುತ್ತ ಮುಂಜೆರಗನ್ನೆತ್ತಿ ದ್ರೌಪದಿಗೆ ತನ್ನ ತೊಡೆಗಳನ್ನು ತೋರಿಸಿದನು. ಅಲ್ಲಿಯವರೆಗು ಅದುಮಿಟ್ಟಿದ್ದ ಸಹನೆಯ ಕಟ್ಟೆ ಒಡೆಯಿತು. ದ್ರೌಪದಿ ದುರ್ಯೋಧನನಿಗೆ ಶಾಪವನ್ನು ನೀಡಿಯೇ ಬಿಟ್ಟಳು. ಕೋಪದಿಂದ 'ನಿನ್ನ ಸಾವು

ತೊಡೆಯಲ್ಲಿ ಮುಗಿಯುವುದು' ಎಂದು ಶಪಿಸಿದಳು. ಇಲ್ಲಿ ಆಕೆಯ ಸಹನೆ ಮೀರಿ ಆತನ ದುರಂತಕ್ಕೆ ಅಡಿಗಲ್ಲಾಗುವಂತೆ ಶಾಪವನ್ನಿತ್ತಳು. ಅಲ್ಲಿಯವರೆಗು ತಡೆದಿಟ್ಟಿದ್ದ ಕೋಪವನ್ನು ಒಮ್ಮೆಲೆ ಹೊರಹಾಕಿದವರಂತೆ ಭೀಮಾರ್ಜುನರು ಕೂಡ ಶಪಥವನ್ನುಗೈದರು.

ಇದರಿಂದಾಗಿ ಉತ್ಪಾತಗಳು ಕಾಣಿಸಿಕೊಂಡವು. ಭೀಷ್ಮನು ಧೃತರಾಷ್ಟ್ರನನ್ನು ಕುರಿತು ಇದು 'ಮಹಾ ಅನರ್ಥಕ್ಕೆ ದಾರಿ ಮಾಡಿಕೊಡುತ್ತದೆ. ಪಾಂಡವ ಮಹಿಳೆಯನ್ನು ಸಂತೈಸು' ನಡೆ ಎಂದನು. ಅದರಂತೆ ಬಂದ ಧೃತರಾಷ್ಟ್ರ ದ್ರೌಪದಿಯನ್ನು 'ಮಗಳೇ, ವಿಷಾದವನ್ನು ಬಿಡು, ನನ್ನ ಮಾತುಗಳನ್ನು ಮನ್ನಿಸು, ಈ ದುಷ್ಪರ ನುಡಿಗಳು ಬೇಡ, ನಿನಗು ದುಸ್ಸಳೆಗೂ ಭೇದವಿಲ್ಲ. ಎಂದು ವಿಪತ್ತು ಒದಗಿ ಬಂದಾಗ ಆಕೆಯನ್ನು ಆದರಿಸಿ ನುಡಿಯುತ್ತಾನೆ. ಇದಕ್ಕೆ ದ್ರೌಪದಿ ಕೊಡುವ ಉತ್ತರ ಅದ್ಭುತ ಹಾಗೂ ಅರ್ಥಪೂರ್ಣವಾದುದು.

"ಮಗಳಹೆನು ಸೊಸೆಯಹೆನು ನಿಮ್ಮಯ
ಮಗನ ಕಣ್ಣಿಗೆ ಕಾಳಕೂಟದ
ಮಗಳೊ ಸೊಸೆಯೋ ನಾದಿನಿಯೊ ಬೆಸಗೊಳ್ಳಿ ನಿಮ್ಮವನ
ಅಗಡು ಮಾಡಿದ ನಿಮ್ಮ ಮಕ್ಕಳ
ವಿಗಡತನಕಂಜಿದರೊ ದುರಿತದ
ಸೊಗಡಿಗಂಜಿದರೋ ಪೃಥಾ ಸುತರೆಂದಳಿಂದುಮುಖಿ"[೧೨೬]

"ದ್ರೌಪದಿ ಇಲ್ಲಿ ಕುರುವಂಶದ ಸಂಬಂಧ ವಲಯದ ಹೊರಗೆ ನಿಂತು ಮಾತಾಡುತ್ತಿದ್ದಾಳೆ. ಸಂಬಂಧಗಳನ್ನು ಹರಿದುಕೊಂಡಾಗ ದ್ರೌಪದಿಯ ವ್ಯಕ್ತಿತ್ವ ರೂಪಾಂತರ ಪಡೆಯುತ್ತದೆ. 'ನಿನ್ನಯ ಮಗನ ಕಣ್ಣಿಗೆ ಕಾಳಕೂಟದ ಮಗಳೋ' ಎಂದು ಕೇಳಿದಾಗ ಇನ್ನೊಂದು ವಿರುದ್ಧ ಸ್ವರೂಪದ ಸಂಬಂಧ ಹುಟ್ಟಿಕೊಳ್ಳುತ್ತದೆ. ಒಬ್ಬ ದುರ್ಯೋಧನನಿಗೆ ಅವಳು ಮಗಳು, ಸೊಸೆ, ನಾದಿನಿ ಎಲ್ಲ ಆದಾಗ ದ್ವೇಷದ ಕಾಳಕೂಟ ಅವನೊಬ್ಬನಿಗೆ ಮಾತ್ರ ಮೀಸಲಾಗಿದೆ ಎಂಬ ಧ್ವನಿ ಇಲ್ಲಿ ಹೊರಡುತ್ತದೆ. ಆದರೆ 'ಕಾಳಕೂಟದ ಮಗಳು' ಎಂಬ ರೂಪಕ ಎಷ್ಟೇ ನಿಷೇಧಾತ್ಮಕವಾಗಿದ್ದರೂ ಸಂಬಂಧಗಳಿಂದ ಮಾತ್ರ ಅರ್ಥಪೂರ್ಣವಾಗಬೇಕಾದ ಪ್ರಪಂಚವೊಂದು ಇಲ್ಲಿದೆ ಎಂದೆನಿಸುತ್ತದೆ. ವೈಯಕ್ತಿಕ ಸಂಬಂಧಗಳನ್ನು ವಿಚ್ಛೇದಗೊಳಿಸಿ, ವಿಂಗಡಿಸಿ, ಬೇರೆ ಸಂಬಂಧಗಳನ್ನು–ಕಾಲ್ಪನಿಕ ಸಂಬಂಧಗಳನ್ನು–ನಿರ್ಮಿಸುತ್ತ ಅರ್ಥ ವ್ಯಾಪ್ತಿಯನ್ನು ವಿಸ್ತರಿಸುವುದು 'ಕನ್ನಡ ಭಾರತ'ದ ಶೈಲಿಯ ವಿಶೇಷತೆಗಳಲ್ಲೊಂದಾಗಿದೆ"[೧೨೭] ಎಂಬ ಈ ಚಿಂತನಾ ಕ್ರಮವು ಅಲ್ಲಿನವರೆಗೂ ಗೌಣವಾಗಿದ್ದ, ಮರೆತಂತಿದ್ದ ಸಂಬಂಧಗಳನ್ನು ದ್ರೌಪದಿಯು ನೆನಪು ಮಾಡುತ್ತಲೆ ತನ್ನ ಮನದಲ್ಲಿನ ಕೋಪದ ಉಗ್ರ ಸ್ವರೂಪಗಳನ್ನು ತೆರೆದಿಡುತ್ತಾಳೆ.

ನಾನು ನಿಮಗೆ ಮಗಳಾಗಿದ್ದರೂ, ಸೊಸೆಯಾಗಿದ್ದರೂ ಸಹ ನನ್ನ ರಕ್ಷಣೆಗೆ ಬರಲಿಲ್ಲ. ನಿನ್ನ ಮಗ ಕೂಡ ಈ ಸಂಬಂಧಗಳನ್ನು ವಿಚಾರಿಸಿ ನೋಡಲಿಲ್ಲ. ಪಾಪ ಕಾರ್ಯವನ್ನು ಮಾಡಿದ,

ಆದರೆ ನಾನು ನೊಂದು ನುಡಿದ ಮಾತಿಗೆ ಅಳುಕಿ ನನ್ನನ್ನು ಸಂತೈಸಲು ಬಂದಿರುವೆ. ಅದಕ್ಕೆ ಕಾರಣ ನಿನ್ನ ಮಕ್ಕಳನ್ನು ಉಳಿಸಿಕೊಳ್ಳಲೋ ಅಥವಾ ನೀವು ಮಾಡಿದ ಪಾಪದ ಜ್ಞಾನೋದಯಕ್ಕೋ ಎಂಬರ್ಥದಲ್ಲಿ ನುಡಿಯುತ್ತಾಳೆ. ಕುಮಾರವ್ಯಾಸ ದ್ರೌಪದಿಯನ್ನು ಕುರಿತು ಮಾತನಾಡುವಾಗ ಅಲ್ಲಲ್ಲಿ 'ಅಬಲೆ' ಎಂಬ ಪದವನ್ನು ಬಳಸಿದ್ದಾನೆ. ಆದರೆ ಕೆಲವು ಸಂದರ್ಭಗಳಲ್ಲಿ ದ್ರೌಪದಿ ಆ ಪದದ ಅರ್ಥದ ಪಾತಳಿಯನ್ನು ಮೀರಿ ತಾನು ವ್ಯವಸ್ಥೆ, ಪುರುಷ ಹಾಗೂ ಪ್ರಭುತ್ವವನ್ನು ಅತ್ಯಂತ ಉಗ್ರವಾಗಿ ಪ್ರತಿಭಟಿಸುತ್ತಾಳೆ ಹಾಗೂ ಪ್ರತಿರೋಧಿಸುತ್ತಾಳೆ.

ಮುಂದುವರೆದು ಧೃತರಾಷ್ಟ್ರನು ಮೆಲು ಮಾತುಗಳಲ್ಲಿ ದ್ರೌಪದಿಯನ್ನು ಸಮಾಧಾನಪಡಿಸಲು ಯತ್ನಿಸುತ್ತಾನೆ. ನೀವು ನಿರ್ಮಲರು, ಪಾಪಿಗಳು ಹಾಗೂ ದುರ್ಮತಿಗಳಾದ ಕೌರವರು ಕೆಟ್ಟ ಕೆಲಸವನ್ನು ಮಾಡಿದರು. ಅದನ್ನು ಮರೆಯಮ್ಮಾ, ಎನ್ನುತ್ತ ಅವಳ ಕೋಪವನ್ನು ನಯದಲ್ಲಿ ಪರಿಹರಿಸುತ್ತ, ಅನ್ಯಾಯವಾಗಿ ನಿಮ್ಮನ್ನು ನೋಯಿಸಿದೆ. ಅದನ್ನು ನೆನೆಯಬೇಡ. ತಾಯೇ ವರವನ್ನು ಕೇಳಿಕೋ ಎನ್ನಲು ಆಕೆ 'ಭೂಮೀಶ್ವರರ ದಾಸ್ಯ ಕಳೆಯಲಿ' ಎಂದೂ, ಭೀಮ, ನಕುಲ, ಸಹದೇವರಿಗೆ ಶಸ್ತ್ರಾಸ್ತ್ರ, ಗಜ, ರಥ ತುರಗಗಳನ್ನು ಕೊಡಿ ಎಂದು ಎರಡು ವರಗಳನ್ನು ಬೇಡುತ್ತಾಳೆ. ಅದರಂತೆ ಧೃತರಾಷ್ಟ್ರನು ಎರಡೂ ವರಗಳೂ ಕೂಡ ಈಡೇರಿದವು. ನಿನ್ನ ಮನಸ್ಸಿನ ಆಸೆ ಪೂರ್ತಿಯಾಗಲಿ, ಮತ್ತೇನು ಬೇಕೆಂದು ಕೇಳಲು ದ್ರೌಪದಿ ಈ ರೀತಿ ಉತ್ತರಿಸುತ್ತಾಳೆ.

"ವರವೆರಡು ಸಂದವು ಮನೋರಥ
ಭರಿತವಾಗಲಿ ಮತ್ತೆ ಹೇಳೆನೆ
ತರುಣಿಯೆಂದಳು ಧರ್ಮಶಾಸ್ತ್ರ ಪ್ರಕಟ ಪದ್ಧತಿಯ
ವರವು ವೈಶ್ಯರಿಗೊಂದು ನೃಪಸತಿ
ಗೆರಡು ನೃಪರಿಗೆ ಮೂರು ಭೂದೇ
ವರಿಗೆ ನೂರಧಿಕಾರವೆಂದಳು ನಗುತ ಪಾಂಚಾಲೆ"[೧೨೮]

"ವರವು ವೈಶ್ಯರಿಗೆ ಒಂದು, ಕ್ಷತ್ರಿಯ ಸತಿಗೆ ಎರಡು, ಬ್ರಾಹ್ಮಣರಿಗೆ ನೂರು. ಇದು ಅವರವರ ಅಧಿಕಾರ. ಹೆಚ್ಚು ಆಸೆ ಮಾಡಬಾರದು. ಅತಿ ಆಸೆ ನಾಶಕ್ಕೆ ಕಾರಣ ಮಾವಾ, ಈ ವರ ಭಾರಿಯಾದರೆ ಬೇಡ, ಕಡಮೆಯದನ್ನು ಕರುಣಿಸಿ"[೧೨೯] ಎಂಬ ಮಾತುಗಳು ದ್ರೌಪದಿಯ ಪ್ರಾಜ್ಞ ಮನಸ್ಸಿಗೆ ಹಿಡಿದ ಕನ್ನಡಿಯಾಗಿರುವಂತೆಯೆ, ಅವಳ ಮನದ ಸಂಘರ್ಷಗಳಿಗೂ ಕನ್ನಡಿ ಹಿಡಿದಿವೆ. ಅಲ್ಲದೆ ದ್ರೌಪದಿಗೆ ಧರ್ಮಶಾಸ್ತ್ರಗಳ ಪ್ರಾವಿಣ್ಯತೆ ಇತ್ತೆಂಬುದು ಸ್ಪಷ್ಟವಾಗುತ್ತದೆ. ಪಾಂಡಿತ್ಯದ ಜೊತೆಗೆ ಸಂಬಂಧಗಳ ಬೆಲೆಯನ್ನೂ ಅರಿತವಳಾಗಿದ್ದಾಳೆ.

೩.೩.೨.೩. ಕೃಷ್ಣನು ಸಂತೈಸಲೆಂದು ಬಂದಾಗಿನ ಸಂದರ್ಭ

ಪಾಂಡವರು ಜೂಜಿನಲ್ಲಿ ಸಮಸ್ತವನ್ನೂ ಸೋತು ವನವಾಸ ಪ್ರಾಪ್ತಿಯಾದ ಸಂಗತಿ ದ್ವಾರಕಾಪುರಕ್ಕೆ ಮುಟ್ಟಿತು. ಕೃಷ್ಣನು ಪಾಂಡವರನ್ನು ಸಂತೈಸಲೆಂದು ಪಾಂಡವರಿದ್ದ ಅರಣ್ಯಕ್ಕೆ ಬಂದಾಗ ದ್ರೌಪದಿ

ಆತನ ಪಾದಗಳಿಗೆ ಎರಗಿ ತನ್ನ ದುಃಖವನ್ನು ಹೇಳಿಕೊಳ್ಳುತ್ತಾಳೆ. ಆ ಸಂದರ್ಭದಲ್ಲಿ ತನ್ನ ಪತಿಗಳನ್ನು ಕುರಿತು ಹೇಳುವ ಈ ಮಾತುಗಳು ಗಮನಾರ್ಹವಾದವು.

"ಪತಿಗಳಿವರಂಜಿದರು ಧರ್ಮ
ಸ್ಥಿತಿಯನರಿದವರಳುಕಿದರು ತ
ತ್ಪಿತೃ ಪಿತಾಮಹ ಗುರುಗಳಡಗಿದರವನಿಯಲಿ ಬಗಿದು
ಗತಿವಿಹೀನೆಗೆ ಕೃಷ್ಣ ನೀನೇ
ಗತಿಯೆನುತು ಬಾಯ್ಬಿಡಲು ಲಜ್ಜಾ
ಸ್ಥಿತಿಯನುಳುಹಿದ ದೈವ ನೀ ಮೈದೋರಿದೈ ತನಗೆ"[೧೩೦]

ನನ್ನ ಪತಿಗಳಾದ ಇವರು ಅಂಜಿದರು. ಧರ್ಮಸ್ಥಿತಿಯನ್ನು ಅರಿತವರು ಅಳುಕಿದರು. ಪಿತೃ ಪಿತಾಮಹರು, ಗುರುಗಳು ಭೂಮಿಯನ್ನು ಬಗೆದು ಅಡಗಿಕೊಂಡರು. ಗತಿವಿಹೀನೆಯಾದ ನನಗೆ ನೀನೆ ಗತಿ ಎನ್ನಲು ನನ್ನನ್ನು ಉಳಿಸಿದ ದೈವ ನೀನು ಎನ್ನುತ್ತಾಳೆ. ಇಲ್ಲಿ ಆಕೆ ಹೇಳುವ ಮಾತುಗಳು ತನ್ನ ಪತಿಗಳು ಹಾಗೂ ಪಿತೃ ಪಿತಾಮಹರ ಆ ಸಂದರ್ಭದ ವರ್ತನೆಗಳನ್ನು ಸೂಕ್ಷ್ಮವಾಗಿ ಅವಲೋಕಿಸುವುದರ ಜೊತೆಗೆ ಎಂತಹ ವಿಷಮ ಸಂದರ್ಭದಲ್ಲಿ ಕೃಷ್ಣ ಅವಳಿಗೆ ನೆರವಾದ ಎಂಬುದನ್ನು ತಿಳಿಸುತ್ತ ಕೃತಜ್ಞತೆಯನ್ನು ಸಮರ್ಪಿಸುತ್ತಾಳೆ.

೩.೩.೨.ಈ. ಸೌಗಂಧಿಕ ಪುಷ್ಪ ಪ್ರಸಂಗ

ಕಾಡಿನಲ್ಲಿ ಪಾಂಡವರು ದಿನಗಳನ್ನು ಕಳೆಯುತ್ತಿರಲು ಒಮ್ಮೆ ದ್ರೌಪದಿಗೆ ಸೌಗಂಧಿಕ ಪುಷ್ಪದ ಪರಿಮಳವು ತಾಗಿ ಅದನ್ನು ಪಡೆಯಬೇಕೆಂಬ ಆಸೆಯಾಯಿತು. ಆ ಸಂದರ್ಭವನ್ನು ಕವಿ ಹೀಗೆ ತಿಳಿಸುತ್ತಾನೆ.

"ಮೇಲುರತದಲಿ ಪರಿಮಳದ ವೈ
ಹಾಳಿಯಲಿ ಸಲೆ ಬೀದಿವರಿದು ಚ
ಡಾಳಿಸುವ ಸೊಗಸಿನಲಿ ಸೊಂಪಾದಳು ಸರೋಜಮುಖಿ
ಸೋಲಿಸಿತಲಾ ಚೂಣಿಯಲಿ ಸಂ
ಪಾಳಿಸಿದ ಸೌಗಂಧವಿನ್ನು ವಿ
ಶಾಲ ಪದುಮವದೆಂತುಟೆನುತವೆ ತೂಗಿದಳು ಶಿರವ"[೧೩೧]

ಈ ಪದ್ಯದಲ್ಲಿ ಶ್ರೇಷ್ಠವಾದ ಸೌಗಂಧಿಕ ಪುಷ್ಪದ ಪರಿಮಳಕ್ಕೆ ಮನಸೋತ ದ್ರೌಪದಿಯ ಮನಸ್ಥಿತಿಯನ್ನು ತಿಳಿಸುತ್ತಾನೆ. ಇಲ್ಲಿ ಸಹಜವಾದ ಹೆಣ್ಣಿನ ಆಸೆ ಹಾಗೂ ಭಾವನೆಗಳಿವೆ. ಹೆಣ್ಣುಮಕ್ಕಳಿಗೆ ಹೂವುಗಳೆಂದರೆ ಪಂಚಪ್ರಾಣ. ಅದರಲ್ಲಿಯೂ ಸೌಗಂಧಿಕ ಪುಷ್ಪವೆಂದರೆ ಬಯಕೆ ಇನ್ನಷ್ಟು ಇಮ್ಮಡಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ದ್ರೌಪದಿಯ ಮನಸ್ಸು ಆ ಹೂವಿನ ಕಡೆ ಆಕರ್ಷಿತವಾಗಿದೆ. ನಂತರ ಯಾರಿಗೆ ಹೇಳಿದರೆ ಅದನ್ನು ತಂದು ಕೊಡುವರು ಎಂದು ಯೋಚಿಸುತ್ತಾಳೆ.

"ಅರಸನಲಿ ಮೇಣ್ ನಕುಲ ಸಹದೇ
ವರಲಿ ತನ್ನ ಮನೋರಥಕೆ ವಿ
ಸ್ತರಣವಾಗದು ನುಡಿವಡಿಲ್ಲರ್ಜುನ ಸಮಿಪದಲಿ
ಅರಿಭಯಂಕರ ಭೀಮನೇ ಗೋ
ಚರಿಸುವನಲಾಯೆನುತಲಾತನ
ಹೊರೆಗೆ ಬಂದಳು ನಗುತ ನುಡಿದಳು ಮಧುರ ವಚನದಲಿ"[೧೩೨]

ಅರಸನಿಂದಾಗಲಿ ನಕುಲ ಸಹದೇವರಿಂದಾಗಲಿ ನನ್ನ ಮನೋರಥವು ಈಡೇರುವುದಿಲ್ಲ. ಅರ್ಜುನನಲ್ಲಿ ಹೇಳೋಣವೆಂದರೆ ಆತ ಸಮೀಪದಲ್ಲಿಲ್ಲ. ಶತ್ರು ಭಯಂಕರನಾದ ಭೀಮನೇ ಗೋಚರಿಸುತ್ತಿರುವನು ಎಂದುಕೊಂಡು ಆತನಲ್ಲಿ ತನ್ನ ಮನದ ವ್ಯಥೆಯನ್ನು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತಾಳೆ. ಇಲ್ಲಿ ಮುಖ್ಯವಾಗಿ ಗಮನಿಸುವಂತಹದ್ದು ತನ್ನ ಗಂಡಂದಿರ ಬಲ, ಬಲಹೀನತೆಗಳನ್ನು ಚೆನ್ನಾಗಿ ಅರಿತಿದ್ದಾಳೆ. ಹಾಗೆಯೇ ಭೀಮನ ಮೇಲಿದ್ದ ನಂಬಿಕೆಯನ್ನು ಇಲ್ಲಿ ಕಾಣಬಹುದು. ಹಿಂದೆಯೂ ಕುರುಸಭೆಯಲ್ಲಿ ಅವಮಾನಕ್ಕೊಳಗಾದಾಗ ದುರ್ಯೋಧನನನ್ನು ಅನಿಲಜ ವದಿಸುತ್ತಾನೆ ಎಂದು ಗರ್ಜಿಸಿರುತ್ತಾಳೆ. ಹೂವನ್ನು ಸ್ತ್ರೀ ಬಯಸುವುದು ಸಹಜ. ಅದನ್ನು ತನ್ನ ಗಂಡನಿಂದ ಪಡೆಯುವುದೂ ಸಹಜ. ಆದರೆ ಐವರಲ್ಲಿ ಯಾರನ್ನು ಕೇಳಬೇಕೆಂದು ಯೋಚಿಸುತ್ತಾಳಲ್ಲ ಅದು ಚರ್ಚಿಸತಕ್ಕ ವಿಚಾರ. ಅವಳ ಬಯಕೆಯನ್ನು ಈಡೇರಿಸುವಲ್ಲಿ ಯಾರು ಸಮರ್ಥರು ಎಂದು ನಿರ್ಧರಿಸುತ್ತಾಳೆಂದರೆ ಅವಳು ಯಾರಲ್ಲಿ ವಿಶ್ವಾಸವಿಟ್ಟಿದ್ದಳು ಎಂಬುದು ತಿಳಿಯುತ್ತದೆ. ಧರ್ಮರಾಯ, ನಕುಲ, ಸಹದೇವರು ಇವಳ ಬಯಕೆ ಈಡೇರಿಸುವುದಿಲ್ಲ ಎಂದರೆ ಅವರು ಅಸಮರ್ಥರೆಂದು ಹೇಳುತ್ತಿದ್ದಾಳೆಯೇ? ಅಥವಾ ಇವಳ ಭಾವ, ಬಯಕೆಗಳಿಗೆ ಬೆಲೆ ಕೊಡುವುದಿಲ್ಲ ಎಂದು ಹೇಳುತ್ತಿದ್ದಾಳೆಯೆ? ಎಂಬ ವಿಚಾರಗಳು ಗಮನಿಸತಕ್ಕವು.

೩.೩.೨.೮. ದೂರ್ವಾಸಾತಿಥ್ಯದ ಸಂದರ್ಭದಲ್ಲಿನ ಸಂಘರ್ಷಗಳು

'ವಿಕ್ರಮಾರ್ಜುನ ವಿಜಯ'ದಲ್ಲಿ ದೂರ್ವಾಸನು ಪಾಂಡವರಿರುವ ವನಕ್ಕೆ ಬಂದು ಆತಿಥ್ಯವನ್ನು ಸ್ವೀಕರಿಸುವ ಭಾಗವಿಲ್ಲ. 'ಕುಮಾರವ್ಯಾಸ ಭಾರತ'ದಲ್ಲಿ ಮಾತ್ರ ಈ ಭಾಗ ಕಂಡುಬರುತ್ತದೆ. ಪಾಂಡವರು ಅರಣ್ಯದಲ್ಲಿ ಎಂಟು ವರ್ಷಗಳನ್ನು ಕಳೆದರು. ನಂತರ ಯಮುನಾ ತೀರಕ್ಕೆ ಬಂದು ಅಲ್ಲಿ ಕಾಲವನ್ನು ದೂಡುತ್ತಿದ್ದರು. ಇತ್ತ ವೈಭವದಿಂದ ರಾಜ್ಯಭಾರ ಮಾಡುತ್ತಿದ್ದ ದುರ್ಯೋಧನನ ಹಸ್ತಿನಾಪುರವನ್ನು ತನ್ನ ಸಮೂಹದೊಡನೆ ದೂರ್ವಾಸ ಮುನಿ ಪ್ರವೇಶಿಸಿದನು. ದುರ್ಯೋಧನ ದೂರ್ವಾಸರನ್ನು ಪೂಜಿಸಿ ಅವರಿಗೆ ಸತ್ಕರಿಸಿದನು. ದೂರ್ವಾಸ ಮುನಿಯು ಸಂತೋಷದಿಂದ 'ಮೆಚ್ಚಿದೆ, ನಿನಗೆ ಏನು ಬೇಕೋ ಬೇಡಿಕೋ ಮಗನೆ' ಎಂದು ವರವನ್ನಿತ್ತನು. ಈ ಸಮಯದಲ್ಲಿ ಏನೂ ತಿಳಿಯದವನಂತೆ ಕೌರವನು "ಇನಿಬರು ವೆರಸಿ ಪಾಂಡವರರಸಿಯುಣಲೊಡ ನಿರದೆ ಕವಳವ ಬೇಡಿಯಭ್ಯಾಗತರು ನೀವೆಂದ"[೧೩೩]. ಅಂದರೆ 'ನೀವೆಲ್ಲರನ್ನು ಕರೆದುಕೊಂಡು ಪಾಂಡವರಿರುವ

ಆಶ್ರಮಕ್ಕೆ ಹೋಗಿ ಪಾಂಡವರ ಅರಸಿ ಊಟ ಮಾಡಿದ ಮೇಲೆ ಅಭ್ಯಾಗತರಾಗಿ ಊಟವನ್ನು ಬೇಡಬೇಕು' ಎಂಬ ವರವನ್ನು ಕೇಳಿಕೊಳ್ಳುತ್ತಾನೆ. ದೂರ್ವಾಸ ಅದರಂತೆ ಪಾಂಡವರಿರುವಲ್ಲಿಗೆ ಹೊರಡುತ್ತಾನೆ. ಇಲ್ಲಿ ದುರ್ಯೋಧನನ ಎಣಿಕೆ ಏನೆಂದು ತಿಳಿದು ಗಾಂಗೇಯ ವಿದುರಾದಿಗಳು ಹೆದರಿದರು. ಏಕೆಂದರೆ ದೂರ್ವಾಸ ಮುನಿ ಮೊದಲೇ ಮಹಾನ್ ಕೋಪಿಷ್ಠ. ಅಂತಹವನು ದ್ರೌಪದಿಯ ಊಟವಾದ ನಂತರ ಹೋಗಿ ಅವರಲ್ಲಿ ಊಟವನ್ನು ಬೇಡಿ ಅವರನ್ನು ಇನ್ನ್ಯಾವ ವಿಪತ್ತಿಗೆ ಈಡು ಮಾಡುವನೋ ಎಂದು ಕಳವಳಕ್ಕೊಳಪಟ್ಟರು. ಇಲ್ಲಿ ಕೃಷ್ಣನ ಮಹಿಮೆಯ ಪ್ರದರ್ಶನ ಹಾಗೂ ದ್ರೌಪದಿಯ ಸತ್ವ ಪರೀಕ್ಷೆಯೂ ಇದೆ. ಇದರ ನಡುವೆ ಅವಳ ಮನದ ತಳಮಳದ ಹೊಯ್ದಾಟವನ್ನೂ ಕಾಣಬಹುದು.

ದುರ್ಯೋಧನನಿಗೆ ಮಾತುಕೊಟ್ಟಂತೆ ದೂರ್ವಾಸನು ಪಾಂಡವರಿರುವಲ್ಲಿಗೆ ಬಂದು ನನ್ನ ಹಸಿವೆಂಬ ಬೆಂಕಿಯನ್ನು ತಣಿಸಬೇಕೆನ್ನಲು ಧರ್ಮರಾಯ ಒಪ್ಪಿಕೊಳ್ಳುತ್ತಾನೆ. ಆದರೆ ದ್ರೌಪದಿಯ ಊಟವಾಗಿ ಏನೂ ಉಳಿದಿಲ್ಲವೆಂಬುದು ತಿಳಿದಾಗ ಆತಂಕಗೊಳ್ಳುತ್ತಾನೆ. ಈ ನಡುವೆ ಧೌಮ್ಯರು 'ಸೀರೆಯನ್ನು ಸೆಳೆಯುವಂತಹ ಸಮಯದಲ್ಲಿ ಸತಿ ಗೋಳಿಡಲು ಅಕ್ಷಯ ವಸ್ತ್ರವನ್ನಿತ್ತು ಸಲಹಿದಂತಹ ಆ ಮಹಿಮಾರ್ಣವನನ್ನು ಭಜಿಸಿರಿ' ಎಂಬ ಸಲಹೆಯನ್ನು ನೀಡಲು ದ್ರೌಪದಿ ಅದರಂತೆ ಕೃಷ್ಣನನ್ನು ಸ್ಮರಿಸುತ್ತಾಳೆ.

"ಭೂಸುರರ ಕಳವಳವ ನೃಪನಾ
ಕ್ಲೇಶವನು ಪವಮಾನಸುತನಾ
ಕ್ರೋಶವನು ನರನಾಟವನು ಮಾದ್ರೇಯರುಪಟಳವ
ಆ ಸರೋಜಾನನೆ ನಿರೀಕ್ಷಿಸು
ತಾಸುರದ ದುಃಖದಲಿ ಮುನಿ ಮಂ
ತ್ರೋಪದೇಶದ ಬಲುಮೆಯಿಂದವೆ ನೆನೆದಳಚ್ಯುತನ"[೧೩೪]

ಭೂಸುರರ ಕಳವಳವನ್ನೂ, ಮಹಾರಾಜನ ಮನದ ಕ್ಲೇಶವನ್ನೂ, ಭೀಮನ ಆಕ್ರೋಶವನ್ನು, ಅರ್ಜುನನ ಆಟವನ್ನು, ಮಾದ್ರೀ ಕುಮಾರರ ಉಪಟಳವನ್ನೂ ಆ ಸರೋಜಾನನೆ ಚೆನ್ನಾಗಿ ಕಂಡುಕೊಂಡಳು. ಇವರ ನಿರ್ಲಕ್ಷ್ಯ ಧೋರಣೆಯನ್ನು ಕಂಡು ತನ್ನ ಪತಿಯಂದಿರ ರಕ್ಷಣೆಗಾಗಿ ಕಳವಳಿಸುತ್ತಾಳೆ. ದೂರ್ವಾಸ ಮುನಿಯ ಕೋಪಕ್ಕೆ, ಶಾಪಕ್ಕೆ ಗುರಿಯಾಗಬೇಕಾದೀತು ಎಂಬ ಭಯ, ಆತಂಕ, ಸಹಿಸಲಾಗದಷ್ಟು ದುಃಖದಿಂದ ಮುನಿ ತಿಳಿಸಿದ ಮಂತ್ರೋಪದೇಶದ ಒಲುಮೆಯಿಂದ ಅಚ್ಯುತನನ್ನು ನೆನೆದಳು.

"ಮುಗುದೆ ಮಿಗೆ ನಿಂದುರ್ದು ಸಮಪದ
ಯುಗಳದಲಿ ಸೂರ್ಯನ ನಿರೀಕ್ಷಿಸಿ
ಮುಗಿದ ಕೈಗಳ ಮಗುಳೆಯೆವೆಯನು ಮುಚ್ಚಿ ನಾಸಿಕವ

ನೆಗಹಿ ಪುಳಕಾಂಬುಗಳು ಮೈಯಲಿ
ಬಿಗಿದು ಪೊನಲಾಗಿರಲು ಹಿಮ್ಮಡಿ
ಗೊಗುವ ಕುಂತಳದಬಲೆ ಕಾಮಿಸಿ ನೆನೆದಳಚ್ಯುತನ"[೧೩೫]

ಆ ಮುಗ್ಧೆಯು ಸಮ ಪದಯುಗಳ ಮೇಲೆ ನಿಂತು ಸೂರ್ಯನನ್ನು ಸ್ಮರಿಸುತ್ತ, ಕಣ್ಣುಗಳನ್ನು ಮುಚ್ಚಿ ಮೈಯಲ್ಲಿ ಪುಳುಕಾಂಬುಗಳು ಬಿಗಿದು ಹೊನಲಾಗಿ ಹರಿಯುತ್ತಿರಲು ಆಕೆ ಅಚ್ಯುತನನ್ನು ಸ್ಮರಿಸಿದಳು.

"ಶ್ರೀರಮಾವರ ದೈತ್ಯಕುಲ ಸಂ
ಹಾರ ಭಕ್ತಜನಾರ್ತಿಹರ ಭವ
ದೂರ ಸಕಲ ಚರಚರಾತ್ಮಕ ದುಷ್ಟ ಕಂಸಹರ
ಚಾರುಗುಣ ಗಂಭೀರ ಕರುಣಾ
ಕಾರ ವಿಹಿತ ವಿಚಾರ ಪಾರಾ
ವಾರ ಹರಿ ಮೈದೋರೆನುತ ಹಲುಬಿದಳು ಲಲಿತಾಂಗಿ"[೧೩೬]

ಶ್ರೀರಮಾವರ, ದೈತ್ಯ ಕುಲವನ್ನು ಸಂಹರಿಸಿದವನೆ, ಭಕ್ತಜನರನ್ನು ಕಾಪಾಡುವವನೆ, ಕರುಣಾಕರ ದುಷ್ಟ ಶಿಕ್ಷಕನಾದ ಹರಿಯೆ ನನಗೆ ದರುಶನವನ್ನು ನೀಡು ಎಂದು ಬೇಡುತ್ತಾಳೆ. ಇವೆಲ್ಲವು ದ್ರೌಪದಿಯ ಮನದಲ್ಲಿನ ತಲ್ಲಣ, ಭಯ, ಗೊಂದಲಗಳನ್ನು ತಿಳಿಸಿಕೊಡುತ್ತವೆ. ವೀರಾಧಿವೀರರಾದ ಪತಿಗಳಿದ್ದರೂ ಸಾಮಾನ್ಯ ಹೆಣ್ಣಿನಂತೆ ಆತಂಕದಲ್ಲಿರುವ ದ್ರೌಪದಿಯ ಸಂದಿಗ್ಧ ಸನ್ನಿವೇಶಗಳು ಗಮನಾರ್ಹವಾದವು.

"ನೀಲಕಂಠನ ನೇತ್ರವಹ್ನಿ
ಜ್ವಾಲೆಗಾಹುತಿಯಾಗಿ ಮಗ್ಗಿದ
ಕಾಲ ಕಾಮನ ಪಥವ ಪಡೆದರು ಪಾಂಡು ನಂದನರು
ಏಳು ದಿಟವೈಯೆನ್ನ ನುಡಿಯನು
ಪಾಲಿಸೈ ಸಂಕಲ್ಪವಳಿದೊಡೆ
ಹಾಳು ಹೊರುವುದು ಕೃಷ್ಣ ಮೈದೋರೆಂದಳಿಂದುಮುಖಿ"[೧೩೭]

ನನ್ನ ನುಡಿಯನ್ನು ಪಾಲಿಸಯ್ಯ! ಸಂಕಲ್ಪವು ನಡೆಯದೆ ನಾಶವಾದರೆ ನನ್ನ ಮೇಲೆ ಹಾನಿ ಹೊರುತ್ತದೆ. ಕೃಷ್ಣ ಮೈದೋರು ಎಂದು ಪರಿಪರಿಯಾಗಿ ಬೇಡಿಕೊಳುತ್ತಾಳೆ. ಅಂದರೆ ಇಲ್ಲಿ ತಾನು ನುಡಿದ ನುಡಿ ನೀ ಬರದೆ ಹೋದರೆ ನಾಶವಾಗುತ್ತದೆ. ನನ್ನ ನುಡಿಗೆ ಬೆಲೆಯಿರುವುದಿಲ್ಲ. ನನ್ನ ಮಾತುಗಳನ್ನು ಉಳಿಸಿಕೊಳ್ಳಲು ಸಹಾಯ ಮಾಡು ಎಂಬ ಧ್ವನಿ ಇದೆ. ಈ ರೀತಿಯಾಗಿ ಬೇಡಿಕೊಳ್ಳಲು ಕೃಷ್ಣ ಪ್ರತ್ಯಕ್ಷನಾಗಿ ತಂಗಿ, ಹೇಳು ಏನು ಚಿಂತೆ? ಎನ್ನಲು

"ಉಬ್ಬಿದಳು ಹರುಷದಲಿ ದುಗುಡದ
ಕೊಬ್ಬು ಮುರಿದುದು ಪುಳಕ ವಾರಿಯೊ
ಳೊಬ್ಬುಳಿಯೊಳೊಡೆ ಹಾಯ್ದು ನಿಂದುವು ನಯನವಾರಿಗಳು

ಸಭ್ಯತಾಲತೆ ಹೂತು ಹಸರಿಸಿ
ಹಬ್ಬಿ ಪಲವಾದಂತೆ ಕಾಯವ
ನಿಬ್ಬರದಲೀಡಾಡಿದಳು ಹರಿಪದಪಯೋಜದಲಿ"[೧೩೮]

ಈ ಪದ್ಯವು ಶ್ರೀಕೃಷ್ಣನನ್ನು ಕಂಡ ದ್ರೌಪದಿಯ ಮನದಲ್ಲಿ ಮೂಡಿದ ಹರ್ಷವನ್ನು ತಿಳಿಸುತ್ತದೆ. ಅಂದರೆ ದ್ರೌಪದಿಯ ಸಂದಿಗ್ಧ ಸಮಯದಲ್ಲಿ ರಕ್ಷಿಸುವವನು ಕೃಷ್ಣ. ಹಾಗಾಗಿ ಆಕೆಯು ಹರ್ಷದಿಂದ ಉಬ್ಬಿದಳು, ದುಃಖದ ಕೊಬ್ಬು ಮುರಿಯಿತು. ಮೈ ಪುಳಕಗೊಂಡಿತು, ನಯನವಾರಿಗಳಲ್ಲಿ ಸಂತೋಷದ ಕಣ್ಣೀರು ಹರಿದು ನಿಂತವು. ಸಭ್ಯತಾಲತೆಯು ಹೂ ಬಿಟ್ಟು ಪಸರಿಸಿ ಹಬ್ಬಿ ಫಲವಾದಂತೆ ದ್ರೌಪದಿಯು ತನ್ನ ದೇಹವನ್ನು ಕೃಷ್ಣನ ಪಾದಗಳಲ್ಲಿ ಈಡಾಡಿದಳು. ಅಂದರೆ ಆತನ ಪಾದಗಳಿಗೆರಗಿದಳು. ಕೃಷ್ಣನು ಇಂತಹ ಸಮಯದಲ್ಲಿ ನನ್ನನ್ನು ಸ್ಮರಿಸಲು ಕಾರಣವೇನು? ಎಂದು ಕೇಳಲು ದ್ರೌಪದಿಯು

"ಶೌರಿ ಕೇಳ್ ಸಾಕ್ಷಾತು ಶಿವನವ
ತಾರವಹ ದೂರ್ವಾಸಮುನಿ ಪರಿ
ವಾರ ಸಹಿತೈತಂದೊಡಭ್ಯಾಗತೆಯ ನೃಪನಿತ್ತ
ತೀರಿತಕ್ಷಯದನ್ನವಿಂದು ಮ
ಹಾ ಋಷಿಯ ಘನ ರೋಷವಹ್ನಿಗು
ಪಾರ ನಿನ್ನಯ ಮೈದುನನ ತನುವೆಂದಳಿಂದುಮುಖಿ"[೧೩೯]

ಕೃಷ್ಣಾ ಕೇಳು ಸಾಕ್ಷಾತ್ ಶಿವನ ಅವತಾರವಾದ ದೂರ್ವಾಸ ಮುನಿಗಳು ತಮ್ಮ ಪರಿವಾರ ಸಹಿತ ಬಂದನು. ಅವರಿಗೆ ಧರ್ಮರಾಯನು ಅಭ್ಯಾಗತರಿಗೆ ತಕ್ಕ ಆತಿಥ್ಯವನ್ನು ಕೊಟ್ಟನು. ಆದರೆ ಅಕ್ಷಯ ಪಾತ್ರೆಯ ಅನ್ನ ತೀರಿತು. ಇಂದು ನಿನ್ನ ಮೈದುನರ ಬದುಕು ದೂರ್ವಾಸನ ಘನಘೋರದ ಬೆಂಕಿಗೆ ಉಪಹಾರವಾಗುತ್ತದೆ. ಅವರನ್ನು ರಕ್ಷಿಸುವವರು ಯಾರು? ಎನ್ನಲು ಅದಕ್ಕೆ ಕೃಷ್ಣನು

"ನಾವು ಹಸಿದೈತಂದರೀ ಪರಿ
ದೇವಿ ನಾನಾ ದೂರ ದೂರುವು
ದಾವುದುಚಿತವು ಹೇಳೆನಲು ನಡನಡುಗಿ ಕೈ ಮುಗಿದು
ದೇವ ನಿಮ್ಮಯ ಹಸಿವು ಕಳೆವೊಡೆ
ಭಾವಶುದ್ಧಿಯ ಭಕುತಿ ಬೇಹುದು
ನಾವು ಚಂಚಲ ಚಿತ್ತರೆಂದಳು ಕಮಲಮುಖಿ ನಗುತ"[೧೪೦]

ನಾವು ಹಸಿದು ಬಂದರೆ ಇದೇನಿದು ನೀನು ಈ ರೀತಿಯಾಗಿ ನಾನಾ ಬಗೆಯ ದೂರನ್ನು ದೂರುತ್ತಿರುವೆ ಎಂದನು. ದ್ರೌಪದಿಯು ಆ ಮಾತುಗಳನ್ನು ಕೇಳಿ ನಡನಡುಗಿ ಕೈ ಮುಗಿದು ಹೇಳುತ್ತಾಳೆ. ದೇವ ನಿಮ್ಮಯ ಹಸಿವನ್ನು ಕಳೆಯಬೇಕಾದರೆ ಭಾವ ಶುದ್ಧಿಯ ಭಕ್ತಿ ಬೇಕಾಗುವುದು. ನಾವು ಚಂಚಲ ಚಿತ್ತರು ಎಂದು ಆಕೆ ಬೇಡಿಕೊಳ್ಳಲು ಕೃಷ್ಣನು ಅನುಗ್ರಹಿಸಿದನು. ದೂರ್ವಾಸರ ಕೋಪದಿಂದ ಅವರನ್ನು ರಕ್ಷಿಸಿ ಕಾಪಾಡಿದನು.

ಇಲ್ಲಿ ಪಾಂಡವರಿಗಿಂತ ಪ್ರತಿ ಸಂದರ್ಭದಲ್ಲಿಯೂ ದ್ರೌಪದಿ ಸಂಘರ್ಷಗಳಿಗೆ ಒಳಗಾಗುತ್ತಾಳೆ. ಅವರ ಒಳಿತು ಹಾಗೂ ಉಳಿವಿಗಾಗಿ ಹಲವು ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸುತ್ತಾಳೆ. ಅಂದರೆ 'ಸಿಟ್ಟು, ದುಃಖ, ತಳಮಳಗಳಾಗಿರಬಹುದು ಅಥವಾ ಒಂದು ಸಂದರ್ಭವನ್ನು, ಸನ್ನಿವೇಶವನ್ನು ಎದುರಿಸುವುದು ಕೂಡ ಸಂಘರ್ಷಗಳ ಭಾಗವೇ ಆಗುತ್ತದೆ. ಈ ಹಿನ್ನೆಲೆಯಲ್ಲಿ ಇವುಗಳು ಮತ್ತೆ ಮತ್ತೆ ದ್ರೌಪದಿಯನ್ನು ಸಂಘರ್ಷಗಳಿಗೆ ಒಳಗು ಮಾಡುತ್ತವೆ.

೩.೩.೨.ಊ. ದುರ್ಯೋಧನನ ಜೈತ್ರಯಾತ್ರೆಯ ಸಂದರ್ಭದಲ್ಲಿನ ಸಂಘರ್ಷಗಳು

ದುರ್ಯೋಧನನು ಅರಣ್ಯವಾಸದಲ್ಲಿರುವ ಪಾಂಡವರು ಬೇಡರಂತೆ ಅಲೆಯುತ್ತಿರುವುದನ್ನು ಕಂಡು, ತನ್ನ ವೈಭವಗಳನ್ನು ಅವರಿಗೆ ತೋರಿಸಬೇಕೆಂಬ ಮನಸ್ಥಿತಿಯವನಾಗಿ ಪಾಂಡವರಿದ್ದ ಕಾನನಕ್ಕೆ ಸಕಲ ಪರಿವಾರ ಸಮೇತ ಬಂದನು. ಈ ರೀತಿ ಬಂದಾಗ ಪೂರ್ವಜನ್ಮದ ವೈರಿಯಾದ ಗಂಧರ್ವನು ದುರ್ಯೋಧನ ಹಾಗೂ ದುಶ್ಯಾಸನನನ್ನು ಎಲ್ಲರ ಎದುರಿಗೆಯೇ ಕೋಡಗಗಟ್ಟು ಕಟ್ಟಿ ಅಪಹರಿಸಿಕೊಂಡು ಹೋದರು. ಇದರಿಂದ ಆಘಾತಗೊಂಡ ಭಾನುಮತಿಯು ತನಗೆ ಪುರುಷ ಭಿಕ್ಷೆಯನ್ನು ನೀಡುವಂತೆ ಧರ್ಮರಾಯನಲ್ಲಿ ಕೇಳಿಕೊಳ್ಳಲು, ಆತನ ಆಣತಿಯಂತೆ ಅರ್ಜುನನು ಅವರಿಬ್ಬರನ್ನು ಬಿಡಿಸಿಕೊಂಡು ಬಂದು ಧರ್ಮರಾಯನಿಗೆ ತೋರಿಸಿದನು. ಆಗ ಧರ್ಮರಾಯನು ಅವನ ಶೌರ್ಯ ಪರಾಕ್ರಮಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದನು. ಇತ್ತ

> "ಪಾಂಚಾಲರಾಜತನೂಜೆ ಪಗೆವರ ಕಟ್ಟುವಟ್ಟಿರ್ದೇಳಿ ದಿಕ್ಕೆಗೆ ಸಂತಸಂಬಟ್ಟು
> ಸೈರಿಸಲಾಱದಿಂತೆಂದಳ್"[೧೪೧]

ಪಾಂಚಾಲರಾಜ ತನೂಜೆಯಾದ ದ್ರೌಪದಿಯು ಶತೃಗಳ ಕಟ್ಟುಗಳನ್ನು ಕಟ್ಟಿಸಿಕೊಂಡು ಅಪಮಾನಿತರಾದದ್ದಕ್ಕೆ ಸಂತೋಷವನ್ನು ಹೊಂದಿ, ತನ್ನ ಸಂತಸವನ್ನು ಸಹಿಸಲಾರದೆ ಹೀಗೆಂದಳು.

> "ಎಮ್ಮಂ ಪಿಡಿದೆಳೆವಂದಿನ
> ನಿಮ್ಮದಟುಗಳೀಗಳೆತ್ತ ವೋದುವೊ ಪಿಡಿವ ।
> ಟ್ಟಮ್ಮ ಬೞಲ್ದಿರೆ ಕಂಡಿರೆ
> ನಿಮ್ಮಳವಂ ನಿಮಗಮಿಾಗಳೀಯೆಡರಾಯ್ತೇ"[೧೪೨]

ಕೋಡಗಗಟ್ಟುಗಳನ್ನು ಕಟ್ಟಿಸಿಕೊಂಡು ನಿಂತಿದ್ದ ಅವರಿಬ್ಬರನ್ನು ನೋಡಿದ ಆ ಸಂದರ್ಭದ ದ್ರೌಪದಿಯ ಪ್ರತಿಕ್ರಿಯೆಯು ಬಹಳ ತೀಕ್ಷ್ಣವಾದುದು. ಜೊತೆಗೆ ಸಹಜ ಕೂಡ. ಇದರಲ್ಲಿ ವ್ಯಂಗ್ಯ, ನಗೆ, ಹಾಸ್ಯ, ಕಟಕಿ, ಕೋಪದ ಭಾವಗಳೂ ಅಡಗಿವೆ. ಅದರ ಜೊತೆಗೆ ತನ್ನ ಮನದಲ್ಲಿ ಅದುವರೆಗೆ ಅದುಮಿಟ್ಟುಕೊಂಡಿದ್ದ ಕೋಪವನ್ನು ಆ ಸನ್ನಿವೇಶದಲ್ಲಿ ಆಕೆ ಹೊರಹಾಕುತ್ತಾಳೆ. ಏಕೆಂದರೆ ಆಕೆ ಅಷ್ಟು ಅಪಮಾನ ಹಾಗೂ ದುಃಖಗಳಿಗೆ ಒಳಗಾಗಿದ್ದಳು. ಪಂಪ ಅದನ್ನು ಅತ್ಯಂತ ಸಮರ್ಥವಾಗಿ ಅಭಿವ್ಯಕ್ತಪಡಿಸಿದ್ದಾನೆ.

ರಾಜಸಭೆಯಲ್ಲಿ ನಮ್ಮನ್ನು ಹಿಡಿದೆಳೆದು ಅಪಮಾನಗೊಳಿಸಿದ ಆ ದಿನದ ನಿಮ್ಮ ಶೌರ್ಯ, ಪರಾಕ್ರಮಗಳು, ಗರ್ವ ಈಗ ಎಲ್ಲಿಗೆ ಹೋದವು. ಅಪ್ಪ ಬಳಲಿದಿರಲ್ಲಾ. ನೋಡಿದಿರಲ್ಲಾ ನಿಮ್ಮ ಪರಾಕ್ರಮದ ಪ್ರಮಾಣವನ್ನು. ಛೇ, ನಿಮಗೂ ಈ ರೀತಿಯ ಪರಾಭವವುಂಟಾಯಿತೇ? ಎಂದು ಸಾಯುವ ರೀತಿಯಲ್ಲಿ ಅವರನ್ನು ಹಾಸ್ಯ ಮಾಡುತ್ತಾಳೆ. ಇದು ಆಕೆಯ ಮನದ ಭಾವನೆಗಳ ಹೊರಹಾಕುವಿಕೆಯ ಅತ್ಯುತ್ತಮ ಉದಾಹರಣೆಯಾಗಿದೆ. ಅಲ್ಲದೆ ಪಂಪನು ಇಲ್ಲಿ ಬಳಸಿರುವ ಕೆಲವೊಂದು ಪದಗಳು ಚರ್ಚಾರ್ಹವಾಗಿವೆ. 'ನಿಮ್ಮದಟುಗಳು ಎತ್ತ ಹೋದವು', 'ಅಮ್ಮ ಬೞಲ್ದಿರೆ' ಎಂಬ ಪದಗಳು ದುರ್ಯೋಧನಾದಿಗಳನ್ನು ಇರಿಯುವಂತಹ ಮಾತುಗಳಾಗಿ ನಮಗೆ ಕಂಡುಬರುತ್ತವೆ. ಈ ಪ್ರತಿಕ್ರಿಯೆ ದ್ರೌಪದಿಯ ಸಂದರ್ಭದಲ್ಲಿ ಸಹಜ ಕೂಡ ಆಗಿರುವಂತಹದ್ದು. ತನ್ನನ್ನು ಅಪಮಾನಗೊಳಿಸಿದವರು ತನ್ನ ಮುಂದೆ ಕೈ ಕಟ್ಟಿ ಸೆರೆಯಾಳುಗಳಾಗಿ ನಿಂತಿರುವುದನ್ನು ಕಂಡರೆ ಯಾವ ಹೆಣ್ಣಿಗೆ ತಾನೆ ಈ ರೀತಿಯ ಭಾವನೆಗಳು ಮೂಡಿ ಬರುವುದಿಲ್ಲ?

'ಕುಮಾರವ್ಯಾಸ ಭಾರತ'ದಲ್ಲಿಯೂ ದ್ರೌಪದಿಯಲ್ಲಿ ಇಂತಹದ್ದೇ ಭಾವನೆಗಳನ್ನು ಕಾಣಬಹುದಾಗಿದೆ. ಪಂಪನಂತೆಯೆ ಇಲ್ಲಿಯ ದ್ರೌಪದಿಯಲ್ಲಿಯೂ ವ್ಯಂಗ್ಯ ಹಾಗೂ ಹಾಸ್ಯದ ಭಾವಗಳು ಅಧಿಕವಾಗಿವೆ. ಅರ್ಜುನ ರಕ್ಷಿಸಿ ತಂದು ಧರ್ಮರಾಯನ ಮುಂದೆ ನಿಲ್ಲಿಸಲು ಧರ್ಮರಾಯ ದ್ರೌಪದಿಯನ್ನು ಕರೆದು ಅಯ್ಯೋ ಸುಯೋಧನ ನೊಂದುಕೊಳ್ಳುತ್ತಾನೆ. ಆತನ ಎಡಗೈಯನ್ನು ಬಿಡಿಸು. ಕಲ್ಲು ನೆಲವೇ ಹಾಸಿಗೆಯಾಗಿದೆಯಲ್ಲ. ಹಂಸ ತೂಲಿಕಾತಲ್ಪದಲ್ಲಿ ಮಲಗುತ್ತಿದ್ದವನಿಗೆ ಈ ಗತಿಯೆ? ಎಂದಾಗ ದ್ರೌಪದಿ ಆತನ ಕೈಗೆ ಕಟ್ಟಿದ್ದ ಕಟ್ಟುಗಳನ್ನು ಬಿಚ್ಚಲು ಬರುತ್ತಾಳೆ. ಅದನ್ನು ಕವಿ ಹೀಗೆ ವರ್ಣಿಸಿದ್ದಾನೆ.

> "ಬಂದಳಬುಜಾನನೆ ಸುಯೋಧನ
> ನಂದವನು ನೋಡಿದಳು ಸುಯ್ದಳು
> ಬೆಂದ ವಿಧಿ ಬಂಧನವ ತಂದುದೆ ಸಾರ್ವಭೌಮರಿಗೆ
> ಒಂದು ಕೈ ಗಲ್ಲದಲಿ ಬಿಡಿಸಿದ
> ಳೊಂದು ಕೈಯಲಿ ಭುಜದ ಪಾಶವ
> ನಿಂದುಮುಖಿ ದುರಿಯೋಧನನ ದುಶ್ಯಾಸನನು ಸಹಿತ"[೧೪೩]

ಕಮಲಾನನೆ ಬಂದು ಸುಯೋಧನನು ಇರುವ ರೀತಿಯನ್ನು ನೋಡುತ್ತಾಳೆ. ಆತನನ್ನು ನೋಡಿ ನಿಟ್ಟುಸಿರನ್ನು ಬಿಟ್ಟಳು. 'ಬೆಂದ ವಿಧಿ ಬಂಧನವ ತಂದುದೆ'. ಅಂದರೆ ಕೆಟ್ಟವಿಧಿಯು ನಿಮಗೆ ಈ ರೀತಿಯ ಬಂಧನವನ್ನು ತರುವ ಮೂಲಕ ಅಪಮಾನಿಸಿತೇ ಎಂದು ಮೂದಲಿಸುತ್ತ ಒಂದು ಕೈಯನ್ನು ತನ್ನ ಗಲ್ಲದ ಮೇಲೆ ಇಟ್ಟುಕೊಂಡು ಮತ್ತೊಂದು ಕೈಯಲ್ಲಿ ದುರ್ಯೋಧನ ಹಾಗೂ ದುಶ್ಯಾಸನರ ಭುಜಕ್ಕೆ ಕಟ್ಟಿದ್ದ ಪಾಶವನ್ನು ಬಿಚ್ಚಿದಳು ಎನ್ನುತ್ತಾನೆ ಕವಿ. ಇಲ್ಲಿ ಕವಿ ಆ ಸಂದರ್ಭದ ಶಬ್ದ ಚಿತ್ರವೊಂದನ್ನು ನಮಗೆ ಕಟ್ಟಿಕೊಟ್ಟಿದ್ದಾನೆ. ಆ ಸನ್ನಿವೇಶವನ್ನು ಸೂಕ್ಷ್ಮವಾಗಿ ಕಲ್ಪಿಸಿಕೊಂಡರೆ

ದ್ರೌಪದಿ ಯಾವ ರೀತಿಯ ಭಾವನೆಗಳಿಂದ ಅವರಿಬ್ಬರ ಕಟ್ಟುಗಳನ್ನು ಬಿಚ್ಚುತ್ತಿದ್ದಾಳೆಂಬುದು ತಿಳಿಯುತ್ತದೆ. ಇಲ್ಲಿ ಆಕೆಗೆ ಅವರ ಮೇಲಿರುವ ಸಿಟ್ಟು, ಕೋಪ, ತಿರಸ್ಕಾರಗಳಿದ್ದು ಅದರಿಂದುಂಟಾದ ಪ್ರತಿಕ್ರಿಯೆಯ ಮೂಲಕ ಅವರಿಬ್ಬರನ್ನು ಆ ರೀತಿಯಾಗಿ ಮರ್ಮಾಘಾತವಾಗುವಂತೆ ಮೂದಲಿಸುತ್ತಾಳೆ. ಬಹುಶಃ ದುರ್ಯೋಧನನಿಗೆ ಇದಕ್ಕಿಂತ ಅವಮಾನ ಬೇರೊಂದಿಲ್ಲ. ಒಂದು ಹೆಣ್ಣಿನ ಕೈಯಿಂದ ತಮಗೆ ಕಟ್ಟಿದ್ದ ಸೆರೆಯನ್ನು ಬಿಚ್ಚಿಸಿಕೊಳ್ಳುವಂತಹ ದುರ್ಗತಿ ಬಂದಿರುವುದು ದುರ್ಯೋಧನನಂತಹ ವೀರನ ಅಧಃಪತನದಂತೆಯೆ ಕಾಣುತ್ತದೆ.

> "ಕೆಳದಿಯರ ಕೈಯಿಂದ ಕೊಯ್ಸಿದ
> ಉಳಿದ ಕೌರವನನುಜ ವರ್ಗದ
> ಬಲು ಹುರಿಯ ನೇಣುಗಳನವದಿರ ಗೋಣುಗಳು ಮಣಿಯೆ
> ಅಳಲಿಸಿದನೇ ಖಚರನಾತನ
> ಕೊಲಿಸಬೇಹುದು ಕಳುಹಿ ಕಷ್ಟವ
> ಬಳಸಿದಿರಿ ಭೂಪಾಲಯೆಂದಳು ನಳಿನಮುಖಿ ನಗುತ"[೧೪೪]

ತನ್ನ ಗೆಳತಿಯರ ಕೈಯಿಂದ ಉಳಿದ ದುರ್ಯೋಧನನ ಅನುಜ ವರ್ಗದವರ ಕೈಗಳಿಗೆ ಕಟ್ಟಿದ್ದ ಬಲು ಹುರಿಯ ನೇಣುಗಳನ್ನು ಕುಯ್ಸಿದಳು. ಅವರೆಲ್ಲ ಅವಮಾನದಿಂದ ನಾಚಿ ತಲೆ ತಗ್ಗಿಸಿ ನಿಂತಿದ್ದರು. ಇತ್ತ ದ್ರೌಪದಿಯು ದುರ್ಯೋಧನನನ್ನು ಕುರಿತು 'ಅಳಲಿಸಿದನೇ ನಿಮ್ಮನ್ನು ಆ ಖಚರನು? ಅವನನ್ನು ಕೊಲ್ಲಿಸಬೇಕು. ಅಂತಹವನನ್ನು ಕಳುಹಿಸಿಕೊಟ್ಟು ಕಷ್ಟದ ಕೆಲಸ ಮಾಡಿದಿರಿ ಭೂಪಾಲ ಎಂದು ಧರ್ಮರಾಯನಿಗೆ ಹೇಳುತ್ತಾಳೆ ನಗುತ್ತ ದ್ರೌಪದಿಯು. ಮುಂದುವರೆದು

> "ಅರಸ ನೊಂದೈ ಮರ್ದನಕೆ ಮ
> ಲ್ಲರುಗಳಿಲ್ಲೆಮಗೊತ್ತುವವು ಕಲು
> ಹರಳು ಮಜ್ಜನ ಭೋಗಿಸುವರೆ ಸಿತಾಂಬು ತಿಳಿಗೊಳನು
> ಹರಿಣ ಶಾರ್ದೂಲಾದಿ ಚರ್ಮಾಂ
> ಬರವೆ ಸಮಕಟ್ಟೆಮಗೆ ರತ್ನಾ
> ಭರಣವೇ ರುದ್ರಾಕ್ಷಿಯೆಂದಳು ನಗುತ ತರಳಾಕ್ಷಿ"[೧೪೫]

ದುರ್ಯೋಧನನನ್ನು ಕುರಿತು ಮೂದಲಿಸುವುದನ್ನು ಮುಂದುವರಿಸಿ ದ್ರೌಪದಿಯು ಅರಸಾ ನೊಂದೆಯ? ಮರ್ದನಕ್ಕೆ (ಒತ್ತುವುದಕ್ಕೆ, ನಾಶಮಾಡುವುದಕ್ಕೆ) ನಮ್ಮಲ್ಲಿ ಮಲ್ಲರುಗಳಿಲ್ಲ. ಕಲ್ಲು ಹರಳುಗಳು ಒತ್ತುತ್ತವೆ. ಮಜ್ಜನ ಭೋಗಿಸುವರೆ, ತಣ್ಣೀರು ತಿಳಿಗೊಳಗಳು. ಜಿಂಕೆ, ಹುಲಿ ಮೊದಲಾದ ಪ್ರಾಣಿಗಳ ಚರ್ಮವೇ ನಮಗೆ ಹಾಸಿಗೆ, ರುದ್ರಾಕ್ಷಿಯೆ ನಮಗೆ ರತ್ನಾಭರಣ ಎಂದು ನಗುತ್ತ ನುಡಿದಳು. ಇಲ್ಲಿಯ ಪ್ರತಿಯೊಂದು ಮಾತಿನಲ್ಲಿಯೂ ದುರ್ಯೋಧನನ ಅಂದಿನ ಅವಸ್ಥೆಯನ್ನು ಕುರಿತು ದ್ರೌಪದಿ ವಿಡಂಬಿಸುತ್ತಿರುವುದು ಕಂಡುಬರುತ್ತದೆ. ಇಲ್ಲಿ ವ್ಯಂಗ್ಯದ ಮೂಲಕ ಅವನ ಶೌರ್ಯ, ಪರಾಕ್ರಮಗಳನ್ನು ಗೇಲಿ ಮಾಡುತ್ತಾಳೆ. ಮುಂದುವರೆದು

"ವಾರುವವು ವಟಶಾಖೆ ಗಿರಿಗಳು
ತೋರ ಕರಿಗಳು ಭದ್ರಗಜ ವನ
ಭೂರುಹದ ನೆಳಲೆಮಗೆ ಸತ್ತಿಗೆ ಪಲ್ಲವವ್ರಾತ
ಚಾರು ಚಾಮರ ಕಿರುಮೊರಡಿ ವಿ
ಸ್ತಾರ ಪೀಠವು ಹಂತಿಗಾರರು
ಭೂರಿ ಸರ್ಪಾವಳಿಗಳರಮನೆ ಹೊದರು ಹೊಸ ಮೆಳೆಯ"[೧೪೬]

ತಾವಿರುವ ಸ್ಥಿತಿಯನ್ನು ದುರ್ಯೋಧನನಿಗೆ ಅರುಹುತ್ತಲೇ ಆತನನ್ನು ವ್ಯಂಗ್ಯದ ಮೂಲಕ ಅಪಮಾನಗೊಳಿಸುತ್ತಾಳೆ. ವೀರಾಧಿವೀರನೆಂದು ಮೆರೆಯುತ್ತಿದ್ದವನು ಇಂದು ಕೈ ಕಟ್ಟಿಸಿಕೊಂಡು ನಿಂತಿರುವುದನ್ನು ಕಂಡು ಅಪಹಾಸ್ಯ ಮಾಡುತ್ತಿದ್ದಾಳೆ. ಆ ಮೂಲಕ ತನ್ನ ನೋವುಗಳನ್ನು ಮರೆಯುವ ಕ್ರಿಯೆಗಳೂ ತಿಳಿಯುತ್ತವೆ. ಅಲ್ಲದೆ

"ಈ ವಿಪತ್ತಿನ ನಿಮ್ಮಡಿಯ ಸಂ
ಭಾವಿಸುವರೆಮಗಾದ ವಸ್ತುಗ
ಳೀ ವಿಧಿಗಳೇಕೆಮ್ಮ ಬಾಳಿಕೆಯೊಂದು ದುಗುಡದಲಿ
ದೇವನಿರ್ಪನು ಧರ್ಮಸುತನಿ
ನ್ನಾವುದುಚಿತಾನುಚಿತವೆಂಬುದ
ಭಾವನವರೇ ಬಲ್ಲಿರೆಂದಳು ದ್ರೌಪದಾದೇವಿ"[೧೪೭]

ಇಂತಹ ಆಪತ್ತಿನಲ್ಲಿ ಸಿಲುಕಿರುವ ನಿಮ್ಮನ್ನು ಸಂಭಾವಿಸೋಣ ಎಂದರೆ, ನಮ್ಮಲ್ಲಿ ಇರುವ ವಸ್ತುಗಳು ಈ ರೀತಿಯವು. ಏಕೆ, ನಮ್ಮ ಬಾಳ್ವೆ ಎಂಬುದು ಬಹು ದುಗುಡತನದ್ದು. ಇಂತಹ ಬದುಕಿನಲ್ಲಿ ದೇವನಾದ ಧರ್ಮಸುತನು ಇರುವನು. ಹಾಗಾಗಿ ಇನ್ನು ಯಾವುದು ಉಚಿತ ಹಾಗೂ ಯಾವುದು ಅನುಚಿತ ಎಂಬುದನ್ನು ಬಲ್ಲವರಾದ ನೀವೇ ಹೇಳಬೇಕು ಭಾವನವರೇ ಎನ್ನುತ್ತಾಳೆ ದ್ರೌಪದಿ. ಇಲ್ಲಿ ದ್ರೌಪದಿ ಬಳಸುವ 'ಭಾವನವರೇ' ಎಂಬ ಪದ ಬಹಳ ಅರ್ಥಗರ್ಭಿತವಾದುದು ಹಾಗೂ ಚರ್ಚಾರ್ಹವಾದುದು. ಒಂದು ಕಡೆ ದ್ರೌಪದಿ ಆತನನ್ನು, ಆತನಿಗೆ ಒದಗಿರುವ ದುರಾವಸ್ಥೆಯ ಮೂಲಕ ಹಂಗಿಸುತ್ತಿದ್ದರೆ ಮತ್ತೊಂದು ಕಡೆ ಸಂಬಂಧದ ಬೆಲೆಯನ್ನು ಅರ್ಥೈಸುತ್ತಿದ್ದಾಳೆ. ಜೊತೆಗೆ ಇಂತಹ ಸಂಬಂಧವನ್ನು ಮೀರಿ ಸಭೆಯಲ್ಲಿ ತನ್ನನ್ನು ಅಪಮಾನಗೊಳಿಸಿದ ಅಂಶವನ್ನೂ ಸಹ ಆತನಿಗೆ ನೆನಪು ಮಾಡಿಕೊಡುವ ಭಾವವೂ ಆ ಪದದಲ್ಲಿ ಅಡಗಿದೆ. ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶ ಭಾನುಮತಿ ತನ್ನ ಪತಿಯನ್ನು ಬಿಡಿಸಿ ತರುವಂತೆ ಬೇಡಿದಾಗ ತನಗೆ ಅವಮಾನಿಸಿದವರನ್ನು ರಕ್ಷಿಸುವುದು ಬೇಡವೆಂದು ಧರ್ಮಜನಿಗಾಗಲಿ, ಅರ್ಜುನನಿಗಾಗಲೀ ಹೇಳುವುದಿಲ್ಲ. ಎಲ್ಲಾ ಸಂದರ್ಭಗಳಲ್ಲಿಯೂ ಸಂಬಂಧಗಳ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತಾಳೆ. ದ್ರೌಪದಿ ತನ್ನ ಮನದ ಕೋಪ, ರೋಷಗಳನ್ನು ಹೀಗೆ ಕಟಕಿಯ ಮಹಾಸ್ತ್ರಗಳನ್ನು ದುರ್ಯೋಧನನ ಮೇಲೆ ಪ್ರಯೋಗಿಸುತ್ತಾ ತನ್ನ ಮನದ ಕ್ಷೋಭೆಯನ್ನು ಕಡಿಮೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾಳೆ.

'ವಿಕ್ರಮಾರ್ಜುನ ವಿಜಯ'ದಲ್ಲಿ ಇದೇ ಸಮಯದಲ್ಲಿ ಗಮನಿಸಬೇಕಾದ ಮತ್ತೊಂದು ಸಂದರ್ಭವೆಂದರೆ ದ್ರೌಪದಿ ಧರ್ಮರಾಯನಿಗೆ ತಿಳಿಸುವ ವಿಚಾರಗಳು. ಅರಣ್ಯದಲ್ಲಿ ಅರ್ಜುನನಿಂದ ರಕ್ಷಿಸಿಕೊಂಡು ವಾಪಸ್ಸಾದ ನಂತರ ದುರ್ಯೋಧನನ ಸಮಾಚಾರಗಳನ್ನು ತಿಳಿದು ಬರಲು ಕಳುಹಿಸಿದ್ದ ಕಿರಾತ ದೂತನು ಅಲ್ಲಿನ ಸಮಾಚಾರಗಳನ್ನು ಧರ್ಮರಾಯನಿಗೆ ತಿಳಿಸುತ್ತಾನೆ. ದುಶ್ಶಾಸನನನ್ನು ಯುವರಾಜನನ್ನಾಗಿ ಮಾಡಿ ರಾಜ್ಯಭಾರ ಮಾಡುತ್ತಿದ್ದಾನೆ. ಆದರೆ ಆತ ಮೈಮರೆತಿಲ್ಲ. ಎಚ್ಚರದಿಂದಿದ್ದಾನೆ ಎಂಬ ಮಾತನ್ನು ತಿಳಿಸಿ ಹೋಗುತ್ತಾನೆ. ಆ ಸಂದರ್ಭದಲ್ಲಿ ದ್ರೌಪದಿಯು ಧರ್ಮರಾಯನಿಗೆ ಹೇಳುವ ಮಾತುಗಳು ಗಮನಿಸತಕ್ಕವು. ಮುಂದೆ ತಾವು ಏನು ಮಾಡಬೇಕೆಂಬ ರಾಜಕಾರ್ಯಗಳ ಬಗ್ಗೆ ದ್ರೌಪದಿ ಧರ್ಮರಾಯನಿಗೆ ನಿರ್ದೇಶಿಸುತ್ತಾಳೆ. ಇಲ್ಲಿ ಒಬ್ಬಳು ರಾಜತಾಂತ್ರಿಕಳಂತೆ ಕಂಡುಬರುತ್ತಾಳೆ. ಇದಕ್ಕೆ ಮುಖ್ಯ ಕಾರಣ ತನಗಾಗಿರುವ ಅವಮಾನ ಹಾಗೂ ಅಪಮಾನಗಳಿಗೆ ಪ್ರತೀಕಾರವನ್ನು ತೀರಿಸಿಕೊಳ್ಳಲೇಬೇಕು ಎಂಬ ನೊಂದ ಮನಸ್ಸಿನ ತಹತಹಿಕೆ. ಆ ಕಾರಣವಾಗಿಯೆ ಧರ್ಮರಾಯನಲ್ಲಿ ಸ್ವಲ್ಪ ಖಾರವಾಗಿಯೆ ಮಾತನಾಡುತ್ತಾಳೆ. ಆ ಸಂದರ್ಭವನ್ನು ಪಂಪ ಈ ರೀತಿಯಾಗಿ ಚಿತ್ರಿಸಿದ್ದಾನೆ.

"ನುಡಿವೊಡೆ ರಾಜಕಾರ್ಯ ನಯಮೆತ್ತಬಲಾಜನದೊಂದು ಬುದ್ಧಿಯೆ
ತ್ತುಡುಪತಿವಂಶ ನೋಡುವೊಡಿದೊಂದಘಟಂ ಬಗೆವಾಗಳೆಂತು ಕೇಳ್ ।
ನುಡಿಯದೆ ಕೆಮ್ಮಗಿರ್ದೊಡಮಿರಲ್ಕಣಮಿಾಯದೆ ನಿಮ್ಮೊಳೆನ್ನುಮಂ
ನುಡಿಯಿಸಿದಪ್ಪುವಾ ಕುರುಕುಳರ್ಕಳಗೆಯ್ದಪರಾಧ ಕೋಟಿಗಳ್"೧೪೪

ದ್ರೌಪದಿ ಹೇಳುತ್ತಾಳೆ, ಹೇಳುವುದಾದರೆ ರಾಜಕಾರ್ಯದ ರೀತಿಯೆಲ್ಲಿ? ಸ್ತ್ರೀಯರ ಬುದ್ಧಿಯೆಲ್ಲಿ? ಆದರೂ ಕುರುಕುಲದವರು ನಮಗೆ ಮಾಡಿದ ಅಪರಾಧಗಳ ಸಮೂಹ ನನ್ನನ್ನು ಈ ರೀತಿ ಮಾತನಾಡುವಂತೆ ಪ್ರೇರೇಪಿಸುತ್ತಿದೆ. ವಿಚಾರ ಮಾಡುವುದಾದರೆ ಈಗ ನಡೆದಿರುವ ಅನರ್ಥ ವಂಶಕ್ಕೆ ಹೊಂದಿಕೊಳ್ಳದಿರುವಂತಹದ್ದು. ಅಂದರೆ ನಾವು ಈ ಸಮಯದಲ್ಲಿ ಸುಮ್ಮನಿರುವುದು ಒಳಿತಲ್ಲ ಎಂಬ ಭಾವದಲ್ಲಿ ಮಾತನಾಡುತ್ತಾಳೆ. ಮುಂದುವರೆದು

"ಆವಡವಿಗಳೊಳ್ ಪಣ್ಣಲ
ಮಾವಗಮೊಳವಲ್ಲಿಗಱಸಿ ಪರಿಪರಿದು ಕರಂ ।
ತಾವಡಿಗೊಳ್ವೀ ಭೀಮನ
ಬೇವಸಮಿದು ನಿನ್ನ ಮನಮನೊನಲಿಸಿತಿಲ್ಲಾ"೧೪೫

ಯಾವ ಅಡವಿಗಳಲ್ಲಿ ಹಣ್ಣು ಹಂಪಲುಗಳಿರುತ್ತವೆಯೋ ಅಲ್ಲಿಗೆ ಅವುಗಳನ್ನು ಹುಡುಕಿಕೊಂಡು ಹೋಗುತ್ತ ಓಡಾಡಿ ಅಲೆಯುತ್ತಿರುವ ಭೀಮನ ಬೇವಸವು ನಿನ್ನ ಮನಸ್ಸನ್ನು ಕೆರಳಿಸಿಲ್ಲವೆ? ಮೇರು ಪರ್ವತಕ್ಕೆ ಹೋಗಿ ತನ್ನ ಪೌರುಷ ಪ್ರದರ್ಶನದಿಂದ ನಿನಗೆ ಹೊನ್ನಿನ ರಾಶಿಯನ್ನು ತಂದುಕೊಟ್ಟ ಅರ್ಜುನ ಇಂದು ಉಡುವುದಕ್ಕೆ ನಾರುಗಳನ್ನು ತರುತ್ತ ಕೃಶವಾಗುತ್ತಿದ್ದಾನೆ. ಅಂತಹವನೂ ನಿನಗೆ ಕೋಪವನ್ನು ತರಿಸಲು ಶಕ್ತನಾಗಲಿಲ್ಲವೆ.

"ಕಾಯ ಕ್ಲೇಶದಿನಡವಿಯ
ಕಾಯಂ ಪಣ್ಣುಮನುದಿರ್ಚಿ ತಿಂದಗಲದೆ ನಿಂ ।
ದೀ ಯಮಳರಾವ ತೆಱದಿಂ
ನೋಯಿಸರಯ್ ನಿನ್ನ ನನ್ನಿಕಾಱನ ಮನಮಂ"[೧೫೦]

ದೇಹದ ಆಯಾಸದಿಂದ ಅಡವಿಯ ಕಾಯನ್ನೂ ಹಣ್ಣನ್ನೂ ಉದುರಿಸಿಕೊಂಡು ತಿನ್ನುತ್ತ ನಿಮ್ಮನ್ನು ಅಗಲದೆ ನಿಂತ ಈ ಯಮಳರೂ ಕೂಡ ಸತ್ಯವಂತನಾದ ನಿನ್ನ ಮನಸ್ಸನ್ನು ನೋಯಿಸುವುದಿಲ್ಲವೆ? ಇಲ್ಲಿ ದ್ರೌಪದಿ ಬಳಸುವ 'ಆವ ತೆಱದಿಂ ನೋಯಿಸರಯ್ ನಿನ್ನ ನನ್ನಿಕಾಱನ ಮನಮಂ' ಎಂಬ ಸಾಲುಗಳು ಗಮನಿಸಬೇಕಾದವು. ದ್ರೌಪದಿ ಇಲ್ಲಿ ಧರ್ಮರಾಯನನ್ನು ಕುರಿತು ಬಳಸಿರುವ 'ನನ್ನಿಕಾಱ' ಪದ ಅರ್ಥಗರ್ಭಿತವಾದುದು. ಇಲ್ಲಿನ ಮಾತುಗಳು ಧರ್ಮರಾಯನಲ್ಲಿ ಕೋಪವುಂಟು ಮಾಡಲು ಮಾತನಾಡುತ್ತಿರುವಂತೆ ಕಂಡುಬರುತ್ತವೆ.

"ಆ ದುಶ್ಶಾಸನನಿಂದೆನ
ಗಾದ ಪರಾಭವಮನೇನುಮಂ ಬಗೆಯದೊಡಿಂ ।
ತಾದರಮೆ ತೊವಲ್ನಾರುಮ
ನಾದರದೇಂ ನಿನ್ನ ಮನಕೆ ಚಿಂತೆಯುಮಿಲ್ಲಾ"[೧೫೧]

ಖಳನಾದ ಆ ದುಶ್ಶಾಸನನಿಂದ ನನಗೆ ಉಂಟಾದ ಅವಮಾನ ಮೊದಲಾದವುಗಳನ್ನೂ ಎಣಿಸದಿರುವ ನಿನಗೆ ಈ ತೊಗಲು ನಾರುಗಳು ಆಪ್ಯಾಯಮಾನವಾದವೆ, ಬಹಳ ಆದರಕ್ಕೆ ಪಾತ್ರವಾದವೇ? ಇಂತಹ ಅನಾಸಕ್ತಿಯೇತಕ್ಕೆ?

"ಎಮ್ಮಯ್ವರ ಬೇವಸಮಂ
ನೀಂ ಮನದೊಳ್ ನೆನೆಯೆಯಪ್ಪೊಡಂ ನಿನ್ನಿರವಂ ।
ನೀಂ ಮರುಳೆ ಬಗೆಯದಂತುಂ
ಘುಮ್ಮೆಂಬಡವಿಯೊಳಡಂಗಿ ಚಿಂತಿಸುತಿರ್ಪಾ"[೧೫೨]

ನಮ್ಮ ಐದು ಜನಗಳ ಚಿಂತೆ, ದುಮ್ಮಾನಗಳನ್ನು ನೀನು ಮನದಲ್ಲಿ ನೆನೆಯದಿದ್ದರೂ ಪರವಾಗಿಲ್ಲ. ಆದರೆ ಎಲೈ ಹುಚ್ಚ ನಿನ್ನ ಸ್ಥಿತಿಯನ್ನಾದರೂ ಯೋಚಿಸಿ ನೋಡು. ಅದು ಬಿಟ್ಟು ಈ ರೀತಿಯಾಗಿ ಘುಮ್ಮೆನ್ನುವ ಈ ಕಾಡಿನಲ್ಲಿ ಅಡಗಿಕೊಂಡು ಚಿಂತಿಸಿದರೆ ಏನು ಪ್ರಯೋಜನ?

ಇಲ್ಲಿ ದ್ರೌಪದಿ ಧರ್ಮರಾಯನನ್ನು ಕುರಿತು 'ನೀಂ ಮರುಳೆ', 'ಘುಮ್ಮೆಂಬಡವಿಯೊಳಡಂಗಿ' ಎಂಬ ಪದಗಳನ್ನು ಬಳಸಿ ಮಾತನಾಡಿದರೂ ಆತ ಸುಮ್ಮನಿದ್ದಾನೆ. ಕಾರಣ ದ್ರೌಪದಿ ಅಷ್ಟು ನೊಂದಿದ್ದಾಳೆ. ಅಲ್ಲದೆ ಧರ್ಮರಾಯನನ್ನು ಆ ರೀತಿ ಮಾತನಾಡಿಸಬೇಕಾದರೆ ಮುಂದಿನ ರಾಜಕಾರ್ಯಗಳ ಬಗೆಗಿನ ಮುನ್ನೋಟ ಎಂತಹದ್ದಿರಬೇಕೆಂಬುದು ನಮಗೆ ತಿಳಿಯುತ್ತದೆ. ಈ ಮಾತುಗಳಿಗೆ ಪ್ರತಿಕ್ರಿಯಿಸದೆ ಇದ್ದಾಗ ಸ್ವಲ್ಪ ಉಗ್ರವಾಗಿಯೇ ನುಡಿಯುತ್ತಾಳೆ.

"ಶಮಮನೆ ಕೆಯ್ಕೊಳ್ವೊಡೆ ಬಿ
ಲ್ಲುಮಂಬುಮಂ ಬಿಸುಟು ತಪಕೆ ನೀಂ ಬಗೆವೊಡೆ ವಿ
ಕ್ರಮಮಂ ಪಗೆಯಂ ಕಿಡಿಸುವ
ಶಮದಿಂ ಮುನಿಗಾಯ್ತು ಸಿದ್ಧಿ ಭೂಪತಿಗಾಯ್ತೇ"[೧೫೩]

ನೀನು ಶಾಂತಿಯನ್ನೆ ಬಯಸುವುದಾದರೆ ಅಥವಾ ಶಾಂತಿಯ ಗುಣಗಳನ್ನೆ ಅಪೇಕ್ಷಿಸುವುದಾದರೆ ಬಿಲ್ಲನ್ನು ಬಾಣವನ್ನು ಬಿಸಾಡಿ ತಪಸ್ಸಿಗೆ ಹೋಗಬಹುದು. ನೀನು ತಪಸ್ಸನ್ನೇ ಅಪೇಕ್ಷಿಸುವುದಾದರೆ ವಿಕ್ರಮವನ್ನು, ಹಗೆಯನ್ನೂ, ಹೋಗಲಾಡಿಸುವಂತಹ ಶಾಂತಿಯಿಂದ ಮುನಿ ಸಿದ್ಧಿ ಸಿಗುತ್ತದೆಯೇ ಹೊರತು ರಾಜಸಿದ್ಧಿ ಸಿಗುವುದಿಲ್ಲ ಎನ್ನುತ್ತಾಳೆ. ಇಲ್ಲಿ ದ್ರೌಪದಿಯ ಮನಸ್ಸು ತನಗಾದ ಅಪಮಾನಕ್ಕೆ ಸೇಡು ತೀರಿಸಿಕೊಳ್ಳುವ ಪ್ರತೀಕಾರದಲ್ಲಿದೆ. ಅದಕ್ಕಾಗಿಯೇ ಶಾಂತಿ ಮಂತ್ರ ಪಠಿಸುತ್ತಿರುವ ಧರ್ಮರಾಯನನ್ನು ನೀನು ಬಿಲ್ಲು ಬಾಣಗಳನ್ನು ಬಿಟ್ಟು ತಪಸ್ಸಿಗೆ ತೆರಳು ಎನ್ನುತ್ತಾಳೆ. ಅಂದರೆ ಎಲ್ಲ ಸಂದರ್ಭಗಳಲ್ಲೂ ಶಾಂತಿಗುಣದಿಂದ ಕಾರ್ಯಸಿದ್ಧಿಯಾಗುವುದಿಲ್ಲ ಎಂಬುದು ದ್ರೌಪದಿಯ ಅಭಿಮತ. ಮುಂದುವರೆದು

"ತಪ್ಪುಮನೆ ನುಡಿಯೆನೆಂಬುದಿ
ದೊಪ್ಪದು ನಿನಗಹಿತರೆಯ್ದೆ ತಪ್ಪಿರ್ದರವರ್
ತಪ್ಪಿದ ಬಟಿಕ್ಕೆ ತಪ್ಪಿದ
ತಪ್ಪೇಂಗಳ ನನ್ನಿಗೊಪ್ಪಮಲ್ಲದ ತಪ್ಪೇ"[೧೫೪]

"ದೋಷವನ್ನೇ ಕುರಿತು ನಾನು ಮಾತನಾಡುವುದಿಲ್ಲವೆಂಬ ಮಾತು ಯೋಗ್ಯವಲ್ಲ; ಶತೃಗಳಾದವರು ತಪ್ಪು ಮಾಡಿದ್ದಾರೆ. ಅವರು ತಪ್ಪು ಮಾಡಿದ ಬಳಿಕ ನೀನು ತಪ್ಪು ಮಾಡಿದರೆ ಆ ತಪ್ಪು ನಿನ್ನ ಸತ್ಯಕ್ಕೆ ಒಪ್ಪದ ತಪ್ಪಾಗುತ್ತದೆಯೇ?"[೧೫೫] ಎನ್ನುತ್ತಾಳೆ ದ್ರೌಪದಿ. ಇಲ್ಲಿ ಪ್ರಧಾನವಾಗಿ ದ್ರೌಪದಿಯ ಮನಸ್ಸು ಧರ್ಮರಾಯನನ್ನು ಯುದ್ಧದ ಕಡೆ ಸೆಳೆಯುವ ಹಾಗೂ ತನ್ನ ಪ್ರತಿಜ್ಞೆಯನ್ನು ಪೂರ್ತಿಗೊಳಿಸಿಕೊಳ್ಳಲು ಅಗತ್ಯವಾದ ಸಂದರ್ಭವನ್ನು ನಿರ್ಮಿಸಿಕೊಡಲು ಅಣಿಮಾಡುತ್ತಿರುವಂತೆ ಕಂಡುಬರುತ್ತದೆ.

ಅಲ್ಲದೆ ಅರ್ಜುನನು ವ್ಯಾಸರ ಆಣತಿಯಂತೆ ದಿವ್ಯಾಸ್ತ್ರಗಳನ್ನು ಗೆಲ್ಲಲು ಹೊರಟ ಸಂದರ್ಭದಲ್ಲಿ ದ್ರೌಪದಿ ಆತನಿಗೆ ಹೇಳುವ ಕಿವಿ ಮಾತುಗಳು ಸಹ ಆಕೆಯ ಮನದಲ್ಲಿನ ಸಂಘರ್ಷಗಳನ್ನು ಅಭಿವ್ಯಕ್ತಪಡಿಸುತ್ತವೆ.

"ಬಗೆಯದೆ ಮೆಯ್ಸೊಕಮಂ ಬಗೆ
ಪಗೆವರ ಕಡುವೆರ್ಚನೆನ್ನ ಪೂಣ್ಕೆಯನೆರ್ದೆಯೊಳ್
ಬಗೆ ಮುನಿಯ ಮಂತ್ರಪದಮಂ
ಬಗೆ ಕೂಡುಗೆ ನಿನ್ನ ಬಗೆದ ಬಗೆಯೊಳ್ ಪಾರ್ಥಾ"[೧೫೬]

ನಿನ್ನ ದೇಹದ ಸೌಖ್ಯವನ್ನು ಚಿಂತಿಸದೆ ಶತೃಗಳ ಹೆಚ್ಚಿನ ಅಭಿವೃದ್ಧಿಯನ್ನೂ, ನಾನು ಮಾಡಿದ ಪ್ರತಿಜ್ಞೆಯನ್ನೂ, ಮುನಿಯ ಮಂತ್ರೋಪದೇಶವನ್ನೂ ಹೃದಯದಲ್ಲಿ ಚಿಂತಿಸು. ಅರ್ಜುನ ನಿನ್ನ ಮನದ ಇಷ್ಟಾರ್ಥಗಳು ಸಿದ್ಧಿಸಲಿ ಎನ್ನುತ್ತಾಳೆ. ಇಲ್ಲಿ ದೇಹ ಸೌಖ್ಯವನ್ನು ಆಸೆಪಡದೆ ನನ್ನ ಪ್ರತಿಜ್ಞೆಯನ್ನು ನೆನಪಿನಲ್ಲಿಟ್ಟುಕೊಂಡು ಮುಂದಿನ ಯುದ್ಧಕ್ಕಾಗಿ ದಿವ್ಯಾಸ್ತ್ರಗಳನ್ನು ಪಡೆದು ಬರುವಂತೆ ತಿಳಿಸುತ್ತಾಳೆ.

೩.೩.೨.೫. ಜಯದ್ರಥನಿಂದ ಅಪಹರಣಕ್ಕೊಳಗಾದ ಸನ್ನಿವೇಶ

ಅಪಹರಣದ ವಿಚಾರಗಳು ನಮಗೆ ಪ್ರಾಚೀನ ಕಾಲದಿಂದಲೂ ಕಂಡುಬರುತ್ತವೆ. ರಾವಣನಿಂದ ಅಪಹರಣಕ್ಕೊಳಗಾಗುವ ಸೀತೆ ಇದಕ್ಕೆ ಸ್ಪಷ್ಟ ಉದಾಹರಣೆ. ಅದರಂತೆಯೆ ಅರಣ್ಯ ವಾಸದಲ್ಲಿರುವಾಗ ದ್ರೌಪದಿಯು ಜಯದ್ರಥನಿಂದ ಅಪಹರಣಕ್ಕೊಳಗಾಗಿ ನೋವನ್ನು ಅನುಭವಿಸುತ್ತಾಳೆ. ಈ ಸಂದರ್ಭವು ಪಂಪನಲ್ಲಿದ್ದರೂ ಆತ ವಿವರವಾಗಿ ಹೇಳಿಲ್ಲ. ಆದರೆ ಕುಮಾರವ್ಯಾಸ ವಿಸ್ತರಿಸಿದ್ದಾನೆ. ದುರ್ಯೋಧನನು ಗಂಧರ್ವರಿಂದ ಬಂಧನಕ್ಕೆ ಒಳಗಾಗಿ ನಂತರ ಬಿಡುಗಡೆ ಹೊಂದಿದ ವಿಷಯ ಸಿಂಧು ದೇಶಕ್ಕೆ ಮುಟ್ಟಿತು. ಅಂಧನೃಪತಿಯ ಅಳಿಯನಾದ ಜಯದ್ರಥನು ಈ ಸುದ್ಧಿಯನ್ನು ಕೇಳಿದನು. ಎಲ್ಲರೂ ಬೇಡ ಬೇಡವೆಂದರೂ ಕೇಳದೆ ಸೈನ್ಯವನ್ನು ಸೇರಿಸಿಕೊಂಡು ಪಾಂಡವರರಸನಿರುವ ವಿಮಲಾಶ್ರಮದ ಕಾಡಿನ ಪಕ್ಕಕ್ಕೆ ಬಂದು ಬೀಡು ಬಿಟ್ಟನು. ಇತ್ತ ಕುಂತೀ ಸುತರೈವರೂ ಬೇಟೆಯಾಡುವುದಕ್ಕೆ ಕಾಡಿನೊಳಕ್ಕೆ ಹೋದರು. ದ್ರೌಪದಿ ಮಾತ್ರ ಆಶ್ರಮದಲ್ಲಿದ್ದಳು. ಅವಳ ಹಾಗೂ ಆಶ್ರಮದ ಕಾವಲಿಗೆ ಧೌಮ್ಯರನ್ನೂ, ಮುನಿಜನಗಳನ್ನೂ ನಿಲ್ಲಿಸಿದ್ದರು. ಹೀಗಿರಲು ಜಯದ್ರಥ ತನ್ನ ಸೇವಕರ ಕೈಲಿ ವಿವಿಧ ರತ್ನಾಭರಣಗಳನ್ನೂ, ಪಟ್ಟಾವಳಿಯನ್ನೂ, ಅನುಲೇಪನಾದಿಗಳನ್ನೂ ಕಾಣಿಕೆಯಾಗಿ ಕೊಟ್ಟು ಬರುವಂತೆ ಕಳುಹಿಸುತ್ತಾನೆ. ಆಕೆ ಎಲ್ಲರ ಕ್ಷೇಮವನ್ನು ವಿಚಾರಿಸಿ, ಪಾಂಡವರಿಲ್ಲದ ಕಾರಣ ನಾವು ಇವುಗಳನ್ನು ಪಡೆಯಲು ಸಾಧ್ಯವಿಲ್ಲವೆಂದು ಹೇಳಿ ವಾಪಸ್ಸು ಕಳುಹಿಸಿದಳು. ಕೋಪದಿಂದ ಜಯದ್ರಥನು ನೇರವಾಗಿ ತಾನೆ ಆಶ್ರಮಕ್ಕೆ ಬರುತ್ತಾನೆ. ಬಂದವನು ಜಯದ್ರಥ. ದ್ರೌಪದಿಯೇ, ನೀನು ಅಳುಕುವುದೇಕೆ ? ಎಂದು ನುಡಿದಾಗ ಆಕೆ ಈ ರೀತಿಯಾಗಿ ಹೇಳುತ್ತಾಳೆ.

"ಬೆದರಲೇತಕೆ ನಮ್ಮ ನಾದನಿ
ಮದವಳಿಗ ನೀನಾದರೊಡಹು
ಟ್ಟಿದನು ನೀನಹೆಯೆನಗೆ ನಿನ್ನಲ್ಲಿ ಭಯವೇನು
ಸದನವಿದು ಪತಿಶೂನ್ಯ ತಾನೆಂ
ಬುದು ಪತಿವ್ರತೆಯಲ್ಲಿಯನುಚಿತ
ವಿದು ವಿಚಾರವ ಬಲ್ಲೆ ನೀನೆಂದಳು ಸರೋಜಮುಖಿ"[೧೫೭]

ಏತಕ್ಕೆ ಹೆದರಿಕೊಳ್ಳಲಿ, ನೀನು ನಮ್ಮ ನಾದಿನಿಯ ಮದವಳಿಗ. ಆದ್ದರಿಂದ ನೀನು ನನಗೆ ಸಹೋದರನಾಗಬೇಕು. ಹೀಗಿರುವಾಗ ನಿನ್ನಲ್ಲಿ ಬೇರೆ ಭಯವೇನು? ಅಲ್ಲದೆ ಸದನದಲ್ಲಿ ನನ್ನ

ಪತಿಗಳಿಲ್ಲ. ಈಗ ನಾನು ಮಾತನಾಡುವುದು ಪತಿವ್ರತೆಯಲ್ಲಿ ಅನುಚಿತ ಎನ್ನುತ್ತಾಳೆ. ಇಲ್ಲಿ ದ್ರೌಪದಿಯು ಪ್ರತಿ ಸನ್ನಿವೇಶಗಳಲ್ಲಿಯೂ ಸಂಬಂಧಗಳನ್ನು, ಬಾಂಧವ್ಯಗಳನ್ನು ನೆನಪಿನಲ್ಲಿಟ್ಟುಕೊಂಡೇ ಮಾತನಾಡುತ್ತಾಳೆ. ಆದರೆ ಉಳಿದವರು ಆ ಬಾಂಧವ್ಯಗಳನ್ನು ಮರೆತು ಸಂಬಂಧಗಳ ಅರಿವಿಲ್ಲದೆ ದ್ರೌಪದಿಯನ್ನು ನಡೆಸಿಕೊಳ್ಳುತ್ತಾರೆ.

ಈ ಮಾತುಗಳನ್ನು ಕೇಳಿದ ಜಯದ್ರಥ ಅವಳನ್ನು ಹಂಗಿಸಿ ಮಾತನಾಡುತ್ತಾನೆ.

"ಅಹಹ ಪಾತಿವ್ರತ್ಯವತಿ ಸ
ನ್ನಿಹಿತವಲ್ಲಾ ನಿನಗೆ ಹಲಬರ
ಮಹಿಳೆ ಸತಿಯೆನಿಸುವರೆ ಸೂಳೆಯರೇಕ ಪುರುಷರಲಿ
ವಿಹರಿಸುವರೇ ಲೋಕಧರ್ಮದ
ರಹಣಿ ರಹಿಸುವುದೈಸಲೇ ನಮ
ಗಿಹುದು ಮತವಲ್ಲದೊಡೆ ಮಾಣಲೆನುತ್ತ ಮುರಿದೆದ್ದ"[೧೫೮]

ಇಲ್ಲಿ ಜಯದ್ರಥನು ದ್ರೌಪದಿಯ ವಿವಾಹ ಸಂಬಂಧಗಳನ್ನು ಕುರಿತು ಕಟಕಿಯ ಮಾತುಗಳನ್ನಾಡುತ್ತಾನೆ. ಅಂದಿನ ಕಾಲದಲ್ಲಿ ಬಹುಪತಿತ್ವ ಹೊಂದುವ ಹೆಣ್ಣನ್ನು ಸಮಾಜ ನೋಡುತ್ತಿದ್ದ ದೃಷ್ಟಿಕೋನವನ್ನು ಕವಿ ಜಯದ್ರತನಿಂದ ನುಡಿಸಿದ್ದಾನೆ. ಇಂದಿಗೂ ಅದು ಹೊರತಾಗಿಲ್ಲ. ನಮ್ಮ ಸಮಾಜದಲ್ಲಿ ಬಹುಪತ್ನಿತ್ವವನ್ನು ಪುರಸ್ಕರಿಸುವಷ್ಟು ಬಹುಪತಿತ್ವವನ್ನು ಸ್ವೀಕರಿಸುವುದಿಲ್ಲ. ಇದು ಹೆಣ್ಣೊಬ್ಬಳ ನೈತಿಕತೆಯನ್ನು ಪ್ರಶ್ನಿಸುವಂತಿದೆ. ಮುಂದುವರೆದು ಅವಳ ಅಪಹರಣಕ್ಕು ತೊಡಗುತ್ತಾನೆ.

"ತರಳೆ ಮಿಗೆ ತಲ್ಲಣಿಸಿ ತಳಿರೋ
ವರಿಯ ಹೊಗುತಿರಲಟ್ಟಿ ಮೇಲುದ
ಬರಸೆಳೆದು ತುರುಬಿಂಗೆ ಹಾಯ್ದನು ಹಿಡಿದು ಕುಸುಬಿದನು
ಒರಲಿದಳು ಹಾ ಭೀಮ ಹಾ ನೃಪ
ವರ ಧನಂಜಯ ಹಾಯೆನುತ ಕಾ
ತರಿಸೆ ಕಮಲಾನನೆಯ ಕಂಠವನೌಚಿ ಹೊರವಂಟ"[೧೫೯]

ಅವಳನ್ನು ಅಟ್ಟಿಹೋಗಿ ಸೆರಗು ಹಿಡಿದೆಳೆದು ತುರುಬಿಗೆ ಕೈಹಾಕಿ ಹಿಡಿದನು. ಆಗ ದ್ರೌಪದಿ 'ಹಾ ಭೀಮಾ ಹಾ ನೃಪವರ ಧನಂಜಯ ಎಂದು ಕಾತರಿಸಿ ಕೂಗಿಕೊಳ್ಳಲು ಜಯದ್ರಥನು ಅವಳ ಕೊರಳನ್ನು ಅಮುಕಿ ಅವಚಿಕೊಂಡು ಹೊರಹೊರಟನು.

ಇಲ್ಲಿ ದ್ರೌಪದಿಯನ್ನು ಗಮನಿಸಿದಾಗ ಪ್ರತಿಕ್ಷಣ ಹಾಗೂ ಸನ್ನಿವೇಶಗಳಲ್ಲಿ ಆಕೆ ಪದೇ ಪದೇ ಶೋಷಣೆಗೆ, ಆಘಾತಗಳಿಗೆ ಒಳಗಾಗುತ್ತಲೇ ಹೋಗುತ್ತಾಳೆ. ಇಲ್ಲಿನ ಸನ್ನಿವೇಶಗಳನ್ನು ಗಮನಿಸಿದರೆ ಸಂಬಂಧಗಳ ಮುರಿಯುವಿಕೆ ಹಾಗೂ ಉಲ್ಲಂಘಿಸುವಿಕೆ ಕಂಡುಬರುತ್ತದೆ. ದುಶ್ಯಾಸನನಾಗಲೀ, ಜಯದ್ರಥನಾಗಲೀ ಅವರು ದ್ರೌಪದಿಗೆ ಹೊರಗಿನವರಲ್ಲ, ಸಂಬಂಧಿಕರೆ. ಆದರೆ ಅವರೆಲ್ಲ ದ್ರೌಪದಿಯನ್ನು

ನಡೆಸಿಕೊಂಡ ರೀತಿ ಮಾತ್ರ ಅಂತಹ ವೀರರಿಗೆ ಹಾಗೂ ನಾಗರೀಕ ಸಮಾಜದ ವ್ಯಕ್ತಿಗಳಿಗೆ ಗೌರವ ತರುವಂತಹದ್ದಲ್ಲ.

"ವೈಯಕ್ತಿಕ ಸಂಬಂಧಗಳನ್ನು ವಿಚ್ಛೇದಗೊಳಿಸಿ, ವಿಂಗಡಿಸಿ, ಬೇರೆ ಸಂಬಂಧಗಳನ್ನು – ಕಾಲ್ಪನಿಕ ಸಂಬಂಧಗಳನ್ನು – ನಿರ್ಮಿಸುತ್ತ ಅರ್ಥ ವ್ಯಾಪ್ತಿಯನ್ನು ವಿಸ್ತರಿಸುವುದು 'ಕನ್ನಡ ಭಾರತ'ದ ಶೈಲಿಯ ವಿಶೇಷತೆಗಳಲ್ಲೊಂದಾಗಿದೆ"[೧೬೦] ಎಂಬ ಮಾತುಗಳು ಅರ್ಥಪೂರ್ಣವಾಗಿದ್ದು, ದ್ರೌಪದಿಯು ಪುನಃ ಪುನಃ ಉಚ್ಚರಿಸುವ ಅಥವಾ ನೆನಪಿಸುವ ಸಂಬಂಧಗಳ ಉಲ್ಲೇಖದ ಸಂದರ್ಭದಲ್ಲಿ ಈ ಅಭಿಪ್ರಾಯದ ಅರ್ಥ ವ್ಯಾಪ್ತಿಗಳು ಸ್ಪಷ್ಟವಾಗುತ್ತವೆ.

೩.೩.೨.ಎ. ವಿರಾಟ ನಗರಿಯಲ್ಲಿ ಸೈರಂಧ್ರೀ ವೇಷದಲ್ಲಿನ ಸಂಘರ್ಷಗಳು

ವಿರಾಟ ನಗರದಲ್ಲಿನ ಪಾಂಡವರ ಬದುಕು ಅಗ್ನಿಪರೀಕ್ಷೆಯ ಸಂದರ್ಭ. ಕರಾರಿನಂತೆ ಹನ್ನೆರಡು ವರ್ಷ ವನವಾಸವನ್ನು ಕಳೆದು, ಒಂದು ವರ್ಷದ ಅಜ್ಞಾತವಾಸಕ್ಕೆ ದುರ್ಯೋಧನನ ಶತ್ರುವಾಗಿದ್ದ ವಿರಾಟನ ಅರಮನೆಯನ್ನು ಆಶ್ರಯಿಸುತ್ತಾರೆ. ಇಲ್ಲಿ ಯಾರಿಗೂ ತಿಳಿಯದ ಹಾಗೆ ಬದುಕು ಸಾಗಿಸಬೇಕಾದ್ದು ಅವರ ಬಹುಮುಖ್ಯವಾದ ಜವಾಬ್ದಾರಿ. ಅಲ್ಲದೆ ತಮ್ಮೆದುರಿಗೇ ಕೀಚಕ ದ್ರೌಪದಿಯನ್ನು ಒದೆದು ಅವಮಾನಗೊಳಿಸಿದರೂ ಅದನ್ನು ಕೇಳದೆ, ಪ್ರತಿಭಟಿಸದೆ ಹಾಗೂ ಅವಳನ್ನು ರಕ್ಷಿಸಲಾಗದ ಅಸಹಾಯಕ ಸ್ಥಿತಿಯಲ್ಲಿ ಕಾಲ ದೂಡುತ್ತಾರೆ. ಕಾರಣ ಅಜ್ಞಾತವಾಸದಲ್ಲಿ ಯಾರಾದರೂ ಅವರನ್ನು ಗುರುತು ಹಚ್ಚಿದರೆ ಮತ್ತೆ ಹನ್ನೆರಡು ವರ್ಷ ಅರಣ್ಯ ವಾಸವನ್ನು ಅನುಭವಿಸಬೇಕೆಂಬ ಕರಾರಿಗೆ ಒಳಪಟ್ಟು ಪಾಂಡವರು ಬಂದಿರುತ್ತಾರೆ. ಎಲ್ಲರೂ ತಮ್ಮ ತಮ್ಮ ನಾಮಧೇಯಗಳನ್ನು ಬದಲಿಸಿಕೊಂಡು ಅಜ್ಞಾತ ವಾಸದಲ್ಲಿದ್ದರು. ಅದರಂತೆ ದ್ರೌಪದಿ ಸೈರಂಧ್ರೀ ವೇಷದಲ್ಲಿ ಸುದೇಷ್ಣೆಯ ಸೇವಕಿಯಾಗಿದ್ದಳು. ಹೀಗಿರುವಾಗ ಸುದೇಷ್ಣೆಯ ತಮ್ಮನಾದ ಕೀಚಕನ ದೃಷ್ಟಿ ದ್ರೌಪದಿಯ ಮೇಲೆ ಬೀಳುತ್ತದೆ. ತನಗೆ ವಶವಾಗುವಂತೆ ಕೇಳುವ ಮೂಲಕ ತನ್ನ ಮನದ ಬಯಕೆಯನ್ನು ವ್ಯಕ್ತಪಡಿಸಿದಾಗ ಸೈರಂಧ್ರಿ ಅದನ್ನು ತಿರಸ್ಕರಿಸುತ್ತಾಳೆ. ಇದರಿಂದ ಕೋಪಗೊಂಡ ಕೀಚಕ ಅವಳನ್ನು ಸಭಾಮಧ್ಯದಲ್ಲಿ ಒದೆಯುತ್ತಾನೆ. ಇಲ್ಲಿ ದ್ರೌಪದಿ ಮತ್ತೊಮ್ಮೆ ದುರ್ಯೋಧನನ ಸಭಾಮಧ್ಯದಲ್ಲಿ ದುಶ್ಯಾಸನನಿಂದ ಅನುಭವಿಸಿದ್ದ ಅವಮಾನ, ಭಯ, ಆತಂಕಗಳಿಗೆ ಒಳಗಾಗುತ್ತಾಳೆ. ಮತ್ತದೇ ಸಂದಿಗ್ಧ ಹಾಗೂ ಅಸಹಾಯಕ ಪರಿಸ್ಥಿತಿ. ಇಲ್ಲಿಯೂ ಕೀಚಕನಿಂದ ತನ್ನನ್ನು ರಕ್ಷಿಸುವವರು ಯಾರು? ಎಂದು ಕೃಷ್ಣನನ್ನು ಬೇಡಿಕೊಳ್ಳುತ್ತಾಳೆ. ತನ್ನ ದುಃಖವನ್ನು ಭೀಮನಲ್ಲಿ ತಿಳಿಸಿ ಕೀಚಕನಿಂದ ರಕ್ಷಿಸುವಂತೆ ಕೋರುತ್ತಾಳೆ.

ಪ್ರಧಾನವಾಗಿ ಈ ಭಾಗವು ದ್ರೌಪದಿಯ ಬಹುಮುಖ್ಯ ಸಂಘರ್ಷಗಳನ್ನು ತಿಳಿಸಿಕೊಡುತ್ತದೆ. ಮಹಾರಾಣಿಯಾಗಿ ಉನ್ನತ ಸ್ಥಾನದಲ್ಲಿದ್ದವಳು ದುಶ್ಯಾಸನನ ಕೈಲಿ ಸಿಕ್ಕಿ ಅವಮಾನಿತಳಾಗಿ ನರಳಿದಂತೆ, ಇಲ್ಲಿ ಮತ್ತೆ ಕೀಚಕನ ಕಾಮುಕ ದೃಷ್ಟಿಗೆ ಬಲಿಯಾಗಬೇಕಾದ ಸ್ಥಿತಿ ಒದಗಿದೆ. (ಅದಕ್ಕೆ ಪುಷ್ಟಿಯೆಂಬಂತೆ ಸುದೇಷ್ಣೆ ನಿಲ್ಲುವುದು ವಿಪರ್ಯಾಸದಂತೆ ಕಾಣುತ್ತದೆ) ಇಂತಹ ಸಂದರ್ಭವನ್ನು ಪಂಪ ಕೆಲವೇ

ಪದ್ಯಗಳಲ್ಲಿ ತಿಳಿಸಿ ಮುಂದುವರೆದರೆ ಕುಮಾರವ್ಯಾಸ ವಿವರವಾಗಿ ಅವಳ ಸಂಘರ್ಷಗಳನ್ನು ತಿಳಿಸಿಕೊಡುತ್ತಾನೆ.

'ವಿಕ್ರಮಾರ್ಜುನ ವಿಜಯ'ದಲ್ಲಿ ಸೈರಂಧ್ರಿಯನ್ನು ನೋಡಿದ ಕೀಚಕ ಆಕೆಯನ್ನು ತನ್ನರಮನೆಗೆ ಕಳುಹಿಸುವಂತೆ ಕೋರಿದಾಗ ಸುದೇಷ್ಣೆ ಆತನಿಗೆ ಬುದ್ಧಿ ಹೇಳುತ್ತಾಳೆ. ಆದರೆ ಕೀಚಕ ಅಕ್ಕನ ಬುದ್ಧಿ ಮಾತುಗಳನ್ನು ಕೇಳದೆ ತನ್ನ ಮನಸ್ಸಿನ ಬಯಕೆಗಳನ್ನು ಈಡೇರಿಸುವಂತೆ ಅವಳಲ್ಲಿ ಕೋರುತ್ತಾನೆ. ಜೊತೆಗೆ ದ್ರೌಪದಿಯನ್ನು ಹಲವು ವಿಧದಲ್ಲಿ ಬೇಡಿಕೊಳ್ಳುತ್ತಾನೆ. ತನ್ನ ಮಾತುಗಳೂ ಆಸೆಯೂ ತಿರಸ್ಕೃತವಾಗಲು ಸಹಿಸಲಾಗದೆ ಕೀಚಕ ಅವಳನ್ನು ಹಿಡಿದುಕೊಳ್ಳಲು ಹೋದಾಗ ದ್ರೌಪದಿ ಹೀಗೆಂದು ಹೇಳುತ್ತಾಳೆ.

"ನುಡಿಯಲ್ಬೇಡೆನ್ನೊಳಿಂತಪ್ಪಳಿಪಿನ ನುಡಿಯಂ ನಿನ್ನ ಮಾತಿಂಗೆ ಚೀಃ ಮೆ
ಳ್ಪಡುವಂತಪ್ಪಾಕೆಯಲ್ಲೆಂ ಬಿಡು ಗಡ ಬಿಡದಂದೆನ್ನ ಗಂಧರ್ವರಿಂದಂ
ಮಡಿವಯ್ ನೀನೆಂದೊಡಂತಪ್ಪೊಡೆ ಬಿಡಿನೆನಗಂ ಮೇಗುವೇಟ್ಟಿಪ್ಪೆಯಿಲ್ಲಾ
ರ್ಪೊಡೆ ನಿನ್ನಂ ಕಾವ ಗಂಧರ್ವರೆ ಬಿಡಿಸುಗೆ ಪೋಗೆಂದು ಪೊಯ್ದಂ ದುರಾತ್ಮಂ"[೧೬೧]

ನೀನು ನನ್ನಲ್ಲಿ ಈ ರೀತಿಯ ದುರಾಸೆಯ ಮಾತುಗಳನ್ನು ನುಡಿಯಬೇಡ. ನಿನ್ನ ಮಾತುಗಳಿಗೆ ಮೋಸ ಹೋಗುವಂತಹವಳು ನಾನಲ್ಲ. ನನ್ನನ್ನು ಬಿಟ್ಟು ಬಿಡು. ಬಿಡದಿದ್ದರೆ ನೀನು ನನ್ನ ಗಂಧರ್ವರಿಂದ ಸಾಯುತ್ತೀಯೇ ಎಂದು ಎಚ್ಚರಿಸುತ್ತಾಳೆ. ಆದರೂ ದುರಾತ್ಮನಾದ ಆತನು ಸಮರ್ಥರಾಗಿದ್ದರೆ ನಿನ್ನ ಗಂಧರ್ವರು ನಿನ್ನನ್ನು ರಕ್ಷಿಸಿ ಬಿಡಿಸಿಕೊಳ್ಳಲಿ ಹೋಗು ಎಂದು ಅವಳನ್ನು ಹೊಡೆಯುತ್ತಾನೆ. ಈ ಸಂದರ್ಭ ನಮಗೆ ಮತ್ತೆ ವಸ್ತ್ರಾಪಹರಣದ ಸಂದರ್ಭದಲ್ಲಿನ ದುಶ್ಯಾಸನನ ಉದ್ದಟತನವನ್ನು ನೆನಪಿಸುತ್ತದೆ. ಈ ರೀತಿಯಾಗಿ ಆತನಿಂದ ಹೊಡೆತ ತಿಂದು ಅಪಮಾನಿತಳಾದ ದ್ರೌಪದಿಯು

"ಪೊಯ್ದೊಡೆ ಬಱುಬಂ ಪೊಯಿಲ್ವೆತ್ತಂತೇನುಮನಱಿಯದೆ ಪರಿಭವಾನಿಲನಿಂ
ಶೋಕಾನಲನಿರ್ಮಡಿಸೆ ನಡನಡುಗಿ ಕಾಯ್ಪಿನೊಳ್ ಪಿಡುಗಿ ತಳೋದರಿ ವೃಕೋದರನಲ್ಲಿಗೆ
ವಂದು ಕಟ್ಟೇಕಾಂತದೊಳಿಂತೆಂದಳ್"[೧೬೨]

ಆ ರೀತಿಯಾಗಿ ಕೀಚಕನು ದ್ರೌಪದಿಗೆ ಹೊಡೆಯಲಾಗಿ ಸಹಾಯವಿಲ್ಲದವನು ಪೆಟ್ಟನ್ನು ತಿಂದ ಹಾಗೆ ಏನು ಮಾಡಲೂ ತಿಳಿಯದೆ ಅಪಮಾನವೆಂಬಂತಹ ಗಾಳಿಯಿಂದ ದುಃಖಾಗ್ನಿಯು ಇಮ್ಮಡಿಸಲು ವಿಶೇಷವಾಗಿ ಕೋಪದಿಂದ ನಡುಗಿ ದ್ರೌಪದಿಯು ಭೀಮನ ಬಳಿಗೆ ಬಂದು ಏಕಾಂತದಲ್ಲಿ ಈ ರೀತಿಯಾಗಿ ತನ್ನ ದುಃಖವನ್ನು ವ್ಯಕ್ತಪಡಿಸುತ್ತಾಳೆ.

"ಪೆಱನಿಕ್ಕುಂಗೂಟಬೊಳಂ ಕೀಟಲೊಳಮಳವಿಗೆಟ್ಟಿರ್ಪ ನಿಮ್ಮಿರ್ಪುದರ್ಕಂ
ಮಱುಗುತ್ತಿರ್ಪಳ್ಗೆ ನೋಡಾದಟಲನೆನಗೆ ಕಣ್ಣೋಲದಿಂ ಕೀಚಕಂ ಬಂ ।
ದುಱದೆನ್ನಂ ಕಾಡಿ ಕೈಗೆಲ್ದುಗಿದನವನದೊಂದುರ್ಕನೇವೇಟ್ವೆನಿನ್ನೀ
ನಱಿವಯ್ ಪೊಣ್ದೆನ್ನದೊಂದಂ ಪರಿಭವಮನಿದಂ ನೀಗು ನೀಂ ಭೀಮಸೇನಾ"[೧೬೩]

"ಪರಾನ್ನದಿಂದಲೂ ಪರರ ಸೇವಾ ವೃತ್ತಿಯಿಂದಲೂ ಕೀಳಂತಸ್ತಿನಲ್ಲಿ ದುಃಸ್ಥಿತಿಯಿಂದ ದುಃಖಪಡುತ್ತಿರುವ ನನಗೆ ಉಂಟಾದ ದುಃಖವನ್ನು ನೋಡು. ನನ್ನ ಮೇಲಿನ ಮೋಹದಿಂದ ಕೀಚಕನು ಬಂದು ವಿಶೇಷವಾಗಿ ನನ್ನನ್ನು ಹಿಂಸಿಸಿ ಕೈಮೀರಿ ಹೊಡೆದು ಬಿಸಾಡಿದನು. ಅವನ ಕೊಬ್ಬನ್ನು ಏನೆಂದು ಹೇಳಲಿ, ಭೀಮಸೇನಾ ನನ್ನನ್ನು ಆವರಿಸಿರುವ ಈ ಅವಮಾನವನ್ನು ನೀನು ತಿಳಿದಿದ್ದೀಯೆ, ಇದನ್ನು ನೀನು ಪರಿಹಾರ ಮಾಡು ಎಂದು ಬಾಯಳಿದಳು"[೧೬೪] ಇಲ್ಲಿ ದ್ರೌಪದಿಯ ಮೇಲೆ ದೈಹಿಕವಾಗಿ ಕೀಚಕ ಹಲ್ಲೆ ಮಾಡುತ್ತಾನೆ. ಒಬ್ಬ ರಾಣಿಯಾದವಳು ಈ ರೀತಿ ಅನ್ಯಪುರುಷನೊಬ್ಬನಿಂದ ಪೆಟ್ಟು ತಿನ್ನುವುದು ನಿಜಕ್ಕೂ ದ್ರೌಪದಿಯ ದುಃಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ. ಅಲ್ಲದೆ ಇದು ಆ ಕಾಲಘಟ್ಟದ ಹೆಣ್ಣುಗಳ ಸ್ಥಿತಿಯನ್ನು ಸಹ ನಮಗೆ ಮನವರಿಕೆ ಮಾಡಿಕೊಡುತ್ತದೆ.

ಪ್ರಭುತ್ವ ಹಾಗೂ ಪುರುಷನೆದುರು ಹೆಣ್ಣು ಎಷ್ಟೇ ಉನ್ನತ ಸ್ಥಾನದಲ್ಲಿರಲಿ, ಎಷ್ಟೇ ಘನತೆವೆತ್ತ ವ್ಯಕ್ತಿಯಾಗಿದ್ದರೂ ಸರಿ ಆಕೆ ಅಲ್ಲಿ ಅಬಲೆ. ಹಾಗೂ ಶೋಷಣೆಗೆ ಗುರಿಯಾಗುವ ವಸ್ತು, ಎಂಬುದನ್ನು ದ್ರೌಪದಿಯ ಈ ಪರಿಸ್ಥಿತಿ ನಮಗೆ ಮತ್ತೆ ಮತ್ತೆ ಚರ್ಚೆಗೆ ಹಚ್ಚುತ್ತದೆ. ಇಲ್ಲಿ ದ್ರೌಪದಿ ದೈಹಿಕ ಹಾಗೂ ಮಾನಸಿಕ ಸಂಘರ್ಷಗಳೆರಡನ್ನೂ ಅನುಭವಿಸುವುದು ಕಂಡುಬರುತ್ತದೆ. ಕೀಚಕನಂತಹ ದುರುಳನಿಂದ ತನ್ನನ್ನು ರಕ್ಷಿಸಿಕೊಳ್ಳಲಾಗದ ಅಸಹಾಯಕ ಸ್ಥಿತಿಯಲ್ಲಿ ದ್ರೌಪದಿ ಇದ್ದಾಳೆ.

ಈ ಸಂದರ್ಭವನ್ನು ಕುಮಾರವ್ಯಾಸ ಬಹು ವಿಸ್ತಾರವಾಗಿ ನಿರೂಪಿಸಿದ್ದಾನೆ. ಅಲ್ಲದೆ ದ್ರೌಪದಿಯ ಮನದಲ್ಲುಂಟಾಗುವ ಭಯ, ಒತ್ತಡ, ಆತಂಕ, ತಳಮಳಗಳಿಗೆ ಕುಮಾರವ್ಯಾಸನು ಹೆಚ್ಚು ಗಮನವನ್ನು ಕೇಂದ್ರೀಕರಿಸಿರುವುದು ಕಂಡುಬರುತ್ತದೆ. ಸುದೇಷ್ಣೆಯ ಮೇಳದಬಲೆಯರ ನಡುವಿದ್ದ ಸೈರಂಧ್ರಿಯನ್ನು ಕಂಡು ಮರುಳಾದ ಕೀಚಕನಿಗೆ ಸುದೇಷ್ಣೆ ಸೈರಂಧ್ರಿಯ ಸಹವಾಸ ಒಳಿತಲ್ಲ ಎಂದು ನುಡಿದು ಕಳುಹಿಸಿದ್ದಳು. ಮರುದಿನ ಅರಮನೆಗೆ ಬಂದಾಗ ದ್ರೌಪದಿಯನ್ನು ಕಂಡ ಕೀಚಕ ಎಲ್ಲರನ್ನು ಹೊರಗೆ ಕಳುಹಿಸಿ ತಾನೊಬ್ಬನೆ ಸೈರಂಧ್ರಿಯ ಬಳಿಗೆ ಬಂದನು. ಈ ಸಂದರ್ಭವನ್ನು ಕವಿ ಹೀಗೆ ತಿಳಿಸುತ್ತಾನೆ.

"ಖಳನ ಮನದಿಂಗಿತವನಾಗಳೆ
ತಿಳಿದು ಕಾಮಿನಿ ಬೆದರಿದಳು ಕಳ
ವಳಿಗ ಸೋತನು ಕೆಟ್ಟೆನೆಂದಳು ತನ್ನ ಮನದೊಳಗೆ
ತೊಲಗಿ ಹಿಂದಡಿಯಿಡಲು ಕೀಚಕ
ನಳುಕದೈತಂದಬುಜವದನೆಯ
ಬಳಿಗೆ ಬಂದನು ನುಡಿಸಲಾಗದೆ ತರಳೆ ನೀನೆಂದ"[೧೬೫]

ಆ ರೀತಿಯಾಗಿ ಹತ್ತಿರ ಬಂದ ಖಳನ ಮನದ ಇಂಗಿತವು ಆ ಕ್ಷಣವೇ ದ್ರೌಪದಿಗೆ ತಿಳಿಯಿತು. ತಿಳಿದ ತಕ್ಷಣ ಬೆದರಿದಳು. ಈ ಕಳವಳಿಗ ಸೋತನು. ನಾನು ಕೆಟ್ಟೆ? ಎಂದು ತನ್ನ ಮನಸ್ಸಿನಲ್ಲೆ ತಿಳಿದು ಅತ್ತ ತೊಲಗಿ ಹಿಂದಡಿಯಿಟ್ಟಳು. ಸ್ವಲ್ಪವೂ ಮನದೊಳಗೆ ಅಳುಕದೆ ಕೀಚಕನು ಸೈರಂಧ್ರಿಯ ಬಳಿ ಬಂದು ನನ್ನನ್ನು ನುಡಿಸಲಾಗದೆ? ಎಂದು ಕೇಳುತ್ತಾನೆ. ಅಂದರೆ ಕೀಚಕನ ಗುಣ ಸ್ವಭಾವಗಳು

ಗೊತ್ತಿದ್ದ ದ್ರೌಪದಿ ಆತನ ಬರುವಿಕೆಯ ಉದ್ದೇಶವನ್ನು ಸೂಕ್ಷ್ಮವಾಗಿ ಅರ್ಥಮಾಡಿಕೊಂಡು ಆತಂಕಕ್ಕೆ ಒಳಗಾಗುತ್ತಾಳೆ. ಆತನನ್ನು ಕುರಿತು

"ಎಲೆ ಮರುಳೆ ಬೇಡಳುಪದಿರು ಕೂ
ರಲಗ ಕೊರಳಿಗೆ ಬಯಸದಿರು ಕಳ
ವಳಿಸದಿರು ಕೈಯೊಡನೆ ನಿನ್ನರಮನೆಗೆ ತೆರಳುವುದು
ಸುಲಭೆ ನಾ ನಿನಗಲ್ಲ ನಿನ್ನನು
ಕೆಲರು ನಗುವರು ಪರದ ಸದ್ಗತಿ
ತೊಲಗುವುದು ಬೇಡಕಟಯೆಂದಳು ಪಾಂಡವರ ರಾಣಿ"[೧೬೬]

ಕೀಚಕನಿಗೆ ತನ್ನ ಸಹವಾಸ ಒಳ್ಳೆಯದಲ್ಲವೆಂದು ಎಚ್ಚರಿಸುತ್ತಾಳೆ ದ್ರೌಪದಿ. ಎಲೆ ಹುಚ್ಚ ಬೇಡ ಅಳುಪದಿರು. ಕೂರಲಗನ್ನು ಕೊರಳಿಗೆ ಬಯಸಬೇಡ, ಕಳವಳಿಸದಿರು. ನಾನು ನಿನಗಲ್ಲ. ನಿನ್ನ ಈ ಸಾಹಸವನ್ನು ನೋಡಿ ಜನ ನಗುವರು. ಇಲ್ಲಿಂದ ಹೊರಡು ಎಂದು ಎಚ್ಚರಿಸುತ್ತಾಳೆ. ಅಂದರೆ ನನ್ನ ಸಹವಾಸದಿಂದ ನಿನಗೆ ಮರಣ ಸಂಭವಿಸುವುದು ಎಂದು ತಿಳಿಸುತ್ತಾಳೆ. ಈ ಮಾತುಗಳಿಗೆ ಕಿವಿಗೊಡದ ಕೀಚಕನು ಸೈರಂಧ್ರಿ ಕಾಮನ ಬಲ್ಲೆಹದ ಗಾಯ ತಾಗಿದೆ. ಅದಕ್ಕೆ ಔಷಧವನ್ನು ನೀನು ಬಲ್ಲೆ. ಅದರಿಂದ ನನ್ನನ್ನು ರಕ್ಷಿಸು ಎನ್ನಲು, ದ್ರೌಪದಿಯು

"ಪರರ ಸತಿಗಳುಪಿದೊಡೆ ಪಾತಕ
ದೊರಕುವುದು ನಿಜಲಕ್ಷ್ಮಿ ತೊಲಗುಗು
ಧರೆಯೊಳಗ್ಗದ ಕೀರ್ತಿ ಮಾಸುಗು ಗತಿಗೆ ಕೇಡಹುದು
ಕೊರಳು ಹಲವಾದಸುರನಂತಕ
ಪುರವನೈದಿದ ಕಥೆಯ ನೀ ಕೇ
ಳ್ದರಿಯಲಾ ಕಡುಪಾಪಿ ಹೋಗೆಂದಳು ಸರೋಜಮುಖಿ"[೧೬೭]

ಬೇರೆಯವರ ಪತ್ನಿಗೆ ಆಸೆಪಟ್ಟರೆ ಪಾತಕವು ದೊರಕುವುದು, ಲಕ್ಷ್ಮಿಯು ತೊಲಗುತ್ತಾಳೆ. ಧರೆಯೊಳಗೆ ವ್ಯಾಪಿಸಿದ್ದ ಶ್ರೇಷ್ಠವಾದ ಕೀರ್ತಿಯು ಮಾಸುತ್ತದೆ. ಸದ್ಗತಿಗೆ ಕೇಡಾಗುವುದು. ಪರಸ್ತ್ರೀಗೆ ಆಸೆಪಟ್ಟ ಹಲವು ಕೊರಳಿದ್ದ ರಾವಣನ ಕಥೆಯನ್ನು ನೀನು ಕೇಳಿಲ್ಲವೆ? ಪಾಪಿ ತೊಲಗು ಎಂದು ಆತನನ್ನು ಧಿಕ್ಕರಿಸಿ ನುಡಿಯುತ್ತಾಳೆ. ದ್ರೌಪದಿಯ ಈ ಮಾತುಗಳು ವಿಚಾರಾರ್ಹವಾದುವು. ಪರರ ಸತಿಗೆ ಆಸೆಪಡುವುದು ಮಹಾಪಾತಕ ಎಂಬುದನ್ನು ಕುಮಾರವ್ಯಾಸ ಒತ್ತಿ ಹೇಳುತ್ತಾನೆ. ಇದರಿಂದ ಕೀರ್ತಿ, ಘನತೆ, ಗೌರವಗಳು ಮಣ್ಣುಪಾಲಾಗುತ್ತವೆ ಎಂಬುದನ್ನು ಸಹ ದ್ರೌಪದಿಯ ಮೂಲಕ ಮನವರಿಕೆ ಮಾಡಿಕೊಡಲು ಪ್ರಯತ್ನಿಸುತ್ತಾನೆ.

ಈ ಮಾತುಗಳನ್ನು ಕೇಳಿದ ಕೀಚಕ ದ್ರೌಪದಿಯ ನುಡಿಗಳಿಗೆ ವಿರುದ್ಧವಾಗಿ ಮಾತನಾಡುತ್ತಾನೆ. ಮೇಲಿನ ಸದ್ಗತಿ ಬೆಂದು ಹೋಗಲಿ, ಸಾವೇ ಬರಲಿ, ಬಂಧುಗಳು ಬೇಕಾದರೂ ಧಿಕ್ಕರಿಸಲಿ,

ರಾಣಿಯರು ನನ್ನನ್ನು ಬಿಟ್ಟು ಹೋಗಲಿ. ಏನು ಬೇಕಾದರೂ ಆಗಲಿ. ನಾನು ನಿನಗೆ ಒಲಿದಿದ್ದೇನೆ, ನನ್ನಯ ಮನದ ಬಡತನವನ್ನು ನಿನ್ನ ಕಳಶ ಕುಚಲಕ್ಷ್ಮಿಯಲಿ ಕಳೆ, ನಿನ್ನ ಮನದೊಲವನ್ನು ಇತ್ತ ಕಡೆ ಹರಿಸು ಎನ್ನುತ್ತಾನೆ.

"ಕೇಳಿ ಕಿವಿ ಮುಚ್ಚಿದಳು ತನ್ನಯ
ಮೇಳದೈವರ ನೆನೆದು ಹರ ಹರ
ಶೂಲಪಾಣಿ ಮುಕುಂದಯೆನುತವೆ ರವಿಯನೀಕ್ಷಿಸುತ
ಕಾಳು ಮೂಳನಲಾ ಖಳಾಗ್ರಣಿ
ಮೇಲುಗಾಣನಲಾ ಮದಾಂಧನ
ಸೋಲಿಸುವರಾರುಂಟೆನುತ ತಲೆ ಬಾಗಿದಳು ತರಳೆ"[೧೬೮]

ಈ ಮಾತುಗಳನ್ನು ಕೇಳಿದೊಡನೆ ಕಿವಿ ಮುಚ್ಚಿಕೊಂಡಳು ದ್ರೌಪದಿ. ತನ್ನಯ ಮೇಳದೈವರನ್ನು ನೆನೆದು ದುಃಖಿಸಿ ಸೂರ್ಯನನ್ನು ನೋಡಿದಳು. ಈತ ಕಾಳುಮೂಳ. ಖಳಾಗ್ರಣಿ, ಮೇಲುಗಾಣ, ಮದಾಂಧ ಇವನನ್ನು ಸೋಲಿಸುವವರಾರುಂಟು ಎಂದು ಚಿಂತಿಸುತ್ತ ದುಃಖದಿಂದ ತಲೆಬಾಗಿದಳು. ವಸ್ತ್ರಾಪಹರಣದ ಸಂದರ್ಭದಂತೆಯೇ ಇಲ್ಲೂ ದ್ರೌಪದಿ ಅಸಹಾಯಕಳು.

"ಎಲೆ ದುರಾತ್ಮ ಮಹಾಪರಾಧವ
ಬಳಸುವರೆ ಬಯಲಿಂಗೆ ನಿನ್ನಯ
ಕುಲದ ಬೇರನು ಕೊಯ್ವರೇ ಬಹುದಾವುದಿದರಿಂದ
ಹಳಿವು ಹೊದ್ದದೆ ಹೆತ್ತವರು ಮ
ಕ್ಕಳುಗಳೆಂಬೀ ಬದುಕ ಮಾಣದೆ
ಯೆಳಸಿಕೊಂಬಂತಾಯಿತೆಂದಳು ಪಾಂಡವರ ರಾಣಿ"[೧೬೯]

ಮತ್ತೆ ಕೀಚಕನಿಗೆ ತಿಳುವಳಿಕೆಯನ್ನುಂಟುಮಾಡಲು ಪ್ರಯತ್ನಿಸುತ್ತಾಳೆ. ಎಲೆ ದುರಾತ್ಮ ಇಂತಹ ಮಹಾಪರಾಧಕ್ಕೆ ಮನಸ್ಸನ್ನು ಕೊಡುವುದೇ? ವ್ಯರ್ಥವಾಗಿ ನಿನ್ನಯ ಕುಲದ ಬೇರನ್ನು ಕೊಯ್ಯುವುದೇ? ಇದರಿಂದ ಹಳಿವು ಒದಗುವುದಿಲ್ಲವೆ? ಹೆತ್ತವರು ಮಕ್ಕಳುಗಳೊಡನೆ ಸಂತೋಷದಿಂದ ಬದುಕಬಾರದೆ? ಬದುಕು ಮುಗಿಯುವ ಮುನ್ನವೇ ಎಳೆಸಿಕೊಂಡಂತೆ ಆಯಿತು ಎನ್ನುತ್ತಾಳೆ ದ್ರೌಪದಿ. ಅಂದರೆ ವಿನಾಕಾರಣ ಅಕಾಲಿಕ ಮೃತ್ಯುವಿಗೆ ಒಳಗಾಗದೆ ಕುಟುಂಬದವರೊಂದಿಗೆ ಸಂತೋಷದಿಂದ ಇರುವಂತೆ ಆತನಿಗೆ ತಿಳಿ ಹೇಳುತ್ತಾಳೆ. ಮುಂದುವರೆದು

"ಕಾತರಿಸದಿರು ಮಂದಿವಾಳದ
ಮಾತುಗಳು ಸಾಕಕಟ ತೊಲಗೈ
ಸೋತಡೇನದು ಮನುಜ ಧರ್ಮದ ಚಿತ್ತಚಪಲವಲ

ಈ ತತುಕ್ಷಣ ಜಾರು ಕೇಳಿದ
ಡಾತಗಳು ಸೈರಿಸರು ದೇವ
ವ್ರಾತದಲಿ ಬಲ್ಲಿದರು ತನ್ನವರೆಂದಳಿಂದುಮುಖಿ"೧೭೦

ನನಗಾಗಿ ಕಾತರಿಸಬೇಡ. ಇಲ್ಲಿಂದ ಹೊರಡು ನನಗೆ ಸೋತರೆ ಏನಾಯಿತು? ಅದು ಮನುಷ್ಯ ಧರ್ಮದ ಸಹಜ ಚಿತ್ತ ಚಪಲ. ನನ್ನವರಿಗೆ ತಿಳಿದರೆ ಸೈರಿಸರು. ಇಲ್ಲಿಂದ ಹೊರಡು ಎನ್ನುತ್ತಾಳೆ.

ಈ ರೀತಿಯ ಹಿತನುಡಿಗಳು ಅವನ ಕಿವಿಗೆ ಬೀಳಲಿಲ್ಲ. ಹೇಗಾದರೂ ನನಗೆ ಸಾವು ತಪ್ಪುವುದಿಲ್ಲ. ಕಾಮನ ಕಾಟ ಮಿತಿಮೀರಿದೆ. ಸಾಯುವುದಾದರೆ ನಿನ್ನನ್ನು ಸೇರಿಯೇ ಸಾಯುತ್ತೇನೆ ಎನ್ನಲು,

"ಮರುಳುತನ ಬೇಡೆಲವೊ ಗಂಧ
ರ್ವರಿಗೆ ಹೆಂಡತಿ ತಾನು ನಿನ್ನಯ
ದುರುಳತನವನು ಸೈರಿಸರು ತನ್ನವರು ಬಲ್ಲಿದರು
ಸೊರಹದಿರು ಅಪಕೀರ್ತಿನಾರಿಯ
ನೆನೆಯದಿರು ನೀ ನಿನ್ನ ನಿಳಯಕೆ
ಮರಳುವುದು ಲೇಸೆಂದು ತೃಣವನು ಹಿಡಿದು ಸಾರಿದಳು"೧೭೧

ಈ ರೀತಿಯ ಮರುಳುತನ ಬೇಡ, ನಾನು ಗಂಧರ್ವರ ಹೆಂಡತಿ. ನಿನ್ನಯ ಈ ದುರುಳತನವನ್ನು ಅವರು ಸಹಿಸುವುದಿಲ್ಲ. ಅಪಕೀರ್ತಿ ನಾರಿಯನ್ನು ನೆನೆಯಬೇಡ. ನಿನ್ನ ನಿಳಯಕ್ಕೆ ಹೊರಡು ಎಂದು ಕೈಯಲ್ಲಿ ಹುಲ್ಲುಕಡ್ಡಿಯನ್ನು ಹಿಡಿದುಕೊಂಡು ಸಾರಿ ಸಾರಿ ಹೇಳಿದಳು. ಇಲ್ಲಿ ಹೆಣ್ಣನ್ನು ಅಪಕೀರ್ತಿಗೆ ಹೋಲಿಸಿರುವುದರ ಔಚಿತ್ಯವಾದರೂ ಏನು? ಎಂಬುದು ತಿಳಿಯುವುದಿಲ್ಲ.

ಇಷ್ಟು ಹೇಳಿದರೂ ಕೇಳದ ಆತ ಬಡವರ ಕೋಪ ಔಡಿಗೆ ಮೃತ್ಯು, ನಿನ್ನವರು ನನ್ನನ್ನು ಏನು ಮಾಡಿಯಾರು? ನೀನು ನನ್ನನ್ನು ಮೆಚ್ಚಿದೆಯಾದರೆ ಸಾಕು! ಮಲೆತು ನಿಂತರೆ ನಾನು ಆ ಪಿನಾಕಿಗೂ ಹೆದರುವುದಿಲ್ಲ ಎನ್ನುತ್ತಾನೆ. ಅಲ್ಲದೆ ನನ್ನನ್ನು ಒಲಿಯದೆಯೇ ಕೊಲ್ಲುತ್ತಿರುವೆಯಲ್ಲಾ ಎನ್ನಲು ದ್ರೌಪದಿಯು ಒಲಿದು ನಿನ್ನನ್ನು ನಾವು ಕೊಲ್ಲುವುದಿಲ್ಲ. ನಿನ್ನನ್ನು ಕೊಲ್ಲುವ ಸುಭಟನು ಬೇರೆ ಇದ್ದಾನೆ. ನನ್ನವರಿಗೆ ಈ ವಿಷಯ ತಿಳಿಸಿದರೆ ಸಾಕು ನಿನ್ನ ತಲೆ ಕಡಿದು ಹಾಕುವರು. ಅದರಿಂದಲೂ ತೃಪ್ತರಾಗದಿದ್ದರೆ ನಿನ್ನನ್ವಯಾಬ್ಧಿಯನ್ನು ಕಲಕುವರು ಎನ್ನುತ್ತಾಳೆ. ಮುಂದುವರೆದು

"ಕುಲದೊಳೊಬ್ಬನು ಜನಿಸಿ ವಂಶವ
ನಳಿದನಕಟಕಟೆಂಬ ದುರ್ಯಶ
ವುಳಿವುದಲ್ಲದೆ ಲೇಸಗಾಣೆನು ಬರಿದೆ ಗಳಹದಿರು
ಕೊಲೆಗಡಿಕೆಯೋ ಪಾಪಿ ಹೆಂಗಸು
ಹಲಬರನು ಕೊಲಿಸಿದಳು ಸುಡಲೆಂ
ದಳಲುವರು ನಿನ್ನಖಿಳ ರಾಣಿಯರೆಂದಳಿಂದುಮುಖಿ"೧೭೨

ಕುಲದಲ್ಲಿ ಒಬ್ಬ ಖಳನು ಜನಿಸಿ ಇಡೀ ಕುಲವನ್ನೆ ನಾಶಮಾಡಿಬಿಟ್ಟನೆಂಬ ಕೆಟ್ಟ ಹೆಸರು ಉಳಿಯುತ್ತದೆ ಅಲ್ಲದೆ ಲೇಸು ಕಾಣದು. ಇವಳೆಂಥ ಕೊಲೆಗಡಿಕೆ. ಪಾಪಿ ಹೆಂಗಸು ಹಲವರನ್ನು ಕೊಲ್ಲಿಸಿದಳು ಎಂದು ನಿನ್ನ ರಾಣಿಯರು ಅಳುವಂತಾಗುತ್ತದೆ. ಆದ್ದರಿಂದ ಹೊರಟು ಹೋಗು ಎನ್ನುತ್ತಾಳೆ.

ಕೀಚಕನು ಎಲೆ ಮರುಳೇ ಹರಿವಿರಿಂಚಿಗಳು ಕೂಡ ಸಂಗರದಲ್ಲಿ ನನಗೆ ಎದುರಲ್ಲ. ಅಂತಹದ್ದರಲ್ಲಿ ತೋರಿಸು ನಿನ್ನ ವಲ್ಲಭರನ್ನು ಎನ್ನಲು ದ್ರೌಪದಿಯು ಪರಸತಿಯನ್ನು ಸೆರೆಯಿಡಲಾಗಿ ಕೋಡಗದ ಗುಂಪು ಮುತ್ತಿತು. ಸೆರೆಯಲ್ಲಿರಿಸಿದ ಸುಭಟನು ನಡೆದನು ಅಂತಕನ ನಗರಿಗೆ ಎಂಬ ಕಥೆಯನ್ನು ನೀನು ಅರಿಯೆಯಾ? ಎನ್ನುತ್ತಾಳೆ. ಅಲ್ಲದೆ ಮರುಳೆ ಮನದ ವಿಕಾರ ಮಾರಿಯ ಜೊತೆ ಸರಸವಾಡುವರುಂಟೆ. ಮೃತ್ಯುವನ್ನು ಬಯಸಿ ದಳ್ಳುರಿಯ ಪ್ರತಿಮೆಯನ್ನು ಅಪ್ಪುವರೆ, ಪಾಪಿ ನಿನ್ನರಮನೆಗೆ ಮರಳು ಎಂದು ಎಚ್ಚರಿಸುತ್ತಾಳೆ. ಆದರೂ ಕೇಳದೆ ತೋಳ ತೆಕ್ಕೆಯ ತೊಡಿಸಿ ಕಾಮನ ಕೋಲ ತಪ್ಪಿಸು ಎನ್ನಲು ದ್ರೌಪದಿಯ ಸಹನೆ ಮೀರಿ

"ನ್ಯಾಯವನು ಮಿಗೆ ಗೆಲುವುದೀಯ
ನ್ಯಾಯವಧಮನ ಧರ್ಮ ಮಾರ್ಗ
ಸ್ಥಾಯಿಗಳ ತಿಮಿರಕ್ಕೆ ಭಾಸ್ಕರಗಾವುದಂತರವು
ಕಾಯರೆನ್ನವರವರ ಕೈಗುಣ
ದಾಯತವ ಬಲ್ಲವರೆ ಬಲ್ಲರು
ನಾಯಿ ಸಿಂಹಕ್ಕಿದಿರೆ ಫಡ ಹೋಗೆಂದು ತಿರುಗಿದಳು"[೧೭೩]

ನ್ಯಾಯವನ್ನು ಗೆಲ್ಲುವುದೇ ಈ ಅನ್ಯಾಯವು? ಅಧಮನ ಧರ್ಮ ಮಾರ್ಗ ಸ್ಥಾಯಿಗಳ ತಿಮಿರಕ್ಕೆ ಭಾಸ್ಕರಗಾವುದಂತರವು. ನನ್ನವರು ರಾಯರು. ಅವರ ಕೈಗುಣವನ್ನು ಬಲ್ಲವರೆ ಬಲ್ಲರು ನಾಯಿ ಸಿಂಹಕ್ಕೆ ಇದಿರೆ? ಹೋಗು ಎಂದು ದ್ರೌಪದಿ ಕೀಚಕನಿಗೆ ಬುದ್ಧಿ ಹೇಳುತ್ತಾಳೆ. ಇಲ್ಲಿ ಕೀಚಕನ ದುರ್ನಡತೆಗಳನ್ನು ಖಂಡಿಸುತ್ತಲೇ ಆತನಿಗೆ ವಿವೇಕವುಂಟುಮಾಡಲು ಪ್ರಯತ್ನಿಸುತ್ತಾಳೆ. ಆ ಮೂಲಕ ನಮಗೆ ದ್ರೌಪದಿಯ ಮನದಲ್ಲಿ ಮೂಡುವ ತಾಕಲಾಟಗಳು, ಭಯ, ಆತಂಕದ ಉದ್ವೇಗಗಳು ತಿಳಿಯುತ್ತವೆ.

ಎಷ್ಟು ಹೇಳಿದರೂ ಕೀಚಕನಿಗೆ ದ್ರೌಪದಿಯ ಹಿತನುಡಿಗಳು ರುಚಿಸಲಿಲ್ಲ. ತನ್ನ ಅಕ್ಕನ ಬಳಿ ತನ್ನ ಮನದ ಇಂಗಿತವನ್ನು ತಿಳಿಸಿ ದ್ರೌಪದಿಯನ್ನು ತನ್ನ ಅರಮನೆಗೆ ಕಳುಹಿಸುವಂತೆ ಬೇಡುತ್ತಾನೆ. ಅದಕ್ಕೆ ಮನಸ್ಸಿಲ್ಲದ ಮನಸ್ಸಿನಿಂದ ಒಪ್ಪಿಕೊಳ್ಳುತ್ತಾಳೆ ಸುದೇಷ್ಣೆ. ಇಲ್ಲಿ ಈಕೆ ಇಕ್ಕಟ್ಟಿಗೆ ಸಿಲುಕಿದ್ದಾಳೆ. ಒಂದು ಕಡೆ ತಮ್ಮನ ಆಸೆ, ಆತನ ಧೂರ್ತತನದ ಆತಂಕಗಳು. ಇನ್ನೊಂದು ಕಡೆ ಒಂದು ಹೆಣ್ಣಾಗಿ ಇನ್ನೊಂದು ಹೆಣ್ಣನ್ನು ಆತನ ಕಾಮದಾಟಕ್ಕೆ ಬಲಿಕೊಡಬೇಕಾಗಿ ಬಂದ ಧರ್ಮ ಸಂಕಟ. ಇದರ ನಡುವೆಯೇ ಒಪ್ಪಿಕೊಳ್ಳುವ ಸುದೇಷ್ಣೆಯನ್ನು ಕವಿ 'ನಯವಿಹೀನೆ ಸುದೇಷ್ಣೆ' ಎನ್ನುತ್ತಾನೆ. ತಮ್ಮನಿಗೆ ಕೊಟ್ಟ ಮಾತಿನಂತೆ ಸೈರಂಧ್ರಿಗೆ ಅನುಜನ ಆಲಯದಲ್ಲಿ ಉತ್ತಮ ಮಧುವಿದೆ ಅದನ್ನು ನೀನು

ಹೋಗಿ ತೆಗೆದುಕೊಂಡು ಬಾ ಎಂದಾಗ ದ್ರೌಪದಿಯ ಪ್ರತಿಕ್ರಿಯೆ ಮನಕರಗಿಸುವಂತಹದ್ದು. ಏಕೆಂದರೆ ಕೀಚಕನ ಸ್ವಭಾವ ಆಕೆಗೆ ತಿಳಿದಿದೆ. ಆ ಕಾರಣವಾಗಿಯೆ ಆಕೆ ವಿನಯದಿಂದ ನಾನು ಅಲ್ಲಿಗೆ ಹೋಗುವುದಿಲ್ಲವೆಂದು ಬೇಡಿಕೊಳ್ಳುತ್ತಾಳೆ.

"ಅಮ್ಮೆನಲ್ಲಿಗೆ ದೇವಿ ನಿಮ್ಮಯ
ತಮ್ಮ ದುರುಳನು ಲೇಸು ಹೊಲ್ಲೆಹ
ವೆಮ್ಮ ತಾಗುವುದಾತನಳಿದರೆ ಬಳಿಕ ಹಳಿವೆಮಗೆ
ನಿಮ್ಮ ನಾವೋಲೈಸಿ ನಿಮಗೆ ವಿ
ಕರ್ಮವನು ಮಾಡುವುದು ನಮಗದು
ಧರ್ಮವಲ್ಲುಳಿದವರ ಕಳುಹುವುದೆಂದಳಿಂದುಮುಖಿ"[೧೭೪]

ನಾನು ಅಲ್ಲಿಗೆ ಹೋಗುವುದಿಲ್ಲ ದೇವಿ. ನಿಮ್ಮಯ ತಮ್ಮನು ದುರುಳನು. ಒಳಿತು ಮತ್ತು ಕೆಡುಕುಗಳು ನಮ್ಮ ಮೇಲೆ ಬರುತ್ತದೆ. ಆತನಳಿದರೆ ನಮಗೆ ಹಳಿವು. ನಿಮ್ಮನ್ನು ನಾವೋಲೈಸಿ ನಿಮಗೆ ವಿಕರ್ಮವನ್ನು ಮಾಡುವುದು ನಮಗೆ ಧರ್ಮವಲ್ಲ, ಬೇರೆ ಯಾರನ್ನಾದರೂ ಕಳುಹಿಸಿ ಎನ್ನುತ್ತಾಳೆ. ಆಕೆಗೆ ಕೀಚಕನ ನೀಚತನ ತಿಳಿದಿದೆ. ಒಂದು ವೇಳೆ ತಾನು ಅಲ್ಲಿಗೆ ಹೋದರೆ ಅನರ್ಥ ಸಂಭವಿಸುವುದು ಎಂಬ ಕಾರಣವಾಗಿ ತಾನು ನಿರಾಕರಿಸುತ್ತಾಳೆ. ಆದರೂ ಸುದೇಷ್ಣೆ ಗದರಿಸಿ ಹೋಗುವಂತೆ ಹೇಳಿದಾಗ ದ್ರೌಪದಿ ಕೃಷ್ಣನನ್ನು ನೆನೆಯುವಳು.

"ಹರಿ ಹರಿ ಶ್ರೀಕಾಂತ ದಾನವ
ಹರ ಮುರಾರಿ ಮುಕುಂದ ಗತಿಶೂ
ನ್ಯರಿಗೆ ನೀನೇ ಗತಿಯೆಲೈ ಗರುವಾಯಿಗೆಟ್ಟೆನಲೈ
ಕುರುಕುಲಾಗ್ರಣಿ ಸೆಳೆದ ವಸ್ತ್ರಾ
ಕರುಷಣದ ಭಯ ಮತ್ತೆ ಬಂದಿದೆ
ಕರುಣಿ ನೀನೇ ಬಲ್ಲೆಯೆನುತಡಿಯಿಟ್ಟಳಬುಜಾಕ್ಷಿ"[೧೭೫]

ದ್ರೌಪದಿ ಇಲ್ಲಿ ಕೃಷ್ಣನನ್ನು ಬೇಡಿಕೊಳ್ಳುತ್ತ ಅಂದು ಕುರುಕುಲಾಗ್ರಣಿ ಸೆಳೆದ ವಸ್ತ್ರಾಕರುಷಣದ ಭಯ ಮತ್ತೆ ಬಂದಿದೆ. ಕರುಣೆಯಿಂದ ನೀನೆ ನನ್ನನ್ನು ಕಾಪಾಡಬೇಕೆಂದು ಹಲುಬುತ್ತಾಳೆ. ಇದು ದ್ರೌಪದಿಗೆ ಎದುರಾದ ಮತ್ತೊಂದು ಕ್ಲಿಷ್ಟ ಪರಿಸ್ಥಿತಿಯ ಸನ್ನಿವೇಶ. ಅಲ್ಲಿ ಸ್ವಂತ ಮೈದುನನಿಂದಲೆ ಅಂತಹ ಪಾಪ ಕಾರ್ಯ ಜರುಗಿತ್ತು. ಇಲ್ಲಿ ನೀಚನಾದ ಕೀಚಕ ಆ ಕೆಲಸಕ್ಕೆ ಅಣಿಯಾಗಿದ್ದಾನೆಂದು ಗೋಳಿಡುತ್ತಾಳೆ. ಈ ಪರಿಸ್ಥಿತಿಯ ಸನ್ನಿವೇಶಗಳು ಇಂದಿನ ಅತ್ಯಾಚಾರಗಳಂತಹ ಭೀಕರ ಕ್ರೌರ್ಯಗಳನ್ನು ನಮ್ಮ ನೆನಪಿಗೆ ತರುತ್ತವೆ.

ಸುದೇಷ್ಣೆಯ ಮಾತಿಗೆ ಕಟ್ಟುಬಿದ್ದು ಕೀಚಕನ ಆಲಯಕ್ಕೆ ಬಂದ ಸೈರಂಧ್ರಿಯನ್ನು ಸ್ವಾಗತಿಸುತ್ತ ಕೀಚಕನು 'ತರುಣಿ, ಬಾ ಕುಳಿತುಕೋ ನೀನು ಬಂದದ್ದರಿಂದ ನನ್ನ ಮದಂತಃಕರಣದ ಎಡರು ಅಡಗಿತು ಎನ್ನುತ್ತಾನೆ. ಅದಕ್ಕೆ ಸಿಟ್ಟಿನಿಂದ ದ್ರೌಪದಿಯು

"ಬಾಯಿ ಹುಳುವುದು ಬಯಲ ನುಡಿದೊಡೆ
ನಾಯಿತನ ಬೇಡೆಲವೊ ಕೆಡದಿರು
ರಾಯನಂಗನೆ ಕಳುಹೆ ಬಂದೆನು ಮಧುವ ತರಲೆಂದು
ಸಾಯಬೇಕೇ ಹಸಿದ ಶೂಲವ
ಹಾಯಿ ಹೋಗೆನೆ ನಿನ್ನ ಬೈಗಳು
ನೋಯಿಸುವವೇ ತನ್ನನೆನುತವೆ ತುಡುಕಿದನು ಸತಿಯ"[೧೭೬]

ಈ ರೀತಿ ಬಯಲ ನುಡಿಯನ್ನು ನುಡಿದರೆ ಬಾಯಿ ಹುಳುತು ಹೋಗುತ್ತದೆ. ನಾಯಿತನ ಬೇಡ ಎಲವೋ ಕೆಡದಿರು. ರಾಯನಂಗನೆ ಮಧುವನ್ನು ತೆಗೆದುಕೊಂಡು ಬಾ ಎಂದು ಕಳುಹಿಸಲು ಇಲ್ಲಿಗೆ ಬಂದೆ. ಸಾಯಬೇಕು ಎನ್ನುವುದಿದ್ದರೆ ಹೋಗು ಹಸಿದ ಶೂಲವನ್ನು ಹಾಯಿ ಎನ್ನುತ್ತಾಳೆ. ಬಿರುಸು ನುಡಿಗಳ ಆತ ನಿನ್ನ ಬೈಗಳು ನನ್ನನ್ನು ನೋಯಿಸುವುದಿಲ್ಲ ಎನ್ನುತ್ತ ಕೀಚಕ ಆಕೆಯನ್ನು ತುಡುಕಿದನು. ಈ ಘಟನೆಯಿಂದ ಭಯಗೊಂಡ ದ್ರೌಪದಿಯು

"ಕರವನೊಡೆಮುರುಚಿದಳು ಬಟ್ಟಲ
ಧರೆಯೊಳೀಡಾಡಿದಳು ಸತಿ ಮೊಗ
ದಿರುಹಿ ಬಾಗಿಲ ದಾಂಟಿ ಭಯದಲಿ ನಡುಗಿ ಡೆಂಡಣಿಸಿ
ತರಳೆ ಹಾಯ್ದಳು ಮೊಲೆಯ ಜಘನದ
ಭರದಿ ಬಡನಡು ಮುರಿಯದಿಹುದೇ
ವರ ಸಭಾಗ್ಯತೆಗೆನಲು ರಭಸದೊಳೋಡಿದಳು ಸಭೆಗೆ"[೧೭೭]

ಆ ರೀತಿಯಾಗಿ ಕೀಚಕನು ತುಡುಗಲು ತಕ್ಷಣವೇ ಅವಳು ಕೈಕೊಸರಿಕೊಂಡು ಬಟ್ಟಲನ್ನು ನೆಲದ ಮೇಲೆ ಈಡಾಡಿ ಮುಖದಿರುಹಿ ಬಾಗಿಲನ್ನು ದಾಟಿ ಭಯದಿಂದ ರಾಜಸಭೆಯತ್ತ ಓಡಲು ತೊಡಗಿದಳು. ಈ ರೀತಿ ಹೊರಟ ಅವಳನ್ನು ಬೆಂಬತ್ತಿದ ಕೀಚಕನು ಅವಳ ತುರುಬನ್ನು ಹಿಡಿದು, ತೊತ್ತಿನ ಮಗಳೆ ಹಾಯ್ದರೆ ಬಿಡುವೆನೆ? ಎನ್ನುತ್ತ ಕಾಲಿನಲ್ಲಿ ಮೆಟ್ಟಿ ಹೊಯ್ದನು. ಇಲ್ಲಿ ಕಾಮಾಂಧನಾದ ಪುರುಷ ತನ್ನ ಕಾಮದಾಹಕ್ಕೆ ಒಪ್ಪದ ಹೆಣ್ಣನ್ನು ಹಿಂಸಿಸಿ ದೈಹಿಕವಾಗಿ ಅಶಕ್ತಳನ್ನಾಗಿಸಿ ಭೋಗಿಸುವ ಕ್ರೌರ್ಯಕ್ಕೆ ಮುಂದಾಗುತ್ತಾನೆ. ತನ್ನ ಕಾಮದ ಈಡೇರಿಕೆಗಾಗಿ ಸಾಯಲು, ಸಾಯಿಸಲು ಸಿದ್ಧನಿರುವಂತೆ ಕಾಣಿಸುತ್ತಾನೆ. ಈ ರೀತಿಯಾದ ಕಾಲಿನ ಹೊಡೆತದಿಂದ ರಕ್ತಕಾರಿ ಬಿದ್ದ ಆಕೆಯನ್ನು, ಇವಳ ಕಾವಲಿಗೆಂದು ಸೂರ್ಯನು ಕೊಟ್ಟಿದ್ದ ದಾನವನು ಕಂಡು ನುಗ್ಗಿ ಬಂದು ಕೀಚಕನ ಮೇಲೆ ಬಿದ್ದು ಅವನನ್ನು ಹೊಡೆದು ಹಿಡಿದು ಕುಸುಬಿದನು. ಪೆಟ್ಟು ತಿಂದ ಕೀಚಕ ವನಾಲಯಕ್ಕೆ ಓಡಿ ಹೋದನು. ಇತ್ತ,

"ಹೊಡೆ ಮರಳಿ ಮುರಿದೆದ್ದು ತುರುಬಿನ
ಹುಡಿಯ ಕೊಡಹುತ ಮೊಲೆಗೆ ಮೇಲುದು
ತೊಡಿಸಿ ಗಲ್ಲದ ರಕುತವನು ಬೆರಲಿಂದ ಮಿಡಿ ಮಿಡಿದು

ನುಡಿಯಲಾಗದೆ ಖಳನು ಹೆಂಗುಸ
ಬಡಿಯೆ ನೋಡುತ್ತಿಹರೆ ಹಿರಿಯರು
ಹಿಡಿದ ಮೌನದ ಹೊತ್ತು ಲೇಸೆಂದಬಲೆ ಹಲುಬಿದಳು"[೧೭೮]

ಹೊಡೆತದ ಆಘಾತದಿಂದ ಮೇಲೆದ್ದು, ತುರುಬಿಗೆ ಹತ್ತಿಕೊಂಡಿದ್ದ ಹುಡಿಯನ್ನು ಕೊಡಹಿಕೊಳ್ಳುತ್ತ, ಎದೆಯ ಮೇಲೆ ಸೆರಗು ಹೊದ್ದುಕೊಂಡು ಗಲ್ಲದ ರಕ್ತವನ್ನು ಬೆರಳಿನಿಂದ ಮಿಡಿಮಿಡಿದು ಕೊಡಹುತ್ತ ಸಭೆಯನ್ನು ಕುರಿತು ಮಾತನಾಡುತ್ತಾಳೆ. ಹಿರಿಯರು ನುಡಿಯಬಾರದೆ, ದುಷ್ಟನು ಹೆಂಗಸನ್ನು ಹಿಡಿದು ಬಡಿಯುತ್ತಿರುವಾಗ ಸುಮ್ಮನೆ ನೋಡುತ್ತಿರುವುದೆ ಹಿರಿಯರು. ನೀವು ಹೊತ್ತ ಮೌನವು ಲೇಸಾಯಿತು ಎಂದು ಹಲುಬಿದಳು. ಈ ಸನ್ನಿವೇಶವು ದುಶ್ಯಾಸನಿಂದ ಅವಮಾನಕ್ಕೊಳಗಾದಾಗ ದುರ್ಯೋಧನನ ರಾಜಸಭೆಯಲ್ಲಿದ್ದ ಭೀಷ್ಮ, ದ್ರೋಣ, ಕೃಪ ಮೊದಲಾದ ಹಿರಿಯರನ್ನು, ಸಭಾಸದರನ್ನು ಕೇಳಿದಂತೆ ಇಲ್ಲಿಯೂ ವಿರಾಟನ ಸಭೆಯಲ್ಲಿದ್ದ ಹಿರಿಯರನ್ನು ಪ್ರಶ್ನಿಸುತ್ತಾಳೆ. ಇಲ್ಲಿಯೂ ಅವಳ ಪ್ರಶ್ನೆಗೆ ಯಾರಿಂದಲೂ ಉತ್ತರವಿಲ್ಲ. ಜೊತೆಗೆ ಅವಳ ರಕ್ಷಣೆಗೆ ಯಾರೂ ಮುಂದಾಗುವುದಿಲ್ಲ. ದುಶ್ಯಾಸನನಂತೆ ಕೀಚಕನೂ ಕೂಡ ಕ್ರೂರಿ, ದುರಾತ್ಮ. ಆ ಕಾರಣವಾಗಿಯೆ ಇಲ್ಲಿ ದ್ರೌಪದಿ ಮತ್ತೆ ಅಬಲೆಯಾಗಿ, ರಕ್ಷಿಸುವವರು ಇಲ್ಲದೆ, ಅಸಹಾಯಕ ಹೆಣ್ಣಾಗಿ ನಮ್ಮ ಗಮನವನ್ನು ಸೆಳೆಯುತ್ತಾಳೆ. ತನ್ನ ಮಾನ ರಕ್ಷಣೆಗಾಗಿ ಆಕೆಯದು ಏಕಾಂಗಿ ಹೋರಾಟ. ಅವಳ ದುಃಖ ಎಲ್ಲೆ ಮೀರಿದೆ. ತನ್ನ ಪತಿಗಳನ್ನು ಕುರಿತು

"ಶಿವ ಶಿವಾ ಪಾಪಿಗಳು ಪತಿಯಾ
ದವರ ತಾಗಲಿ ಸುಯ್ಲುಕಟ ನಾ
ಲುವರ ನಡುವಣ ಹಾವು ಸಾಯದು ನಿರಪರಾಧಿಯನು
ಅವಗಡಿಸಿದನು ಖಳನು ಧರ್ಮದ
ವಿವರ ಸುದ್ದಿಯನಾಡದೀ ಜನ
ನಿವಹ ಘೋರಾರಣ್ಯವಾಯ್ತೆಂದೊರಲಿದಳು ತರಳೆ"[೧೭೯]

ಪಾಪಿಗಳು! ಅವರನ್ನು ಸುಡಲಿ, ನನ್ನ ನಿಟ್ಟುಸಿರು ಪತಿಯಾದವರನ್ನು ತಾಗಲಿ. ಅಯ್ಯೋ ನಾಲ್ವರ ನಡುವಿರುವ ಹಾವು ಸಾಯದು. ನಿರಪರಾಧಿಯನ್ನು ಆ ಖಳನು ಅವಗಡಿಸಿದನು. ಇಲ್ಲಿರುವ ಜನಸಮೂಹವು ಧರ್ಮದ ಸುದ್ದಿಯನ್ನೇ ಎತ್ತದು. ಈ ಜನರಿರುವ ಸಮೂಹ ಘೋರಾರಣ್ಯವಾಯಿತು ಎಂದು ದುಃಖಿಸುತ್ತಾಳೆ. ಇಲ್ಲಿ ಆಕೆ ಎತ್ತುವ ಪ್ರಶ್ನೆಗಳು ಸಾರ್ವಕಾಲಿಕವಾದವು ಮತ್ತು ಇಂದಿನ ಮಹಿಳೆಯರ ಪ್ರಶ್ನೆಗಳೂ ಆಗಿವೆ. ತನ್ನ ಕೈ ಹಿಡಿದ ಪತಿಗಳು ಎದುರಿಗಿದ್ದರೂ ಅವಳ ರಕ್ಷಣೆಗೆ ಧಾವಿಸದೆ ಇರುವಂತಹವರು. ಜೊತೆಗೆ ಸಭೆಯಲ್ಲಿ ಹಿರಿಯರೆನಿಸಿಕೊಂಡಂತಹ ವ್ಯಕ್ತಿಗಳು ಅಬಲೆಯನ್ನು ರಕ್ಷಿಸಬೇಕೆಂಬ ಧರ್ಮವನ್ನು ಮರೆತ ವಿವರಗಳನ್ನು ದ್ರೌಪದಿ ವಿಮರ್ಶೆಗೆ ಒಳಪಡಿಸುತ್ತಾಳೆ. ಪುರುಷ ಪ್ರಧಾನ ಸಮಾಜದಲ್ಲಿ ನೊಂದ ಹೆಣ್ಣು ಮಕ್ಕಳ ಪ್ರತಿನಿಧಿಯಾಗಿ ಸ್ತ್ರೀ ಸಂಕುಲದ ಮಾನ, ಪ್ರಾಣ

ರಕ್ಷಣೆಗಾಗಿ ರಾಜ್ಯಾಡಳಿತ ನೀತಿಯನ್ನು, ಪ್ರಜ್ಞಾವಂತರನ್ನು, ಧರ್ಮಶಾಸ್ತ್ರ ಪ್ರವೀಣರನ್ನು ಪ್ರಶ್ನಿಸುವ ದಿಟ್ಟ ಹೆಣ್ಣಾಗಿ ದ್ರೌಪದಿ ಕಾಣುತ್ತಾಳೆ. ಮುಂದುವರೆದು

"ಎಲವೊ ದೇಶಿಗ ಕಂಕಭಟ್ಟನೆ
ಹಲವು ಧರ್ಮವ ಬಲ್ಲೆ ಗಡ ನೃಪ
ತಿಲಕಗರುಹುವುದೇನು ಸನ್ಯಾಸಿಗಳಿಗುಚಿತವಿದು
ತಿಳಿಯೆ ದೇಶಿಗರಿಂಗೆ ದೇಶಿಗ
ರೊಲವು ಸಮನಿಸಬೇಕು ಸಭೆಯಲಿ
ಬಲವಿಹೀನರಿಗಾಪ್ತರಿಲ್ಲೆಂದಬಲೆಯೊರಲಿದಳು"[೧೮೦]

ಕುಮಾರವ್ಯಾಸನ ದ್ರೌಪದಿ ಮುಖ್ಯಳಾಗುವುದು ಈ ಕಾರಣದಿಂದಲೆ. ತನ್ನ ಪತಿಗಳನ್ನೂ ಸಹ ನೇರಾ ನೇರ ವಿಮರ್ಶೆಗೆ ಗುರಿಪಡಿಸುತ್ತಾಳೆ. ಇದಕ್ಕೆ ಕಾರಣಗಳು ಇಲ್ಲದಿಲ್ಲ. ಅವಳು ಅನುಭವಿಸುವ ತಲ್ಲಣ, ನೋವು, ಆಘಾತಗಳ ಹೊರಹಾಕುವಿಕೆ ಅದರಲ್ಲಿದೆ. ಇದು ಸಮಕಾಲೀನ ಸಮಾಜದ ಹೆಣ್ಣುಗಳ ಸಂಘರ್ಷವೂ ಆಗಿದೆ.

ನೇರವಾಗಿ ಸಭೆಯಲ್ಲಿನ ಹಿರಿಯರನ್ನು ಪ್ರಶ್ನಿಸುತ್ತಾಳೆ. ಧರ್ಮರಾಯನನ್ನು ಕುರಿತು ಎಲವೋ ದೇಶಿಗ ಕಂಕಭಟ್ಟನೆ ಹಲವು ಧರ್ಮಗಳನ್ನು ಬಲ್ಲೆಯಲ್ಲವೇ? ನೀನು, ಅದನ್ನು ಮಹಾರಾಜನಿಗೆ ತಿಳಿಸಿ ಹೇಳು; ಸುಮ್ಮನಿರುವುದು ಸನ್ಯಾಸಿಗಳಿಗಿದು ಉಚಿತವೆ? ಅಲ್ಲದೆ ತಿಳಿದುಕೊಳ್ಳುವುದಾದರೆ ದೇಶಿಗರಿಗೆ ದೇಶಿಗರೊಲವು ಸಮನಿಸಬೇಕು. ಸಭೆಯಲ್ಲಿ ಬಲಹೀನರಿಗೆ ಆಪ್ತರು ಯಾರೂ ಇಲ್ಲ ಎಂದು ಅಬಲೆಯಾದ ದ್ರೌಪದಿಯು ಒರಲಿದಳು.

ದ್ರೌಪದಿ ತನಗಾದ ನೋವು ಅಪಮಾನಗಳಿಗೆ ಪ್ರತಿಯಾಗಿ ಮಾತನಾಡುವಾಗ ಪ್ರತೀ ಸಂದರ್ಭಗಳಲ್ಲಿಯೂ ಸಹ 'ಧರ್ಮ' ಎಂಬ ಪದವನ್ನು ಮತ್ತೆ ಮತ್ತೆ ಪುನರುಚ್ಚರಿಸಿ ಮಾತನಾಡುತ್ತಾಳೆ. ಈ ಮಾತುಗಳಲ್ಲಿ ಒಬ್ಬ ರಾಜನಾದವನು ಪಾಲಿಸಬೇಕಾದ ಧರ್ಮದ ವಿವರಗಳಿವೆಯೆ? ಅಲ್ಲದೆ ಆ ಕಾಲಘಟ್ಟದ ರಾಜಪ್ರಭುತ್ವ ದೀನ ದುರ್ಬಲರನ್ನು, ಅಬಲೆಯರಾದ ಹೆಣ್ಣುಗಳನ್ನು ರಕ್ಷಿಸದೆ ಧರ್ಮವನ್ನು ಉಲ್ಲಂಘಿಸಿ ಸಾಗುತ್ತಿದೆ ಎಂಬುದನ್ನು ಸಹ ಈ ಮಾತುಗಳು ಆಲೋಚನೆಗೆ ಹಚ್ಚುತ್ತವೆ. ಏಕೆಂದರೆ ತನ್ನ ವಸ್ತ್ರಾಪಹರಣದ ಸಂದರ್ಭದಲ್ಲಿ 'ಪತಿಗಳೆನ್ನನು ಮಾರಿ ಧರ್ಮ ಸ್ಥಿತಿಯನು ಕೊಂಡರು' ಎಂದು ನುಡಿದರೆ, ಕೀಚಕನ ಈ ಸಂದರ್ಭದಲ್ಲಿ 'ನ್ಯಾಯವನು ಮಿಗೆ ಗೆಲುವುದೀಯ ನ್ಯಾಯವಧಮನ ಧರ್ಮ ಮಾರ್ಗ ಸ್ಥಾಯಿಗಳ ತಿಮಿರಕ್ಕೆ', 'ವಿಕರ್ಮವನು ಮಾಡುವುದು ನಮಗದು ಧರ್ಮವಲ್ಲ' ಹಾಗೂ ಕಂಕಭಟ್ಟನನ್ನು ಕುರಿತು ಮಾತನಾಡುವಾಗ 'ಹಲವು ಧರ್ಮವ ಬಲ್ಲೆ' ಎಂಬ ಮಾತುಗಳು ಹಾಗೂ ಇತರೆ ಸಂದರ್ಭಗಳಲ್ಲಿ ಉಲ್ಲೇಖಿಸುವ 'ಸೋತರ್ದೇನದು ಮನುಜ ಧರ್ಮದ ಚಿತ್ತಚಪಲವಲ', 'ಅನ್ಯಾಯವಧಮನ ಧರ್ಮ ಮಾರ್ಗ ಸ್ಥಾಯಿಗಳ ತಿಮಿರಕ್ಕೆ', 'ಧರ್ಮದ ವಿವರ ಸುದ್ಧಿಯನಾಡದೀ ಜನನಿವಹ', 'ಕೃಷ್ಣನ ಕೂರ್ಮೆ ಧರ್ಮದಿ ಪಾಲಿಸಿದಿರೀಗ', 'ಇನ್ನಾವ

ಧರ್ಮವನಳಿದೆನೋ' ಎಂಬ ಸಾಲುಗಳನ್ನು ನುಡಿಯುವ ದ್ರೌಪದಿಯ ನುಡಿಗಳಲ್ಲಿ ಈ 'ಧರ್ಮ' ಎಂಬ ಪದ ಮತ್ತೆ ಮತ್ತೆ ಪುನರಾವರ್ತನೆಯಾಗುತ್ತದೆ. ದ್ರೌಪದಿ ಈ ಪದದ ಮೂಲಕ ಏನನ್ನು ತಿಳಿಸಲು ಹೊರಟಿದ್ದಾಳೆ ಎಂಬುದು ಇನ್ನಷ್ಟು ಅಧ್ಯಯನಗಳಿಗೆ ಒಳಗಾಗಬೇಕಾಗಿದೆ. ಇಲ್ಲಿ ಯಾವ ಧರ್ಮವನ್ನು ಕುರಿತು ಆಕೆ ಚರ್ಚಿಸುತ್ತಿದ್ದಾಳೆಂಬುದು ಅಧ್ಯಯನ ಯೋಗ್ಯವಾಗಿದೆ.

ಮುಂದುವರೆದು ಕೋಪಗೊಂಡ ಭೀಮನನ್ನು ಸಮಾಧಾನಪಡಿಸಿ, ಧರ್ಮರಾಯನು ದ್ರೌಪದಿಯನ್ನು ಕುರಿತು ಮಾನಿನಿ ಇದು ನಿನಗೆ ಕರ್ಮಫಲ, ನಿನ್ನ ಭವನಕ್ಕೆ ತೆರಳು. ನಿನ್ನ ಪತಿಗಳೇನು ಕಾಪುರುಷರೇ, ನೀನು ಪತಿವ್ರತೆ, ಪುಣ್ಯವಧು, ಶೌರ್ಯ ಧರ್ಮದ ರೂಪು ನೆಲೆಗಳೇ ಕ್ಷಮೆ ಎಂದು ಮೊದಲಾಗಿ ಸಮಾಧಾನ ಹೇಳಿದನು. ಇದಕ್ಕೊಪ್ಪದೆ ಸೈರಂಧ್ರಿಯು

"ನೀರು ಹೊರಗಿಕ್ಕುವುದು ಮೂರೇ
ಬಾರಿ ಬಳಿಕದು ಪಾಪಿ ಜಾಡಿಸೆ
ಸೈರಿಸದು ಅನ್ಯಾಯ ಬಹುಳತೆಗೇನ ಮಾಡುವೆನು
ಸೈರಣೆಗೆ ತಾನವಧಿಯಿಲ್ಲಾ
ಪೌರುಷವು ಕಡು ಬಂಜೆಯಾಯಿತು
ಆರಯಿಕೆಯಲಿ ಜುಣುಗಿ ಜಾರುವಿರೆಂದಳಿಂದುಮುಖಿ"[೧೮೧]

ನೀರು ಹೊರಕ್ಕೆ ಹಾಕುವುದು ಮೂರೇ ಬಾರಿ. ಬಳಿಕ ಅದು ಆ ಪಾಪಿಯನ್ನು ಸೈರಿಸುವುದಿಲ್ಲ. ಅನ್ಯಾಯ ಬಹಳವಾಯಿತು. ಅದಕ್ಕೇನು ಮಾಡಲಿ? ಸೈರಣೆಗೆ ತಾನವಧಿಯಿಲ್ಲ? ಪೌರುಷವು ಕಡು ಬಂಜೆಯಾಯಿತು. ನೀವೆಲ್ಲ ಆರಯಿಕೆಯಲ್ಲಿ ಜುಣುಗಿ ಜಾರಿಕೊಳ್ಳುತ್ತಿರುವಿರಿ ಎಂದು ನುಡಿಯುತ್ತಾಳೆ. ಇಲ್ಲಿನ ದ್ರೌಪದಿಯ ಮಾತುಗಳು ಉಗ್ರ ಸ್ವರೂಪಕ್ಕೆ ತಿರುಗುತ್ತಿರುವ ಹಾಗೂ ತನ್ನ ತಾಳ್ಮೆಯ ಕಟ್ಟೆಯೊಡೆದಿದೆ ಎನ್ನುವುದನ್ನು ತಿಳಿಸುತ್ತದೆ. ಅದಕ್ಕಾಗಿಯೆ ಆಕೆ ನೀರಿನ ಉದಾಹರಣೆಯನ್ನು ಕೊಡುತ್ತಾಳೆ. ಇನ್ನು ಕೀಚಕನ ಉಪಟಳವನ್ನು ಸಹಿಸಿಕೊಳ್ಳಲು ಸಾಧ್ಯವಿಲ್ಲ ಎಂಬ ಭಾವವಿದೆ.

ಈ ರೀತಿ ನುಡಿದ ದ್ರೌಪದಿಯನ್ನು ಕುರಿತು ಕಂಕನು ಅರರೆ ಈ ಹೆಂಗಸು ಎಷ್ಟು ದಿಟ್ಟೆ. ಮೌನದೊಳಿರದೆ ರಾಜನ ಸಮೀಪದಲ್ಲಿ ಈ ಬಾಯ್ಬಡಿಕತನ ಮರ್ಯಾದೆಯಲ್ಲ? ಎಂದನು. ಅದನ್ನು ಕೇಳಿ ಕೋಪದಿಂದ ದ್ರೌಪದಿಯು ಇಲ್ಲಿಯ "ಹಿರಿಯರಲಿ ಹುರುಳಿಲ್ಲ ಮಾರುತಿಗರುಹುವೆನು ಬಳಿಕಾದುದಾಗಲಿಯೆನುತ ತಿರುಗಿದಳು"[೧೮೨] ಎಂದು ಆಕೆ ನೇರವಾಗಿ ಹೇಳುತ್ತಾಳೆ. ಇಲ್ಲಿರುವ ಹಿರಿಯರಿಂದ ಯಾವುದೇ ರಕ್ಷಣೆ ನನಗೆ ದೊರೆಯುವುದಿಲ್ಲ. ಇಲ್ಲಿನ ಹಿರಿಯರಲ್ಲಿ ಸತ್ವವಿಲ್ಲ. ಆ ಕಾರಣವಾಗಿ ಆದದ್ದಾಗಲಿ ನಾನು ಮಾರುತಿಗೆ ಈ ಎಲ್ಲ ಸಮಾಚಾರವನ್ನು ಹೇಳಿಕೊಳ್ಳುವೆನು ಎಂದು ನಿಶ್ಚಯಿಸುತ್ತಾಳೆ.

ಈ ರೀತಿ ಬಾಡಿದ ಮುಖ ಹೊತ್ತು ಅರಮನೆಗೆ ಬರುತ್ತಾಳೆ. ಬಂದ ಸೈರಂಧ್ರಿಯನ್ನು ಕಂಡು ಸುದೇಷ್ಣಾ ದೇವಿಯು ತಂಗಿ ಇದೇನು? ನಿನ್ನ ಮುಖದ ಕಾಂತಿ ಕುಂದಿದೆ. ಮುಖದಲ್ಲಿ ದುಃಖವೇಕೆ ಎನ್ನಲು ದ್ರೌಪದಿಯು

"ದುರುಳ ನಿಮ್ಮೊಡಹುಟ್ಟಿದನು ನೀ
ವರಸುಗಳು ತಿರುಕುಳಿಗಳಾವಿ
ನ್ನಿರಲು ಬಾರದು ನೃಪತಿ ತಪ್ಪಿದೊಡಾರು ಕಾವವರು
ಕರೆಸಿ ಬುದ್ಧಿಯ ಹೇಳಿ ಎನ್ನನು
ಹೊರೆಯಲಾಪರೆ ಹೊರೆಯಿರಲ್ಲದ
ಡರಸಿ ಕಳುಹುವುದೆನ್ನನೆನಲಿಂತೆಂದಳಾ ರಾಣಿ"[೧೮೩]

ಇಲ್ಲಿ ದ್ರೌಪದಿ ಕೇಳುವ ಪ್ರಶ್ನೆ ಗಂಭೀರವಾದುದು. 'ನೃಪತಿ ತಪ್ಪಿದೊಡಾರು ಕಾವವರು'. ಅಂದರೆ ದೊರೆಯೇ ತಪ್ಪಿ ನಡೆದರೆ ಕಾಪಾಡುವವರು ಯಾರು? ಎಂಬುದು. ಏಕೆಂದರೆ ಇಲ್ಲಿ ದುರುಳನಾಗಿರುವ ಕೀಚಕ ವಿರಾಟ ನಗರದ ಸೈನ್ಯದ ದಂಡನಾಯಕ. ರಾಜ್ಯವನ್ನು ರಕ್ಷಿಸುತ್ತಿರುವವನು. ಆದರೆ ಒಂದು ಹೆಣ್ಣನ್ನು ಈ ರೀತಿಯಾಗಿ ಹಿಂಸಿಸುತ್ತ, ಅವಳ ರಕ್ಷಣೆಯನ್ನು ಮರೆತಿದ್ದಾನೆಂಬ ಅರ್ಥದಲ್ಲಿಯೂ ದ್ರೌಪದಿ ಈ ಮಾತನ್ನು ಹೇಳುತ್ತಾಳೆ. ಅಲ್ಲದೆ ಆಕೆ ಹೇಳುವ ನೀವು ಅರಸುಗಳು ನಾವು ತಿರುಕುಳಿಗಳು' (ಭಿಕ್ಷುಕರು) ಹಾಗೂ 'ಎನ್ನನು ಹೊರೆಯಲಾಪರೆ ಹೊರೆಯಿರಲ್ಲದಡರಸಿ ಕಳುಹುವುದೆನ್ನನು' ಎಂಬ ಮಾತುಗಳು ಮುಖ್ಯವಾದವು. ಅಂದರೆ ನಿಮ್ಮಿಂದ ನನ್ನನ್ನು ರಕ್ಷಿಸಲು ಸಾಧ್ಯವಾದರೆ ಇಲ್ಲಿ ಇರಿಸಿಕೊಳ್ಳಿ, ಇಲ್ಲವಾದರೆ ನನ್ನನ್ನು ಇಲ್ಲಿಂದ ಕಳಿಸಿಬಿಡಿ ಎಂದು ಕೇಳಿಕೊಳ್ಳುತ್ತಾಳೆ.

ಸೈರಂಧ್ರಿಯ ಈ ಮಾತುಗಳನ್ನು ಕೇಳಿದ ರಾಣಿಯು ಅನ್ಯಾಯ ಮಾಡಿದವರನ್ನು ಕೊಲ್ಲಿಸುತ್ತೇನೆ ಎಂದು ಮೊದಲಾಗಿ ಸಮಾಧಾನಪಡಿಸಲು, ಸೈರಂಧ್ರಿಯು ಕೊಲ್ಲಿಸುವುದಕ್ಕಾದರೆ ನೀವೇಕೆ ಬೇಕು? ನನ್ನವರು ತಪ್ಪು ಮಾಡಿದ ಕಾರಣವಾಗಿ ಈ ಕೀಚಕ ಕುಲವನ್ನೆ ಸವರಿ ಬಿಡುತ್ತಾರೆ. ಇದಕ್ಕೆ ನಾನು ಹೊಣೆಯಲ್ಲ, ಸಾರಿ ಹೇಳಿದ್ದೇನೆ

"ಎಂದು ಬೀಳ್ಕೊಂಡಬಲೆ ತನ್ನಯ
ಮಂದಿರಕೆ ಬಂದೊಳಗೊಳಗೆ ಮನ
ನೊಂದು ಸೈವೆರಗಾಗಿ ಚಿಂತಿಸಿ ನೂಕಿದಳು ಹಗಲ
ಕೊಂದುಕೊಂಬೆನೆ ಆತ್ಮಘಾತಕ
ಹಿಂದೆ ಹತ್ತದೆ ಮಾಣದೇಗುವೆ
ನೆಂದು ದ್ರೌಪದಿ ತನ್ನ ಮನದಲಿ ಹಿರಿದು ಮರುಗಿದಳು"[೧೮೪]

ಎಂದು ಸುದೇಷ್ಣೆಗೆ ಹೇಳಿ ತನ್ನ ಮಂದಿರಕ್ಕೆ ಬಂದ ದ್ರೌಪದಿ ಒಳಗೊಳಗೆ ಕಡುನೊಂದು ಚಿಂತಿಸುತ್ತಾಳೆ. ಸಂಕಟಪಡುತ್ತ ಹಲವು ಬಗೆಯಲ್ಲಿ ಯೋಚಿಸುತ್ತ ಹಗಲನ್ನು ನೂಕಿದಳು. ಈ ಕಷ್ಟಗಳಿಂದ ಪರಿಹಾರ ಕಾಣೋಣ ಎಂದು ತನ್ನನ್ನು ತಾನು ಕೊಂದುಕೊಳ್ಳೋಣ ಎಂದುಕೊಂಡರೆ ಆತ್ಮಹತ್ಯೆಯ ಪಾಪ ಹಿಂದೆ ಬಂದು ಸುತ್ತಿಕೊಳ್ಳುತ್ತದೆ. ನಾನೇನು ಮಾಡಲಿ? ಎಂದು ದ್ರೌಪದಿಯು ತನ್ನ ಮನದಲ್ಲಿ ದುಃಖಿಸುತ್ತಾಳೆ. ಇಲ್ಲಿ ದ್ರೌಪದಿ ಆತ್ಮಹತ್ಯೆಯ ವಿಚಾರವಾಗಿ ಮಾತನಾಡುತ್ತಿದ್ದಾಳೆ

ಎಂದರೆ ಅವಳು ಎಷ್ಟು ನೋವನ್ನು ಅನುಭವಿಸಿದ್ದಾಳೆ, ಅಪಮಾನಗಳಿಗೆ ಗುರಿಯಾಗಿದ್ದಾಳೆ ಎಂಬುದು ತಿಳಿಯುತ್ತದೆ. ಅಲ್ಲದೆ ಕಾಪಾಡುವವರು ಯಾರೂ ಇಲ್ಲದಿದ್ದಾಗ ಸಹಜವಾಗಿಯೆ ಹೆಣ್ಣಾದವಳು ಆಲೋಚಿಸುವ ಪರಿಯನ್ನು ಕವಿ ತಿಳಿಸುತ್ತಾನೆ. ಇಲ್ಲಿ ಪ್ರಧಾನವಾಗಿ ಗಮನಿಸಬೇಕಾದ ಇನ್ನೊಂದು ಮಹತ್ವದ ಅಂಶ ಕವಿಯು ದ್ರೌಪದಿಯ ಮೂಲಕ ತಿಳಿಸುವ ಜೀವಪರ ಕಾಳಜಿ. ಅಂದರೆ ಜೀವವನ್ನು ಹತ್ಯೆ ಮಾಡಿಕೊಳ್ಳುವ ಕಾರ್ಯವನ್ನು ಕವಿ ವಿರೋಧಿಸುತ್ತಾನೆ. ಜೀವ ಹತ್ಯೆ ವಿರೋಧಿಯಾದ ಗುಣ ಇಲ್ಲಿ ಕಂಡುಬರುತ್ತದೆ. ಜೀವಪರವಾದ ಮಾನವೀಯ ಗುಣಗಳಿಗೆ ಇಲ್ಲಿ ಕವಿ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಿರುವುದು ಬಹುಮುಖ್ಯವಾದ ಸಂಗತಿ. ಅಲ್ಲದೆ ಕಷ್ಟದಲ್ಲಿರುವ ಹೆಣ್ಣಿಗೆ 'ಆತ್ಮಹತ್ಯೆ'ಯೇ ಅಂತಿಮ ಪರಿಹಾರವಲ್ಲ. ಅದರಾಚೆಗೆ ಪರ್ಯಾಯ ಅವಕಾಶಗಳು ಹಾಗೂ ಆಲೋಚನೆಗಳು ಇವೆ ಎಂಬ ಅಂಶಗಳನ್ನು ಸಹ ಈ ಪದವು ಮನವರಿಕೆ ಮಾಡಿಕೊಡುತ್ತದೆ. ಈ ಕಾರಣವಾಗಿ ಪ್ರಸ್ತುತ ಪದ್ಯ ಭಾಗವು ಸ್ತ್ರೀ ಪರವಾದ ಕಾಳಜಿಗಳನ್ನು ಅಭಿವ್ಯಕ್ತಿಪಡಿಸುವ ಹಿನ್ನೆಲೆಯಲ್ಲಿ ಪ್ರಮುಖವಾಗುತ್ತದೆ.

ಮುಂದುವರೆದು ದ್ರೌಪದಿಯು

"ಆರಿಗುಸುರುವೆನಾರ ಸಾರುವೆ
ನಾರಿಗೊರಲುವೆನಾರಿಗರುಹುವೆ
ನಾರ ಬೇಡುವೆನಕಟ ಹೆಂಗಸು ಜನ್ಮವನು ಸುಡಲಿ
ಘೋರ ಪಾತಕಿಯೆನ್ನವೊಲು ಮು
ನ್ನಾರು ನವೆದವರುಂಟು ಮರಣವು
ಬಾರದೆಂದೊರಲಿದಳು ಬಸುರನು ಹೊಯ್ದು ಶಶಿವದನೆ"[೧೮೫]

ನನ್ನ ಈ ಸ್ಥಿತಿಯನ್ನು ಕುರಿತು ಯಾರಿಗೆ ಹೇಳಲಿ? ಯಾರ ಬಳಿ ಹೋಗಲಿ? ಯಾರ ಹತ್ತಿರ ಹೋಗಿ ಗೋಳಾಡಲಿ? ಯಾರಿಗೆ ಅರುಹುವೆನು? ಯಾರನ್ನು ಬೇಡಲಿ? ಅಯ್ಯೋ ಈ ಹೆಂಗಸು ಜನ್ಮವನ್ನು ಸುಡಲಿ. ನನ್ನಂಥ ಘೋರ ಪಾತಕಿಯ ಹಾಗೆ ಹಿಂದೆ ಯಾರು ನವೆದರು? ಅಂತಹವರು ಇದ್ದಾರೆಯೆ? ಮರಣವು ಬಾರದೆ? ಎಂದು ಬಸುರನ್ನು ಹೊಯ್ದುಕೊಳ್ಳುತ್ತ ಸಂಕಟಪಟ್ಟಳು ದ್ರೌಪದಿ. ಇಲ್ಲಿಯ ಒಂದೊಂದು ಮಾತುಗಳೂ ಸಹ ಕರುಳನ್ನು ಹಿಂಡುವಂತಹವು. ಮಹಾರಾಣಿಯಾಗಿ ಮೆರೆದವಳು. ಧರ್ಮಜ, ಅರ್ಜುನ, ಭೀಮನಂತಹವರ ರಕ್ಷಣೆಯಲ್ಲಿ ಬಾಳಿ ಬದುಕಿದ ದ್ರೌಪದಿ ಇಂದು ತನ್ನ ಕಷ್ಟವನ್ನು ಯಾರೊಡನೆ ಹೇಳಿಕೊಳ್ಳಲಿ ಎಂದು ಮರುಗುತ್ತ ಈ ಹೆಣ್ಣು ಜನ್ಮವನ್ನು ಸುಡಲಿ ಎಂದು ಹೇಳುವ ಮಾತುಗಳು ಇಡೀ ಹೆಣ್ಣು ಕುಲದ ನೋವಿನ ಸಂಕೇತವಾಗಿದೆ. ಈ ನೋವು ಕೇವಲ ದ್ರೌಪದಿಯಂತಹ ಒಬ್ಬಳು ಹೆಣ್ಣಿನದಲ್ಲ. ಅದು ಸಮಸ್ತ ಹೆಣ್ಣು ಕುಲದ್ದಾಗಿರುವುದು ಕಂಡುಬರುತ್ತದೆ. ಮುಂದುವರೆದು

"ಯಮಸುತಂಗರುಹುವೆನೆ ಧರ್ಮ
ಕ್ಷಮೆಯ ಗರ ಹೊಡೆದಿಹುದು ಪಾರ್ಥನು
ಮಮತೆಯುಳ್ಳವನೆಂಬೆನೇ ತಮ್ಮಣ್ಣನಾಜ್ಞೆಯಲಿ
ಭ್ರಮಿತನಾಗಿಹನುಳಿದರಿಬ್ಬರು
ರಮಣರಿವರೀ ನಾಯ ಕೊಲಲ
ಕ್ಷಮರು ನಿಸ್ಸಂದೇಹವೆಂದಳು ತನ್ನ ಮನದೊಳಗೆ"[೧೮೬]

ತನ್ನ ದುಃಖವನ್ನು ಪರಿಹರಿಸಲು ಯಾರಿಗೆ ಹೇಳಿದರೆ ಉತ್ತಮ ಎಂದು ಯೋಚಿಸುತ್ತ ತನ್ನ ಪತಿಗಳೆಲ್ಲರ ದೌರ್ಬಲ್ಯಗಳನ್ನು ಕುರಿತು ಆತ್ಮ ವಿಮರ್ಶೆಗೆ ತೊಡಗಿದ್ದಾಳೆ. ಧರ್ಮರಾಯನಿಗೆ ತಿಳಿಸೋಣ ಎಂದುಕೊಂಡರೆ ಆತನಿಗೆ ಧರ್ಮಕ್ಷಮೆಯ ಗರ ಹೊಡೆದಿದೆ. ಅರ್ಜುನನು ಮಮತೆಯುಳ್ಳವನು ಎಂದರೆ ಆತನು ತಮ್ಮಣ್ಣನಾಜ್ಞೆಯಲ್ಲಿ ಭ್ರಮಿತನಾಗಿದ್ದಾನೆ. ಇನ್ನು ಉಳಿದ ನಕುಲ ಸಹದೇವರಿಬ್ಬರು ರಮಣರು ನಿಸ್ಸಂದೇಹವಾಗಿಯೂ ಈ ನಾಯನ್ನು ಕೊಲ್ಲಲು ಅಕ್ಷಮರು. ಎಂದು ತನ್ನ ಮನದೊಳಗೆ ಆಲೋಚಿಸುತ್ತಾಳೆ ದ್ರೌಪದಿ. ಅಂತಿಮವಾಗಿ ಭೀಮನಿಗೆ ತಿಳಿಸುವ ನಿರ್ಧಾರವನ್ನು ಮಾಡುತ್ತಾಳೆ.

"ಎಲ್ಲರೊಳು ಕಲಿಭೀಮನೇ ಮಿಡು
ಕುಳ್ಳ ಗಂಡನು ಹಾನಿ ಹರಿಬಕೆ
ನಿಲ್ಲದಂಗೈಸುವನು ಕಡು ಹೀಹಾಳಿಯುಳ್ಳವನು
ಖುಲ್ಲನಿವನುಪಟಳವನಾತಂ
ಗೆಲ್ಲವನು ಹೇಳುವೆನು ಬಳಿಕವ
ನಲ್ಲಿ ಹುರುಳಿಲ್ಲದೊಡೆ ಕುಡಿವೆನು ಘೋರತರ ವಿಷವ"[೧೮೭]

ಇವರುಗಳಲ್ಲೆಲ್ಲಾ ಕಲಿಯಾದ ಭೀಮನೇ ಮಿಡುಕುಳ್ಳ ಗಂಡನು. ಆತನೆ ಹಾನಿ ಹರಿಬಕ್ಕೆ ನಿಲ್ಲದಂತೆ ರಕ್ಷಣೆಗೆ ಮುನ್ನುಗ್ಗಿ ಬರುವನು. ಬಹಳವಾದ ಸಾಹಸ ಪ್ರವೃತ್ತಿ ಹಾಗೂ ಸ್ಪರ್ಧಾ ಮನೋಭಾವವುಳ್ಳವನು. ಖುಲ್ಲನಾದ ಈ ಕೀಚಕನ ಉಪಟಳವನ್ನೆಲ್ಲವನ್ನೂ ಆತನಿಗೆ ಹೇಳುವೆನು. ನಂತರದಲ್ಲಿ ಅವನಲ್ಲಿಯೂ ಸತ್ವ ಕಾಣದಿದ್ದರೆ ಅಥವಾ ನನ್ನನ್ನು ರಕ್ಷಿಸುವ ಅಂಶ ಇಲ್ಲದಿದ್ದರೆ ಘೋರತರವಾದ ವಿಷವನ್ನು ಕುಡಿದು ಪ್ರಾಣತ್ಯಾಗ ಮಾಡುತ್ತೇನೆ ಎಂದು ಅಂತಿಮವಾದ ನಿರ್ಧಾರಕ್ಕೆ ಬರುತ್ತಾಳೆ. ಹಿಂದೆ ಜೀವಪರವಾದ ಕಾಳಜಿಯನ್ನು ವ್ಯಕ್ತಪಡಿಸಿದ್ದ ಕವಿ ಇಲ್ಲಿ ಆಕೆ ಸಾಯುವುದಕ್ಕೆ ನಿರ್ಣಯಿಸಿರುವ ಸಂಗತಿಯನ್ನು ಕುರಿತು ತಿಳಿಸಿದ್ದಾನೆ. ತನ್ನ ಮಾನ ರಕ್ಷಣೆಗೆ ತಾನು ನಂಬಿದವರಾರೂ ಬರದಿದ್ದರೆ ತಾನು ಸಾಯುವ ನಿರ್ಧಾರಕ್ಕೆ ಬರುತ್ತಾಳೆ. ಅಂತಹ ದಿಟ್ಟ ಹೆಣ್ಣು ತನ್ನ ಮಾನರಕ್ಷಣೆಗಾಗಿ ಸಾಯುವ ನಿರ್ಧಾರಕ್ಕೆ ಬರುವುದಾದರೆ ಇನ್ನು ಸಾಮಾನ್ಯ ಹೆಣ್ಣುಗಳು ಇಂತಹ ಸ್ಥಿತಿಯನ್ನು ಎದುರಿಸಲು ಹೇಗೆ ಸಾಧ್ಯ? ಇಂದಿಗೂ ಅತ್ಯಾಚಾರ ಮತ್ತು ಲೈಂಗಿಕ ಕಿರುಕುಳಕ್ಕೆ ಬಲಿಯಾದ ಹೆಣ್ಣುಗಳು ಸಾವಿನ ಮೊರೆ ಹೋಗುವುದನ್ನು ನಾವು ಕಾಣಬಹುದು.

ಈ ರೀತಿಯಾಗಿ ನಿಶ್ಚಯಿಸಿಕೊಂಡು ಭೀಮನು ಮಲಗಿದ್ದ ಬಾಣಸಿನ ಮನೆಗೆ ಬಂದು ಸೇರಿದಳು. ಮೈಮರೆತು ಮಲಗಿರುವ ಭೀಮನ ಬಳಿ ಬಂದು

"ಎಬ್ಬಿಸಲು ಭುಗಿಲೆಂಬನೋ ಮೇ
ಣೊಬ್ಬಳೇತಕೆ ಬಂದೆ ಮೋರೆಯ
ಮಬ್ಬಿದೇಕೆಂದೆನ್ನ ಸಂತೈಸುವನೊ ಸಾಮದಲಿ
ತುಬ್ಬುವುದೊ ತಾ ಬಂದ ಬರವಿದು
ನಿಬ್ಬರವಲಾ ಜನದ ಮನಕಿ
ನ್ನೆಬ್ಬಿಸಿಯೆ ನೋಡುವೆನೆನುತ ಸಾರಿದಳು ವಲ್ಲಭನ"[೧೮೮]

ದ್ರೌಪದಿಯ ಮಾನಸಿಕ ಸಂಘರ್ಷವು ಪ್ರಕಟವಾಗುವ ಬಹು ಮುಖ್ಯವಾದ ಸನ್ನಿವೇಶವಿದು. ಮಲಗಿರುವಂತಹ ಭೀಮನನ್ನು ಎಬ್ಬಿಸಿದರೆ ಆತ ಎಲ್ಲಿ ರೋಷದಿಂದ ಭುಗಿಲೆನ್ನುತ್ತಾನೊ? ಅಥವಾ ಒಬ್ಬಳೇ ಏತಕ್ಕೆ ಬಂದೆ? ಮುಖದ ಮಬ್ಬಿದೇಕೆಂದು ನನ್ನನ್ನು ಸಂತೈಸುವನೊ? ನಾನು ಬಂದ ಬರುವಿಕೆಯು ಸಾರ್ಥಕವಾಗುವುದೋ? ಇಲ್ಲವೋ? ಎಂದು ಹಲವು ಬಗೆಯಲ್ಲಿ ಆತಂಕದಿಂದ ತೊಳಲಾಡುತ್ತಾಳೆ. ಅಲ್ಲದೆ ನಾನು ಬಂದ ಬರುವಿಕೆ ಅವನ ಮನಸ್ಸಿಗೆ ಸಮಾಧಾನ ತರುವುದೋ? ಅಥವಾ ಅತೃಪ್ತಿ ತಂದಿದೆಯೋ ಪರೀಕ್ಷಿಸಿ ನೋಡಿಯೇ ಬಿಡುತ್ತೇನೆ ಎಂದು ಆತನ ಹತ್ತಿರಕ್ಕೆ ಸುಳಿದಳು.

ನಿಧಾನವಾಗಿ ಆತನನ್ನು ನಿದ್ರೆಯಿಂದ ಎಬ್ಬಿಸಿ ತನಗೊದಗಿ ಬಂದಿರುವ ಕಷ್ಟವನ್ನು ಆತನಲ್ಲಿ ಅರುಹುತ್ತಾಳೆ.

"ನಿನ್ನೆ ಹಗಲರೆಯಟ್ಟಿ ಕೀಚಕ
ಕುನ್ನಿಯೊದೆದನು ರಾಜಸಭೆಯಲಿ
ನಿನ್ನ ವಂದಿಗರಿರಲು ಪರಿಭವವುಚಿತವೇ ತನಗೆ
ಎನ್ನನವ ಬೆಂಬಳಿಯ ಬಿಡ ನಾ
ನಿನ್ನು ಬದುಕುವಳಲ್ಲ ಪಾತಕ
ನಿನ್ನ ತಾಗದೆ ಮಾಣದೆನಲಾ ಭೀಮ ಖತಿಗೊಂಡ"[೧೮೯]

ನಿನ್ನೆಯ ಹಗಲು ಆ ದುರುಳ ಕೀಚಕನು ನನ್ನನ್ನು ಅಟ್ಟಿಕೊಂಡು ಬಂದು ರಾಜಸಭೆಯಲ್ಲಿ ಕಾಲಿನಿಂದ ಒದೆದನು. ನಿನ್ನಂಥಹವರು ಇರಲು ನನಗೆ ಇಂತಹ ಪರಿಭವವೆ? ಅವನು ನನ್ನ ಬೆನ್ನು ಬಿಡುವುದಿಲ್ಲ. ಅವನ ಉಪಟಳದಿಂದಾಗಿ ನಾನಿನ್ನು ಬದುಕುವವಳಲ್ಲ. ಈ ಪಾತಕವು ನಿನ್ನನ್ನು ತಾಕದೆ ಇರುವುದಿಲ್ಲ ಎಂದು ಕೀಚಕನಿಂದ ತನಗೊದಗಿದ ಅವಮಾನದ ಸಂದರ್ಭವನ್ನು ತಿಳಿಸುತ್ತಾಳೆ. ಇಲ್ಲಿ ದ್ರೌಪದಿ ದೈಹಿಕ ಹಾಗೂ ಮಾನಸಿಕ ಸಂಘರ್ಷಗಳೆರಡನ್ನೂ ಎದುರಿಸುವುದು ಕಂಡುಬರುತ್ತದೆ. ನೀಚನಾದ ಕೀಚಕನಿಂದ ದೈಹಿಕವಾಗಿ ಹಲ್ಲೆಗೊಳಗಾಗಿದ್ದಾಳೆ ದ್ರೌಪದಿ.

ಈ ನುಡಿಯನ್ನು ಕೇಳಿದ ಭೀಮನು ನಿನ್ನ ಕಷ್ಟಗಳಿಗೆ ಮಿಸುಕುವವನು ನಾನಲ್ಲ. ಇದು ಹುದುವಿನ ಗಂಡತನ. ಅಸಮ ಸಾಹಸಿಗಳಾದ ಉಳಿದ ನಾಲ್ವರಿಗೂ ನಿನ್ನ ಕಷ್ಟಗಳನ್ನು ಹೇಳಿಕೋ ಹೋಗು ಎನ್ನಲು, ದ್ರೌಪದಿಯು

"ರಮಣ ಕೇಳುಳಿದವರು ತನ್ನನು
ರಮಿಸುವರು ಮಾನಾರ್ಥವೆನೆ ನಿ
ರ್ಗಮಿಸುವರು ನೀನಲ್ಲದುಳಿದವರುಚಿತ ಬಾಹಿರರು
ಮಮತೆಯಲಿ ನೀ ನೋಡು ಚಿತ್ತದ
ಸಮತೆಯನು ಬೀಳ್ಕೊಡು ಕುಠಾರನ
ಯಮನ ಕಾಣಿಸಿ ಕರುಣಿಸೆಂದಳು ಕಾಂತೆ ಕೈಮುಗಿದು"[೧೯೦]

ರಮಣನೆ ಕೇಳು ಉಳಿದವರು ನನ್ನನ್ನು ರಮಿಸುತ್ತಾರೆ. ಆದರೆ ಮಾನದ ವಿಚಾರಗಳು ಬಂದಾಗ ಅವರು ನಿರ್ಗಮಿಸುವರು. ನೀನಲ್ಲದೆ ಉಳಿದವರು ಉಚಿತ ಬಾಹಿರರು. ಮಮತೆಯಿಂದ ನೀನು ನೋಡು ಮನಸ್ಸಿನ ಸಮತೆಯನ್ನು ಬೀಳ್ಕೊಡು. ಈ ಕುಠಾರನನ್ನು ಯಮನಲ್ಲಿಗೆ ಕಳುಹಿಸಿ ನನ್ನನ್ನು ಕಾಪಾಡು. ಕರುಣಿಸು ಎಂದು ಬೇಡಿಕೊಳ್ಳುತ್ತಾಳೆ. ಇದಕ್ಕೆ ಭೀಮನು 'ಕಲಹಕ್ಕಾದರೆ ನಾವು ರಮಿಸುವವರು ಉಳಿದವರು', 'ಕೆಲವರು ಗಳಿಸಿದೊಡೆ ಕೆಲವರು ಉಂಡು ಜಾರುವರು' ಎಂಬ ಗಾದೆಯ ಮಾತಿದೆ. ಅಲ್ಲದೆ ನಾವು ಧರ್ಮಜನಿಗೆ ಹೆದರುತ್ತೇವೆ. ಎನ್ನಲು ದ್ರೌಪದಿಯು

"ಹೆಂಡತಿಯ ಹರಿಬದಲಿಯೊಬ್ಬನೆ
ಗಂಡುಗೂಸೇ ವೈರಿಯನು ಕಡಿ
ಖಂಡವನು ಮಾಡುವನು ಮೇಣ್ ತನ್ನೊಡಲನಿಕ್ಕುವನು
ಗಂಡರೈವರು ಮೂರು ಲೋಕದ
ಗಂಡರೊಬ್ಬಳನಾಳಲಾರಿರಿ
ಗಂಡರೋ ನೀವ್ ಭಂಡರೋ ಹೇಳೆಂದಳಿಂದುಮುಖಿ"[೧೯೧]

ಹೆಂಡತಿಯ ಮಾನ ಸಂರಕ್ಷಣೆಗಾಗಿ ಒಬ್ಬನೆ ಗಂಡನಾದವನು ವೈರಿಯನ್ನು ಕಡಿಖಂಡವನ್ನು ಮಾಡುತ್ತಾನೆ. ಇಲ್ಲವೆ ಆ ಹೋರಾಟದಲ್ಲಿ ತನ್ನೊಡಲನ್ನೇ ಈಡಾಡುತ್ತಾನೆ. ಅಂತಹದ್ದರಲ್ಲಿ ನೀವು ಐವರು ಗಂಡಂದಿರು. ಮೂರು ಲೋಕದ ಗಂಡರು ಎಂಬ ಹೆಗ್ಗಳಿಕೆಗೆ ಪಾತ್ರರಾದವರು. ಆದರೂ ಒಬ್ಬಳು ಹೆಂಡತಿಯನ್ನು ಆಳಲಾರಿರಿ. ಅವಳ ಮಾನ ಸಂರಕ್ಷಣೆಯನ್ನು ಮಾಡಲಾರದಂತಹ ನೀವು ಗಂಡರೋ, ಭಂಡರೋ ಎಂದು ದ್ರೌಪದಿಯು ಅತ್ಯಂತ ಕೋಪದಿಂದ ನುಡಿಯುತ್ತಾಳೆ. ಈ ಮಾತುಗಳಲ್ಲಿ ಆಕೆಯ ಮನದ ರೋಷ, ಕೋಪಗಳು ನಮಗೆ ಮನವರಿಕೆಯಾಗುತ್ತವೆ. ಅಲ್ಲದೆ ಪತಿಗಳಾದವರು ಪತ್ನಿಯನ್ನು ರಕ್ಷಿಸಬೇಕಾದ್ದು ಧರ್ಮ, ಅವರೆ ಅವಳನ್ನು ಕೈಬಿಟ್ಟರೆ ಬೇರೆ ಯಾರು ರಕ್ಷಿಸಲು ಸಾಧ್ಯ ಎಂಬ ಭಾವವಿದೆ. ಮುಂದುವರೆದು

"ಅಂದು ಕೌರವ ನಾಯಿ ಸಭೆಯಲಿ
ತಂದು ತೋರಿದನುನ್ನತಿಯ ಬಳಿ
ಕಿಂದು ಕೀಚಕ ಕುನ್ನಿಯೊದೆದನು ರಾಜಸಭೆಯೊಳಗೆ
ಅಂದು ಮೇಣಿಂದಾದ ಭಂಗಕೆ
ಕುಂದದಾವುದು ನೀವು ಬಲ್ಲಿದ
ರೆಂದು ಹೊಕ್ಕರೆ ಹೆಣ್ಣ ಕೊಂದಿರಿಯೆಂದಳಿಂದುಮುಖಿ"[೧೯೨]

ಅಂದಿನ ದಿನ ಕೌರವ ನಾಯಿ ರಾಜಸಭೆಯಲ್ಲಿ ಎಳೆದು ತಂದು ಉನ್ನತಿಕೆಯನ್ನು ತೋರಿದನು. ಇಂದು ಈ ಕೀಚಕ ಕುನ್ನಿಯು ರಾಜಸಭೆಯಲ್ಲಿ ನನ್ನನ್ನು ಒದೆದನು. ಅಂದಿನ ದುರ್ಯೋಧನನ ರಾಜಸಭೆಯ ಭಂಗಕ್ಕೂ, ಇಂದಿನ ವಿರಾಟನ ರಾಜಸಭೆಯ ಭಂಗಕ್ಕೂ ಕುಂದೇನು? ನೀವು ಬಲ್ಲಿದರು ಎಂದು ನಿಮ್ಮಲ್ಲಿಗೆ ಬಂದು ಆಶ್ರಯಿಸಿದರೆ ಹೆಣ್ಣನ್ನು ಕೊಂದಿರಿ ಎಂದು ನೊಂದು ನುಡಿಯುತ್ತಾಳೆ. ದ್ರೌಪದಿ ಇಲ್ಲಿ 'ಹೆಂಡತಿಯನ್ನು ಕೊಂದಿರಿ' ಎಂದು ಹೇಳುವುದಿಲ್ಲ. ಬದಲಿಗೆ 'ಹೆಣ್ಣ ಕೊಂದಿರಿ' ಎಂದು ಹೇಳುತ್ತಾಳೆ. ಅಂದರೆ ಇಲ್ಲಿ ಆಕೆಯ ಆಲೋಚನೆಗಳೆಲ್ಲವು ಇಡೀ ಸ್ತ್ರೀ ಸಂಕುಲವನ್ನು ಪ್ರತಿನಿಧಿಸುವುದನ್ನು ತಿಳಿಸುತ್ತವೆ. ಅಲ್ಲದೇ ಇಡೀ ಸ್ತ್ರೀ ಸಮುದಾಯದ ಹಿತ ಆ ಮಾತುಗಳಲ್ಲಿ ಅಡಗಿರುವುದು ಕಂಡುಬರುತ್ತದೆ.

ಈ ಮಾತುಗಳನ್ನು ಕೇಳಿದ ಭೀಮನು ಈ ನಪುಂಸಕರೊಡನೆ ಹುಟ್ಟಿದ ನಾನು ಮೂಗುಳ್ಳವನೇ? ನೊಂದು ನುಡಿದರೆ ನಮಗೆ ಖಾತಿಯಿಲ್ಲ. ಧರ್ಮರಾಯನನ್ನು ಬೇಡಿಕೋ ಆತನನ್ನು ಪೀಡಿಸಿ ಕೀಚಕನ ತಲೆ ಚೆಂಡಾಡಿಸು. ಉಳಿದ ಅರ್ಜುನ ನಕುಲ ಸಹದೇವರಿಗೆ ವಿವರಿಸಿ ಹೇಳು ನನ್ನಲ್ಲಿ ಫಲಸಿದ್ಧಿಯಿಲ್ಲ ಎಂದನು. ಈ ಮಾತುಗಳನ್ನು ಕೇಳಿದ ದ್ರೌಪದಿಗೆ

"ಕೇಳುತ್ತಿದ್ದಳು ಕೊರಳ ಸೆರೆ ಗೋ
ನಾಳಿಗೌಕಿತು ಬಿಕ್ಕಿ ಬಿಕ್ಕಿ ವಿ
ಲೋಲಲೋಚನೆಯಕಟ ನೆನೆದಳು ಬಾಷ್ಪವಾರಿಯಲಿ
ಶೂಲ ಮರುಮೊನೆಗೊಂಡವೊಲು ಸುಳಿ
ವಾಳೆ ಝುಳ ತಾಗಿದವೊಲುದರ
ಜ್ವಾಲೆ ನೆತ್ತಿಗೆ ನಿಲುಕೆ ಹಲುಬಿದಳಬಲೆ ಬಿಸುಸುಯ್ದು"[೧೯೩]

ಕೊರಳ ಸೆರೆ ಗೋನಾಳಿಯನೌಕಿತು. ಬಿಕ್ಕಿ ಬಿಕ್ಕಿ ಅಳುತ್ತ ವಿಲೋಲಲೋಚನೆಯು ಕಣ್ಣೀರನ್ನು ಸುರಿಸುತ್ತ ನೆನೆದಳು. ಶೂಲ ಮೈಯಲ್ಲಿ ಹಾಯ್ದು ಮರುಮೊನೆಗೊಂಡಂತೆ ಆಯ್ತು. ಉದರ ಜ್ವಾಲೆ ನೆತ್ತಿಗೇರಿ ಅಬಲೆಯು ಬಿಸುಸುಯ್ದು ಬಸವಳಿದಳು. ಇಲ್ಲಿ ಭೀಮನ ಮಾತುಗಳನ್ನು ಕೇಳಿದಾಗಿನ ಆಕೆಯ ತಲ್ಲಣ ಹಾಗೂ ಆತಂಕದ ಸಂಗತಿಗಳು ಗಮನಾರ್ಹವಾದವು. ಭೀಮನೆ ಕೈಬಿಟ್ಟರೆ ಇನ್ನಾರು ರಕ್ಷಿಸುವರೆಂಬ ದುಃಖ ಆಕೆಯಲ್ಲಿ ಮಡುಗಟ್ಟಿರುವುದು ತಿಳಿಯುತ್ತದೆ.

"ಕೆಂದಳದ ಸೆಕೆಯಲಿ ಕಪೋಲವು
ಕಂದಿ ಕಸರಿಕೆಯಾಯ್ತು ನಿಡು ಸುಯಿ
ಲಿಂದ ಸೀಕರಿಯೋದವೇಕಾವಳಿಯ ಮುತ್ತುಗಳು
ಸಂದಣಿಸಿದೆವೆಗಳಲಿ ಬಾಷ್ಪದ
ಬಿಂದು ತಳಿತುದು ನಟ್ಟ ದೃಷ್ಟಿಯೊ
ಳಿಂದುಮುಖಿ ಸೈಗರೆದು ತೂಗಿದಳಡಿಗಡಿಗೆ ಶಿರವ"[೧೯೪]

ದುಃಖದಿಂದ ದ್ರೌಪದಿಯ ದೇಹ ಮತ್ತು ಮುಖದಲ್ಲಾದ ಬದಲಾವಣೆಗಳನ್ನು ಕವಿ ತಿಳಿಸುತ್ತಾನೆ. ಕೆಂದಳದ ಸೆಕೆಯಿಂದ ಕಪೋಲವು ಕಂದಿ ಕಪ್ಪಾಯಿತು. ನಿಟ್ಟುಸಿರ ಬಿಸಿಯಿಂದ ಏಕಾವಳಿಯ ಮುತ್ತುಗಳೆಲ್ಲವು ಸೀದು ಹೋದವು. ದುಃಖದಿಂದ ಕಂಬನಿ ಸುರಿಸುತ್ತಿದ್ದಾಳೆ ಎನ್ನುತ್ತಾನೆ ಕವಿ. ಮುಂದುವರೆದು ದ್ರೌಪದಿ ಹೇಳುವ ಈ ಮಾತುಗಳು ಆಕೆಯ ಮನದ ಇನ್ನಷ್ಟು ದುಃಖವನ್ನು ತಿಳಿಸುತ್ತವೆ.

"ಆವ ಹೆಂಗುಸನಳಲಿಸಿದೆನಿ
ನ್ನಾವ ಧರ್ಮವನಳಿದೆನೋ ತಾ
ನಾವ ಪಾಪದ ಫಲಕೆ ಪಿಡಿದೆನೊ ಸಂಚಕಾರವನು
ಆವ ಹೆಂಗುಸು ನವೆದಳೆನ್ನವೊ
ಲಾವಳಳಲಿದು ಮರುಗಿದಳು ಮ
ತ್ತಾವಳೆನ್ನಂದದಲಿ ಪಡೆದವಳುಂಟೆ ಲೋಕದಲಿ"[೧೯೫]

ತನ್ನನ್ನು ತಾನು ಸ್ವ ವಿಮರ್ಶೆ ಮಾಡಿಕೊಳ್ಳುವಂತೆ ಕಂಡುಬರುತ್ತವೆ ಇಲ್ಲಿನ ಮಾತುಗಳು. ಯಾವ ಹೆಂಗಸನ್ನು ಅಳಲಿಸಿದನೊ? ಇನ್ನಾವ ಧರ್ಮವನ್ನು ಅಳಿದೆನೋ? ತಾನು ಯಾವ ಪಾಪದ ಫಲಕ್ಕೆ ಇಂತಹ ಸಂಚಕಾರವನ್ನು ಹಿಡಿದೆನೋ, ನನ್ನ ಹಾಗೆ ಯಾವ ಹೆಂಗಸು ನವೆದಳೋ? ಯಾವ ಹೆಂಗಸು ಅತ್ತು ಮರುಗಿದಳೋ? ಮತ್ತೆ ನನ್ನಂತೆ ಈ ಲೋಕದಲ್ಲಿ ಯಾವ ನಾರಿಯರೂ ಇಂತಹ ಕಷ್ಟವನ್ನು ಅನುಭವಿಸದೇ ಇರಲಿ. ಇಲ್ಲಿ ದ್ರೌಪದಿ ಬಳಸುವ 'ಆವ ಹೆಂಗಸನಳಲಿಸಿದೆನೊ', 'ಆವ ಹೆಂಗಸು ನವೆದಳೆನ್ನವೊಲು' 'ಆವಳಳಲಿದು ಮರುಗಿದಳು' ಎಂಬ ಮಾತುಗಳು ಹೆಣ್ಣಿನ ಮೇಲೆ ಪರಂಪರಾಗತವಾಗಿ ನಡೆದು ಬಂದ ಸ್ತ್ರೀ ಶೋಷಣೆಯ ಚರಿತ್ರೆಯ ಹಿಂದಿನ ಕರಾಳತೆಗಳನ್ನು ಅಭಿವ್ಯಕ್ತಪಡಿಸುತ್ತವೆ. ದ್ರೌಪದಿ ಈ ರೀತಿ ನೊಂದು ನುಡಿಯುತ್ತಿರುವ ಮಾತುಗಳು ಈಕೆಗಿಂತ ಹಿಂದಿನ ಸ್ತ್ರೀಯರು ಕೂಡ ಇಂತಹುದೇ ನೋವುಗಳನ್ನು ಅನುಭವಿಸಿದ್ದಾರೆ ಎಂಬ ಚಾರಿತ್ರಿಕ ಸಂಗತಿಗಳನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ.

"ಇನ್ನು ಹುಟ್ಟದೆಯಿರಲಿ ನಾರಿಯ
ರೆನ್ನವೊಲು ಭಂಗಿತರು ಭುವನದೊ
ಳಿನ್ನು ಜನಿಸಲುಬೇಡ ಗಂಡರು ಭೀಮಸನ್ನಿಭರು

ಎನ್ನವೊಲು ಪಾಂಡವರವೊಲು ಸಂ
ಪನ್ನ ದುಃಖಿಗಳಾರು ನವೆದರು
ಮುನ್ನಿನವರೊಳಗೆಂದು ದ್ರೌಪದಿ ಹಿರಿದು ಹಲುಬಿದಳು”[೧೯೬]

ನನ್ನಂತೆ ದುಃಖಕ್ಕೆ, ಅಪಮಾನಕ್ಕೆ ಒಳಗಾದ ಹೆಣ್ಣುಗಳು ಇನ್ನು ಹುಟ್ಟದೆ ಇರಲಿ ಈ ಭೂಮಿಯ ಮೇಲೆ. ಹಾಗೆಯೆ ಭೀಮನಂತಹ ಗಂಡಂದಿರು ಕೂಡ ಇನ್ನು ಈ ಭೂಮಿಯ ಮೇಲೆ ಜನಿಸದೆ ಇರಲಿ. ಪಾಂಡವರ ಹಾಗೆ ಇಷ್ಟೊಂದು ಹಿರಿದಾದ ದುಃಖದಲ್ಲಿ ಹಿಂದೆ ಯಾರು ನವೆದರು? ಎಂದು ದ್ರೌಪದಿ ಬಹಳವಾಗಿ ವ್ಯಥೆ ಪಡುತ್ತಾಳೆ. ‘ಇನ್ನು ಹುಟ್ಟದೆಯಿರಲಿ ನಾರಿಯರೆನ್ನವೊಲು ಭಂಗಿತರು’ ಎಂಬ ದ್ರೌಪದಿಯ ಮಾತು ಮನಕರಗಿಸುವಂತಹದ್ದು. ಸಾರ್ವಭೌಮರ ಹೆಂಡತಿಯಾಗಿಯೂ ಇಂತಹ ಕಷ್ಟಗಳಿಗೆ ನಾನು ಒಳಗಾದೆ. ಇನ್ನು ಸಾಮಾನ್ಯ ಹೆಣ್ಣುಗಳಿಗೆ ಇಂತಹ ದುರ್ಗತಿ ಒದಗಿದರೆ ಏನು ಮಾಡುವರು. ಹಾಗಾಗಿ ಇಂತಹ ಹೆಣ್ಣು ಜನ್ಮದಲ್ಲಿ ಮತ್ತೊಮ್ಮೆ ಹುಟ್ಟಲೇ ಬಾರದು ಎಂಬ ಭಾವದಲ್ಲಿ ದ್ರೌಪದಿ ನುಡಿಯುತ್ತಾಳೆ.

“ಆವ ಗರಳವ ಕುಡಿವೆನೋ ಮೇ
ಣಾವ ಬೆಟ್ಟವನಡರಿ ಬೀಳ್ವೆನೊ
ಯಾವ ಮಡುವನು ಹೊಗುವೆನೋ ಹಾಸರೆಯ ಗುಂಪಿನಲಿ
ಆವ ಕುಂತವ ಹಾಯ್ವೆನೋ ಮೇ
ಣಾವ ಪಾವಕನೊಳಗೆ ಹೊಗುವೆನೊ
ಸಾವು ಸಮನಿಸದೆನಗೆನುತ ಮರುಗಿದಳು ನಳಿನಾಕ್ಷಿ”[೧೯೭]

ಯಾವ ವಿಷವನ್ನು ಕುಡಿಯಲಿ? ಇಲ್ಲವೆ ಯಾವ ಬೆಟ್ಟವನ್ನು ಹತ್ತಿ ಬೀಳಲಿ? ಯಾವ ಮಡುವಿನಲ್ಲಿ ಧುಮುಕಲಿ? ಹಾಸರೆಯ ಗುಂಪಿನಲಿ ಯಾವ ಕುಂತವ ಹಾಯಲಿ? ಇಲ್ಲವೆ ಯಾವ ಪಾವಕನೊಳಗೆ ಹಾಯಲಿ. ಅಯ್ಯೋ ನನಗೆ ಸಾವು ಬಾರದಲ್ಲಾ ಎಂದು ಮರುಗುತ್ತಾಳೆ ದ್ರೌಪದಿಯು.

“ಮಂದೆಗೆಳಸಿದ ಪಾಪಿ ಕೌರವ
ನಂದು ಮುಂದಲೆವಿಡಿದು ಸೈಂಧವ
ಬಂದು ಬಳಿಕಾರಣ್ಯವಾಸದೊಳೆನ್ನನೆಳದೊಯ್ದ
ಇಂದು ಕೀಚಕ ನಾಯ ಕಾಲಲಿ
ನೊಂದೆ ನಾನೀ ಮೂರು ಬಾರಿಯೆ
ಬಂದ ಭಂಗವೆ ಸಾಕೆನುತ ಬಸವಳಿದಳಿಂದುಮುಖಿ”[೧೯೮]

ಅಂದು ರಾಜಸಭೆಯಲ್ಲಿ ಪಾಪಿಯಾದ ಕೌರವನು ಮುಂದಲೆಯನ್ನು ಹಿಡಿದು ಸಭೆಗೆ ಎಳೆಸಿ ತಂದನು. ಬಳಿಕ ಅರಣ್ಯ ವಾಸದಲ್ಲಿ ಸೈಂಧವನು ಬಂದು ಮತ್ತೊಮ್ಮೆ ಮುಂದಲೆ ಹಿಡಿದು ಎಳೆದೊಯ್ದನು. ಇಂದು ಈ ಕೀಚಕ ನಾಯಿಯ ಕಾಲಿನಲ್ಲಿ ನೋವನ್ನು ಅನುಭವಿಸಿದೆ. ನನಗೆ ಈ

ಮೂರು ಬಾರಿ ಬಂದ ಭಂಗವೇ ಸಾಕು. ಇನ್ನು ಇಂತಹ ಭಂಗ ನನಗೆ ಬೇಡ ಎಂದು ಬಸವಳಿದಳು ಇಂದುಮುಖಿ. ಇಲ್ಲಿ ದ್ರೌಪದಿ ತನ್ನ ಮೇಲೆ ಈ ಹಿಂದೆ ನಡೆದ ಅಪಮಾನಗಳನ್ನು ನೆನಪುಮಾಡಿಕೊಳ್ಳುತ್ತ ಅವುಗಳನ್ನು ಕೀಚಕನ ಉಪಟಳದೊಂದಿಗೆ ತುಲನಾತ್ಮಕವಾಗಿ ಚರ್ಚಿಸುತ್ತಿದ್ದಾಳೆ. ತನಗೆ ಬಂದ ಕಷ್ಟಗಳನ್ನು ನೆನೆದುಕೊಳ್ಳುತ್ತಾ,

"ಜನನವೇ ಪಾಂಚಾಲ ರಾಯನ
ಮನೆ ಮನೋವಲ್ಲಭರದಾರೆನೆ
ಮನುಜಗಿನುಜರು ಗಣ್ಯವೇ ಗೀರ್ವಾಣರಿಂ ಮಿಗಿಲು
ಎನಗೆ ಬಂದೆಡರೀ ವಿರಾಟನ
ವನಿತೆಯರುಗಳ ಮುಡಿಯ ಕಟ್ಟುವ
ತನುವ ತಿಗುರುವ ಕಾಲನೊತ್ತುವ ಕೆಲಸದುತ್ಸಾಹ"[೧೯೯]

ನನ್ನಯ ಜನನವೋ ಪಾಂಚಾಲ ಮಹಾರಾಜನ ಅರಮನೆಯಲ್ಲಿ. ನನಗೆ ಮನೋವಲ್ಲಭರಾದವರು ಯಾರೆಂದರೆ ಮನುಜಗಿನುಜರು ಅವರಿಗೆ ಗಣ್ಯರಲ್ಲ? ಗೀರ್ವಾಣರಿಗಿಂತ ಮಿಗಿಲಾದವರು. ಆದರೆ ನನಗೆ ಬಂದ ಗತಿಯೋ ವಿರಾಟನ ವನಿತೆಯರುಗಳ ಮುಡಿಯನ್ನು ಕಟ್ಟುವ, ತನುವನ್ನು ತಿಗುರುವ (ಗಂಧಲೇಪನ ಕೆಲಸ) ಹಾಗೂ ಅವರ ಕಾಲನೊತ್ತುವ ಕೆಲಸದ ಉತ್ಸಾಹ ಎಂದು ತನ್ನ ಪೂರ್ವದ ಬದುಕು ಹಾಗೂ ಈಗಿನ ಸ್ಥಿತಿಯನ್ನು ನೆನಪಿಸಿಕೊಳ್ಳುತ್ತಾಳೆ. ಈ ರೀತಿಯ ಆತ್ಮಾವಲೋಕನಗಳು ದ್ರೌಪದಿಗೆ ಒದಗಿರುವ ವಿಷಮ ಸ್ಥಿತಿಯ ವಿವರಗಳನ್ನು ಮನಗಾಣಿಸುತ್ತವೆ.

"ಹಗೆಗಳಿಗೆ ತಂಪಾಗಿ ಬದುಕುವ
ಮುಗುದರಿನ್ನಾರುಂಟು ಭಂಗಕೆ
ಹೆಗಲ ಕೊಟ್ಟಾನುವ ವಿರೋಧಿಗಳುಂಟೆ ಲೋಕದಲಿ
ವಿಗಡ ಬಿರುದನು ಬಿಸುಟು ಬಡಿ ಹೋ
ರಿಗಳು ಪಾಂಡವರಂತೆ ಮೂಗು
ರ್ಚಿಗಳದಿನ್ನಾರುಂಟೆನುತ ಮರುಗಿದಳು ನಳಿನಾಕ್ಷಿ"[೨೦೦]

ಮೌನದಿಂದಿರುವ ತನ್ನ ಪತಿಗಳನ್ನು ಕುರಿತು ಹೀಗೆ ಟೀಕಿಸುತ್ತಾಳೆ. ಹಗೆಗಳಿಗೆ ತಂಪಾಗಿ ಬದುಕುವ ಮುಗ್ಧರು ಇನ್ನಾರು ಇದ್ದಾರೆ? ಭಂಗಕ್ಕೆ ಹೆಗಲು ಕೊಟ್ಟು ಆಗುವ ವಿರೋಧಿಗಳುಂಟೆ ಲೋಕದಲ್ಲಿ? ಶ್ರೇಷ್ಠವಾದ ಬಿರುದುಗಳನ್ನು ಬಿಸುಟು ಬಡಿ ಹೋರಿಗಳಾಗಿ ಪಾಂಡವರಂತೆ ಮೂಗುರ್ಚಿಗಳು ಇನ್ನಾರಿದ್ದಾರೆ? ಎಂದು ಮರುಗಿದಳು. ಅಂದರೆ ಹೆಂಡತಿಯ ಮಾನಪ್ರಾಣಗಳಿಗೆ ಕುತ್ತು ಬಂದ ಸಂದರ್ಭದಲ್ಲಿಯೂ ಅವರು ಮೌನವಾಗಿರುವುದು ಔಚಿತ್ಯವಲ್ಲ ಎಂಬುದು ಆಕೆಯ ಮನಸ್ಥಿತಿ.

"ಕಾಲನನು ಕೆರಳಿದೊಡೆ ಮುರಿವೆ
ಚ್ಚಾಳುತನದವರೆನ್ನನೊಬ್ಬಳ
ನಾಳಲಾರಿರಿ ಪಾಪಿಗಳಿರಪಕೀರ್ತಿಗಳುಕಿರಲ

ತೋಳ ಹೊರೆ ನಿಮಗೇಕೆ ಭೂಮಿಾ
ಪಾಲ ವಂಶದೊಳುದಿಸಲೇತಕೆ
ಕೂಳುಗೇಡಿಂಗೊಡಲ ಹೊರುವಿರಿಯೆಂದಳೆಂದುಮುಖಿ"[೨೦೧]

ಕಾಲನು ಕೆರಳಿದರೂ ಕೂಡ ಆತನನ್ನು ಮುರಿದೊರಗಿಸುವ ಮಹಾಶೂರರು ನೀವು. ಅಂತಹವರು ನನ್ನೊಬ್ಬಳನ್ನು ಆಳಲಾರಿರಿ. ಪಾಪಿಗಳಿರಾ, ಅಪಕೀರ್ತಿಗೆ ಅಳುಕಿದಿರಲ್ಲಾ. ಹೆಣ್ಣನ್ನು ರಕ್ಷಿಸುವ, ಭೂಮಿಯನ್ನು ಸಲಹುವ ತೋಳಿನ ಹೊರೆ ನಿಮಗೇಕೆ? ಶ್ರೇಷ್ಠವಾದ ರಾಜವಂಶದಲ್ಲಿ ಏತಕ್ಕೆ ಜನ್ಮತಳೆದಿರಿ. ಕೂಳಿಗಾಗಿ ಹೇಡಿಗಳಂತೆ ಈ ರೀತಿ ಹೊಟ್ಟೆಯನ್ನು ಹೊರೆಯುತ್ತಿರುವಿರಾ? ಎನ್ನುತ್ತಾಳೆ ದ್ರೌಪದಿ. ಇಲ್ಲಿ ಆಕೆ ಹೇಳುವ 'ಅಪಕೀರ್ತಿಗಳುಕಿದಿರಾ' ಎಂಬ ಮಾತು ಗಮನಿಸತಕ್ಕದ್ದು. ತಾವು ಕೊಟ್ಟ ಸತ್ಯದ ವಾಕ್ಯ ಮುಖ್ಯವಾಯಿತೆ ಹೊರತು ಹೆಣ್ಣನ್ನು ರಕ್ಷಿಸುವ ಜವಾಬ್ದಾರಿ ಮುಖ್ಯವಾಗಲಿಲ್ಲ. ತಮ್ಮ ನನ್ನಿ ತಪ್ಪಿದರೆ ಅಪಕೀರ್ತಿ ಬರುತ್ತದೆ ಎಂದು ಯೋಚಿಸಿ ತಾವು ನಿರ್ವಹಿಸಬೇಕಾದ ಗಂಭೀರ ಜವಾಬ್ದಾರಿಯನ್ನು ಮರೆತಿರಾ ಎಂಬರ್ಥದಲ್ಲಿ ದ್ರೌಪದಿ ನುಡಿಯುತ್ತಾಳೆ.

"ಧರೆಯ ಭಂಡಾರವನು ಪುರವನು
ಕರಿತುರಗ ರಥ ಪಾಯದಳವನು
ಕುರುಕುಲಾಗ್ರಣಿ ಸೆಳೆದುಕೊಂಡನು ನಿಮ್ಮ ಹೊರವಡಿಸಿ
ದುರುಳ ಕೀಚಕಗೆನ್ನ ಕೊಟ್ಟಿರಿ
ಪರಿಮಿತದಲಿರವಾಯ್ತು ನಿಮ್ಮೈ
ವರಿಗೆ ಲೇಸಾಯ್ತಕಟಯೆಂದಬುಜಾಕ್ಷಿ ಹಲುಬಿದಳು"[೨೦೨]

ಭೂಮಿಯನ್ನು, ರಾಜ್ಯವನ್ನು, ಭಂಡಾರವನ್ನು, ಪಟ್ಟಣವನ್ನು, ಕರಿತುರಗ, ರಥ ಪದಾತಿಗಳೆಲ್ಲವನ್ನೂ ಕುರುಕುಲಾಗ್ರಣಿಯು ಸೆಳೆದುಕೊಂಡನು. ನಂತರ ನಿಮ್ಮನ್ನು ಹೊರಗೋಡಿಸಿದನು. ಇಲ್ಲಿ ಈ ದುರುಳ ಕೀಚಕನಿಗೆ ನನ್ನನ್ನು ಕೊಟ್ಟಿರಿ. ನನ್ನ ಸ್ಥಿತಿ ಪರಿಮಿತದಲ್ಲಿರುವಂತೆ ಆಯಿತು. ನಿಮ್ಮೈವರಿಗೂ ಇದು ಲೇಸಾಯಿತಲ್ಲವೆ ಎನ್ನುತ್ತಾಳೆ ದ್ರೌಪದಿ. ಈ ಮಾತುಗಳೆಲ್ಲವು ದ್ರೌಪದಿಯ ಮನದಲ್ಲಿನ ಬೇಗುದಿಗಳಿಗೆ ಸಾಕ್ಷಿಯಾಗಿವೆ.

"ಭಾವ ಭಾಗ್ಯಾಧಿಕನು ಕೌರವ
ದೇವನರಸುಗಳೊಡೆಯತನವನು
ನೀವು ಕೃಷ್ಣನ ಕೂರ್ಮೆ ಧರ್ಮಾದಿ ಪಾಲಿಸಿದಿರೀಗ
ನೀವು ತಟತಟವಾಗಿ ಲೋಗರ
ಸೇವೆಯಲಿ ಬೆಂದೊಡಲ ಹೊರುವಿರಿ
ಸಾವವಳು ನಿಮಗಂಜಲೇಕೆಂದಬಲೆಯೊರಲಿದಳು"[೨೦೩]

ಭಾವನಾದ ಕೌರವ ದೇವನು ಭಾಗ್ಯಾಧಿಕನಾಗಿ ಅರಸುಗಳ ಒಡೆತನವನ್ನು ಅನುಭವಿಸುತ್ತಿದ್ದಾನೆ. ನೀವು ಕೃಷ್ಣನ ಪ್ರೀತಿಯಿಂದ ಧರ್ಮವನ್ನು ಪಾಲಿಸಿದಿರಿ. ಈಗ ತಟತಟವಾಗಿ (ನಿಶ್ಚಿಂತರಾಗಿ)

ಲೋಗರ (ಪರರ) ಸೇವೆಯಲ್ಲಿ ಬೆಂದೊಡಲನ್ನು ಹೊರೆಯುತ್ತಿರುವಿರಿ. ನಾನಾದರೋ ಸಾಯುವವಳು. ಇನ್ನು ನಿಮಗೇಕೆ ನಾನು ಅಂಜಲಿ? ಎಂದು ಒರಲುತ್ತಾಳೆ. ಅಂತಿಮವಾಗಿ

"ಭೀಮ ಕೊಟ್ಟೈ ತನಗೆ ಸಾವಿನ
ನೇಮವನು ನಿಮ್ಮಣ್ಣನಾಜ್ಞೆ ವಿ
ರಾಮವಾಗದೆ ಬದುಕಿ ಧರ್ಮದ ಮೈಸಿರಿಯನರಿದು
ಕಾಮಿನಿಯ ಕೇಳಿಯಲಿ ನೆನೆವುದು
ತಾಮಸದಿ ತಾ ಮೀರಿ ನುಡಿದು
ದ್ದಾಮತೆಯ ಸೈರಿಸುವುದೆಂದೆರಗಿದಳು ಚರಣದಲಿ"[೨೦೪]

ಭೀಮ ನನಗೆ ಸಾವಿನಪ್ಪಣೆಯನ್ನು ಕೊಟ್ಟೆಯಾ ನಿಮ್ಮಣ್ಣನಾಜ್ಞೆಗೆ ಯಾವುದೇ ಭಂಗ ಬರದಂತೆ. ಇನ್ನು ಧರ್ಮದ ಮೈಸಿರಿಯನ್ನು ಅರಿತು ಬದುಕನ್ನು ಸಾಗಿಸಿ. ಕಾಮಿನಿಯ ಕೇಳಿಯಲ್ಲಿರುವಾಗ ನನ್ನನ್ನು ನೆನಪಿಸಿಕೋ. ಈಗ ನಾನು ತಾಮಸದಿಂದ ಹದ್ದು ಮೀರಿ ಮಾತನಾಡಿದ ಈ ಉದ್ದಾಮತೆಯನ್ನು ಸಹಿಸಬೇಕು ಅಥವಾ ಮನ್ನಿಸಬೇಕು ಎಂದು ಆತನ ಪಾದಗಳಿಗೆ ಎರಗಿದಳು. ಮೊದಲೇ ಅವಳು ನಿರ್ಧರಿಸಿಕೊಂಡಿದ್ದಂತೆ ಭೀಮ ತನ್ನ ರಕ್ಷಣೆಗೆ ನಿರಾಕರಿಸಿದರೆ ಸಾವು ಎಂಬಂತೆ ದೈಹಿಕವಾಗಿ, ಮಾನಸಿಕವಾಗಿ ಸೋತು ಭೀಮನ ಪಾದಗಳಿಗೆ ಎರಗುತ್ತಾಳೆ. ಇಲ್ಲಿ ಗಮನಿಸಬೇಕಾದದ್ದು ಪರಪುರುಷನಿಂದ ತನ್ನ ರಕ್ಷಣೆಗಾಗಿ ತನ್ನ ಗಂಡನನ್ನೇ ಓಲೈಸುವ ಪರಿ. ಸಮಾಜದಿಂದ ಅವಳು ಅನುಭವಿಸುವ ಅವಮಾನಗಳು ಒಂದೆಡೆಯಾದರೆ ಸ್ವತಃ ತನ್ನ ಪತಿಗಳಿಂದಲೇ ಅನುಭವಿಸುವ ಸಂಕಟಗಳು, ಅವರ ನಿರ್ಲಕ್ಷ್ಯ ಧೋರಣೆ ದ್ರೌಪದಿಯನ್ನು ಕಂಗಾಲಾಗಿಸಿದೆ. ಯಾರ ಸಹಾಯವೂ, ರಕ್ಷಣೆಯೂ ಸಿಗದೆ ಅಸಹಾಯಕಳಾಗಿ ಸಾವನ್ನು ಬಯಸುವ ಹೆಣ್ಣಾಗುತ್ತಾಳೆ. ಈ ಎಲ್ಲ ಮಾತುಗಳನ್ನು ಕೇಳುತ್ತಿದ್ದ ಭೀಮನ ಅಂತಃಕರಣ ಕರಗಿತು. ದ್ರೌಪದಿಯನ್ನು ಸಮಾಧಾನಪಡಿಸಿದನು. ಅತಿಯಾದ ಕೋಪದಿಂದ ಪ್ರತಿಜ್ಞೆಯನ್ನು ಮಾಡಿ ಕೀಚಕನನ್ನು ಸಂಹರಿಸಿ ದ್ರೌಪದಿಯನ್ನು ಸಲಹಿದನು.

ಕೀಚಕನ ಪ್ರಸಂಗದ ದ್ರೌಪದಿಯ ಮಾತಗಳೆಲ್ಲವು ಇಡೀ ಸ್ತ್ರೀ ಸಂಕುಲವನ್ನು ಪ್ರತಿನಿಧಿಸುವ ಮೂಲಕ ಹೊರ ಬಂದ ಮಾತುಗಳಾಗಿವೆ. ಅಲ್ಲದೆ ಇಂದಿನ ವರ್ತಮಾನ ಕಾಲಘಟ್ಟದಲ್ಲಿ ನಡೆಯುತ್ತಿರುವ ಅತ್ಯಾಚಾರ, ಕೊಲೆ, ಮಾನಭಂಗ, ಲೈಂಗಿಕ ದೌರ್ಜನ್ಯಗಳಂತಹ ಸಮಾಜಘಾತುಕ ಚಟುವಟಿಕೆಗಳೂ ಸಹ ದ್ರೌಪದಿಗೆ ಒದಗಿದ್ದ ಈ ಅಪಮಾನಗಳಿಗಿಂತ ಹೊರತಾಗಿಲ್ಲ. ಈ ಹೊತ್ತಿನ ಹೆಣ್ಣು ಸಹ ಇಂತಹ ಮಾನಾಪಮಾನಗಳಿಗೆ ಬಲಿಯಾಗುತ್ತಿರುವುದು ಕಂಡುಬರುತ್ತದೆ. ಈ ದೃಷ್ಟಿಯಿಂದ ದ್ರೌಪದಿಯ ಮಾತುಗಳು ಸಮಾಜದ ಕಣ್ಣು ತೆರೆಸುವ ಪ್ರಜ್ಞಾವಂತಿಕೆಯ ಕೀಲಿಕೈಗಳಾಗಬೇಕು. ಆಗ ಮಾತ್ರವೇ ಸ್ತ್ರೀಯರ ಶೋಷಣೆಗಳನ್ನು ತಡೆಯಲು ಸಾಧ್ಯ.

೩.೩.೨.ಏ. ಅಭಿಮನ್ಯುವಿನ ಮರಣ ವಾರ್ತೆಯನ್ನು ಕೇಳಿದಾಗಿನ ದ್ರೌಪದಿಯ ಸಂಘರ್ಷಗಳು

ಪಾಂಡವ ಕೌರವರಲ್ಲಿ ಸಂಧಿಯು ಮುರಿದು ಬಿದ್ದು, ಯುದ್ಧ ನಿಶ್ಚಯವಾಗುತ್ತದೆ. ಅದರಂತೆ ಎರಡೂ ಬಲದವರು ತಮ್ಮ ಶೌರ್ಯಕ್ಕೆ ತಕ್ಕ ವೀರರನ್ನು ಒಟ್ಟುಗೂಡಿಸಿಕೊಂಡು ಯುದ್ಧಕ್ಕೆ

ತೊಡಗುತ್ತಾರೆ. ಈ ಸಮಯದಲ್ಲಿ ದ್ರೋಣನು ರಚಿಸಿದ ಚಕ್ರವ್ಯೂಹವನ್ನು ಭೇದಿಸಿದ ಅಭಿಮನ್ಯುವು ಸಾವನ್ನಪ್ಪುತ್ತಾನೆ. ಈ ವಿಷಯವನ್ನು ತಿಳಿದ ದ್ರೌಪದಿಯ ವಿವರಗಳನ್ನು ಕುಮಾರವ್ಯಾಸನು ಈ ರೀತಿಯಾಗಿ ಚಿತ್ರಿಸಿದ್ದಾನೆ.

> "ತೆಳುವಸುರ ಬಿರುವೊಯ್ಲ ಮುರುಚಿದ
> ಬಳಲ ಮುಡಿಯರಳುಗಳ ಮುತ್ತಿಗೆ
> ಯಳಿ ರವದ ಭಾರಣೆಯ ಹಾಹಾರವದ ಕಾಯದಲಿ
> ಲಲನೆ ಬರೆ ಚೆಲುವಾಯ್ತು ಧರ್ಮಜ
> ನಳಲು ಮಿಗೆ ಕೊಂಡಿರಲು ನಾಟ್ಯದ
> ಕಳನ ಗೆಲದಿರಳೆನಲು ಬಂದಳು ದ್ರೌಪದಾದೇವಿ"[೨೦೫]

"ತೆಳುವಸಿರನ್ನು ಬಿರುಸಾಗಿ ಹೊಯ್ದುಕೊಳ್ಳುತ್ತ, ಬಳಲು ಮುಡಿಯನ್ನು ಜೋಲಾಡಿಸಿಕೊಂಡು ಹಾಹಾರವದ ಭಾರಣೆಯಿಂದ ದ್ರೌಪದಾದೇವಿ ಬಂದಳು"[೨೦೬] ಎಂಬಲ್ಲಿ ಅಭಿಮನ್ಯುವಿನ ಮರಣ ವಾರ್ತೆಯನ್ನು ಕೇಳಿ ಆಕೆಯ ಉಸಿರಾಟ ಬಿರುಸಾಯಿತು. ಮಗನನ್ನು ಕಳೆದುಕೊಂಡ ತಾಯಿ ಹೃದಯದಲ್ಲಾಗುವ ಭಾವೋದ್ವೇಗವನ್ನು, ಮಡುಗಟ್ಟಿದ ದುಃಖವನ್ನು ವ್ಯಕ್ತಪಡಿಸುತ್ತ ಕೆದರಿಕೊಂಡಿದ್ದ ಮುಡಿಯಲ್ಲಿಯೆ ಹಾಹಾರವದ ಶಬ್ದದಿಂದ ಬರುತ್ತಾಳೆ.

೩.೩.೨.೫. ಯುದ್ಧಭೂಮಿಯ ಸಂದರ್ಭದಲ್ಲಿನ ಸಂಘರ್ಷಗಳು

ಯುದ್ಧವು ಮುಗಿದು ದುರ್ಯೋಧನನು ಊರುಭಂಗ ಹಾಗೂ ಮುಕುಟಭಂಗಗಳಿಗೆ ಒಳಗಾಗಿ ಅಸುನೀಗುತ್ತಾನೆ. ಇವನ ಸ್ಥಿತಿಯನ್ನು ನೋಡಲಾಗದ ಅಶ್ವತ್ಥಾಮನು ಪಾಂಡವರನ್ನು ಸಂಹರಿಸಿ ಬರುವೆನೆಂದು ಪಣತೊಟ್ಟು ಹೋಗಿ ಪಾಂಡವರ ಬದಲಿಗೆ ಅವರ ಮಕ್ಕಳನ್ನು ಕತ್ತರಿಸಿ ಬರುತ್ತಾನೆ. ಇತ್ತ ಭೀಮನು ಪಾಳೆಯದಲ್ಲಿನ ಕುಮಾರರನ್ನು ನೋಡಲು ಆಸೆಯಿಂದ ಬರುತ್ತಿರಲು, ಅತ್ತ ತನ್ನ ಮಕ್ಕಳನ್ನು ಕಳೆದುಕೊಂಡ ದ್ರೌಪದಿಯು ದುಃಖದಿಂದ ಧ್ವನಿ ಮಾಡುತ್ತ ಬರುವ ಸ್ಥಿತಿಯನ್ನು ಕುಮಾರವ್ಯಾಸ ಕವಿಯು ಹೀಗೆ ಚಿತ್ರಿಸಿದ್ದಾನೆ.

> "ಪಾಳೆಯದಲಿ ಕುಮಾರರನು ಪಾಂ
> ಚಾಲರನು ನೋಡುವೆವೆನುತ ಭೂ
> ಪಾಲ ನಡೆತರಲಿದಿರುವಂದುದು ಯುವತಿನಿಕುರುಂಬ
> ಸೂಳುವೊಯ್ಲಿನ ತೆಳುವಸುರ ಕರ
> ತಾಳದಲಿ ಹಾಹಾವಿರಾವದ
> ಮೇಳವದ ಗೀತದಲಿ ಬಂದಳು ದ್ರೌಪದೀದೇವಿ"[೨೦೭]

ಸೈನ್ಯದ ಶಿಬಿರದಲ್ಲಿನ ತನ್ನ ಮಕ್ಕಳನ್ನು ಹಾಗೂ ಪಾಂಚಾಲರನ್ನು ನೋಡುವೆನು ಎನುತ ಭೂಪಾಲನು ಬರುತ್ತಿರಲು ಯುವತಿಯ ಸಮೂಹವು ಎದುರಿಗೆ ಬಂದಿತು. ಆ ಯುವತಿಯರು ಸೂಳುವೊಯ್ಲಿನಲ್ಲಿ

(ಸರದಿಯ ಪ್ರಕಾರ) ತಮ್ಮ ತೆಳುಬಸಿರ ಮೇಲೆ ಹೊಡೆದುಕೊಳ್ಳುವ ಕರತಾಳದಿಂದಲೂ, ಹಾಹಾರವದ ಮೇಳಗೀತದ ಜೊತೆ ದ್ರೌಪದಿಯು ಬಂದಳು. ದ್ರೌಪದಿ ಇಲ್ಲಿ ತನ್ನ ಮಕ್ಕಳ ಸಾವಿನ ಸುದ್ಧಿ ತಿಳಿದು ರೋದಿಸುತ್ತ ಬರುತ್ತಿರುವುದು ತಿಳಿಯುತ್ತದೆ. ಮುಂದುವರೆದು

"ಏನಿದೇನದುಭುತವೆನುತ ದು
ಮ್ಮಾನದಲಿ ಹರಿತಂದು ಹಿಡಿದನು
ಮಾನಿನಿಯ ಕೈಗಳನು ಕಂಬನಿದೊಡೆದು ಸೆರಗಿನಲಿ
ಹಾನಿಯೇನೆನೆ ಮಡಿದರೆನ್ನಯ
ಸೂನುಗಳು ತನ್ನನುಜರೆನೆ ಪವ
ಮಾನಸುತ ಕೇಳಿದನು ಕೋಳಾಹಳವ ಗುರುಸುತನ"[೨೦೮]

ಈ ರೀತಿ ರೋದಿಸುತ್ತ ಬರುತ್ತಿರುವವರನ್ನು ಕಂಡು ಏನಿದು ಏನದ್ಭುತ ಎಂದು ಬೆರಗಿನ ದುಮ್ಮಾನದಲ್ಲಿ ಅವರ ಬಳಿ ಬಂದು ದ್ರೌಪದಿಯ ಕೈಗಳನ್ನು ಹಿಡಿದುಕೊಂಡನು. ಸೆರಗಿನಲ್ಲಿ ಕಂಬನಿದೊಡೆದು ಏನಿದು ಹಾನಿ? ಎಂದು ಕೇಳಲು ದ್ರೌಪದಿಯು ನನ್ನ ಮಕ್ಕಳುಗಳು ಮಡಿದರು; ಸೋದರರು ಸಾವನ್ನಪ್ಪಿದರು ಎಂದು ದುಃಖದಿಂದ ನುಡಿಯಲು ಗುರುಸುತನ ಕೋಲಾಹಲವನ್ನು ಪವಮಾನ ಸುತನು ಕೇಳಿ ತಿಳಿದನು. ಇಲ್ಲಿ ತಾಯಿಯಾದ ದ್ರೌಪದಿ ತನ್ನ ಮಕ್ಕಳನ್ನು ಕಳೆದುಕೊಂಡು ದುಃಖಿಸುತ್ತಿರುವ ಚಿತ್ರಣ ನಮ್ಮ ಗಮನವನ್ನು ಸೆಳೆಯುತ್ತದೆ. ನಂತರ ಭೀಮ, ಫಲುಗುಣರು ಅಶ್ವತ್ಥಾಮನನ್ನು ಕೊಲ್ಲಲು ಮುಂದಾದಾಗ ದ್ರೌಪದಿಯು ಹೇಳುವ ಮಾತುಗಳು ಇಲ್ಲಿ ಬಹು ಮುಖ್ಯವಾಗಿ ಗಮನಿಸುವಂತಹವು.

"ಬಂದಳಾ ದ್ರೌಪದಿಯಹಹ ಗುರು
ನಂದನನ ಕೊಲಬಾರದಕಟೀ
ನಂದನರ ಮರಣದ ಮಹಾವ್ಯಥೆಯಿಾತನಳಿವಿನಲಿ
ಕೊಂದುಕೂಗದೆ ಕೃಪೆಯನಬಲಾ
ವೃಂದ ಸಮಸುಖದುಃಖಿಗಳು ಸಾ
ರೆಂದು ಭೀಮಾರ್ಜುನರ ತೆಗೆದಳು ಬಳಿಕ ಪಾಂಚಾಲಿ"[೨೦೯]

ಕೊಲ್ಲಲೆಂದು ಭೀಮ ಫಲುಗುಣರು ಆಚಾರ್ಯ ನಂದನನನ್ನು ಹಿಡಿದುಕೊಂಡಾಗ ಅಲ್ಲಿಗೆ ಬಂದ ದ್ರೌಪದಿಯು ಗುರು ನಂದನನನ್ನು ಕೊಲ್ಲಬಾರದು. ಅಕಟಾ ಈ ನಂದನರ ಮರಣದ ಮಹಾವ್ಯಥೆಯು ಈತನ ಅಳಿವಿನಲ್ಲಿ ಕೊಂದು ಕೂಗದೇ ಕೃಪೆಯನ್ನು? ಹಾಗಾಗಿ ಅಬಲೆಯರ ವೃಂದವು ಸಮಸುಖದುಃಖಿಗಳು. ಅತ್ತ ಸರಿಯಿರಿ ನೀವು ಎಂದು ನುಡಿಯುತ್ತ ಭೀಮಾರ್ಜುನರನ್ನು ತಡೆಯುತ್ತಾಳೆ. ಇಲ್ಲಿ ದ್ರೌಪದಿ ತನ್ನ ಮಕ್ಕಳ ನೋವಿನಲ್ಲಿಯೂ ತೋರುವ ಪ್ರೌಢ ಮನಸ್ಥಿತಿ ನಮ್ಮ ಗಮನವನ್ನು ಸೆಳೆಯುತ್ತದೆ. ಅಲ್ಲದೆ ದ್ರೌಪದಿ ಹೇಳುವ 'ಅಬಲೆಯರು ಸಮಸುಖದುಃಖಿಗಳು' ಎಂಬ ಮಾತು

ಬಹಳ ಅರ್ಥಪೂರ್ಣವಾದುದು. ಏಕೆಂದರೆ ಪತಿಯನ್ನು ಹಾಗೂ ಪುತ್ರರನ್ನು ಕಳೆದುಕೊಳ್ಳುವ ಹೆಣ್ಣುಗಳು ಯಾರೇ ಆದರೂ ದುಃಖ ಮಾತ್ರ ಎಲ್ಲರಿಗೂ ಒಂದೇ. ಆ ಕಾರಣವಾಗಿ ಅಶ್ವತ್ಥಾಮನನ್ನು ಕೊಂದರೆ ಆತನ ಸತಿಯರ ದುಃಖ ಹಾಗೂ ಆತನ ತಾಯಿಯ ದುಃಖವು ನಮ್ಮ ದುಃಖದಂತೆಯೇ ಮನವನ್ನು ಉರಿಸುತ್ತದೆ ಎಂಬ ತಿಳುವಳಿಕೆ ದ್ರೌಪದಿಯದ್ದಾಗಿದೆ. ಅಲ್ಲದೆ ಇಲ್ಲಿ ಗಮನಿಸುವಂತಹ ಇನ್ನೊಂದು ಸಂಗತಿ ಗಾಂಧಾರಿಯು ದ್ರೌಪದಿಗೆ ಹೇಳುವ "ಕುಮಾರ ವರ್ಗದ ಮರಣ ಸೊಸೆಯತ್ತೆಯರಿಗೊಂದೇ ಪರಿ"[೨೧೦] ಎಂಬ ಮಾತು ಕೂಡ ಇದೇ ರೀತಿಯ ದುಃಖದ ಅನಾವರಣವನ್ನು ಮರು ನೆನಪಿಸುತ್ತದೆ. ಈ ಕಾರಣವಾಗಿ ಆತನನ್ನು ಕೊಲ್ಲದಿರಿ ಎನ್ನುತ್ತಾಳೆ. ಅಲ್ಲದೆ ಈತನನ್ನು ಕೊಂದರೆ ನಮ್ಮ ಮಕ್ಕಳ ಮರಣದ ಮಹಾವ್ಯಥೆಯು ಈತನ ಸಾವಿನ ಮೂಲಕ ಕೃಪೆಯನ್ನು ಕೊಂದು ಕೂಗುವುದು. ಆ ಕಾರಣವಾಗಿ ಈತನನ್ನು ಬಿಟ್ಟು ಬಿಡಿ ಎನ್ನುತ್ತಾಳೆ. ಇಲ್ಲಿ ದ್ರೌಪದಿಗೆ ಮತ್ತೊಂದು ಹೆಣ್ಣಿನ ದುಃಖದ ಅರಿವಿರುವುದು ತಿಳಿಯುತ್ತದೆ.

"ಕುವೆಂಪುರವರ ಮಾತಿನಲ್ಲಿ ಹೇಳುವುದಾದರೆ ದ್ರೌಪದಿಯು ಕೇವಲ ಹೆಣ್ಣಲ್ಲ; "ಹೆಣ್ಣಿನ ರೂಪದ ಬರಸಿಡಲವಳು". ಐದು ಜನ ವೀರಾಧಿವೀರರಿಗೆ ಹೆಂಡತಿಯಾಗಿದ್ದೂ ಕೂಡ ಮೇಲಿಂದ ಮೇಲೆ ಅಪಮಾನ ಕ್ರೌರ್ಯಗಳಿಗೆ ತುತ್ತಾಗಿದ್ದುದರ ಪರಿಣಾಮವಾಗಿ ಆ ಅಗ್ನಿಕನ್ಯೆ ಹೀಗೆ ಮನಸ್ಸು ಕಲ್ಲು ಮಾಡಿಕೊಂಡಿದ್ದು, ಸಿಡಿಲಾಗಿ ಗರ್ಜಿಸಿ "ಬಾಲಕಿಯನೊಪ್ಪಿಸಿಕೊಟ್ಟಿರೇ ಮೃತ್ಯುವಿನ ತಾಳಿಗೆಗೆ । ವಿಕಳಾದಿರಿ ನಿಲ್ಲಿ ನೀವ್....." "ಗಂಡರೋ ನೀವ್ ಭಂಡರೋ ಹೇಳಿ..." ಎಂದೆಲ್ಲಾ ಜಗ್ಗಿಸಿ ಕೇಳಬೇಕಾದ ಪ್ರಸಂಗಗಳೂ ಬಂದಿದ್ದವು. ಅಂತು ಗಂಡಂದಿರನ್ನು ಕಲಿಮಾಡಿ ಯುದ್ಧಕ್ಕೆ ನಿಲ್ಲಿಸಿ – ಆ ಮೂಲಕ ತನ್ನ ಅಂತರಂಗದ ಅಗ್ನಿ ಶಮನಗೊಳ್ಳುತ್ತದೆಂದು ಭಾವಿಸಿದ್ದ ಆಕೆಯ ಬದುಕಿನಲ್ಲಿ ಮುಂದೊಂದು ದಿನ (ವೈರಿಗಳೆಲ್ಲರೂ ಹತರಾಗುತ್ತಿದ್ದ ಆನಂದದ ಸುದ್ದಿ ಕೇಳುತ್ತಿದ್ದ ಹೊತ್ತಿನಲ್ಲಿ) ಅಶ್ವತ್ಥಾಮನಿಂದ ಕೊಲ್ಲಲ್ಪಟ್ಟ ತನ್ನ ಐದು ಜನ ಮಂದಿ ಎಳೆಯ ಕಂದಮ್ಮಗಳ ಹೆಣಗಳನ್ನು (ಉಪ ಪಾಂಡವರ ಮುಂಡಗಳನ್ನು) ತಾನೇ ಕಣ್ಣಾರೆ ಕಾಣಬೇಕಾದ ಅತ್ಯುಗ್ರ ಕ್ಷಣವೂ ಸಂಭವಿಸಿತು. ಆ ವಿಷಮ ಸ್ಥಿತಿಯು ಅವಳನ್ನು ಎಷ್ಟು ಜರ್ಜರಿತಳನ್ನಾಗಿಸಿತ್ತೆಂದರೆ – ಆ ತನಕ ಸಾಧ್ಯವಾಗದಿದ್ದ ಹೊಸ ದೃಷ್ಟಿಕೋನದಿಂದ ಬದುಕನ್ನು ನೋಡಬೇಕೆನ್ನುವ ಅಚಲ ತೀರ್ಮಾನವನ್ನು ತೆಗೆದುಕೊಂಡಿದ್ದಳು; ಈ ಕೊಲ್ಲುವ, ಕೊಲ್ಲಲು ಅಣಿಗೊಳಿಸುವ ಹಾಗೂ ಕ್ರೋಧದ ಆಸುಪಾಸಿನ ಎಲ್ಲ ಕ್ರಿಯೆಗಳೂ ಸಂಪೂರ್ಣ ನಾಶಕಾರಕವಾದುವುಗಳು; ಮರೆಯುವ, ಕ್ಷಮಿಸುವ, ಪ್ರೀತಿಸುವ ನಡವಳಿಕೆಗಳಷ್ಟೇ ನಮ್ಮನ್ನು ಇನ್ನಾದರೂ ಮನುಷ್ಯರನ್ನಾಗಿಸಲು ಸಾಧ್ಯ. ಆದ್ದರಿಂದ ಅಳಿದುಳಿದ ಯಾವ ನಗೆ ನೆಮ್ಮದಿಗಳ ಸಣ್ಣ ಕಣವನ್ನಾದರೂ ಅಲುಗಾಡಿಸುವ – ಮತ್ತೆ ನಾಶದ ಕಡಲನ್ನೇ ತುಂಬುವ ಕೆಲಸಕ್ಕೆ ಕೈಯಿಕ್ಕಬಾರದು; ಜೊತೆಗೆ ಇಂತೆಲ್ಲ ಸಂದರ್ಭಗಳಲ್ಲೂ ನಿಸ್ಸಹಾಯಕ ಹೆಣ್ಣುಗಳಿಗೆ ಒದಗುವ ನರಕ ಯಾತನೆಯೇ ಹೆಚ್ಚೆಂದು ಆಲೋಚಿಸಿ, ಭೀಮಾರ್ಜುನರು ಅಶ್ವತ್ಥಾಮನನ್ನು ಕೊಲ್ಲಲು ಹಿಡಿದ ಸಂದರ್ಭದಲ್ಲಿ ತಾನೇ ಮುಂದಾಗಿ ತಡೆಯುತ್ತಾಳೆ"[೨೧೧] ಎಂಬ ಮಾತುಗಳು ಹತ್ತಿರದಿಂದ ದ್ರೌಪದಿಯ

ಮನವನ್ನು ಹೊಕ್ಕಿ ನೋಡಿರುವಂತೆ ಭಾಸವಾಗುತ್ತವೆ. ಏಕೆಂದರೆ ಒಂದು ಹೆಣ್ಣಿನ ಮನಸ್ಸಿನ ದುಃಖ, ಆತಂಕ, ತೊಳಲಾಟಗಳು ಮತ್ತೊಂದು ಹೆಣ್ಣಿಗೆ ತಿಳಿದಿರುತ್ತವೆ ಎಂಬ ಅಂಶಗಳಿಗೆ ಈ ಸಂದರ್ಭವು ಪುಷ್ಟಿ ನೀಡುತ್ತದೆ. ಅಲ್ಲದೆ ಇಲ್ಲಿನ ದ್ರೌಪದಿಯ ಮಾತುಗಳಲ್ಲಿ ಆಲೋಚನಾ ಪ್ರಧಾನವಾದ ಪ್ರಬುದ್ಧತೆ ತುಂಬಿರುವುದು ಕಂಡುಬರುತ್ತದೆ.

ದ್ರೌಪದಿ ನಮ್ಮನ್ನು ಮತ್ತೆ ಮತ್ತೆ ಕಾಡುತ್ತಾಳೆ. ಅದು ಅವಳು ಅನುಭವಿಸಿದ ನೋವು, ಅಪಮಾನ, ಆಕೆಯ ಮನದಲ್ಲಿ ಮೂಡಿದ ಛಲ, ಕೋಪ, ಮಾಡಿದ ಪ್ರತಿಜ್ಞೆ, ಅದನ್ನು ಈಡೇರಿಸಿಕೊಂಡ ರೀತಿ ಇವೆಲ್ಲವುಗಳ ಜೊತೆಗೆಯೇ ಆಕೆಯನ್ನು ಮಹೋನ್ನತಿಗೇರಿಸಿದ ಸಂದರ್ಭವೆಂದರೆ ತಾನು ತನ್ನ ಮಕ್ಕಳು ಹಾಗೂ ಸಹೋದರರನ್ನು ಕಳೆದುಕೊಂಡು ದುಃಖಿಸುವ ಸಂದರ್ಭದಲ್ಲಿಯೂ ಆಕೆ ತೋರ್ಪಡಿಸುವ ಅದ್ಭುತವಾದ ಪ್ರೌಢ ಹಾಗೂ ಪ್ರಬುದ್ಧ ಮನಸ್ಥಿತಿ. ತನ್ನ ತಾಯ್ತನದ ದುಃಖ, ಕ್ರೋಧ, ಸಂಕಟಗಳನ್ನು ನಿವಾರಿಸಿಕೊಳ್ಳುವ ಸಲುವಾಗಿ ಇನ್ನೊಬ್ಬಳು ತಾಯಿಗೆ ದುಃಖವನ್ನು ಉಂಟು ಮಾಡಲು ನಿರಾಕರಿಸುತ್ತಾಳೆ. ಇದು ಅಶ್ವತ್ಥಾಮನನ್ನು ಭೀಮ ಹಾಗೂ ಅರ್ಜುನರು ಕೊಲ್ಲಲು ಹೋದಾಗ ದ್ರೌಪದಿಯು ಆತನನ್ನು ಕೊಲ್ಲದಿರಿ ಎಂದು ತಡೆಯುವ ಸಂದರ್ಭದಲ್ಲಿ ನಮಗೆ ಸಂಪೂರ್ಣವಾಗಿ ಆಕೆಯ ಮನಸ್ಸಿನ ದರ್ಶನವಾಗುತ್ತದೆ.

ಎಲ್ಲಕ್ಕಿಂತ ಮುಖ್ಯವಾಗಿ ಅಭಿಮಾನಶಾಲಿನಿಯಾದ ದ್ರೌಪದಿಯು ತನ್ನ ಆತ್ಮಗೌರವಕ್ಕೆ ಕುಂದುಂಟಾಗುವ ಸನ್ನಿವೇಶ ಮತ್ತು ಸಂದರ್ಭಗಳಲ್ಲೆಲ್ಲಾ ಸಹನೆಯನ್ನು ತ್ಯಜಿಸಿ ಸಿಡಿಲಿನ ರೀತಿಯ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದ್ದಾಳೆ. ಅವಳದು ಕೇವಲ ದುಃಖ, ದುಮ್ಮಾನ, ಅಪಮಾನಗಳನ್ನು ಅನುಭವಿಸುವ ಮನಸ್ಸಲ್ಲ. ಹಾಗೆಯೆ ಅನುಭವಿಸಿದ ನೋವುಗಳಿಗೆ ಪ್ರತೀಕಾರವನ್ನು ಬಯಸುವ ಮನಸ್ಸು ಕೂಡ ಅಲ್ಲ. ಆ ನೋವುಗಳ ಜೊತೆಗೆಯೆ ಮತ್ತೊಂದು ಹೆಣ್ಣಿನ ನೋವಿನ ನಾಡಿಮಿಡಿತವನ್ನು ಅರಿಯಬಲ್ಲ ಗುಣವಿದೆ. ಈ ಹೆಂಗರುಳ ಸೆಳೆತ ದ್ರೌಪದಿಯ ವ್ಯಕ್ತಿತ್ವಕ್ಕೆ ಮಹೋನ್ನತ ಸ್ಥಾನವನ್ನು ತಂದಿದೆ. ಇಂತಹ ಕಾರಣಗಳಿಂದಾಗಿಯೇ ದ್ರೌಪದಿ ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿ ಮುಖ್ಯಳಾಗುತ್ತಾಳೆ. ಜೊತೆಗೆ ಓದುಗರ ಗಮನದ ಕೇಂದ್ರ ಬಿಂದುವಾಗಿದ್ದಾಳೆ. ಇಂತಹ ಅಂಶಗಳಿಂದ ದ್ರೌಪದಿ ಇಲ್ಲದ ಭಾರತವನ್ನು ನೆನಪು ಮಾಡಿಕೊಳ್ಳಲೂ ಸಹ ಸಾಧ್ಯವಾಗದಂತೆ ತನ್ನಂತರಂಗದ ಕೋಲಾಹಲಗಳಿಂದ ಆಕೆ ಬಂಧಿಸಿದ್ದಾಳೆ.

ಹೀಗೆ ದ್ರೌಪದಿಯ ಸಂಘರ್ಷಗಳನ್ನು ಚರ್ಚೆಗೆ ಒಳಪಡಿಸಿದಾಗ ವಸ್ತ್ರಾಪಹರಣದ ಸಂದರ್ಭ ಮತ್ತು ಸೈರಂಧ್ರೀ ವೇಷದಲ್ಲಿನ ಸಂಘರ್ಷಗಳು ತಾತ್ವಿಕ ನೆಲೆಗಟ್ಟಿನ ಸಂಘರ್ಷಗಳಾಗಿವೆ. ವಸ್ತ್ರಾಪಹರಣ ಸಂದರ್ಭದ ದ್ರೌಪದಿಯ ಮಾತುಗಳು ಕೇವಲ ಅವಳ ಅಸಹಾಯಕ ಸ್ಥಿತಿಯನ್ನಷ್ಟೇ ಅಭಿವ್ಯಕ್ತಿಸದೆ ಪುರುಷಾಧಿಪತ್ಯದಲ್ಲಿ ಸ್ತ್ರೀ ಅನುಭವಿಸುವ ಅವಮಾನ, ಸಂಕಷ್ಟಗಳ ಅಭಿವ್ಯಕ್ತಿಯಾಗಿದೆ. ಪುರುಷಾಧಿಪತ್ಯವು ತನ್ನ ಹಿರಿಮೆಯನ್ನು ಸ್ತ್ರೀ ಶೋಷಣೆಯಲ್ಲಿ ಕಂಡುಕೊಳ್ಳುತ್ತಿರುವುದು ವಿಪರ್ಯಾಸವೇ ಸರಿ. ಶತ್ರುಗಳೆದುರಿನ ಸೋಲಿಗಿಂತ ಹೆಣ್ಣಿನೆದುರಿನ ಸೋಲು ಮತ್ತು ಅಪಮಾನಗಳನ್ನು ಪುರುಷಾಧಿಪತ್ಯ

ಸೇಡಾಗಿಸಿಕೊಳ್ಳುತ್ತದೆ. ಈ ಸೇಡಿನ ಫಲವೇ ದ್ರೌಪದಿಯ ವಸ್ತ್ರಾಪಹರಣ. ಒಂದು ಕಡೆ ಸೇಡಾಗಿ ಕಾಡುವ, ಮತ್ತೊಂದು ಕಡೆ ಅಸಹಾಯಕ ಸ್ಥಿತಿಯಲ್ಲಿ ನಿರಾಕರಿಸಲ್ಪಟ್ಟ ಈ ಎರಡು ಭಿನ್ನ ಪುರುಷ ಕೇಂದ್ರಗಳ ನಡುವೆ ಪ್ರತಿಭಟಿಸುವ ದ್ರೌಪದಿಯ ಸಂಘರ್ಷಗಳು ಇಡೀ ಮನುಕುಲ ಗಮನಿಸುವಂತಹವಾಗಿವೆ. ಇದೊಂದು ತಾತ್ವಿಕ ಸಂಘರ್ಷವಾಗಿದ್ದು, ಮುಂದುವರೆದು ಅಜ್ಞಾತವಾಸದ ಸಂದರ್ಭದಲ್ಲಿ ಸೈರಂಧ್ರಿಯಾದ ದ್ರೌಪದಿಯ ಕೀಚಕನೆದುರಿಗಿನ ಪ್ರತಿಭಟನೆಯನ್ನು ಇದೇ ನೆಲೆಯಲ್ಲಿ ಗುರ್ತಿಸಬಹುದು.

೩.೪. ಅಸಹಾಯಕ ಸಂಘರ್ಷದ ನೆಲೆಗಳು.

ಹೆಣ್ಣನ್ನು ಮೊದಲಿನಿಂದಲೂ ಅಶಕ್ತಳು, ಅಸಹಾಕಳು ಎಂದು ನಮ್ಮ ಸಮಾಜ ನಿರ್ಲಕ್ಷಿಸುತ್ತಲೇ ಬಂದಿದೆ. ಆದರೆ ಆಧುನಿಕ ಮಹಿಳಾ ಮನೋವೈಜ್ಞಾನಿಕ ಅಧ್ಯಯನಗಳ ಆಧಾರದ ಹಿನ್ನೆಲೆಯಲ್ಲಿ ಹೇಳುವುದಾದರೆ ಮಹಿಳೆ ಪುರುಷನಿಗಿಂತ ಹೆಚ್ಚಿನ ಮಾನಸಿಕ ಸಾಮರ್ಥ್ಯ ಹೊಂದಿದವಳಾಗಿದ್ದಾಳೆ. ಆದರೆ ಈ ಆಲೋಚನೆಯನ್ನು ಸಂಪ್ರದಾಯಸ್ಥ ಪುರುಷ ಪ್ರಧಾನ ಚಿಂತನೆಗಳು ಸಮ್ಮತಿಸುತ್ತಿರುವುದು ಅತಿ ವಿರಳ. ಈ ಪುರುಷ ಪ್ರಧಾನ ಧಾರೆಯಲ್ಲಿ ಬೆಳೆದುಬಂದ ಮಹಿಳೆಯರೂ ಕೂಡ ತಾವು ಅಸಹಾಯಕರು ಎಂದೇ ಭಾವಿಸಿದ್ದರು. ಇದಕ್ಕೆ ಮುಖ್ಯ ಕಾರಣ ಅವರಿಗೆ ಸರಿಯಾದ ಪ್ರೋತ್ಸಾಹ ಇಲ್ಲದಿರುವುದೇ ಆಗಿತ್ತು. ಪ್ರಾಚೀನ ಭಾರತದ ರಾಮಾಯಣ ಮತ್ತು ಮಹಾಭಾರತದ ಕಾಲದಲ್ಲಂತೂ ಹೆಣ್ಣು ಧರ್ಮ ಮತ್ತು ಪ್ರಭುತ್ವದ ನೆಲೆಗಳೆರಡರಿಂದಲೂ ತಿರಸ್ಕರಿಸಲ್ಪಟ್ಟು ಅಸಹಾಯಕ ಬದುಕನ್ನು ಸಾಗಿಸಿರುವಳು. ಪುರುಷನಿಗಾಗಿ ಅವನ ಆಣತಿಯಂತೆ ಹೆಣ್ಣು ಹೆಣ್ಣನ್ನೇ ಶೋಷಿಸುವ, ಅವಮಾನಿಸುವ ಮತ್ತು ರಕ್ಷಿಸಲಾರದ ಸ್ಥಿತಿಯನ್ನು ಕಾಣಬಹುದು. ಇಂತಹ ಅಸಹಾಯಕ ಸ್ಥಿತಿಯನ್ನು ಅವರು ಒಮ್ಮತದಿಂದ ಒಪ್ಪಿದರೆಂದೇನೂ ಅಲ್ಲ. ಅವರ ಮನಸ್ಸಿನ ತಳಮಳ, ಕೋಪ, ಅತೃಪ್ತಿ ಮುಂತಾದ ಅಸಹಾಯಕ ಸಂಘರ್ಷಗಳನ್ನು ಗಾಂಧಾರಿ, ಸುದೇಷ್ಣೆ, ಭಾನುಮತಿ ಮುಂತಾದ ಪಾತ್ರಗಳಲ್ಲಿ ಗುರುತಿಸಬಹುದು.

೩.೪.೧ ಗಾಂಧಾರಿ

ಈಕೆಯು ಗಾಂಧಾರ ರಾಜನಾದ ಸೌಬಲನ ಮಗಳು. ಶಕುನಿಯ ಒಡಹುಟ್ಟಿದವಳು. ಧೃತರಾಷ್ಟ್ರನನ್ನು ವಿವಾಹವಾಗಿ ದುರ್ಯೋಧನ ಮೊದಲಾದ ನೂರು ಜನ ಮಕ್ಕಳಿಗೆ ಜನ್ಮ ನೀಡುತ್ತಾಳೆ. 'ವಿಕ್ರಮಾರ್ಜುನ ವಿಜಯ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳಲ್ಲಿನ ಹೆಣ್ಣುಗಳಿಗಿಂತ ಭಿನ್ನವಾದ ಸಂಘರ್ಷಗಳನ್ನು ಎದುರಿಸುತ್ತಾಳೆ. ಕುರುಡನಾಗಿರುವ ಧೃತರಾಷ್ಟ್ರನನ್ನು ಕೈಹಿಡಿದು ಬದುಕನ್ನು ಸಾಗಿಸುತ್ತಿರುವುದು ಒಂದು ಕಡೆಯಾದರೆ, ತಾನು ಜನ್ಮ ನೀಡಿದ ಮಕ್ಕಳು ತನ್ನ ಮಾತನ್ನು ಕೇಳದೆ ದುಷ್ಟತನದಿಂದ ವರ್ತಿಸುವ ನೋವು ಮತ್ತೊಂದು ಬಗೆಯದಾಗಿರುತ್ತದೆ. ಇದರ ನಡುವೆಯೇ ಬದುಕನ್ನು ಸಾಗಿಸಬೇಕಾದ ಅನಿವಾರ್ಯತೆ ಈಕೆಯದು. ತಾನು ಹೆತ್ತ ಮಕ್ಕಳ ದುಷ್ಟ ಕಾರ್ಯಗಳನ್ನು ನಿಯಂತ್ರಿಸಿ ಅವರನ್ನು ಸರಿ ದಾರಿಗೆ ತರುವ ಶಕ್ತಿ ಇಲ್ಲದ ಅಸಹಾಯಕ

ಹೆಣ್ಣಾಗಿ ಕಂಡುಬರುತ್ತಾಳೆ. ಇದರ ನಡುವೆಯೇ ಈಕೆಯಲ್ಲಿಯೂ ಸಹನೆ, ಪ್ರೀತಿ, ಹಠ, ಮತ್ಸರಗಳಂತಹ ಸಂಘರ್ಷದ ಭಾವಗಳನ್ನು ಕಾಣಬಹುದಾಗಿದೆ. 'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ಈಕೆಯ ಸಂಘರ್ಷದ ಭಾವಗಳು ಪ್ರಾರಂಭವಾಗುವುದೇ ಕುಂತಿಯು ತನಗಿಂತಲೂ ಮೊದಲೇ ಮಕ್ಕಳನ್ನು ಪಡೆದಳಲ್ಲ ಎಂಬ ಮತ್ಸರದ ಮನಸ್ಥಿತಿಯಿಂದ. ಆ ಸಂದರ್ಭವನ್ನು ಪಂಪ ಈ ರೀತಿಯಾಗಿ ಚಿತ್ರಿಸಿದ್ದಾನೆ.

> "ವ॥ ಅಂತು ಭರತಕುಲತಿಲಕರಪ್ಪಿರ್ವರ್ಮಕ್ಕಳಂ ಪೆತ್ತು ಕೊಂತಿ ಸಂತಸದಂತಮ
> ನೆಯ್ದಿರ್ಪುದುಮತ್ತ ಧೃತರಾಷ್ಟ್ರನ ಮಹಾದೇವಿಯಪ್ಪ ಗಾಂಧಾರಿ ಕೇಳ್ದು ತನ್ನ ಗರ್ಭಂ
> ತಡೆದುದರ್ಕೆ ಕಿನಿಸಿ ಕಿಂಕಿರಿವೋಗಿ"[೨೧೨]

ಕುಂತಿಯು ಭರತ ಕುಲಕ್ಕೆ ತಿಲಕಪ್ರಾಯರಾದಂತಿರುವ ಧರ್ಮರಾಯ ಹಾಗೂ ಭೀಮರಿಗೆ ಜನ್ಮ ನೀಡಿ ಆ ಸಂತೋಷದ ಸವಿಯನ್ನು ಸವಿಯುತ್ತಿದ್ದಳು. ಆದರೆ ಇತ್ತ ಧೃತರಾಷ್ಟ್ರನ ಮಹಾರಾಣಿಯಾದ ಗಾಂಧಾರಿಯು, ಕುಂತಿಯು ಮಕ್ಕಳಿಗೆ ಜನ್ಮ ನೀಡಿದ ವಿಷಯವನ್ನು ಕೇಳಿ ತನ್ನ ಗರ್ಭವು ತಡವಾದುದಕ್ಕೆ ಕೋಪಿಸಿ ಕಿರಿಕಿರಿಯಾದಳು. ತಾಯ್ತನದ ಬಯಕೆಯ ಮೂಲಕೇ ಗಾಂಧಾರಿಯಲ್ಲಿ ಮತ್ಸರ, ಅಸೂಯೆಗಳಂತಹ ಭಾವಗಳು ಪ್ರಾರಂಭವಾಗುತ್ತವೆ. ಇಲ್ಲಿ ಸಹಜ ಅಭಿಲಾಷೆಯಾಗಿದ್ದ ತಾಯ್ತನವೆಂಬ ಭಾವ ಮತ್ಸರದ ಕಿಚ್ಚಿಗೆ ಕಾರಣವಾಗಿದೆ. ಈ ಮತ್ಸರದ ಕಿಚ್ಚೆ ಮುಂದಿನ ಎಲ್ಲ ಅನರ್ಥಗಳಿಗೂ ಅಡಿಪಾಯವನ್ನು ಹಾಕುತ್ತದೆಂಬುದು ಗಮನಿಸಬೇಕಾದ ಸಂಗತಿ. ಪಂಪ ಕವಿಯು ಕುಂತಿಯ ವಿಚಾರವನ್ನು ತಿಳಿದ ಗಾಂಧಾರಿಯ ಮನದಲ್ಲಿನ ದ್ವೇಷ ಹಾಗೂ ಅಸಹನೆಯಿಂದ ಉಂಟಾದ ಭಾವಗಳನ್ನು ಹೀಗೆ ತಿಳಿಸುತ್ತಾನೆ.

> "ಸಂತತಿಗೆ ಪಿರಿಯ ಮಕ್ಕಳ
> ನಾಂ ತಡೆಯದೆ ಪಡೆವೆನೆಂದೊಡೆನ್ನಿಂ ಮುನ್ನಂ ।
> ಕೊಂತಿಯೆ ಪಡೆದಳ್ ಗರ್ಭದ
> ಚಿಂತೆಯದಿನ್ನೇವುದೆಂದು ಬಸಿಱಂ ಪೊಸೆದಳ್"[೨೧೩]

ಪಂಪನು ಚಿತ್ರಿಸುವ ಈ ಸಂದರ್ಭ ಬಹು ಮುಖ್ಯವಾದುದು. ಗಾಂಧಾರಿಯ ಮನದಲ್ಲಿ ಉದ್ಭವವಾಗಿರುವ ಅಸೂಯೆ, ಮತ್ಸರ ಹಾಗೂ ದ್ವೇಷದ ಭಾವಗಳು ಮುಂದೆ ಆಕೆಯ ಉದರದಿಂದ ಹೊರಬಂದ ಮಕ್ಕಳಲ್ಲಿ ಪ್ರತಿಫಲಿತವಾಗಿ ಕುರುವಂಶದ ವಿನಾಶಕ್ಕೆ ನಾಂದಿಯನ್ನು ಹಾಡುತ್ತದೆ. ಆ ಸಂದರ್ಭದಲ್ಲಿ ವಂಶಕ್ಕೆ ಹಿರಿಯರೆನಿಸಿಕೊಳ್ಳುವಂತಹ ಮಕ್ಕಳನ್ನು ನಾನು ಮೊದಲು ಪಡೆಯುತ್ತೇನೆ ಎಂದುಕೊಂಡಿದ್ದರೆ, ನನಗಿಂತ ಮುಂಚೆಯೇ ಕುಂತಿಯು ಮಕ್ಕಳನ್ನು ಪಡೆದಳು. ಎಂದು ರೋಷದಿಂದ ಇನ್ನು ಮೇಲೆ ಈ ಗರ್ಭದ ಚಿಂತೆ ಏತಕ್ಕೆ ಎಂದು ತನ್ನ ಬಸಿರನ್ನು ಕಿವುಚಿಕೊಳ್ಳುತ್ತಾಳೆ. ಅಂದರೆ ತಾನು ತಾಯಿಯಾಗಬೇಕೆಂಬ ಬಯಕೆಗಿಂತ, ತನಗೇ ಮೊದಲು ಮಕ್ಕಳು ಜನಿಸಲಿಲ್ಲ ಎಂಬ ಭಾವನೆ ಗಾಂಧಾರಿಯಲ್ಲಿ ಮೂಡಿದೆ. ಕುಂತಿ ಮತ್ತು ಗಾಂಧಾರಿಯರು ಮಕ್ಕಳನ್ನು ಪಡೆಯುವ ರೀತಿ

ಗಮನಿಸಿದರೆ ರಾಜಕುವರಿಯರಿಗೆ ರಾಜ್ಯಾಡಳಿತಕ್ಕಾಗಿ ಮಾತ್ರ ಮಕ್ಕಳು ಬೇಕಿತ್ತೆಂಬಂತೆ ಕಾಣುತ್ತದೆ. ಕುಂತಿಯದು ಗರ್ಭಾವಸ್ಥೆಗೂ ಮುಂಚಿನ ಮತ್ಸರವಾದ್ದರಿಂದ ಪಾಂಡವರಿಗೆ ಆ ಛಾಯೆ ತಾಗಲಿಲ್ಲವೆಂದು ಕಾಣುತ್ತದೆ. ಗಾಂಧಾರಿಯದು ಗರ್ಭವನ್ನು ಹೊಸೆದುಕೊಳ್ಳುವಷ್ಟು ತೀವ್ರವಾದ ದುರ್ಗತಿಯ ಮತ್ಸರದ ಛಾಯೆ. ಹಾಗಾಗಿಯೇ ತಾಯಿಯ ವಿವೇಚನಾರಹಿತ ನಡೆ ಕೌರವರಲ್ಲಿಯೂ ಮೈಗೂಡಿತೆನ್ನಬಹುದು. ಈ ಸನ್ನಿವೇಶದಲ್ಲಿ ಗಾಂಧಾರಿಯ ಮನಸ್ಥಿತಿ ನಮಗೆ ಸಂಪೂರ್ಣವಾಗಿ ಅರಿವಾಗುತ್ತದೆ. ತಾಳ್ಮೆ ಹಾಗೂ ಸಂಯಮಶೀಲ ಗುಣಗಳನ್ನು ಮೀರಿದ ಸ್ಥಿತಿಯ ವರ್ತನೆಗಳು ಇಲ್ಲಿ ಗಾಂಧಾರಿಯಲ್ಲಿ ಕಂಡುಬರುತ್ತವೆ. ಬಹುಶಃ ದುರ್ಯೋಧನ ಹಾಗೂ ದುಶ್ಶಾಸನಾದಿಗಳು ತೋರ್ಪಡಿಸುವ ಕ್ರೂರತ್ವದಂತಹ ಗುಣಗಳು ಈಕೆಯಿಂದಲೇ ಬಂದಿರಬಹುದೆಂಬುದನ್ನು ಈ ಸಂದರ್ಭ ನಮಗೆ ಮನಗಾಣಿಸುತ್ತದೆ.

ಈ ರೀತಿಯಾಗಿ ಗರ್ಭವನ್ನು ಕಿವುಚಿಕೊಳ್ಳಲು ಕ್ಷೀರ ಸಮುದ್ರವನ್ನು ಕಡೆದಾಗ ಕಾಳಕೂಟವೆಂಬ ವಿಷದ ಮೊಳಕೆ ಹುಟ್ಟಿ ಬಂದ ಹಾಗೆ ಗಾಂಧಾರಿಯ ಬಸಿರಿನಿಂದ ರಕ್ತಸಿಕ್ತವಾದ ನೂರೊಂದು ಭ್ರೂಣಗಳು ಜನಿಸಿದವು. ಅವುಗಳನ್ನು ಕಂಡ ಆಕೆಯ ವರ್ತನೆ ಹೀಗಿದೆ.

> "ವ॥ ಅವಂ ಕಂಡು ಕಿನಿಸಿ ಕಿರ್ಚೆಟ್ಟಿವೆಲ್ಲಮಂ ಪೊಱಗೆ ಬಿಸುಟು ಬನ್ನಿಮೆಂಬುದುಂ
> ವ್ಯಾಸಭಟ್ಟಾರಕಂ ಬಂದು ಗಾಂಧಾರಿಯಂ ಬಗ್ಗಿಸಿ"[೨೧೪]

ಆ ಭ್ರೂಣಗಳನ್ನು ನೋಡಿ ಅತಿಯಾದ ಕೋಪದಿಂದ ಇವುಗಳೆಲ್ಲವನ್ನೂ ಹೊರಗೆ ಬಿಸಾಡಿ ಬನ್ನಿ ಎಂದು ಆಜ್ಞೆ ಮಾಡುತ್ತಾಳೆ. ಇಲ್ಲಿನ ಗಾಂಧಾರಿಯ ಮನಸ್ಥಿತಿ ವಿವೇಕ ಹೀನವಾದ ಹಾಗೂ ವಿಚಾರವಂತಿಕೆಯಿಂದ ದೂರವಾದ ಚಿಂತನೆಯ ಗುಣಗಳನ್ನು ಅಭಿವ್ಯಕ್ತಿಪಡಿಸುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಗಾಂಧಾರಿಯಲ್ಲಿ ತಾನೇ ಮೊದಲು ಮಕ್ಕಳನ್ನು ಪಡೆದವಳು ಎಂಬ ಗೌರವತ್ವದ ಅಥವಾ ಶ್ರೇಷ್ಠತ್ವದ ಹೆಗ್ಗಳಿಕೆಯನ್ನು ಪಡೆಯಬೇಕೆಂಬ ಮನಸ್ಥಿತಿ ಇರುವುದು ತಿಳಿಯುತ್ತದೆ. ಈಕೆಗೆ ತನ್ನ ಗರ್ಭದಿಂದ ಹೊರಬಂದ ಭ್ರೂಣಗಳ ರಕ್ಷಣೆಗಿಂತ ತನ್ನ ಆಸೆ ಫಲಿಸದಿದ್ದಕ್ಕಿನ ನಿರಾಸೆಯ ಸಂಗತಿ ಮುಖ್ಯವಾಗಿರುವುದು ಕಂಡುಬರುತ್ತದೆ. ನಂತರ ಅಲ್ಲಿಗೆ ಬಂದ ವ್ಯಾಸಭಟ್ಟಾರಕ ಆಕೆಯನ್ನು ಗದರಿಸಿ ಅವುಗಳನ್ನು ತುಪ್ಪದಿಂದ ತುಂಬಿದ ಕೊಡಗಳಲ್ಲಿ ಸಂರಕ್ಷಿಸಿಡುತ್ತಾನೆ.

ಇಲ್ಲಿ ಗಾಂಧಾರಿಯ ಮನದಲ್ಲಿ ಹಠಮಾರಿತನ ಅಥವಾ ದೃಢತೆಯ ಭಾವಗಳು ಪ್ರಕಟವಾಗುವುದನ್ನು ಗಮನಿಸಬಹುದು. ಹೀಗೆ ರಕ್ಷಿಸಲ್ಪಟ್ಟ ಕೊಡಗಳಲ್ಲಿಯೆ ಆ ಭ್ರೂಣಗಳು ಬೆಳೆದು ಅದರಿಂದ ಮಕ್ಕಳು ಹೊರಬರುತ್ತವೆ. ದುರ್ಯೋಧನನು ಕೊಡಗಳನ್ನು ಒಡೆದುಕೊಂಡು ಹುಟ್ಟಿ ಬರುವ ಸಮಯದಲ್ಲಿ ಅರಮನೆಯಲ್ಲಿ ಹಲವು ಉತ್ಪಾತಗಳು, ಅಮಂಗಳಗಳು ಕಾಣಿಸಿಕೊಂಡವು. ಇದನ್ನು ಗಮನಿಸಿದ ವಿದುರನು, ಈತನು ನಮ್ಮ ವಂಶವನ್ನು ಹಾಳು ಮಾಡುತ್ತಾನೆ. ಆದ್ದರಿಂದ ಈ ಮಗುವನ್ನು ಹೊರಗೆ ಎಸೆಯುವುದು ಒಳಿತು ಎಂದು ತಿಳಿಸುತ್ತಾನೆ. ಇದನ್ನು ಒಪ್ಪದ ಗಾಂಧಾರಿ ಹಾಗೂ ಧೃತರಾಷ್ಟ್ರರು ಏನು ಮಾಡಿದರೂ ಆ ಮಗುವನ್ನು ಎಸೆಯಲು ಒಪ್ಪದೆ ಧೃಡವಾದ ಮನಸ್ಸಿನಿಂದ ಅದಕ್ಕೆ ದುರ್ಯೋಧನ ಎಂಬ ಹೆಸರನ್ನು ಇಟ್ಟು ಬೆಳೆಸತೊಡಗುತ್ತಾರೆ. ಈ

ಸನ್ನಿವೇಶಗಳಲ್ಲೆಲ್ಲಾ ಗಾಂಧಾರಿಯ ಮನಸ್ಥಿತಿಗಳು ಹಾಗೂ ಅವಳು ಎದುರಿಸುವ ಸಂಘರ್ಷಗಳು ನಮ್ಮ ಗಮನಕ್ಕೆ ಬರುತ್ತವೆ. ದುರ್ಯೋಧನನಿಂದ ಕುಲಕ್ಕೇ ಆಪತ್ತು ಒದಗಿ ಬರುತ್ತದೆಂದು ತಿಳಿಸಿದಾಗಲೂ ಕೂಡ ಆ ಮಗುವನ್ನು ಎಸೆಯಲು ಮನಸ್ಸು ಬರುವುದಿಲ್ಲ. ಕಾರಣ ತಾಯ್ತನ ಎಂಬುದು ಅದಕ್ಕೆ ಅವಕಾಶ ನೀಡುವುದಿಲ್ಲ. ಅಲ್ಲದೆ ಯಾವುದೇ ಹೆಣ್ಣಾದರೂ ಸಹ ತಾನು ಜನ್ಮ ನೀಡಿದ ಮಗುವನ್ನು ಅದು ಒಳ್ಳೆಯದಿರಲಿ ಅಥವಾ ದುಷ್ಟನಾಗಿರಲಿ ಅದನ್ನು ದೂರ ಸರಿಸಲು ಬಯಸುವುದಿಲ್ಲ. ಇಂತಹ ಸಂದಿಗ್ಧ ಸ್ಥಿತಿ ಗಾಂಧಾರಿಯದಾಗಿದೆ. ಇದರ ನಡುವೆಯೆ ತನ್ನ ಮಕ್ಕಳನ್ನು ಈಕೆ ಸಲಹುತ್ತಾಳೆ. ಆದರೆ ಮಕ್ಕಳನ್ನು ಬೆಳೆಸುವ ಕ್ರಮದಲ್ಲಿ ಸೋಲುತ್ತಾಳೆ. ತನ್ನ ಪುತ್ರ ವ್ಯಾಮೋಹದಲ್ಲಿ ರಕ್ತ ಸಂಬಂಧಗಳ ವಾತ್ಸಲ್ಯವನ್ನು ತಿಳಿಸಿಕೊಡುವುದನ್ನು ಮರೆಯುತ್ತಾಳೆ.

ಈ ಸಂದರ್ಭದ ನಂತರ ಗಾಂಧಾರಿಯ ಸಂಘರ್ಷಗಳು ಕಂಡುಬರುವುದು ಪಾಂಡವರೊಂದಿಗೆ ಯುದ್ಧ ಮಾಡಿ ಎಲ್ಲರನ್ನು ಕಳೆದುಕೊಂಡು ಏಕಾಂಗಿಯಾಗಿರುವ ದುರ್ಯೋಧನನಿಗೆ ಸಂಧಿ ಮಾಡಿಕೊಳ್ಳುವಂತೆ ಕೇಳಿಕೊಳ್ಳುವ ಸನ್ನಿವೇಶದಲ್ಲಿ. ತನ್ನ ಮಗನೇ ಆಗಿದ್ದರೂ ದುರ್ಯೋಧನನಿಗೆ ಆಜ್ಞೆ ಅಥವಾ ಅಪ್ಪಣೆ ಮಾಡುವ ದೃಢ ವ್ಯಕ್ತಿತ್ವದ ವ್ಯಕ್ತಿಯಲ್ಲ ಗಾಂಧಾರಿ. ಆತನಲ್ಲಿ ಕರುಣಾಪೂರ್ವಕವಾಗಿ ಬೇಡಿಕೊಳ್ಳುತ್ತಾಳೆ. ಪಾಂಡವರಲ್ಲಿ ಇನ್ನು ಹಗೆತನ ಸಾಕು. ಅವರೊಂದಿಗೆ ಸಂಧಿ ಮಾಡಿಕೊ. ನೀನೊಬ್ಬನಾದರೂ ಉಳಿಯಲಿ ಎಂದು ಕೇಳಿಕೊಳ್ಳುತ್ತಾಳೆ. ಇದರ ಹಿಂದೆ ತಾಯಿಯಾದವಳ ಸಹಜ ಬಯಕೆ ಹಾಗೂ ದುರ್ಯೋಧನನ ಒಳಿತಿನ ಆಶಯವೂ ಅಡಗಿದೆ. ತನ್ನ ಮಗನ ಎದುರೇ ಅನ್ಯಳಂತೆ ಬೇಡುವ ಪರಿಸ್ಥಿತಿ ಇಲ್ಲಿ ಗಾಂಧಾರಿಯದಾಗಿದೆ.

ಪಾಂಡವರನ್ನು ಸಂಧಿಗೆ ಒಪ್ಪಿಸುತ್ತೇನೆ. ನೀನೂ ಕೂಡ ಸಂಧಿಗೆ ಒಡಂಬಡು. ಎಂದು ತಿಳಿಸಿದ ಧೃತರಾಷ್ಟ್ರನ ಮಾತುಗಳಿಗೆ ಪೂರಕವಾಗಿ ಗಾಂಧಾರಿ ಹೇಳುವ ಈ ಮಾತುಗಳು ಪ್ರಮುಖವಾದವು.

> "ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
> ಧುರಮೆ ಕಱುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ ।
> ರ್ಮರನುಟಿವಂತೆ ನೀನುಟಿದೆಯಿನ್ನಿಜಿವನ್ನರುಮಿಲ್ಲ ಮುತ್ತರುಂ
> ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್"[೨೧೫]

ಮಗನೆ ಕುರುಕುಲ ಎಂಬ ನಂದನ ವನವು ಭೀಮನೆಂಬ ಮದಿಸಿದ ಆನೆಯ ಕೋಪದಿಂದ ಧ್ವಂಸವಾಯಿತು. ನಮ್ಮ ಪುಣ್ಯದ ಫಲದಿಂದ ದೊಡ್ಡ ಮರವು ಉಳಿಯುವಂತೆ ನೀನು ಉಳಿದಿರುವೆ. ಇನ್ನು ಮುಂದೆ ಯುದ್ಧವನ್ನು ಮಾಡುವವರು ಯಾರೂ ಇಲ್ಲ. ಮುದುಕರು, ಕುರುಡರು ಎಂದು ನಮ್ಮ ಮಾತನ್ನು ಅಲಕ್ಷಿಸಬೇಡ. ಯೋಚಿಸು, ನಮ್ಮ ಮಾತನ್ನು ಕೇಳು, ತಂದೆಯು ಹೇಳುವ ಸಲಹೆಗೆ ಒಪ್ಪಿಕೊ ಎನ್ನುತ್ತಾಳೆ ಗಾಂಧಾರಿ.

ಇಲ್ಲಿ ಆಕೆಯು ತನ್ನ ಮಕ್ಕಳಲ್ಲಿ ಉಳಿದಿರುವ ದುರ್ಯೋಧನನೊಬ್ಬನನ್ನಾದರೂ ಉಳಿಸಿಕೊಳ್ಳುವ ತಹತಹಿಕೆಯ ಮನಸ್ಸಿನಿಂದ ಅವನಿಗೆ ಈ ಮಾತುಗಳನ್ನು ಹೇಳುತ್ತಾಳೆ. ಆಕೆ ಹೇಳುವ 'ಮುತ್ತರುಂ ಕುರುಡರುಮೆನ್ನದೆಮ್ಮ ನುಡಿಗೇಳ್' ಎಂಬ ಮಾತು ಇಲ್ಲಿ ಬಹುಮುಖ್ಯವಾದುದು. ಅಂದರೆ ಮುದುಕರು ಮತ್ತು ಕುರುಡರು ಎಂದು ಉಪೇಕ್ಷಿಸದೆ ನಮ್ಮ ಮಾತುಗಳನ್ನು ಕೇಳು ಎಂದು. ಈ ಮೊದಲು ದುರ್ಯೋಧನ ಗುರು ಹಿರಿಯರ ಹಾಗೂ ಅಜ್ಜನಾದ ಭೀಷ್ಮನ ಮಾತುಗಳನ್ನು ಕೇಳದೆ ಎಲ್ಲರನ್ನೂ ಕಳೆದುಕೊಂಡಿರುವುದನ್ನು ಈ ಮಾತುಗಳು ಧ್ವನಿಸುತ್ತವೆ. ಆ ಕಾರಣವಾಗಿಯೆ ಗಾಂಧಾರಿ ಈ ರೀತಿ ನುಡಿಯುತ್ತಾಳೆ. ಮುಂದುವರೆದು

"ಪೋಕಿನಿತಱೊಳಸವಸದಿಂ
ದೀ ಕಲಹಂ ಧರ್ಮಸುತನನಾಂ ನಿನಗೆ ನಿರಾ ।
ಪೇಕಮೊಡಂಬಡಿಸುವೆನಿಂ
ತೀ ಕಜ್ಜಂ ಕೂರ್ಪೊಡೆನಗೆ ಕೆಯ್ಕೊಳ್ ಮಗನೇ"[೨೧೬]

ಈ ಯುದ್ಧದ ಕಲಹವು ಇಲ್ಲಿಗೇ ನಿಲ್ಲಲಿ. ಧರ್ಮಸುತನನ್ನು ನಾನು ಯಾವುದೇ ಆಕ್ಷೇಪಣೆ ಇಲ್ಲದೆ ಸಂಧಿಗೆ ಒಪ್ಪಿಕೊಳ್ಳುವಂತೆ ಮಾಡುತ್ತೇನೆ. ನನ್ನನ್ನು ನೀನು ನಿಜವಾಗಿಯೂ ಪ್ರೀತಿಸುವುದಾದರೆ ಈ ಕಾರ್ಯವನ್ನು ಒಪ್ಪಿಕೊಳ್ಳಲೇ ಬೇಕು ಎಂದು ಕೇಳಿಕೊಳ್ಳುತ್ತಾಳೆ. ಇಲ್ಲಿ 'ಕೂರ್ಪೊಡೆನಗೆ ಕೆಯ್ಕೊಳ್' ಎಂದು ಕೇಳಿಕೊಳ್ಳುವ ಮಾತು ಗಮನಾರ್ಹವಾದುದು. ತನ್ನ ಯಾವುದೇ ಮಾತುಗಳನ್ನು ಕೇಳುವುದಕ್ಕೆ ಸಿದ್ಧನಿಲ್ಲದ ದುರ್ಯೋಧನನಿಗೆ ಅಂತಿಮವಾಗಿ ತನ್ನ ಪ್ರೀತಿಯ ಮೋಹ ಪಾಶದ ಬಲೆಯನ್ನು ಬೀಸಿ ಆತನನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡುತ್ತಾಳೆ. ಮಗ ಎಷ್ಟೇ ದುಷ್ಟನಾಗಿದ್ದರೂ, ಅನ್ಯಾಯಗಳನ್ನು ಮಾಡಿದವನಾಗಿದ್ದರೂ ಕೂಡ ತಾಯಿಯಾದವಳು ಅವನ ವಧೆಯನ್ನು ಆಸೆ ಪಡುವುದಿಲ್ಲ ಎಂಬುದು ಇಲ್ಲಿ ತಿಳಿಯುತ್ತದೆ.

ಆದರೆ ದುರ್ಯೋಧನನ ಛಲದ ಮುಂದೆ ಧೃತರಾಷ್ಟ್ರನ ಹಿತೋಪದೇಶಗಳಾಗಲಿ, ಗಾಂಧಾರಿಯ ಮೋಹದ ಬಯಕೆಗಳಾಗಲಿ ನಿಲ್ಲುವುದಿಲ್ಲ. ಏಕಾಂಗಿಯಾಗಿಯೆ ಗದಾಯುದ್ಧದಲ್ಲಿ ಭಾಗವಹಿಸಿ ಅಸುನೀಗುತ್ತಾನೆ. ಇದೆಲ್ಲವನ್ನು ಅಸಹಾಯಕರಂತೆ ನೋಡುವುದಷ್ಟೇ ಇವರಿಬ್ಬರ ಕೆಲಸ. ಅಂತಿಮವಾಗಿ ಕವಿ ಈ ದುಃಖವನ್ನು ತಾಳಲಾರದೆ ಗಾಂಧಾರಿ ಹಾಗೂ ಧೃತರಾಷ್ಟ್ರರಿಬ್ಬರೂ ಕೂಡ ತಪೋವನವನ್ನು ಆಶ್ರಯಿಸಿದರು ಎನ್ನುತ್ತಾನೆ.

"ಧೃತರಾಷ್ಟ್ರನುಂ ಗಾಂಧಾರಿಯುಂ ಪುತ್ರ ವಿಯೋಗ ದುಃಖದಿಂ ಮುನಿ
ವನಮನಾಶ್ರಯಿಸಿದರ್"[೨೧೭]

ಇಷ್ಟರ ಹೊರತಾಗಿ ಈ ಹಿರಿಯ ಜೀವಗಳು ಬೇರೆ ಏನನ್ನೂ ಮಾಡಲಾಗದ ಸ್ಥಿತಿಯಲ್ಲಿದ್ದಾರೆ. ಕಾಲ ಮಿಂಚಿ ಹೋಗಿದೆ. ಬಾಲ್ಯದಲ್ಲಿ ಹುಟ್ಟಿದ ಮತ್ಸರ, ದ್ವೇಷದ ಕಿಚ್ಚನ್ನು ಬಾಲ್ಯದಲ್ಲಿಯೇ ಶಮನ ಮಾಡಲು ಸೋತ ಇವರು ಕೊನೆಗೆ ಅದಕ್ಕೆ ಬೆಲೆ ತೆರಲೇ ಬೇಕಾಯಿತು. ಹೀಗಾಗಿ ಗಾಂಧಾರಿ ಇತರ ಸ್ತ್ರೀಯರ ಸಂಘರ್ಷಗಳಿಗಿಂತ ಭಿನ್ನ ನೆಲೆಯ ಸಂಘರ್ಷಗಳನ್ನು ಎದುರಿಸುತ್ತಾಳೆ.

'ಕರ್ನಾಟ ಭಾರತ ಕಥಾಮಂಜರಿ' ಕೃತಿಯಲ್ಲಿ ಗಾಂಧಾರಿಯ ವಿವರಗಳು ನಮಗೆ ಆದಿಪರ್ವದ ಮೂರನೆಯ ಸಂಧಿಯಲ್ಲಿ ಕಂಡುಬರುತ್ತವೆ. ಗಾಂಧಾರ ದೇಶದ ಸುಬಲ ರಾಜನ ಕುಮಾರಿಯಾದ ಈಕೆ ಧೃತರಾಷ್ಟ್ರ ಭೂಪತಿಯನ್ನು ವಿವಾಹವಾಗಿ ಬದುಕನ್ನು ಸಾಗಿಸಿದವಳು. 'ವಿಕ್ರಮಾರ್ಜುನ ವಿಜಯ'ದಂತೆಯೇ ಇಲ್ಲಿಯೂ ಗಾಂಧಾರಿಯ ಮನದ ಸಂಘರ್ಷಗಳಿಗೆ ಕಾರಣವಾಗುವ ಮುಖ್ಯ ವಿಷಯ ವಸ್ತು ಕುಂತಿಯು ತನಗಿಂತಲೂ ಮುಂಚಿತವಾಗಿಯೇ ಮಕ್ಕಳನ್ನು ಪಡೆದಳು ಎಂಬ ಸಂಗತಿ. ಈ ವಿಚಾರ ಆಕೆಯಲ್ಲಿ ವ್ಯಗ್ರಭಾವನೆಗಳು ಮೂಡಿ, ಅಸಹನೆ ಹಾಗೂ ಮತ್ಸರವನ್ನು ವ್ಯಕ್ತಪಡಿಸಲು ಪ್ರಚೋದಿಸುತ್ತದೆ. ಆ ಸಂದರ್ಭವನ್ನು ಕವಿ ಈ ರೀತಿಯಾಗಿ ತಿಳಿಸುತ್ತಾನೆ.

> "ಕೇಳಿದಳು ಗಾಂಧಾರಿ ಕುಂತಿಗೆ
> ಬಾಲ ಕೇಳಿ ವಿನೋದವೇ ಕೈ
> ಮೇಳವಿಸಿತೇ ಮುನ್ನ ಹಾ ತಪ್ಪೇನು ತಪ್ಪೇನು
> ಕಾಳು ಮಾಡಿದನೆನಗೆ ಮುನಿಪತಿ
> ಠೌಳಿಕಾರನಲಾ ಸುಡೀ ಗ
> ರ್ಭಾಳಿಗಳನೆಂದಬಲೆ ಹೊಸೆದಳು ಬಸುರನೊಡೆಮುರಿದು"[೨೧೮]

ಕುಂತಿದೇವಿಗೆ ತನಗಿಂತಲೂ ಮೊದಲೇ ಬಾಲ ಕೇಳಿ ವಿನೋದವು ಪ್ರಾಪ್ತಿಯಾದ ಸಂಗತಿಯನ್ನು ಕೇಳಿದ ಗಾಂಧಾರಿಯು ಕ್ರೋಧಕ್ಕೊಳಗಾಗುತ್ತಾಳೆ. ಅಲ್ಲದೆ ನಿನ್ನಲ್ಲಿ ಈ ಸಂತತಿಗೆ ಹಿರಿಯವರೆನಿಸುವ ಉತ್ತಮ ಪುರುಷರು ಜನಿಸುವರು ಎಂದು ಆಶೀರ್ವದಿಸಿದ್ದ ವ್ಯಾಸ ಮುನಿಯನ್ನು ಕುರಿತು ಶಪಿಸುತ್ತಾಳೆ. ಮುನಿಯು ನನಗೆ ಮೋಸವನ್ನು ಮಾಡಿದನು. ಆತ ಠೌಳಿಕಾರ ಎಂದು ಕೋಪದಿಂದ ತನ್ನ ಬಸಿರನ್ನು ಹೊಸೆದುಕೊಳ್ಳುತ್ತಾಳೆ. ಇಲ್ಲಿ ಆಕೆಯ ಮನದಲ್ಲಿ ಮೂಡಿರುವ ಕ್ರೋಧ, ಶಪಿಸುವಿಕೆ, ಅಸಹನೆ, ಬಸಿರನ್ನು ಹೊಸೆದುಕೊಳ್ಳುವ ವರ್ತನೆಯ ಪ್ರಕ್ರಿಯೆಗಳೆಲ್ಲವು ಆಕೆಯ ಮನದಲ್ಲಿ ನಡೆಯುತ್ತಿರುವ ಮಾನಸಿಕ ಸಂಘರ್ಷದ ಭಾವಗಳೇ ಆಗಿವೆ. ಆ ಸಮಯದಲ್ಲಿ ಅವು ಸಿಟ್ಟು ಹಾಗೂ ಕ್ರೋಧದ ಭಾವನೆಗಳ ಮೂಲಕ ಅಭಿವ್ಯಕ್ತವಾಗುತ್ತಿರುವುದು ತಿಳಿಯುತ್ತದೆ. ಅಲ್ಲದೆ ಈ ರೀತಿಯ ವರ್ತನೆಗಳಿಗೆ ತಾಯ್ತನವೆಂಬ ಸಾಮಾಜಿಕ ಅಂಶಗಳೂ ಕಾರಣವಾಗಿರುವುದನ್ನು ಗಮನಿಸಬೇಕು. ಏಕೆಂದರೆ ವಂಶಕ್ಕೆ ಮೊದಲು ಮಕ್ಕಳನ್ನು ಹಡೆದ ಹೆಣ್ಣುಗಳಿಗೆ ಸಿಗುತ್ತಿದ್ದ ಗೌರವಾದರಗಳು ಹಾಗೂ ಮಕ್ಕಳಿಲ್ಲದ ಹೆಣ್ಣುಗಳನ್ನು ಬಂಜೆಯರೆಂದು ಜರಿಯುತ್ತಿದ್ದ ಕಳಂಕದ ಮಾತುಗಳೂ ಸಹ ಹೆಣ್ಣುಗಳ ಮನಸ್ಸನ್ನು ಕಲಕಿರುವುದು ತಿಳಿದುಬರುತ್ತದೆ.

'ಪಂಪಭಾರತ'ದ ಗಾಂಧಾರಿಯಂತೆಯೇ ಇಲ್ಲಿಯ ಗಾಂಧಾರಿಯೂ ಕೂಡ ವಂಶಕ್ಕೆ ಹಿರಿಯರೆನಿಸುವ ಮಕ್ಕಳನ್ನು ನಾನು ಮೊದಲು ಪಡೆಯುತ್ತೇನೆ ಎಂಬ ಆಸೆಯಲ್ಲಿದ್ದುದು ತಿಳಿದುಬರುತ್ತದೆ. ಇದಕ್ಕೆ ಮುಖ್ಯವಾಗಿ ಸಾಮ್ರಾಜ್ಯ ಹಾಗೂ ರಾಜತ್ವದ ಅಧಿಕಾರಗಳು ಕಾರಣವಾಗಿರಬಹುದು. ಬಹುಶಃ ಆ ಅವಕಾಶಗಳಿಂದ ತನ್ನ ಮಕ್ಕಳು ವಂಚಿತರಾಗಬಹುದು ಎಂಬ ಕಳವಳದ ಭಾವಗಳೂ

ಕೂಡ ಇದಕ್ಕೆ ಕಾರಣವಾಗಿವೆ. ಅದರಿಂದಾಗಿಯೇ ಆಕೆ ತನ್ನ ಬಸಿರನ್ನು ಹೊಸೆದುಕೊಳ್ಳುತ್ತಾಳೆ. ಈ ಕ್ರಿಯೆಯಲ್ಲಿ ಅವಳ ಮನದ ಸಂಘರ್ಷಗಳು ಅಡಗಿವೆ. ಅವಳ ಕೋಪ, ದುಃಖ, ಉದ್ವೇಗದ ಮನಸ್ಥಿತಿಗಳು ಅರಿವಿಗೆ ಬರುತ್ತವೆ.

ಅಲ್ಲದೆ "ಕರ್ಣನ ಪಾತ್ರದ ದುರಂತತೆ ಹುಟ್ಟಿನಲ್ಲೆ ಅಡಗಿರುವಂತೆ ಕೌರವರ ದುರಂತತೆ ಹುಟ್ಟಿನಲ್ಲೆ ಅಡಗಿದೆಯೆಂಬ ಅಂಶವನ್ನು ಬಹು ಮನೋಜ್ಞವಾಗಿ ಮಹಾಭಾರತವೇ ಧ್ವನಿಸಿದೆ. ತನ್ನ ಓರಗಿತ್ತಿಗೆ ಮಕ್ಕಳಾಗಿ ತನಗಿನ್ನೂ ಮಕ್ಕಳಾಗಲಿಲ್ಲವೆಂದು ತನ್ನ ಬಸಿರನ್ನು ವ್ಯಾಸ ಮಂತ್ರೋದಕ ಪೂತವಾದ ಗರ್ಭವನ್ನು ಗಾಂಧಾರಿ ಹೊಸೆದುಕೊಳ್ಳುತ್ತಾಳೆ. ಮಾತ್ಸರ್ಯದಿಂದ, ಅಕಾಲದಲ್ಲಾದ ಗರ್ಭಸ್ರಾವದಿಂದ ಬಂದ ಮಕ್ಕಳು ಮತ್ತೆಂತಹವರಾಗುತ್ತಾರೆ, ಜ್ಞಾತಿ ಮತ್ಸರರಾಗದೆ? ಕನ್ಯತಾ ಮುಗ್ಧತೆಯಿಂದ ಅರಿಯದೆ ಕುಂತಿ ಮಾಡಿದ ತಪ್ಪಿಗಾಗಿ ಕರ್ಣನ ಬದುಕು ಉದಾರ ಧೀರ ರಮಣೀಯವಾದರೂ ದುಃಖಮಯವಾಯಿತು. ಆದರೆ ತಾಯಿಯ ಹೊಟ್ಟೆಯುರಿಯಿಂದ, ಗರ್ಭಪಾತದಿಂದ ಸಿದ್ಧಿ ಪೂರ್ವದಲ್ಲಿ ಭಗ್ನ ಸಿದ್ಧರಾಗಿ ಹುಟ್ಟಿದ ಕೌರವರು ಶಕ್ತರಾದರೂ ಪತಿತರಾದರು. ಮಹಾಭಾರತ ಈ ಮಹಾಪತನವನ್ನು ಚಿತ್ರಿಸಿದೆ"[೨೧೯] ಎಂಬ ಅಭಿಪ್ರಾಯ ಸಮಂಜಸವಾಗಿಯೇ ಇದೆ. ಏಕೆಂದರೆ ತಾಯಿಯಲ್ಲಿನ ಮತ್ಸರ, ಕ್ರೋಧದಂತಹ ಭಾವನೆಗಳನ್ನು ಹುಟ್ಟಿನಿಂದಲೇ ಹೊತ್ತು ಬಂದ ದುರ್ಯೋಧನಾದಿಗಳು ಆ ಗುಣಗಳನ್ನೇ ಮುಂದುವರೆಸುತ್ತಾರೆ. ಪ್ರತಿ ಸಂದರ್ಭದಲ್ಲಿಯೂ ಪಾಂಡವರಲ್ಲಿ ದ್ವೇಷವನ್ನೇ ಸಾಧಿಸುತ್ತಾರೆ.

"ಬಾಲ್ಯದಲ್ಲಿ ದುರ್ವಾಸನಿಂದ ಐದು ಮಂತ್ರಗಳನ್ನು ಪಡೆದ ಕುಂತಿ, ಶಿಶು ಸಹಜವಾಗಿ ವರ್ತಿಸುತ್ತಾಳೆ. 'ಮಗುವುತನದಲಿ ಬೊಂಬೆಯಾಟಕೆ ಮಗುವನೇ ತಹೆನೆಂದು ಬಂದಳು'. ಅದರ ಫಲವೇ ಕರ್ಣ ಜನನ. ಕುಂತಿಯ ಈ 'ಹುಡುಗಾಟ' ಮುಂದೆ ಅನರ್ಥಕಾರಿಯಾಗುತ್ತದೆ. ಇನ್ನು, ಗಾಂಧಾರಿಯಾದರೊ ಅಸೂಯೆಯಿಂದ ತನ್ನ ಬಸಿರನ್ನು ಹೊಸೆದುಕೊಳ್ಳುವ ಅವಿವೇಕ ಮಾಡುತ್ತಾಳೆ; ಅದರ ಫಲವೇ ಕೌರವಾದಿಗಳ ಜನನ. ಅಂತೂ ಈ ಇಬ್ಬರು ತಾಯಂದಿರಿಂದ ಮಹಾಭಾರತದ ಅನಾಹುತ ಪರಂಪರೆಗೆ ಬೀಜಾವಾಪನವಾಗುತ್ತದೆ. ಅಸಾಮಾನ್ಯರಾದ ಮಕ್ಕಳನ್ನು ಪಡೆದೂ ಇವರು ತಮ್ಮ ತಮ್ಮ ಬಗೆಯಲ್ಲಿ ದುಃಖ ಭಾಜನರಾಗುತ್ತಾರೆ. ಆ ದುಃಖದ ಪಾಲು ಕುಂತಿಗೆ ಹೆಚ್ಚು; ಗಾಂಧಾರಿಗೆ ಕಡಮೆ, ಅಷ್ಟೆ."[೨೨೦] ಎಂಬ ಮಾತುಗಳು ತಾಯ್ತನದ ಕಾರಣವಾಗಿ ಹುಟ್ಟಿಕೊಂಡ ಮತ್ಸರ ಮುಂದೆ ಇಡೀ ವಂಶದ ನಾಶಕ್ಕೆ ಮುನ್ನುಡಿಯಾಗುವ ಜೊತೆಗೆ, ಹಿರಿತನಕ್ಕಾಗಿ ಇಬ್ಬರೂ ಹೆಣ್ಣುಗಳ ಮನದಲ್ಲಿ ಒಡಮೂಡಿದ ಸ್ಪರ್ಧೆಯು ಅವರ ಮನಸ್ಸಿನಲ್ಲಿ ಸಂಘರ್ಷದ ಭಾವಗಳು ಮೂಡಲು ಕಾರಣವಾದ ಬಗೆಯನ್ನು ನಮಗೆ ತಿಳಿಸಿಕೊಡುತ್ತವೆ.

ಈ ರೀತಿಯಾಗಿ ಬಸಿರನ್ನು ಹೊಸೆದುಕೊಂಡ ನಂತರದ ವಿವರಗಳನ್ನು ಕವಿ ಹೀಗೆ ತಿಳಿಸುತ್ತಾನೆ.

"ಉದುರಿದವು ಧರಣಿಯಲಿ ಬಲು ಮಾಂ
ಸದ ಸುರಕ್ತದ ಘಟ್ಟಿಗಳು ಖಂ
ಡದ ಸುಧಾಳದ ಜಗಿಯ ಪೇಸಿಕೆ ನಿಕರ ನೂರೊಂದು
ಕೆದರಿದಳು ವಾಮಾಂಘ್ರಿಯಲಿ ನೂ
ಕಿದಳು ಹಾಯ್ಕಿವ ಹೊರಗೆನುತ ನೋ
ಡಿದಳು ಕರೆ ಕೈನೆಯರನೆನುತ ಕಠೋರ ಕೋಪದಲಿ"[೨೨೧]

ಗಾಂಧಾರಿಯು ಹೊಸೆದುಕೊಂಡ ಭ್ರೂಣಗಳು ಮಾಂಸದ ಸುರಕ್ತದ ಘಟ್ಟಿಗಳಂತೆ ಭೂಮಿಯಲ್ಲಿ ಉದುರಿದವು. ಅವುಗಳನ್ನು ನೋಡಿದ ಆಕೆ ಅತ್ಯಂತ ಕೋಪದಿಂದ ಅವೆಲ್ಲವನ್ನು ಹೊರಗೆಸೆಯುವಂತೆ ಆಜ್ಞೆ ಮಾಡುತ್ತಾಳೆ. ಇಲ್ಲಿ ಅಸಹನೆಯುಕ್ತವಾದ ಅವಳ ಮನಸ್ಥಿತಿ ನಮಗೆ ತಿಳಿಯುತ್ತದೆ. ಈ ಸಮಯಕ್ಕೆ ಅಲ್ಲಿಗೆ ಬಂದ ವ್ಯಾಸ ಮಹರ್ಷಿಯು ಕಾಮಿನಿಯ ಈ ಕೋಲಾಹಲಗಳಿಗೆ ಕಾರಣವೇನೆಂದು ಕೇಳಲು ಗಾಂಧಾರಿಯು ಈ ರೀತಿಯಾಗಿ ಉತ್ತರಿಸುತ್ತಾಳೆ.

"ಭರತ ಸಂತಾನಕೆ ಕುಮಾರರ
ಹೆರುವೆ ನಾ ಮುನ್ನೆಂದು ಗರ್ಭವ
ಧರಿಸಿದೆನು ನಿಮ್ಮಡಿಯ ಕೃಪೆಯಲಿ ಮಂತ್ರ ಭಾವಿತವ
ವರುಷವೆರಡಾಯ್ತಿದರ ಭಾರವ
ಧರಿಸಿದೆನು ದಾಯಾದ್ಯರೊಳಗವ
ತರಿಸಿದನು ಮಗನೆನುತ ಮುಖದಿರುಹಿದಳು ಗಾಂಧಾರಿ"[೨೨೨]

ಭರತ ಸಂತಾನಕ್ಕೆ ನಾನೇ ಮೊದಲು ಮಕ್ಕಳನ್ನು ಪಡೆಯುತ್ತೇನೆ ಎಂದು ನಿಮ್ಮಡಿಯ ಕೃಪೆಯಲ್ಲಿ ನಾನು ಗರ್ಭವನ್ನು ಧರಿಸಿದೆನು. ಆದರೆ ಎರಡು ವರ್ಷವಾಯಿತು, ಇನ್ನೂ ಗರ್ಭಭಾರವನ್ನು ಹೊತ್ತಿದ್ದೇನೆ. ದಾಯಾದ್ಯರಲ್ಲಿ ಮಗ ಹುಟ್ಟಿದನು ಎಂದು ನುಡಿದು ಮುಖ ತಿರುಗಿಸಿದಳು. ಇಲ್ಲಿ ಗಾಂಧಾರಿ ಉಲ್ಲೇಖಿಸುವ 'ದಾಯಾದ್ಯರು' ಎಂಬ ಪದ ಚರ್ಚಾರ್ಹವಾದುದು. ಈ ಪದಕ್ಕೆ "ಜ್ಞಾತಿ, ಪಾಲು ಪಡೆಯಲು ಅರ್ಹನಾದವನು"[೨೨೩] ಹಾಗೂ "ಬಲದಾಯ ಮಗ"[೨೨೪] ಎಂಬ ಅರ್ಥಗಳಿವೆ. ಇವು ಗಾಂಧಾರಿ ಈ ಪದವನ್ನು ಬಳಸಲು ಮುಖ್ಯ ಕಾರಣವೇನೆಂಬುದನ್ನು ತಿಳಿಸುತ್ತವೆ. ಅಲ್ಲದೆ ತಮ್ಮ ತಮ್ಮ ಮಕ್ಕಳ ಅಧಿಕಾರ ಅಥವಾ ರಾಜತ್ವದ ಪದವಿಗಳಿಗಾಗಿ ಕುಂತಿ ಹಾಗೂ ಗಾಂಧಾರಿಯರಲ್ಲಿ ಸ್ಪರ್ಧೆ ಹುಟ್ಟಿರಬಹುದಾದ ಸಾಧ್ಯತೆಗಳನ್ನು ಸಹ ಈ ಪದ ಸೂಚಿಸುತ್ತದೆ. ಅಲ್ಲದೆ ತನ್ನ ಓರಗಿತ್ತಿಯನ್ನು ಈಕೆ 'ದಾಯಾದಿ' ಎಂಬ ಪದ ಬಳಸಿ ವ್ಯಾಸನ ಮುಂದೆ ಮಾತನಾಡಬೇಕಾದರೆ ಅವರೀರ್ವರಲ್ಲಿ ಈಗಾಗಲೇ ಈ ವಿಚಾರವಾಗಿ ಘರ್ಷಣೆಗಳು ನಡೆದಿರುವ ಸೂಚನೆಗಳನ್ನು ಸಹ ಈ ಪದ ನಮಗೆ ತಿಳಿಸಿಕೊಡುತ್ತದೆ. ಹಾಗಾಗಿ ಗಾಂಧಾರಿ ಗರ್ಭ ಹೊಸೆದುಕೊಳ್ಳಲು ಇದು ಮುಖ್ಯ ಕಾರಣವಾಗಿರುವಂತಿದೆ.

"ಕುರುಡನ ಕೈ ಹಿಡಿದ ಗಾಂಧಾರಿ, ಕುಂತಿಗೆ ತನಗಿಂತ ಮೊದಲು ಮಕ್ಕಳಾಯಿತೆಂದು ಕೇಳಿ ಮತ್ಸರದಿಂದ ಬಸಿರನ್ನು ಹೊಸೆದುಕೊಂಡು ಕೌರವರ ಜನನಕ್ಕೆ ಕಾರಣಳಾದರೆ, ಕುಂತಿ, ಗಾಂಧಾರಿ

ಪರಾಶರರಿಂದ ನೂರ್ವರು ಮಕ್ಕಳಾಗುವಂತೆ ವರ ಪಡೆದಳೆಂದು ಕೇಳಿ ತಾನು ಮಕ್ಕಳನ್ನು ಪಡೆಯಲು ಬಯಸುತ್ತಾಳೆ. ಈ ತಾಯಿಯರಲ್ಲಿ ಹುಟ್ಟಿದ ಮತ್ಸರ, ಸ್ಪರ್ಧೆಗಳೇ ಮುಂದೆ ಅವರ ಮಕ್ಕಳ ಹಾದಿಗೆ ಮುಳ್ಳಾಯಿತು. ಭಾರತ ಯುದ್ಧಕ್ಕೆ ನಾಂದಿಯಾಯಿತು. ಪಾಂಡುವಿನ ಸಾವಿಗೆ ಕಾರಣಳಾದ ಮಾದ್ರಿ ಅವನೊಂದಿಗೆ ಚಿತೆ ಏರಿದರೆ, ಮಕ್ಕಳನ್ನು ಕಾಪಾಡುವ ಹೊಣೆ ಹೊತ್ತು ಕುಂತಿ ಬದುಕಿ ಉಳಿಯುತ್ತಾಳೆ. ಈ ಮಕ್ಕಳನ್ನು ಕಾಪಾಡುವುದಕ್ಕಾಗಿ ತನ್ನ ಹಿರಿಯ ಮಗ ಕರ್ಣನ ಬಲಿ ಕೊಡುತ್ತಾಳೆ. ಅಂತು ಈ ಹೆಣ್ಣು ಯಾರೂ ಸುಖಿಗಳಲ್ಲ"[೨೨೫] ಎಂಬ ಮಾತುಗಳು ಕುಂತಿ ಹಾಗೂ ಗಾಂಧಾರಿಯ ಮನದಲ್ಲಿ ಮೂಡಿದ ಸಂಘರ್ಷದ ಭಾವಗಳನ್ನು ಮನ ಮುಟ್ಟುವಂತೆ ತಿಳಿಸುತ್ತವೆ.

ನಂತರ ದುರ್ಯೋಧನನು ತನ್ನ ವೈಭವವನ್ನು ಅರಣ್ಯ ವಾಸದಲ್ಲಿರುವ ಪಾಂಡವರಿಗೆ ತೋರಿಸಲೆಂದು ಹೋಗಿ ಗಂಧರ್ವರಿಂದ ಅಪಹರಣಕ್ಕೊಳಗಾಗುತ್ತಾರೆ. ನಂತರ ಅರ್ಜುನನಿಂದ ರಕ್ಷಿಸಲ್ಪಟ್ಟು ಅರಮನೆಗೆ ವಾಪಸ್ಸಾದ ಸುದ್ಧಿ ತಿಳಿದ ಗಾಂಧಾರಿ ಕಳವಳದಿಂದ ಮಗನನ್ನು ನೋಡಲು ಬರುವ ಸನ್ನಿವೇಶವನ್ನು ಕವಿ ಹೀಗೆ ತಿಳಿಸುತ್ತಾನೆ.

"ಬಂದಳಾ ಗಾಂಧಾರಿ ಸೊಸೆಯರ
ವೃಂದ ಸಹಿತುರವಣಿಸಿ ಹೊಕ್ಕಳು
ನಿಂದು ನೋಡಿದಳಾತನಿರವನು ಕುಶೆಯ ಹಕ್ಕೆಯಲಿ
ಕಂದಿದಳು ಕಡು ಶೋಕ ಶಿಖಿಯಲಿ
ಬೆಂದಳೇನ್ಯೆ ಮಗನೆ ಹಾಸಿಕೆ
ಯಂದ ಲೇಸಾಯ್ತೆನುತ ಕುಳ್ಳಿರ್ದಳು ಸಮಿಪದಲಿ"[೨೨೬]

ಗಾಂಧಾರಿಯು ಸೊಸೆಯರ ವೃಂದ ಸಹಿತ ಬಂದು ನೋಡುತ್ತಾಳೆ. ಆತ ದರ್ಭೆಯ ಹಾಸಿಗೆಯಲ್ಲಿರುವುದನ್ನು ಕಂಡು ಶೋಕ ಶಿಖಿಯಲ್ಲಿ ಬೇಯುತ್ತಾಳೆ. ಇಲ್ಲಿನ ಆತಂಕ, ಶೋಕಗಳು ದುರ್ಯೋಧನನಿಗೆ ಯಾವುದೇ ರೀತಿಯ ವಿಪತ್ತುಗಳು ಸಂಭವಿಸದಿರಲೆಂಬ ತಾಯ ಮನಸ್ಥಿತಿಗಳನ್ನು ತಿಳಿಸಿಕೊಡುತ್ತವೆ. ಮುಂದುವರೆದು

"ಏನು ದರ್ಭಾಸ್ತರಣ ಶಯನವಿ
ದೇನು ಕಾರಣ ನಿರಶನವ್ರತ
ವೇನು ಸಾಧಿಸಲಾದುದೀ ಪ್ರಾಯೋಪವೇಶದಲಿ
ಏನು ಸಿದ್ಧಿಯಿದಕ್ಕೆ ಮೋಹಿದ
ಮೌನ ಮುದ್ರೆಯ ಬಿಸುಟು ಹೇಳೆ
ನ್ನಾಣೆಯೆನುತವೆ ಹಣೆಯಲಿ ಚಾಚಿದಳು ಮಗನ"[೨೨೭]

ನಿನ್ನಯ ಈ ದರ್ಭಾಸ್ತರಣ ಶಯನಕ್ಕೆ ಕಾರಣವೇನು? ಅಲ್ಲದೆ ಈ ರೀತಿಯ ನಿರಶನ ವ್ರತಕ್ಕೆ ಕಾರಣವೇನು? ಪ್ರಾಯೋಪವೇಶದಿಂದ ಏನನ್ನು ಸಾಧಿಸಲಾಗುತ್ತದೆ? ಇದರಿಂದ ಏನು ಸಿದ್ಧಿಸುತ್ತದೆ?

ಹೀಗೆ ನೀನು ಮೌನವಾಗಿದ್ದರೆ ನನಗೆ ನಿನ್ನ ಸ್ಥಿತಿಗೆ ಕಾರಣಗಳು ತಿಳಿಯುವುದಿಲ್ಲ. ಹಾಗಾಗಿ ಮೌನವನ್ನು ಬಿಟ್ಟು ಮಾತನಾಡು ಎಂದು ಕೇಳಿಕೊಳ್ಳುತ್ತಾಳೆ. ಅಂದರೆ ಇಲ್ಲಿ ಗಾಂಧಾರಿಯ ಮನಸ್ಸು ಭಯ ಹಾಗೂ ಆತಂಕಗಳಿಂದ ಕಂಪಿಸುತ್ತಿರುವುದು ತಿಳಿಯುತ್ತದೆ. ಜೊತೆಗೆ ದುರ್ಯೋಧನ ಮೌನವಾಗಿರುವುದು ಸಹ ಆಕೆಯ ಆತಂಕವನ್ನು ಹೆಚ್ಚಿಸುವುದನ್ನು ಕಾಣಬಹುದು.

ತಾಯಿಯ ಈ ಮಾತುಗಳಿಗೆ ದುರ್ಯೋಧನ ನಾನು ಹೇಳುವುದೇನು? ಈ ನನ್ನ ಒಡಲು ಪಾಂಡವರು ಉಳಿಸಿದ್ದು. ಇದರ ಆಯಾಸವನ್ನು ನಾನು ಹೇಳಲಾರೆ. ಅಲ್ಲದೆ ಒಮ್ಮೆ ನಾನು ಈ ಗೂಡು ಕಳಚುತ್ತೇನೆ. ಆ ಮೇಲೆ ನೀವು ದುಶ್ಯಾಸನಾದಿಗಳನ್ನು ನೋಡಿಕೊಂಡು ಸಂತೋಷದಿಂದಿರಿ ಎಂದು ತಿಳಿಸಿ ತಾನು ಪ್ರಾಣವನ್ನು ಬಿಡುವ ಸಂಗತಿಯನ್ನು ತಿಳಿಸುತ್ತಾನೆ. ಆಗ ಗಾಂಧಾರಿಯು

"ಸಂತವಿಡಿರೇ ಮಗನ ನಿಜ ದೇ
ಹಾಂತ ಕೃತ ಸಂಕಲ್ಪ ಗಡ ನೃಪ
ನಂತರಂಗವ ಕರೆಸಿಯೆಂದಳಲಿದಳು ಗಾಂಧಾರಿ
ಭ್ರಾಂತಿ ಬಿಗಿದಿದೆ ಚದುರ ಚಿತ್ತಕೆ
ಚಿಂತೆ ಬೇರೋಂದಾಯ್ತು ರಾಯನ
ಹಂತಿಕಾರರು ಬರಲಿ ಹಿಡಿಯಲಿ ನಿರಶನ ವ್ರತವ"[೨೨೮]

ಮಗನನ್ನು ಸಮಾಧಾನಗೊಳಿಸಿರಿ. ಈತ ತನ್ನ ದೇಹವನ್ನು ಬಿಡಲು ಸಂಕಲ್ಪವನ್ನು ಮಾಡಿರುವನಂತೆ. ಈತನ ಮನಸ್ಸಿಗೆ ಪ್ರಿಯರಾದ ಹಾಗೂ ಅಂತರಂಗದಲ್ಲಿರುವವರನ್ನು ಕರೆಸಿ. ಅವರೂ ಕೂಡ ನಿರಶನ ವ್ರತವನ್ನು ಹಿಡಿಯಲಿ. ಅವನ ಮನಸ್ಸಿಗೆ ಭ್ರಾಂತಿ ಹಿಡಿದಿದೆ. ರಾಯನ ಹಂತಿಕಾರರು ಬರಲಿ. ಅವರು ಕೂಡ ನಿರಶನ ವ್ರತವನ್ನು ಹಿಡಿಯಲಿ ಎಂದು ದುಃಖದಿಂದ ಗೋಳಾಡುತ್ತಾಳೆ. ಇಲ್ಲಿ ಪ್ರಧಾನವಾಗಿ ಗಾಂಧಾರಿಯು ದುರ್ಯೋಧನನಿಗೆ ಆಪ್ತರಾಗಿದ್ದ ವ್ಯಕ್ತಿಗಳಿಂದ ಅವನ ಮನಸ್ಸನ್ನು ಬದಲಾಯಿಸುವ ಪ್ರಯತ್ನದಲ್ಲಿದ್ದಾಳೆಂಬುದು ತಿಳಿಯುತ್ತದೆ. ಜೊತೆಗೆ ಇಲ್ಲಿ ಕವಿ ಬಳಸಿರುವ 'ಹಂತಿಕಾರ' (ಸಾಲಿನಲ್ಲಿರುವವನು, ಸರದಿಯವನು)[೨೨೯] ಎಂಬ ಪದ ರಾಜನಿಗಾಗಿ ಅಥವಾ ರಾಜನ ಜೊತೆಯಲ್ಲಿಯೆ ಸಾಯಲು ಸಿದ್ಧರಾಗಿದ್ದ ವ್ಯಕ್ತಿಗಳ ಗುಂಪನ್ನು ಸೂಚಿಸುತ್ತಿರುವಂತೆ ಕಂಡುಬರುತ್ತದೆ.

"ಕುಮಾರವ್ಯಾಸನ ಗಾಂಧಾರಿ ಅಧಿಕ ಪುತ್ರಮೋಹದಿಂದ ಕೌರವರ ಕಡೆಗೇ ಒಲೆದಿದ್ದಾಳೆ. ಶಾಂತಿ ಬೋಧೆ ಮಾಡಿದ್ದು ಇಲ್ಲಿಲ್ಲ. ಕೃಷ್ಣನನ್ನು ಕೌರವನು ಕಟ್ಟುವೆನೆಂದಾಗ ಸಿಟ್ಟಾಗಿ, ಧೃತರಾಷ್ಟ್ರನಿಗೆ 'ನೀನಿಟ್ಟ ಕಿಚ್ಚು ಇದು. ಪಾಪಿ ಮಗನನ್ನು ಹುಟ್ಟಿದಾಗಳೆ ಸುಡಹೇಳಲಿಲ್ಲವೆ? ಕೃಷ್ಣನನ್ನು ಕಟ್ಟುವನೆ?' ಎಂದು ಜರೆದಳು. ಧೃತರಾಷ್ಟ್ರನು 'ಹೆತ್ತ ಮಗನ ಹವಣನಾರೈವ ಗಾಂಧಾರಿಯನು ಕರೆ' ಎಂದು ಹೇಳಿದ್ದನು! ಇಲ್ಲಿ ಗಂಡಹೆಂಡಿರು ಪರಸ್ಪರರ ಮೇಲೆ ಮಗನ ಮೋಹದ ಆರೋಪ ಮಾಡುತ್ತಾರೆ. ಆ ದೌರ್ಬಲ್ಯದಲ್ಲಿ ಇಬ್ಬರೂ ಸಮವಾಗಿ ಹೊಣೆಗಾರರು. ಕೃಷ್ಣನ ವಿಶ್ವರೂಪ ದರ್ಶನದ ಅನಂತರ 'ಸಮತೆಯಲಿ ನೀ ನೋಡು ಶರಣರ ಮಮತೆ ಬೇಹುದು ಜೀಯ ಲಕ್ಷ್ಮೀರಮಣ ಕೃಪೆಮಾಡು'

ಎಂದು ಮೈಯಿಕ್ಕಿದಳು"[೨೩೦] ಎಂಬ ಮಾತುಗಳು ದುರ್ಯೋಧನನ ಕಾರ್ಯವೈಖರಿಯನ್ನು ಖಂಡಿಸಲಾಗದ ಅಸಹಾಯಕ ಸ್ಥಿತಿಯನ್ನು ತಿಳಿಸಿಕೊಡುತ್ತವೆ.

ಗಾಂಧಾರಿಯ ಬಗೆಗಿನ ಮೇಲ್ಕಂಡ ನಾಲ್ಕು ಅಭಿಪ್ರಾಯಗಳನ್ನು ಗಮನಿಸಿದಾಗ ಕುವೆಂಪು ಕೌರವರ ದುರ್ನಡತೆಗೆ ಅವರ ಹುಟ್ಟಿನ ಸಾಂದರ್ಭಿಕ ಹಿನ್ನೆಲೆಯನ್ನು ಚರ್ಚಿಸಿದರೆ, ಸಿ.ಪಿ.ಕೃಷ್ಣಕುಮಾರ್ ಅವರು ಮಹಾಭಾರತದ ಅನಾಹುತಕ್ಕೆ ಗಾಂಧಾರಿಯನ್ನು ಹೊಣೆಗಾರಳನ್ನಾಗಿಸಿ ಚಿಂತಿಸಿದ್ದಾರೆ. ಎಲ್.ಆರ್.ಹೆಗಡೆಯವರು ದುರ್ಯೋಧನನ ದುರ್ನಡತೆಗೆ ಗಾಂಧಾರಿ ಹಾಗೂ ಧೃತರಾಷ್ಟ್ರರಿಬ್ಬರ ಹೊಣೆಗೇಡಿತನವೇ ಕಾರಣವಾಗಿ ಗಾಂಧಾರಿ ಕೃಷ್ಣನಲ್ಲಿ ತನ್ನ ಮಗನನ್ನು ಕಾಪಾಡುವಂತೆ ಮೊರೆ ಇಡುತ್ತಾಳೆ ಎಂದಿದ್ದಾರೆ. ಈ ಮೂರೂ ಅಭಿಪ್ರಾಯಗಳಿಗಿಂತ ಭಿನ್ನವಾಗಿ ಶಶಿಕಲಾ ವೀರಯ್ಯಸ್ವಾಮಿಯವರು ಗಾಂಧಾರಿ ತನ್ನ ಬದುಕಿನ ಕ್ರಮದಲ್ಲಿ ಅನೇಕ ಅತೃಪ್ತಿಗಳನ್ನು ಹೊಂದುತ್ತ, ಕುಂತಿಯ ಅವಮಾನಗಳನ್ನು ಅನುಭವಿಸುತ್ತ, ಜೊತೆಗೆ ಇಡೀ ಮಹಾಭಾರತದ ಯಾವೆಲ್ಲಾ ಹೆಣ್ಣುಗಳು ಬದುಕಿನ ನಡೆಯಲ್ಲಿ ಸುಖಿಗಳಾಗಿರಲಿಲ್ಲ. ಒಂದಲ್ಲಾ ಒಂದು ರೀತಿಯಲ್ಲಿ ಅಸಹಾಯಕರೇ ಆಗಿದ್ದಾರೆ ಎನ್ನುತ್ತಾರೆ. ಆದರೆ ಕುಂತಿಗಿಂತ ಗಾಂಧಾರಿ ಹೆಚ್ಚು ಅಸಹಾಯಕಳು ಎನ್ನಲು ಕುರುಡನಾದ ಗಂಡ, ತನ್ನ ಮಾತನ್ನು ನಿರ್ಲಕ್ಷಿಸಿ ವರ್ತಿಸುತ್ತಿರುವ ಮಕ್ಕಳು ನಿದರ್ಶನಗಳಾಗುತ್ತಾರೆ.

೩.೪.೧.೫. ಯುದ್ಧ ಭೂಮಿಯಲ್ಲಿನ ಸಂಘರ್ಷಗಳು

ಕುರುಪತಿಯು ಅಳಿದನು ಎಂಬ ವಾರ್ತೆಯು ಗಜಪುರಕ್ಕೆ ತಲುಪಿ ಜನ ಮನವನ್ನು ಆವರಿಸಿತು. ವೇದವ್ಯಾಸ ಮುನಿಯ ಮಾತುಗಳಿಗೆ ಧೃತರಾಷ್ಟ್ರ ಮೂರ್ಛಿತನಾಗಲು ಗಾಂಧಾರಿ ಮೊದಲಾದ ನೃಪಮಾನಿನಿಯರು ಗೋಳಾಡಿದರು. ಭಾನುಮತಿ ಸಹಿತ ಉಳಿದ ಅರಸಿಯರೂ ಏಕಾಂಬರಧಾರಿಗಳಾಗಿ ಬಿಡುಮುಡಿ ಬಿಟ್ಟುಕೊಂಡು ಯುದ್ಧ ಭೂಮಿಗೆ ಬಂದರು. ಧೃತರಾಷ್ಟ್ರ ವ್ಯಾಸನ ಉಪದೇಶದಂತೆ ಪಾಂಡವರನ್ನು ಕ್ಷಮಿಸಿ, ಸಂತೈಸಿದನು. ಮಕ್ಕಳ ಸಾವಿನ ದುಃಖದಲ್ಲಿದ್ದ ಗಾಂಧಾರಿಯಲ್ಲಿಗೆ ಹೋಗಿ ಆಕೆಯನ್ನು ಸಮಾಧಾನಪಡಿಸುವಂತೆ ಧೃತರಾಷ್ಟ್ರನು ಹೇಳಲು, ವಿದುರ ವೇದವ್ಯಾಸ ಮುನಿಗಳು ನಡೆದ ಸಂಗತಿಯನ್ನು ತಿಳಿಸುವೆವು ಎಂದು ಗಾಂಧಾರಿಯಿದ್ದಲ್ಲಿಗೆ ಬಂದರು. ಆಕೆಗೆ ಮಧುರ ವಚನಗಳಿಂದ ತಿಳಿಯ ಹೇಳಲು ಆಕೆ ಅಂಗೈಯಲ್ಲಿ ಕೆನ್ನೆಯನ್ನೂರಿ ತಲೆ ತಗ್ಗಿಸಿ ಕುಳಿತಳು. ಕಣ್ಣೀರನ್ನು ಸುರಿಸುತ್ತ ದೀರ್ಘವಾದ ಮೌನದಲ್ಲಿ ಮುಳುಗಿದಳು.

ಈ ರೀತಿ ಆಕೆ ಮೌನದಲ್ಲಿರಲು ವೇದವ್ಯಾಸನು ಪಗಡೆಯ ಸಂದರ್ಭ ಹಾಗೂ ಅದರಿಂದ ಉಂಟಾದ ಪರಿಣಾಮಗಳನ್ನು ತಿಳಿಸಿ ಅಳಿದವರಿಗಾಗಿ ದುಃಖಪಡುವುದು ಸಲ್ಲದು ಎನ್ನುತ್ತಾನೆ. ಇದಕ್ಕೆ ಗಾಂಧಾರಿಯು 'ನಿಮ್ಮ ಚಿತ್ತದ ಗತಿಯೇನು? ನಿಮ್ಮ ಬಯಕೆ ಏನೆಂದು ಹೇಳಿರಿ? ಕರ್ತವ್ಯವೇನೆಂದು ನಮಗೆ ಅಪ್ಪಣೆ ಮಾಡಿ ಎಂಬ ಮಾತುಗಳನ್ನು ಆಡುತ್ತಾಳೆ. ಇಲ್ಲಿನ ನುಡಿಗಳಲ್ಲಿ ಒರಟುತನವಿದ್ದು, ಗಾಂಧಾರಿಯ ಮನಸ್ಸು ದುಃಖದಿಂದ ತುಂಬಿರುವುದು ಕಂಡುಬರುತ್ತದೆ. ಅದಕ್ಕೆ ವ್ಯಾಸನು ಕಳವಳಿಸುತ್ತಿರುವ ಕುಂತೀಸುತರನ್ನು ಸಂತೈಸಬೇಕು, ಅವರಲ್ಲಿ ಸೌಹಾರ್ದವನ್ನು ತೋರು.

ಕೌರವರು ಮಾಡಿದ ತಪ್ಪುಗಳಿಂದಾಗಿ ಅವರು ಈ ರೀತಿಯ ದುರ್ಗತಿಗೆ ಒಳಗಾದರು ಎಂದು ನುಡಿಯಲು ಗಾಂಧಾರಿಯು ರಾಯನಿಗೆ ಈ ವಿಚಾರವನ್ನು ತಿಳಿಸಿ ಬಂದಿರಾ? ನಾವು ತಾಯಿಗಳು ತಾನೆ? ನಮಗೆ ಇನ್ನೇನು ಬಲುಹುಂಟು? ಕುರು ಕುಲಾಗ್ರಣಿ ಸತ್ತರೆ ನಾನೂ ಸಾಯುತ್ತೇನೆ. ನೊಂದರೆ ನೋಯುತ್ತೇನೆ. ನನಗೆ ದುರಭಿಪ್ರಾಯ ಇದೆಯೇ ಮಾವ? ಎಂದು ನುಡಿಯುತ್ತಾಳೆ. (ದ್ರೌಪದಿಯಂತೆಯೆ ಈಕೆಯೂ ಸಂಬಂಧಗಳನ್ನು ಅರಿತೇ ಮಾತನಾಡುತ್ತಾಳೆ) ಇಲ್ಲಿ ಆಕೆ ನುಡಿಯುವ 'ಸಾಯೆ ಸಾವೆನು ಕುರುಕುಲಾಗ್ರಣಿ, ನೋಯೆ ನೋವೆನು ತನಗೆ ದುರಭಿಪ್ರಾಯವುಂಟೇ' ಎಂಬ ಮಾತುಗಳು ಅವಳ ಮನದ ದುಗುಡವನ್ನು ತಿಳಿಸುತ್ತವೆ. ಪಾಂಡವರೆಲ್ಲರು ಭೀತಿಯಿಂದ ಹಿಂಜರಿಯುತ್ತಲೇ ಬಂದು ಪಾದಕ್ಕೆರಗಲು ಗಾಂಧಾರಿಯು

"ಏಳಿರೈ ಸಾಕೇಳಿ ಮಕ್ಕಳಿ
ರೇಳಿರೈ ದೇಸಿಗರು ನಾವ್ ಭೂ
ಪಾಲಕರು ನೀವೀಸು ನಮ್ಮಲಿ ಭೀತಿ ನಿಮಗೇಕೆ
ಬಾಲೆಯರು ನಾವಂಧಕರು ನಿ
ಮ್ಮಾಳಿಕೆಯೊಳೇ ನಿಮ್ಮ ಹಂತಿಯ
ಕೂಳಿನಲಿ ಬೆಂದೊಡಲ ಹೊರೆವವರೆಂದಳಿಂದುಮುಖಿ"[೨೩೧]

ಏಳಿರಯ್ಯಾ ಸಾಕು, ಮಕ್ಕಳಿರಾ ಮೇಲೇಳಿ, ದೇಸಿಗರು ನಾವು; ಭೂಪಾಲಕರು ನೀವು. ನಮ್ಮಲ್ಲಿ ಈ ತೆರನಾದ ಭೀತಿ ನಿಮಗೇಕೆ? ನಾವು ಬಾಲೆಯರು, ಜೊತೆಗೆ ಅಂಧಕರು. ನಿಮ್ಮಾಳಿಕೆಯಲ್ಲಿಯೇ ನಿಮ್ಮ ಹಂತಿಯ ಕೂಳಿನಲ್ಲಿ ಬೆಂದೊಡಲನ್ನು ಹೊರೆಯುತ್ತೇವೆ ಎನ್ನುತ್ತಾಳೆ. ಇಲ್ಲಿ ಗಾಂಧಾರಿಯ ಮಾತುಗಳಲ್ಲಿ ಅವಳ ಮನದಲ್ಲಿನ ಸಿಟ್ಟು, ದುಗುಡ, ವ್ಯಂಗ್ಯ, ತಿರಸ್ಕಾರದ ಭಾವಗಳು ತುಂಬಿರುವುದು ತಿಳಿದುಬರುತ್ತದೆ. ಏಕೆಂದರೆ ಮಕ್ಕಳ ಅಗಲಿಕೆಯಿಂದಾಗಿ ಅವಳ ಮನಸ್ಸು ಕ್ಷುದ್ರಗೊಂಡಿದೆ. ಗಾಂಧಾರಿಯ ಮಾತುಗಳಿಗೆ ಧರ್ಮಜನು ತಾಯೆ ಚಿಂತೆಯನ್ನು ಬಿಡಿ. ಇನ್ನು ಮುಂದೆ ಧರಣಿಗೆ ಧೃತರಾಷ್ಟ್ರನೇ ರಾಜ. ನಾವು ಆತನ ಆಣತಿಯಂತೆ ನಡೆಯುವೆವು ಎನ್ನಲು ಗಾಂಧಾರಿಯು

"ಧರ್ಮ ನಿಮ್ಮದು ಮಗನೆ ಬರಿಯ ವಿ
ಕರ್ಮವೆಮ್ಮದು ತನ್ನ ಮಕ್ಕಳು
ದುರ್ಮತಿಗಳನ್ಯಾಯಶೀಲರಸಾಧುಸಂಗತರು
ನಿರ್ಮಳರು ನೀವೈವರಾಹವ
ಧರ್ಮ ಕುಶಲರು ಲೋಕ ಮೆಚ್ಚಲು
ಧರ್ಮ ನಿಮಗಿನ್ನೆನುತ ತಲೆಗುತ್ತಿದಳು ಗಾಂಧಾರಿ"[೨೩೨]

ಧರ್ಮ ನಿಮ್ಮದು ಮಗನೆ ಬರಿಯ ವಿಕರ್ಮವು ನಮ್ಮದು. ನನ್ನ ಮಕ್ಕಳು ದುರ್ಮತಿಗಳು, ಅನ್ಯಾಯಶೀಲರು, ಅಸಾಧು ಸಂಗತರು. ನೀವೈವರಾದರೋ ನಿರ್ಮಳರು, ಆಹವಧರ್ಮ ಕುಶಲರು.

ಲೋಕ ಮೆಚ್ಚಲು ಇನ್ನು ನಿಮಗೇ ಧರ್ಮ ಎನ್ನುತ್ತ ತಲೆ ತಗ್ಗಿಸಿದಳು. ಇಲ್ಲಿನ ಗಾಂಧಾರಿಯ ಮಾತುಗಳು ನೋವಿನಿಂದ ಒಡಮೂಡಿ ಬರುತ್ತಿರುವುದು ಕಂಡುಬರುತ್ತದೆ. ನಂತರ ಭೀಮನು "ಧರ್ಮವಾಗಲಿ ವೇಣು ಅಧರ್ಮವಾಗಲಿ, ರಣದಲ್ಲಿಯಂತೂ ಖಾತಿಯಲ್ಲಿ ಧರ್ಮಘಾತಕವಾಯಿತು"[೨೩೩] ನೀವು ದುಃಖಿಸದಿರಿ ಎಂದು ಸಮಾಧಾನಿಸುತ್ತ ಮೆಯ್ಯಿಕ್ಕಲು

"ಎಲು ತಮ್ಮ ವೃಥಾ ವಿಡಂಬನ
ದಾಳಿಯಾಟವಿದೇಕೆ ಸೈರಿಸ
ಹೇಳಿದ್ಯೆ ಸೈರಿಸದೆ ಮುನಿದಡೆ ನಿಮಗೆ ಕೇಡಹುದೆ
ಕಾಳೆಗದ ಕೃತಸಮಯಸತ್ಯವ
ಪಾಲಿಸಿದವರು ನೀವಲೇ ದಿಟ
ಖೂಳರಾವೈಸಲೆ ಎನುತ ಗಜರಿದಳು ಗಾಂಧಾರಿ"[೨೩೪]

ಏಳು ತಮ್ಮಾ ಸುಮ್ಮನೆ ಈ ವಿಡಂಬನದ ದಾಳಿಯಾಟವೇಕೆ? ಸೈರಿಸಲು ಹೇಳಿದೆಯಲ್ಲವೆ? ಸೈರಿಸದೆ ಮುನಿದರೆ ನಿಮಗೆ ಕೇಡುಂಟಾಗುತ್ತದೆಯೆ? ಕಾಳಗದಲ್ಲಿ ಮಾಡಿಕೊಂಡ ಸಮಯ ಹಾಗೂ ಸತ್ಯವನ್ನು ಪಾಲಿಸಿದವರು ನೀವಲ್ಲವೇ. ಸತ್ಯ ನಾವು ಖೂಳರಲ್ಲವೆ? ಎನ್ನುತ್ತ ಗಾಂಧಾರಿಯು ಗಜರಿದಳು. ಅದಕ್ಕೆ ಭೀಮ ಹೌದು ತಾಯಿ ನಾಭಿಯಿಂದ ಕೆಳಕ್ಕೆ ಗದೆಯಿಂದ ಹೊಡೆಯುವುದು ಸಲ್ಲದು, ಇದು ಶಸ್ತ್ರವಿದ್ಯೆಯ ನಿಯಮ. ನಾವು ಮಾಡಿದ್ದು ಅನ್ಯಾಯ. ಆದರೆ ಕುರು ನೃಪತಿ ಕಪಟ ದ್ಯೂತದಲ್ಲಿ ರಾಜ್ಯವನ್ನು ಅಪಹರಿಸಿದ್ದು, ಅರಗಿನ ಮನೆಯಲ್ಲಿ ಬೇಯಿಸುವ ಯೋಜನೆ ಹಾಕಿಕೊಂಡದ್ದು, ದ್ರುಪದ ಪುತ್ರಿಯು ತಾನು ಋತುಮತಿಯೆಂದರೂ ಸಭೆಗೆ ಎಳೆದು ತಂದು ಉಟ್ಟ ಸೀರೆಯನ್ನು ಸುಲಿಸಿದ ನಿಮ್ಮ ಮಗ ಧಾರ್ಮಿಕರು! ನಾವೇ ಖಳರು! ನೀವು ಸುಜನರು! ಆದ್ದರಿಂದ ಇವೆಲ್ಲವನ್ನೂ ನಮಗಾಗಿ ಸೈರಿಸಿಕೊಳ್ಳಿ ಎನ್ನಲು ಗಾಂಧಾರಿಯು ಕೆರಳಿದಳು.

"ಕದನವಿಜಯದ ಭಂಗಿ ತಲೆಗೇ
ರಿದುದೊ ಮೇಲಂಕಣದಲೊಡವು
ಟ್ಟಿದನ ನೆತ್ತರುಗುಡಿಹಿ ನಿನ್ನೊಡನೆನಗೆ ಮಾತೇನು
ಇದಿರಲಿರದಿರು ಸಾರು ಕರೆ ಧ
ರ್ಮದ ವಿಡಂಬದ ಧರ್ಮಪುತ್ರನ
ಹದನ ಕೇಳುವೆನೆನುತ ಕಳವಳಿಸಿದಳು ಗಾಂಧಾರಿ"[೨೩೫]

ಕದನ ವಿಜಯದ ಭಂಗಿ ತಲೆಗೇರಿರುವಂತಿದೆ. ಮೇಲಂಕಣದಲ್ಲಿ ಒಡಹುಟ್ಟಿದವನ ರಕ್ತವನ್ನು ಕುಡಿದ ನಿನ್ನೊಡನೆ ನನಗೆ ಮಾತೇನು? ನನ್ನೆದುರಿಗೆ ನಿಲ್ಲಬೇಡ, ಕರೆ ಆ ಧರ್ಮದ ವಿಡಂಬದ ಧರ್ಮಪುತ್ರನನ್ನು ಇದರ ಹದನವನ್ನು ಕೇಳುತ್ತೇನೆಂದು ಕಳವಳಿಸಿದಳು ಗಾಂಧಾರಿ. ಇಲ್ಲಿ 'ಒಡಹುಟ್ಟಿದನ ನೆತ್ತರುಗುಡಿಹಿ ನಿನ್ನೊಡನೆನಗೆ ಮಾತೇನು' ಎಂಬ ಸಾಲು ಗಮನಿಸತಕ್ಕದ್ದು. ಒಡವುಟ್ಟಿದವನ

ರಕ್ತವನ್ನು ಕುಡಿದವನು ಎಂದು ರಕ್ತ ಸಂಬಂಧದ ಬಾಂಧವ್ಯವನ್ನು ಕುರಿತು ಇಲ್ಲಿ ಗಾಂಧಾರಿಯು ಮಾತನಾಡುತ್ತಾಳೆ. ಆದರೆ ಸಭಾ ಮಧ್ಯದಲ್ಲಿ ದ್ರೌಪದಿಯ ಸೀರೆಯನ್ನು ಸೆಳೆಯುವಾಗ ದ್ರೌಪದಿ ಗಾಂಧಾರಿಯನ್ನು ಕುರಿತು ಇದೇ ರೀತಿಯ ರಕ್ತ ಸಂಬಂಧದ ಮಾತುಗಳನ್ನು ನುಡಿದು ತನ್ನನ್ನು ಕಾಪಾಡುವಂತೆ ಬೇಡಿಕೊಂಡಾಗ ಗಾಂಧಾರಿಗೆ ಈ ಸಂಬಂಧದ ಪರಿಕಲ್ಪನೆ ಮರೆತು ಹೋಗಿತ್ತೇ? ಎಂಬುದು ಸೂಕ್ಷ್ಮವಾಗಿ ಪರಿಶೀಲಿಸುವಂತಹದ್ದು.

ಗಾಂಧಾರಿಯ ನಿಷ್ಠುರದ ನುಡಿಗಳಿಗೆ ಕನಲಿದ ಧರ್ಮಜನು ಕೈಮುಗಿದು ವಿನಯದಲ್ಲಿ ಬೇಡಿಕೊಂಡನು. ನಾನು ಶಾಪಕ್ಕೆ ಅರ್ಹನಾಗಿದ್ದೇನೆ, ಯಾವ ಶಾಪವೆಂದು ಹೆಸರಿಸಮ್ಮಾ ಎಂದು ಪಾದಕ್ಕೆರಗಿದನು. ಗಾಂಧಾರಿಯ ಮನಸ್ಸು ಕರಗಿತಾದರೂ ಇನ್ನೂ ಉಳಿದಿದ್ದ ಕೋಪದ ಕಾರಣವಾಗಿ ಕಣ್ಣಿನ ಬೆಂಕಿಯಿಂದ ಧರ್ಮರಾಯನನ್ನು ಸುಡಲು ಪ್ರಯತ್ನಿಸಿ ವಿಫಲಳಾಗುತ್ತಾಳೆ. ನಂತರ ಸಂಪೂರ್ಣ ಕೋಪವು ಕಡಿಮೆಯಾಗಿ ಮಕ್ಕಳಿರಾ ಭೀತಿ ಬೇಡ. ಧರ್ಮಸ್ಥಿತಿಯನ್ನು ಅಧರ್ಮ ಮಾಡಿದವರು, ಕುಲಘಾತಕರು ತಮ್ಮಿಂದ ತಾವೇ ರಣಾಗ್ರದಲ್ಲಿ ನಾಶವಾದರು. ಇನ್ನು ಮುಂದೆ ನೀವು ನೀತಿಯಿಂದ ಭೂತಳವನ್ನು ಪಾಲಿಸಿರಿ ಎನ್ನುತ್ತಾಳೆ. ಅಂದರೆ ಇಲ್ಲಿ ಗಾಂಧಾರಿಗೆ ತನ್ನ ಮಕ್ಕಳು ಅಧರ್ಮದ ದಾರಿಯಲ್ಲಿ ಸಾಗುತ್ತಿದ್ದಾರೆ ಎಂಬುದು ತಿಳಿದಿದ್ದರೂ ಪುತ್ರ ವ್ಯಾಮೋಹ ಅವಳನ್ನು ಕುರುಡಾಗಿಸಿತ್ತೇ? ಅಧರ್ಮಕ್ಕೆ ನಾಶ ಎಂಬುದು ತಿಳಿದಿದ್ದರೂ ಮಕ್ಕಳನ್ನು ತಿದ್ದುವ ಪ್ರಯತ್ನ ಏಕೆ ಮಾಡಲಿಲ್ಲ? ಅಥವಾ ಮಕ್ಕಳನ್ನೆಲ್ಲಾ ಕಳೆದುಕೊಂಡಾಗ ಅವಳಿಗೆ ಬುದ್ಧಿ ಬಂದಿತೇ? ಏಕೆಂದರೆ ಗಾಂಧಾರಿಯು ರಾಜಕುವರಿ. ಹಾಗಾಗಿ ಮಕ್ಕಳನ್ನು ಹೆತ್ತು ರಾಜ್ಯಾಧಿಕಾರಕ್ಕಾಗಿ ಹಪಹಪಿಸುತ್ತಾಳೆ. ಮಕ್ಕಳನ್ನು ಪಡೆಯುವಾಗ ಇದ್ದ ಹಠ ಅವರನ್ನು ಬೆಳೆಸುವಾಗ ರಾಣಿಯಾಗಿ, ರಾಜಮಾತೆಯಾಗಿ ಸನ್ಮಾರ್ಗ ತೋರಲಿಲ್ಲವೇಕೆ? ತಪ್ಪುಗಳನ್ನು ಇವಳೂ ಒಪ್ಪಿಕೊಂಡಿದ್ದಳೆ? ಎಂಬ ಅನೇಕ ಪ್ರಶ್ನೆಗಳು ಮೂಡುತ್ತವೆ. ನಂತರ ದ್ರೌಪದಿಗೆ ಸುಬಲನಂದನೆಯನ್ನು ಕಾಣಿಸು ಎನ್ನಲು ಭಾನುಮತಿ ಹಾಗೂ ಉಳಿದ ಬಾಲೆಯರು ದುಃಖದಿಂದ ಗಾಂಧಾರಿಯಿದ್ದಲ್ಲಿಗೆ ಬಂದರು. ದ್ರೌಪದಿಯು ಅತ್ತೆಯ ಚರಣಗಳಿಗೆ ಎರಗಲು ಗಾಂಧಾರಿಯು ಅವಳನ್ನು ಹಿಡಿದೆತ್ತಿ

"ಮರುಳು ಮಗಳೆ ಕುಮಾರ ವರ್ಗದ
ಮರಣ ಸೊಸೆಯತ್ತೆಯರಿಗೊಂದೇ
ಪರಿ ವೃಥಾ ವ್ಯಥೆಯೇಕೆನುತ ಸಂತೈಸಿದಳು ಸತಿಯ"[೨೩೭]

ಮರುಳು ಮಗಳೆ, ಮಕ್ಕಳ ಸಾವಿನ ದುಃಖ ಅತ್ತೆ ಸೊಸೆಯರಿಗೆ ಒಂದೇ ರೀತಿಯದ್ದು. ಅದರಲ್ಲಿ ಭಿನ್ನತೆಯಿಲ್ಲ. ಸುಮ್ಮನೆ ವ್ಯರ್ಥವಾಗಿ ಏಕೆ ವ್ಯಥೆಪಡುತ್ತೀಯೆ? ಎಂದು ದ್ರೌಪದಿಯನ್ನು ಸಮಾಧಾನಿಸುತ್ತಾಳೆ. ಇಲ್ಲಿ ಗಾಂಧಾರಿ ಹೇಳುವ 'ಕುಮಾರ ವರ್ಗದ ಮರಣ ಸೊಸೆಯತ್ತೆಯರಿಗೊಂದೇ ಪರಿ' ಎಂಬ ಮಾತು ಅರ್ಥಗರ್ಭಿತವಾದುದು ಹಾಗೂ ಚರ್ಚಾರ್ಹವಾದುದು. ಏಕೆಂದರೆ ಇವರು ಅತ್ತೆ ಸೊಸೆಯರಾಗಿದ್ದರೂ ಇಬ್ಬರೂ ಕೂಡ ತಮ್ಮ ಒಡಲ ಕುಡಿಗಳನ್ನು ಕಳೆದುಕೊಂಡಿದ್ದಾರೆ. ಪುತ್ರ

ಶೋಕದ ದುಃಖ ಇಬ್ಬರಿಗೂ ಒಂದೇ ರೀತಿಯದ್ದಾಗಿದೆ. ಎಲ್ಲಕ್ಕಿಂತ ಮುಖ್ಯವಾಗಿ ಇಬ್ಬರೂ ಮಕ್ಕಳನ್ನು ಹಡೆದ ತಾಯಂದಿರು.

ಮುಂದುವರೆದು ಗಾಂಧಾರಿ

"ಸರಿಯಲೌ ಸುತಶೋಕ ನಮ್ಮಿ
ಬ್ಬರಿಗೆ ನಮ್ಮೊಳುವೆರಸಿ ವೈರೋ
ತ್ಕರವಿಸಂಸ್ಥುಳರಣವಿಧಾನವ ನಮ್ಮೊಳಗೆ ರಚಿಸಿ
ಎರಡು ಬಲದಲಿ ಸಕಲ ಭೂಮಿಾ
ಶ್ವರರ ಚಾತುರ್ಬಲವನುಪಸಂ
ಹರಿಸಿದಾತನು ತಾನೆ ಗದುಗಿನ ವೀರನಾರಯಣ"[೨೩೭]

ಕೇಳು ಈ ಸುತಶೋಕ ಎಂಬುದು ನಮ್ಮಿಬ್ಬರಿಗೂ ಒಂದೇ ಸಮ ಕಾಣಮ್ಮಾ, ನಮ್ಮೊಳಗೆ ಹೊಕ್ಕು, ಬೆರಸಿ, ನಮ್ಮೊಳಗೆ ವೈರತ್ವವನ್ನು ಹುಟ್ಟಿಸಿ ಅದರಿಂದ ಯುದ್ಧ ಸಂಭವಿಸುವಂತೆ ಮಾಡಿ, ಎರಡು ಬಲದಲ್ಲಿನ ಸಕಲ ಭೂಮೀಶ್ವರರ ಚತುರಂಗ ಬಲವನ್ನೂ ಧ್ವಂಸ ಮಾಡಿದನು ಅವನೇ, ಆ ಗದುಗಿನ ವೀರ ನಾರಾಯಣ ಎನ್ನುತ್ತಾಳೆ. ಇಲ್ಲಿ ಪುತ್ರ ಶೋಕದ ದುಃಖ ಇಬ್ಬರಿಗೂ ಸಮನಾದುದು ಎಂಬ ಮಾತು ಸರಿಯಾದುದು. ಆದರೆ ನಮ್ಮಲ್ಲಿ ವೈರತ್ವವನ್ನು ಉಂಟುಮಾಡಿ ಸಕಲ ಭೂಮೀಶ್ವರರ ನಾಶಕ್ಕೆ ಕಾರಣನಾದವನು ಗದುಗಿನ ವೀರ ನಾರಾಯಣ ಎಂಬ ಮಾತು ಎಷ್ಟು ಸಮಂಜಸವಾದುದು? ನಂತರ ಗಾಂಧಾರಿಯು ಕೃಷ್ಣನನ್ನು ಕರೆದು ಮನದ ದುಃಖವು ಸುಡುತ್ತಿರಲು 'ಮುಕುಂದಾ, ಕದನವ್ಯಾಳವಿಷನಿರ್ದಗ್ಧಧರಣೀ ಪಾಲವರ್ಗವ ತೋರಿಸೆಂದು' ಕೈಮುಗಿದಳು. ಮುಂದುವರೆದು

"ನಿನ್ನ ಲೀಲೆಯ ಬೆಳೆಸಿರಿಯ ಸಂ
ಪನ್ನ ಮಾಯಾರಚನೆಯಿದು ನಿ
ರ್ಭಿನ್ನಭಾರತನಿಚಿತ ಬಹಳಾಕ್ಷೋಹಿಣೀ ದಳವ
ತನ್ನೊಡನೆ ಹಗೆಬೆಳೆದ ಶೌರ್ಯವಿ
ಪನ್ನರನು ತೋರೈ ಜನಾರ್ದನ
ಮನ್ನಿಸೆಂದಳು ನಯನಜಲವನು ಮಿಡಿದು ಗಾಂಧಾರಿ"[೨೩೮]

ಇದು ನಿನ್ನ ಲೀಲೆಯ ಬೆಳೆಸಿರಿಯ ಸಂಪನ್ನ ಮಾಯಾ ರಚನೆ. ಭಾರತ ಯುದ್ಧದಲ್ಲಿ ಮುರಿದೊರಗಿದ ಬಹಳಾಕ್ಷೋಣೀ ದಳ ಹಾಗೂ ನಿನ್ನೊಡನೆ ಹಗೆಯನ್ನು ಬೆಳೆಸಿಕೊಂಡು ಶೌರ್ಯ ತೋರಿ ವಿಪನ್ನರಾದವರನ್ನು ತೋರಿಸು ಎಂದು ಕಂಬನಿ ಮಿಡಿಯುತ್ತ ಬೇಡಿಕೊಳ್ಳುತ್ತಾಳೆ. ಆಗ ಕೈಯಾಸರೆ ಕೊಟ್ಟು ನಡೆಸುತ್ತ ಗಾಂಧಾರಿಯನ್ನು ಕೃಷ್ಣ ಸಂಗ್ರಾಮ ಭೂಮಿಗೆ ಕರೆತಂದನು. ಇವರ ಜೊತೆಗೆಯೇ ಬಂದ ಅಷ್ಟಾದಶಾಕ್ಷೋಹಿಣಿಯ ನಾರಿಯರು ತಮ್ಮ ತಮ್ಮ ಪತಿಗಳನ್ನು ಹುಡುಕಿ ಅವರ ಶಿರಗಳನ್ನು ಮುಂಡಾಡುತ್ತಿರಲು ಗಾಂಧಾರಿಯು ಶೋಕದ ಕಡಲಿನಲ್ಲಿ ಏಳುತ್ತ ಮುಳುಗುತ್ತ ನಡೆದಳು.

ಮೊಳಕಾಲವರೆಗೂ ಬರುವ ರಕ್ತದ ಮಡುವಿನಲ್ಲಿ ಕಾಲಿಟ್ಟು, ಎತ್ತಿ ಕೊಡವುತ್ತ, ನರಗಳ ತೊಡಕಿನಲ್ಲಿ ಸಿಕ್ಕ ಕಾಲನ್ನು 'ಹರಿ'ಯಿಂದ ಬಿಡಿಸಿ ಮೇಲೆತ್ತಿಕೊಳ್ಳುತ್ತ ಹೆಣಗಳ ನಡುವೆ ನಡೆದಳು. ಕೃಷ್ಣನನ್ನು ಕುರಿತು

"ಇತ್ತ ನೋಡೈ ದೇವಕೀಸುತ
ಮತ್ತಗಜ ಕಂಧರದೊಳಾ ಭಗ
ದತ್ತನನು ಕಂಡಾತನರಸಿಯರೈದೆ ಮೊಗವೆತ್ತಿ
ಸುತ್ತಬರುತೈದಾರೆ ದಂತಿಯ
ಹತ್ತಲರಿಯದೆ ನೂರುಮಡಿ ಶೋ
ಕೋತ್ತರದಲದೆ ಶಿವ ಎನುತ ಮರುಗಿದಳು ಗಾಂಧಾರಿ"[೨೩೯]

ಇತ್ತ ನೋಡಯ್ಯಾ ದೇವಕೀಸುತ ಎನ್ನುತ್ತ ಮತ್ತಗಜದ ಮಸ್ತಕದಲ್ಲಿ ಆ ಭಗದತ್ತನನ್ನು ಕಂಡು ಮರುಗುತ್ತಿರುವ ಆತನ ಅರಸಿಯರ ದುಃಖವನ್ನು ತೋರಿಸುತ್ತ ಮರುಗುತ್ತಾಳೆ. ಮುಂದುವರೆದು

"ದೇವ ನೋಡಾ ಶೋಕವಹ್ನಿಯ
ಡಾವರವ ಕಾಂಭೋಜನರಸಿಯ
ರಾವ ನೋಂಪಿಯ ನೋಂತರೋ ಶಿವಶಿವ ಮಹಾದೇವ
ಆವನಾತನು ನಿಮ್ಮವರುಗಳ
ಮಾವನೇ ಪಾಂಚಾಲ ಸತಿಯರು
ಜೀವದಲಿ ಜಾರಿದರು ರಮಣರ ಮೇಲೆ ತನಿಹೊರಳಿ"[೨೪೦]

ದೇವಾ, ನೋಡು ಆ ದುಃಖದ ಬೆಂಕಿಯ ದಾವಾಗ್ನಿಯನ್ನು ಕಾಂಭೋಜ ರಾಜನರಸಿಯರು ಯಾವ ನೋಂಪಿಯನ್ನು ನೋಂತರೋ ಶಿವಶಿವಾ ಎಂದು ದುಃಖಿಸುತ್ತ ಪಾಂಚಾಲ ಸತಿಯರು ರಮಣರ ಮೇಲೆ ಹೊರಳಿ ಜೀವ ತೊರೆಯುವ ಸಂಗತಿಗಳನ್ನು ತೋರಿಸುತ್ತಾಳೆ. ಮುಂದುವರೆದು

"ಅದೆ ವಿರಾಟನ ಸತಿಯರೀಚೆಯ
ಲದೆ ಘಟೋತ್ಕಚನಂಗನೆಯರಾ
ಸುದತಿಯರ ಶೋಕವ ನಿರೀಕ್ಷಿಸು ಪಂಚಕೇಕೆಯರ
ಒದರಿ ಪಾಂಡ್ಯನ ಹೆಂಡಿರಾಚೆಯ
ಲದೆ ಸುಸೋಮಕ ಸೃಂಜಯಾದ್ಯರ
ವಧುಗಳೊರಲುತ್ತದೆ ಮುರಾಂತಕ ನಿಮ್ಮ ಸೇನೆಯಲಿ"[೨೪೧]

ವಿರಾಟನ ಸತಿಯರು ಅಲ್ಲಿದ್ದಾರೆ, ಈ ಕಡೆ ನೋಡು ಘಟೋತ್ಕಚನ ಅಂಗನೆಯರು, ಪಂಚಕೇಕೆಯರ ಸತಿಯರ ಶೋಕವನ್ನು ನಿರೀಕ್ಷಿಸು. ಪಾಂಡ್ಯನ ಹೆಂಡಿರು ಆ ಕಡೆ ಅಳುತ್ತಿದ್ದಾಳೆ. ಸೋಮಕ ಸೃಂಜಯಾಧ್ಯರ ವಧುಗಳು ಅಳುತ್ತಿದ್ದಾರೆ. ಮುರಾಂತಕಾ ನಿಮ್ಮ ಸೇನೆಯಲ್ಲಿ ಇವರೆಲ್ಲ ದುಃಖಿಸುತ್ತಿದ್ದಾರೆ

ಎಂದು ನುಡಿಯುತ್ತಾಳೆ. ಗಾಂಧಾರಿ ಕೊಡುವ ಈ ಚಿತ್ರಣ ಬಹಳ ದುಃಖಭರಿತ ಹಾಗೂ ಆ ಯುದ್ಧ ಭೂಮಿಯ ರೌದ್ರ ದರ್ಶನವಾಗಿದೆ.

"ಸುಖಿ ಕಣಾ ಭೂರಿಶ್ರವನವರ
ಸಖಿಯರದೆ ಪಾಡಳಿದು ನಿಮ್ಮಯ
ಸಖನ ಗೆಲೆಸಿದಿರಿವನ ಮುರಿದಿರಿ ರಾಧೆಯಾತ್ಮಜನ
ನಿಖಿಳ ಯಾಚಕಜನ ಸಹಿತ ತ
ತ್ಸಖಿಯರಳುತದೆ ಕರ್ಣ ಮರಣದೊ
ಳಖಿಳಜಗ ನೀನೊಬ್ಬ ತಪ್ಪಿಸಿ ಮರುಗಿತಿಂದಿನಲಿ"[೨೪೨]

ಇಲ್ಲಿ ಗಾಂಧಾರಿ ಕರ್ಣನ ಸಾವನ್ನು ಕುರಿತು ಕೃಷ್ಣನಿಗೆ ಹೇಳುತ್ತಾಳೆ. ನಿಮ್ಮ ಸಖನನ್ನು ಗೆಲ್ಲಿಸಿಕೊಳ್ಳುವ ಸಲುವಾಗಿ ಈ ರಾಧಾತ್ಮಜನನ್ನು ಮುರಿದಿರಿ. ನಿಖಿಳ ಯಾಚಕ ಜನರ ಸಹಿತವಾಗಿ ಆತನ ಪತ್ನಿಯರು ಅಳುತ್ತಿದ್ದಾರೆ. ಆದರೆ ನೀನೊಬ್ಬ ಇದರಿಂದ ಹೊರತಾಗಿದ್ದೀಯ ಎನ್ನುತ್ತಾಳೆ.

"ಭಾನುದತ್ತನ ಮೇಲೆ ಹೊರಳುವ
ಮಾನಿನಿಯರ ನಿರೀಕ್ಷಿಸೈ ಮ
ತ್ಸೂನುಗಳ ನೋಡಿತ್ತಲಿದೆ ದುಶ್ಯಾಸನಾದಿಗಳ
ಏನನೆಂಬೆನು ತನ್ನ ಸೊಸೆಯರ
ಹಾನಿಯನು ಮಾದ್ರೇಶನರಸಿಯ
ರೇನಧರ್ಮವ ನೆನೆದರೆಂದಳಲಿದಳು ಗಾಂಧಾರಿ"[೨೪೩]

ಭಾನುದತ್ತನ ಮೇಲೆ ಹೊರಳುವ ಮಾನಿನಿಯರನ್ನು ನಿರೀಕ್ಷಿಸಯ್ಯಾ, ನನ್ನ ಮಕ್ಕಳಾದ ದುಶ್ಯಾಸನಾದಿಗಳ ನೋಡು. ನನ್ನ ಸೊಸೆಯರ ಹಾನಿಯನ್ನು ಏನೆನ್ನಲಿ. ಮಾದ್ರೇಶನ ಅರಸಿಯರು ಏನಧರ್ಮವನ್ನು ನೆನೆದರು ಎಂದು ಅಳಲಿದಳು ಗಾಂಧಾರಿ.

"ತಂದೆ ನೋಡೈ ಕೃಷ್ಣ ತನ್ನಯ
ನಂದನರು ನೂರ್ವರಿಗೆ ಕಿರಿಯಳ
ನಿಂದುಮುಖಿ ದುಶ್ಯಳೆಯನಾ ಸೈಂಧವನ ವಲ್ಲಭೆಯ
ಅಂದು ವಿವಿಧವ್ಯೂಹದಲಿ ಗುರು
ನಿಂದಡೆಯು ಹುಸಿರಾತ್ರಿಯಲಿ ನೀ
ಕೊಂದಲೇ ತನ್ನಳಿಯನನು ವರ ಸಿಂಧುಭೂಪತಿಯ"[೨೪೪]

ತಂದೆ ನೋಡಯ್ಯಾ ಕೃಷ್ಣ ನನ್ನ ನೂರು ಮಂದಿ ಮಕ್ಕಳಿಗೂ ಕಿರಿಯವಳಾದ ಇಂದುಮುಖಿ ದುಶ್ಯಳೆಯನ್ನು. ಆ ಸೈಂಧವನ ವಲ್ಲಭೆ ಇವಳು. ಅಂದು ವಿವಿಧ ವ್ಯೂಹದಲ್ಲಿ ಗುರು ರಕ್ಷಣೆಗೆ ನಿಂತರೂ ಬಿಡದೆ ನೀನು ಹುಸಿರಾತ್ರಿಯನು ಸೃಷ್ಟಿಸಿ ನನ್ನ ಅಳಿಯ ಸಿಂಧುಭೂಪತಿಯನ್ನು

ಕೊಂದೆಯಲ್ಲ ಎಂದು ದುಃಖದಿಂದ ನುಡಿಯುತ್ತಾಳೆ. ಮುಂದುವರೆದು ಕ್ಷೇಮಧೂರ್ತಿಯ ಆ ಕಳಿಂಗನ, ಸೋಮದತ್ತನ, ಚಿತ್ರಸೇನನ ಮೊದಲಾದ ಹೆಸರಾಂತ ಸಮಸ್ತ ವೀರರ ಸತಿಯರೂ ತಮ್ಮ ಪತಿಗಳನ್ನು ಕಳೆದುಕೊಂಡು ಗೋಳಿಡುತ್ತಿದ್ದಾರೆ ನೋಡು ಕೃಷ್ಣ ಎಂದು ಹೇಳುತ್ತ ಬರುತ್ತಿರಲು ಮುಂದೆ ತನ್ನ ಮಗನನ್ನು ಕಂಡಳು.

ಭೀಮನ ಗದಾಘಟ್ಟನದಿಂದಾದ ಗಾಯ ಮೈಯಲ್ಲೆಲ್ಲ ತುಂಬಿದೆ. ಊರು ಮಂಡಲವು ಖಂಡಿಸಿ ಹೋಗಿದೆ. ಘೂಕಕಾಕಗಳ ಭಯಂಕರವಾದ ಸದ್ದಿನ ಸನ್ನಿಧಾನದಲ್ಲಿರುವ ಕೌರವೇಶ್ವರನನ್ನು ನೋಡುತ್ತಾಳೆ. ಇತ್ತ ನೋಡಯ್ಯಾ ಕೃಷ್ಣ ನಿನ್ನ ಮತ್ತದಂತಿಯನ್ನು, ಇಂದು ಕುಲದ ರಾಜೋತ್ತಮನನ್ನು, ಏಕಾದಶಾಕ್ಷೋಹಿಣಿಯ ವಲ್ಲಭನನ್ನು ಹತ್ತಿರ ನಿಂತ ಪರಮ ಸುಂದರಿಯರು, ಶ್ರೇಷ್ಠ ಮತ್ತಕಾಶಿನಿಯರು. ಆದರೆ ಈಗ ಘೂಕ ವಾಯಸ ಜಂಬುಕ ಸಮೂಹವು ಸುತ್ತಲೂ ಮುತ್ತಿಕೊಂಡಿದೆ ಎಂದು ದುಃಖಿಸುತ್ತಾ ಬಿದ್ದು ಮೂರ್ಛಿತಳಾದಳು. ಗಾಂಧಾರಿಯು ಕಣ್ಣೆದುರಲ್ಲೆ ತನ್ನೆಲ್ಲ ಮಕ್ಕಳ ಕಳೆಬರಹವನ್ನು ಕಂಡು ಹೇಗೆ ಸಹಿಸಿಯಾಳು. ಪುತ್ರ ವ್ಯಾಮೋಹಿಯಾದ ತಂದೆ ತಾಯಿಯ ಕಣ್ಣೆದುರಿನಲ್ಲೇ ಮಕ್ಕಳ ಸಾವು ಜೀರ್ಣಿಸಿಕೊಳ್ಳಲಾಗದ ವಿಚಾರ. ಅವಳನ್ನು ಕೃಷ್ಣನು ಹಿಡಿದೆತ್ತಲು ನೃಪವನಿತೆಯರು, ಭಾನುಮತಿ ಮೊದಲಾದಖಿಳ ರಾಣಿಯರು ಜನಪತಿಯ ಮುಕ್ಕುರುಳಿದರು. ಅವರ ಶೋಕದ ಹಾಹಾಕಾರ ಧ್ವನಿಯು ಬ್ರಹ್ಮಾಂಡ ಮಂಡಲವನ್ನು ಆವರಿಸಿತು.

೩.೪.೨. ಸುದೇಷ್ಣೆ.

"ಹಣೆಯನಂಘ್ರಿಗೆ ಚಾಚಲೆತ್ತಿದ
ಳಣಕಿಗನ ತೆಗೆದಪ್ಪಿ ಮದವಾ
ರಣನೆ ಕುಳ್ಳಿರೆನುತ್ತ ನೋಡಿದಳಾ ಸಹೋದರನ
ಹೆಣ ಮುಸುಡು ಬಿದ್ದಿದೆ ಲತಾಂಗಿಯ
ಕೆಣಕಿದನೊ ಕಡುಪಾಪಿ ವಂಶವ
ಹಣಿದವಾಡದೆ ಮಾಣನೇಗುವೆನೆನುತ ಮರುಗಿದಳು"[೨೪೬]

ಸುದೇಷ್ಣೆ ಈ ಮೊದಲೇ ಕೀಚಕನಿಗೆ ದ್ರೌಪದಿಯ ಬಗೆಗೆ ಎಚ್ಚರಿಸಿದ್ದಳು. ಆಕೆ ಗಂಧರ್ವರ ಪತ್ನಿ. ನಮ್ಮವಳು ಎಂದು ಭಾವಿಸಿ ಅವಳನ್ನು ಮಾನ್ಯತೆಯಿಂದ ಸಲಹುತ್ತಿದ್ದೇನೆ. ಇವಳ ವಲ್ಲಭರು ಬಲ್ಲಿದರು. ಇವಳ ಚಿಂತೆ ನಿನಗೆ ಬೇಡ. ಬೀಡಿಗೆ ಹೋಗು. ಈಕೆ ನಿನಗೆ ಒಳಗಾಗುವವಳಲ್ಲ. ಕೆಟ್ಟದ್ದನ್ನು ನುಡಿಯಬೇಡ, ಹಾಗೆಯೇ ಕೆಟ್ಟ ಆಲೋಚನೆಗಳನ್ನು ಮಾಡಬೇಡ ಎಂದು ಈಗಾಗಲೇ ಎಚ್ಚರಿಸಿದ್ದಳು. ಆದರೆ ಇಂದಿನ ಆತನ ಸ್ಥಿತಿಯನ್ನು ಕಂಡು ಆಕೆಗೆ ಭಯವಾಗುತ್ತದೆ. ಆತಂಕದಿಂದ ಅವನನ್ನು ಮಾತನಾಡಿಸುತ್ತಾಳೆ. ಅಡಿಗೆರಗಿದ ತಮ್ಮನನ್ನು ತೆಗೆದಪ್ಪಿ ಉಪಚರಿಸುತ್ತಾಳೆ. ಅವನ ಮುಖವನ್ನು ನೋಡುತ್ತಾಳೆ. ಮುಖ 'ಹೆಣ ಮುಸುಡು ಬಿದ್ದಿದೆ'. ಆ ಲತಾಂಗಿಯನ್ನು ಕೆಣಕಿದನೋ ಏನೋ? ಎಂದು ಮನಸ್ಸಿನಲ್ಲೇ ಕಳವಳಪಟ್ಟಳು. ಈ ಪಾಪಿಯು ವಂಶವನ್ನು ಹಾಳು ಮಾಡದೆ

ಬಿಡುವವನಲ್ಲ; ನಾನೇನು ಮಾಡಲಿ? ಎಂದು ದುಃಖಿಸಿದಳು. ಇಲ್ಲಿ ಸುದೇಷ್ಣೆಯ ಅಸಹಾಯಕತೆ ಒಂದು ಕಡೆಯಾದರೆ, ತಮ್ಮನ ಮೇಲಿನ ಪ್ರೀತಿ ಇನ್ನೊಂದು ಕಡೆ. ಇವುಗಳ ಮಧ್ಯೆ ಸಿಕ್ಕಿ ತೊಳಲಾಡುತ್ತಾಳೆ.

ತಮ್ಮನನ್ನು ಕುರಿತು ನಿನ್ನ ಮುಖವು ತಗ್ಗಿದೆ. ಮುಖದ ಕಾಂತಿ ಕುಂದಿ ಚಿಂತಾ ಸಮುದ್ರದಲ್ಲಿ ಮುಳುಗಿದಂತೆ ಕಾಣುತ್ತಿದೆ. ಇದಕ್ಕೆ ಕಾರಣ ಏನು? ಎಂದು ಕೇಳಿದಳು. ಅದಕ್ಕೆ ಕೀಚಕನು ಬೇರೆಯ ಬಿನ್ನಹವೇನಿದೆ. ನಿನ್ನೋಲಗದ ಸತಿಯರಲ್ಲಿ ನೂರುಪಟ್ಟು ಚೆಲುವೆಯಾಗಿರುವ ದ್ರೌಪದಿಯು ನನ್ನ ಚಿತ್ತವನ್ನು ಸೂರೆಗೊಂಡಿದ್ದಾಳೆ. ಅವಳಿಲ್ಲದೆ ನಾನು ಜೀವಿಸಲಾರೆ, ಅವಳನ್ನು ಒಳಗು ಮಾಡಿಸಿಬಿಟ್ಟರೆ ನನ್ನ ಒಡಲಲ್ಲಿ ಜೀವ ಉಳಿಯುತ್ತದೆ ಎನ್ನಲು ಸುದೇಷ್ಣೆ ಒಂದು ಕ್ಷಣ ತಲ್ಲಣದಿಂದ ಕಂಪಿಸುತ್ತಾಳೆ.

"ಕೀರ್ತಿಲತೆ ಕುಡಿಯೊಣಗಿತ್ತೈ ಮದ
ನಾರ್ತನಾದ್ಯೆ ಕುಲಕೆ ಕಾಲನ
ಮೂರ್ತಿ ನೀನವತರಿಸಿದ್ಯೆ ಸಂಹರಿಸಿದ್ಯೆ ಕುಲವ
ಸ್ಫೂರ್ತಿಗೆಡೆ ಮನುಜರಿಗೆ ರಾವಣ
ನಾರ್ತಿಯಪ್ಪುದು ಅರಿಯಲಾ ಕಡು
ಧೂರ್ತತನಕಂಜುವೆನೆನುತ ನಡುಗಿದಳು ನಳಿನಾಕ್ಷಿ"[೨೪೭]

ಕೀರ್ತಿ ಲತೆಯ ಕುಡಿಯೊಣಗಿತು; ಮದನಾರ್ತನಾಗಿ ಬಿಟ್ಟೆಯಲ್ಲಾ! ಕಾಲನ ಮೂರ್ತಿಯಾಗಿ ನೀನು ಅವತರಿಸಿ ಕುಲವನ್ನು ಸಂಹರಿಸಿದೆಯಲ್ಲ. ಸ್ಫೂರ್ತಿಗೆಟ್ಟಾಗ ಮನುಜರಿಗೆ ರಾವಣನ ರೋಗ ಕಾಣಿಸಿಕೊಳ್ಳುತ್ತದೆ. ಇದನ್ನು ನೀನು ತಿಳಿಯದೆ ಹೋದೆಯಲ್ಲ. ನಿನ್ನ ಈ ಕೆಟ್ಟ ಧೂರ್ತತನಕ್ಕೆ ನಾನಂಜುವೆ ಅಯ್ಯೋ ಎಂದು ಆಕೆ ಗಡಗಡನೆ ನಡುಗಿದಳು. ಇಲ್ಲಿ ಸುದೇಷ್ಣೆಯ ಮನದ ಆತಂಕ ನಮಗೆ ಸ್ಪಷ್ಟವಾಗುತ್ತದೆ. ಏಕೆಂದರೆ ದ್ರೌಪದಿಯನ್ನು ಕೆಣಕಿದರೆ ತಮ್ಮ ಸಾಯುತ್ತಾನೆ. ಜೊತೆಗೆ ನಮ್ಮ ಕುಲದ ಮರ್ಯಾದೆ ಅಳಿಯುತ್ತದೆ. ಹೆಚ್ಚಿನದಾಗಿ ಒಬ್ಬ ರಾಣಿಯಾಗಿ, ಹೆಣ್ಣಾಗಿ ಮತ್ತೊಂದು ಹೆಣ್ಣನ್ನು ತಮ್ಮನ ಕಾಮದಾಟಕ್ಕೆ ಬಲಿಕೊಡಬೇಕಾಗಿ ಬಂದಿದೆಯಲ್ಲ ಎಂದು ಆಕೆ ಭಯ, ತಲ್ಲಣಗಳಿಂದ ಪರಿತಪಿಸುತ್ತಾಳೆ. 'ಪುರುಷ'ನ ಮುಂದೆ ಹೆಣ್ಣು ರಾಣಿಯಾಗಿದ್ದರೂ, ಎಂತಹ ಉನ್ನತ ಸ್ಥಾನದಲ್ಲಿದ್ದರೂ ಸಹ ಆಕೆ ಅಸಹಾಯಕಳು ಎಂಬುದನ್ನು ಸುದೇಷ್ಣೆಯ ಮೂಲಕ ಕವಿ ಮತ್ತೆ ಮತ್ತೆ ನಮಗೆ ಮನಗಾಣಿಸುತ್ತಾನೆ. ಮುಂದುವರೆದು ಆತನಿಗೆ ತಿಳುವಳಿಕೆ ಮೂಡಿಸಲು ಪ್ರಯತ್ನಿಸುತ್ತಾಳೆ.

"ಬೇಟವೇ ಪರವಧುವಿನಲಿ ಕೈ
ಮಾಟವೇ ಪರವಿತ್ತದಲಿ ತೆಗೆ
ದೋಟವೇ ಕದನದಲಿ ಗುಣವೇ ರಾಜಪುತ್ರರಿಗೆ
ಆಟವಿಕರೊಡನಾಡಿ ಕಲಿತು ವಿ
ರಾಟನನು ಕೊಲಲೆಣಿಸಿದ್ಯೆ ನಿ
ನ್ನಾಟಕಂಜುವೆನೆನುತ ಮುಖದಿರುಹಿದಳು ತರಲಾಕ್ಷಿ"[೨೪೮]

ಪರಸ್ತ್ರೀಯರಲ್ಲಿ ಪ್ರೇಮವೇ? ಬೇರೆಯವರ ಹಣ ಅಥವಾ ಸ್ವತ್ತಿನ ಮೇಲೆ ಆಸೆ ಪಡುವುದೇ? ರಣರಂಗದಿಂದ ಕಾಲ್ತೆಗೆದು ಓಡುವುದು ಇವೆಲ್ಲಾ ಕ್ಷತ್ರಿಯ ಧರ್ಮವೇನು? ಇವು ರಾಜಪುತ್ರರಿಗೆ ಗುಣವೇ? (ಆಟವಿಕರೊಡನಾಡಿ ಕಲಿತು) ಧೂರ್ತರ ಜೊತೆ ಸೇರಿ ಅವರ ಕೆಟ್ಟ ಕೆಲಸಗಳನ್ನು ನೀನೂ ಕಲಿತು ಈಗ ನಿನಗೆ ಸ್ಥಾನಮಾನಗಳನ್ನು ನೀಡಿ ಸಂರಕ್ಷಿಸಿದ ವಿರಾಟನನ್ನೆ ಕೊಲ್ಲಿಸಲು ಹೊರಟಿದ್ದೀಯಲ್ಲೋ ಎಂದು ದುಃಖಿಸುತ್ತಾ ಸುದೇಷ್ಣೆಯು ನಿನ್ನ ಈ ಆಟಕ್ಕೆ ನಾನು ಅಂಜುತ್ತೇನೆ? ಎಂದು ಮುಖದಿರುಹಿದಳು. ಮುಂದುವರಿದು

"ಅವಳ ಗಂಡರು ಸುರರು ಸುರರಿಗೆ
ನವಗದಾವಂತರವು ಮುಳಿದೊಡೆ
ದಿವಿಜ ದಳಕಿದಿರಾರು ನಮ್ಮನದಾರು ಕಾವವರು
ಅವಳ ತೊಡಕೇ ಬೇಡ ಸತಿಯರ
ನಿವಹದಲಿ ನೀನಾರ ಬಯಸಿದ
ಡವಳ ನಾ ಮುಂದಿಟ್ಟು ಮದುವೆಯನೊಲಿದು ಮಾಡುವೆನು"[೨೪೯]

ಅವಳ ಗಂಡರು ಸುರರು, ದೇವತೆಗಳಿಗೂ ಮನುಷ್ಯರಿಗೂ ಸೇರುವುದೇನು? ಅವರಿಗೂ ನಮಗೂ ಅಂತರವೆಷ್ಟಿದೆಯೆಂದು ಬಲ್ಲೆಯಾ? ಕೋಪಿಸಿಕೊಂಡರೆ ದಿವಿಜರನ್ನು ಎದುರಿಸುವ ಸಾಮರ್ಥ್ಯ ಯಾರಿಗೆ ಇದೆ? ಅವರ ಎದುರು ನಿಲ್ಲುವವರು ಯಾರು? ಅವರು ನಮ್ಮನ್ನು ದಂಡಿಸಲು ಬಂದರೆ ಅವರಿಂದ ನಮ್ಮನ್ನು ಕಾಪಾಡುವವರು ಯಾರು? ಆದ್ದರಿಂದ ನಮಗೆ ಅವಳ ತೊಡಕೇ ಬೇಡ. ನನ್ನ ಪರಿವಾರದ ಸತಿಯರ ನಿವಹದಲ್ಲಿ ನೀನು ಯಾರನ್ನು ಬಯಸುತ್ತೀಯೋ ಅವಳನ್ನು ನಿನಗೆ ಮದುವೆ ಮಾಡಿಕೊಡುತ್ತೇನೆ. ಅವಳನ್ನು ಮರೆತು ಬಿಡು. ಅವಳಿಂದ ನಮಗೆ ಒಳಿತಿಗಿಂತ ಕೆಡುಕೆ ಹೆಚ್ಚು ಎಂದು ಕೀಚಕನನ್ನು ಸಮಾಧಾನಪಡಿಸಲು ಪ್ರಯತ್ನಿಸುತ್ತಾಳೆ. ಅಲ್ಲದೆ ದ್ರೌಪದಿಯನ್ನು ಬಿಟ್ಟು 'ನೀನಾರ ಬಯಸಿದಡವಳ ನಾ ಮುಂದಿಟ್ಟು ಮದುವೆಯನೊಲಿದು ಮಾಡುವೆನು' ಎಂಬ ಸುದೇಷ್ಣೆಯ ಮಾತು ಗಮನಿಸುವಂತಹದ್ದು. ದುಷ್ಟ ಎಂದು ಗೊತ್ತಿದ್ದರೂ ಹೆಣ್ಣೊಬ್ಬಳನ್ನು ಆತನಿಗೆ ಮದುವೆ ಮಾಡಲು ತೊಡಗುವ ಅವಳ ಕ್ರಿಯೆ ತಪ್ಪು ಎನಿಸಿದರೂ, ಅದರಾಚೆಗೆ ಕ್ಷಣಿಕವಾದ ಕಾಮಕ್ಕೆ ಆಸೆಪಟ್ಟು, ಕಾಮನ ಸೆಳೆತಕ್ಕೆ ಸಿಕ್ಕಿ ಅಂತ್ಯ ಕಾಣುವ ಬದಲು ಮದುವೆಯೆಂಬ ಶಾಶ್ವತ ಸಂಬಂಧದ ಮೂಲಕ ಆತನನ್ನು ಉಳಿಸಿಕೊಳ್ಳುವ ಪ್ರಯತ್ನವಿದೆ. ಏಕೆಂದರೆ ವಿವಾಹವೆಂಬುದು ಒಂದು ಜವಾಬ್ದಾರಿಯುತ ಶಾಶ್ವತ ಸಂಬಂಧ. ಅಲ್ಲದೆ ಹೆಣ್ಣೊಬ್ಬಳ ಸಂಬಂಧವನ್ನು ಒಂದು ಒಪ್ಪಿತ ಮಾನ್ಯತಾ ಸಂಸ್ಥೆಯೊಳಗೆ ಕಾಣಲು ಬಯಸುತ್ತಾಳೆ.

ಎಷ್ಟೇ ಬುದ್ಧಿವಾದ ಹೇಳಿದರೂ ಕೀಚಕ ಕೇಳುವ ಪರಿಸ್ಥಿತಿಯಲ್ಲಿ ಇಲ್ಲ. ನನ್ನ ಚಿತ್ತ ಅವಳಲ್ಲಿ ಸಿಕ್ಕಿ ಬೇರು ಬಿಟ್ಟಿದೆ. ಬೇರೆ ಏನು ಮಾಡಿದರೂ ಪ್ರಯೋಜನವಿಲ್ಲ. ನನ್ನ ಮನದಿಚ್ಛೆಯನ್ನು ಸಲ್ಲಿಸು ಎಂದು ಬೇಡಿಕೊಳ್ಳುತ್ತಾನೆ. ಆಗ ಸುದೇಷ್ಣೆಗೆ

"ಆಲಿ ನೀರೇರಿದವು ತಮ್ಮನ
ಮೇಲೆ ತಳಿತುದು ಮೋಹ ಕಾಲನ
ಪಾಳಯಕೆ ಕೈಗೊಟ್ಟಳಂಗನೆ ನೆಗಹಿದಳು ಖಳನ
ಏಳು ಭವನಕೆ ಹೋಗು ತರುಣಿಯ
ನಾಳೆ ನಾ ಕಳುಹುವೆನು ಪರಸತಿ
ಮೇಳ ಲೇಸಲ್ಲೆನುತ ಬೀಳ್ಕೊಟ್ಟಳು ನಿಜಾನುಜನ"[೨೫೦]

ಸುದೇಷ್ಣೆಯ ಕಣ್ಣುಗಳಲ್ಲಿ ನೀರು ತುಂಬಿತು. ತಮ್ಮನ ಆ ಅವಸ್ಥೆಯನ್ನು ನೋಡಿ ಅವನ ಮೇಲೆ ಮೋಹವಂಕುರಿಸಿತು. ಖಳನಿಗೆ ಹಿತವನ್ನು ಉಂಟುಮಾಡಲು ಹೋಗಿ ಕಾಲನ ಪಾಳಯಕ್ಕೆ ಕೈಗೊಟ್ಟಳು ಎನ್ನುತ್ತಾನೆ ಕವಿ. ಕೊನೆಗೆ ಬೇರೆ ದಾರಿ ಕಾಣದೆ ತನ್ನ ತಮ್ಮನನ್ನು ಮೇಲೇಳು. ಇನ್ನು ನೀನು ನಿನ್ನ ಮಂದಿರಕ್ಕೆ ನಡೆ, ನಾಳೆ ಅವಳನ್ನು ನಾನು ಕಳುಹಿಸಿಕೊಡುತ್ತೇನೆ. ಎಂದು ಹೇಳಿ ಮತ್ತೊಮ್ಮೆ ಆತನನ್ನು ಎಚ್ಚರಿಸುತ್ತಾಳೆ. ಆದರೂ 'ಪರಸತಿಯ ಮೇಳ ಒಳಿತಲ್ಲ' ಎಂದು ನುಡಿದು ಅವನನ್ನು ಕಳುಹಿಸುತ್ತಾಳೆ. ಸುದೇಷ್ಣೆ ರಾಣಿಯಾಗಿದ್ದರೂ ತನ್ನ ತಮ್ಮನನ್ನು ನಿಯಂತ್ರಿಸಲು ಇಲ್ಲಿ ಆಗುತ್ತಿಲ್ಲ. ಒಂದು ಕಡೆ ತಮ್ಮನೆಂಬ ಅಭಿಮಾನ, ಪ್ರೀತಿ, ವಾತ್ಸಲ್ಯ. ಮತ್ತೊಂದು ಕಡೆ ಮಹಾ ಬಲಶಾಲಿ ಎಂಬ ಭಯ. ಸಾಲದ್ದಕ್ಕೆ ನೀಚ. ಏನು ಮಾಡಲೂ ಹಿಂಜರಿಯದಂತಹ ಭಂಡ. ಈ ಎಲ್ಲದರ ನಡುವೆ ಸಿಕ್ಕಿ ಸುದೇಷ್ಣೆ ನಲುಗುತ್ತಾಳೆ. ಕೊನೆಗೆ ತಮ್ಮನನ್ನು ಬಿಟ್ಟುಕೊಡಲಾರದೆ ದ್ರೌಪದಿಯನ್ನು ಅವನ ಮಂದಿರಕ್ಕೆ ಕಳುಹಿಸಿ ಅವನ ಸಾವಿಗೆ ಕಾರಣಳೂ ಆಗುತ್ತಾಳೆ.

ಇಲ್ಲಿ ಸುದೇಷ್ಣೆ ಪುರುಷ, ಪ್ರಭುತ್ವ ಎರಡನ್ನೂ ಎದುರಿಸಬೇಕಾಗಿದೆ. ಇದರ ನಡುವೆ ತನ್ನ ಘನತೆಯನ್ನೂ ಕಾಯ್ದುಕೊಳ್ಳಬೇಕಾದ ಒತ್ತಡ ಹಾಗೂ ಅನಿವಾರ್ಯತೆಗಳಿವೆ. ಏನೇ ಆದರೂ ಸುದೇಷ್ಣೆ ಸಹ ಒಂದು ಹೆಣ್ಣು. ಆಕೆಯೂ ಪುರುಷ ಮತ್ತು ಪ್ರಭುತ್ವದ ಎದುರು ಅಸಹಾಯಕಳು. ತನಗೊಪ್ಪಿತವಲ್ಲದಿದ್ದರೂ ಅನಿವಾರ್ಯವಾಗಿ ಶೋಷಕಳಾಗಿ ಕಾಣುತ್ತಾಳೆ. ಪ್ರಭುತ್ವದ ಅಧಿಕಾರವಾಣಿಯಲ್ಲಿಯೇ ದ್ರೌಪದಿಯನ್ನು ಬಲವಂತವಾಗಿ ಕೀಚಕನ ಮಂದಿರಕ್ಕೆ ಕಳುಹಿಸುತ್ತಾಳೆ.

೩.೪.೩. ಭಾನುಮತಿ.

ದುರ್ಯೋಧನನ ಪತ್ನಿ, ರಾಣಿಯಾದ ಈಕೆ ಮೌನದ ಮೂಲಕವೇ ತನ್ನೆಲ್ಲಾ ನೋವುಗಳನ್ನು ಅನುಭವಿಸುವವಳು. ಎಲ್ಲಿಯೂ ಅದನ್ನು ಹೊರಹಾಕುವವಳಲ್ಲ. ಅಲ್ಲದೆ ದುರ್ಯೋಧನನ ದುಷ್ಟ ಕಾರ್ಯಗಳನ್ನು ಕಣ್ಣಾರೆ ಕಂಡರೂ ಅದನ್ನು ವಿರೋಧಿಸಲಾಗದಂತಹ ಹಾಗೂ ಪ್ರತಿಭಟಿಸಲಾಗದಂತಹ ಅಸಹಾಯಕ ಪರಿಸ್ಥಿತಿಯ ವ್ಯಕ್ತಿ. ಇದರ ನಡುವೆಯೂ ದುರ್ಯೋಧನನ ಅಪಹರಣ ಪ್ರಸಂಗದ ನಂತರ ದುರ್ಯೋಧನನಿಗೆ ಬುದ್ಧಿ ಹೇಳುವ ಹಾಗೂ ಮುಂದಿನ ರಾಜಕಾರ್ಯಗಳ ಬಗ್ಗೆ ತಿಳುವಳಿಕೆಯನ್ನು ಉಂಟು ಮಾಡುವ ಧೈರ್ಯವನ್ನೂ ತೋರುತ್ತಾಳೆ. ಉಳಿದಂತೆ ಪಂಪ ಹಾಗೂ ಕುಮಾರವ್ಯಾಸರಿಬ್ಬರಲ್ಲಿಯೂ ದುರ್ಯೋಧನನು ಅಪಹರಣಕ್ಕೊಳಗಾದಾಗ ಆಕೆ ಅನುಭವಿಸುವ ಆತಂಕ, ತಳಮಳ, ದುಃಖ ಮೊದಲಾದ ಮಾನಸಿಕ ಸಂಘರ್ಷಗಳನ್ನು ಕಾಣಬಹುದಾಗಿದೆ.

'ವಿಕ್ರಮಾರ್ಜುನ ವಿಜಯ'ದಲ್ಲಿ ದುರ್ಯೋಧನನು ಚಿತ್ರಾಂಗದನೆಂಬ ಗಂಧರ್ವನಿಂದ ಅಪಹರಣಕ್ಕೆ ಒಳಪಟ್ಟಾಗ, ಧರ್ಮರಾಯನಲ್ಲಿ ತನ್ನ ಗಂಡನನ್ನು ರಕ್ಷಿಸಿಕೊಡುವಂತೆ ಕೇಳುವಲ್ಲಿನ ಪ್ರಸಂಗದಿಂದ ಭಾನುಮತಿಯ ಸಂಘರ್ಷಗಳ ವಿವರಗಳು ಮೊದಲಾಗುತ್ತವೆ. ಪಾಂಡವರು ಕಾಡಿನಲ್ಲಿ ಬೇಡರಂತೆ ತೊಳಲುತ್ತಿರುವುದನ್ನು ಹಾಗೂ ಬಾಡಿ ಕೃಶವಾದ ಅವರುಗಳ ಮುಖಗಳನ್ನು ನೋಡುವುದಕ್ಕಾಗಿ, ಜೊತೆಗೆ ತನ್ನ ವೈಭವವನ್ನು ಅವರಿಗೆ ತೋರಿಸುವುದಕ್ಕಾಗಿ ಸಕಲ ಪರಿವಾರ ಸಹಿತ ದುರ್ಯೋಧನ ಪಾಂಡವರಿದ್ದ ಕಾಡಿಗೆ ಬಂದನು. ಈ ಸಂದರ್ಭದಲ್ಲಿ ಹಿಂದಿನ ಜನ್ಮದ ಶತ್ರುವಾದ ಚಿತ್ರಾಂಗದನೆಂಬ ಗಂಧರ್ವನು ದುರ್ಯೋಧನ ಮತ್ತು ದುಶ್ಯಾಸನರಿಬ್ಬರನ್ನೂ ಕೋಡಗಗಟ್ಟು ಕಟ್ಟಿ ಅಪಹರಿಸಿದಾಗ ಭಾನುಮತಿಯು ಧರ್ಮರಾಯನಲ್ಲಿಗೆ ಬಂದು ಬೇಡಿಕೊಳ್ಳುತ್ತಾಳೆ. ಆ ಸನ್ನಿವೇಶವನ್ನು ಪಂಪ ಹೀಗೆ ಚಿತ್ರಿಸಿದ್ದಾನೆ.

"ವ॥ ಅಂತುಯ್ವುದುಂ ನೆಗಟ್ತೆಯ ಬೀರರೆಲ್ಲಂ ಬಡವರ ಪಿತರರಂತೆ ಮಿಳ್ಮಿಳ ನೋಡುತ್ತಿರೆ
ಮಿಕ್ಕುದುಂಡರಂತೆ ತಲೆಯಂ ಬಾಗಿ ಬಿಲ್ಗಳಂ ಮುಂದಿಟ್ಟು ಬಿಲ್ಗುಂ ಬೆಱಗುಮಾಗಿರೆ
ಸುಯೋಧನನ ಮಹಾದೇವಿ ಭಾನುಮತಿ ಬಾಯಟಿದು ಪುಯ್ಯಲಿಡುತುಂ ಬಂದು
ಧರ್ಮನಂದನನ ಕಾಲ ಮೇಲೆ ಕವಿದುಪಟ್ಟು"[೨೫೧]

ಭೀಷ್ಮ, ದ್ರೋಣ, ಕರ್ಣ, ಅಶ್ವತ್ಥಾಮ ಮೊದಲಾದ ವೀರರೆಲ್ಲರೂ ಹೆದರುವಂತೆ ಬೆದರಿಸಿ ದುರ್ಯೋಧನ ದುಶ್ಯಾಸನರಿಬ್ಬರನ್ನೂ ಚಿತ್ರಾಂಗದನು ಅಪಹರಿಸಿಕೊಂಡು ಹೋದನು. ಆ ರೀತಿಯಾಗಿ ಅಪಹರಿಸಿಕೊಂಡು ಹೋಗಲು ಪ್ರಸಿದ್ಧರಾದ ವೀರರೆಲ್ಲರು ಬಡವರ ತಂದೆಯರಂತೆ ಪಿಳ ಪಿಳನೆ ನೋಡುತ್ತಿದ್ದರು. ಎಂಜಲನ್ನು ತಿಂದವರಂತೆ ತಲೆಯನ್ನು ಬಾಗಿಸಿಕೊಂಡರು. ಬಿಲ್ಲುಗಳನ್ನು ತಮ್ಮ ಮುಂದಿಟ್ಟುಕೊಂಡು ಆಶ್ಚರ್ಯಚಕಿತರಾಗಿ ಏನು ಮಾಡಲು ತೋರದಂತಿದ್ದರು. ಇತ್ತ ದುರ್ಯೋಧನನ ಮಹಾರಾಣಿಯಾದ ಭಾನುಮತಿಯು ಅಳುತ್ತಲೂ ಅರಚುತ್ತಲೂ ಬಂದು ಧರ್ಮರಾಯನ ಕಾಲಿನ ಮೇಲೆ ಕವಿದು ಬಿದ್ದಳು. ಭೀಷ್ಮ, ದ್ರೋಣ, ಕರ್ಣರಂತಹ ವೀರರಿದ್ದರೂ ಅಸಹಾಯಕಳಾದ ಭಾನುಮತಿ ಧರ್ಮರಾಯನಲ್ಲಿಗೆ ಬಂದು ತನ್ನ ಪತಿಯನ್ನು ರಕ್ಷಿಸಿ ಕೊಡುವಂತೆ ಬೇಡಿಕೊಳ್ಳುತ್ತಾಳೆ. ಅಲ್ಲದೆ

"ನೋಂತರ ಪಗೆವರನಟ್ಟಿಜಿ
ದಂತಾಯ್ತೆಂದಿರದೆ ಪುರುಷಕಾರದ ಪೆಂಪಂ ।
ಚಿಂತಿಸಿ ತರಿಸಿ ಮಹೀಶನ
ನೆಂತಪ್ಪೊಡಮೆನಗೆ ಪುರುಷ ಭಿಕ್ಷಮನಿಕ್ಕಿಂ"[೨೫೨]

ತಾನೇ ಕೊಲ್ಲಬೇಕು ಎಂದು ವ್ರತವನ್ನು ಕೈಗೊಂಡಿದ್ದವರ ಹಗೆಯನ್ನು ಎತ್ತು ಇರಿದ ಹಾಗಾಯ್ತು ಎಂದು ಸುಮ್ಮನಿರದೆ ಪುರುಷಕಾರದ ಪೆಂಪನ್ನು ಯೋಚಿಸಿ ಹೇಗಾದರೂ ಮಹಾರಾಜನನ್ನು ತರಿಸಿ ನನಗೆ ಪುರುಷ ಭಿಕ್ಷೆಯನ್ನು ಕೊಡಿ ಎಂದು ಭಾನುಮತಿ ಧರ್ಮರಾಯನಲ್ಲಿ ಪುಯ್ಯಲಿಡುತ್ತಾಳೆ. ತನ್ನ ಪತಿಗಾಗಿ ಭಾನುಮತಿ ಇಲ್ಲಿ ದುಃಖಿಸುತ್ತಿದ್ದಾಳೆ. ದುರ್ಯೋಧನನನ್ನು ಕುರಿತು ಚರ್ಚಿಸುವಾಗ

ಪಂಪ ಭಾನುಮತಿಯ ಮೂಲಕ 'ಪುರುಷಕಾರದ ಪೆಂಪಂ ಚಿಂತಿಸಿ' ಹಾಗೂ 'ಪುರುಷ ಭಿಕ್ಷಮನಿಕ್ಕಿಂ' ಎಂಬ ಪದಗಳನ್ನು ಬಳಸಿದ್ದಾನೆ. 'ಪುರುಷ' ಎಂದರೆ "ಪರಾಕ್ರಮಿ, ಗಂಡುಗಲಿ"[೨೫೩] ಎಂಬ ಅರ್ಥಗಳಿವೆ. ಜೊತೆಗೆ ದುರ್ಯೋಧನನು ಯಾರಿಂದಲೂ ಗೆಲ್ಲಲು ಅಸಾಧ್ಯನಾದವನು. ಅಂತಹವನನ್ನು ಕವಿ ಶೌರ್ಯವಂತ ಪೌರುಷವಂತನೆಂದು ಕರೆದಿರುವುದು ಅತ್ಯಂತ ಧ್ವನಿಪೂರ್ಣವಾಗಿದೆ. ಏಕೆಂದರೆ ಭಾನುಮತಿ ಧರ್ಮರಾಯನಲ್ಲಿ 'ಪತಿಭಿಕ್ಷಮನಿಕ್ಕಿಂ' ಎಂದು ಕೇಳಬಹುದಿತ್ತು. ಆದರೆ ಈಕೆ ಅದರ ಬದಲು 'ಪುರುಷ ಭಿಕ್ಷಮನಿಕ್ಕಿಂ' ಎಂದು ಕೇಳಿಕೊಳ್ಳುತ್ತಾಳೆ. ಅಂದರೆ ಯಾರಿಂದಲೂ ಜಯಿಸಲಾಗದಂತಹ ಪೌರುಷವಂತನಾದ ದುರ್ಯೋಧನ ಇಂದು ಚಿತ್ರಾಂಗದನೆಂಬ ಗಂಧರ್ವನಿಂದ ಸೋಲನ್ನು ಅನುಭವಿಸಿದ್ದಾನೆ. ಅಂತಹವನನ್ನು ರಕ್ಷಿಸಿಕೊಡಿ ಎಂದು ಕೇಳಿಕೊಳ್ಳುತ್ತಿದ್ದಾಳೆ. ಇಲ್ಲಿ ದುರ್ಯೋಧನ ಎಷ್ಟೇ ಕೆಟ್ಟ ಕೆಲಸಗಳನ್ನು ಮಾಡಿದ್ದರೂ ಸಹ ಭಾನುಮತಿ ತನ್ನ ಗಂಡನ ಅಪಹರಣಕ್ಕಾಗಿ ದುಃಖಿಸುತ್ತಾಳೆ.

ಇಲ್ಲಿ ಗಮನಿಸುವ ಮತ್ತೊಂದು ಅಂಶವೆಂದರೆ ಸಹೋದರ ಸಂಬಂಧವನ್ನು ಮುಂದಿಟ್ಟು ಅನುಕಂಪ ಬಯಸುವುದಿಲ್ಲ. ಒಬ್ಬ ರಾಣಿಯಾದ ಭಾನುಮತಿ ತನ್ನ ಪೌರುಷವಂತ ಪತಿಯ ಉಳಿವಿಗಾಗಿ ವೈರಿಗಳೆಂದು ಪರಿಗಣಿಸಿದ್ದ ಪಾಂಡವರಲ್ಲಿ ಹೋಗಿ ಬೇಡುವುದನ್ನು ಗಮನಿಸಿದರೆ ಸ್ತ್ರೀ ತನ್ನ ಪತಿಯ ಉಳಿವಿಗಾಗಿ ಎಂತಹವರನ್ನಾದರೂ ಬೇಡಲು ಸಿದ್ಧಳಿರುತ್ತಾಳೆಂಬುದು ತಿಳಿಯುತ್ತದೆ.

'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ಹೆಚ್ಚು ಚರ್ಚೆಗೆ ಗ್ರಾಸವಾಗಿರುವ 'ಭಾನುಮತಿಯ ನೆತ್ತ'ದ ಸನ್ನಿವೇಶವು ಭಾನುಮತಿಯ ಸಂಘರ್ಷದ ಮತ್ತೊಂದು ಆಯಾಮವನ್ನು ನಮ್ಮ ಗಮನಕ್ಕೆ ತರುತ್ತದೆ.

> "ನೆತ್ತಮನಾಡಿ ಭಾನುಮತಿ ಸೋಲ್ತೊಡೆ ಸೋಲಮನೀವುದೆಂದು ಕಾ
> ಡುತ್ತಿರೆ ಲಂಬಣಂ ಪಜೆಯೆ ಮುತ್ತಿನ ಕೇಡನೆ ನೋಡಿ ನೋಡಿ ಬ
> ಳ್ಕುತ್ತಿರೆಯೇವಮಿಲ್ಲದಿವನಾಯ್ದುವೊ ತಪ್ಪದೆ ಪೇಟಿಮೆಂಬ ಭೂ
> ಪೋತ್ತಮನಂ ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೇ"[೨೫೪]

'ಪಂಪಭಾರತ'ದಲ್ಲಿ ಬಹು ಚರ್ಚಿತವಾದ ಈ ಪದ್ಯವು ಹಲವು ಚರ್ಚೆಗಳಿಗೆ ಎಡೆ ಮಾಡಿಕೊಟ್ಟಿದೆ. ಈ ಪದ್ಯದಲ್ಲಿ ತನ್ನ ಅಭಿಪ್ರಾಯಗಳನ್ನು ಕರ್ಣನು ಕೃಷ್ಣನಿಗೆ ಹೇಳುತ್ತಿದ್ದರೂ ಕೂಡ, ಇಲ್ಲಿ ಮುಖ್ಯವಾಗಿ ಆ ಸಂದರ್ಭದಲ್ಲಿನ ಭಾನುಮತಿಯ ಮನಸ್ಸಿನ ಸಂಘರ್ಷವನ್ನು ಪ್ರಧಾನವಾಗಿ ಗಮನಿಸಲು ಪ್ರಯತ್ನಿಸಲಾಗಿದೆ. ಭಾನುಮತಿಯೊಂದಿಗೆ ಕರ್ಣನು ಪಗಡೆಯಾಡಿದನೋ ಅಥವಾ ದುರ್ಯೋಧನನು ಪಗಡೆಯಾಡಿದನೋ ಎಂಬ ಅಂಶವನ್ನು ಕುರಿತು ಹಲವು ಜನ ವಿದ್ವಾಂಸರು ಸುದೀರ್ಘವಾಗಿ ಚರ್ಚಿಸಿ ತಮ್ಮ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಅವುಗಳ ವಿಚಾರಗಳೇನೇ ಇದ್ದರೂ ಇಲ್ಲಿ ಸೂಕ್ಷ್ಮವಾಗಿ ಪರಿಶೀಲಿಸಿದರೆ ಭಾನುಮತಿಯೊಂದಿಗೆ ನೆತ್ತವನಾಡಿದವನು ಕರ್ಣನೆಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಪಂಪ ಆ ಸಂದರ್ಭವನ್ನು ಕುರಿತು ವಿವರಿಸುವಾಗ

ನೆತ್ತಮನಾಡಿ ಭಾನುಮತಿಯು ಸೋತು ಎದ್ದು ಹೋಗಲು ಪಣವನ್ನು ಕೊಟ್ಟು ಹೋಗು ಎಂದು ಹಿಂಸಿಸುತ್ತಿರಲು ಮುತ್ತಿನಹಾರವು ಕಿತ್ತುಹೋಯಿತು. ತನ್ನ ಮುತ್ತಿನ ಕೇಡನ್ನೇ ನೋಡುತ್ತ ನಡುಗುತ್ತಿದ್ದಳು ಭಾನುಮತಿ ಎಂಬ ಮಾತನ್ನು ಪಂಪ ಬಳಸಿದ್ದಾನೆ.

ಇಲ್ಲಿ ದುರ್ಯೋಧನನೊಡನೆ ನೆತ್ತವನಾಡಿ ಮುತ್ತಿನ ಹಾರವನ್ನು ಸೋತು ಹಾಗೂ ಆ ಮುತ್ತಿನ ಹಾರವು ಕಿತ್ತು ಹೋದದ್ದಕ್ಕಾಗಿ ಭಯದಿಂದ ಅಥವಾ ದುಃಖದಿಂದ ನಡುಗುವ ಅಗತ್ಯವಿಲ್ಲ. ಏಕೆಂದರೆ ಒಬ್ಬ ಮಹಾರಾಣಿಗೆ ಒಂದು ಮುತ್ತಿನ ಹಾರ ಕಿತ್ತು ಹೋದರೆ ಅಂತಹ ನಷ್ಟವಿಲ್ಲ. ಆದರೆ ಇಲ್ಲಿ ಕೆಲವು ಒಳ ಸೂಕ್ಷ್ಮಗಳಿರುವುದನ್ನು ಗಮನಿಸುವಂತಹದ್ದು. ಕರ್ಣನೊಡನೆ ನೆತ್ತವನಾಡುವಾಗ ಮುತ್ತಿನ ಸರ ಹರಿದು ಮುತ್ತುಗಳೆಲ್ಲ ಚೆಲ್ಲಾಪಿಲ್ಲಿಯಾದ ಆ ಸಂದರ್ಭವನ್ನು ದುರ್ಯೋಧನ ಹೇಗೆ ಗ್ರಹಿಸಬಹುದು ಅಥವಾ ಹೇಗೆ ಅರ್ಥೈಸಿಕೊಳ್ಳಬಹುದು ಎಂಬ ಆತಂಕದ ಛಾಯೆಗಳು ಭಾನುಮತಿಯಲ್ಲಿ ಮೂಡಿ ಆಕೆ ಆ ರೀತಿ ನಡುಗುತ್ತ ನಿಂತ ಸನ್ನಿವೇಶ ನಮಗೆ ತಿಳಿಯುತ್ತದೆ. ಅಂದರೆ ಇಲ್ಲಿ ಭಾನುಮತಿಯ ಮನದಲ್ಲಿ ಮೂಡುವ ಆತಂಕ ಹಾಗೂ ತಲ್ಲಣದ ಭಾವಗಳನ್ನು ನಾವು ಗಂಭೀರವಾಗಿ ನೋಡಬೇಕಾದ್ದು ಬಹುಮುಖ್ಯವಾದ ಸಂಗತಿ. ವಿವಾಹಿತ ಮಹಿಳೆ ಪರಪುರುಷನೊಟ್ಟಿಗಿನ ಸಲುಗೆಯನ್ನು ಪುರುಷ ಪ್ರಧಾನ ಸಮಾಜ ಮತ್ತು ಮುಖ್ಯವಾಗಿ ತನ್ನ ಪತಿ ಹೇಗೆ ಸ್ವೀಕರಿಸುತ್ತಾನೋ ಎಂಬ ಭಯ ಆ ಸ್ತ್ರೀಯಲ್ಲಿ ಕಾಣುವುದು ಸಹಜ. ಅಂದರೆ ಆ ಸಂದರ್ಭದಲ್ಲಿನ ಸಂಬಂಧಗಳನ್ನು ಹೇಗೆ ಅರ್ಥೈಸಿಕೊಳ್ಳುವನೋ ಎಂಬ ಭಾವದ ಆತಂಕಗಳು ಇಲ್ಲಿ ಭಾನುಮತಿಯ ಮನದಲ್ಲಿ ಮೂಡಿರುವಂತೆ ಕಂಡುಬರುತ್ತದೆ.

"ಮುತ್ತಿನಹಾರ ಕಿತ್ತು ಹೋಯಿತಲ್ಲಾ ಎಂದು ಭಾನುಮತಿಗೆ ವ್ಯಥೆಯಾಗಿದ್ದು ಆ ವ್ಯಥೆಯಲ್ಲಿ ದುರ್ಯೋಧನನು ಭಾಗಿಯಾಗಿದ್ದರೆ, ಅದನ್ನು ಮಾತಿನಲ್ಲಿ ಮುಗಿಸುತ್ತಿರಲಿಲ್ಲ ಎತ್ತಿಕೊಡುತ್ತಿದ್ದನು. ಬರಿಯ ಪ್ರಶ್ನೆಯಿಂದ ಭಾನುಮತಿಗೆ ಸೋಲಿನಿಂದಾದ ಕಿಂಕೃತಿ ಹೆಚ್ಚಾಗುತ್ತಿದ್ದದ್ದೇ ಸಂಭವ; ಕರ್ಣ ಹೀಗೆ ಮಾತನಾಡದೆ ಕೂಡಲೇ ಆರಿಸಿಕೊಡಲು ಪ್ರವರ್ತಿಸಿದ್ದರಿಂದಲೇ ದುರ್ಯೋಧನನು ಅವನನ್ನು ಪ್ರಶ್ನಿಸಿರಬೇಕು. ಹೀಗೆ ಈ ಪ್ರಶ್ನೆ ದುರ್ಯೋಧನನಿಂದಲೇ ಬಂದದ್ದು; ಮತ್ತು ಅವನು ಭಾನುಮತಿ ಕರ್ಣ ಇಬ್ಬರನ್ನೂ ಕೇಳಿದ್ದಾನೆ – ಆದ್ದರಿಂದಲೇ 'ಪೇಟೆಂ' ಎಂಬ ಬಹುವಚನ ಪ್ರಯೋಗ. ಇದೇನು ಪ್ರಮಾದವಲ್ಲ ಎಂದು ಇಬ್ಬರಿಗೂ ಸಮಾಧಾನ – ಹೆಂಡತಿಗಿಂತಲೂ ಸ್ನೇಹಿತನಿಗೆ ಸಮಾಧಾನ. ಭಾನುಮತಿ ಬಳ್ಕಿದ್ದು, ಗಂಡನೆದುರಿನಲ್ಲಿ ನಾನೂ ಕರ್ಣನೂ ಇಷ್ಟು ಸಲಿಗೆಯಿಂದಿದ್ದೆವಲ್ಲಾ, ಗಂಡ ಏನು ತಿಳಿದುಕೊಂಡಾನೋ! – ಎಂದೇ"[೨೫೫] ಎಂಬ ಎ.ಆರ್.ಕೃಷ್ಣಶಾಸ್ತ್ರಿ ಅವರ ಮಾತುಗಳು ನೆತ್ತದ ಸಂದರ್ಭದಲ್ಲಿನ ಭಾನುಮತಿಯ ಮನದಲ್ಲಿನ ತಾಕಲಾಟಗಳನ್ನು ತಿಳಿಸಿಕೊಡುತ್ತವೆ. ಅಲ್ಲದೆ ಇಲ್ಲಿ ಭಾನುಮತಿಯ ಆತಂಕಕ್ಕೆ ಕಾರಣ ತನ್ನ ಕೊರಳಲ್ಲಿನ ಮುತ್ತಿನ ಹಾರ ಕಿತ್ತು ಹೋಗಿದ್ದಕ್ಕಿಂತ ತನ್ನ ಪತಿಯು ತನ್ನ ಹಾಗೂ ಕರ್ಣನ ಸಂಬಂಧಗಳನ್ನು ಹೇಗೆ ಅರ್ಥೈಸಿಕೊಳ್ಳುವನೋ ಎಂಬ ಅಳುಕಿನ ಸಂಗತಿಗಳನ್ನೂ ಸಹ ತಿಳಿಸಿಕೊಡುತ್ತವೆ.

ನೆತ್ತದ ಪ್ರಸಂಗವು ಕುಮಾರವ್ಯಾಸನಲ್ಲಿಲ್ಲ. ಉಳಿದಂತೆ ದುರ್ಯೋಧನನ ಅಪಹರಣದ ಸಂದರ್ಭದ ಸಂಘರ್ಷಗಳನ್ನು ಕುಮಾರವ್ಯಾಸನು ಪಂಪನಿಗಿಂತ ವಿಸ್ತಾರವಾಗಿ ವರ್ಣಿಸಿದ್ದಾನೆ. ಅರಣ್ಯ ವಾಸದಲ್ಲಿರುವ ಪಾಂಡವರಿಗೆ ತನ್ನ ವೈಭವವನ್ನು ಪ್ರದರ್ಶಿಸಲು ಬಂದ ದುರ್ಯೋಧನನನ್ನು ಗಂಧರ್ವನು ಅಪಹರಿಸುತ್ತಾನೆ. ಈ ಸಂದರ್ಭ ಪ್ರಮುಖವಾದುದು. ದುರ್ಯೋಧನನಂತಹ ಪರಾಕ್ರಮಿ ಗಂಧರ್ವರಿಂದ ಅಪಹರಣಕ್ಕೊಳಗಾಗುವುದು, ಅದೂ ಭೀಷ್ಮ, ದ್ರೋಣ, ಕರ್ಣರು ಜೊತೆಗಿರುವಾಗ ಎಂಬುದನ್ನು ಗಮನಿಸಬೇಕು.

ಗಂಧರ್ವನು ದುರ್ಯೋಧನ ದುಶ್ಯಾಸನರಿಬ್ಬರನ್ನು ಅಪಹರಿಸಲು ಇತ್ತ ಕುರುಭೂಪಾಲಕನ ಅರಸರು ಅಳುತ್ತ ಬಿಟ್ಟಮಂಡೆಯಲ್ಲಿ ನಡೆದು ಬಂದರು.

"ಕುರುಪತಿಯ ದುಶ್ಯಾಸನಾದಿಗಳ
ಳರಸಿಯರು ಭಟ ಭಟರೊಳೊದರಿದ
ರರಸನುಪಹತಿಗೊಪ್ಪುಗೊಟ್ಟರೆ ಕರ್ಣ ಶಕುನಿಗಳು
ಗುರು ನದೀಸುತರಿದ್ದರೀ ಪರಿ
ಪರಿಭವಕೆ ಪಾಡಹುದೆ ಪಾಂಡವ
ರರಸನಿಹ ವನವಾವುದೆಂದರಸಿದಳು ಭಾನುಮತಿ"[೨೫೭]

ಕುರುಪತಿಯ ಹಾಗೂ ದುಶ್ಯಾಸನಾದಿಗಳ ಅರಸಿಯರು ಕರ್ಣ ಶಕುನಿಗಳು ಅರಸನನ್ನು ಆಪತ್ತಿಗೆ ಒಪ್ಪಿಸಿಕೊಟ್ಟರೇ ಎಂದು ಬಹಳವಾಗಿ ನೊಂದು ಮತ್ತೆ ಮತ್ತೆ ಒದರುತ್ತಿದ್ದರು. ಗುರು ನದೀಸುತರಿದ್ದರೂ ಸಹ ಈ ಪರಿಭವಕ್ಕೆ ಅವಕಾಶವಾಯಿತೆ? ಪಾಂಡವರರಸನಿರುವ ವನ ಯಾವುದು? ಎಂದು ಭಾನುಮತಿಯು ಅರಸಿದಳು. ಇಲ್ಲಿ ಕವಿ ಭಾನುಮತಿಯ ಮೂಲಕ ಕೇಳಿಸುವ ಪ್ರಶ್ನೆ ಗಮನಿಸುವಂತಹದ್ದು. ದ್ರೋಣ, ಭೀಷ್ಮರಂತಹ ಪರಾಕ್ರಮಿಗಳಿದ್ದರೂ ದುರ್ಯೋಧನಾದಿಗಳನ್ನು ರಕ್ಷಿಸಿಕೊಳ್ಳಲಾಗಲಿಲ್ಲವಲ್ಲ ಎಂಬ ದುಃಖ ಭಾನುಮತಿಯಲ್ಲಿದೆ.

"ಅರಸಿಯರು ಸಖಿಯರು ಕುಮಾರಕ
ರರಸನನುಜರ ಹೆಂಡಿರನಿಬರು
ವೆರಸಿ ಬಂದಳು ಭಾನುಮತಿ ಯಮತನುಜನಾಶ್ರಮಕೆ
ಕರುಣಿ ರಕ್ಷಿಸು ಸೋಮ ವಂಶೋ
ದ್ಧರಣ ರಕ್ಷಿಸು ಸತ್ಯ ಧರ್ಮದ
ಸಿರಿಯೆ ರಕ್ಷಿಸೆನುತ್ತ ಧೊಪ್ಪನೆ ಬಿದ್ದಳಂಘ್ರಿಯಲಿ"[೨೫೮]

ಅರಸಿಯರು, ಸಖಿಯರು, ಕುಮಾರರು, ಅರಸನ ಅನುಜರ ಹೆಂಡತಿಯರೆಲ್ಲರನ್ನೂ ಜೊತೆಗೂಡಿಕೊಂಡು ಭಾನುಮತಿಯು ಯಮತನುಜನ ಆಶ್ರಮಕ್ಕೆ ಬಂದಳು. 'ಕರುಣಿ ನಮ್ಮನ್ನು ರಕ್ಷಿಸು. ಸೋಮ ವಂಶೋದ್ಧರಣ ರಕ್ಷಿಸು, ಸತ್ಯಧರ್ಮದ ಸಿರಿಯೇ ರಕ್ಷಿಸು' ಎನ್ನುತ್ತ ಆತನ ಪಾದಗಳಲ್ಲಿ ಧೊಪ್ಪನೆ ಬಿದ್ದಳು.

"ನಾದಿದಳು ನೃಪನಂಘ್ರಿಯನು ನಯ
ನೋದಕದ ಧಾರೆಯಲಿ ಭಾಳವ
ತೇದು ತಿಲಕದ ಗಂಧದಲಿ ಬೈತಲೆಯ ಮುತ್ತುಗಳ
ಆದರಿಸಿ ನವ ಕುಸುಮದಲಿ ಘನ
ರೋದನ ಧ್ವನಿ ಮಂತ್ರದಲಿ ನೃಪ
ಪಾದ ಪೂಜೆಯ ರಚಿಸುವವೊಲೊಪ್ಪಿದಳು ಭಾನುಮತಿ"[೨೫೮]

ತನ್ನ ಕಣ್ಣೀರಿನ ಧಾರೆಯಲ್ಲಿ ಆತನ ಅಂಘ್ರಿಯನ್ನು ನಾದಿದಳು; ಹಣೆಯನ್ನು ತೇದು ತಿಲಕದ ಗಂಧವನ್ನು ತೊಡೆದಳು. ಬೈತಲೆಯ ಮುತ್ತುಗಳನ್ನೂ, ನವ ಕುಸುಮಗಳನ್ನು ಅರ್ಪಿಸಿದಳು. ಘನರೋದನ ಧ್ವನಿಯ ಮಂತ್ರದಲ್ಲಿ ನೃಪನ ಪಾದ ಪೂಜೆಯನ್ನು ಮಾಡುತ್ತಿರುವಳೋ ಎನ್ನುವಂತೆ ತೋರಿದಳು ಭಾನುಮತಿ.

"ಖಳರು ಕೌರವರಿಂದು ಸಜ್ಜನ
ಕುಲ ಶಿರೋಮಣಿ ನೀನು ಕರುಣಾ
ಜಲಧಿ ನಿನಗಪರಾಧಿಗಳು ನಾವಹೆವು ಜಗವರಿಯೆ
ಹುಳಿಗೆ ಹಾಲಳುಕಿದರೆ ಹಾಲಿನ
ಜಲಧಿ ಕೆಡುವುದೆ ಜೀಯ ನಿನ್ನವ
ರೆಳಸಿ ಕೊಂಡರು ಕಾಯಬೇಕೆಂದೊರಲಿದಳು ತರಳೆ"[೨೫೯]

ಭಾನುಮತಿ ಇಲ್ಲಿ ದುರ್ಯೋಧನಾದಿಗಳ ತಪ್ಪುಗಳನ್ನು ಹಾಗೂ ಆತ ಪಾಂಡವರಿಗೆ ಮಾಡಿದ ಅನ್ಯಾಯಗಳನ್ನು ನಿರ್ಭಯವಾಗಿ ಧರ್ಮರಾಯನಲ್ಲಿ ಅಭಿವ್ಯಕ್ತಿಪಡಿಸುತ್ತಾಳೆ. ಕೌರವರು ಖಳರು, ನೀನು ಸಜ್ಜನ ಶಿರೋಮಣಿ. ಕರುಣೆಯ ಆಗರ, ಲೋಕಕ್ಕೇ ತಿಳಿದಿರುವಂತೆ ನಿನಗೆ ಅನ್ಯಾಯ ಮಾಡಿ ಅಪರಾಧಿಗಳಾಗಿದ್ದೇವೆ ನಾವು. ಹುಳಿಗೆ ಹಾಲು ಅಳುಕಿದರೆ ಹಾಲಿನ ಸಮುದ್ರವು ಕೆಡುತ್ತದೆಯೇ? ಒಡೆಯಾ, ನಿನ್ನವರು ಶತ್ರುಗಳಿಂದ ಎಳಸಿಕೊಂಡರು. ಅವರನ್ನು ಕಾಯಬೇಕೆಂದು ಪ್ರಾರ್ಥಿಸುತ್ತ ಒರಲಿದಳು. ನನ್ನ ಪತಿಯನ್ನು ಕಾಪಾಡುವಂತೆ ನಿನ್ನಯ ಪತಿಗಳಿಗೆ ತಿಳಿಸು ಎಂದು ದ್ರೌಪದಿಗೆ ಹೇಳುತ್ತ, ನಿನ್ನ ಮೈದುನನಾದ ಕುರುಪತಿ ನೋಯಿಸಿದ್ದರು ಸಹ ಸಿರಿಖಂಡ ತನ್ನ ಗುಣ ವಿಸ್ತಾರವನ್ನು ಬಿಡದ ಹಾಗೆ, ನೀವೇ ನನ್ನ ಪತಿಯನ್ನು ಕಾಯಬೇಕೆಂದು ಬೇಡಿಕೊಳ್ಳುತ್ತಾಳೆ. ಇಲ್ಲಿ ಒಬ್ಬ ಸಾಮಾನ್ಯ ಹೆಣ್ಣು ಮಗಳಂತೆ ಭಾನುಮತಿ ತನ್ನ ಪತಿಯನ್ನು ಉಳಿಸಿಕೊಡುವಂತೆ ಧರ್ಮರಾಯನಲ್ಲಿ ಅಂಗಲಾಚುತ್ತಾಳೆ.

ಭಾನುಮತಿಯ ಗೋಳನ್ನು ಕೇಳಿ ಧರ್ಮರಾಯನಿಗೆ ದುಃಖ ಉಮ್ಮಳಿಸಿತು. ಆಕೆಗೆ ಅಭಯವನ್ನಿತ್ತು, ದುರ್ಯೋಧನನ್ನು ಬಿಡಿಸಿ ಕರೆತರುವಂತೆ ಭೀಮನಿಗೆ ಹೇಳಲು ಆತ ನಿರಾಕರಿಸುತ್ತಾನೆ. ನಂತರ ಅರ್ಜುನ ಅಣ್ಣನ ಆಣತಿಯಂತೆ ದುರ್ಯೋಧನನನ್ನು ರಕ್ಷಿಸಿ ಕರೆತರುತ್ತಾನೆ. ನಂತರ ಅರ್ಜುನ ಆತನನ್ನು ಕುಟುಕಿದ ನಂತರ ಧರ್ಮರಾಯನಿಗೆ

"ಭಾನುಮತಿ ಕೈ ಮುಗಿದಳೀ ಕ
ರ್ಣಾನುಗತ ತಾಟಂಕ ಮುದ್ರೆಯ
ನೀನೆಲೈ ದಯೆಗೈದೆಯೆಂದೆರಗಿದಳು ಚರಣದಲಿ"[೨೬೦]

ಈ ಕಿವಿಯ ತಾಟಂಕ ಮುದ್ರೆಯನ್ನು ನೀನೇ ದಯಪಾಲಿಸಿದೆ ಎಂದು ಅವನ ಪಾದಗಳಿಗೆ ನಮಸ್ಕರಿಸಿದಳು. ಅಲ್ಲಿಂದ ಹೊರಟು ಅರಮನೆಯನ್ನು ಸೇರಿ ತನ್ನ ಬೇಹಿನವರಿಗೆ ಯಾರನ್ನೂ ಒಳಹೋಗಿಸಬೇಡ, ಕರ್ಣಾದಿಗಳನ್ನು ಬಿಡಬೇಡ ಎಂದು ಕಾವಲಿಗೆ ನೇಮಿಸಿ ದುರ್ಯೋಧನನಲ್ಲಿಗೆ ಬಂದು ಈ ರೀತಿಯಾಗಿ ಹೇಳುತ್ತಾಳೆ. ಇಲ್ಲಿ ದುರ್ಯೋಧನನ ಮನಃಪರಿವರ್ತಿಸಲು ಪ್ರಯತ್ನಿಸುವ ಜೊತೆಗೆ ಅವನ ತಪ್ಪುಗಳನ್ನು ನೇರಾ ನೇರ ವಿಮರ್ಶೆಯ ಒರೆಗಲ್ಲಿಗೆ ಹಚ್ಚುತ್ತಾಳೆ. ಪಂಪನ ಭಾನುಮತಿಗಿಂತ ಕುಮಾರವ್ಯಾಸನ ಭಾನುಮತಿ ಸ್ವಲ್ಪ ಗಟ್ಟಿಗಳಂತೆ ಕಾಣುತ್ತಾಳೆ. ದುರ್ಯೋಧನನನ್ನು ಪ್ರತಿಭಟಿಸುವ ಗುಣವಿದೆ ಇವಳಲ್ಲಿ.

"ಏನು ದಿಟ ಸಂಕಲ್ಪವಿನಿತಕೆ
ನಾನು ಹೊರಗೇ ಹೊಗುವವೇಳು ಕೃ
ಶಾನುವನು ಬೀಳುವೆವು ನಡೆ ಭಾಗೀರಥೀ ಮಡುವ
ಮಾನನಿಧಿಯೇ ವಿವಿಧ ಗರಳ ವಿ
ತಾನವನು ತರಿಸುವೆನು ನಿಶ್ಚಯ
ವೇನು ನಿರಶನ ಮರಣವೇಕೆಂದಳು ಸರೋಜಮುಖಿ"[೨೬೧]

ಏನು ನಿನ್ನಯ ದಿಟ ಸಂಕಲ್ಪ? ಇಷ್ಟಕ್ಕೆ ನಾನು ಹೊರಗೇನು? ಬೆಂಕಿಗೆ ಬೀಳೋಣ ಏಳು? ಭಾಗೀರಥಿಯ ಮಡುವಿಗೆ ಬೀಳೋಣ, ನಡೆ. ಮಾನನಿಧಿಯೇ ಬಗೆಬಗೆಯ ವಿತಾನ (ವಿಷ)ಗಳನ್ನು ಬೇಕಾದರೆ ತರಿಸುತ್ತೇನೆ. ಏನು ನಿಶ್ಚಯ? ನಿರಶನ ಮರಣವೇತಕ್ಕೆ? ಎಂದು ಕೇಳಿದಳು. ಇಲ್ಲಿ ಭಾನುಮತಿಯ ಮಾತುಗಳಲ್ಲಿ ಕೊಂಕಿನ, ಕಟಕಿಯ ಭಾವಗಳಿದ್ದು, ಆತನ ತಪ್ಪುಗಳ ಆತ್ಮಾವಲೋಕನವನ್ನು ಮಾಡಿಸಲು ಪ್ರಯತ್ನಿಸುವಂತೆ ಕಂಡುಬರುತ್ತದೆ.

ಪ್ರಾಯೋಪವೇಷದಲ್ಲಿ ತನ್ನ ದೇಹವನ್ನು ಪರಿಹರಿಸುತ್ತೇನೆಂದು ದುರ್ಯೋಧನನು ನುಡಿಯಲು ಭಾನುಮತಿಯು

"ಈ ನಿರಾಹಾರವು ನಿರರ್ಥಕ
ವೇನನೆಂಬೆನು ಜೀಯ ಮುರಿದಭಿ
ಮಾನ ಬೆಸುವುದೆ ಬಣ್ಣವಳಿವುದೆ ಬಂದ ದುರಿಯಶದ
ಆ ನದೀಸುತ ವಿದುರರೆಂದುದ
ನೀನುಪೇಕ್ಷಿಸಿ ಕಳೆವೆ ಹೆಂಗಸು
ನೀನರಿಯೆಯೆನಬೇಡ ಚಿತ್ತೈಸೊಂದು ಬಿನ್ನಪವ"[೨೬೨]

ಈ ನಿರಾಹಾರವು ನಿರರ್ಥಕವಾದುದು. ಒಡೆಯಾ ನಾನೇನನ್ನು ಹೇಳಲಿ? ಮುರಿದ ಅಭಿಮಾನವು ಮತ್ತೆ ಬೆಸೆಯುತ್ತದೆಯೇ? ಬಂದ ದುರ್ಯಶದ ಬಣ್ಣವು ಅಳಿಯುತ್ತದೆಯೇ? ಆ ಭೀಷ್ಮ ವಿದುರರು ಹೇಳಿದ ಮಾತುಗಳನ್ನೆಲ್ಲವನ್ನು ಉಪೇಕ್ಷಿಸಿ ಬಿಟ್ಟುಬಿಡುತ್ತೀಯೆ. ಹೆಂಗಸು ನೀನು ಅರಿಯೆ ಎನ್ನಬೇಡ, ಚಿತ್ತೈಸು. ನನ್ನ ಈ ಒಂದು ಬಿನ್ನಪವನ್ನು ಕೇಳು ಎಂದು ಹೇಳುತ್ತಾಳೆ. ಪತಿಯ ಹಠಮಾರಿತನವನ್ನು ಅರಿತವಳಾದ್ದರಿಂದ ಬಿನ್ನವಿಸುವ ರೀತಿಯಲ್ಲಿ ಸರಿದಾರಿಗೆ ತರಲು ಪ್ರಯತ್ನಿಸುತ್ತಾಳೆ. ಇಲ್ಲಿ ಕುಮಾರವ್ಯಾಸ ಬಳಸಿರುವ 'ಹೆಂಗಸು ನೀನರಿಯೆಯೆನಬೇಡ' ಎಂಬ ಮಾತು ಇಲ್ಲಿಯವರೆಗೂ ಪ್ರಭುತ್ವ ಹಾಗೂ ಪುರುಷ ಪ್ರಧಾನ ಸಮಾಜ ಅಂದುಕೊಂಡಿದ್ದ ಹೆಣ್ಣಿಗೆ ಏನೂ ತಿಳಿದಿಲ್ಲ ಹಾಗೂ ಆಕೆಗೆ ಅರಿವಿನ ಶಕ್ತಿ ಇಲ್ಲ ಎಂಬ ಪರಂಪರಾನುಗತ ಚಿಂತನೆಯನ್ನು ತಿಳಿಸುವ ಜೊತೆಗೆ ಆ ಚಿಂತನೆಯನ್ನು ಭಂಜಿಸುವುದು ತಿಳಿಯುತ್ತದೆ. ಅಲ್ಲದೆ ಭಾನುಮತಿ ತಾನು ಆ ರೀತಿಯಲ್ಲ, ತನಗೂ ಇಲ್ಲಿ ನಡೆದಿರುವ ಹಿಂದಿನ ವಿದ್ಯಮಾನಗಳ ಅರಿವಿದೆ ಎಂಬುದನ್ನು ಪರೋಕ್ಷವಾಗಿ ಆತನಿಗೆ ಮನದಟ್ಟು ಮಾಡಿಕೊಡಲು ಪ್ರಯತ್ನಿಸುತ್ತಾಳೆ.

ಇಲ್ಲಿ ದುರ್ಯೋಧನನನ್ನು ಕುರಿತು ಸಂಬೋಧಿಸುವಾಗ ಭಾನುಮತಿಯು 'ಜೀಯಾ' ಎಂಬ ಪದವನ್ನು ಬಳಸುತ್ತಾಳೆ. ಒಬ್ಬಳು ಮಹಾರಾಣಿಯಾಗಿ, ಪತ್ನಿಯಾಗಿ ಗೌರವದ ಸ್ಥಾನಮಾನಗಳಿದ್ದರೂ ಸಹ ಭಾನುಮತಿ ಬಳಸುವ ಈ ಪದ ಊಳಿಗಮಾನ್ಯ ವ್ಯವಸ್ಥೆ ಹಾಗೂ ಪುರುಷ ಪ್ರಧಾನ ಸಮಾಜ, ಪ್ರಭುತ್ವಗಳ ಪ್ರಭಾವಗಳನ್ನೆ ಮನಗಾಣಿಸುತ್ತದೆ. ಎಲ್ಲರೂ ಅವರ ಅಧೀನದಲ್ಲಿಯೇ ಇರಬೇಕೆಂಬುದನ್ನು ಶ್ರುತಪಡಿಸುತ್ತದೆ.

"ತಮ್ಮ ನೆರೆ ದಟ್ಟೈಸಿ ರಣದಲಿ
ನಮ್ಮ ಬಿಡಿಸಿದರವರು ನೀವಿ
ನ್ನೆಮ್ಮ ಹಿಂದಣ ಹಳಿವ ನೋಡಿದರೆಂದು ಯಮಸುತನ
ನಮ್ಮ ನಗರಿಗೆ ಕರೆಸಿ ಧರೆಯನು
ತಮ್ಮ ಪಟ್ಟಣ ಸಹಿತ ಕೊಟ್ಟರೆ
ನಿಮ್ಮನೀಗಲು ಲೋಕ ಮೆಚ್ಚುವುದೆಂದಿಳಿಂದುಮುಖಿ"[೨೬]

ತಮ್ಮನ್ನು ಯುದ್ಧದಲ್ಲಿ ಹೆಚ್ಚುಪಡಿಸಿಕೊಂಡು ಅವರು ನಮ್ಮನ್ನು ಆಪತ್ತಿನಿಂದ ಬಿಡಿಸಿದರು. ನೀವು ಇನ್ನು ನಮ್ಮ ಹಿಂದಣ ಹಳಿವನ್ನು ನೋಡಬೇಡಿರಿ. ಧರ್ಮರಾಯನನ್ನು ನಮ್ಮ ಪಟ್ಟಣಕ್ಕೆ ಕರೆಸಿ ಧರೆಯನ್ನು ತಮ್ಮ ಪಟ್ಟಣ ಸಹಿತವಾಗಿ ಅವರಿಗೆ ಕೊಟ್ಟರೆ ಈಗಲೂ ನಿಮ್ಮನ್ನು ಲೋಕ ಮೆಚ್ಚುತ್ತದೆ. ಅಂದರೆ ಅವರ ರಾಜ್ಯವನ್ನು ಅವರಿಗೆ ಹಿಂದಿರುಗಿಸುವುದು ಒಳಿತು. ಇದರಿಂದ ನಿಮ್ಮ ಘನತೆಯೂ ಹೆಚ್ಚುತ್ತದೆ. ಅಲ್ಲದೆ ಬದಲಾಗಲಿಕ್ಕೆ ಈಗಲೂ ಅವಕಾಶವಿದೆ ಎಂಬುದನ್ನು ಆತನಿಗೆ ಅರ್ಥೈಸುವ ಪ್ರಯತ್ನವನ್ನು ಮಾಡುತ್ತಾಳೆ. ಇಲ್ಲೆಲ್ಲಾ ಅಡಗಿರುವುದು ತನ್ನ ಗಂಡನ ಹಿತ ಎಂಬುದನ್ನು ಬೇರೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ.

"ಇಲ್ಲಿನ ಭಾನುಮತಿ ಕೌರವನ ದುಷ್ಟವೃತ್ತಿಯನ್ನು ಮನಸಾ ಒಪ್ಪಿರಲಿಲ್ಲವೆಂದೆನಿಸುತ್ತದೆ. ದುರ್ಯೋಧನನು ಪ್ರಾಯೋಪವೇಶ ಮಾಡಿ ಕುಳಿತಾಗ, ಕಂಚುಕಿಯನ್ನು ನೂಕಿ, ದಿಟ್ಟತನದಿಂದ ಪ್ರವೇಶಿಸಿ ನಗುತ್ತ ಮಾತಾಡಿದಳು. 'ನಾವಿಬ್ಬರೂ ಕೂಡಿ ಬೆಂಕಿಯಲ್ಲಿ ಬೀಳೋಣ. ಭಾಗೀರಥಿಯ ಮಡುವಿನಲ್ಲಿ ಧುಮುಕೋಣ, ಅಥವಾ ವಿಷದ ಸೇವನೆಯಿಂದ ಮಡಿಯೋಣ, ನೀನಾದಂತೆ ನಾನು. ಅನಶನವ್ರತವನ್ನು ಬಿಡು' ಎಂದುದಲ್ಲದೆ, ಪಾಂಡುವರಿಗೆ ಅರ್ಧರಾಜ್ಯವನ್ನು ಕೊಡಬೇಕೆಂದೂ ಸಲಹೆಯನ್ನಿತ್ತಳು"[೨೬೪] ಎಂಬ ಮಾತುಗಳು ಭಾನುಮತಿಯ ದೃಢ ವ್ಯಕ್ತಿತ್ವವನ್ನು ತಿಳಿಸಿಕೊಡುವ ಜೊತೆಗೆ ಆಕೆಯ ಪ್ರಬುದ್ಧ ಮನಸ್ಥಿತಿಯನ್ನು ಸಹ ಮನವರಿಕೆ ಮಾಡಿಕೊಡುತ್ತವೆ.

"ಕರೆಸಿದರೆ ದಿಟ ಬಾರರವರಾ
ಧರಣಿಯನು ಕೈಕೊಂಡು ನಿಲುವರು
ವರುಷ ಹದಿಮೂರಾದಡಲ್ಲದೆ ಮೆಟ್ಟರೀ ನೆಲವ
ಅರಿಗಳುಪಟಳದಿಂದ ತಪ್ಪಿಸಿ
ಮರಳಿಚಿದ ಜೀವೋಪಕಾರಕೆ
ಕುರುಕುಲಾಗ್ರಣಿ ಲೇಸು ಮಾಡಿದನೆಂಬುದೀ ಲೋಕ"[೨೬೫]

ಕರೆಸಿದರೆ ಅವರು ದಿಟವಾಗಿ ಬರುವುದಿಲ್ಲ. ಆದರೆ ಆದರಣೆಯನ್ನು ಕೈಕೊಂಡು ನಿಲ್ಲುತ್ತಾರೆ. ಹದಿಮೂರು ವರ್ಷ ಪೂರ್ಣಗೊಳ್ಳದೆ ಅವರು ಈ ನೆಲವನ್ನು ಮೆಟ್ಟುವವರಲ್ಲ. ಶತ್ರುಗಳ ಉಪಟಳದಿಂದ ತಪ್ಪಿಸಿ ಹಿಂದಕ್ಕೆ ತಂದ ಜೀವೋಪಕಾರಕ್ಕೆ ಪ್ರತಿಯಾಗಿ ಕುರುಕುಲಾಗ್ರಣಿಯು ಒಳ್ಳೆಯದನ್ನೇ ಮಾಡಿದನು ಎನ್ನುತ್ತದೆ ಲೋಕ ಎಂದು ಆತನಿಗೆ ತಿಳುವಳಿಕೆಯನ್ನುಂಟು ಮಾಡಲು ಪ್ರಯತ್ನಿಸುತ್ತಾಳೆ.

"ನುಡಿದವಧಿ ಹದಿಮೂರು ವರುಷದ
ಹೆಡತಲೆಯನೊದೆದೆದ್ದು ನಮ್ಮಾ
ಪೊಡವಿಯರ್ಧಕೆ ಬಲೆಯ ಬೀಸದೆ ಬಿಡುವರೇ ಬಳಿಕ
ನುಡಿಯ ಸಲಿಸದ ಮುನ್ನ ನೀ ಕೊ
ಟ್ಟೊಡೆ ಕೃತಘ್ನತೆ ತಪ್ಪುವುದು ಮಿಗೆ
ನುಡಿಯಲಮ್ಮೆನು ರಾಜಕಾರ್ಯವನೆಂದಳಿಂದುಮುಖಿ"[೨೬೬]

ನಾವು ನೀಡದೆ ಸುಮ್ಮನಿದ್ದರೆ ಮಾತನಾಡಿದ ಅವಧಿ ಹದಿಮೂರು ವರ್ಷ ಮುಗಿದ ಕೂಡಲೆ ನಿರ್ಬಂಧವನ್ನೊದೆದೆದ್ದು ನಮ್ಮ ಈ ರಾಜ್ಯದರ್ಧಕ್ಕೆ ಅವರು ಬಲೆಯನ್ನು ಬೀಸದೆ ಬಿಡುತ್ತಾರೆಯೇ? ಬಳಿಕ ಅವರು ನುಡಿಯನ್ನು ಸಲ್ಲಿಸದಿರುವುದಕ್ಕೆ ಮುಂಚಿತವಾಗಿಯೇ ನೀನು ಕೊಟ್ಟುಬಿಟ್ಟರೆ ಕೃತಜ್ಞತೆ ತಪ್ಪುತ್ತದೆ. ಇನ್ನು ಹೆಚ್ಚಿನ ರಾಜಕಾರ್ಯವನ್ನು ನುಡಿಯಲಾರೆ ಎನ್ನುತ್ತಾಳೆ. ಇಲ್ಲಿ ಭಾನುಮತಿ ಒಬ್ಬ ನುರಿತ ರಾಜತಾಂತ್ರಿಕಳಂತೆ ಕಂಡುಬರುತ್ತಾಳೆ. ಅವಳ ಈ ಎಲ್ಲ ಆಲೋಚನೆಗಳ ಮೂಲ ತನ್ನ ಗಂಡನ ಒಳಿತು ಹಾಗೂ ಪ್ರಾಣ. ಆ ಕಾಳಜಿಯಿಂದಾಗಿಯೆ ತನ್ನ ಗಂಡನಿಗೆ ತಿಳುವಳಿಕೆಯನ್ನು

ಉಂಟುಮಾಡಲು ಈ ಎಲ್ಲ ಅಂಶಗಳನ್ನು ತಿಳಿಸುತ್ತಾಳೆ. ಇಷ್ಟಾದರೂ ದುರ್ಯೋಧನ ಅವಳ ಮಾತುಗಳನ್ನು ಕೇಳದೆ ಮತ್ತದೇ ಹಿಂದಿನ ಹಗೆಯನ್ನೇ ಮುಂದುವರೆಸುತ್ತಾನೆ. ಪಾಂಚಾಲಿ ಹಾಗೂ ಪಾಂಡವರು ಮೂದಲಿಸಿ ಮರ್ಮವನ್ನಿರಿಯುವ ಸುರಗಿಯಂತಹವರು. ಅವರಿಗೆ ಮರುಗಲೇತಕೆ ನಿನ್ನ ಹಿರಿಯ ಮಗನಲ್ಲಿ ರಾಜ್ಯಭಾರವನ್ನು ಹೊರಿಸಿ ಬದುಕುವುದು. ನನ್ನನ್ನು ಕಾಣದೆ ಹೋಗು ನೀನು ಎಂದಾಗ ಭಾನುಮತಿಯು

"ಸಾಕು ಸಾಕೀ ಮಾತಿನಲಿ ನಮ
ಗೇಕೆ ರಾಜ್ಯದ ಪಟ್ಟವಾಯ್ತು ವಿ
ವೇಕಿಗಳಿಗಧಿದೈವವೇ ತಾನೀಸು ಹಿರಿದಲ್ಲ
ಮೂಕ ಭಾವದ ದೀಕ್ಷೆ ತನಗೆಂ
ದಾ ಕಮಲಮುಖಿಯಿದ್ದಳಿತ್ತಲು
ನೂಕಿದವು ದಂಡಿಗೆಗಳರಮನೆಯಿಂದ ಸಂದಣಿಸಿ"[೨೭೭]

ಸಾಕು ಸಾಕು ಈ ಮಾತಿನಲ್ಲಿ ನಮಗೇಕೆ ರಾಜ್ಯದ ಪಟ್ಟವಾಯಿತು. ವಿವೇಕಿಗಳ ಅಧಿದೈವವೇ, ಅದೇನಿಷ್ಟು ದೊಡ್ಡದಲ್ಲ. ಇನ್ನು ನನಗೆ ಮೂಕಭಾವದ ದೀಕ್ಷೆ ಎಂದು ಆಕೆ ಸುಮ್ಮನಾಗಿ ಬಿಟ್ಟಳು. ಅಂದರೆ ಅಂತಿಮವಾಗಿ ಹಗೆತನ್ನು ಬಿಡಲು ಒಪ್ಪದ ದುರ್ಯೋಧನನನ್ನು ಬದಲಿಸುವುದು ಅಸಾಧ್ಯವಾದಾಗ ಭಾನುಮತಿ ತಾನು ಮೌನಕ್ಕೆ ಶರಣಾಗುವುದು ಕಂಡುಬರುತ್ತದೆ. ಅಂದರೆ ಇಲ್ಲಿ ಪುರುಷ ಹಾಗೂ ಪ್ರಭುತ್ವದ ಸಂಕೇತವಾದ ದುರ್ಯೋಧನ ಅವಳ ಯಾವುದೇ ಮಾತುಗಳನ್ನು ಕೇಳಲು ಸಿದ್ಧನಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ.

ಯುದ್ಧದ ಸಂದರ್ಭದ ಭೀತಿ, ತಲ್ಲಣಗಳಿಂದ ಭಾನುಮತಿ ಕೂಡ ಹೊರತಾಗಿಲ್ಲ. ಯುದ್ಧದಲ್ಲಿ ಎಲ್ಲರನ್ನು ಕಳೆದುಕೊಂಡ ದುರ್ಯೋಧನ ಮುಂದೆ ಮಾಡಬೇಕಾದ ಕಾರ್ಯಗಳನ್ನು ಸಂಜಯನಿಗೆ ತಿಳಿಸಿ, ಹಗೆಗೆ ವಿಜಯವಾಯಿತೆಂಬ ಸುದ್ಧಿಯನ್ನು ಹರಡಬೇಡ ಎಂದು ನುಡಿದು ತಾನು 'ವೈಶಂಪಾಯನ' ಸರೋವರದಲ್ಲಿ ಅಡಗಿ ಕೂರುತ್ತಾನೆ. ಇತ್ತ ಅರಮನೆಗೆ ಬಂದ ಸಂಜಯನು ಅಖಿಳ ಸಚಿವರನ್ನು ಕರೆಸಿ ರಹಸ್ಯವನ್ನು ಅವರಿಗೆ ತಿಳಿಸಿದನು. ನೃಪನ ಪಲಾಯನವು ಭಾನುಮತಿಗೂ ತಿಳಿಯಿತು. ಆಕೆ ಮಿಕ್ಕ ಅರಸಿಯರಿಗೆ ತಿಳಿಸಲಾಗಿ ಅಂತಃಪುರದಲ್ಲಿ ರಣಭೀತಿ ಹಬ್ಬಿತು. ಕೂಡಲೆ ಗಜಬಜವಾಗಿ ದಂಡಿಗೆಗಳು ಅರಮನೆಗೆ ಬಂದವು. ಇತ್ತ

"ಭಾನುಮತಿ ಹೊರವಂಟಳರಸನ
ಮಾನಿನಿಯರು ಸಹಸ್ರ ಸಂಖ್ಯೆಯೊ
ಳಾನನೇಂದುಪ್ರಭೆ ವಿಭಾಡಿಸೆ ಬಿಸಿಲ ಬೇಗೆಗಳ
ಭಾನುದತ್ತನ ಸೈಂಧವನ ರವಿ
ಸೂನುವಿನ ದುಶ್ಯಾಸನನ ಜಲ
ಜಾನನೆಯರೊಗ್ಗಿನಲಿ ರಥವೇರಿದರು ದುಗುಡದಲಿ"[೨೭೮]

ಭಾನುಮತಿ ಹೊರ ಹೊರಟಳು. ಅರಸನ ಮಾನಿನಿಯರು, ಸಹಸ್ರ ಸಂಖ್ಯೆಯೊಳಾನನೇಂದುಪ್ರಭೆ ವಿಭಾಡಿಸೆ ಬಿಸಿಲ ಬೇಗೆಗಳ ನಡುವೆಯೆ ಭಾನುದತ್ತನ, ಸೈಂಧವನ, ರವಿಸೂನುವಿನ, ದುಶ್ಶಾಸನನ ಜಲಜಾನನೆಯರು ಎಲ್ಲರೂ ಒಗ್ಗಿನಲಿ ಬಂದು ದುಗುಡದಲ್ಲಿ ರಥವೇರಿದರು. ಇಲ್ಲಿ ಸಂಜಯನಿಂದ ವಿಷಯ ತಿಳಿದ ಮೇಲೆ ಇಲ್ಲಿನ ಸ್ತ್ರೀಯರಿಗೆ ಯುದ್ಧಭೂಮಿಯ ಸ್ಥಿತಿಗತಿಗಳು ಅರಿವಾಗಿ ಇನ್ನು ಜಯ ನಮ್ಮದಲ್ಲ ಎಂಬುದು ನಿರ್ಧಾರಿತವಾಗುತ್ತದೆ. ಮರೆಯಾದ ತಮ್ಮ ಪತಿಗಳಿಗಾಗಿ ಇವರೆಲ್ಲರು ಯುದ್ಧ ಭೂಮಿಯತ್ತ ಧಾವಿಸುತ್ತಾರೆ. ಇಷ್ಟನ್ನು ಬಿಟ್ಟು ಈ ಹೆಣ್ಣುಗಳು ಇನ್ನೇನನ್ನು ಮಾಡಲು ಸಾಧ್ಯ?

೩.೫. ವಿರಹ ಮತ್ತು ಮರಣದ ಸಂಘರ್ಷದ ನೆಲೆಗಳು

ಬದುಕು ಎಲ್ಲಾ ಸಂದರ್ಭಗಳಲ್ಲಿಯೂ ಸುಖ, ಸಂತೋಷ, ಗೆಲುವುಗಳಿಂದಲೇ ಕೂಡಿರುವುದಿಲ್ಲ. ದುಃಖ, ವಿರಹ ಮತ್ತು ಮರಣಗಳು ಬದುಕಿನ ದಾರಿಯುದ್ದಕ್ಕೂ ಜೊತೆಯಾಗಿಯೇ ಇರುತ್ತವೆ. ಮರಣ ಎಂಬುದು ಬದುಕಿನ ಕೊನೆ ಎಂದೇ ಭಾವಿಸಲಾಗಿದೆ. ಆದರೆ ಕೊನೆಗಾಣದ ಈ ಬದುಕಿನ ಮರಣದ ಕೊನೆಯ ಹಂತದಲ್ಲಿಯೂ ಅನೇಕ ಸಂಘರ್ಷಗಳು ಉಳಿದೇ ಬಿಡುತ್ತವೆ. ಈ ಮೊದಲು ಚರ್ಚಿಸಿದ ಇತರ ಸಂಘರ್ಷಗಳಿಗಿಂತ ಭಿನ್ನ ನೆಲೆಯನ್ನು ಈ ವಿರಹ ಮತ್ತು ಮರಣದ ಸಂದರ್ಭದಲ್ಲಿನ ಸಂಘರ್ಷಗಳಲ್ಲಿ ಕಾಣಬಹುದು. ಯಾವುದೇ ವ್ಯಕ್ತಿ ತನ್ನ ಒಡನಾಟದಲ್ಲಿದ್ದವರು ತೀರಿಕೊಂಡಾಗ ಅದಕ್ಕೆ ತೋರುವ ಪ್ರತಿಕ್ರಿಯೆಗಳು ಅವರ ನಡುವಿನ ಸಂಬಂಧದ ಕೊಂಡಿಗಳಾಗಿರುತ್ತವೆ. ಸುಭದ್ರೆ, ಮಾದ್ರಿ ಈ ಇಬ್ಬರ ಸಂಘರ್ಷಗಳನ್ನು ವಿರಹ ಮತ್ತು ಮರಣದ ಸಂದರ್ಭದ ಸಂಘರ್ಷಗಳಾಗಿ ಇಲ್ಲಿ ಚರ್ಚಿಸಬಹುದು.

೩.೫.೧ ಸುಭದ್ರೆ

ಈಕೆ ಬಲರಾಮ ಹಾಗೂ ಕೃಷ್ಣರ ತಂಗಿ. ಅರ್ಜುನ ತನ್ನ ಚೈತ್ರಯಾತ್ರೆಯ ಸಮಯದಲ್ಲಿ ಕೃಷ್ಣನ ಸಹಾಯದಿಂದ ಈಕೆಯನ್ನು ವಿವಾಹವಾಗುತ್ತಾನೆ. ಅಭಿಮನ್ಯು ಈಕೆಯ ಮಗ. ಸುಭದ್ರೆಯು ದ್ರೌಪದಿಯಂತೆ ಕಾಡುಮೇಡುಗಳನ್ನು ಅಲೆದವಳಲ್ಲ. ಆಕೆಯಂತೆ ಅಪಮಾನಗಳಿಗೂ ಒಳಗಾದವಳಲ್ಲ. "ಮೊದಲಿಂದ ಕಡೆಯತನಕ ಪಾಂಡವರೊಡನೆ ಪಡಬಾರದ ಕಷ್ಟವನ್ನು ಅನುಭವಿಸಿದವಳು ದ್ರೌಪದಿ, ಸುಖಪಡುವ ಕಾಲಬಂದಾಗ ಸದ್ದಿಲ್ಲದೆ ಗದ್ದುಗೆ ಏರಿದವಳು ಸುಭದ್ರೆ"[೪೯] ಎಂಬ ಅಭಿಪ್ರಾಯವು ಯಥೋಚಿತವಾಗಿದೆ. ದ್ರೌಪದಿಯಂತೆ ಸುಭದ್ರೆಯು ಕ್ಲಿಷ್ಟ ಸಂದರ್ಭಗಳನ್ನಾಗಲಿ, ವ್ಯತಿರಿಕ್ತ ಸನ್ನಿವೇಶಗಳನ್ನಾಗಲೀ ಎದುರಿಸಿದವಳಲ್ಲ. ಅರಮನೆಯಲ್ಲಿ ಸುಖದಿಂದ ಕಾಲವನ್ನು ಕಳೆದವಳು. ಈ ದೃಷ್ಟಿಯಿಂದ ಈಕೆಯ ಸಂಘರ್ಷಗಳು ವೈಯಕ್ತಿಕ ನೆಲೆಯವುಗಳಾಗಿದ್ದು, ಆಕೆಯ ಪ್ರೇಮ, ವಿರಹ ಹಾಗೂ ಅಭಿಮನ್ಯುವಿನ ಮರಣದ ಸಂದರ್ಭದ ನೋವುಗಳಿಗೆ ಸಂಬಂಧಿಸಿದವುಗಳಾಗಿವೆ. ಈ ಹಿನ್ನೆಲೆಯಲ್ಲಿ ಆಕೆಯ ಸಂಘರ್ಷಗಳನ್ನು ಈ ಕೆಳಗಿನಂತೆ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೩.೫.೧.ಅ. ಅರ್ಜುನನನ್ನು ನೋಡಿದ ನಂತರದ ವಿರಹದ ಸಂಘರ್ಷಗಳು.

ಅರ್ಜುನನು ಚೈತ್ರಯಾತ್ರೆಯನ್ನು ಕೈಕೊಂಡು ಹಲವು ನಗರಗಳನ್ನು ಜಯಿಸುತ್ತ, ಸುಂದರವಾದ ಪ್ರದೇಶಗಳಲ್ಲಿ ವಿಹರಿಸುತ್ತ ದ್ವಾರಾವತೀ ಪಟ್ಟಣವನ್ನು ಬಂದು ಸೇರಿದನು. ಆನೆಯ ಮೇಲೆ ಅರಮನೆಗೆ ಬರುತ್ತಿರುವ ಅರ್ಜುನನನ್ನು ನೋಡಿ ದ್ವಾರಾವತೀ ಪಟ್ಟಣದ ಹೆಣ್ಣು ಮಕ್ಕಳು ರೋಮಾಂಚಿತರಾಗಿದ್ದಾರೆ. ಇತ್ತ ಸುಭದ್ರೆಯು ಬರುತ್ತಿರುವವ 'ಗುಣಾರ್ಣವ' ಎಂಬುದನ್ನು ತನ್ನ ಸಖಿಯರಿಂದ ಕೇಳಿ ತಿಳಿದುಕೊಳ್ಳುತ್ತಾಳೆ. ಸಖಿಯರು ಅರ್ಜುನನ ಪರಾಕ್ರಮ, ಆತನ ರೂಪಾತಿಶಯಗಳನ್ನು ಹೊಗಳಿದಾಗಿನ ಸುಭದ್ರೆಯ ಪ್ರತಿಕ್ರಿಯೆಗಳು ಹಾಗೂ ಅವಳ ಮನದಲ್ಲುಂಟಾದ ಭಾವತೀವ್ರತೆಗಳನ್ನು ಪಂಪ ಈ ರೀತಿಯಾಗಿ ಚಿತ್ರಿಸಿದ್ದಾನೆ.

> "ಒದವಿದ ತನ್ನ ಜವ್ವನದ ರೂಪಿನ ಮೆಯ್ಯೊಳೆ ತಪ್ಪುದಪ್ಪು ನೋ
> ಟದೊಳೆ ಪೊಡರ್ಪು ತಪ್ಪು ಬಗೆ ತಪ್ಪು ಮನೋಜನ ಪೂವಿನಂಬು ತೀ
> ವಿದ ದೊಣೆ ತೀವಿ ತನ್ನನಿಸೆ ಜಾಣನೆ ತಪ್ಪದೆ ತಪ್ಪುದಪ್ಪು ನೋ
> ಡಿದುದದಱಂ ಗುಣಾರ್ಣವನನಾ ಸತಿ ತಪ್ಪದೆ ತಪ್ಪು ನೋಟದೊಳ್"[೨೦]

ಆ ಸಂದರ್ಭದಲ್ಲಿ ಜವ್ವನವು ಪ್ರಾಪ್ತವಾದ ಶರೀರದ ಸೌಂದರ್ಯವು ಅರ್ಜುನನನ್ನು ಕದ್ದು ಕದ್ದು ನೋಡುವರ ಕಂಪನದಿಂದ ಅಸ್ತವ್ಯಸ್ತವಾಯಿತು. ಅದು ತಪ್ಪು ಎಂಬುದು ನಿಜ. ಆದರೂ ಮನಸ್ಸು ತಪ್ಪು ಮಾಡುತ್ತದೆ. ಏಕೆಂದರೆ ಹೂ ಬಾಣದಿಂದ ತುಂಬಿದ ಬತ್ತಳಿಕೆಯಿಂದ ಬರುವ ಬಾಣಗಳು ಅವಳ ಮನಸ್ಸನ್ನು ಚುಚ್ಚುತ್ತವೆ. ತನ್ನ ಜಾಣ್ಮೆಯು ತಪ್ಪಿ ಸುಭದ್ರೆಯು ತಪ್ಪು ನೋಟಗಳಿಂದ ಗುಣಾರ್ಣವನನ್ನು ನೋಡಿದಳು. ಆ ರೀತಿಯಾಗಿ ತಳತಳನೆ ಪ್ರಕಾಶಿಸುವ, ಕನ್ನೈದಿಲೆಯ ಎಸಳಿನಂತೆ ಕಣ್ಣುಳ್ಳ ಆ ಸುಭದ್ರೆಯ ನೋಟ ಅರ್ಜುನನ ಮನದಲ್ಲಿ ಒಂದು ಕ್ಷಣ ತಳಮಳವನ್ನು ತಂದಿತು. ಆತ ತನ್ನ ಕಣ್ಣಿಗೆ ನಿಲುಕುವವರೆಗು ಆ ಕನ್ಯೆಯನ್ನು ಪ್ರೀತಿಯಿಂದ ನೋಡಿದನು. ಆ ರೀತಿ ನೋಡಲು ಸುಭದ್ರೆಯಲ್ಲಿ ರೋಮಾಂಚನದ ಭಾವಗಳು ಒಡಮೂಡುತ್ತವೆ.

> "ಸೋಲದೊಳೆಯ್ದೆ ಪೀರ್ದ ತೆಱದಿಂದೆಮೆಯಿಕ್ಕದೆ ನೋಟ್ಟಿ ಕಣ್ಗೆ ಕಣ್
> ಪೀಲಿವೊಲಾಗೆ ಬಂದು ಪೆಱತೊಂದು ಮನಂಬುಗೆ ಪತ್ತಿ ಚಿತ್ತದೊಳ್
> ಕೀಲಿಸೆ ಕಾವನಂಬವಱ ಬಿಣ್ಪಿನೊಳೊಯ್ಯನೆ ಜೋಲ್ದವೋಲೆ ತಾಂ
> ಬೂಲ ಕರಂಕವಾಹಿನಿಯ ಮೇಲೆ ನೆಱಲ್ದಿರೆ ಬಾಲೆ ಲೀಲೆಯಿಂ"[೨೧]

"ಪ್ರೇಮದಿಂದ ಚೆನ್ನಾಗಿ ಹೀರುವ ರೀತಿಯಲ್ಲಿ ರೆಪ್ಪೆ ಹೊಡೆಯದೇ ನೋಡುವ ಕಣ್ಣಿಗೆ ಬೇರೊಂದು ಕಣ್ಣು (ಅಂದರೆ ಅರ್ಜುನನ ಕಣ್ಣು) ನವಿಲು ಗರಿಯ ಕಣ್ಣಿನ ಹಾಗಾಗಿ ಮನಸ್ಸನ್ನು ಪ್ರವೇಶಿಸಲು ಕಾಮಬಾಣವು ಮನಸ್ಸಿನಲ್ಲಿ ನಾಟಿರಲು ಆ ಬಾಣಗಳ ಭಾರದಿಂದ ಮೆಲ್ಲಗೆ ಜೋತುಬಿದ್ದ ಹಾಗೆ ಸುಭದ್ರೆಯು ವಿಲಾಸದಿಂದ ತನ್ನ ತಾಂಬೂಲಕರಂಕವಾಹಿನಿಯ ಮೇಲೆ ಒರಗಿಕೊಂಡು ನಿಂತಳು"[೨೨] ಎಂಬ ಕವಿಯ ಮಾತುಗಳು ಅರ್ಜುನನನ್ನು ನೋಡಿದಾಗಿನ ಕ್ಷಣದಿಂದ ಆಕೆಯ ಮನದಲ್ಲುಂಟಾಗುವ

ಭಾವನೆಗಳ ಏರುಪೇರುಗಳನ್ನು ನಮ್ಮ ಗಮನಕ್ಕೆ ತಂದುಕೊಡುತ್ತವೆ. ಆಕೆ ಮಾನಸಿಕವಾಗಿ ಅರ್ಜುನನ ರೂಪಿಗೆ ಹೇಗೆ ಸೋತು ಹೋಗುತ್ತಾಳೆಂಬುದನ್ನು ಇಲ್ಲಿ ಗಮನಿಸಬಹುದಾಗಿದೆ.

ಅರ್ಜುನ ಕೃಷ್ಣನೊಂದಿಗೆ ಅರಮನೆಯನ್ನು ಪ್ರವೇಶಿದ ನಂತರ ಕೃಷ್ಣ ಆತನನ್ನು ಅರಮನೆಯವರಿಗೆ ಪರಿಚಯಿಸಿ ಅನೇಕ ರೀತಿಯಲ್ಲಿ ಸತ್ಕಾರ ಮಾಡುತ್ತಾನೆ. ಹೀಗಿರಲು ಅರ್ಜುನನು ಸುಭದ್ರೆಯ ವಿರಹ ತಾಪದಲ್ಲಿದ್ದರೆ, ಇತ್ತ ಸುಭದ್ರೆಯೂ ಅರ್ಜುನನ ವಿರಹ ತಾಪದಲ್ಲಿದ್ದಾಳೆ. ಈ ಸಂದರ್ಭವನ್ನು ಕವಿ ಹೀಗೆ ಚಿತ್ರಿಸಿದ್ದಾನೆ.

"ಅತ್ತ ಸುಭದ್ರೆಯುಮೊಡಲುರಿ
ಯುತ್ತಿರೆ ಮರವಟ್ಟು ವಿಜಯನಿರ್ದತ್ತಲೆ ನೋ
ಡುತ್ತಿರೆ ಸುಸಾಳಭಂಜಿಕೆ
ಗೆತ್ತುದು ಕೆಳದಿಯರ ತಂಡಮಾಕೆಯ ರೂಪಂ"[೨೭೩]

ಅತ್ತ ಸುಭದ್ರೆಯೂ ಸಹ ವಿರಹದ ತಾಪದಿಂದ ಮೈಸುಡುತ್ತಿರಲು ಮರವಟ್ಟು, ಅರ್ಜುನನು ಇದ್ದ ಕಡೆಯೇ ನೋಡುತ್ತಿದ್ದಳು. ಹೀಗಿರಲು ಸುಭದ್ರೆಯ ರೂಪವನ್ನು ಅವಳ ಕೆಳದಿಯರ ಸಮೂಹವು ಸುಸಾಳಭಂಜಿಕೆಯೆಂದು (ಸಾಲು ಬೊಂಬೆ) ಭ್ರಮಿಸಿತು. ಅಂದರೆ ಇಲ್ಲಿ ಸುಭದ್ರೆಯು ಅರ್ಜುನನನ್ನು ನೋಡಿದ ನಂತರದಲ್ಲಿ ಆತನನ್ನು ಸೇರುವ, ಮಾತನಾಡಿಸುವ ತವಕದಲ್ಲಿದ್ದು ವಿರಹದ ತಾಪದಲ್ಲಿ ನಲುಗುತ್ತಿರುವುದು ಕಂಡುಬರುತ್ತದೆ. ಮುಂದುವರೆದು

"ಕನ್ನೆತನಂಗೆಯ್ಯಲ್ ಬಗೆ
ಗುನ್ನಾಣ್ ಮಿಗೆ ಮನಮುಮಿಟ್ಟುವರಿಯಲ್ ಬಗೆಗುಂ
ಕನ್ನಡಿಕುಂ ತನ್ನಳಿಪಂ
ತನ್ನಲೆ ತಾನಿಂತು ಕನ್ನೆ ತಳವೆಳಗಾದಳ್"[೨೭೪]

"ನಾಚಿಕೆಯು ಕನ್ಯಾಭಾವವನ್ನು ಪ್ರದರ್ಶಿಸಲು ಇಚ್ಛಿಸುತ್ತದೆ. ಮನಸ್ಸಾದರೋ ವಿಶೇಷವಾಗಿ (ಅರ್ಜುನನ ಕಡೆ) ಸೆಳೆದುಕೊಂಡು ಹೋಗಲು ಆಶಿಸುತ್ತದೆ. ತನ್ನ ಪ್ರೇಮವನ್ನು ವಿಶದಪಡಿಸುತ್ತದೆ ಎಂದು ಕನ್ಯೆಯಾದ ಸುಭದ್ರೆಯು ತನ್ನಲ್ಲಿಯೇ ತಬ್ಬಿಬ್ಬಾದಳು"[೨೭೫] ಎಂದು ಅರ್ಜುನನನ್ನು ನೋಡಿದ ಸಂದರ್ಭವನ್ನು ಕುರಿತು ಕವಿ ವಿವರಿಸುತ್ತಾನೆ. ಇಲ್ಲಿ ನಾಚಿಕೆ, ಕನ್ಯಾಭಾವ, ತಬ್ಬಿಬ್ಬಾಗುವ ಪ್ರತಿಕ್ರಿಯೆಗಳು ಅವಳ ಮನದಲ್ಲಿ ಮೂಡುವ ಸಂಘರ್ಷಗಳ ಪ್ರತೀಕಗಳಾಗಿವೆ. ಅಲ್ಲದೆ ಸುಭದ್ರೆಯು

"ನುಡಿಯಿಸಿ ಕೇಳ್ಗುಂ ಹರಿಗನ
ಪಡೆಮಾತನೆ ಮಾತು ತಪ್ಪೊಡಂ ಮತ್ತಮದಂ
ನುಡಿಯಿಸುಗುಂ ಮೊದಲಿಂದಾ
ನುಡಿ ಪಜಿಪಡೆ ಮುಳಿದು ನೋಡುಗಂ ಕೆಳದಿಯರಂ"[೨೭೬]

ತನ್ನ ಕೆಳದಿಯರಿಂದ ಅರ್ಜುನನ ವಿಷಯಕ್ಕೆ ಸಂಬಂಧಿಸಿದ ಮಾತನ್ನೇ ಹೇಳಿಸಿ ಕೇಳುತ್ತಾಳೆ. ಆ ಮಾತುಗಳು ನಿಂತು ಹೋದರೆ ಮತ್ತೆ ಮಾತುಗಳನ್ನೇ ಮೊದಲಿಂದ ಹೇಳಿಸುತ್ತಾಳೆ. ಮತ್ತೆ ಅದೂ ನಿಂತು ಹೋದರೆ ತನ್ನ ಕೆಳದಿಯರನ್ನು ಕೋಪದಿಂದ ನೋಡುತ್ತಾಳೆ. ಇಲ್ಲಿ ಸುಭದ್ರೆಯಿಂದ ಪ್ರಕಟವಾಗುವ ಪ್ರತಿಕ್ರಿಯೆಗಳೆಲ್ಲವು ಅವಳ ಮನಸ್ಸಿನ ತೊಳಲಾಟಗಳ ಪ್ರತೀಕವೇ ಆಗಿವೆ.

"ಅಜೆ ಮರುಳಂತುಟೆ ಸೊರ್ಕಿನ
ತೆಱದಂತುಟೆ ಮನಮೊಱಲ್ದುವೆರ್ದೆಯುರಿವುದು ಮೆ
ಯ್ಯಱಗುವುದು ಪದೆವುದಾನಿದ
ನಱಯೆನಿದೇಕೆಂದು ಕನ್ನೆ ತಳವೇಳಗಾದಳ್"[೨೭೭]

ಅರ್ಜುನನ ನೆನಪಿನಲ್ಲಿಯೆ ಆಕೆಗೆ ಬುದ್ಧಿ ಭ್ರಮಣೆಯಾದಂತಾಗುತ್ತದೆ. ಸೊಕ್ಕಿನಿಂದ ಮೈ ಮರೆತಂತಾಗುತ್ತದೆ. ಮನಸ್ಸು ಆತನನ್ನು ಪ್ರೀತಿಸುತ್ತದೆ. ಎದೆಯುರಿಯುತ್ತದೆ, ಮೆಯ್ಯೆಱಗುವುದು, ಮನಸ್ಸು ಅವನನ್ನೇ ಅಪೇಕ್ಷಿಸುತ್ತದೆ. ಈ ರೀತಿ ತನಗೆ ಏಕಾಗುತ್ತಿದೆಯೆಂದು ತಿಳಿಯಲಾರದೆ ಆ ಕನ್ಯೆಯು ತಳವೆಳಗಾಗುತ್ತಾಳೆ.

"ಆನೆಯನೇಜೆ ಸೌಷ್ಠವದೆ ಬರ್ಪರಿಕೇಸರಿಯೊಂದು ಗಾಡಿಯು
ದ್ದಾನಿ ತಗುಳ್ದು ಕಣ್ಣೊಳೆ ತೊಟಲ್ದೆರ್ದೆಯೊಳ್ ತಡಮಾಡೆ ಬೇಟದು
ದ್ದಾನಿಯನಾನೆ ಮನ್ಮಥ ಮಹೀಭುಜನೋವದೆ ತೋಜೆಕೊಟ್ಟುದೊಂ
ದಾನೆಯೆ ತನ್ನನಾನೆಗೊಲೆಗೊಂದಪುದೆಂದು ಲತಾಂಗಿ ಬೆರ್ಚಿದಳ್"[೨೭೮]

ಆನೆಯನ್ನೇರಿ ಸೌಷ್ಠವದೆ ಬರುತ್ತಿರುವ ಅರ್ಜುನನ ಒಂದು ಸೌಂದರ್ಯಾತಿಶಯವು ತನ್ನನ್ನೇ ಹಿಂಬಾಲಿಸಿ ಕಣ್ಣಿನಲ್ಲಿ ಸುತ್ತಾಡುತ್ತ ಎರ್ದೆಯೊಳ್ ಸ್ಥಿರವಾಗಿ ಪ್ರೇಮಾತಿಶಯವನ್ನು ಉಂಟು ಮಾಡಲು ಮನ್ಮಥನೆಂಬ ಮಹೀಭುಜನೇ ತನ್ನಲ್ಲಿ ಸ್ವಲ್ಪವೂ ದಾಕ್ಷಿಣ್ಯವಿಲ್ಲದೆ ತನ್ನ ಆನೆಯನ್ನು ಛೂ ಬಿಟ್ಟು ಅದರ ಮೂಲಕ ತನ್ನನ್ನು ಕೊಲ್ಲಿಸುತ್ತಿದ್ದಾನೆ ಎಂದು ಲತಾಂಗಿಯಾದ ಸುಭದ್ರೆಯು ಬೆಚ್ಚಿದಳು. ಇಲ್ಲಿ ಆನೆಯ ಚಿತ್ರಣ, ಅರ್ಜುನನ ಸೌಂದರ್ಯ, ಮನ್ಮಥ, ಆತನ ಹೂ ಬಾಣಗಳೆಲ್ಲವು ಸುಭದ್ರೆಯ ಮನದಲ್ಲಿ ಮೂಡುತ್ತಿರುವ ತಲ್ಲಣದ ಭಾವನೆಗಳನ್ನು ಅಭಿವ್ಯಕ್ತಿಪಡಿಸುತ್ತವೆ. ನಂತರದಲ್ಲಿ ಸುಭದ್ರೆಯು ಕಾಮನ ಯಜ್ಞದಲ್ಲಿ ಬಳಕೆಗೊಳ್ಳುವ ವಸ್ತು ವಿಶೇಷಗಳನ್ನು ನೆನೆದು ಬೆಳದಿಂಗಳಿನಲ್ಲಿ ಭಯಗೊಂಡಳು.

"ಅಂತು ಕಾಮದೇವನೆಂಬ ಮಂತ್ರವಾದಿಯ ದಿವ್ಯ ಮಂತ್ರದಿಂ ಸ್ತೋಭಂಗೊಂಡ
ದಿವ್ಯ ಗ್ರಹದಂತೆ ಕಾಮಗ್ರಹ ಗೃಹೀತೆಯಾಗಿರೆ ಮನೋವೈಕಲ್ಯ ರೋಮಾಂಚಕ ಸ್ತಂಭಕ
ಕಂಪ ಸ್ವೇದ ವೈವರ್ಣ್ಯ ಸಂತಾಪಾನಾಹಾರ ವ್ಯಾಮೋಹ ಗದ್ಗದಾಶ್ರುಮೋಕ್ಷ ಮೂರ್ಛಾದಿ
ನಾನಾ ವಿಕಾರಂಗಳನೊಡನೊಡನೆ ತೋಱುವುದುಮಾಕೆಯ ದಾದಿಯ ಮಗಳ್
ಚೂತಲತಿಕೆಯೆಂಬಳ್ ಕಂಡು"[೨೭೯]

ಹಾಗೆ ಕಾಮದೇವನೆಂಬ ಮಂತ್ರವಾದಿಯ ದಿವ್ಯ ಮಂತ್ರದಿಂದ ಸ್ತೋಭಂಗೊಂಡ (ತಡೆಯಲ್ಪಟ್ಟ) ದಿವ್ಯ ಗ್ರಹದ ಹಾಗೆ ಕಾಮಗ್ರಹ ಗೃಹೀತೆಯಾಗಿರಲು, ಮನೋವೈಕಲ್ಯ, ರೋಮಾಂಚಕ, ಸ್ತಂಭಕ,

ನಡುಕ, ಬೆವರುವಿಕೆ, ವರ್ಣ ವ್ಯತ್ಯಾಸ, ಸಂಯಾಪ, ಆಹಾರವಿಲ್ಲದಿರುವಿಕೆ, ಪ್ರೇಮಾತಿಶಯ, ಗದ್ಗದಿತ ಮಾತು, ಕಣ್ಣೀರ ಸುರಿಸುವಿಕೆ, ಮೂರ್ಛೆ ಹೋಗುವುದು ಮೊದಲಾದ ನಾನಾ ರೀತಿಯ ವಿಕಾರಗಳನ್ನು ಸುಭದ್ರೆಯು ಮೇಲೆ ಮೇಲೆ ತೋಱುವುದನ್ನು ಆಕೆಯ ದಾದಿಯ ಮಗಳಾದ 'ಚೂತಲತಿಕೆ' ಎಂಬುವವಳು ನೋಡಿದಳು. ಅಂದರೆ ಸುಭದ್ರೆಯು ಅರ್ಜುನನ ವಿರಹದ ತಾಪದಿಂದಾಗಿ ಮನ್ಮಥನ ಬಾಣ ಪ್ರಯೋಗಕ್ಕೆ ಒಳಗಾಗಿದ್ದಾಳೆ. ಅದರಿಂದಾಗಿ ಆಕೆಯಲ್ಲಿ ಮನೋವೈಕಲ್ಯ ಉಂಟಾಗಿ ರೋಮಾಂಚನ, ನಡುಗುವಿಕೆ, ಬೆವರುವುದು, ದುಃಖದ ಕಣ್ಣೀರುಗಳು, ಮಾತಿನಲ್ಲಿನ ತೊದಲುವಿಕೆ ಮೊದಲಾದ ಭಾವಗಳು ಆಕೆಯಿಂದ ವ್ಯಕ್ತವಾಗುತ್ತಿವೆ.

ಚೂತಲತಿಕೆಯು ಇವಳ ವರ್ತನೆಯನ್ನು ಕಂಡು ಇವಳ ಬತ್ತಿದ ಎದೆ, ನಡುಗುವ ತುಟಿಗಳು, ಕಣ್ಣಿನ ದೆಸೆಗೆಟ್ಟ ದೃಷ್ಟಿ, ಬೆವರು, ಅದರಿಂದ ಕೂಡಿದ ದೀರ್ಘವಾದ ಉಸಿರು ಬಿಡುವಿಕೆ, ತೊದಲು ಮಾತು, ಕೃಶವಾದ ಶರೀರ ಮೊದಲಾದವುಗಳನ್ನು ಕಂಡ ಆಕೆ ಇವು ಮನ್ಮಥನು ಉಂಟು ಮಾಡಿರುವ ಸೊಕ್ಕಿನ ಚೇಷ್ಟೆಗಳು ಎಂದುಕೊಳ್ಳುತ್ತಾಳೆ. ನಂತರ ಸುಭದ್ರೆಯ ಮನವನ್ನು ತಿಳಿದುಕೊಳ್ಳಬೇಕೆಂದು ಬಯಸಿ ಆ ನಿನ್ನ ವಿಕಾರಗಳಿಗೆ ಕಾರಣಗಳೇನು? ಎಂದು ಕೇಳುತ್ತಾಳೆ. ಅಲ್ಲದೆ ನಿನ್ನ ಮನಸ್ಸಿನ ದುಃಖಕ್ಕೆ ಕಾರಣಕರ್ತನಾಗಿರುವವನು ಗಂದೇಭ ವಿದ್ಯಾಧರನಾದ ಅರ್ಜುನ ಅಲ್ಲವೆ?

"ಎಂದು ತನ್ನ ಮನಮನಱಿದು ಮುಟ್ಟಿ ನುಡಿದ ಕೆಳದಿಯ ನುಡಿಗೆ
ಪೆಱತೇನುಮನೆನಲಱಿಯದೆ ನಾಣ್ಚಿ ತಲೆಯಂ ಬಾಗಿ ನೆಲನಂ ಬರೆಯುತ್ತಂ ನೀರೊಳ್
ಮುೞುಗಿದರಂತುಮ್ಮನೆ ಬೆಮರುತ್ತುಮ್ಮಳಿಕೆ ವಂದು ಬೆಚ್ಚನೆ ಸುಯ್ದೊಡೆ"[೨೮೦]

ಎಂದು ತನ್ನ ಮನಸ್ಸನ್ನು ಅರಿತು ಹೃದಯವನ್ನು ಮುಟ್ಟಿ, ಹೃದಯ ಸ್ಪರ್ಶಿಯಾಗಿ ಮಾತನಾಡಿದ ಕೆಳದಿಯ ನುಡಿಗೆ ಬೇರೆ ಏನನ್ನೂ ಹೇಳಲಾರದೆ ನಾಚಿ, ತಲೆಯನ್ನು ಬಾಗಿ ನೆಲವನ್ನು ಕಾಲಿನಿಂದ ಬರೆಯುತ್ತ ನೀರಿನಲ್ಲಿ ಮುಳುಗಿದವರಂತೆ ಸುಮ್ಮನೆ ಬೆವರುತ್ತ ದುಃಖದಿಂದ ನಿಟ್ಟುಸಿರನ್ನು ಬಿಟ್ಟಳು. ನಂತರ ತನ್ನ ದುಃಖಕ್ಕೆ ಕಾರಣವನ್ನು ಕೆಳದಿಗೆ ಹೇಳುತ್ತಾಳೆ. ಅರ್ಜುನನು ವಿಶೇಷವಾಗಿ ತನ್ನ ಮನಸ್ಸನ್ನು ಸೆಳೆದಿರುವ ಹಾಗೂ ಮನವನ್ನು ಆವರಿಸಿರುವ ವಿವರಗಳನ್ನು ಆಕೆಗೆ ತಿಳಿಸುತ್ತಾಳೆ.

ಮುಂದುವರೆದು ಆಕೆಯು ಲಕ್ಷ್ಮೀ, ವೀರಶ್ರೀ, ಕೀರ್ತಿಶ್ರೀ, ವಾಕ್‌ಶ್ರೀ ಎಂಬ ಸ್ತ್ರೀಯರನ್ನಗಲದೆ, ತನ್ನಲ್ಲಿ ಭಾವಿಸಿದ ಸ್ತ್ರೀಯರು ಎನಿಸಿದ ಸೌಭಾಗ್ಯವನ್ನುಳ್ಳ ಅರ್ಜುನನು ನನ್ನನ್ನು ಪ್ರೀತಿಸುವನೋ ಇಲ್ಲವೋ

"ಎಂಬ ಬಗೆಯೊಳ್ ಸುಭದ್ರೆ ಪ
ಲುಂಬಿ ಮನಂಬಸದೆ ತನುವನಾಱಿಸಲಲರಿಂ
ತುಂಬಿಗಳಿಂ ತಣ್ಣೆಲರಿಂ
ತುಂಬಿದ ತಿಳಿಗೊಳದಿನೆಸೆವ ಬನಮಂ ಪೊಕ್ಕಳ್"[೨೮೧]

ಎಂಬ ಮನಸ್ಸಿನಿಂದ ಸುಭದ್ರೆಯು ಹಲುಬುತ್ತ, ಮನಸ್ಸನ್ನು ಎರಡು ಭಾಗ ಮಾಡದೆ ಅಂದರೆ ಮನಸ್ಸನ್ನು ಚಂಚಲತೆಗೆ ಒಳಗಾಗದಂತೆ ಏಕ ಮನಸ್ಕಳಾಗಿ ತನುವಿನ ವಿರಹದ ಸಂತಾಪವನ್ನು ಆರಿಸಿಕೊಳ್ಳುವ ಸಲುವಾಗಿ ಹೂವಿನಿಂದಲೂ, ದುಂಬಿಗಳಿಂದಲೂ, ತಣ್ಣೆಲರಿಂದ ತುಂಬಿದ ತಿಳಿಗೊಳಗಳಿಂದಲೂ ಶೋಭಿಸುವ ವನವನ್ನು ಪ್ರವೇಶಿಸಿದಳು. ಆ ವನದ ಮಾವಿನ ಚಿಗುರುಗಳು, ಅಶೋಕ ವೃಕ್ಷ, ಹೊಳೆಯುವ ಬೆಳ್ಳಿ ಮೋಡಗಳ ಪ್ರದೇಶವು ಪ್ರೇಮದುಂಡೆಗಳ ಸಮೂಹವೆಂದು ಭಾವಿಸಿದ ಸುಭದ್ರೆಯು ತಳಮಳಕ್ಕೊಳಗಾದಳು. ನಂತರ ಕೊಳದ ದಡವನ್ನೇ ಹಿಡಿದು ಬೆಳೆದ ಎಳೆಯ ಚಿಗುರುಗಳನ್ನುಳ್ಳ ಅಶೋಕ ಮರಗಳ ಲತೆಯ ಮನೆಯೊಳಗೆ ವಿಧ ವಿಧವಾಗಿ ಹೊಳೆಯುವ ಅಲರುಗಳಿಗೆ ಮುತ್ತಿ ಸುತ್ತಾಡುವ ದುಂಬಿಗಳ ದನಿಗೆ ಸುಭದ್ರೆಯು ಕೋಪಿಸಿ ಕಿರಿಕಿರಿಯಾದಳು ಎನ್ನುತ್ತಾನೆ ಕವಿ. ಅಂದರೆ ಇಲ್ಲಿ ಆಕೆಯ ಮನಸ್ಸನ್ನು ಸಂಪೂರ್ಣವಾಗಿ ಅರ್ಜುನನ ರೂಪಾತಿಶಯಗಳು ಆವರಿಸಿವೆ. ಹೀಗಿರುವಾಗ ಪ್ರಕೃತಿಯ ಸೌಂದರ್ಯ, ಅಲ್ಲಿನ ದುಂಬಿಗಳ ದನಿಗಳೆಲ್ಲ ಅವಳ ಮನಸ್ಸಿಗೆ ಕಿರಿಕಿರಿಯನ್ನು ಉಂಟುಮಾಡುತ್ತಿರುವುದು ಇಲ್ಲಿ ಕಂಡುಬರುತ್ತದೆ.

ಇದೇ ರೀತಿಯಾಗಿ ಸುರಗಿಯ ಹೂವಿನ ಅರಳಿದ ಮೊಗ್ಗುಗಳಲ್ಲಿನ ದುಂಬಿಯ ಸಮೂಹವನ್ನು ಮದನಾಗ್ನಿಯ ಕಿಡಿಗಳು ಎಂದೇ ಭಾವಿಸುತ್ತಾಳೆ. ಇಂಪಾದ ದುಂಬಿಯ ನಿನಾದ ಇಂದು ಸುಭದ್ರೆಯ ಅನ್ಯಮನಸ್ಕ ಸ್ಥಿತಿಗೆ ರುಚಿಸದೇ ಹೋಗಿರುವುದು ತಿಳಿಯುತ್ತದೆ. ಈ ರೀತಿಯಾಗಿ ಹೂವು, ಚಿಗುರು ಇವುಗಳಿಂದ ಕೂಡಿದ ವನವು ಸಹ ಆಕೆಯ ಮನದ ತಾಪವನ್ನು ಶಮನ ಮಾಡುವಲ್ಲಿ ಸೋತಾಗ ಆಕೆ ಅಲ್ಲಿಂದ ಒಂದು ಮಾಧವೀ ಮಂಟಪದ ಕಡೆ ಬರುತ್ತಾಳೆ. ಅಲ್ಲಿಗೆ ಸುಭದ್ರೆಯು ಕಾಮನ ಡಾಮರಕ್ಕೆ (ಕೋಟಲೆಗೆ) ಹೆದರಿ ಕಾಡಿನ ಕೋಟೆಯನ್ನು ಪ್ರವೇಶಿಸುವಂತೆ ಬರುತ್ತಾಳೆ. ಅಲ್ಲಿ ಕರ್ಪೂರದ ಹಳುಕಿನ ಜಗುಲಿಯನ್ನು ನಿರ್ಮಿಸಿ, ಶ್ರೀಗಂಧದ ಎಳೆಯ ಚಿಗುರುಗಳನ್ನು ಹಾಸುತ್ತಾಳೆ. ಮಲ್ಲಿಗೆಯ ಹೂಗಳನ್ನು ಹರಡಿ, ತಾವರೆಯ ದಿಂಡಿನಿಂದ ಮಾಡಿದ ತಂತಿ ಬಳೆ, ಗೋದುವೆಯ ಮೊಳಕೆಗಳಿಂದ ಮಾಡಿದ ಉಡಿದಾರವನ್ನು, ಕರ್ಪೂರದಿಂದ ರಚಿಸಿದ ಹಾರವನ್ನು, ವಿಶೇಷವಾಗಿ ತಣ್ಣಗಿರುವ ಶ್ರೀಗಂಧದ ರಸವನ್ನು ಶರೀರಕ್ಕೆ ಲೇಪಿಸಿಕೊಂಡು ಮನಸ್ಸಿನ ಹಾಗೂ ಶರೀರದ ಸಂತಾಪದಿಂದ ನಿಟ್ಟುಸಿರನ್ನು ಬಿಡುತ್ತಾಳೆ.

> "ಅರಿಗನ ಬೇಟದೊಂದೆ ಪೊಸ ಬೇಟದ ಕೇಸುರಿಯಿಂದಮೆಯ್ದೆ ದ
> ಳ್ಪುರಿ ನೆಗೆದಂದು ಕೆಂದಳಿರ ಪಾಸುಗಳಿಂ ಕುಳಿರ್ವಾಲಿನೀರ್ಗಳಿಂ
> ತುರಿಪದೆ ಸೂಸುತುಂ ಕೆಳದಿಯರ್ ನದಿಪುತ್ತಿರೆ ನೋಡೆ ದಾಹಮೊ
> ತ್ತರಿಸಿದುದೊಂದು ಪೊನ್ನ ಸಲಗಿರ್ಪವೊಲಿರ್ದುದು ಮೆಯ್ ಸುಭದ್ರೆಯಾ"[೨೮೨]

ಅರಿಗನ ಮೇಲಿನ ಬೇಟದ ಒಂದು ಹೊಸ ಪ್ರೇಮದ ಕೆಂಪು ಜ್ವಾಲೆಯು ಚಿಮ್ಮಿದಾಗ ಸುಭದ್ರೆಯ ಕೆಳದಿಯರು ಕೆಂದಳಿರ ಹಾಸಿಗೆಯಿಂದಲೂ ತಂಪಾಗಿರುವ ಮಂಜಿನ ನೀರಿನಿಂದಲೂ ಆ ಜ್ವಾಲೆಯನ್ನು ನಂದಿಸಲು ಪ್ರಯತ್ನಿಸಿದರೂ ಕೂಡ ಎಲ್ಲರೂ ನೋಡುತ್ತಿರುವಂತೆಯೇ ಆ ದಾಹವು ಮತ್ತೂ

ಹೆಚ್ಚಾಯಿತು. ಇದರಿಂದಾಗಿ ಸುಭದ್ರೆಯ ಶರೀರವು ಕಾಸಿದ ಹೊನ್ನಿನ ಸಲಾಕೆಯ ಹಾಗಾಯಿತು. ಇದಲ್ಲದೆ ಮದನನ ಕಾಮವೆಂಬ ಕಾಡುಗಿಚ್ಚಿನ ಜ್ವಾಲೆಯು ಶರೀರವನ್ನು ಸುಡಲು, ಸುಭದ್ರೆಯ ಕಣ್ಣೀರಿನ ಹನಿಗಳು ಮುಚ್ಚಿದ ರೆಪ್ಪೆಯನ್ನು ತಗುಲಿ, ಬಿಳಿಚಿಕೊಂಡ ತುಟಿಯಲ್ಲಿ ಚಿಮ್ಮಿ ಆಕೆಯ ಹೊಕ್ಕುಳನ್ನು ಸೇರಿದವು. ಆಕೆಯ ದೇಹದಲ್ಲಿ ಉಂಟಾಗುತ್ತಿರುವ ಈ ಎಲ್ಲ ವರ್ತನೆಗಳು, ವಿರಹದ ತಾಪದಿಂದಾದವು. ಅಲ್ಲದೆ ಅರ್ಜುನನನ್ನು ಹಂಬಲಿಸುತ್ತಿರುವ ಮನದ ಬಯಕೆಗಳ ಪ್ರತಿಬಿಂಬಗಳಾಗಿವೆ.

ಅಲ್ಲದೆ ಸುಭದ್ರೆಯ ನಗುಮುಖವನ್ನು ಚೆನ್ನಾಗಿ ಅರಳಿದ ತಾವರೆ ಎಂಬ ಭ್ರಮೆಯಿಂದ ಪ್ರವೇಶಿಸಲು ಬಂದ ಸೊಕ್ಕಿದ ದುಂಬಿಗಳು ತಳೋದರಿಯ ಸುಯ್ಯಳ ಬೆಂಕಿಯಲ್ಲಿ ಇಚ್ಚೆಗೆಟ್ಟು ಆಶಾಭಂಗವಾಗಿ ಕಾವು ಹತ್ತಿ ಮುಂದೆ ಬಿದ್ದವು. ನಂತರ ಸುಭದ್ರೆಯು ಸುರಿಸಿದ ಕಣ್ಣೀರಿನ ಧಾರೆಗಳಲ್ಲಿ ನೆನೆದು ಪುನಃ ಚೇತರಿಸಿಕೊಂಡು ಒಮ್ಮೆಯೇ ಹಾರಿದವು. ಸುಭದ್ರೆಯ ಬಿಸಿಯುಸಿರು ಅರ್ಜುನನ ವಿರಹದ ತಾಪದಿಂದ ಬೆಂದಿರುವ ಆಕೆಯ ಮನೋವೇದನೆಯನ್ನು ಅಭಿವ್ಯಕ್ತಪಡಿಸುತ್ತದೆ. ಈ ರೀತಿಯಾಗಿ ಆ ಬಾಲೆಯು ಕಾಯ್ದ ಧೂಳಿನಲ್ಲಿ ಬಿಸಾಕಿದ ಬಾಳೆಯ ಎಲೆಯಂತೆ ಸುರತ ಮಕರಧ್ವಜನಾದ ಅರ್ಜುನನಲ್ಲಿ ಉಂಟಾದ ವಿರಹದ ತಾಪದಿಂದ ಮಮ್ಮಲ ಮರುಗುತ್ತಿದ್ದಳು.

ಈ ಕಡೆ ಅರ್ಜುನನು ಸಹ ಇದೇ ರೀತಿಯ ವಿರಹದ ಭಾವನೆ ಉಳ್ಳವನಾಗಿ ಕೃಷ್ಣನ ಕಣ್ಣನ್ನು ತಪ್ಪಿಸಿ ಆ ವನವನ್ನು ಸಮೀಪಿಸಿದನು. ನನ್ನ ಅದೃಷ್ಟದಿಂದ ಇಲ್ಲಿಯೇ ಸುಭದ್ರೆಯನ್ನು ಕಾಣಲು ಸಾಧ್ಯವಾಗುತ್ತದೆಯೇ ಎಂದು ಮೊದಲಾಗಿ ಯೋಚಿಸುತ್ತ ಸುಭದ್ರೆ ಇದ್ದ ಮಾಧವಿ ಮಂಟಪದ ಹತ್ತಿರ ಬರುತ್ತಾನೆ. ಈ ರೀತಿಯಾಗಿ ಬಂದ ಅರ್ಜುನನನ್ನು ಇದ್ದಕ್ಕಿದ್ದಂತೆ ನೋಡಿದ ಸುಭದ್ರೆಯ ಮನಸ್ಥಿತಿಯನ್ನು ಪಂಪನು ಈ ರೀತಿಯಾಗಿ ಚಿತ್ರಿಸಿದ್ದಾನೆ.

"ಪಡಿದೆಱೆವಂದದಿಂದಮೆರ್ದೆಯುಂ ತೆಱೆದತ್ತು ಪೊದಳ್ದ ಸಂಕೆಯಿಂ
ನಡುಕಮುಮಾಗಳುಬ್ಬದಿಗಮಾದುದು ಸಾಧ್ವಸದಿಂ ಬೆಮರ್ ಬೆಮ
ರ್ವೆಡೆಗಳಿನುಣ್ಮಿ ಪೊಣ್ಮಿದುದು ಕಣ್ ನಡೆ ನೋಡದೆ ತಪ್ಪು ನೋಡಿ ನಾ
ಣೆಡೆಯೊಳಮಾದುದಾ ಸತಿಗೆ ನೋಡಲೊಡಂ ಪಡೆಮೆಚ್ಚೆಗಂಡನಂ"[೨೮೩]

ಪಡೆಮೆಚ್ಚೆಗಂಡ ಎನಿಸಿದ ಅರ್ಜುನನನ್ನು ನೋಡಿದ ಕೂಡಲೇ ಸುಭದ್ರೆಗೆ ಬಾಗಿಲು ತೆರೆಯುವಂತೆ ಅವಳ ಎದೆಯು ತೆರೆಯಿತು. ಆ ಸಮಯದಲ್ಲಿ ಉಂಟಾದ ಸಂದೇಹದಿಂದ ನಡುಕವೂ ತಲೆದೋರಿತು. ಅವನನ್ನು ಕಂಡ ಸಡಗರದಿಂದ ಬೆವರು ಹೆಚ್ಚಿ ಹೊರಹೊಮ್ಮಿತು. ಆತನನ್ನು ಕಣ್ಣುಗಳ ಲಜ್ಜೆಯಿಂದ ನೇರವಾಗಿ ನೋಡಲಾಗದೆ ತಪ್ಪು ನೋಟದಿಂದ ನೋಡಿದಳು. ಇಲ್ಲಿ ಇದ್ದಕ್ಕಿದ್ದಂತೆ ಮಾಧವಿ ಮಂಟಪದ ಬಳಿ ತನ್ನ ಮನದ ಕ್ಷೋಭೆಗಳಿಗೆ ಕಾರಣವಾದ ಅರ್ಜುನನನ್ನು ನೋಡಿದ ಕೂಡಲೆ ಆಕೆಗೆ ಆಶ್ಚರ್ಯ, ಸಂದೇಹಗಳು ಒಡಮೂಡಿರುವುದು ತಿಳಿಯುತ್ತದೆ. ಅದರ ಜೊತೆಗೆ ಭಯ, ಬೆವರುಗಳ ಪ್ರತಿಕ್ರಿಯೆಗಳು ಕೂಡ ಆಕೆಯಿಂದ ವ್ಯಕ್ತವಾಗುವುದು ಕಂಡುಬರುತ್ತದೆ.

ಈ ರೀತಿಯಾಗಿ ಇರುವಾಗ ಅವರಿಬ್ಬರ ವಿರಹತಾಪಕ್ಕೆ ಸಂಬಂಧಿಸಿದ ಮಾತುಗಳು ಕೃಷ್ಣನಿಗೆ ಮುಟ್ಟುತ್ತವೆ. ಇದರಿಂದ ಸಂತೋಷಪಟ್ಟ ಆತ ಅಲ್ಲಿಗೆ ಬಂದು ಅವರಿಬ್ಬರ ಮನದ ದುಗುಡವನ್ನು ಹೋಗಲಾಡಿಸುತ್ತಾನೆ. ನಂತರ ಬಲರಾಮನು ಸುಭದ್ರೆಯನ್ನು ದುರ್ಯೋಧನನಿಗೆ ಕೊಟ್ಟು ಮದುವೆ ಮಾಡುವ ಯೋಚನೆಯಲ್ಲಿರುವುದನ್ನು ತಿಳಿಸಿ, ಅದಕ್ಕೆ ನನ್ನ ಸಮ್ಮತಿ ಇಲ್ಲವೆಂದು ಹೇಳಿ, ಅರ್ಜುನನಿಗೆ ಸುಭದ್ರೆಯನ್ನು ಕರೆದುಕೊಂಡು ಹೋಗುವಂತೆ ತಿಳಿಸುತ್ತಾನೆ. ನಂತರ ಇಬ್ಬರ ವಿವಾಹ ಕಾರ್ಯಗಳು ಜರುಗುತ್ತವೆ.

'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಲ್ಲಿ ಅರ್ಜುನನು ವಿಪ್ರರಿಗೊದಗಿದ ಕಳ್ಳರ ಉಪಟಳವನ್ನು ಪರಿಹರಿಸುವ ಸಲುವಾಗಿ ಶಸ್ತ್ರಾಸ್ತ್ರಗಳನ್ನು ತೆಗೆದುಕೊಳ್ಳಲು ರಾಯನ ಸಜ್ಜೆಯ ಅರಮನೆಗೆ ಬರುತ್ತಾನೆ. ಅಲ್ಲಿ ಅರಸನೂ ಅರಸಿಯೂ ಮಂಚದಲ್ಲಿರುವ ದರ್ಶನವಾಯಿತು. ಅದರ ಪ್ರಾಯಶ್ಚಿತ್ತಾರ್ಥವಾಗಿ ಒಂದು ವರ್ಷ ಕಾಲ ಭೂಪ್ರದಕ್ಷಿಣೆ ಮಾಡಬೇಕಾಗಿ ಬರುತ್ತದೆ. ಹೀಗೆ ಹಲವು ದೇಶಗಳನ್ನು ಸಂಚರಿಸುತ್ತ ಬಂದ ಅರ್ಜುನನು ಸನ್ಯಾಸಿ ವೇಷವನ್ನು ಧರಿಸಿ ಕೃಷ್ಣನ ನಗರಿಗೆ ಬರುತ್ತಾನೆ. ಬಲರಾಮ ಈತನನ್ನು ಸತ್ಕರಿಸಲೆಂದು ಅರಮನೆಗೆ ಕರೆತಂದು ತಂಗಿಯಾದ ಸುಭದ್ರೆಯನ್ನು ಆತನ ಸತ್ಕಾರಕ್ಕಾಗಿ ನೇಮಿಸುತ್ತಾನೆ. ಆ ಸನ್ಯಾಸಿ ದೇವರನ್ನು ನೋಡಿದ ಸುಭದ್ರೆಯ ಮನಸ್ಥಿತಿಯನ್ನು ಕುಮಾರವ್ಯಾಸ ಈ ರೀತಿಯಾಗಿ ಚಿತ್ರಿಸಿದ್ದಾನೆ.

> "ಬಾಲಕಿಗೆ ಸಂನ್ಯಾಸಿ ದೇವರ
> ಮೇಲೆ ಮನವಾಯ್ತವರಿಗೀಕೆಯ
> ಮೇಲೆ ನೆಲಸಿತು ಚಿತ್ತ ಕಾಣೆನು ಜಪ ಸಮಾಧಿಗಳ
> ಮೇಳವಿಸಿತನ್ಯೋನ್ಯ ರಾಗ ಛ
> ಡಾಳಿಸಿದುದಭಿಲಾಷೆ ಕಾಮನ
> ಬೇಳುವೆಗೆ ಬೆಂಡಾದುದಿಬ್ಬರ ಧೈರ್ಯವಡಿಗಡಿಗೆ"[೨೮೪]

ಬಾಲಕಿಗೆ ಸನ್ಯಾಸಿ ದೇವರ ಮೇಲೆ ಮನವಾಯ್ತು. ಅದರಂತೆ ಸಂನ್ಯಾಸಿ ದೇವರಿಗೂ ಈಕೆಯ ಮೇಲೆ ನೆಲೆಸಿತು ಚಿತ್ತ. ಜಪ ಸಮಾಧಿಗಳನು ಕಾಣೆನು. ಇಬ್ಬರಲ್ಲಿಯೂ ಅನ್ಯೋನ್ಯವಾದ ಅನುರಾಗವು ಮೇಳೈಸಿತು. ಅಭಿಲಾಷೆಯು ಹೆಚ್ಚಿತು. ಕಾಮನ ಬೇಳುವೆಗೆ ಇಬ್ಬರ ಧೈರ್ಯವು ಅಡಿಗಡಿಗೆ ಬೆಂಡಾಯಿತು.

ಈ ವಿಚಾರಗಳು ಗೊತ್ತಿದ್ದ ಕೃಷ್ಣ ಅವರಿಬ್ಬರಿಗೂ ಬಲರಾಮನಿಗೆ ತಿಳಿಯದಂತೆ ವಿವಾಹ ಕಾರ್ಯಗಳನ್ನು ನೆರವೇರಿಸಿ ಆ ಸನ್ಯಾಸಿಯ ಜೊತೆ ಸುಭದ್ರೆಯನ್ನು ಕಳುಹಿಸಿಕೊಟ್ಟನು. ಪಂಪ ದೀರ್ಘವಾಗಿ ವರ್ಣಿಸಿರುವ ಸುಭದ್ರೆಯ ವಿರಹದ ಭಾಗವನ್ನು ಕುಮಾರವ್ಯಾಸನು ಒಂದೇ ಪದ್ಯದಲ್ಲಿ ಹೇಳಿ ಮುಗಿಸಿದ್ದಾನೆ.

೩.೫.೧.ಆ. ಅಭಿಮನ್ಯುವಿನ ಮರಣದ ಸಂದರ್ಭದಲ್ಲಿನ ಸಂಘರ್ಷಗಳು.

ಪಾಂಡವ ಕೌರವರಲ್ಲಿ ಒಡಮೂಡಿದ ದ್ವೇಷವು ಮಹಾಭಾರತ ಯುದ್ಧಕ್ಕೆ ನಾಂದಿಯಾಗಿ ಭೀಷ್ಮ, ದ್ರೋಣರಂತಹ ವೀರರು ಅಸುನೀಗುತ್ತಾರೆ. ಇದೇ ಸಮಯದಲ್ಲಿ 'ದ್ರೋಣಪರ್ವ'ದಲ್ಲಿ ಕಂಡುಬರುವ ಅಭಿಮನ್ಯುವಿನ ಮರಣ ಪ್ರಸಂಗ ಪ್ರಮುಖವಾದುದು. ಬಾಲಕನಾಗಿರುವಾಗಲೆ ದ್ರೋಣನು ರಚಿಸಿದ 'ಚಕ್ರವ್ಯೂಹ'ವನ್ನು ಭೇದಿಸಿ ಅಸಂಖ್ಯಾತ ಸೈನಿಕರನ್ನು ಕೊಂದು ದುರ್ಯೋಧನಾದಿಯಾಗಿ ಕರ್ಣ ಮೊದಲಾದವರನ್ನು ಒಂದು ಕ್ಷಣ ತಲ್ಲಣಕ್ಕೆ ಒಳಗು ಮಾಡಿದ ಅಭಿಮನ್ಯುವು ಕೌರವರ ಕುತಂತ್ರಗಳಿಗೆ ಒಳಗಾಗಿ ಮರಣಿಸುತ್ತಾನೆ. ಈ ಸಂಗತಿಯನ್ನು ತಿಳಿದ ಸುಭದ್ರೆಯ ನೋವು, ಮಗನನ್ನು ಕಳೆದುಕೊಂಡ ಆಕೆಯ ಆಕ್ರಂದನಗಳು ಮನಮುಟ್ಟುವಂತಹವು. ಅದನ್ನು ಕುಮಾರವ್ಯಾಸನು ಮನಮಿಡಿಯುವಂತೆ ಚಿತ್ರಿಸಿದ್ದಾನೆ.

"ಅರಮನೆಯ ಗಜಬಜವ ಕೇಳಿದು
ದೊರೆಯೊಳಾವನಳಿದನಕಟೆಂ
ದರಸಿಯರು ಬೆಸಗೊಳಲು ದ್ರೌಪದಿಗರುಹಿದರು ಹದನ
ಉರಿವ ಡಾವರವೆಳೆಯ ಬಾಳೆಯ
ಬೆರಸುವಂತಿರೆ ರಾಯ ಕುವರನ
ಮರಣ ವಾರ್ತೆಯನಾ ಸುಭದ್ರಾ ದೇವಿ ಕೇಳಿದಳು"[೨೮೫]

ಅರಮನೆಯೊಳಗೆ ಆದ ಗಜಬಜವನ್ನು ಕೇಳಿ ದೊರೆಗಳಲ್ಲಿ ಯಾರು ಅಳಿದನೊ? ಅಯ್ಯೋ ಎಂದು ದಿಗಿಲಿನಿಂದ ಅರಮನೆಯ ಅರಸಿಯರು ಬೆಸಗೊಳ್ಳಲು ಅಭಿಮನ್ಯುವಿನ ಮರಣದ ಸಂಗತಿಯನ್ನು ದ್ರೌಪದಿಗೆ ಅರುಹಿದರು. ಇಲ್ಲಿ ದೊರೆಗಳಲ್ಲಿ ಯಾರು ಅಳಿದನೊ? ಎಂಬ ಮಾತಿನಲ್ಲಿರುವ ಆತಂಕ, ತಲ್ಲಣಗಳು ಗಮನಿಸಬೇಕಾದವು. ಹಾಗೂ ಆ ಕಾಲದ ಅರಮನೆಯಲ್ಲಿದ್ದ ಎಲ್ಲ ಸ್ತ್ರೀಯರ ತಳಮಳಗಳೇ ಆಗಿವೆ. ಯುದ್ಧಕ್ಕೆ ಹೋದ ಪತಿ ಏನಾಗುವನೋ? ಬದುಕಿ ಮರಳಿ ಬರುವನೋ? ಎಂಬ ಭಯದಲ್ಲಿಯೆ ಕಾಲ ಕಳೆಯುವ ಬದುಕು ಇವರದ್ದು. ಯುದ್ಧದ ಸಂದರ್ಭದ ಪ್ರತಿ ಕ್ಷಣಗಳು ಕೂಡ ಇವರಿಗೆ ಆತಂಕ, ತಲ್ಲಣಗಳನ್ನು ಸೃಷ್ಟಿಸುತ್ತಿದ್ದುದನ್ನು ಗಮನಿಸಬಹುದಾಗಿದೆ. ಇತ್ತ ಉರಿವ ಡಾವರವು ಎಳೆಯ ಬಾಳೆಯ ಎಲೆಯ ಮೇಲೆ ಹರಿವಂತೆ ರಾಜಕುಮಾರನಾದ ಅಭಿಮನ್ಯುವಿನ ಮರಣ ವಾರ್ತೆಯನ್ನು ಸುಭದ್ರಾ ದೇವಿಯು ಕೇಳಿದಳು.

"ಅಳಲ ಶಿಖಿಯಲಿ ಬಾಡಿದಾನನ
ಜಲರುಹದ ಕಡುವೇದನೆಯ ಕಳ
ಕಳದ ಹಾಹಾ ರವದ ರೌದ್ರೆ ಸುಭದ್ರೆ ನಡೆತಂದು
ನೆಲಕೆ ಧೊಪ್ಪನೆ ಕೆಡೆದು ಸಭೆಯಲಿ
ಹಲುಬಿದಳು ಕೊಳುಗುಳಕೆ ಕಂದನ
ಕಳುಹಿದವರಿಗೆ ಸಂದುದೇ ಪರಿಣಾಮವೆಂದೆನುತ"[೨೮೬]

ಅಳಲಿನ ಬೆಂಕಿಯಲ್ಲಿ ಮುಖ ಕಮಲವು ಬಾಡಿರಲು ಕಡುವೇದನೆಯಿಂದ ನೊಂದು ಕಳಕಳದ ಹಾ ಹಾ ರವದಿಂದ ರೌದ್ರೆಯಾದ ಸುಭದ್ರೆಯು ನಡೆದು ಬಂದು ನೆಲದಲ್ಲಿ ಧೊಪ್ಪನೆ ಬಿದ್ದಳು. ಸಭೆಗೆ ಬಂದು 'ಕೊಳಗುಳಕೆ ಕಂದನನ್ನು ಕಳುಹಿದವರಿಗೆ ತಮ್ಮಿಷ್ಟಾರ್ಥಗಳು ಈಡೇರಿದವೇ' ಎಂದು ಬಗೆಬಗೆಯಾಗಿ ಹಲುಬಿದಳು. ಸುಭದ್ರೆ ಇಲ್ಲಿ ನೇರವಾಗಿ ಪಾಂಡವರನ್ನು ಪ್ರಶ್ನಿಸುತ್ತಾಳೆ ಹಾಗೂ ನಿಂದಿಸುತ್ತಾಳೆ. ಏಕೆಂದರೆ ಮಗನನ್ನು ಕಳೆದುಕೊಂಡ ತಾಯಿಯ ಹೃದಯ ದುಃಖಾಗ್ನಿಯಲ್ಲಿ ಬೇಯುತ್ತಿದೆ. ಕಾರಣ ಬಾಲಕನನ್ನು ದ್ರೋಣನಂತಹ ಚಾಣಾಕ್ಯ ರಚಿಸಿದ ಚಕ್ರವ್ಯೂಹವನ್ನು ಭೇದಿಸಲು ಕಳುಹಿಸಿದ ಕ್ರಮವನ್ನು ಪ್ರಶ್ನಿಸುತ್ತ, ತನ್ನ ನೋವನ್ನು ಹೊರಹಾಕುತ್ತಾಳೆ. ನಂತರ ನೇರವಾಗಿ ಧರ್ಮರಾಯನಾದಿಯಾಗಿ ಪಾಂಡವರನ್ನು ಕುರಿತು

"ಎಲೆ ಯುಧಿಷ್ಠಿರದೇವ ಸಾಲದೆ
ಕೆಲನ ಮೆಚ್ಚಿಸುವಳಲು ಲೋಚನ
ಜಲವ ತೊಡೆಯೈ ಭೀಮ ಬಲ್ಲೆನು ನಿಮ್ಮ ನೆನಹುಗಳ
ಅಳಲದಿರಿ ಸಹದೇವ ನಕುಳರು
ನಿಲಿಸಿರೈ ನಿಮ್ಮಿಷ್ಟ ಸಿದ್ಧಿಯ
ಬೆಳಸು ಫಲವಾಯ್ತೇಕೆ ನೋವಿನ್ನೆಂದಳಿಂದುಮುಖಿ"[೨೮೭]

ಎಲೆ ಯುಧಿಷ್ಠಿರದೇವ ಪಕ್ಕದಲ್ಲಿರುವವರನ್ನು ಮೆಚ್ಚಿಸುವ ಈ ಅಳಲು ಸಾಲದೆ? ಕಣ್ಣೀರಿನ ಹನಿಗಳನ್ನು ತೊಡೆಯೈಯ್ಯಾ ಭೀಮಾ, ಬಲ್ಲೆನು ನಾನು ನಿಮ್ಮ ಯೋಚನೆಗಳು ಏನೆಂಬುದನ್ನು. ಹಾಗಾಗಿ ಅಳಲದಿರಿ ಸಹದೇವ ನಕುಳರೇ ನಿಲ್ಲಿಸಿ ಸಾಕು. ನಿಮ್ಮ ಇಷ್ಟಸಿದ್ಧಿಯ ಬೆಳಸು ಫಲವಾಯಿತಲ್ಲವೇ? ಇನ್ನೇಕೆ ನಿಮಗೆ ನೋವು? ಎಂದಳು ಇಂದುಮುಖಿ. ಸುಭದ್ರೆಯು ಇಲ್ಲಿ ಧರ್ಮರಾಯನಾದಿಯಾಗಿ ಎಲ್ಲರನ್ನು ಕುರಿತು ಕೇಳುವ ಪ್ರಶ್ನೆಗಳು ಹಾಗೂ ಅವರನ್ನು ಅವಹೇಳನ ಮಾಡುವ ರೀತಿಯ ಆಕೆಯ ಮಾತುಗಳ ಹಿಂದೆ ಅಭಿಮನ್ಯುವನ್ನು ಉದ್ದೇಶಪೂರ್ವಕವಾಗಿಯೆ ರಣಭೂಮಿಗೆ ಕಳುಹಿಸಿರುವ ಸೂಚನೆಗಳು ಸಿಗುತ್ತವೆ. ಇಲ್ಲದಿದ್ದರೆ ಸುಭದ್ರೆಯು ಇಷ್ಟು ಕಠೋರವಾದ ನುಡಿಗಳಿಂದ ಪಾಂಡವರನ್ನು ನಿಂದಿಸುವ ಅಗತ್ಯವಿರಲಿಲ್ಲ. ಮುಂದುವರೆದು ಅದಕ್ಕೆ ಕಾರಣಗಳನ್ನೂ ಆಕೆಯೆ ನೀಡುತ್ತಾಳೆ.

"ಮಗನು ಪಂಚದ್ರೌಪದೇಯರ
ಬಗೆಯನೆನ್ನೆವನಿರಲು ರಾಜ್ಯವ
ಹೊಗಿಸಲನುವಿಲ್ಲೆಂದು ಕಂದನ ರಣಕೆ ನೂಕಿದಿರಿ
ಬಗೆಯೊಲವು ಫಲವಾಯ್ತಲಾ ಕಾ
ಳೆಗವ ಗೆಲಿದ್ರೈವರು ಕುಮಾರರು
ಹೊಗಿಸಿರೈ ಗಜಪುರವನೆಂದು ಸುಭದ್ರೆ ಹಲುಬಿದಳು"[೨೮೮]

ನನ್ನ ಮಗನಾದ ಈ ಅಭಿಮನ್ಯುವು ಪಂಚದ್ರೌಪದೇಯರನ್ನೂ ಲಕ್ಷಿಸುವವನಲ್ಲ. ಅವನು ಅಂತಹ ಪರಾಕ್ರಮಿ. ಇವನಿದ್ದರೆ ಪಂಚದ್ರೌಪದೇಯರನ್ನು ರಾಜ್ಯದಲ್ಲಿ ನೆಲೆಗೊಳಿಸುವುದಕ್ಕೆ ಆಗುವುದಿಲ್ಲ, ಎಂದು ತಿಳಿದು ನನ್ನ ಕಂದನನ್ನು ಯುದ್ಧಕ್ಕೆ ನೂಕಿದಿರಿ. ನೀವು ಎಣಿಸಿದಂತೆ ನಿಮ್ಮ ಮನದ ಕಾರ್ಯವು ಫಲಿಸಿತಲ್ಲವೆ? ಐವರೂ ಕುಮಾರರೂ ಕಾಳಗವನ್ನು ಗೆಲಿದರಲ್ಲವೆ? ಇನ್ನೇನು ಅವರಿಗೆ ಪಟ್ಟವನ್ನು ಕಟ್ಟಿ ಗಜಪುರವನ್ನು ಪ್ರವೇಶಿಸಿ ಎಂದು ಸುಭದ್ರೆಯು ಹಲುಬಿದಳು.

ಇಲ್ಲಿ ಗಮನಿಸಬೇಕಾದ ಬಹುಮುಖ್ಯ ಸಂಗತಿ ಎಂದರೆ ಸುಭದ್ರೆ ಹಾಗೂ ದ್ರೌಪದಿಯರ ನಡುವೆ ನಡೆದಿರಬಹುದಾದ ಸವತಿ ಮಾತ್ಸರ್ಯದ ಕಿಡಿಗಳನ್ನು ಕವಿ ಸುಭದ್ರೆಯ ಮಾತುಗಳ ಮೂಲಕ ನಮ್ಮ ಗಮನಕ್ಕೆ ತರಲು ಪ್ರಯತ್ನಿಸಿದ್ದಾನೆ. ಏಕೆಂದರೆ ದ್ರೌಪದಿಯ ಮಕ್ಕಳಿಗೆ ಪಟ್ಟವನ್ನು ಕಟ್ಟುವ ಸಲುವಾಗಿಯೆ ನೀವೆಲ್ಲರೂ ಸೇರಿ ವೀರನಾದ ನನ್ನ ಮಗನನ್ನು ಯುದ್ಧಕ್ಕೆ ಕಳಿಹಿಸಿ ಕೊಂದಿರಿ ಎಂದು ಸುಭದ್ರೆ ಇಲ್ಲಿ ಇಷ್ಟು ನಿಷ್ಠುರವಾಗಿ ನುಡಿಯುತ್ತಿದ್ದಾಳೆಂದರೆ ಅದರ ಹಿಂದೆ ಇವರಿಬ್ಬರ ನಡುವೆ ಈ ರೀತಿಯ ಸಂಘರ್ಷಗಳು ನಡೆದಿವೆ ಎಂಬುದು ನಮಗೆ ತಿಳಿದುಬರುತ್ತದೆ. ಇದೇ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೊಂದು ವಿಚಾರವೆಂದರೆ ಇಲ್ಲೂ ಕೂಡ ವಿದುರನ ತಾಯಿಯ ಸಂದರ್ಭದಲ್ಲಿಯಂತೆಯೇ ರಾಜ್ಯದ ಪಟ್ಟ ತಂದೆಯ ಮೂಲಕ ನಿರ್ಧಾರಿತವಾಗದೆ, ತಾಯಿಯ ಮೂಲಕ ನಿರ್ಧಾರವಾಗುವುದು ಸ್ಪಷ್ಟವಾಗುತ್ತದೆ. ಏಕೆಂದರೆ ತಂದೆಯ ಮೂಲಕ ರಾಜ್ಯಪಟ್ಟವು ನಿರ್ಧಾರಿತವಾಗುವಂತಿದ್ದರೆ ಅರ್ಜುನ ದ್ರೌಪದಿಯಿಂದಲೂ ಮಕ್ಕಳನ್ನು ಪಡೆದಿದ್ದ. ದ್ರೌಪದಿ ಹಾಗೂ ಸುಭದ್ರೆಯರಿಬ್ಬರಿಗೂ ಒಬ್ಬನೇ ಪತಿ. ಆದರೆ ಅರ್ಜುನನಿಗೆ ಪತ್ನಿ ಒಬ್ಬಳಲ್ಲ. ಹಾಗಾಗಿ ಇಲ್ಲಿ ತಾಯಿಯ ಮೂಲಕ ರಾಜ್ಯ ಪದವಿ ನಿರ್ಧಾರಿತವಾಗುತ್ತಿರುವ ಕಾರಣವಾಗಿ ಸುಭದ್ರೆ ಈ ಮಾತುಗಳನ್ನು ಆಡುತ್ತಾಳೆ. ನಂತರ ಸುಭದ್ರೆಯು ಮುಂದುವರೆದು

"ಅಕಟ ಮಗನೇ ಬಹಳ ಪಾಪಾ
ತ್ಮಕರ ಬಸುರಲಿ ಬಹುದರಿಂದೀ
ನಕುಳನುದರದಲಾಗಲೀ ಧರ್ಮಜನ ಜಠರದಲಿ
ಸುಕೃತಿ ನೀನುದಯಿಸಲು ಬಹು ಕಂ
ಟಕರು ಬಳಿಕಾರುಂಟು ಕಡು ಪಾ
ತಕಿಯಲಾ ನಿಮ್ಮಯ್ಯನೆಂದಳು ಫಲುಗುಣನ ರಾಣಿ"[೨೮]

ಅಯ್ಯೋ ಮಗನೇ ಬಹಳ ಪಾಪಾತ್ಮಕರಾದ ನಮ್ಮ ಹೊಟ್ಟೆಯಲ್ಲಿ ಹುಟ್ಟುವುದಕ್ಕಿಂತ ಈ ನಕುಳನ ಉದರದಲ್ಲಾಗಲಿ, ಈ ಧರ್ಮಜನ ಜಠರದಲ್ಲಾಗಲಿ ಜನಿಸಿದ್ದರೆ ನಿನಗೆ ಸುಕೃತಿಯೊದಗುತ್ತಿತ್ತು. ಪುಣ್ಯವಂತನಾಗಿ ಜೀವಿಸುತ್ತಿದ್ದೆ. ಆಗ ನಿನಗೆ ಯಾರು ಕಂಟಕರು ಇರುತ್ತಿದ್ದರು? ಅಯ್ಯೋ ನಿಮ್ಮ ತಂದೆಯು ಕಡುಪಾತಕಿಯಲ್ಲವೆ? ಎಂದು ಫಲುಗುಣನ ರಾಣಿಯಾದ ಸುಭದ್ರೆಯು ದುಃಖಿಸಿದಳು. ಮುಂದುವರೆದು ಧರ್ಮರಾಯನನ್ನು ಕುರಿತು ಅತಿ ನಿಷ್ಠುರವಾದ ನುಡಿಗಳಿಂದ ಮಾತನಾಡುತ್ತಾಳೆ.

"ಧುರವ ಹೊಗತಕ್ಕವನೆ ಚಿಕ್ಕವ
ನಿರಿಯಲಾಪನೆ ಬಹನೆ ಮರಳಿದು
ಧರೆಯ ವೈಭವಕಳುಪಿ ಕಳುಹಿದಿರೆನ್ನ ಕಂದನನು
ವರ ಯುಧಿಷ್ಠಿರ ಜನಪ ಲೋಕದ
ಕರುಣಿಯೆಂಬರು ಕುನ್ನಿಗಳು ಮರೆ
ಗೊರಳುಗೊಯ್ಕನನರಿಯರೆಂದಳು ಫಲುಗುಣನ ರಾಣಿ"[೨೯೦]

ಇವನು ರಣಭೂಮಿಯನ್ನು ಹೊಗತಕ್ಕವನೆ, ಚಿಕ್ಕವನಾದ ಇವನು ಶತ್ರುಗಳನ್ನು ಇರಿಯಬಲ್ಲನೆ? ಆ ವ್ಯೂಹದಿಂದ ಮರಳಿ ಬರಬಲ್ಲನೆ? ಧರೆಯ ವೈಭವಕ್ಕೆ ಅಳುಕಿ ನನ್ನ ಕಂದನನ್ನು ಯುದ್ಧಕ್ಕೆ ಕಳುಹಿಸಿ ಬಲಿಕೊಟ್ಟರಲ್ಲ ಎಂದು ಧರ್ಮಜನನ್ನು ಪ್ರಶ್ನಿಸಿ ನಿಂದಿಸುತ್ತಾಳೆ. ಶ್ರೇಷ್ಠನಾದ ಯುಧಿಷ್ಠಿರ ಮಹಾರಾಜನು ಲೋಕದಲ್ಲಿ ಕರುಣಿಯೆನ್ನುವರು ಕುನ್ನಿಗಳು. ಆದರೆ ಅವನು ಮರೆಯಲ್ಲಿ ನಿಂತು ಕೊರಳನ್ನು ಕೊಯ್ಯುವವನೆಂದು (ಮರೆಗೊರಳುಗೊಯ್ಕ) ಅವರು ಅರಿಯರು ಎಂದು ನುಡಿಯುತ್ತಾಳೆ ಸುಭದ್ರೆ. ಇಲ್ಲಿ ಸುಭದ್ರೆ ಬಳಸುವ 'ಜನಪ ಲೋಕದ ಕರುಣಿಯೆಂಬರು' ಹಾಗೂ 'ಮರೆಗೊರಳುಗೊಯ್ಕ' ಎಂಬ ಪದಗಳು ಬಹುಮುಖ್ಯವಾಗಿ ಚರ್ಚಿಸಬೇಕಾದವು. ಏಕೆಂದರೆ ಧರ್ಮರಾಯನು ಹಿಂಸೆಯನ್ನು ಬಯಸುವವನಲ್ಲ. ಎಲ್ಲರಲ್ಲು ಕರುಣೆಯನ್ನು ಹೊಂದಿರುವವನೆಂಬುದು ನಮಗೆ ತಿಳಿದಿರುವ ಸಂಗತಿ. ಆದರೆ ಇಲ್ಲಿ ಸುಭದ್ರೆ ಹೇಳುವಂತೆ ಆತ ಕರುಣಿಯಲ್ಲ, ಕಪಟಿ ಆತ. ಸಮಯ ಸಾಧಕನ ರೀತಿಯ ಮನಸ್ಥಿತಿಯವನು ಎಂಬುದು ಆಕೆಯ ಅಭಿಪ್ರಾಯ.

ಅಲ್ಲದೆ ಕೊನೆಗೆ ಹೇಳುವ 'ಮರೆಗೊರಳುಗೊಯ್ಕ' ಎಂಬುದು ದೇಸಿ ನುಡಿಯಾಗಿದ್ದು, ನಯವಂಚಕರನ್ನು ಹಾಗೂ ನಂಬಿಸಿ ಮೋಸ ಮಾಡುವವರನ್ನು ಕುರಿತು ಜನರು ಬಳಸುವ ಪದವಾಗಿದೆ. ಅಂತಹ ಪದವನ್ನು ಸುಭದ್ರೆಯು ಇಲ್ಲಿ ಧರ್ಮರಾಯನಿಗೆ ಸಂಬಂಧಿಸಿದಂತೆ ಬಳಸುತ್ತಾಳೆ. ಕಾರಣ ಧರ್ಮರಾಯನು ಯಾರನ್ನೂ ಅಪಮೃತ್ಯುವಾಗಲು ಬಿಡುವುದಿಲ್ಲ. ತನ್ನ ಸತ್ಯದ ಕಾರಣವಾಗಿ ಎಲ್ಲರನ್ನೂ ಕಾಪಾಡುವನು ಎಂದು ನಂಬಿದ್ದರು. ಆದರೆ ಇಂದು ಅಭಿಮನ್ಯುವನ್ನು ಆತ ರಕ್ಷಣೆ ಮಾಡದಿದ್ದಾಗ ಆತ ಉದ್ದೇಶಪೂರ್ವಕವಾಗಿಯೆ ಅಭಿಮನ್ಯುವನ್ನು ಬಲಿ ಕೊಟ್ಟಿದ್ದಾನೆಂಬ ಭಾವನೆ ಸುಭದ್ರೆಯ ಮನಸ್ಸಿನಲ್ಲಿ ಮೂಡಿರುವುದನ್ನು ನಾವು ಗಮನಿಸಬಹುದು. ಇದು ಏನೇ ಇದ್ದರೂ ಸಹ ಯಾವ ತಾಯಿಯೇ ಆದರೂ ತನ್ನ ಕಂದನ ಸಾವನ್ನು ಬಯಸುವುದಿಲ್ಲ. ಇಲ್ಲಿ ಸುಭದ್ರೆಯು ತನ್ನ ದುಃಖದ ತೀವ್ರತೆಯನ್ನು ಪಾಂಡವರ ಮೇಲೆ ಕೋಪಗೊಳ್ಳುವುದರ ಮೂಲಕ ಹೊರದೂಡುತ್ತಾಳೆಂಬುದು ತಿಳಿಯುತ್ತದೆ. ಸುಭದ್ರೆಯಾದಿಯಾಗಿ ಈ ಹೊತ್ತಿನ ಹೆಣ್ಣುಗಳೂ ಕೂಡ ತಮ್ಮ ಮಕ್ಕಳ ಯೋಗಕ್ಷೇಮವನ್ನೆ ಬಯಸುವರೇ ವಿನಃ ಸಾವನ್ನು ನಿರೀಕ್ಷಿಸುವುದಿಲ್ಲ. ಏಕೆಂದರೆ ತಾಯ್ತನ ಎಂಬುದೇ ಅಂತಹುದು. ಅದು ಎಂದಿಗೂ ಮಕ್ಕಳು ತನ್ನ ಕಣ್ಣ ಮುಂದೆ ಚೆನ್ನಾಗಿ ಬಾಳಲೆಂದೇ ಹಪಹಪಿಸುತ್ತದೆಯೇ ಹೊರತು ನಾಶ ಹೊಂದಲಿ ಎಂದು ಬಯಸುವುದಿಲ್ಲ. ಈ ಹಿನ್ನೆಲೆಯಲ್ಲಿ ಸುಭದ್ರೆಯ ನೋವಿನ ಮಾತುಗಳು ಮನವನ್ನು ತಟ್ಟುತ್ತವೆ.

೩.೫.೨. ಮಾದ್ರಿ

ಕುಂತಿದೇವಿಯಂತೆ ಪಾಂಡುರಾಜನ ಕೈ ಹಿಡಿದ 'ಮಾದ್ರಿ'ಯು ಮದ್ರರಾಜನ ಮಗಳು ಹಾಗೂ ಶಲ್ಯನ ಒಡಹುಟ್ಟಿದವಳು. ಪಾಂಡುರಾಜನು ತೀರಿಕೊಂಡ ನಂತರ ತನ್ನ ಪತಿಯ ಜೊತೆ ಸಹಗಮನಕ್ಕೆ ಒಳಗಾಗುವ ಈಕೆಯನ್ನು ಕುರಿತ ಚರ್ಚೆಗಳು ವಿರಳ. ಆದರ್ಶ ಸ್ತ್ರೀಯಾಗಿ ತನ್ನ ಪತಿಯನ್ನು ಅನುಸರಿಸುವ ಹಿನ್ನೆಲೆಯ ಮನಸ್ಥಿತಿಯಲ್ಲಿ ಚರ್ಚಿಸಿರುವ ಅಂಶಗಳೇ ಹೆಚ್ಚು. ಆದರೆ ಸಹಗಮನಕ್ಕೆ ಆಕೆಯ ಸಂಪೂರ್ಣ ಒಪ್ಪಿಗೆ ಇದ್ದಿತೆ ಅಥವಾ ಆ ಕಾಲದ ಸಮಾಜ, ಸಂಸ್ಕೃತಿ ಹಾಗೂ ನೆರೆಹೊರೆಯವರ ಪ್ರಭಾವಗಳು ಅವಳನ್ನು ಸಹಗಮನಕ್ಕೆ ಒಳಗಾಗಲು ಪ್ರಚೋದಿಸಿದವೇ ಎಂಬಂತಹ ಮನಸ್ಸಿನ ಸೂಕ್ಷ್ಮ ವಿಚಾರಗಳ ಕಡೆಗೆ ಗಮನಹರಿಸಿದ ಅಧ್ಯಯನಗಳು ಕಡಿಮೆ. ಈ ಹಿನ್ನೆಲೆಯಲ್ಲಿ ಆಕೆಯ ಮನಸ್ಸಿನ ಸಂಘರ್ಷಗಳನ್ನು ಅಧ್ಯಯನಕ್ಕೆ ಒಳಪಡಿಸುವುದು ಮುಖ್ಯ ಹಾಗೂ ಸೂಕ್ತವಾದ ಸಂಗತಿ.

ಪಂಪನು ತನ್ನ 'ವಿಕ್ರಮಾರ್ಜುನ ವಿಜಯ' ಕೃತಿಯ ಎರಡನೆಯ ಆಶ್ವಾಸದ ಎರಡನೆಯ ಪದ್ಯದ ವಚನದ ಭಾಗದಲ್ಲಿ ನಮಗೆ ಮಾದ್ರಿಯ ವಿವರಗಳನ್ನು ತಿಳಿಸಿಕೊಡುತ್ತಾನೆ.

> "ಅಂತು ಗುಣಾರ್ಣವನ ಪುಟ್ಟಿದೊಸಗೆಯೊಳೊಸಗೆ ಮರುಳ್ಗೊಂಡು ಕುಂತಿಯುಂ
> ಪಾಂಡುರಾಜನುಮಿರೆ ಮಾದ್ರಿ ತನಗೆ ಮಕ್ಕಳಿಲ್ಲದುದರ್ಕೆ ವಿರಕ್ತೆಯಾಗಿ ಪೊಸೆದು ಬಿಸುಟ
> ರಕ್ತಾಶೋಕ ಪಲ್ಲವದಂತೆ ಕರಂ ಕೊರಗಿ ಚಿಂತಿಸುತಿರ್ದೊಡಾಕೆಯ ಬಿನ್ನನಾದ ಮೊಗದಂದಮಂ
> ಕಂಡು ಕುಂತಿ ಕರುಣಿಸಿ ಪುತ್ರೋತ್ಪತ್ತಿ ನಿಮಿತ್ತಂಗಳಪ್ಪ ಮಂತ್ರಾಕ್ಷರಂ ಗಳನುಪದೇಶಂ
> ಗೆಯ್ದೊಡಾಕೆಯುಂ ತದುಕ್ತ ಕ್ರಿಯೆಯೊಳಂ ನಿಯಮ ನಿಯಮಿತೆಯಾಗಿ"[೨೯]

ಪಂಪನು ನೀಡುವ ಮಾದ್ರಿಯ ಪರಿಚಯದ ಚಿತ್ರಣ ಇಲ್ಲಿ ಗಮನಿಸುವಂತಹದ್ದು. ಹೆಣ್ಣಿನ ಬಹುಮುಖ್ಯವಾದ ಆಸೆ ಮತ್ತು ಬಯಕೆಗಳ ಸಂಕೇತವಾದ ತಾಯ್ತನದ ಹಂಬಲವನ್ನು ಮಾದ್ರಿಯ ಮೂಲಕ ಕವಿ ಪ್ರಕಟಿಸುತ್ತಾನೆ. ಇಲ್ಲಿ ಆಕೆಯ ಮನದಲ್ಲಿನ ನೋವು, ದುಃಖದ ತಲ್ಲಣಗಳು ನಮ್ಮ ಗಮನ ಸೆಳೆಯುತ್ತವೆ. ಏಕೆಂದರೆ ಅರ್ಜುನನ ಜನ್ಮೋತ್ಸವದ ಸಂತೋಷ ಹಾಗೂ ಸಂಭ್ರಮಗಳಲ್ಲಿ ಕುಂತಿ ಹಾಗೂ ಪಾಂಡುರಾಜರು ವಿಶೇಷವಾದ ಮನಸ್ಸಂತೋಷದಿಂದ ಇದ್ದರು. ಆದರೆ ಮಾದ್ರಿಯು ತನಗೆ ಮಕ್ಕಳು ಇಲ್ಲದೆ ಇರುವುದಕ್ಕೆ ಅತ್ಯಂತ ಬೇಸರದಿಂದ ಉತ್ಸಾಹಹೀನಳಾಗಿ 'ಹೊಸೆದು ಬಿಸಾಡಿದ ಅಶೋಕದ ಚಿಗುರಿನಂತೆ ವಿಶೇಷವಾಗಿ ದುಃಖಪಡುತ್ತ ಚಿಂತಿಸುತ್ತಿದ್ದಳು' ಎಂಬ ಅಂಶವನ್ನು ಕವಿ ತಿಳಿಸುತ್ತಾನೆ. ಇಲ್ಲಿ ಮಾದ್ರಿಯ ಚಿಂತೆಗೆ ಮುಖ್ಯ ಕಾರಣ ಆಕೆಗೆ ಮಕ್ಕಳಿಲ್ಲದಿರುವುದು. 'ತಾಯ್ತನ' ಎಂಬ ಸಹಜ ಭಾವ ಪ್ರತಿ ಹೆಣ್ಣಿನ ಬದುಕಿನಲ್ಲಿನ ಒಂದು ಮಧುರ ಅನುಭವ. ಅದು ಆಕೆಯ ಜೀವನದ ಸಾರ್ಥಕತೆಯ ಹೆಚ್ಚುಗಾರಿಕೆಯೂ ಹೌದು. ಈ ಹಿನ್ನೆಲೆಯಲ್ಲಿ ಮಾದ್ರಿಯ ದುಃಖ ಹಾಗೂ ತಳಮಳಗಳಲ್ಲಿ ಆಕೆಯ ಮಾನಸಿಕ ಸಂಘರ್ಷಗಳು ಅಡಗಿರುವುದು ನಮಗೆ ತಿಳಿಯುತ್ತದೆ. ಪಂಪ ಮಹಾಕವಿ ಇಲ್ಲಿ ಆಕೆಯ ಮನದ ದುಗುಡವನ್ನು 'ಪೊಸೆದು ಬಿಸುಟ ರಕ್ತಾಶೋಕ ಪಲ್ಲವ'ಕ್ಕೆ ಹೋಲಿಸಿರುವುದು ಚರ್ಚಾರ್ಹವಾಗಿದೆ.

ಗಮನಿಸುವಂತಹ ಮತ್ತೊಂದು ಅಂಶ ಹೀಗೆ ಚಿಂತಿತಳಾಗಿ ಬಾಡಿದ ಮುಖದಿಂದ ಇದ್ದ ಮಾದ್ರಿ ದೇವಿಯನ್ನು ನೋಡಿದ ಕುಂತಿಯು ಆಕೆಗೆ ಪುತ್ರೋತ್ಪತ್ತಿ ಕಾರಣಗಳಾದ ಮಂತ್ರಗಳನ್ನು ಕರುಣಿಸಿ ಉಪದೇಶ ಮಾಡುವ ಸಂದರ್ಭ ವಿಚಾರಾರ್ಹವಾದುದು. ಕಾರಣ 'ಮಹಾಭಾರತ' ಹಾಗೂ ಅದರಿಂದ ಸ್ಫೂರ್ತಿಗೊಂಡು ರಚಿತವಾಗಿರುವ 'ವಿಕ್ರಮಾರ್ಜುನ ವಿಜಯ' ಹಾಗೂ 'ಕರ್ಣಾಟ ಭಾತರ ಕಥಾಮಂಜರಿ' ಕೃತಿಗಳಲ್ಲಿ ಮಕ್ಕಳನ್ನು ಪಡೆಯುವ ವಿಚಾರ ಹಾಗೂ ತಾಯ್ತನದ ಸಂದರ್ಭದಲ್ಲಿನ ಮತ್ಸರ ಹಾಗೂ ಅಸೂಯೆಯ ಸಂಗತಿಗಳು ನಮಗೆ ತಿಳಿದೇ ಇವೆ. ಕುಂತಿ ನನಗಿಂತ ಮೊದಲೇ ಮಕ್ಕಳನ್ನು ಪಡೆದಳು ಎಂಬ ಕಾರಣವಾಗಿ ಗಾಂಧಾರಿ ತನ್ನ ಬಸುರನ್ನು ಹಿಸುಕಿಕೊಳ್ಳುವ ಅಸೂಯೆಯ ಹಾಗೂ ಮತ್ಸರದ ಮನಸ್ಥಿತಿಯನ್ನು ನಾವು ಈ ಕೃತಿಗಳಲ್ಲಿ ಗಮನಿಸಬಹುದು. ಆದರೆ ಇಲ್ಲಿ ಕುಂತಿ ತಾನು ಆಶ್ರಯಿಸಿರುವ ಮರವನ್ನೇ ಅವಲಂಬಿಸಿರುವ ಇನ್ನೊಂದು ಜೀವವಾದ ಮಾದ್ರಿ ದೇವಿಗೆ ಮಕ್ಕಳನ್ನು ಪಡೆಯುವಂತಹ ಮಂತ್ರಗಳನ್ನು ಉಪದೇಶಿಸುವ ಗುಣ ನಿಜಕ್ಕೂ ಮೆಚ್ಚತಕ್ಕದ್ದು. ಈ ಕೃತಿಗಳಲ್ಲಿನ ಹೆಣ್ಣುಗಳಲ್ಲಿ ತಾಯ್ತನದ ವಿಚಾರವಾಗಿ ಮತ್ಸರದ ಹಾಗೂ ಔದಾರ್ಯದ ಎರಡೂ ಗುಣಗಳನ್ನು ಕಾಣಲಿಕ್ಕೆ ಸಾಧ್ಯತೆ ಇದೆ. ಏಕೆಂದರೆ ಇಂದಿನ ಆಧುನಿಕ ಕಾಲಘಟ್ಟದಲ್ಲಿ ಬಂಜೆತನ ಎಂಬುದು ಎಂತಹ ಮಾನಸಿಕ ಯಾತನೆ ಹಾಗೂ ಸಾಮಾಜಿಕ ಸಮಸ್ಯೆಯಾಗಿದೆ ಎಂಬುದು ದಿನನಿತ್ಯದ ಸಂಗತಿಯಾಗಿದೆ. ನಂತರದಲ್ಲಿ ಅಶ್ವಿನಿ ದೇವತೆಯರನ್ನು ಆಹ್ವಾನಿಸಿ ತಾನು 'ನಕುಲ' ಮತ್ತು 'ಸಹದೇವ'ರನ್ನು ಮಾದ್ರಿ ಪಡೆದುಕೊಳ್ಳುವ ವಿವರ ಕೃತಿಯ ಮುಂದುವರಿದ ಭಾಗದಲ್ಲಿ ಕಂಡುಬರುತ್ತದೆ.

ಇದು ಮಾದ್ರಿಯ ಬದುಕಿನ ಒಂದು ಮುಖದ ವಿವರವಾದರೆ, ನಂತರದ ಮಾದ್ರಿಯ ಸಂಘರ್ಷ ಅಥವಾ ನೋವುಗಳು ಪಾಂಡುರಾಜನ ಮರಣದ ಸಂದರ್ಭದಲ್ಲಿ ಕಂಡುಬರುವ ದುಃಖದ ಹಾಗೂ ಸಹಗಮನಕ್ಕೆ ಸಿದ್ಧವಾಗುವ ಸನ್ನಿವೇಶದ ವಿವರಗಳಾಗಿವೆ. ಒಮ್ಮೆ ಬಂದ ವಸಂತ ಋತುವಿನಲ್ಲಿ ಮಾದ್ರಿಯು ತಾನು ಸರ್ವಾಂಗ ಶೃಂಗಾರಭೂಷಿತಳಾಗಿ ಪಾಂಡುವಿನ ಮನವನ್ನು ಸೆಳೆಯುತ್ತಾಳೆ. ಋಷಿಯ ಶಾಪವನ್ನು ಮರೆತು ಪಾಂಡುವು ಆಕೆಯೊಂದಿಗೆ ಸೇರಿದ ಕಾರಣವಾಗಿ ಆತನು ನಿಧನನಾಗುತ್ತಾನೆ. ಈ ಸನ್ನಿವೇಶದಲ್ಲಿನ ಮಾದ್ರಿಯ ಪ್ರತಿಕ್ರಿಯೆ ಹಾಗೂ ದುಃಖಪೂರಿತ ತಲ್ಲಣದ ಭಾವವನ್ನು ಪಂಪ ಹೀಗೆ ಕಟ್ಟಿಕೊಟ್ಟಿದ್ದಾನೆ.

> "ತಾಪಸನ ಶಾಪಮೆಂಬುದು
> ಪಾಪದ ರೂಪಜೆತುಮಜಿಯದಂತೇಕೆ ಮನಂ ॥
> ಗಾಪಟಿದು ಬಂದು ಮುಟ್ಟಿದೆ
> ಯೋಪನೆ ನೀನೆನ್ನ ಪಾಪಕರ್ಮಿಯ ಮೆಯ್ಯಂ"[೨೯]

ಇಲ್ಲಿ ಮಾದ್ರಿಯ ಮಾತುಗಳಲ್ಲಿ ತನ್ನನ್ನೇ ತಾನು ದೂಷಿಸಿಕೊಳ್ಳುತ್ತ ನನ್ನಂತಹ ಪಾಪಿಷ್ಠಳಾದ ವ್ಯಕ್ತಿಯ ಶರೀರವನ್ನು ಏಕೆ ಮುಟ್ಟಿದಿರಿ ಎಂದು ಶೋಕಿಸುತ್ತಾಳೆ. ಆ ಮೂಲಕ ಆತನ ಸಾವಿಗೆ ತಾನು

ಕಾರಣಳಾದಳಲ್ಲ ಎಂದು ಚಿಂತಿಸುತ್ತಾಳೆ. ಋಷಿಯ[೨೯೩] ಶಾಪವು ಪಾಪದ ರೂಪವನ್ನು ತಾಳಿರುವುದನ್ನು ತಿಳಿದೂ ಪಾಪಿಷ್ಠಳಾದ ನನ್ನ ಶರೀರವನ್ನು ಮುಟ್ಟಿ ಈ ರೀತಿಯ ಸಾವಿಗೆ ಒಳಗಾದೆಯೆಲ್ಲಾ ಎಂದು ಹಲುಬುತ್ತಾಳೆ. ಜೊತೆಗೆ ಆತನೊಡನೆ ತಾನೂ ಸಾಯಲು ನಿರ್ಧರಿಸಿ ಚಿತೆಯೇರಲು ಸಿದ್ಧಳಾಗುತ್ತಾಳೆ.

"ನೀನ್ನಿನ್ನ ಸಾವನದನೆನ
ಸುನ್ನೆನೆಯದೆ ನೆರೆವೆನೆಂಬ ಬಗೆಯೊಳ್ ಬಂದೈ ।
ನಿನ್ನೊಡನೆ ವಂದು ದಿವದೊಳ್
ನಿನ್ನ ಮನೋರಥಮನರಸ ನೆಱಪದೆ ಮಾಣೆಂ"[೨೯೪]

ನೀನು ನಿನ್ನ ಸಾವನ್ನು ಯೋಚಿಸದೆ ಹೇಗೆ ನನ್ನೊಡನೆ ಸೇರುತ್ತೇನೆಂದು ಬಂದೆಯೋ ಹಾಗೆಯೇ ನಾನೂ ಕೂಡ ನಿನ್ನೊಡನೆ ಹಿಂಬಾಲಿಸುತ್ತ ಬಂದು ಸ್ವರ್ಗದಲ್ಲಿ ನಿನ್ನ ಮನೋರಥವನ್ನು ಸಲ್ಲಿಸದೆ ಬಿಡುವುದಿಲ್ಲ ಎಂದು ನಿಶ್ಚಯಿಸುತ್ತಾಳೆ. ಅಂದರೆ ಇಲ್ಲಿ ಮಾದ್ರಿಯು ಸಹಗಮನಕ್ಕೆ ಸಿದ್ಧಳಾಗುತ್ತಿರುವ ಅಂಶ ನಮಗೆ ಮನದಟ್ಟಾಗುತ್ತದೆ. ಅಲ್ಲದೆ

"ಉನ್ನತ ಧವಳಚ್ಛತ್ರ
ಚ್ಛನ್ನ ವಿಯತ್ತಳನನಿಂದುಕುಳತಿಳಕನನಿಂ ।
ತನ್ನೆಯದಿಂದೀ ತಱುವಿನೊ
ಳೆನ್ನರಸನನಿಂತು ಬಿದಿಯೆ ತಂದಿಕ್ಕುವುದೇ"[೨೯೫]

ಇಲ್ಲಿ ಮಾದ್ರಿಯು ರಾಜನಾಗಿ ಮೆರೆದ ಪಾಂಡುರಾಜನು ಮೃತನಾದ ಮೇಲೆ ಅನಾಥವಾಗಿ ಕಾಡಿನಲ್ಲಿ ಬಿದ್ದಿರುವುದನ್ನು ಕಂಡು ಮರುಗುವ ಹಾಗೂ ದುಃಖಿಸುವ ಅಂಶಗಳು ತಿಳಿಯುತ್ತವೆ. ನಂತರದಲ್ಲಿ ಮಾದ್ರಿಯು ರೋದಿಸುವ ಸದ್ದು ಕುಂತಿಯ ಕಿವಿಗೆ ಮುಟ್ಟಿ ಆಕೆಯೂ ಬಹುವಾಗಿ ದುಃಖಿಸಿ ತಾನು ಸಹಗಮನವಾಗಲು ನಿರ್ಧರಿಸುತ್ತಾಳೆ. ಆಗ ಮಾದ್ರಿಯು ಅದಕ್ಕೆ ಅವಕಾಶವನ್ನು ಕೊಡದೆ ತಾನೇ ಚಿತೆಯೇರಲು ಸಿದ್ಧಳಾಗಿ, ತಪೋವನದ ಋಷಿಗಳೂ ವನದೇವತಾ ಸಮೂಹವೂ ತನ್ನ ಸಾಹಸವನ್ನು ಹೊಗಳುತ್ತಿರಲು ಮಾದ್ರಿಯು ತಾನು ಸಹಗಮನ ಮಾಡುತ್ತಾಳೆ.

"ತಮ್ಮ ಪತಿ ತೀರಿದಾಗ ಸಹಗಮನಕ್ಕೆ ನಾ ಮುಂದೆ ತಾ ಮುಂದೆ ಎಂದು ತವಕಿಸುತ್ತಿರುವ ಮಾದ್ರಿ ಕುಂತಿಯರಲ್ಲಿ ಪಂಪನ ಕಾಲದಲ್ಲಿ ಪ್ರಚಲಿತವಿದ್ದ ಮಹಾಸತಿ ಸಂಪ್ರದಾಯ ಇಣಿಕಿ ನೋಡಿದೆ. ಇದು ಹಿಂದೆಯೂ ನಡೆದಿತ್ತೆಂಬುದಕ್ಕೆ 'ಸಾನಾತನಾದುದುದನಪ್ಪೆ' (ವಿ.ವಿ.೨/೨೫-ವ) ಎಂದು ಕುಂತಿ ಹೇಳುವಲ್ಲಿ ತಿಳಿಯುತ್ತದೆ. ಈ ಕ್ರಿಯೆಯ ಹಿಂದೆ ಹಲವು ರೀತಿಯ ಕಾರಣಗಳಿದ್ದುದನ್ನು ಗುರುತಿಸಬಹುದು. ಪತಿಗೆ ದೊರಕುವ ವೀರಸ್ವರ್ಗ ತನಗೂ ದೊರಕಲಿ ಎಂಬ ಆಶೆಯಿಂದ ಸತಿ ಹೋಗುತ್ತಿದ್ದ ಸ್ತ್ರೀಯರು ಹಲವರು, ಪತಿಯ ಮೇಲಿನ ಅಪಾರ ಪ್ರೀತಿಯಿಂದಾಗಿ ಅವನೊಂದಿಗೇ ನಿರ್ಗಮಿಸುತ್ತಿದ್ದ ಸ್ತ್ರೀಯರು ಹಲವರು, ವಿಧವೆಯರಾದ ತಮ್ಮ ಮೇಲೆ ಇತರರ ಕಣ್ಣು ಬೀಳದಿರಲಿ

ಎಂದು ಪತಿಯೊಂದಿಗೇ ನಿರ್ಗಮಿಸುತ್ತಿದ್ದ ಸ್ತ್ರೀಯರು ಹಲವರೂ ಅಂದು ಇದ್ದಿರಬೇಕು. ಅಲ್ಲದೆ ವಿಧವೆಯರಾದ ತಮ್ಮಲ್ಲಿಯೇ ಪರ ಪುರುಷರ ಬಯಕೆ ಮೂಡೀತೆಂಬ ಭಯದಿಂದ ಸತಿ ಹೋಗುತ್ತಿದ್ದ ಸ್ತ್ರೀಯರೂ ಹಲವರು ಇದ್ದಿರಲು ಸಾಕು. ಒಟ್ಟಿನಲ್ಲಿ ಈ ಸಹಗಮನ ಆಚರಣೆ ಹಲವು ಸಲ ಸ್ವಯಂ ಪ್ರೇರಣೆಯಿಂದಲೂ, ಮತ್ತೆ ಹಲವು ಸಲ ಅನ್ಯರ ಒತ್ತಾಯದಿಂದಲೂ ನಡೆಯುತ್ತಿದ್ದಿತೆಂದು ಭಾವಿಸಲು ಅವಕಾಶಗಳಿವೆ"[೨೯೬] ಎಂಬ ಮಾತುಗಳು ಗಮನಿಸುವಂತಹವು. ಇಲ್ಲಿ ಪಂಪ ಮಾದ್ರಿಯು ತನ್ನ ಸ್ವಇಚ್ಚೆಯಿಂದಲೇ ಸಹಗಮನಕ್ಕೆ ಅಣಿಯಾದಳು ಎಂದು ತಿಳಿಸುತ್ತಾನೆ. ಇದೇ ಸಂದರ್ಭದಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ ಈ ಹೊತ್ತಿನ ಆಧುನಿಕ ಸಮಾಜದಲ್ಲಿ ನಿಂತು ಈ ಎಲ್ಲ ವಿವರಗಳನ್ನು ಗ್ರಹಿಸುವ ನಮಗೆ ಇದೊಂದು ಅನಿಷ್ಟ ಹಾಗೂ ಜೀವ ವಿರೋಧಿಯಾದ ಪರಂಪರೆಯಾಗಿದೆ ಎಂದು ಅನ್ನಿಸಿದರೂ ಸಹ, ಪಂಪನು ಬದುಕಿದ್ದ ಕಾಲಘಟ್ಟದಲ್ಲಿ ಇಂತಹ ಆಚರಣೆಗಳು ರೂಢಿಗತವಾಗಿ ಚಾಲ್ತಿಯಲ್ಲಿದ್ದ ವಿವರಗಳು ಈ ಅಂಶಗಳಿಂದ ಸ್ಪಷ್ಟವಾಗುತ್ತವೆ. ಅಲ್ಲದೆ ಇಲ್ಲಿ ಪಂಪನು ತನ್ನ ಕಾಲಘಟ್ಟದಲ್ಲಿನ ಸಮಾಜದಲ್ಲಿ ಪ್ರಚಲಿತದಲ್ಲಿದ್ದ ಅಥವಾ ಚಾಲ್ತಿಯಲ್ಲಿದ್ದ ಸಂಪ್ರದಾಯದ ದೋಷ ಹಾಗೂ ವಿಶೇಷಗಳನ್ನು ಗುರುತಿಸಲು ಪ್ರಯತ್ನಿಸಿದ್ದಾನೆಯೇ ಹೊರತು ಅದರ ಸರಿ–ತಪ್ಪುಗಳನ್ನು ವಿಮರ್ಶಿಸಲು ಮುಂದಾಗಿರುವಂತೆ ಕಾಣುವುದಿಲ್ಲ.

ಮಾದ್ರಿಯ ಸಂಘರ್ಷದ ಭಾವಗಳು ನಮಗೆ 'ಕುಮಾರವ್ಯಾಸ ಭಾರತ'ದಲ್ಲಿ ಆದಿಪರ್ವದ ೫ನೆಯ ಸಂಧಿಯ ೧೧ನೆಯ ಪದ್ಯದಿಂದ ಕಂಡುಬರುತ್ತವೆ. ಪಂಪನಂತೆಯೇ 'ಕುಮಾರವ್ಯಾಸ ಭಾರತ'ದಲ್ಲಿಯೂ ಪಾಂಡು ಮತ್ತು ಮಾದ್ರಿಯರು ವಸಂತ ಕಾಲದ ಸಂದರ್ಭದಲ್ಲಿ ಸೇರುತ್ತಾರೆ. ಋಷಿಯು ನೀಡಿದ್ದ ಶಾಪದ ಕಾರಣವಾಗಿ ಪಾಂಡುವು ಮರಣ ಹೊಂದುವ ವಿವರಗಳನ್ನು ಕವಿ ಈ ರೀತಿಯಾಗಿ ಚಿತ್ರಿಸಿದ್ದಾನೆ.

"ಆ ವಸಂತದೊಳೊಮ್ಮೆ ಮಾದ್ರೀ
ದೇವಿ ವನದೊಳಗಾಡುತಿರ್ದಳು
ಹೂವಿನಲಿ ಸರ್ವಾಂಗ ಶೃಂಗಾರದ ವಿಲಾಸದಲಿ
ಆವಳಿವಳೂರ್ವಶಿಯೊ ರಂಭೆಯೊ
ದೇವವಧುಗಳ ಸುಳಿವೊ ತಾನೆನ
ಲಾವ ಚೆಲುವಿಕೆ ಶಿವ ಶಿವಾಯೆಂದರಸ ಬೆರಗಾದ"[೨೯೭]

ವಸಂತ ಮಾಸದ ಒಂದು ದಿನ ಸರ್ವಾಂಗ ಶೃಂಗಾರ ಪೂರಿತಳಾಗಿ ಊರ್ವಶಿಯೋ, ರಂಭೆಯೋ ಎಂಬಂತೆ ಕಂಗೊಳಿಸುತ್ತಿದ್ದಳು ಮಾದ್ರಿ, ಇಂತಹ ಸುಂದರಿಯಾದ ಆಕೆಯನ್ನು ಕಂಡು ಬೆರಗಾದ ಪಾಂಡುರಾಜನು ಅವಳ ಬೆನ್ನು ಹಿಡಿದು ಓಡಿದನು.

"ಮರೆದು ಹಿಂದೆಲ್ಲವನು ಕುಂತಿಯ
ನರಿಯಲೀಯದೆ ಮೆಲ್ಲಮೆಲ್ಲನೆ
ತುರುಗಿದೆಳಲತೆ ವನದೊಳಾಡುವ ವಧುವ ಸಾರಿದನು

ಸೆರಗ ಹಿಡಿದರೆ ಬೇಡ ಬೇಡೆಂ
ದೆರಗಿದಳು ಚರಣದಲಿ ತರುಣಿಯ
ತುರುಬ ಹಿಡಿದೆತ್ತಿದನು ಹೆಣಗಿದರೊಡನೆ ಝೋಂಪಿಸಿದ"[೨೯೮]

ಬೇಟೆಯ ಸಂದರ್ಭದಲ್ಲಿ ಹಿಂದೆ ಮುನಿಯು ಕೊಟ್ಟಂತಹ ಶಾಪವನ್ನು ಪಾಂಡುವು ಸಂಪೂರ್ಣವಾಗಿ ಮಾದ್ರಿಯ ಮೋಹ ಪರವಶತೆಯಲ್ಲಿ ಮರೆತನು. ಕುಂತಿಯನ್ನು ಅರಿಯದೆ ಮಾದ್ರಿಯ ಬೆನ್ನು ಹಿಡಿದು ಓಡಿದ ಪಾಂಡುವು ಅವಳ ಸೆರಗನ್ನು ಹಿಡಿದೆಳೆದನು. ಈ ಅನಿರೀಕ್ಷಿತ ಸಂದರ್ಭದಲ್ಲಿ ಮಾದ್ರಿಯ ಪ್ರಜ್ಞೆ ಜಾಗೃತವಾಗಿ ಬೇಡ ಬೇಡ ಎಂದು ಆತನ ಚರಣದಲ್ಲಿ ಬಿದ್ದು ಹೊರಳಾಡಿದಳು. ಆದರೂ ಕೇಳದೆ ಪಾಂಡುವು ಅವಳ ತುರುಬನ್ನು ಹಿಡಿದೆತ್ತಿ ಅವಳು ಬಿಡಿಸಿಕೊಳ್ಳಲು ಎಷ್ಟು ಹೆಣಗಾಡಿದರೂ ಬರಸೆಳೆದು ಅಪ್ಪಿಕೊಂಡನು. ಇಲ್ಲಿ ಮಾದ್ರಿಯ ಎಚ್ಚರ ಪ್ರಮುಖವಾದುದು. ತನ್ನ ಇಷ್ಟ ಅಥವಾ ದೇಹದ ಸುಖಕ್ಕಿಂತ ಪಾಂಡುರಾಜನ ಕ್ಷೇಮ ಹಾಗೂ ಉಳಿದವರ ಬದುಕು ಆಕೆಗೆ ಮುಖ್ಯವಾಗಿತ್ತು. ಆ ಕಾರಣವಾಗಿಯೆ ಆತ ಸೆರಗನ್ನು ಹಿಡಿದು ಎಳೆದಾಗ ಈ ರೀತಿಯ ವರ್ತನೆ ಸರಿಯಲ್ಲ ಎಂದು ಎಚ್ಚರಿಸುತ್ತ ಬೇಡಿಕೊಳ್ಳುತ್ತಾಳೆ. ಅಲ್ಲದೆ ಮುಂದುವರೆದು

"ಕೊಂದೆಲಾ ಕಡುಪಾಪಿ ಮರೆದಾ
ಹಿಂದೆ ಮಾಡಿದ ಕೃತ್ಯವನು ಮುನಿ
ಯೆಂದ ನುಡಿ ಹೊಳ್ಳಹುದೆ ಸುಡು ದುರ್ವಿಷಯಕೆಳಸಿದಲಾ
ಬೆಂದುದೇ ನಿನ್ನರಿವು ಧೈರ್ಯವ
ನಿಂದು ನೀಗಿದೆಯಕಟ ನಿನ್ನಯ
ನಂದನರಿಗಾರುಂಟೆನುತ ಹೆಣಗಿದಳು ಲಲಿತಾಂಗಿ"[೨೯೯]

ಪಾಂಡುವಿನ ಅಂದಿನ ವರ್ತನೆ ಆಕೆಗೆ ವಿಚಿತ್ರ ತೆರನಾಗಿ ಕಾಣುತ್ತಿದೆ. ಹಾಗಾಗಿಯೆ ಸ್ವಲ್ಪ ಉಗ್ರವಾಗಿಯೆ ಆತನ ವರ್ತನೆಗಳನ್ನು ಖಂಡಿಸುತ್ತಾಳೆ. ನಮ್ಮನ್ನೆಲ್ಲರನ್ನು ಕೊಂದೆಯಲ್ಲ, ಕಡುಪಾಪಿ ಮರೆತೆಯಾ ಹಿಂದೆ ನೀನು ಮಾಡಿದ ಅಕೃತ್ಯವನ್ನು. ಋಷಿಯು ಕೊಟ್ಟ ಶಾಪವನ್ನು ಮರೆತು ಬಿಟ್ಟೆಯ? ಮುನಿಯು ನುಡಿದ ಮಾತು ಸುಳ್ಳಾಗುವುದೆ? ನಿನ್ನ ದುರ್ವಿಷಯದ ಅವಿವೇಕವನ್ನು ಸುಡಬೇಕು. ಈ ರೀತಿಯ ದುಷ್ಟ ಆಲೋಚನೆಗಳು ನಿನ್ನಲ್ಲಿ ಹೇಗೆ ಬಂದವು, ನಿನ್ನ ಅರಿವು ಹಾಗೂ ಜ್ಞಾನ ಎತ್ತ ಹೋಯಿತು. ಮುಂದೆ ನಿನ್ನ ಮಕ್ಕಳಿಗೆ ಯಾರು ಗತಿ? ಎಂದು ಒರಟಾಗಿಯೆ ಪ್ರತಿಕ್ರಿಯಿಸುತ್ತಾಳೆ ಮಾದ್ರಿ.

ಆದರೆ ಪಾಂಡುವಿಗೆ ಅವಳ ಮನದ ಆರ್ತ ಸ್ವರವಾಗಲಿ, ಭಾವನೆಗಳಾಗಲಿ, ಆಕೆಯ ದೇಹದಲ್ಲಿ ಪ್ರಕಟವಾಗುತ್ತಿರುವ ನಿಷೇಧದ ಅಂಶಗಳಾಗಲಿ ಅವನ ಅರಿವಿಗೆ ಬರುವುದೇ ಇಲ್ಲ. ಅವನನ್ನು ಎಚ್ಚರಿಸುವ ಪ್ರಯತ್ನವನ್ನು ಮಾದ್ರಿ ಮಾಡುತ್ತಲೇ ಹೋದರೂ ಅದು ಫಲ ಕೊಡಲಿಲ್ಲ. ಅವನ ಬಾಹುಗಳಿಂದ ತಪ್ಪಿಸಿಕೊಳ್ಳಲು ಹೆಣಗಾಡಿದಳು. ಕಾಮ ಶರಕ್ಕೆ ಆಹುತಿಯಾದ ಪಾಂಡುವಿಗೆ ವಿವೇಕ ಬರಲಿಲ್ಲ. ಆದರೆ ಮಾದ್ರಿ ಮಾತ್ರ ಮುಂದೆ ಸಂಭವಿಸಬಹುದಾಗಿರುವ ಅನರ್ಥವನ್ನು ನೆನೆದು ಕಳವಳಿಸಿದಳು.

ಮಾದ್ರಿಯ ಸಂಶಯದ ಆತಂಕ ನಿಜವಾಯಿತು. ಆಕೆ ನಿಸ್ಸಹಾಯಕಳಾಗಿ ನೋಡುತ್ತಿರುವಂತೆಯೆ ಪಾಂಡುರಾಜನು ಅರೆಕ್ಷಣದಲ್ಲಿ ಹೆಣವಾಗಿ ಮಾದ್ರಿಯ ತೊಡೆಯ ಮೇಲೆ ಮಲಗಿದನು. ಇಂತಹ ಆಕಸ್ಮಿಕ ಆಘಾತದಿಂದ ತತ್ತರಿಸಿದ ಮಾದ್ರಿಯ ವೇದನೆ ಮನಮುಟ್ಟುವಂತಹದ್ದು. ಆ ಸಂದರ್ಭವನ್ನು ಕವಿ ಈ ರೀತಿಯಾಗಿ ಚಿತ್ರಿಸಿದ್ದಾನೆ.

"ಅಕಟ ಪಾಂಡು ಮಹೀಪ ವಿಷ ಕ
ನ್ನಿಕೆಯನೆನ್ನನು ಮುಟ್ಟಿದೈ ಬೇ
ಡಕಟ ಕೆಡಿಸದಿರೆನ್ನೆನೇ ತಾನರಿಯನೇ ಹದನ
ಪ್ರಕಟ ಕುರುಕುಲ ತಿಲಕರೀ ಬಾ
ಲಕರನಾರಿಗೆ ಕೊಟ್ಟೆ ತನ್ನೊಡ
ನಕಟ ಮುನಿದೈ ಮಾತನಾಡೆಂದೊರಲಿದಳು ಮಾದ್ರಿ"[೩೦೦]

ಅಯ್ಯೋ ಪಾಂಡು ರಾಜನೇ! ವಿಷ ಕನ್ನಿಕೆಯಾದ ನನ್ನನ್ನು ನೀನು ಮುಟ್ಟಿದೆಯಲ್ಲ. ನಾನು ಎಷ್ಟು ಬೇಡ ಬೇಡವೆಂದು ನಿನ್ನನ್ನು ಎಚ್ಚರಿಸಿದರೂ ನನ್ನ ಮಾತನ್ನು ಕೇಳಲಿಲ್ಲ. ನಮಗೆ ಇನ್ನು ಯಾರು ಗತಿ? ಪ್ರಕಟ ಕುರುಕುಲ ತಿಲಕರಾದ ಈ ಬಾಲಕರನ್ನು ಯಾರಿಗೆ ಕೊಟ್ಟೆ? ಅವರ ರಕ್ಷಣೆಯ ಜವಾಬ್ದಾರಿ ಯಾರದ್ದು? ಅವರನ್ನು ಅನಾಥರನ್ನಾಗಿ ಮಾಡಿ ಬಿಟ್ಟೆಯಲ್ಲ. ನನ್ನೊಡನೆ ಏಕೆ ಮಾತನಾಡದೆ ಮುನಿದುಕೊಂಡಿರುವೆ. ನನ್ನೊಡನೆ ಮಾತನಾಡು ಎಂದು ಆಕೆ ಪರಿಪರಿಯಾಗಿ ದುಃಖಿಸುತ್ತಾಳೆ. ಈ ಸಂದರ್ಭದಲ್ಲಿನ ಮಾದ್ರಿಯ ಮನದ ದುಃಖದ ಭಾವಗಳು ಓದುಗರ ಮನವನ್ನು ಕಲಕುತ್ತವೆ.

ಈ ರೀತಿಯಾಗಿ ಮಾದ್ರಿಯ ದುಃಖ ತಾರಕಕ್ಕೇರಿ ಅದು ಕುಂತಿಯ ಕಿವಿಗೂ ಬೀಳುತ್ತದೆ. ಅವಳಿಗೆ ಒಂದು ಕ್ಷಣ ಆತಂಕವಾಗಿ ಅವರನ್ನು ಅರಸುತ್ತ ಬರುತ್ತಾಳೆ. ಏಕೋ ಒಂದು ರೀತಿ ಅಮಂಗಳ ಎನಿಸಿತು. ಬಂದು ನೋಡಿದರೆ ಪಾಂಡು ನಿಧನನಾಗಿದ್ದಾನೆ. ಮಾದ್ರಿ ರೋದಿಸುತ್ತಿದ್ದಾಳೆ. ಕುಂತಿಗೆ ಜಗತ್ತೇ ಶೂನ್ಯವಾಗಿ ಮೂರ್ಛಿತಳಾಗುತ್ತಾಳೆ. ನಂತರ ಧರ್ಮರಾಯಾದಿಗಳು, ಋಷಿ ಮುನಿಗಳೆಲ್ಲ ಸೇರಿದ ಮೇಲೆ ತಾನು ತನ್ನ ಗಂಡನನ್ನು ಅನುಸರಿಸುವುದಾಗಿ ಕುಂತಿ ಹೇಳುತ್ತಾಳೆ. ಅದಕ್ಕೆ ಮಾದ್ರಿಯು ಆ ಸರದಿ ತನ್ನದೆಂದು ಕುಂತಿಗೆ ಹೇಳುವ ಈ ಮಾತುಗಳು ಪ್ರಮುಖವಾದವು.

"ಮರುಳೆಲೌ ನೀವಕ್ಕ ನಿಮ್ಮೈ
ವರು ಕುಮಾರರು ನಿಮ್ಮ ಕೈಯೆಡೆ
ಧರಣಿಪತಿ ನಿಡು ನಿದ್ರೈದನು ನನ್ನ ತೋಳಿನಲಿ
ಸುರವಧುಗಳೊಡನಿರಲಿ ನಿನ್ನಯ
ಹರಿಬವೆನ್ನದು ನೋಡು ತನ್ನಯ
ಪರಿಯನೀತನು ನಿನಗೆ ಕೊಡೆನೆಂದಂಘ್ರಿಗೆರಗಿದಳು"[೩೦೧]

ಅಕ್ಕ ಕೇಳು ನಿಮಗೆಲ್ಲೋ ಹುಚ್ಚು. ನನ್ನ ಮಕ್ಕಳಾದಿಯಾಗಿ ಈ ಐವರು ಕುಮಾರರು ಇನ್ನು ಮುಂದೆ ನಿನ್ನ ಮಕ್ಕಳು. ಆ ಮಕ್ಕಳನ್ನು ನೋಡಿಕೊಂಡಿರು. ನನ್ನ ಮಕ್ಕಳಾದ ನಕುಲ ಸಹದೇವರನ್ನು ನಿಮಗೆ ಕೈಯೆಡೆಯಾಗಿ ಒಪ್ಪಿಸಿದ್ದೇನೆ. ಅಲ್ಲದೆ ಧರಣಿಪತಿಯಾದ ಪಾಂಡುರಾಜನು ನನ್ನ ತೋಳಿನಲ್ಲಿ ತೀರಿಕೊಂಡಿದ್ದಾನೆ. ಅವನ ಸಾವಿಗೆ ಕಾರಣಳಾದವಳು ನಾನು. ಅವನೊಡನೆ ನಾನೂ ಸುರಲೋಕದೊಳಗೆ ಇರಲು ಬಯಸುತ್ತೇನೆ. ಇಂತಹ ಪತಿಯೊಂದಿಗೆ ಸಹಗಮನವನ್ನು ಮಾಡುವ ಭಾಗ್ಯವನ್ನು ನಿನಗೆ ಕೊಡುವುದಿಲ್ಲ ಎಂದು ಕುಂತಿಯ ಪಾದಕ್ಕೆರಗಿ ಬೇಡಿಕೊಳ್ಳುತ್ತಾಳೆ. ದೃಢ ಮನಸ್ಸಿನಿಂದ ಋಷಿಮುನಿಗಳ ಆಶೀರ್ವಚನದಂತೆ ಮಾದ್ರಿಯು ಪಾಂಡುವಿನೊಂದಿಗೆ ಸಹಗಮನವನ್ನು ಮಾಡುತ್ತಾಳೆ.

ಈ ಸಂದರ್ಭವು 'ಪಂಪಭಾರತ' ಹಾಗೂ 'ಕುಮಾರವ್ಯಾಸ ಭಾರತ'ಗಳಲ್ಲಿ ಸಹಗಮನ ಪದ್ಧತಿಯ ಹೆಸರಿನಲ್ಲಿ ಹಲವಾರು ಜೀವಿಗಳು ಪ್ರಾಣ ತೆತ್ತಿರುವ ವಿವರವನ್ನು ನಮಗೆ ತಿಳಿಸಿಕೊಡುತ್ತದೆ. ಇಲ್ಲಿ ಮಾದ್ರಿಯ ಮನಸ್ಸಿನ ನೋವು, ತನ್ನ ಪತಿಯ ಸಾವಿಗೆ ತಾನೇ ಕಾರಣಳಾದೆನಲ್ಲ ಎಂಬ ಕೀಳರಿಮೆಯ ಭಾವದ ತೊಳಲಾಟಗಳು ಓದುಗರ ಮನವನ್ನು ಸೆಳೆಯುತ್ತವೆ. ಸ್ವಇಚ್ಛೆಯಿಂದಲೋ ಅಥವಾ ಸಮಾಜ ರೂಪಿಸಿದ ಹಲವು ಆದರ್ಶಯುತವಾದ ಜೀವನ ಮೌಲ್ಯಗಳು ಎಂಬ ಪ್ರಚೋದನೆಗಳಿಂದ ಬಾಳಿ ಬದುಕಬೇಕಾದ ಅನೇಕ ಹೆಣ್ಣುಗಳು ಅಗ್ನಿಗೆ ಆಹುತಿಯಾಗಿರುವುದು ಆ ಕಾಲಘಟ್ಟದ ಸಾಮಾಜಿಕ ಸ್ಥಿತಿಗತಿಗಳನ್ನು ಕುರಿತು ಚಿಂತಿಸುವಂತೆ ಮಾಡುತ್ತದೆ. ಜೀವ ವಿರೋಧಿಯಾದ ಈ ಕ್ರಮ ಪಂಪ ಹಾಗೂ ಕುಮಾರವ್ಯಾಸರ ಕಾಲಘಟ್ಟದ ಸಾಮಾಜಿಕ ಸ್ಥಿತಿಗತಿಗಳನ್ನು ನಮ್ಮ ಗಮನಕ್ಕೆ ತಂದುಕೊಡುತ್ತದೆ.

"ಮಹಿಳೆಯರ ಚಿತಾಪ್ರವೇಶ ಅಂದಿನ ಮಹಾಮೌಲ್ಯಗಳಲ್ಲಿ ಒಂದು. ಮಾರ್ಗ ಸಾಹಿತ್ಯದಲ್ಲಿ ಮಾದ್ರಿಯಂಥ ಪೌರಾಣಿಕ ಪಾತ್ರಗಳು, ಗುಂಡಮಬ್ಬೆಯಂಥ ಐತಿಹಾಸಿಕ ಪಾತ್ರಗಳು, ಸೈನಿಕರ ಹೆಂಡಂದಿರಂಥ ಕಾಲ್ಪನಿಕ ಪಾತ್ರಗಳು ಈ ವ್ಯವಸ್ಥೆಯನ್ನು ವೈಭವೀಕರಿಸುತ್ತವೆ"[೩೦] ಎಂಬ ಮಾತುಗಳು ಆ ಕಾಲಘಟ್ಟದ ಸಮಾಜ ರೂಪಿಸಿಕೊಂಡಿದ್ದ ಸತಿ ಪದ್ಧತಿಗೆ ಪ್ರಾಣ ತೆತ್ತ ಹೆಣ್ಣುಗಳ ವಿವರಗಳನ್ನು ತಿಳಿಸುತ್ತವೆ. ಆದರೆ ಇಲ್ಲಿ ಬಳಕೆಯಾಗಿರುವ 'ಚಿತಾಪ್ರವೇಶ ಅಂದಿನ ಮಹಾಮೌಲ್ಯಗಳಲ್ಲಿ ಒಂದು' ಎಂಬ ಮಾತನ್ನು ಒಪ್ಪಲು ಸಾಧ್ಯವಿಲ್ಲ. ಏಕೆಂದರೆ ಬಾಳಿ ಬದುಕುವ ಕನಸನ್ನು ಹೊತ್ತ ಹೆಣ್ಣಗಳನ್ನು ಆದರ್ಶ ಹಾಗೂ ಮೌಲ್ಯಗಳೆಂಬ ಮಾನಸಿಕ ಪ್ರಚೋದಕಗಳ ಮೂಲಕ ಬಲಿಕೊಡುವ ಜೀವ ವಿರೋಧಿಯಾದ ಸಂಗತಿಯನ್ನು ಮಹಾಮೌಲ್ಯವೆಂದು ಒಪ್ಪಿಕೊಳ್ಳುವುದಾದರೂ ಹೇಗೆ?

ಹೀಗೆ ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿ ಮಹಿಳಾ ಸಂಘರ್ಷದ ವಿವಿಧ ನೆಲೆಗಳನ್ನು ಗುರುತಿಸಿಕೊಳ್ಳಬಹುದು. ಪ್ರಭುತ್ವದ ನೆಲೆಯಲ್ಲಿ ನಿಂತು ಬರೆದ ಪಂಪನಿಗಿಂತ ಕುಮಾರವ್ಯಾಸನ ಮಹಿಳಾ ಪಾತ್ರಗಳು ಹೆಚ್ಚು ಸಂಘರ್ಷಾತ್ಮಕವಾಗಿ ಮುಖಾಮುಖಿಗೊಳ್ಳುತ್ತವೆ. ಏಕೆಂದರೆ ಕುಮಾರವ್ಯಾಸ ವ್ಯಾಸಭಾರತದ ಕಥೆಯನ್ನು ಬರೆಯುತ್ತಿರುವಾಗ ಪಡೆದ ಜನಪದ ಅನುಭವಗಳು ಇದಕ್ಕೆ ಕಾರಣವಾಗುತ್ತವೆ.

ಕೊನೆ ಟಿಪ್ಪಣಿಗಳು

೧. ವಿಕ್ರಮಾರ್ಜುನ ವಿಜಯಂ, ೧/೬೮-ವ.

೨. ವಿಕ್ರಮಾರ್ಜುನ ವಿಜಯಂ, ೧/೬೮-ವ.

೩. ವಿಕ್ರಮಾರ್ಜುನ ವಿಜಯಂ, ೧/೬೯.

೪. ಕುಮಾರವ್ಯಾಸ ಮತ್ತು ಜಾನಪದ, ಮುನ್ನುಡಿ, ಪು.ಸಂ-೬ ಮತ್ತು ೭.

೫. ಪಂಪಭಾರತ ದೀಪಿಕೆ, ಪು.ಸಂ-೩೮.

೬. ಪಂಪ ಮಹಾಕವಿಯ ವಿಕ್ರಮಾರ್ಜುನ ವಿಜಯ, ಪು.ಸಂ-೧೧ ಮತ್ತು ೧೨.

೭. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೨೩.

೮. ವಿಕ್ರಮಾರ್ಜುನ ವಿಜಯಂ, ೩/೨೦-ವ.

೯. ವಿಕ್ರಮಾರ್ಜುನ ವಿಜಯಂ, ೧/೬೯-ವ.

೧೦. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೨೩.

೧೧. ದ್ರೌಪದಿಯ ಛಲಸಾಧನೆ, ಪು.ಸಂ-೧೭.

೧೨. ವಿಕ್ರಮಾರ್ಜುನ ವಿಜಯಂ, ೧/೭೦.

೧೩. ಹಳಗನ್ನಡ ವಿಶೇಷ ಶಬ್ದಕೋಶ, ಪು.ಸಂ-೧೯೭.

೧೪. ಸಂವೇದನೆ, ಪು.ಸಂ-೯೨.

೧೫. ಪ್ರಾಚೀನ ಕನ್ನಡ ಸಾಹಿತ್ಯ - ಸಂಘರ್ಷ, ಪು.ಸಂ-೪೬ ಮತ್ತು ೪೭.

೧೬. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೨೪.

೧೭. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೨೫.

೧೮. ಸಂಕ್ಷಿಪ್ತ ಕನ್ನಡ ನಿಘಂಟು, ಪು.ಸಂ-೬೮.

೧೯. ವಿಕ್ರಮಾರ್ಜುನ ವಿಜಯಂ, ೧/೮೦-ವ.

೨೦. ವಿಕ್ರಮಾರ್ಜುನ ವಿಜಯಂ, ೧/೮೧.

೨೧. ವಿಕ್ರಮಾರ್ಜುನ ವಿಜಯಂ, ೧/೮೪-ವ.

೨೨. ಕುಮಾರವ್ಯಾಸನ ಪಾತ್ರಸೃಷ್ಟಿ, ಪು.ಸಂ-೧೯೯.

೨೩. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೩/೩.

೨೪. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೩/೫.

೨೫. ಪುರಾಣನಾಮ ಚೂಡಾಮಣಿ, ಪು.ಸಂ-೧೧೦ ಮತ್ತು ೧೧೧.

೨೬. ವಿಕ್ರಮಾರ್ಜುನ ವಿಜಯಂ, ೧/೯೨.

೨೭. ವಿಕ್ರಮಾರ್ಜುನ ವಿಜಯಂ, ೧/೯೫.

೨೮. ವಿಕ್ರಮಾರ್ಜುನ ವಿಜಯಂ, ೧/೯೫-ವ.

೨೯. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೩/೧೯.

೩೦. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೩/೨೧.

೩೧. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೩/೨೨.

೩೨. ಕುಮಾರವ್ಯಾಸನ ಪಾತ್ರಸೃಷ್ಟಿ, ಪು.ಸಂ–೨೦೨.

೩೩. ವಿಕ್ರಮಾರ್ಜುನ ವಿಜಯಂ, ೧/೧೧೬–ವ.

೩೪. ವಿಕ್ರಮಾರ್ಜುನ ವಿಜಯಂ, ೧/೧೧೭.

೩೫. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೪/೨೬.

೩೬. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೪/೨೭.

೩೭. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೪/೨೮.

೩೮. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೪/೩೨.

೩೯. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೪/೩೭.

೪೦. ವಿಕ್ರಮಾರ್ಜುನ ವಿಜಯಂ, ೨/೨೩.

೪೧. ವಿಕ್ರಮಾರ್ಜುನ ವಿಜಯಂ, ೨/೨೫.

೪೨. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೫/೧೮.

೪೩. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೫/೨೨.

೪೪. ವಿಕ್ರಮಾರ್ಜುನ ವಿಜಯಂ, ೯/೭೪.

೪೫. ವಿಕ್ರಮಾರ್ಜುನ ವಿಜಯಂ, ೯/೭೫.

೪೬. ವಿಕ್ರಮಾರ್ಜುನ ವಿಜಯಂ, ೯/೮೬.

೪೭. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೭/೫೨.

೪೮. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೭/೫೩.

೪೯. ಕುಮಾರವ್ಯಾಸನ ಪಾತ್ರಸೃಷ್ಟಿ, ಪು.ಸಂ–೨೦೫.

೫೦. ಕುಮಾರವ್ಯಾಸ ಪ್ರಶಸ್ತಿ, ಪು.ಸಂ–೧೭೭.

೫೧. ಕರ್ಣಾಟ ಭಾರತ ಕಥಾಮಂಜರಿ, ಉದ್ಯೋಗಪರ್ವ, ೧೦/೨೭.

೫೨. ಕರ್ಣಾಟ ಭಾರತ ಕಥಾಮಂಜರಿ, ಉದ್ಯೋಗಪರ್ವ, ೧೦/೩೧.

೫೩. ಕರ್ಣಾಟ ಭಾರತ ಕಥಾಮಂಜರಿ, ಉದ್ಯೋಗಪರ್ವ, ೧೦/೩೫.

೫೪. ವಿಕ್ರಮಾರ್ಜುನ ವಿಜಯಂ, ೧೪/೯.

೫೫. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೨/೧೮.

೫೬. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೨/೧೯.

೫೭. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೩೪.

೫೮. ವಿಕ್ರಮಾರ್ಜುನ ವಿಜಯಂ, ೧/೮೫.

೫೯. ವಿಕ್ರಮಾರ್ಜುನ ವಿಜಯಂ, ೧/೮೫–ವ.

೬೦. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಪು.ಸಂ-೯೫ ಮತ್ತು ೯೬.

೬೧. ಹಳಗನ್ನಡ ಪದಸಂಪದ, ಪು.ಸಂ-೪೯೬.

೬೨. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೩/೬.

೬೩. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿವಾಹ ಪದ್ಧತಿ, ಪು.ಸಂ-೫೪ ಮತ್ತು ೫೫.

೬೪. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೩/೭.

೬೫. ವಿಕ್ರಮಾರ್ಜುನ ವಿಜಯಂ, ೨/೨೯-ವ.

೬೬ ವಿಕ್ರಮಾರ್ಜುನ ವಿಜಯಂ, ೧/೭೪.

೬೭ ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೩೨.

೬೮. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೩೩.

೬೯. ವಿಕ್ರಮಾರ್ಜುನ ವಿಜಯಂ, ೧/೭೪-ವ.

೭೦. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೩೪.

೭೧. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿವಾಹ ಪದ್ಧತಿ, ಪು.ಸಂ-೫೩.

೭೨. ವಿಕ್ರಮಾರ್ಜುನ ವಿಜಯಂ, ೧/೭೫.

೭೩. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಪು.ಸಂ-೯೧.

೭೪. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಪು.ಸಂ-೧೬.

೭೫. ವಿಕ್ರಮಾರ್ಜುನ ವಿಜಯಂ, ೧/೭೫-ವ.

೭೬. ವಿಕ್ರಮಾರ್ಜುನ ವಿಜಯಂ, ೧/೭೬.

೭೭ ವಿಕ್ರಮಾರ್ಜುನ ವಿಜಯಂ, ೧/೭೬-ವ.

೭೮. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೩೫.

೭೯. ವಿಕ್ರಮಾರ್ಜುನ ವಿಜಯಂ, ೧/೭೭.

೮೦. ವಿಕ್ರಮಾರ್ಜುನ ವಿಜಯಂ, ೧/೮೦-ವ.

೮೧. ಪಂಪಭಾರತ ದೀಪಿಕೆ, ಪು.ಸಂ-೪೩.

೮೨. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಪು.ಸಂ-೯೩.

೮೩. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೩೭.

೮೪. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೨/೩೮.

೮೫. ಮಧ್ಯಕಾಲೀನ ಸಾಹಿತ್ಯದಲ್ಲಿ ಸ್ತ್ರೀ ಪಾತ್ರಾಭಿವ್ಯಕ್ತಿ, ಪು.ಸಂ-೧೯೦.

೮೬. ವಿಕ್ರಮಾರ್ಜುನ ವಿಜಯಂ, ೩/೫೧.

೮೭. ವಿಕ್ರಮಾರ್ಜುನ ವಿಜಯಂ, ೩/೬೪.

೮೮. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧೩/೫೭.

೮೯. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧೩/೬೧.

೯೦. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧೫/೨೦.

೯೧. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧೫/೩೩.

೯೨. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧೫/೩೪.

೯೩. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧೫/೩೫.

೯೪. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧೬/೪೩.

೯೫. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧೬/೫೦.

೯೬. ವಿಕ್ರಮಾರ್ಜುನ ವಿಜಯಂ, ೭/೪-ವ.

೯೭. ಸಂಕ್ಷಿಪ್ತ ಕನ್ನಡ ನಿಘಂಟು, ಪು.ಸಂ-೧೦೮೨.

೯೮. ವಿಕ್ರಮಾರ್ಜುನ ವಿಜಯಂ, ೭/೯-ವ.

೯೯. ಸಂಕ್ಷಿಪ್ತ ಕನ್ನಡ ನಿಘಂಟು, ಪು.ಸಂ-೭೬೩.

೧೦೦. ವಿಕ್ರಮಾರ್ಜುನ ವಿಜಯಂ, ೭/೧೦.

೧೦೧. ಕನ್ನಡ ಸಾಹಿತ್ಯದಲ್ಲಿ ದ್ರೌಪದಿ, ಪು.ಸಂ-೬೯.

೧೦೨. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ, ಸಂಪುಟ-೧, ಪು.ಸಂ-೧೫೬.

೧೦೩. ಕುಮಾರವ್ಯಾಸನ ಪಾತ್ರಸೃಷ್ಟಿ, ಪು.ಸಂ-೨೧೦.

೧೦೪. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೬೩.

೧೦೫. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೬೫.

೧೦೬. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೮೦.

೧೦೭. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೮೧.

೧೦೮. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೯೨.

೧೦೯. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೧೦೩.

೧೧೦. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೧೦೫.

೧೧೧. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೧೦೬.

೧೧೨. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೧೦೭.

೧೧೩. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೧೦೮.

೧೧೪. ಕುಮಾರವ್ಯಾಸ ಸಮೀಕ್ಷೆ, ಪು.ಸಂ-೬೬.

೧೧೫. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೪/೧೦೯.

೧೧೬. ಕುಮಾರವ್ಯಾಸ ಪ್ರಶಸ್ತಿ, ಪು.ಸಂ-೧೬೪.

೧೧೭. ಮಧ್ಯಕಾಲೀನ ಸಾಹಿತ್ಯದಲ್ಲಿ ಸ್ತ್ರೀ ಪಾತ್ರಾಭಿವ್ಯಕ್ತಿ, ಪು.ಸಂ-೧೯೩.

೧೧೮. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೧೩.

೧೧೯. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೨೩.

೧೨೦. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೨೪.

೧೨೧. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೨೫.

೧೨೨. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೨೬.

೧೨೩. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೨೭.

೧೨೪. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೨೮.

೧೨೫. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೩೦.

೧೨೬. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೪೭.

೧೨೭. ಕುಮಾರವ್ಯಾಸ, ಪು.ಸಂ–೪೭.

೧೨೮. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೫/೫೨.

೧೨೯. ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ, ಪು.ಸಂ–೨೪೦.

೧೩೦. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨/೧೩.

೧೩೧. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೦/೪.

೧೩೨. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೦/೫.

೧೩೩. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೬/೭.

೧೩೪. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೬/೨೧.

೧೩೫. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೬/೨೨.

೧೩೬. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೬/೨೩.

೧೩೭. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೬/೨೪.

೧೩೮. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೬/೩೪.

೧೩೯. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೬/೩೭.

೧೪೦. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೧೬/೩೮.

೧೪೧. ವಿಕ್ರಮಾರ್ಜುನ ವಿಜಯಂ, ೭/೩೮–ವ.

೧೪೨. ವಿಕ್ರಮಾರ್ಜುನ ವಿಜಯಂ, ೭/೩೯.

೧೪೩. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೫.

೧೪೪. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೬.

೧೪೫. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೭.

೧೪೬. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೮.

೧೪೭. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೯.

೧೪೮. ವಿಕ್ರಮಾರ್ಜುನ ವಿಜಯಂ, ೭/೪೫.

೧೪೯. ವಿಕ್ರಮಾರ್ಜುನ ವಿಜಯಂ, ೭/೪೬.

೧೫೦. ವಿಕ್ರಮಾರ್ಜುನ ವಿಜಯಂ, ೭/೪೮.

೧೫೧. ವಿಕ್ರಮಾರ್ಜುನ ವಿಜಯಂ, ೭/೪೯.

೧೫೨. ವಿಕ್ರಮಾರ್ಜುನ ವಿಜಯಂ, ೭/೫೦.

೧೫೩. ವಿಕ್ರಮಾರ್ಜುನ ವಿಜಯಂ, ೭/೫೧.

೧೫೪. ವಿಕ್ರಮಾರ್ಜುನ ವಿಜಯಂ, ೭/೫೨.

೧೫೫. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಪು.ಸಂ-೩೫೦.

೧೫೬. ವಿಕ್ರಮಾರ್ಜುನ ವಿಜಯಂ, ೭/೬೭.

೧೫೭. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೨/೧೭.

೧೫೮. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೨/೧೮.

೧೫೯. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೨/೧೯.

೧೬೦. ಕುಮಾರವ್ಯಾಸ ವಿಮರ್ಶೆ, ಸಂಪುಟ-೩, ಪು.ಸಂ-೫೧.

೧೬೧. ವಿಕ್ರಮಾರ್ಜುನ ವಿಜಯಂ, ೮/೭೦.

೧೬೨. ವಿಕ್ರಮಾರ್ಜುನ ವಿಜಯಂ, ೮/೭೦-ವ.

೧೬೩. ವಿಕ್ರಮಾರ್ಜುನ ವಿಜಯಂ, ೮/೭೧.

೧೬೪. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಪು.ಸಂ-೩೯೬.

೧೬೫. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೧೭.

೧೬೬. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೧೮.

೧೬೭. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೨೧.

೧೬೮. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೨೪.

೧೬೯. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೨೫.

೧೭೦. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೨೬.

೧೭೧. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೨೮.

೧೭೨. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೩೨.

೧೭೩. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೩೮.

೧೭೪. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೨.

೧೭೫. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೫.

೧೭೬. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೧೩.

೧೭೭. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೧೪.

೧೭೮. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೧೭.

೧೭೯. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೧೮.

೧೮೦. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೧೯.

೧೮೧. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೨೬.

೧೮೨. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೨೭.

೧೮೩. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೨೯.

೧೮೪. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೩೧.

೧೮೫. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೩೨.

೧೮೬. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೩೩.

೧೮೭. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೩೪.

೧೮೮. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೩೯.

೧೮೯. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೪೨.

೧೯೦. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೪೪.

೧೯೧. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೪೬.

೧೯೨. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೪೭.

೧೯೩. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೫೪.

೧೯೪. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೫೫.

೧೯೫. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೫೬.

೧೯೬. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೫೭.

೧೯೭. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೫೮.

೧೯೮. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೫೯.

೧೯೯. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೬೦.

೨೦೦. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೬೧.

೨೦೧. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೬೨.

೨೦೨. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೬೩.

೨೦೩. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೬೪.

೨೦೪. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೩/೬೫.

೨೦೫. ಕರ್ಣಾಟ ಭಾರತ ಕಥಾಮಂಜರಿ, ದ್ರೋಣಪರ್ವ, ೭/೧೨.

೨೦೬. ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ, ಪು.ಸಂ–೬೩೮ ಮತ್ತು ೬೩೯.

೨೦೭. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೦/೧೪.

೨೦೮. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೦/೧೫.

೨೦೯. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೦/೨೬.

೨೧೦. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೧/೭೨.

೨೧೧. ಬೇಕಾದ ಸಂಗತಿ, ಪು.ಸಂ– xxxiii.

೨೧೨. ವಿಕ್ರಮಾರ್ಜುನ ವಿಜಯಂ, ೧/೧೨೮–ವ.

೨೧೩. ವಿಕ್ರಮಾರ್ಜುನ ವಿಜಯಂ, ೧/೧೨೯.

೨೧೪. ವಿಕ್ರಮಾರ್ಜುನ ವಿಜಯಂ, ೧/೧೩೦.

೨೧೫. ವಿಕ್ರಮಾರ್ಜುನ ವಿಜಯಂ, ೧೩/೧೨.

೨೧೬. ವಿಕ್ರಮಾರ್ಜುನ ವಿಜಯಂ, ೧೩/೧೩.

೨೧೭. ವಿಕ್ರಮಾರ್ಜುನ ವಿಜಯಂ, ೧೪/೧೦–ವ.

೨೧೮. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೪/೪೧.

೨೧೯. ಕರ್ಣಾಟ ಭಾರತ ಕಥಾಮಂಜರಿ, ತೋರಣನಾಂದಿ, ಪು.ಸಂ–೧೭ ಮತ್ತು ೧೮.

೨೨೦. ಕುಮಾರವ್ಯಾಸ ಸಮೀಕ್ಷೆ, ಪು.ಸಂ– ೭೨ ಮತ್ತು ೭೩.

೨೨೧. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೪/೪೨.

೨೨೨. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೪/೪೪.

೨೨೩. ಹಳಗನ್ನಡ ಪದಸಂಪದ, ಪು.ಸಂ–೨೫೭.

೨೨೪. ಹಳಗನ್ನಡ ವಿಶೇಷ ಶಬ್ದಕೋಶ, ಪು.ಸಂ–೧೯೫.

೨೨೫. ಸಂವೇದನೆ, ಪು.ಸಂ–೯೨.

೨೨೬. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೨೬.

೨೨೭. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೨೭.

೨೨೮. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೩೨.

೨೨೯. ಕುಮಾರವ್ಯಾಸಭಾರತ ನಿಘಂಟು, ಪು.ಸಂ–೩೨೧.

೨೩೦. ಕುಮಾರವ್ಯಾಸನ ಪಾತ್ರಸೃಷ್ಟಿ, ಪು.ಸಂ–೨೦೯.

೨೩೧. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೧/೫೪.

೨೩೨. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೧/೫೬.

೨೩೩. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೧/೫೭.

೨೩೪. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೧/೫೮.

೨೩೫. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೧/೬೩.

೨೩೬. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೧/೭೨.

೨೩೭. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೧/೭೩.

೨೩೮. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೨/೨.

೨೩೯. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೨/೮.

೨೪೦. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೨/೯.

೨೪೧. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೨/೧೦.

೨೪೨. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೨/೧೧.

೨೪೩. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೨/೧೨.

೨೪೪. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೨/೧೩.

೨೪೫. ವಿಕ್ರಮಾರ್ಜುನ ವಿಜಯಂ, ೮/೮೨-ವ.

೨೪೬. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೪೦.

೨೪೭. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೪೩.

೨೪೮. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೪೪.

೨೪೯. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೪೫.

೨೫೦. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೨/೪೮.

೨೫೧. ವಿಕ್ರಮಾರ್ಜುನ ವಿಜಯಂ, ೭/೩೩-ವ.

೨೫೨. ವಿಕ್ರಮಾರ್ಜುನ ವಿಜಯಂ, ೭/೩೪.

೨೫೩. ಸಂಕ್ಷಿಪ್ತ ಕನ್ನಡ ನಿಘಂಟು, ಪು.ಸಂ-೭೮೨.

೨೫೪. ವಿಕ್ರಮಾರ್ಜುನ ವಿಜಯಂ, ೯/೬೯.

೨೫೫. ಭಾನುಮತಿಯ ನೆತ್ತ, ಪು.ಸಂ-೨೨.

೨೫೬. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೦/೪.

೨೫೭. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೦/೫.

೨೫೮. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೦/೬.

೨೫೯. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೦/೭.

೨೬೦. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೧೦.

೨೬೧. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೧೮.

೨೬೨. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೨೦.

೨೬೩. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೨೧.

೨೬೪. ಕುಮಾರವ್ಯಾಸನ ಪಾತ್ರಸೃಷ್ಟಿ, ಪು.ಸಂ-೨೨೫.

೨೬೫. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೨೨.

೨೬೬. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೨೩.

೨೬೭. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೨೧/೨೫.

೨೬೮. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೪/೧೨.

೨೬೯. ಕನ್ನಡ ಸಾಹಿತ್ಯ ಚರಿತ್ರೆ, ಪು.ಸಂ-೯೫.

೨೭೦. ವಿಕ್ರಮಾರ್ಜುನ ವಿಜಯಂ, ೪/೪೧.

೨೭೧. ವಿಕ್ರಮಾರ್ಜುನ ವಿಜಯಂ, ೪/೪೩.

೨೭೨. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಪು.ಸಂ–೨೨೭.

೨೭೩. ವಿಕ್ರಮಾರ್ಜುನ ವಿಜಯಂ, ೪/೫೪.

೨೭೪. ವಿಕ್ರಮಾರ್ಜುನ ವಿಜಯಂ, ೪/೫೫.

೨೭೫. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಪು.ಸಂ–೨೩೧ ಮತ್ತು ೨೩೨.

೨೭೬. ವಿಕ್ರಮಾರ್ಜುನ ವಿಜಯಂ, ೪/೫೬.

೨೭೭. ವಿಕ್ರಮಾರ್ಜುನ ವಿಜಯಂ, ೪/೫೭.

೨೭೮. ವಿಕ್ರಮಾರ್ಜುನ ವಿಜಯಂ, ೪/೫೮.

೨೭೯. ವಿಕ್ರಮಾರ್ಜುನ ವಿಜಯಂ, ೪/೫೯–ವ.

೨೮೦. ವಿಕ್ರಮಾರ್ಜುನ ವಿಜಯಂ, ೪/೬೪–ವ.

೨೮೧. ವಿಕ್ರಮಾರ್ಜುನ ವಿಜಯಂ, ೫/೨.

೨೮೨. ವಿಕ್ರಮಾರ್ಜುನ ವಿಜಯಂ, ೫/೮.

೨೮೩. ವಿಕ್ರಮಾರ್ಜುನ ವಿಜಯಂ, ೫/೫.

೨೮೪. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೧೯/೩೬.

೨೮೫. ಕರ್ಣಾಟ ಭಾರತ ಕಥಾಮಂಜರಿ, ದ್ರೋಣಪರ್ವ, ೭/೧೧.

೨೮೬. ಕರ್ಣಾಟ ಭಾರತ ಕಥಾಮಂಜರಿ, ದ್ರೋಣಪರ್ವ, ೭/೧೩.

೨೮೭. ಕರ್ಣಾಟ ಭಾರತ ಕಥಾಮಂಜರಿ, ದ್ರೋಣಪರ್ವ, ೭/೧೪.

೨೮೮. ಕರ್ಣಾಟ ಭಾರತ ಕಥಾಮಂಜರಿ, ದ್ರೋಣಪರ್ವ, ೭/೧೫.

೨೮೯. ಕರ್ಣಾಟ ಭಾರತ ಕಥಾಮಂಜರಿ, ದ್ರೋಣಪರ್ವ, ೭/೧೬.

೨೯೦. ಕರ್ಣಾಟ ಭಾರತ ಕಥಾಮಂಜರಿ, ದ್ರೋಣಪರ್ವ, ೭/೧೭.

೨೯೧. ವಿಕ್ರಮಾರ್ಜುನ ವಿಜಯಂ, ೨/೨–ವ.

೨೯೨. ವಿಕ್ರಮಾರ್ಜುನ ವಿಜಯಂ, ೨/೨೦.

೨೯೩. "ಪಾಂಡುರಾಜನು ಒಂದು ದಿನ ತೋಹಿನ ಬೇಂಟೆಯೆಂಬುದನ್ನು ಆಡಲು ಆಸಕ್ತನಾಗಿ ಕಾಡಿಗೆ ಹೋದನು. ಅಲ್ಲಿ 'ಕಿಂದಮ'ನೆಂಬ ಋಷಿಯೊಬ್ಬನು ತನ್ನ ಪ್ರಿಯಳನ್ನು ಹೆಣ್ಣು ಜಿಂಕೆಯನ್ನಾಗಿ ಮಾಡಿ ಕಾಮವಶನಾಗಿ ಸಂತೋಷದಿಂದ ಅವಳೊಡನೆ ಕೂಡಿ ಋಷಿ ಶ್ರೇಷ್ಠನಾದ ತಾನೂ ಗಂಡು ಜಿಂಕೆಯ ಆಕಾರವನ್ನು ತಾಳಿ ಉತ್ಸಾಹದಿಂದ ವಿಹರಿಸುತ್ತಿದ್ದನು. ಪಾಂಡುರಾಜನು ಅದು ಜಿಂಕೆಯೆಂದು ಮೆಲ್ಲಗೆ ಅದರ ಹತ್ತಿರ ಬಂದು ಅದರ ಮರ್ಮಸ್ಥಾನವನ್ನು ನೋಡಿ ಗುರಿಯಿಟ್ಟು ಆ ಮೃಗರೂಪದಲ್ಲಿದ್ದ ಆ ಋಷಿಯನ್ನು ತಟ್ಟನೆ ಬಾಣದಿಂದ ಹೊಡೆದು ತನಗೆ ಒಂದು ಮಾರಿ ತಂದುಕೊಂಡನು. ಆಗ ತಾನು ಹೊಡೆದ ಬಾಣವು ಋಷಿಪುತ್ರನ ಕಣ್ಣಿನಲ್ಲಿಯೂ ಎದೆಯಲ್ಲಿಯೂ ಪ್ರಳಯಕಾಲದ

ಉಲ್ಕಾಪಾತದಂತೆ ಹೊಳೆಯುತ್ತಿರಲು 'ನನ್ನನ್ನು ಯಾರು ಹೊಡೆದನು ಹೇಳ' ಎಂಬ ಋಷಿಯ ಕೋಪ ಧ್ವನಿಯನ್ನು ಕೇಳಿ ಬಿಲ್ಲು ಬಾಣಗಳನ್ನೆಸೆದು ತನ್ನ ಮುಂದೆ ನಿಂತಿದ್ದ ರಾಜನನ್ನು ಮುನಿ ನೋಡಿ ಸಂಭೋಗ ಸುಖಕ್ಕಾಸೆಪಟ್ಟು ಪ್ರಿಯಳಲ್ಲಿ ಪ್ರೇಮದಿಂದ ಸೇರಿಕೊಂಡಿದ್ದ ನನ್ನನ್ನು ಹೀಗೆ ಅನ್ಯಾಯದಿಂದ ಹೊಡೆದುದಕ್ಕೆ ನಿನಗೆ ಬೇರೆ ಶಿಕ್ಷೆಯಿಲ್ಲ. ನೀನು ಇನ್ನು ಮೇಲೆ ನಿನ್ನ ಪ್ರಿಯಳಲ್ಲಿ ಪ್ರೀತಿಸಿ ನೋಡಿದಾಗ ಅಥವಾ ಆಸೆಪಟ್ಟು ಕೂಡಿದಾಗ ಸಾಯುತ್ತೀಯ ಹೋಗು ಎಂದು ಶಪಿಸಿದನು". (ಪಂಪ ಮಹಾಕವಿ ವಿರಚಿತ ಪಂಪಭಾರತಂ, ಪು.ಸಂ-೧೦೫ ಮತ್ತು ೧೦೬).

೨೯೪. ವಿಕ್ರಮಾರ್ಜುನ ವಿಜಯಂ, ೨/೨೧.

೨೯೫. ವಿಕ್ರಮಾರ್ಜುನ ವಿಜಯಂ, ೨/೨೨.

೨೯೬ ಪಂಪಭಾರತ : ಒಂದು ಸಾಂಸ್ಕೃತಿಕ ಅಧ್ಯಯನ, ಪು.ಸಂ-೨೦೪.

೨೯೭ ಕರ್ನಾಟ ಭಾರತ ಕಥಾಮಂಜರಿ, ಆದಿಪರ್ವ, ೫/೧೧.

೨೯೮. ಕರ್ನಾಟ ಭಾರತ ಕಥಾಮಂಜರಿ, ಆದಿಪರ್ವ, ೫/೧೩.

೨೯೯. ಕರ್ನಾಟ ಭಾರತ ಕಥಾಮಂಜರಿ, ಆದಿಪರ್ವ, ೫/೧೪.

೩೦೦. ಕರ್ನಾಟ ಭಾರತ ಕಥಾಮಂಜರಿ, ಆದಿಪರ್ವ, ೫/೧೭.

೩೦೧. ಕರ್ನಾಟ ಭಾರತ ಕಥಾಮಂಜರಿ, ಆದಿಪರ್ವ, ೫/೨೩.

೩೦೨. ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ, ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆಯ ಅಂಶಗಳು, ಪು.ಸಂ-೨೬

ಅಧ್ಯಾಯ : ನಾಲ್ಕು

ಬುಡಕಟ್ಟು ಹಾಗೂ ಜನಪದ ಮಹಿಳೆಯರ ಸಂಘರ್ಷಗಳು

ಅಧ್ಯಾಯ : ನಾಲ್ಕು

ಬುಡಕಟ್ಟು ಹಾಗೂ ಜನಪದ ಮಹಿಳೆಯರ ಸಂಘರ್ಷಗಳು

ಭಾರತದ ಸಾಂಸ್ಕೃತಿಕ ಪರಿಸರ ಏಕ ಸಂಸ್ಕೃತಿಯ ಪರಂಪರೆಯದ್ದಲ್ಲ. ಅದು ಬಹು ಸಂಸ್ಕೃತಿಯ ಆಯಾಮಗಳನ್ನು ಒಳಗೊಂಡಿರುವಂತಹದ್ದು. ಇಂತಹ ಸಾಂಸ್ಕೃತಿಕ ಪರಿಸರದಲ್ಲಿ ಬುಡಕಟ್ಟು ಸಮುದಾಯಗಳು ಬದುಕನ್ನು ಕಟ್ಟಿಕೊಂಡಿರುವುದು ಕಂಡುಬರುತ್ತದೆ. ಬುಡಕಟ್ಟು ಸಂಸ್ಕೃತಿಯು ತನ್ನದೇ ಆದ ವಿಶಿಷ್ಟ ಜೀವನ ಕ್ರಮದೊಂದಿಗೆ ಬದುಕುತ್ತ, ಉಳಿದ ಸಾಂಸ್ಕೃತಿಕ ಜಗತ್ತಿನಿಂದ ಭಿನ್ನವಾಗಿ ಕಾಣುತ್ತದೆ. ಅಲ್ಲದೆ ನಿಸರ್ಗ ಜೀವಿಗಳು ಎನಿಸಿಕೊಂಡಿರುವ ಈ ಸಂಸ್ಕೃತಿ ತನ್ನೊಳಗಿನ ಹೆಣ್ಣನ್ನು ಹೇಗೆ ನಡೆಸಿಕೊಂಡಿದೆ? ಹಾಗೂ ಅವಳನ್ನು ಗ್ರಹಿಸಿರುವ ಕ್ರಮವು ಹೇಗಿದೆ? ಎಂಬುದನ್ನು ಅಧ್ಯಯನಕ್ಕೆ ಒಳಪಡಿಸುವುದು ಬಹುಮುಖ್ಯವಾದ ಸಂಗತಿಯಾಗಿದೆ. ಸಾಂಪ್ರದಾಯಿಕ ಸಮಾಜದಲ್ಲಿರುವಂತೆಯೆ ಬುಡಕಟ್ಟು ಸಮಾಜದ ಹೆಣ್ಣುಗಳು ಸಹ ಹಲವು ಶೋಷಣೆಗಳನ್ನು ಎದುರಿಸುವುದು ಕಂಡುಬರುತ್ತದೆ. ಕೌಟುಂಬಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕವಾದ ನೆಲೆಗಳಲ್ಲಿ ಹಲವು ಭಿನ್ನತೆಗಳನ್ನು ಕಾಣಬಹುದಾಗಿದೆ. ಪ್ರಸ್ತುತ ಅಧ್ಯಾಯದಲ್ಲಿ ಉಲ್ಲೇಖಿಸಿರುವ ಬುಡಕಟ್ಟು ಮತ್ತು ಜನಪದ ಸ್ತ್ರೀಯರೆಂದರೆ ಕುರುವಂಶದ ಸ್ತ್ರೀವರ್ಗವನ್ನು ಹೊರತುಪಡಿಸಿದ ಸ್ತ್ರೀಯರನ್ನು ನಿರ್ದೇಶಿಸುತ್ತದೆ.

ಉಳಿದ ಸಂಸ್ಕೃತಿಗಳಿಗಿಂತ ಭಿನ್ನವಾಗಿ ಕಂಡುಬರುವ ಬುಡಕಟ್ಟು ಸಂಸ್ಕೃತಿ ತನ್ನ ಜೀವನೋಪಾಯ ಹಾಗೂ ಆಹಾರಕ್ಕಾಗಿ ಕಾಡನ್ನು ಅವಲಂಬಿಸಿರುವಂತಹದ್ದು. ಅದರಂತೆಯೆ ಊಟೋಪಚಾರದ ವಿಚಾರಗಳಲ್ಲಿ ರಾಕ್ಷಸೀ ಪ್ರವೃತ್ತಿಯ ಗುಣಗಳಿಂದ ತುಂಬಿರುವ ಇವರು ನರಭಕ್ಷಕರೂ ಆಗಿದ್ದಾರೆ. ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿ ಕಂಡುಬರುವ 'ಹಿಡಿಂಬಕ' ಮತ್ತು ಆತನ ತಂಗಿಯಾದ 'ಹಿಡಿಂಬೆ' ಈ ಸಂಸ್ಕೃತಿಯ ಪ್ರತಿನಿಧಿಗಳಾಗಿ ಕಂಡುಬರುತ್ತಾರೆ. ಅಲ್ಲದೆ ಹಿಡಿಂಬಕನು ಮರದಡಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದ ಪಾಂಡವರನ್ನು ನೋಡಿ ಅವರನ್ನು ಕೊಂದು ತಂದು ಅಡುಗೆ ಮಾಡುವಂತೆ ತಂಗಿಗೆ ಹೇಳುವುದು ಆ ಸಂಸ್ಕೃತಿಯ ಸಹಜ ಪ್ರಕ್ರಿಯೆಯಾಗಿದೆ. ಅದು ಸರಿ ತಪ್ಪುಗಳೆಂಬ ವಿಮರ್ಶೆಯ ಒರೆಗಲ್ಲಿಗೆ ನಿಲುಕುವಂತಹದ್ದಲ್ಲ. ಅದು ಆ ಸಂಸ್ಕೃತಿಯ ಜೀವಂತವಾದ ಜೀವನ ಕ್ರಮ. ಅದರಲ್ಲಿ ಪಾಪ-ಪುಣ್ಯ, ನ್ಯಾಯ-ಅನ್ಯಾಯಗಳ ಹುಡುಕುವಿಕೆಗಿಂತ ಆ ಸಮುದಾಯದ ಜೀವನ ಶೈಲಿ ತಿಳಿಯುವುದು ಪ್ರಮುಖವಾದುದು. ಹಿಂಸೆ ಇವರ ಬದುಕಿನ ಭಾಗವಾಗಿದ್ದರೂ

ಅವರೊಳಗೂ ಮನಸ್ಸು ಎಂಬುದು ಒಂದಿದೆ. ಅದರೊಳಗೆ ಮಧುರವಾದ ಭಾವನೆಗಳಿವೆ. ಸ್ಪಂದನೆಯ ಹೃದಯವಿದೆ ಎಂಬುದಕ್ಕೆ ಇಲ್ಲಿನ ಹಿಡಿಂಬೆ ಪ್ರತ್ಯಕ್ಷ ಸಾಕ್ಷಿಯಾಗಿ ನಮ್ಮ ಮುಂದೆ ನಿಲ್ಲುತ್ತಾಳೆ.

ಪಾಂಡವರನ್ನು ಕೊಂದು ತರಲಿಕ್ಕೆಂದು ಹೋಗುವುದು ಆಹಾರದ ಕ್ರಮದ ಹಿನ್ನೆಲೆಯನ್ನು ತೋರುತ್ತದೆ. ಆದರೂ ಅದರ ಹಿಂದೆ ಅನಧಿಕೃತವಾಗಿ ಹೊರಗಿನ ಸಂಸ್ಕೃತಿಯೊಂದು ತನ್ನ ಸಾಂಸ್ಕೃತಿಕ ಪರಿಸರಕ್ಕೆ ಅತಿಕ್ರಮ ಪ್ರವೇಶವನ್ನು ಪಡೆದಾಗ ತನ್ನ ಸಂಸ್ಕೃತಿಯ ರಕ್ಷಣೆಗಾಗಿಯೂ ಕೂಡ ಹಿಡಿಂಬೆ ಅವರನ್ನು ಕೊಲ್ಲಲು ಹೋಗುವ ಉದ್ದೇಶವೂ ಆ ಪ್ರಯತ್ನದಲ್ಲಿ ಅಡಗಿರಬಹುದಾದ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಇಲ್ಲಿ ಅನ್ಯ ಸಂಸ್ಕೃತಿಯೊಂದನ್ನು ಎದುರಿಸಲು ಅಣಿಯಾಗುವ ಅಥವಾ ಅದರ ವಿರುದ್ಧ ಘರ್ಷಣೆಗಿಳಿಯುವ ಅಂಶಗಳು ಕಂಡುಬರುತ್ತವೆ. ಇದು ಒಂದು ನೆಲೆಯ ಚರ್ಚೆಯಾದರೆ, ಮತ್ತೊಂದು ಹಿಡಿಂಬೆ ಬುಡಕಟ್ಟು ಹಾಗೂ ರಾಕ್ಷಸ ಸಂಸ್ಕೃತಿಯವಳಾದರೂ ಆಕೆ ಕೂಡ ಜೈವಿಕವಾಗಿ ಒಂದು ಹೆಣ್ಣು. ಆಕೆಯಲ್ಲು ಭಾವನೆಗಳಿವೆ, ಪ್ರತಿಕ್ರಿಯಿಸುವ ಮನಸ್ಸಿದೆ ಎಂಬ ವಿಚಾರಗಳಿಗೆ ಒತ್ತು ಕೊಡುವುದು ಈ ಅಧ್ಯಯನದ ಮುಖ್ಯ ಪ್ರಯತ್ನವಾಗಿದೆ.

೪.೧. ಪ್ರೇಮ ನಿವೇದನಾ ಮಹಿಳೆಯಾಗಿ ಹಿಡಿಂಬೆ

ಈಕೆ ಉದಯ ಪರ್ವತದ ಅರಣ್ಯ ಪ್ರದೇಶವನ್ನು ಆಳುವ ಹಿಡಿಂಬನೆಂಬ ರಾಕ್ಷಸನ ತಂಗಿ. "ಇವಳಿಗೆ 'ಕಮಲಪಾಲಿಕೆ'ಯೆಂಬುದು ನಾಮಾಂತರ."[೧] ಅರಗಿನ ಮನೆಯಿಂದ ತಪ್ಪಿಸಿಕೊಂಡು ಬಂದ ಪಾಂಡವರು ಉದಯಾಚಳ ಶಿಖರದ ಕೋಡಿಗೆ ಬರುತ್ತಾರೆ. ಅಲ್ಲಿ ಒಂದು ಆಲದ ಮರದ ಕೆಳಗೆ ಎಲ್ಲರೂ ವಿಶ್ರಮಿಸಿಕೊಳ್ಳುತ್ತಿದ್ದಾಗ ಈಕೆ ಭೀಮನನ್ನು ನೋಡಿ ಮೋಹಪರವಶಳಾಗುತ್ತಾಳೆ. ಆತನಲ್ಲಿ ಅನುರಕ್ತಳಾದ ಇವಳು ಆತನೊಡನೆ ಗಾಂಧರ್ವ ವಿವಾಹವಾಗಿ ಘಟೋತ್ಕಚನೆಂಬ ಮಗನ ಜನನಕ್ಕೆ ಕಾರಣಳಾಗುತ್ತಾಳೆ. ಪಂಪ ಹಾಗೂ ಕುಮಾರವ್ಯಾಸರ ಕೃತಿಗಳೆರಡರಲ್ಲಿಯೂ ಈಕೆ ತನ್ನ ಅಣ್ಣನಾದ ಹಿಡಿಂಬನ ಆಣತಿಯಂತೆ ಪಾಂಡವರನ್ನು ಕೊಂದು ಅಡುಗೆ ಮಾಡಿ ತಿನ್ನಲೆಂದು ಬಂದವಳು. ನಂತರ ಭೀಮನಿಗೆ ಮರುಳಾಗಿ ಆತನನ್ನು ವಿವಾಹವಾಗುವ ವಿವರಗಳಿವೆ. ಇಲ್ಲಿ ಪಂಪ ಹಾಗೂ ಕುಮಾರವ್ಯಾಸರು ಕಾನನ ಸಂಸ್ಕೃತಿಯ ಮತ್ತೊಂದು ಜೀವನ ಕ್ರಮದ ಬಗೆಯನ್ನು ನಮಗೆ ಪರಿಚಯಿಸುತ್ತಾರೆ. ಮನುಷ್ಯ ಸಂಸ್ಕೃತಿಗೂ ಭಿನ್ನವಾದ ಸಂಸ್ಕೃತಿ ಇವರಲ್ಲಿದ್ದರೂ ಮಾನವೀಯ ಸಂಬಂಧಗಳನ್ನು ಮತ್ತು ಪ್ರೀತಿ, ಪ್ರೇಮಗಳಂತಹ ಭಾವನೆಗಳನ್ನು ಇಲ್ಲಿ ಕಾಣಲು ಸಾಧ್ಯವಿದೆ.

ಜೊತೆಗೆ ವರ್ಗ ಹಾಗೂ ವರ್ಣ ಸಂಕರದ ಕ್ರಿಯೆ ಜರುಗಿರುವುದು ನಮಗೆ ಕಂಡುಬರುತ್ತದೆ. ಏಕೆಂದರೆ ಹಿಡಿಂಬೆಯು ಬುಡಕಟ್ಟು ಹಾಗೂ ರಾಕ್ಷಸ ಸಂಸ್ಕೃತಿಯ ಪ್ರತಿನಿಧಿಯಾಗಿದ್ದಾಳೆ. ಇವಳನ್ನು ಭೀಮ ವರಿಸುತ್ತಾನೆ. ಈಕೆಯನ್ನು ಭೀಮನು ಮದುವೆಯಾಗುವುದರ ಹಿಂದಿನ ರಾಜಕಾರಣಗಳು ಏನೇ ಇದ್ದರೂ ಸಹ, ಕಾಡಿನಲ್ಲಿ ವಾಸಿಸುತ್ತ, ರಾಕ್ಷಸ ಸಂಸ್ಕೃತಿಯ ಗುಣಗಳಿದ್ದಾಗ್ಯೂ ಈಕೆಯಲ್ಲಿಯೂ ಭಾವನೆಗಳಿವೆ. ಪ್ರೀತಿ ಪ್ರೇಮಗಳಂತಹ ಮನಸ್ಸಿನ ಒಳತೋಟಿಯ ಸಂಘರ್ಷಗಳಿವೆ ಎಂಬುದು ಇಲ್ಲಿ ಪ್ರಧಾನವಾದುದು. ಜೀವಹತ್ಯೆಗೆಂದು ಬಂದವಳು ಭೀಮನಿಗೆ ಮನಸೋತು ನಿಲ್ಲುವುದು ಆಕೆಯ ಬದಲಾದ ಬದುಕಿನ ಕ್ರಮ ಹಾಗೂ ಉನ್ನತಿಕೆಯನ್ನು ತಿಳಿಸಿಕೊಡುತ್ತದೆ. ಪಂಪ ಮಹಾಕವಿಯು

ಹಿಡಿಂಬೆ ಹಾಗೂ ಭೀಮನ ನಡುವಿನ ಭೇಟಿ, ಹಿಡಿಂಬೆಯ ಮನದಲ್ಲಿನ ದೋಲಾಯಮಾನ ಸ್ಥಿತಿಗಳು ಹಾಗೂ ಈಕೆಯ ಅಣ್ಣನಾದ ಹಿಡಿಂಬನ ವಿವರಗಳನ್ನು ಈ ರೀತಿಯಾಗಿ ಕಟ್ಟಿಕೊಟ್ಟಿದ್ದಾನೆ. ಪಾಂಡವರನ್ನು ನೋಡಿದ ಹಿಡಿಂಬ ತನ್ನ ತಂಗಿಗೆ ಹೀಗೆಂದು ಹೇಳುತ್ತಾನೆ.

"ನಿಡಿಯರ್ ಬಲ್ಲಾಯದ ಬ
ಲ್ವಡಿಗರ್ ವಂದಿರ್ದರಯ್ವರಾಲದ ಕೆಳಗಿಂ ।
ತೊಡರ್ದರ್ ನಮ್ಮಯ ಭಕ್ಷದೊ
ಳಡು ಪಣ್ಣಿಡು ಪೋಗು ನೀನುಮಾನುಂ ತಿಂಬಂ ॥"[೨]

ಅರಗಿನ ಮನೆಯಿಂದ ತಪ್ಪಿಸಿಕೊಂಡು ಬಂದ ಪಾಂಡವರೈವರೂ ಕುಂತಿಯೊಡನೆ ಆಲದ ಮರದ ಕೆಳಗೆ ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು. ಆಗ ಅವರನ್ನು ಕಂಡ ಹಿಡಿಂಬನು ನೀಳವಾಗಿಯೂ, ಬಲು ದಪ್ಪನಾಗಿ ಬಲಶಾಲಿಗಳೂ ಆಗಿರುವ ಐದು ಜನರು ಆಲದ ಮರದ ಕೆಳಗೆ ಇದ್ದಾರೆ. ಅವರಾಗಿಯೇ ನಮ್ಮ ಆಹಾರಕ್ಕಾಗಿ ಸಿಕ್ಕಿಬಿದ್ದಿದ್ದಾರೆ. ಹೋಗಿ ಬೇಯಿಸಿ ಅಡುಗೆಯನ್ನು ತಯಾರಿಸು; ಇಬ್ಬರೂ ತಿನ್ನೋಣ ಎಂದು ತನ್ನ ತಂಗಿಯಾದ ಹಿಡಿಂಬೆಗೆ ಹೇಳುತ್ತಾನೆ. ಅಣ್ಣನ ಆಜ್ಞೆಯಂತೆ ಹೊರಟು ಬಂದ ಹಿಡಿಂಬೆಯ ವಿವರಗಳನ್ನು ಪಂಪ ಹೀಗೆ ತಿಳಿಸಿದ್ದಾನೆ.

"ಆಗಸದೊಳಗೊಂದು ಮಹೀ
ಭಾಗದೊಳಿನ್ನೊಂದು ದಾಡೆಯಾಗಿರೆ ಮನದಿಂ ।
ಬೇಗಂ ಬರ್ಪಳ ದಿಟ್ಟಿಗ
ಳಾಗಳೆ ಪತ್ತಿದುವು ಗೆಂಟಱೊಳ್ ಮಾರುತಿಯಂ ॥"[೩]

ಆಗಸದಲ್ಲಿ ಒಂದು, ಭೂಮಿಯಲ್ಲಿ ಇನ್ನೊಂದು ದವಡೆಯಾಗಿರಲು ಎಂದರೆ ದೊಡ್ಡದಾಗಿ ಬಾಯಿಯನ್ನು ತೆರೆದುಕೊಂಡು, ಮನೋವೇಗವನ್ನು ಮೀರಿ ಬರುತ್ತಿದ್ದ ಹಿಡಿಂಬೆಯ ದೃಷ್ಟಿಗಳು ಆಗಲೇ ದೂರದಿಂದಲೇ ಭೀಮನನ್ನು ಸೇರಿಕೊಂಡವು. ಅಂದರೆ ಇಲ್ಲಿ ಹಿಡಿಂಬೆಯು ಭೀಮನನ್ನು ನೋಡಿದ ಮೊದಲ ನೋಟದಲ್ಲಿಯೆ ಪ್ರೇಮಾಂಕುರವಾಗಿ ಆತನಿಗೆ ಸೋತು ಶರಣಾಗುತ್ತಾಳೆ. ಅವರನ್ನು ತಿನ್ನಲೆಂದು ಬಂದ ಈಕೆಯ ದೃಷ್ಟಿ ಭೀಮನಲ್ಲಿ ಲೀನವಾಯಿತು. ಅವಳು ಭೀಮನಿಗೆ ಮನಸೋತಳು. ಇಲ್ಲಿ ಪ್ರಧಾನವಾಗಿ ಗಮನಿಸುವಂತಹದ್ದು ಹಿಡಿಂಬೆಯಂತಹ ಕಾನನ ಜೀವಿಯ ಮನಸ್ಸಿನಲ್ಲಿಯೂ ಸಹ ಪ್ರೇಮ, ಮೋಹದಂತಹ ಮಧುರ ಭಾವಗಳು ಸ್ಫುರಣೆಯಾಗುವುದು. ಕೊಲ್ಲಲು ಬಂದ ಇವಳ ಮುನ್ನಿನ ಮನಸ್ಸು ಆತನನ್ನು ನೋಡಿದ ತಕ್ಷಣ ತನ್ನ ಮೂಲ ಉದ್ದೇಶವನ್ನೆ ಮರೆತು ಭೀಮನಲ್ಲಿ ಅನುರಾಗಪೂರಿತವಾದ ಮನಸ್ಸಿನವಳಾಗುತ್ತಾಳೆ.

"ಅಂತೊಂದಂಬುವೀಡಿನೆಡೆಯೊಳ್ ಕಾಮನಂಬುವೀಡಿಂಗೊಳಗಾಗಿ ತಾಂ ಕಾಮ
ರೂಪೆಯಪ್ಪುದಱಿಂ ದಿವ್ಯ ಕನ್ಯಕಾಸ್ವರೂಪಮಂ ಕೆಯ್ಕೊಂಡು ತನ್ನತ್ತ ಮೊಗದೆ
ಬರ್ಪಳಂ ಕಂಡು"[೪]

"ಒಂದು ಬಾಣವು ಹೋಗುವಷ್ಟು ದೂರದಲ್ಲಿಯೇ ಕಾಮ ಬಾಣಕ್ಕೆ ಅಧೀನಳಾಗಿ ತಾನು ಇಷ್ಟ ಬಂದ ರೂಪವನ್ನು ಧರಿಸುವ ಸಾಮರ್ಥ್ಯವುಳ್ಳವರಾದುದರಿಂದ ಸುಂದರವಾದ ಕನ್ನಿಕೆಯ ಆಕಾರವನ್ನು ತಾಳಿ ಭೀಮನ ಕಡೆಗೆ ಬಂದಳು"[೫] ಎಂಬಲ್ಲಿ ಹಿಡಿಂಬೆಯ ಮನದಲ್ಲಿನ ಸಂಘರ್ಷಗಳು ಗಮನಿಸುವಂತಹವು. ಏಕೆಂದರೆ ರಾಕ್ಷಸ ರೂಪದಲ್ಲಿದ್ದ ಈಕೆ ತನ್ನ ರೂಪವನ್ನು ಬದಲಿಸಿಕೊಳ್ಳುವುದು ಭೀಮನನ್ನು ಒಲಿಸಿಕೊಳ್ಳಲು ಹಾಗೂ ಆತನ ಜೊತೆ ತನ್ನ ಪ್ರೇಮದ ವಿವರಗಳನ್ನು ಹಂಚಿಕೊಳ್ಳಲು ಎಂಬುದು ಮುಖ್ಯವಾದದ್ದು. ಜೊತೆಗೆ ಒಂದು ಹೆಣ್ಣಿನ ಸಹಜ ಮನೋಭಿಲಾಷೆಯ ಪ್ರತೀಕವಾಗಿಯೂ ಈ ಸಂದರ್ಭ ಕಂಡುಬರುತ್ತದೆ. ಎಲ್ಲಕ್ಕಿಂತ ಮುಖ್ಯವಾಗಿ ಎಲ್ಲರಲ್ಲಿಯೂ ಭಾವನೆಗಳಿವೆ ಎಂಬುದು ಇಲ್ಲಿ ಸ್ಪಷ್ಟವಾಗುತ್ತದೆ.

ಹೀಗೆ ರೂಪನ್ನು ಬದಲಿಸಿಕೊಂಡು ಬರುತ್ತಿರುವ ಹಿಡಿಂಬೆಯನ್ನು ನೋಡಿದ ಭೀಮನು ಈಕೆ ಯಾರೆಂದು ಯೋಚಿಸುತ್ತಿದ್ದನು. ಅಷ್ಟರಲ್ಲಿ ಆಕೆಯು ಮದನನ ಕೈಯಿಂದ ಬದುಕಿ ಬಂದ ಪುಷ್ಪ ಬಾಣದ ಹಾಗೆ ಬಂದು ಭೀಮನ ಪಕ್ಕದಲ್ಲಿ ಕುಳಿತಳು. ಅವಳನ್ನು ಕಂಡ ಭೀಮ ನೀನು ಯಾರು? ನಿನ್ನ ಹೆಸರೇನೆಂದು ಕೇಳಲು ಹಿಡಿಂಬೆ ತನ್ನನ್ನು ಈ ರೀತಿಯಾಗಿ ಪರಿಚಯಿಸಿಕೊಳ್ಳುತ್ತಾಳೆ.

> "ಎಂಬನ್ನೆಗಮಾಕೆ ಮದನನ ಕೈಯ್ಯಿಂ ಬರ್ದುಂಕಿದರಲಂಬು ಬರ್ಪಂತೆ ಬಂದು ಭೀಮಸೇನನ ಕೆಲದೊಳ್ ಕುಳ್ಳಿರೆ ನೀನಾರ್ಗೇನೆಂಬೆಯೇಕೆ ಬಂದೆಯೆಂದೊಡಾಕೆಯೆಂದಳೆರಡಜಿಯದೊಲ್ದು ನಿನ್ನೊಳೆರಡಂ ನುಡಿಯಲಾಗದೆನಗೆ ಯಿಾ ಬನಂ ಹಿಡಿಂಬವನಮೆಂಬುದಿದನಾಳ್ವಂ ಹಿಡಿಂಬನೆಂಬಸುರನೆಮ್ಮಣ್ಣನಾನುಂ ಹಿಡಿಂಬೆಯೆನೆಂಬೆನಾತನ ಬೆಸದಿಂ ನಿಮ್ಮಿನಿಬರುಮಂ"[೬]

> "ಪಿಡಿದಡಸಿ ತಿನಲ್ ಬಂದಿ
> ರ್ದೆಡೆಯೊಳ್ ನಿನಗಾಗಿ ಮದನನೆನ್ನನೆ ತಿನೆ ಕೇಳ್ ।
> ಪಡೆನೋಡಲ್ ಬಂದವರಂ
> ಗುಡಿವೊಜೆಸಿದರೆಂಬುದಾಯ್ತು ನಿನ್ನೆನ್ನೆಡೆಯೊಳ್ ॥"[೭]

ಭೀಮನು ಯಾತಕ್ಕಾಗಿ ಬಂದಿದ್ದೀಯೇ ಎಂದು ಕೇಳಲು ಹಿಡಿಂಬೆಯು ನಿನ್ನಲ್ಲಿ ಎರಡು ನುಡಿಯುವುದಿಲ್ಲ. ಅಲ್ಲದೆ ನಿನ್ನನ್ನು ಗಾಢವಾಗಿ ಪ್ರೀತಿಸಿರುವ ಕಾರಣವಾಗಿ ಸುಳ್ಳನ್ನು ಹೇಳಲಾರೆನು. ಈ ಕಾಡು ಹಿಡಿಂಬ ಎಂಬ ವನ. ಈ ವನವನ್ನು ಆಳುವ ಹಿಡಿಂಬನೆಂಬ ರಾಕ್ಷಸನು ನನ್ನ ಅಣ್ಣ. ನನ್ನ ಹೆಸರು ಹಿಡಿಂಬೆಯೆಂದು. ನನ್ನ ಅಣ್ಣನ ಆಣತಿಯಂತೆ ನಾನು ನಿಮ್ಮೆಲ್ಲರನ್ನೂ ಹಿಡಿದು ಬಾಯಿಗೆ ಹಾಕಿಕೊಂಡು ತಿನ್ನಲು ಬಂದ ಸಮಯದಲ್ಲಿ ಮನ್ಮಥನು ನನ್ನನ್ನೇ ತಿಂದು ಬಿಟ್ಟನು. ಕೇಳು ಸೈನ್ಯವನ್ನು ನೋಡಲು ಬಂದಂತಹ ವ್ಯಕ್ತಿಗಳ ಕೈಯಲ್ಲಿ ಸೈನ್ಯದ ಬಾವುಟವನ್ನು ಹೊರಿಸಿದರು ಎಂಬ ಗಾದೆಯಂತಾಯ್ತು ನನ್ನ ಈ ಹೊತ್ತಿನ ಪ್ರಯತ್ನ ಎಂದು ಹಿಡಿಂಬೆ ಭೀಮನಲ್ಲಿ ತಿಳಿಸುತ್ತಾಳೆ. ಆ ಮೂಲಕ ಪಂಪ ಹಿಡಿಂಬೆಯ ಮನದಲ್ಲಿ ಹುಟ್ಟಿರುವ ಪ್ರೀತಿಯ ಅನುರಾಗವನ್ನು ಮನ್ಮಥನು ನನ್ನನ್ನೇ ತಿಂದು ಬಿಟ್ಟನು ಎಂಬ ಮಾತುಗಳಲ್ಲಿ ಓದುಗರಿಗೆ ತಿಳಿಸಿಕೊಡುತ್ತಾನೆ.

ಇಲ್ಲಿ ಹಿಡಿಂಬೆ ಬಂದದ್ದು ಜೀವಹತ್ಯೆಗಾಗಿ, ಆದರೆ ಆಕೆ ಮನ್ಮಥನಿಂದ ತಿನ್ನಲ್ಪಡುತ್ತಾಳೆ. ಅಂದರೆ ಆಕೆಯ ಕ್ರೂರತ್ವ ಆಕೆಯಲ್ಲಿಯೇ ಹುಟ್ಟಿದ ಪ್ರೇಮದ ಭಾವದಿಂದಲೇ ನಾಶವಾಗುತ್ತದೆ ಎಂಬುದು ನಮಗೆ ತಿಳಿದು ಬರುವ ಮುಖ್ಯ ಸಂಗತಿ. ಇಲ್ಲಿ ಹಿಡಿಂಬೆ ತನ್ನ ಮನಸ್ಸಿನಲ್ಲಿ ಉಂಟಾಗಿರುವ ಪ್ರೀತಿ ಪ್ರೇಮದ ಭಾವಗಳನ್ನು ಭೀಮನಲ್ಲಿ ಅಭಿವ್ಯಕ್ತಿಪಡಿಸಲು ಪ್ರಯತ್ನಿಸುತ್ತಿರುವುದು ನಮಗೆ ತಿಳಿಯುತ್ತದೆ. ಇದು ಬಹುಮುಖ್ಯವಾಗಿ ಒಬ್ಬ ಹೆಣ್ಣು ಮಗಳು ನೇರವಾಗಿ ತನ್ನ ಪ್ರೀತಿಯನ್ನು ಒಂದು ಗಂಡಿನೊಂದಿಗೆ ಹೇಳಲಾಗದಿದ್ದರೂ, ಮನ್ಮಥನು ನನ್ನನ್ನೇ ತಿಂದುಬಿಟ್ಟ ಎಂಬ ಮಾತುಗಳಲ್ಲಾಗಲಿ, ಸೈನ್ಯವನ್ನು ನೋಡಲು ಬಂದವರಲ್ಲಿ ಬಾವುಟ ಹೊರಿಸಿದರು ಎಂಬ ಮಾತುಗಳಲ್ಲಿ ಆಕೆಯ ಮನಸ್ಸಿನ ಅಭೀಪ್ಸೆ ಏನು ಎಂಬುದು ನಮಗೆ ಸ್ಪಷ್ಟವಾಗುತ್ತದೆ. ಅಲ್ಲದೆ ಮುಂದುವರೆದು ಭೀಮನಿಗೆ ಹೀಗೆ ಹೇಳುತ್ತಾಳೆ.

"ಎಂದೀ ಮಱಲುಂದಿದರಾರ್ಗೆಂದೊಡೆನ್ನ ತಾಯ್ವಿರುಮೊಡವುಟ್ಟಿದರೆಂದೊಡೆ ಹಿಡಿಂಬಂ

ಬಂದವರಂ ತಿಂದೊಡಂ ತಿನ್ಗೆ ನೀನೆನ್ನ ಪೆಗಲನೇಱು ಗಗನತಳಕ್ಕುಯ್ವೆನೆನೆ ಭೀಮಸೇನನಾ

ಮಾತಿಗೆ ಮುಗುಳ್ನಗೆ ನಕ್ಕು"[೮]

ಇಲ್ಲಿ ಮೈಮರೆತು ಮಲಗಿರುವವರು ಯಾರು ಎಂದು ಕೇಳಿದಾಗ ಇವರು ನನ್ನ ತಾಯಿ ಹಾಗೂ ಸಹೋದರರು ಎಂದು ಹೇಳುತ್ತಾನೆ. ಅದಕ್ಕೆ ಹಿಡಿಂಬೆಯು ಹಿಡಿಂಬನು ಬಂದು ಅವರನ್ನೆಲ್ಲಾ ತಿಂದುಕೊಳ್ಳುವುದಾದರೆ ತಿನ್ನಲಿ. ನೀನು ನನ್ನ ಹೆಗಲನ್ನು ಏರಿ ಕುಳಿತು ಕೋ, ಆಕಾಶ ಪ್ರದೇಶಕ್ಕೆ ಕರೆದುಕೊಂಡು ಹೋಗುತ್ತೇನೆ ಎಂದು ಹೇಳುತ್ತಾಳೆ. ಅಂದರೆ ಹಿಡಿಂಬೆಯು ನಾವಿಬ್ಬರು ಈ ಸ್ಥಳವನ್ನು ಬಿಟ್ಟು ಬೇರೆಡೆಗೆ ಹೋಗಿ ಬದುಕನ್ನು ಸಾಗಿಸೋಣ ಎಂಬ ಮನಸ್ಥಿತಿಯಲ್ಲಿರುವುದು ತಿಳಿಯುತ್ತದೆ. ತನ್ನ ಅಣ್ಣನನ್ನು ಬಿಟ್ಟು ಭೀಮನೊಂದಿಗೆ ಬದುಕಲು ಸಿದ್ಧವಾಗಿರುವುದು ಇಲ್ಲಿ ಆಕೆಯ ಬದಲಾದ ಮನಸ್ಥಿತಿಯನ್ನು ತಿಳಿಸುತ್ತದೆ.

ನಂತರದಲ್ಲಿ ಅಲ್ಲಿಗೆ ಹಿಡಿಂಬನ ಆಗಮನವಾಗುತ್ತದೆ. ಭೀಮ ಮತ್ತು ಅವನೊಡನೆ ದೊಡ್ಡ ಘರ್ಷಣೆ ನಡೆದು ಭೀಮನು ಹಿಡಿಂಬನನ್ನು ತಾವರೆಯ ದಂಟನ್ನು ಸೀಳುವ ಹಾಗೆ ಒಂದೇ ಸಲಕ್ಕೆ ಸೀಳಿ ಎಸೆಯುತ್ತಾನೆ. ಮಲಗಿರುವವರಿಗೆ ಎಚ್ಚರವಾಗಲು ನಡೆದ ವೃತ್ತಾಂತವನ್ನು ಭೀಮ ಅವರಿಗೆ ಅರುಹುತ್ತಾನೆ. ಹಿಡಿಂಬೆ ತನ್ನ ಮನದ ಬಯಕೆಗಳನ್ನು ಅವರಲ್ಲಿ ತಿಳಿಸಿ ತನ್ನ ಒಪ್ಪಿಗೆಯನ್ನು ಸೂಚಿಸಿದಾಗ ಕುಂತಿ ಮತ್ತು ಧರ್ಮರಾಯ ಹೇಳುವ ಮಾತುಗಳು ಇಲ್ಲಿ ವಿಚಾರಾರ್ಹವಾದಂತಹವು.

"ಕೊಂತಿಯುಂ ಧರ್ಮಪುತ್ರನುಮಿಾಕೆ ಸಾಮಾನ್ಯ ವನಿತೆಯಲ್ಲಿವಳ್ ರಾಕ್ಷಸ ಸ್ತ್ರೀಯೆಂದು ಭಾವಿಸಲ್ವೇಡೀಕೆಯಂ ಕೈಯ್ಕೊಳ್ವುದೆ ಕಜ್ಜಮೆಂದಾಕೆಗಂ ಭೀಮಸೇನಗಂ ಗಂಧರ್ವ ವಿವಾಹಂ ಮಾಡಿದೊಡೆ"[೯]

ಈಕೆಯು ಸಾಮಾನ್ಯವಾದ ಸ್ತ್ರೀಯಲ್ಲ. ಇವಳನ್ನು ರಾಕ್ಷಸ ಸ್ತ್ರೀಯೆಂದು ಭಾವಿಸಬೇಡ. ಅವಳನ್ನು ಸ್ವೀಕರಿಸುವುದೇ ನಿನಗೆ ಯೋಗ್ಯವಾದ ಕಾರ್ಯ ಎಂದು ಅವರಿಬ್ಬರಿಗೂ ಗಾಂಧರ್ವ

ವಿವಾಹವನ್ನು ಮಾಡುತ್ತಾರೆ. ಈ ಮಾತುಗಳು ಹಿಡಿಂಬೆಯ ಶಕ್ತಿ ಹಾಗೂ ಬಲಗಳು ಮುಂದಿನ ದಿನಗಳಲ್ಲಿ ನಮಗೆ ಸಹಾಯಕವಾಗುವುವು ಎಂಬ ಮನಸ್ಥಿತಿ ಇರಬಹುದೇ ಎಂಬ ಸಂದೇಹಕ್ಕೆ ಎಡೆಮಾಡಿಕೊಡುತ್ತವೆ. ಒಟ್ಟಾರೆಯಾಗಿ ಇವರ ಮನಸ್ಥಿತಿಗಳು ಏನೇ ಇರಲಿ, ಹಿಡಿಂಬೆಯಂತಹ ಕಾನನ ಜೀವಿಯಲ್ಲಿಯ ಮಧುರ ಭಾವನೆಗಳಿಗೂ ಪಂಪನಂತಹ ಕವಿಯಲ್ಲಿ ಸ್ಥಾನವಿದೆ ಎಂಬುದು ಇಲ್ಲಿ ಮುಖ್ಯವಾದುದು.

'ಕುಮಾರವ್ಯಾಸ ಭಾರತ'ದಲ್ಲಿ ಹಿಡಿಂಬೆ ಹಾಗೂ ಹಿಡಿಂಬನ ವಿವರಗಳು ಆದಿಪರ್ವದ ೯ನೆಯ ಸಂಧಿಯ ೧೧ನೆ ಪದ್ಯದಿಂದ ನಮಗೆ ದೊರಕುತ್ತವೆ. ಆ ಸಂದರ್ಭವನ್ನು ಕುಮಾರವ್ಯಾಸ ಹೀಗೆ ಚಿತ್ರಿಸಿದ್ದಾನೆ.

"ತಾಯೆ ಬಾರೌ ತಂಗಿ ಗಂಧದ
ವಾಯುವಿದೆ ಹೊಣೆಗಾರನಾಗಿ ನ
ವಾಯ ಭೋಜನವಿಂದು ದೊರಕಿತು ಮನುಜ ಮಾಂಸದಲಿ
ಸಾಯಲವದಿರ ಬಡಿದು ತಾ ತಮ
ಗಾಯವಿದು ಕೃತಪುಣ್ಯಫಲವೆನೆ
ಮಾಯಗಾತಿ ಹಸಾದವೆನುತ ಹಿಡಿಂಬಿ ಗಮಿಸಿದಳು"[೧೦]

ಹಿಡಿಂಬನು ತನ್ನ ತಂಗಿಯಾದ ಹಿಡಿಂಬೆಗೆ ಹೇಳುತ್ತಾನೆ. ಬಾ ತಂಗಿ ಮನುಷ್ಯರ ವಾಸನೆಯು ಬರುತ್ತಿದೆ. ಅವರನ್ನು ಸಾಯುವಂತೆ ಬಡಿದು ತಾ. ನಾವಿಬ್ಬರೂ ನರ ಮಾಂಸದ ಊಟವನ್ನು ಮಾಡೋಣ ಎಂದು ಹೇಳಲು ಅದರಂತೆ ಹಿಡಿಂಬೆ ಹೊರಡುತ್ತಾಳೆ.

"ಬಂದಳವಳತಿ ರೌದ್ರರೂಪಿನೊ
ಳಂದು ಕಂಡಳು ದೂರದಲಿ ಹರಿ
ನಂದನನ ಸುಳಿದಲೆಯ ಕೆಮ್ಮೀಸೆಗಳ ಕರ್ಕಶದ
ಕೆಂದಳದ ಕೇಸರಿಯ ಕಂಗಳ
ಕುಂದ ರದನಚ್ಛವಿಯಲಿರೆ ಮನ
ಸಂದಳಾ ಖಳನನುಜೆ ಸೋತಳು ಭೀಮಸೇನಂಗೆ"[೧೧]

ತನ್ನ ಅಣ್ಣನಿಗೆ ನರ ಮಾಂಸದ ಅಡುಗೆ ಮಾಡುವ ಹುರುಪಿನಲ್ಲಿ ಆಕೆ ರೌದ್ರ ರೂಪದಲ್ಲಿ ಬಂದಳು. ಆ ರೀತಿ ಬರುವಾಗ ದೂರದಿಂದಲೆ ನಿಂತು ನೋಡುತ್ತಾಳೆ. ಹರಿ ನಂದನನ ಸುಳಿದಲೆ, ಕೆಮ್ಮೀಸೆಗಳ ಕರ್ಕಶ, ಕೆಂದಳದ ಕೇಸರಿಯ ಕಣ್ಣಿನ ಹೊಳಪು, ಕಾಂತಿಯುತವಾದ ಹಲ್ಲು, ಹತ್ತಿರ ಹತ್ತಿರ ಬಂದಂತೆ ಆಕೆಗೆ ಕೊಲ್ಲುವ ಉದ್ದೇಶ ಹೊರಟು ಹೋಯಿತು. ಆಕೆಯು ಭೀಮಸೇನನಿಗೆ ಸೋತು ಹೋದಳು. ಅವನನ್ನು ತಿನ್ನುವ ಬದಲಿಗೆ ಅವಳ ಎಣಿಕೆ ಬೇರೆಯದೇ ಆಯಿತು. ಅಂದರೆ ಇಲ್ಲಿ ಭೀಮನನ್ನು ನೋಡಿದ ಮೊದಲ ನೋಟದಲ್ಲಿಯೆ ಹಿಡಿಂಬೆಗೆ ಭೀಮನ ಮೇಲೆ ಪ್ರೇಮಾಂಕುರವಾಗಿದೆ.

ಕೊಲ್ಲಲೆಂದು ಯೋಜಿಸಿ ಬಂದ ತನ್ನ ಕಾರ್ಯವನ್ನು ಮರೆತು ಭೀಮನನ್ನು ಮೋಹಿಸುತ್ತಾಳೆ. ಕೊಲ್ಲಬೇಕೆಂದು ಬರುವ ಒರಟು ಹೃದಯದಲ್ಲು ಪ್ರೇಮದ ಭಾವಗಳು ಒಡಮೂಡುವುದು ಪ್ರಮುಖವಾದ ಸಂಗತಿ. ನಂತರ ಆಕೆ ತನ್ನ ಮನಸ್ಸಿನಲ್ಲಿ ಯೋಚಿಸುವ ಬಗೆ ಆಕೆಯ ಮನದ ತೊಳಲಾಟಗಳನ್ನು ತಿಳಿಸಿಕೊಡುತ್ತವೆ.

"ಇವನ ರಮಣನ ಮಾಡಿಕೊಂಡೋ
ಡುವೆನು ವಿಪಿನಾಂತರಕೆ ಮುನಿದವ
ನಿವದಿರ್ೈವರ ತಿನಲಿ ಮರದಡಿಯಲ್ಲಿ ಮಲಗಿದರ
ಇವನು ತನ್ನಯ ರೌದ್ರಮಯ ರೂ
ಪವನು ಕಂಡರೆ ಹೆದರುವನಲಾ
ಯುವತಿಯಹೆನೆಂದಸುರೆ ಸುಳಿದಳು ದಿವ್ಯರೂಪಿನಲಿ"೧೨

ಇವನನ್ನು ಗಂಡನನ್ನಾಗಿ ಮಾಡಿಕೊಂಡು ಈ ಕಾಡಿನಿಂದಲೇ ಓಡಿ ಹೋಗುವೆನು. ಅಣ್ಣನು ಸಿಟ್ಟಿನಿಂದ ಹುಡುಕಿಕೊಂಡು ಬಂದರೆ ಈ ಮರದಡಿಯಲ್ಲಿ ಮಲಗಿರುವ ಐದು ಜನರನ್ನು ತಿನ್ನಲಿ. ಇವನು ನನ್ನ ರೌದ್ರಮಯವಾದ ರೂಪನ್ನು ನೋಡಿದರೆ ಹೆದರುವನು ಎಂದು ಭಾವಿಸಿ ಸುಂದರ ಯುವತಿಯಾಗಿ ಭೀಮನೆದುರಿಗೆ ಸುಳಿದಳು. ಇಲ್ಲಿ ಹಿಡಿಂಬೆಯ ಮನದಲ್ಲಿರುವ ಭಾವಗಳೆಲ್ಲ ಏನೇ ಆದರೂ ಭೀಮನನ್ನು ಮದುವೆಯಾಗಲೇಬೇಕೆಂಬ ಅಂಶ. ಆ ಕಾರಣವಾಗಿಯೇ ಆತನೊಡನೆ ವಿವಾಹವಾಗಿ ಈ ಕಾಡಿನಿಂದ ದೂರ ಹೋಗಿ ಬದುಕುವ ಆಲೋಚನೆಯನ್ನು ಆಕೆ ಮಾಡುತ್ತಾಳೆ.

"ಹೊಳೆವ ಕಂಗಳ ಕಾಂತಿ ಮರಗ
ತ್ತಲೆಯ ಮೊತ್ತವ ಬಿಗಿಯೆ ಮೈ ಪರಿ
ಮಳಕೆ ತೂಳುವ ತುಂಬಿಗಳ ತನುಲತೆಗಳ ಚೆಲುವಿಕೆಯ
ಲಲನೆ ಸುಳಿದಳು ಕುಚದ ಭಾರಕೆ
ಬಳುಕೆ ನಡು ಬಿಡದೊಲೆದು ಮೇಲುದು
ತಳೆಯೆ ಸುಳಿಗುರುಳೊಲೆಯಲಾ ಕಲಿ ಭೀಮನಿದಿರಿನಲಿ"೧೩

ಸುಂದರಳಾದ ರೂಪಿನ ಯುವತಿಯಾಗಿ ಭೀಮನ ಮುಂದೆ ಸುಳಿದಾಡಿದಳು. ಅವನ ಗಮನವನ್ನು ತನ್ನೆಡೆಗೆ ಸೆಳೆದುಕೊಳ್ಳುವ ಪ್ರಯತ್ನವನ್ನು ಮಾಡುತ್ತಾಳೆ. ಆ ಮೂಲಕ ತನ್ನ ಮನದಲ್ಲಿನ ಪ್ರೀತಿಯ ವಿಷಯವನ್ನು ಭೀಮನಿಗೆ ತಿಳಿಸಬೇಕೆಂಬ ಅಭಿಲಾಷೆ ಹಿಡಿಂಬೆಯಲ್ಲಿರುವುದು ಆಕೆಯ ವರ್ತನೆಗಳಿಂದ ನಮಗೆ ತಿಳಿಯುತ್ತದೆ.

"ಭೀಮ ನೋಡನು ನುಡಿಸನೊಯ್ಯನೆ
ತಾಮರಸಮುಖಿ ಹೊದ್ದಿದಳು ನಿ
ಸ್ಸೀಮನೈ ನೀನಾರು ಮಲಗಿದ ಮರ್ತ್ಯರಿವರಾರು

ಈ ಮಹಾರಣ್ಯದಲಿ ಬರವಿದು
ಕಾಮಿತವೆ ಕೋಮಲರಿಗೆನೆ ನಿ
ಷ್ಕಾಮ ಮನದಲಿ ಸತಿಯ ನುಡಿಸಿದನಾರು ನೀನೆಂದು"[೧೪]

ಎಷ್ಟೇ ಸುಳಿದಾಡಿದರೂ ಭೀಮ ಇವಳ ಕಡೆ ನೋಡಲಿಲ್ಲ. ಕಂಡೂ ಮಾತನಾಡಿಸಲಿಲ್ಲ. ಕೊನೆಗೆ ವಿಧಿಯಿಲ್ಲದೆ ಹಿಡಿಂಬೆ ತಾನೇ ಮಾತಾಡಿಸಿದಳು. ನಿಸ್ಸೀಮನಾದ ನೀನು ಯಾರು? ಮಲಗಿರುವ ಮರ್ತ್ಯರು ಇವರಾರು? ಕೋಮಲವಾದ ನಿಮ್ಮಂತಹವರು ಈ ಮಹಾರಣ್ಯಕ್ಕೆ ಬರಲು ಕಾರಣವೇನು? ಎಂದು ತಾನೇ ಮಾತಾಡಿಸಲು ಭೀಮನು ನಿಷ್ಕಾಮ ಮನದಿಂದ ಅವಳನ್ನು ಯಾರೆಂದು ವಿಚಾರಿಸಿದ. ಇಲ್ಲಿ ಹಿಡಿಂಬೆ ನೇರವಾಗಿ ತನ್ನ ಮನಸ್ಸಿನ ಬಯಕೆಯನ್ನು ಹೇಳಿಕೊಳ್ಳಲಾಗದೆ ಸುತ್ತಿ ಬಳಸಿ ಮಾತನಾಡುತ್ತಾಳೆ. ರಾಕ್ಷಸ ಕುಲದ ಹೆಣ್ಣಾದರೂ ಭೀಮನಲ್ಲಿ ಮೃದುವಾಗಿ ವರ್ತಿಸುತ್ತಾಳೆ.

"ವನ ಹಿಡಿಂಬನದಾ ಹಿಡಿಂಬಕ
ನನುಜೆ ತಾನು ಹಿಡಿಂಬೆಯಾ ಕಾ
ನನವಿದೆಮ್ಮಾಶ್ರಮವಗಮ್ಯವು ದಿವಿಜ ಮನುಜರಿಗೆ
ನಿನಗೆ ಕಾಮಿಸಿ ಬಂದೆನಣ್ಣನು
ಮುನಿದೊಡಿವದಿರ ತಿನಲಿ ನೀನೇ
ಳೆನಗೆ ವಲ್ಲಭನಾಗು ಕೊಂಡೊಯ್ವೆನು ಹಿಮಾಚಲಕೆ"[೧೫]

ಈ ವನ ಹಿಡಿಂಬನದು. ನಾನು ಹಿಡಿಂಬನ ತಂಗಿ. ಈ ಕಾನನವಿದೆಯಲ್ಲ ಇದು ದಿವಿಜ ಮನುಜರಿಗೆ ಅಗಮ್ಯವಾದುದು. ನಿನ್ನನ್ನು ಕಾಮಿಸಿ ಬಂದಿದ್ದೇನೆ. ಅಣ್ಣನು ಬಹಳ ಕೋಪಿಷ್ಠ. ಸಿಟ್ಟಿನಿಂದ ಬಂದರೆ ಇವರನ್ನೆಲ್ಲಾ ತಿಂದುಕೊಳ್ಳಲಿ, ನೀನು ನನಗೆ ವಲ್ಲಭನಾಗು. ನಿನ್ನನ್ನು ಹಿಮಾಚಲಕ್ಕೆ ಕೊಂಡೊಯ್ಯುತ್ತೇನೆ ಎಂದು ಹೇಳುತ್ತಾಳೆ. ಅಂದರೆ ಭೀಮನಿಗಾಗಿ ಏನು ಬೇಕಾದರೂ ಮಾಡಲು ಸಿದ್ಧಳಿದ್ದಾಳೆ. ಆ ಕಾರಣವಾಗಿಯೆ ನಾವು ಬೇರೆ ಕಡೆ ಹೋಗಿ ಬದುಕೋಣ ಎಂದು ಆಕೆ ಕೇಳುವುದು. ನಾನು ನಿನ್ನನ್ನು ಮೋಹಿಸಿದ್ದೇನೆ, ನನಗೆ ನೀನು ಗಂಡನಾಗಬೇಕೆಂದು ತನ್ನ ಮನಸ್ಸಿನ ಬಯಕೆಯನ್ನು ನೇರವಾಗಿ ಭೀಮನಲ್ಲಿ ಹೇಳಿಕೊಳ್ಳುತ್ತಾಳೆ. ಆಕೆ ಯಾವ ಪ್ರೇಮಿಗೂ ಕಡಿಮೆ ಇಲ್ಲ. ಅದಕ್ಕೆ ಭೀಮ

"ನಿನ್ನನೊಲ್ಲೆನು ಮುನಿದೆಯಾದಡೆ
ನಿನ್ನ ದೈತ್ಯನ ಕೊಂಡು ಬಾ ಹೋ
ಗೆನ್ನ ಬಲುಹನು ನೋಡು ನೀನೆನಲಸುರೆ ವಿನಯದಲಿ
ಮುನ್ನಲೇ ಮನುಮಥನ ಶರದಲಿ
ಖಿನ್ನೆಯಾಗಿಹೆ ಮರೆಯ ಹೊಕ್ಕೆನು
ತನ್ನನೀ ಪರಿ ಮುರಿದು ನುಡಿವರೆ ಎಂದಳಿಂದುಮುಖಿ"[೧೬]

ಭೀಮ ಆಕೆಗೆ ಸ್ಪಷ್ಟವಾಗಿ ಹೇಳುತ್ತಾನೆ. ನಾನು ನಿನ್ನನ್ನು ಒಲ್ಲೆ. ಈ ಮಾತಿನಿಂದ ಸಿಟ್ಟು ಬಂದರೆ ನಿನ್ನ ದೈತ್ಯನಾದ ಅಣ್ಣನನ್ನು ಕರೆದುಕೊಂಡು ಬಾ ಹೋಗು. ಆತನಿಗೆ ನನ್ನ ಶಕ್ತಿಯನ್ನು ತೋರಿಸುವೆನು ಎನ್ನಲು ಅಸುರಳಾದ ಹಿಡಿಂಬೆಯು ವಿನಯದಿಂದ ನಾನು ಮೊದಲೇ ಮನ್ಮಥನ ಬಾಣಗಳಿಂದ ಖಿನ್ನೆಯಾಗಿದ್ದೇನೆ. ನಿನ್ನ ಮೊರೆ ಹೊಕ್ಕಿದ್ದೇನೆ. ನನ್ನನ್ನು ಈ ರೀತಿಯಾಗಿ ನಿಷ್ಠುರವಾಗಿ ಮುರಿದು ಮಾತನಾಡದಿರು ಎಂದು ಕೇಳಿಕೊಳ್ಳುತ್ತಾಳೆ. ಹಿಡಿಂಬೆಯ ಮಾತುಗಳು ಇಲ್ಲಿ ಬಹು ಮೃದುವಾಗಿವೆ. ಇದು ಅವಳಲ್ಲಿಯೂ ಮಧುರ ಭಾವದ ಲಹರಿಗಳಿವೆ ಎಂಬುದನ್ನು ತೋರಿಸುತ್ತದೆ. ಅಲ್ಲದೆ ತನ್ನ ಮನಸ್ಸಿಗೆ ಒಪ್ಪುವಂತಹ ಸಂಗಾತಿಯನ್ನು ತಾನು ಇಲ್ಲಿ ಆಯ್ಕೆ ಮಾಡಿಕೊಳ್ಳುತ್ತಿದ್ದಾಳೆ. ಆದ್ದರಿಂದಲೇ ಭೀಮ ತಿರಸ್ಕರಿಸಿದರೂ ಸಹ ಆತನ ಮೇಲೆ ಬಲ ಪ್ರಯೋಗ ಮಾಡದೆ ಆಕೆ ಬಹಳ ಪ್ರೀತಿಯಿಂದ ವಿನಯಪೂರ್ವಕವಾಗಿ ಆತನನ್ನು ಒಪ್ಪಿಸಲು ಪ್ರಯತ್ನಿಸುತ್ತಾಳೆ.

ಈ ನಡುವೆ ಹಿಡಿಂಬನು ಅಲ್ಲಿಗೆ ಬರುತ್ತಾನೆ. ಭೀಮ ಮತ್ತು ಹಿಡಿಂಬಕನಿಗೆ ಉಗ್ರವಾದ ಹೋರಾಟ ನಡೆದು ಭೀಮ ಅವನನ್ನು ಸೀಳಿ ಬಿಸಾಕುತ್ತಾನೆ. ನಂತರ

"ಖಳ ಮಡಿಯಲವನನುಜೆ ಭೀಮನ
ನೊಲಿಸಲರಿಯದೆ ಕುಂತಿಗೆಲ್ಲವ
ತಿಳುಹಿ ನುಡಿದಳು ತನ್ನ ಪೂರ್ವಾಪರದ ಸಂಗತಿಯ
ಹಲವು ಪರಯಲಿಯಿವರನವಳಂ
ಡಲೆದು ಭೀಮಗೆ ಹೇಳಿಸಿದಳಾ
ಫಲುಗುಣನ ಕೈಯಿಂದ ಧರ್ಮಜನಿಂದ ನುಡಿಸಿದಳು"೧೭

ಇತ್ತ ಹಿಡಿಂಬನು ಸಾವನ್ನಪ್ಪಲು, ಅವನ ತಂಗಿಯಾದ ಹಿಡಿಂಬೆಯು ಭೀಮನ ಮನಸ್ಸನ್ನು ಒಲಿಸಲು ಹೆಣಗಿದಳು. ಆದರೆ ಭೀಮ ತನ್ನ ನಿಲುವನ್ನು ಬದಲಿಸಲಿಲ್ಲ. ತಿಳಿಯದೆ ಕುಂತಿಗೆ ತನ್ನ ಪೂರ್ವಾಪರ ಸಂಗತಿಯನ್ನೆಲ್ಲ ವಿವರಿಸಿದಳು. ಅಂತಿಮವಾಗಿ ಅರ್ಜುನ ಹಾಗೂ ಧರ್ಮರಾಯರಿಂದಲೂ ತನ್ನನ್ನು ವಿವಾಹವಾಗುವಂತೆ ಹೇಳಿಸಿದಳು. ಇಲ್ಲಿ ಹಿಡಿಂಬೆಯ ಮನಸ್ಥಿತಿ ಗಮನಿಸುವಂತಹದ್ದು. ಬಲವಂತ ಹಾಗೂ ಶಕ್ತಿಯಿಂದ ಭೀಮನನ್ನು ಒಲಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದು ಆಕೆಗೆ ಅರಿವಾಗಿದೆ. ಆದ್ದರಿಂದಲೇ ಬಹಳ ವಿನಯದಿಂದ, ಸಾವಧಾನವಾಗಿ ಎಲ್ಲರಿಗೂ ತನ್ನ ಮನದ ಇಚ್ಛೆಯನ್ನು ತಿಳಿಸಿಕೊಟ್ಟು ಭೀಮನಿಗೆ ಅರ್ಥಮಾಡಿಸಲು ಪ್ರಯತ್ನಿಸುತ್ತಾಳೆ. ಕೊನೆಗೆ ವೇದವ್ಯಾಸನೆ ಅಲ್ಲಿಗೆ ಬಂದು ಅವರಿಬ್ಬರಿಗೂ ವಿವಾಹವನ್ನು ಮಾಡಿಸುತ್ತಾನೆ.

"ಸಂ.ಭಾ, ಪಂ.ಭಾ.ಗಳಲ್ಲಿದ್ದಂತೆ 'ಕುಮಾರವ್ಯಾಸಭಾರತ'ದಲ್ಲಿಯೂ ಅವಳು ಸುಂದರ ರೂಪದಲ್ಲಿ ಬಂದರೂ ತಾನಾರೆಂದು ಸತ್ಯವನ್ನೇ ಹೇಳಿದಳು. 'ಇವನು ತನ್ನಯ ತೀವ್ರತರ ರೂಪವನು ಕಂಡೊಡೆ ಹೆದಱುವನಲಾ' ಎಂದು ಅವಳು ದಿವ್ಯ ರೂಪದಲ್ಲಿ ಸುಳಿದಳೆಂದು ಕವಿ ಸ್ವಾರಸ್ಯವಾದ ಕಾರಣ ಕೊಟ್ಟಿದ್ದಾನೆ. ಭೀಮನು 'ನಿನ್ನನೊಲ್ಲೆನು' ಎಂದುದಕ್ಕೆ 'ಮುನ್ನವೇ ಮನುಮಥನ ಶರದಲಿ

ಖಿನ್ನೆಯಾಗಿಯೇ ಮಱೆಯ ಹೊಕ್ಕೆನು ಎನ್ನನೀ ಪರಿ ಮುನಿದು ನುಡಿವರೆ!' ಎಂಬಲ್ಲಿ ಅವಳ ಅಂತಃಕರಣ ಮಾರ್ದವ ವ್ಯಕ್ತವಾಗಿದೆ. ಅರ್ಜುನನಿಂದಲೂ ಹೇಳಿಸಿದ್ದು ಇಲ್ಲಿ ಹೆಚ್ಚಿನ ಅಂಶ"[೧೮] ಎಂಬ ಮಾತುಗಳು ಹಿಡಿಂಬೆಯ ಮನಸ್ಥಿತಿಯನ್ನು ಅದ್ಭುತವಾಗಿ ಧ್ವನಿಸುತ್ತವೆ. ಏಕೆಂದರೆ ತಾನು ಕಾನನ ಜೀವಿಯಾಗಿದ್ದರೂ ಭೀಮನಿಗೆ ತನ್ನ ನಿಜ ಸ್ಥಿತಿಯನ್ನು ಯಾವುದೇ ಮುಚ್ಚು ಮರೆಯಿಲ್ಲದೆ ಹೇಳಿಕೊಳ್ಳುವ ಗುಣ ಮುಖ್ಯವಾದುದು. ಏಕೆಂದರೆ ತಾನು ಹಿಡಿಂಬನ ತಂಗಿ. ಈ ವನದಲ್ಲಿ ಇರುವವರು, ನರ ಮಾಂಸ ಭಕ್ಷಕರು ಮೊದಲಾದ ಅಂಶಗಳನ್ನು ಆಕೆ ಮರೆಮಾಚಿ ಆತನನ್ನು ವಿವಾಹವಾಗಬಹುದಾಗಿತ್ತು. ಆದರೆ ಹಿಡಿಂಬೆ ಆ ರೀತಿ ಮಾಡದೆ ತಾನು ಇರುವ ಸಂಗತಿಯನ್ನು ನೇರವಾಗಿ ಎಲ್ಲರಲ್ಲೂ ಹೇಳಿಕೊಳ್ಳುತ್ತಾಳೆ. ಇದು ಮೆಚ್ಚತಕ್ಕ ವಿಚಾರ.

೪.೨. ದ್ವಾರಾವತಿ ಪಟ್ಟಣ ನಿವಾಸಿ ಹೆಣ್ಣುಗಳ ಸಂಘರ್ಷಗಳು

'ವಿಕ್ರಮಾರ್ಜುನ ವಿಜಯ' ಕಾವ್ಯದಲ್ಲಿ ದ್ರೌಪದಿ, ಸುಭದ್ರೆ, ಸುದೇಷ್ಣೆ, ಭಾನುಮತಿ, ರಂಭೆ ಮೊದಲಾದ ಉನ್ನತ ವರ್ಗ ಹಾಗೂ ಅರಮನೆ ಸ್ತ್ರೀಯರ ಸಂಘರ್ಷಗಳಂತೆ ಸಾಮಾನ್ಯ ವರ್ಗದ ಜನಪದ ಸ್ತ್ರೀಯರ ಸಂಘರ್ಷಗಳನ್ನು ಕಾಣಬಹುದಾಗಿದೆ. ಅರ್ಜುನನು ದ್ವಾರಾವತಿ ಪಟ್ಟಣಕ್ಕೆ ಬಂದಾಗ ಆತನನ್ನು ಸ್ವಾಗತಿಸಲು ಬಂದ ಹೆಣ್ಣುಗಳು ಹಾಗೂ ಆ ಪಟ್ಟಣ ನಿವಾಸಿ ಹೆಣ್ಣುಗಳು ಅರ್ಜುನನ್ನು ನೋಡಿದ ಮೇಲೆ ಅವರ ಮನದಲ್ಲುಂಟಾಗುವ ಭಾವಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಗು ಮಾಡಲಾಗಿದೆ. ಇಲ್ಲಿನ ಹೆಣ್ಣುಗಳ ಸಂಘರ್ಷಗಳು ವೈಯಕ್ತಿಕ ನೆಲೆಯವಾಗಿದ್ದು, ಅರ್ಜುನನನ್ನು ಕಂಡಾಗ ಅವರ ಮನದಲ್ಲಿ ಮೂಡುವ ಪ್ರೀತಿ, ಬಯಕೆ, ಸೇರುವಿಕೆ ಮೊದಲಾದ ಮನದ ಭಾವನೆಗಳ ಅಭೀಪ್ಸೆಯ ವಿವರಗಳಿವೆ.

ದ್ವಾರಾವತಿ ಪಟ್ಟಣಕ್ಕೆ ಆಗಮಿಸಿದ ಅರ್ಜುನನನ್ನು ನೋಡಿದ ಪುರದ ಹೆಣ್ಣುಗಳ ಮನದಲ್ಲಿ ಮೂಡುವ ತವಕ, ತಲ್ಲಣದ ಭಾವಗಳನ್ನು ಪಂಪ ಈ ರೀತಿಯಾಗಿ ತಿಳಿಸುತ್ತಾನೆ.

"ಮಿಳಿರ್ವ ಕುರುಳ್ಗಳೊಳ್ ಪೊಳೆವ ಕಣ್ಗಳ ಬೆಳ್ಪು ಪಳಂಚಿ ಚಿನ್ನ ಪೂ
ಗಣೆಗೆಣೆಯಾಗೆ ಪುರ್ವುಮೆಮೆಗಳ್ ಬಿಡದಳ್ಳಿಱಿದಿಕ್ಷುಚಾಪದೊಳ್ ।
ಖಳ ಕುಸುಮಾಸ್ತ್ರನಿಟ್ಟ ಗೊಣೆಯಕ್ಕೆಣೆಯಾಗಿರೆ ನಿಳ್ಕಿ ನಿಳ್ಕಿ ಕೋ
ಮಳೆ ನಡೆ ನೋಡಿದಳ್ ಕರಿಯನೇಱಿದನಂ ಪಡೆಮೆಚ್ಚೆಗಂಡನಂ ॥"[೧೯]

"ಚಲಿಸುತ್ತಿರುವ ಮುಂಗುರುಗಳಲ್ಲಿ ಹೊಳೆಯುವ ಕಣ್ಣುಗಳ ಬಿಳಿಯ ಬಣ್ಣವು ಸೇರಿಕೊಂಡು ಚಿನ್ನದ ಪುಷ್ಪ ಬಾಣಕ್ಕೆ ಸಮಾನವಾಗಿರಲು ಹುಬ್ಬುಗಳೂ ಕಣ್ಣಿನ ರೆಪ್ಪೆಗಳೂ ಒಂದೇ ಸಮನಾಗಿ ಕುಣಿಯುತ್ತ ದುಷ್ಟನಾದ ಮನ್ಮಥನು ಕಬ್ಬಿನ ಬಿಲ್ಲಿನಲ್ಲಿ ಹೂಡಿದ ಬಿಲ್ಲಿನ ಹೆದೆಗೆ ಸಮಾನವಾಗಿರಲು ನೀಡಿ ನೀಡಿ ನಿಂತು ಆನೆಯ ಮೇಲಿದ್ದ ಅರ್ಜುನನನ್ನು ಸುಂದರಿಯೊಬ್ಬಳು ದೀರ್ಘವಾಗಿ ನೋಡಿದಳು"[೨೦] ಎಂದು ಕವಿಯು ಮನ್ಮಥನ ಕಬ್ಬಿನ ಬಿಲ್ಲಿನ ಮೂಲಕ ಆನೆಯ ಮೇಲೆ ಕುಳಿತಿದ್ದ ಅರ್ಜುನನನ್ನು

ನೋಡಿದ ಸುಂದರಿ ಹೆಣ್ಣೊಬ್ಬಳ ಮನದಲ್ಲುಂಟಾದ ಪ್ರತಿಕ್ರಿಯೆಗಳನ್ನು ತಿಳಿಸುತ್ತಾನೆ. ಆತನನ್ನು ಬೆರಗಿನಿಂದ ನೋಡುವ ನೋಟ ಇಲ್ಲಿ ಕಂಡುಬರುತ್ತದೆ.

ಆನೆಯ ಮೇಲೆ ಪುರ ಪ್ರವೇಶ ಮಾಡುತ್ತಿದ್ದ ಅರ್ಜುನನನ್ನು ಕೋಮಲೆಯೊಬ್ಬಳು ಕಣ್ಣು ಮಿಟುಕಿಸದ ಹಾಗೆ ನೋಡುತ್ತ ನಿಂತಳು ಎನ್ನುತ್ತಾನೆ ಕವಿ.

"ವ॥ ಮತ್ತೊರ್ವಳತಿ ಸಂಭ್ರಮ ತ್ವರಿತದಿಂ ಮೇಖಳಾಕಳಿತ ರುಚಿರ ಲುಳಿತಾಧರ ಪಲ್ಲವೆ
ನೋಟ್ಪ ದಂಡುಗಳೊಳಂಡುಗೊಂಡು ಸೊರ್ಕಿದಾನೆ ಬರ್ಪಂತೆ ಬಂದು"[೨೧]

ಮತ್ತೊಬ್ಬಳು ಅತಿ ಸಂಭ್ರಮದಿಂದ ವೇಗವಾಗಿ ಬಂದಳು. ಅವಳು ನಡುಪಟ್ಟಿಯಿಂದ ಕೂಡಿದ ಮನೋಹರವು ಆಗಿ ಬಾಗಿರುವ ಚಿಗುರಿನಂತಹ ತುಟಿಯನ್ನು ಒಳಗೊಂಡಿದ್ದಳು. ಅವಳು ಅವನನ್ನು ನೋಡಬೇಕೆಂಬ ಆಸೆಯಿಂದ ಸೊಕ್ಕಿದ ಆನೆಯು ಬರುವ ಹಾಗೆ ಅರ್ಜುನನ ಬಳಿ ಬಂದು,

"ಕಾಯದೆ ಕಾಮನಾರ್ದಿಸೆ ತೊವಲ್ವಿಡಿವಂತೆಡಗಯ್ಯೊಳೊಪ್ಪೆ ತೋ
ರ್ಪಾಯೆಲೆ ನೋಟ ಬೇಟದ ಕೊನರ್ ತಲೆದೋರ್ಪವೊಲಾಗೆ ಬಾಯೊಳಿ
ರ್ದಾಯೆಲೆ ಕಣ್ಗೆವಂದೆಸೆಯೆ ಕಯ್ಯೆಲೆ ಕಯ್ಯೊಳೆ ಬಾಯ ತಂಬುಲಂ
ಬಾಯೊಳೆ ತೋಱೆ ಮೆಯ್ಮಱೆದು ನೋಡಿದಳಾ ಸಮರೈಕಮೇರುವಂ ॥"[೨೨]

"ಕಾಮನು ಕರುಣೆಯಿಲ್ಲದೆ ಬಾಣ ಪ್ರಯೋಗ ಮಾಡಲು ಹೆದರಿ ಚಿಗುರನ್ನು ಹಿಡಿಯುವ ಹಾಗೆ ಎಡಗೈಯಲ್ಲಿ ವೀಳೆಯದೆಲೆಯನ್ನು ಒಪ್ಪಿರಲು ಪ್ರೇಮದ ಚಿಗುರು ಕಾಣಿಸಿಕೊಂಡ ಹಾಗೆ ಬಾಯಲ್ಲಿದ್ದ ತಾಂಬೂಲವು ಮನೋಹರವಾಗಿರಲು, ಕಯ್ಯಿ ನೆಲೆಯು ಕಯ್ಯಲ್ಲಿಯೂ ಬಾಯಿದಂಬುಲವು ಬಾಯಲ್ಲಿಯೂ ಇರುವ ಹಾಗೆಯೇ ತನ್ನನ್ನು ತಾನು ಮರೆತುಕೊಂಡು ಸಮರೈಕ ಮೇರುವಾದ ಅರ್ಜುನನನ್ನು ನೋಡಿದಳು"[೨೩] ಎಂಬಲ್ಲಿ ಅರ್ಜುನನನ್ನು ನೋಡಿದಾಗಿನ ಸಮಯದಲ್ಲಿನ ಆಕೆಯ ಮನಸ್ಥಿತಿಗಳು ನಮಗೆ ಅರಿವಾಗುತ್ತವೆ. ಹೀಗೆ ತನ್ನನ್ನು ತಾನು ಮರೆತು ಅರ್ಜುನನನ್ನು ನೋಡುತ್ತಿದ್ದಾಳೆ. ಅರ್ಜುನನ ರೂಪು ಆ ರೀತಿಯಾಗಿ ಅಲ್ಲಿನ ಹೆಣ್ಣುಗಳ ಮನಸ್ಸನ್ನು ಸೆಳೆದಿದೆ. ತಾವು ಎಲ್ಲಿ ಇರುವೆವು ಎಂಬುದನ್ನು ಮೆರೆತು ಅರ್ಜುನನ ರೂಪಿನ ಮೈಮಾಟಕ್ಕೆ ಮರುಳಾಗಿದ್ದಾರೆ. ಕವಿ ಮತ್ತೊಬ್ಬಳು ಸುಂದರಿಯ ಸ್ಥಿತಿಯನ್ನು ಹೀಗೆ ತಿಳಿಸುತ್ತಾನೆ.

"ಮತ್ತೊರ್ವಳ್ ಕರ್ವಿನಬಿಲ್ಲ ತಿರುವಿಂ ಬರ್ದುಂಕಿ ಬರ್ಪಲರಂಬು ಬರ್ಪಂತೆ ಬಂದು"[೨೪]

ಮತ್ತೊಬ್ಬಳು ಚೆಲುವೆ ಮನ್ಮಥನ ಬಿಲ್ಲಿನ ಹೆದೆಯಿಂದ ಬದುಕಿ ಬರುವ ಹೂವಿನ ಬಾಣವು ಬರುವ ಹಾಗೆ ಬಂದು,

"ಸ್ಮರನಂ ರೂಪಿನೊಳಿಂದ್ರನಂ ವಿಭವದೊಳ್ ಪೋ ಮೆಚ್ಚೆನಾನಾವ ಗಂ
ಡರುಮಂ ಕಚ್ಚೆಯೊಳಿಟ್ಟು ಕಟ್ಟುವೆನೆನುತ್ತಿರ್ಪಾಕೆ ಗಂಧೇಭ ಕಂ ।
ಧರ ಬಂಧ ಪ್ರವಿಭಾಸಿಯಪ್ಪರಿಗನಂ ಕಾಣುತ್ತೆ ಕಣ್ಸೋಲ್ತು ಕಾ
ಮರಸಂ ಭೋಂಕನೆ ಸೂಸೆ ತಾಳ್ದಲರಿದೆಂದಿರ್ಕಚ್ಚೆಯಂ ಕಟ್ಟಿದಳ್॥"[೨೫]

"ರೂಪದಲ್ಲಿ ಮನ್ಮಥನನ್ನೂ ವೈಭವದಲ್ಲಿ ಇಂದ್ರನನ್ನೂ ನಾನು ಮೆಚ್ಚುವುದಿಲ್ಲ, ಬಿಡು ಎಂತಹ ಶೂರನನ್ನಾದರೂ ನನ್ನ ಕಚ್ಚೆಯಲ್ಲಿಟ್ಟು ಕಟ್ಟಿಬಿಡುತ್ತೇನೆ ಎನ್ನುತ್ತಿದ್ದವಳೂ ಮದ್ದಾನೆಯ ಕುಂಭ ಸ್ಥಳದಲ್ಲಿ ಪ್ರಕಾಶಮಾನವಾಗಿದ್ದ ಅರಿಗನನ್ನು ನೋಡಿದ ತಕ್ಷಣವೆ ಅವನಿಗೆ ಅಧೀನಳಾಗಿ ಕಾಮರಸವು ಇದ್ದಕ್ಕಿದ್ದ ಹಾಗೆ ಸೂಸುತ್ತಿರಲು ಸಹಿಸುವುದಕ್ಕಸಾಧ್ಯವೆಂದು ಎರಡು ಕಚ್ಚೆಯನ್ನು ಬಿಗಿಯಾಗಿ ಕಟ್ಟಿದಳು"[೨೬] ಎಂಬ ಕವಿಯ ಮಾತುಗಳು ಆಕೆಯ ಮನದ ಸಂಘರ್ಷಗಳನ್ನು ಪರಿಣಾಮಕಾರಿಯಾದ ರೀತಿಯಲ್ಲಿ ಹಿಡಿದಿಟ್ಟಿವೆ. ಇಲ್ಲಿ ಅರಿಗನನ್ನು ನೋಡಿದ ಹೆಣ್ಣುಗಳ ದೇಹದಲ್ಲಿನ ಸಂಘರ್ಷ ಭಾವವನ್ನು ತಿಳಿಸುತ್ತವೆ. ಎಂತಹ ಗಂಡನ್ನಾದರೂ ತನ್ನ ರೂಪಿನ ಬಲೆಯಿಂದ ಸೆರೆ ಹಿಡಿಯುತ್ತೇನೆಂಬ ಗರ್ವದಿಂದ ಇದ್ದ ಹೆಣ್ಣು ಅರ್ಜುನನನ್ನು ನೋಡಿದ ತಕ್ಷಣ ತನ್ನ ಕಾಮನೆಯ ಭಾವಗಳನ್ನು ನಿಯಂತ್ರಿಸಿಕೊಳ್ಳಲಾರದೆ ತಾನೇ ತನ್ನ ಕಚ್ಚೆಯನ್ನು ಬಿಗಿಯಾಗಿ ಕಟ್ಟಿಕೊಂಡಳು ಎನ್ನುತ್ತಾನೆ. ಈ ಪದ್ಯದಲ್ಲಿ ಕವಿ ಆ ಹೆಣ್ಣಿನ ದೈಹಿಕ ಹಾಗೂ ಮಾನಸಿಕ ಸಂಘರ್ಷಗಳ ತಾಕಲಾಟದ ಸಂದರ್ಭವನ್ನು ಪ್ರಸ್ತುತಪಡಿಸುತ್ತಾನೆ. ಮುಂದುವರೆದು

"ವ॥ ಅಂತು ನೋಡಿದ ಪೆಂಡಿರೆಲ್ಲಂ ಕಾಮದೇವನೆಂಬ ಬೇಂಟೆಕಾಱಂಗೊಡ್ಡಿದ ಪುಲ್ಲೆಗಳಂತರಲಂಬಿನ ಮೊನೆಗೆ ಪೂಣೆ ಪೊಕ್ಕು ಪಕ್ಕಾಗಿರೆ ಪೊೞಲೊಳಗಣಿಂ ಬಂದು ದಿವಿಜೇಂದ್ರ ವಿಳಾಸೋಪಹಾಸಿತಮಪ್ಪ ನಿಜ ಮಂದಿರಮಂ ಪುಗೆ"[೨೭]

"ಹಾಗೆ ನೋಡಿದ ಹೆಂಗಸರೆಲ್ಲರೂ ಕಾಮದೇವನೆಂಬ ಬೇಟೆಗಾರನಿಗೆ ಒಡ್ಡಿದ ಹುಲ್ಲೆಗಳ ಹಾಗೆ ಪುಷ್ಪ ಬಾಣದ ತುದಿಗೆ ಪ್ರತಿಜ್ಞೆ ಮಾಡಿ ಪ್ರವೇಶಿಸಿ ಅದಕ್ಕಧೀನವಾಗಿರಲು ಅರ್ಜುನನು ನಗರದ ಒಳಭಾಗದಿಂದ ಬಂದು ದೇವೇಂದ್ರನ ವೈಭವವನ್ನೂ ತಿರಸ್ಕರಿಸುವಂತಿದ್ದ ತನಗಾಗಿ ಏರ್ಪಡಿಸಿದ್ದ ಅರಮನೆಯನ್ನು ಪ್ರವೇಶಿಸಿದನು"[೨೮] ಎಂದು ಪಂಪನು ಪಟ್ಟಣದ ಸಾಮಾನ್ಯ ಸ್ತ್ರೀಯರ ಮನದಲ್ಲಿ ಮೂಡಿದ ಬಯಕೆಗಳು, ಆಸೆ, ಆಕಾಂಕ್ಷೆಗಳ ಭಾವನೆಗಳಿಗೂ ಪ್ರಾಧಾನ್ಯತೆಯನ್ನು ಕೊಟ್ಟಿದ್ದಾನೆ. ಅವರಿಗೂ ಮನಸ್ಸಿನಲ್ಲಿ ಭಾವನೆಗಳಿವೆ ಎಂಬುದನ್ನು ತಿಳಿಯಪಡಿಸಿದ್ದಾನೆ.

ಅಲ್ಲದೆ ಈ ರೀತಿಯ ಭಾವನೆಗಳು ಗಂಡನ್ನು ನೋಡಿದ ಹೆಣ್ಣು ಹಾಗೂ ಹೆಣ್ಣನ್ನು ನೋಡುವ ಗಂಡು ಇಬ್ಬರಲ್ಲಿಯೂ ಒಡಮೂಡುವ ಸಹಜ ಭಾವದ ತೀವ್ರತೆಗಳಾಗಿವೆ. ಮೇಲ್ವರ್ಗದ ಹೆಣ್ಣಾಗಲೀ, ಕೆಳವರ್ಗದ ಹೆಣ್ಣುಗಳಾಗಲೀ ಅವರಿಬ್ಬರೂ ಕೂಡ ಜೈವಿಕ ಜೀವಿಗಳೇ. ಅವರಿಗೂ ಮನಸ್ಸಿದೆ, ಭಾವನೆಗಳನ್ನು ಮೀಟುವ ಹೃದಯವಿದೆ ಎಂಬುದು ಇಲ್ಲಿ ಗಮನಾರ್ಹ ಸಂಗತಿ. ಹಾಗಾಗಿ ಸಾಮಾನ್ಯ ವರ್ಗದ ಹೆಣ್ಣುಗಳಿಗೂ ಕೂಡ ಭಾವನೆಗಳಿವೆ. ಅವರನ್ನೂ ಕೂಡ ಇತರ ಸ್ತ್ರೀಯರಂತೆಯೆ ಪಂಪ ಇಲ್ಲಿ ಪರಿಭಾವಿಸಿದ್ದಾನೆ.

೪.೩. ತಂಟಲು ದಾಸಿಯರು ಹಾಗೂ ವೇಶ್ಯಾ ಸ್ತ್ರೀಯರ ಸಂಘರ್ಷಗಳು

'ವಿಕ್ರಮಾರ್ಜುನ ವಿಜಯ' ಕೃತಿಯಲ್ಲಿ ಕಂಡುಬರುವ ಮತ್ತೊಂದು ಜನಪದ ಸ್ತ್ರೀ ವರ್ಗವಿದು. ಪಂಪನು ತಂಟಲು ದಾಸಿಯರಂತಹ ವೇಶ್ಯಾ ಸ್ತ್ರೀಯರಲ್ಲಿಯೂ ಮಧುರ ಭಾವನೆಗಳಿವೆ ಎಂಬುದನ್ನು

ನಮಗೆ ಮನವರಿಕೆ ಮಾಡಿಕೊಟ್ಟಿದ್ದಾನೆ. ಸೂಳೇಗೇರಿಗಳನ್ನು ಪ್ರವೇಶಿಸಿ ಪುರುಷರು ಅಲ್ಲಿ ಸುಖ ಸಂತೋಷಗಳನ್ನು ಕಾಣುವರಾದರೂ, ವೇಶ್ಯಾ ಸ್ತ್ರೀಯರ ಭಾವನೆಗಳ ಬಗೆಗೆ ಅವರಲ್ಲಿ ಯಾವುದೇ ರೀತಿಯ ಸ್ಪಂದನೆಗಳಿರುವುದಿಲ್ಲ. ಆದರೆ ಅವರ ದೈಹಿಕ ಸೌಂದರ್ಯ ಆಕರ್ಷಕವಾಗಿ ಕಾಣುವಷ್ಟು ಅವರ ಮನದ ನೋವು, ಭಾವನೆಗಳು, ಹತಾಶೆಗಳಂತಹ ಮನಸ್ಸಿನ ತುಡಿತಗಳು ಕಾಣದಿರುವುದು ದುರಂತವೇ ಸರಿ. ಅರ್ಜುನನು ಸುಭದ್ರೆಯ ವಿರಹ ತಾಪದಲ್ಲಿಯೆ ದ್ವಾರಕೆಯ ಬೀದಿಗಳಲ್ಲಿ ಅಡ್ಡಾಡಲು ಬಂದು ಸೂಳೆಗೇರಿಯನ್ನು ಪ್ರವೇಶಿಸುತ್ತಾನೆ. ಆ ಸೂಳೆಗೇರಿಯಲ್ಲಿ ಸಂಚರಿಸುವಾಗ ನಾಲ್ಕೈದು ಜನ ತಂಟಲು ದಾಸಿಯರಿದ್ದ ಕಡೆ ಒಬ್ಬ ದಡ್ಡನು ಬಂದು ಕುಳಿತುಕೊಳ್ಳುತ್ತಾನೆ. ಆತನಿಗೆ ಅವರ ಅಭಿಪ್ರಾಯವನ್ನು ತಿಳಿಯದೆ, ಮುಟ್ಟಿ ಇಷ್ಟವನ್ನು ತಿಳಿಯದೆ ನುಡಿಯಲು ಆ ದಾಸಿಯರು ಆತನನ್ನು ಕಾಡಿ ಕಡೆಗಣಿಸಿ ಮಾತನಾಡಿ ಕಳುಹಿಸಿದರು.

"ವ॥ ಎಂದಾತನನಾಕೆಗಳ್ ಕಾಡಿ ಕೊಜಚಾಡಿ ಕಳೆದರ್ ಮತ್ತಮೊಂದೆಡೆಯೊಳೊರ್ವಳ್
ತನ್ನನುಟಿದ ಪೊಸ ಬೇಟದಾಣ್ಣನನೇಗೆಯ್ದುಂ ಪೋಗಲೀಯದೆ ತನ್ನಳಿಪನೆ ತೋಜೆ"[೨೯]

ಈ ರೀತಿಯಾಗಿ ಕಳುಹಿಸಿದಾಗ ಬೇರೊಂದೆಡೆಯಲ್ಲಿ ಒಬ್ಬಳು ತನ್ನನ್ನು ತೊರೆದು ಹೋಗಿತ್ತಿದ್ದ ಹೊಸ ಪ್ರೇಮದ ಒಡೆಯನನ್ನು ಏನು ಮಾಡಿದರೂ ಹೋಗಲು ಬಿಡದೆ ತನ್ನ ಪ್ರೀತಿಯನ್ನು ತೋರಿಸಿ

"ಮನೆಯನಿವಂ ಮನೋಭವನಿವಂ ಪೊಸ ಸುಗ್ಗಿಯೊಳಾದದೊಂದು ಕಿ
ತ್ತನಿವನಿದೆನ್ನನೇನುಟಿಯಲೀಗುಮೆ ನೀನುಟಿದಾಗಳೆಂದು ಪೋ ।
ಪನನಿರದೋಪನಂ ಮಿಡುಕಲೀಯದೆ ಕಾಲ್ವಿಡಿದಟ್ಟು ತೋರ ಕ
ಣ್ಬನಿಗಳನಿಕ್ಕಿದಳ್ ತರಳಲೋಚನೆ ಸಂಕಲೆಯಿಕ್ಕಿದಂತೆವೋಲ್ ॥"[೩೦]

"ಇವನು ಮನೆಯ ಯಜಮಾನ, ಇವನು ಮನ್ಮಥ, ಪ್ರಥಮ ಪ್ರೇಮಕಾಲದ ಚಿಕ್ಕ ಹರೆಯದವ; ಇವ ನನ್ನನ್ನು ಬಿಟ್ಟಾಗ ನಾನು ಉಳಿಯುವುದು ಸಾಧ್ಯವೇ? ಎಂದು ಹೋಗುತ್ತಿರುವ ಪ್ರಿಯನನ್ನು ಸುಮ್ಮನೆ ಚಲಿಸುವುದಕ್ಕೂ ಬಿಡದೆ ಕಾಲುಗಳನ್ನು ಕಟ್ಟಿಕೊಂಡು ಅತ್ತು ಸಂಕೋಲೆ ಹಾಕಿದಂತೆ ಚಂಚಲ ನೇತ್ರೆಯಾದ ಅವಳು ವಿಶೇಷವಾಗಿ ಕಣ್ಣೀರನ್ನು ಸುರಿಸಿದಳು"[೩೧] ಎಂಬ ಮಾತುಗಳು ಗಮನಿಸುವಂತಹವು. ಇವನು ನನಗೆ ಸಂಬಂಧಿಸಿದವ. ಈತನನ್ನು ಏನು ಮಾಡಿದರೂ ನಾನು ತೊರೆಯಲಾರೆ ಎಂಬ ಭಾವ ಆ ಹೆಣ್ಣಿನಲ್ಲಿದೆ. ಆಕೆಯು ಕಣ್ಣೀರನ್ನು ಸುರಿಸುವುದು ಇದಕ್ಕೆ ಸಾಕ್ಷಿಯಾಗಿದೆ.

ಬೇರೊಬ್ಬ ಪ್ರಿಯಳು ತನ್ನ ತಾಯಿಯ ಕಣ್ಣನ್ನು ವಂಚಿಸಿ ತನ್ನ ಪ್ರಿಯಳ ಮನೆಗೆ ಹೋಗುತ್ತಿರುವ ತನ್ನ ಪ್ರೇಮದ ಒಡೆಯನನ್ನು ಹಿಡಿದುಕೊಂಡು,

"ದೂದವಿಯರ ಕಯ್ಯಲಿ ನಿನ್ನ ಕಾಲು ಹಿಡಿದು ಕಳುಹಿಸಿದ ಮಾತುಗಳು ನಾಶವಾಗುತ್ತಿವೆ. (ನಿಷ್ಪ್ರಯೋಜಕವಾಗುತ್ತಿವೆ) ನಿತ್ಯವೂ ದುಃಖಪಟ್ಟು ಅಳುವುದರಿಂದ ಕಣ್ಣೀರು ವ್ಯರ್ಥವಾಗುತ್ತಿದೆ.

ನಿಟ್ಟುಸಿರಿನ ಬಿಸಿಯುಸಿರು ಹಾಳಾಗುತ್ತಿದೆ. ನನ್ನ ಶರೀರವು ಬೇಟದ ಕಾಟದಿಂದ ಕ್ಷೀಣಿಸುತ್ತಿದೆ. ಇದನ್ನು ನೋಡಿಯೂ ಇನ್ನು ಮೇಲಾದರೂ ಆಶೆಯ ಮಾತನ್ನು ದಯೆಗೆಯ್ಯಬಾರದೇ?"[೩೨] ಎಂದು ತನ್ನ ಪ್ರೀತಿಯನ್ನು ತೋರಿಸುವ, ಕಣ್ಣೀರನ್ನು ಸುರಿಸುವ ಭಾವಗಳು ತಾವು ಒಲಿದವರ ಬಗೆಗೆ ಅವರಲ್ಲಿ ಉಂಟಾಗುವ ಮಾನಸಿಕ ತಳಮಳದ ಭಾವಗಳನ್ನು ತಿಳಿಸುತ್ತವೆ.

ಇಲ್ಲಿನ ಭಾವೋದ್ವೇಗಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಪ್ರೀತಿ, ಪ್ರೇಮ, ಮೋಹ, ಒಲುಮೆಯಂತಹ ಮನಸ್ಸಿಗೆ ಸಂಬಂಧಿಸಿದ ಅಭಿಲಾಷೆಗಳು ಕೇವಲ ರಾಣಿ ಅಥವಾ ಉನ್ನತ ವರ್ಗದ ಹೆಣ್ಣುಗಳಲ್ಲಷ್ಟೇ ಒಡಮೂಡದೆ ಸಾಮಾನ್ಯ ಸ್ತ್ರೀಯರಾದ ವೇಶ್ಯೆ, ತಂಟಲು ದಾಸಿಯರಂತಹ ಸಮಾಜದ ಕೆಳಸ್ತರದಲ್ಲಿರುವ ಹೆಣ್ಣುಗಳಲ್ಲಿಯೂ ಇಂತಹ ಭಾವಗಳು ಘಟಿಸುತ್ತವೆ ಎಂಬುದನ್ನು ಪಂಪ ತಿಳಿಸುತ್ತಾನೆ. ಇದು ಕೆಳವರ್ಗದ ಹೆಣ್ಣುಗಳ ಸಂಘರ್ಷವೂ ಆಗಿದೆ. ಇವರ ಸಂಘರ್ಷಗಳು ಕೂಡ ವೈಯಕ್ತಿಕ ನೆಲೆಯ ಚೌಕಟ್ಟಿನಲ್ಲೆ ನಿಲ್ಲುವಂತಹವಾದರೂ ಕೂಡ ಪ್ರೀತಿ, ಪ್ರೇಮ, ಒಲುಮೆ, ಕೂಟದಂತಹ ಭಾವಗಳಿಗೆ ಮೇಲ್ವರ್ಗದ ಹೆಣ್ಣು, ಕೆಳವರ್ಗದ ಹೆಣ್ಣು, ರಾಣಿ, ದಾಸಿ, ವೇಶ್ಯೆ ಎಂಬ ಭೇದಗಳಿಲ್ಲ ಎಂಬುದನ್ನು ಈ ಸನ್ನಿವೇಶವು ನಮಗೆ ಮನವರಿಕೆ ಮಾಡಿಕೊಡುತ್ತದೆ.

ಅಧ್ಯಾಯ ಮೂರರಲ್ಲಿನ ಸ್ತ್ರೀ ಸಂಘರ್ಷಗಳಿಗಿಂತ ಭಿನ್ನ ಸಂಘರ್ಷದ ನೆಲೆಗಳನ್ನು ಈ ಬುಡಕಟ್ಟು ಮತ್ತು ಜನಪದ ಸ್ತ್ರೀಯರಲ್ಲಿ ಕಾಣಬಹುದು. ಏಕೆಂದರೆ ಕುಂತಿ, ಮಾದ್ರಿಯರನ್ನೂ ಒಳಗೊಂಡಂತೆ ಎಲ್ಲ ಅರಮನೆ ಸ್ತ್ರೀಯರಿಗೆ ಇರುವ ಕೌಟುಂಬಿಕ ಕಟ್ಟುಪಾಡುಗಳು, ನಿರ್ಬಂಧಗಳು ಬುಡಕಟ್ಟು ಹಾಗೂ ಜನಪದ ಮಹಿಳೆಯರಿಗೆ ಇರುವುದಿಲ್ಲ. ಸಾಂಸ್ಕೃತಿಕವಾದ ಹಿನ್ನೆಲೆಯಲ್ಲಿ ಹೇಳುವುದಾದರೆ ಈ ಎರಡೂ ವರ್ಗದ ಮಹಿಳೆಯರು ಭಿನ್ನ ಸಂಸ್ಕೃತಿಯಿಂದ ಬಂದವರು. ಆದ್ದರಿಂದ ಇವರು ಎದುರಿಸುವ ಸಂಘರ್ಷಗಳು ಭಿನ್ನವಾಗಿವೆ.

ಕೊನೆ ಟಿಪ್ಪಣಿಗಳು

೧. ಪುರಾಣನಾಮ ಚೂಡಾಮಣಿ, ಪು.ಸಂ–೬೪೧.

೨. ವಿಕ್ರಮಾರ್ಜುನ ವಿಜಯಂ, ೩/೧೨.

೩. ವಿಕ್ರಮಾರ್ಜುನ ವಿಜಯಂ, ೩/೧೩.

೪. ವಿಕ್ರಮಾರ್ಜುನ ವಿಜಯಂ, ೩/೧೩–ವ.

೫. ಪಂಪಮಹಾಕವಿ ವಿರಚಿತ ಪಂಪಭಾರತಂ, ಪು.ಸಂ–೧೭೫.

೬ ವಿಕ್ರಮಾರ್ಜುನ ವಿಜಯಂ, ೩/೧೪–ವ.

೭ ವಿಕ್ರಮಾರ್ಜುನ ವಿಜಯಂ, ೩/೧೫.

೮. ವಿಕ್ರಮಾರ್ಜುನ ವಿಜಯಂ, ೩/೧೫–ವ.

೯. ವಿಕ್ರಮಾರ್ಜುನ ವಿಜಯಂ, ೩/೧೮–ವ.

೧೦. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೯/೧೧.

೧೧. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೯/೧೨.

೧೨. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೯/೧೩.

೧೩. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೯/೧೪.

೧೪. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೯/೧೫.

೧೫. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೯/೧೬.

೧೬. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೯/೧೭.

೧೭. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೯/೨೨.

೧೮. ಕುಮಾರವ್ಯಾಸನ ಪಾತ್ರಸೃಷ್ಟಿ, ಪು.ಸಂ–೨೨೯.

೧೯. ವಿಕ್ರಮಾರ್ಜುನ ವಿಜಯಂ, ೪/೩೬.

೨೦. ಪಂಪಮಹಾಕವಿ ವಿರಚಿತ ಪಂಪಭಾರತಂ, ಪು.ಸಂ–೨೨೩ ರಿಂದ ೨೨೪.

೨೧. ವಿಕ್ರಮಾರ್ಜುನ ವಿಜಯಂ, ೪/೩೬–ವ.

೨೨. ವಿಕ್ರಮಾರ್ಜುನ ವಿಜಯಂ, ೪/೩೭.

೨೩. ಪಂಪಮಹಾಕವಿ ವಿರಚಿತ ಪಂಪಭಾರತಂ, ಪು.ಸಂ–೨೨೪.

೨೪. ವಿಕ್ರಮಾರ್ಜುನ ವಿಜಯಂ, ೪/೩೭–ವ.

೨೫. ವಿಕ್ರಮಾರ್ಜುನ ವಿಜಯಂ, ೪/೩೮.

೨೬. ಪಂಪಮಹಾಕವಿ ವಿರಚಿತ ಪಂಪಭಾರತಂ, ಪು.ಸಂ–೨೨೪.

೨೭. ವಿಕ್ರಮಾರ್ಜುನ ವಿಜಯಂ, ೪/೩೮–ವ.

೨೮. ಪಂಪಮಹಾಕವಿ ವಿರಚಿತ ಪಂಪಭಾರತಂ, ಪು.ಸಂ–೨೨೪.

೨೯. ವಿಕ್ರಮಾರ್ಜುನ ವಿಜಯಂ, ೪/೯೬-ವ.

೩೦. ವಿಕ್ರಮಾರ್ಜುನ ವಿಜಯಂ, ೪/೯೭.

೩೧. ಪಂಪಮಹಾಕವಿ ವಿರಚಿತ ಪಂಪಭಾರತಂ, ಪು.ಸಂ-೨೫೦.

೩೨. ಪಂಪಮಹಾಕವಿ ವಿರಚಿತ ಪಂಪಭಾರತಂ, ಪು.ಸಂ-೨೫೧.

ಅಧ್ಯಾಯ : ಐದು

ದೇವಲೋಕದ ಮಹಿಳೆಯರ ಸಂಘರ್ಷಗಳ ಅನುಸಂಧಾನ

೫.೧ ರಂಭೆ ಹಾಗೂ ಊರ್ವಶಿಯರ ಸಂಘರ್ಷಗಳು

೫.೨ ಅರ್ಜುನನ್ನು ನೋಡಿದ ಅಮರಾವತೀ ಪಟ್ಟಣದ ವೇಶ್ಯಾ ಸ್ತ್ರೀಯರ ಸಂಘರ್ಷಗಳು

೫.೩. ಅರ್ಜುನನ ತಪಸ್ಸನ್ನು ಕೆಡಿಸಲು ಬಂದ ಅಪ್ಸರಾ ಸ್ತ್ರೀಯರು

೫.೪. ಅರ್ಜುನನ ಮುಂದೆ ನರ್ತಿಸಲು ಬಂದ ದೇವಲೋಕದ ಸ್ತ್ರೀಯರ ಸಂಘರ್ಷಗಳು

ಅಧ್ಯಾಯ : ಐದು

ದೇವಲೋಕದ ಮಹಿಳೆಯರ ಸಂಘರ್ಷಗಳ ಅನುಸಂಧಾನ

'ವಿಕ್ರಮಾರ್ಜುನ ವಿಜಯ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳ ಮಹಿಳಾ ಪ್ರಪಂಚದಲ್ಲಿ ರಂಭೆ, ಊರ್ವಶಿ, ಅಪ್ಸರ ಸ್ತ್ರೀಯರು, ದೇವಗಣಿಕೆಯರು ಮೊದಲಾದ ದೇವಲೋಕದ ಮಹಿಳಾ ವರ್ಗವನ್ನು ಕಾಣಬಹುದು. ಇವರು ದೇವಲೋಕದ ಮಹಿಳೆಯರೇ ಆಗಿದ್ದರೂ ಕೂಡ ಭೂಲೋಕದ ಸಾಮಾನ್ಯ ಹೆಣ್ಣುಗಳಂತೆ ಪ್ರೀತಿ, ಪ್ರೇಮ, ನೋವು, ನಲಿವು, ಒಲುಮೆಗಳೆಂಬ ಮಾನಸಿಕ ಭಾವನೆಗಳಿಗೆ ಒಳಗಾಗುವುದು ಕಂಡುಬರುತ್ತದೆ. ಅದರಲ್ಲಿಯೂ ವಿಶೇಷವಾಗಿ ಅರ್ಜುನನನ್ನು ನೋಡಿದ ಸಂದರ್ಭದಲ್ಲಿ ರಂಭೆ, ಊರ್ವಶಿ, ಅಪ್ಸರಾ ಸ್ತ್ರೀಯರು ಮೊದಲಾದವರು ಎದುರಿಸುವ ಮಾನಸಿಕ ಸಂಘರ್ಷದ ಭಾವಗಳನ್ನು ಇಲ್ಲಿ ಅಧ್ಯಯನಕ್ಕೊಳಪಡಿಸಲಾಗಿದೆ. ಇದರ ಜೊತೆಗೆ ಅರ್ಜುನನನ್ನು ನೋಡಿದ ಅಮರಾವತೀ ಪಟ್ಟಣದ ವೇಶ್ಯಾ ಸ್ತ್ರೀಯರು, ಆತನ ಮುಂದೆ ನರ್ತಿಸಲು ಬಂದ ದೇವಲೋಕದ ಸ್ತ್ರೀಯರ ಸಂಘರ್ಷದ ಭಾವಗಳನ್ನೂ ಸಹ ಇಲ್ಲಿ ಚರ್ಚೆಗೊಳಪಡಿಸಲಾಗಿದೆ.

೫.೧. ರಂಭೆ ಹಾಗೂ ಊರ್ವಶಿಯರ ಸಂಘರ್ಷಗಳು

ರಂಭೆ ಹಾಗೂ ಊರ್ವಶಿಯರು 'ವಿಕ್ರಮಾರ್ಜುನ ವಿಜಯಂ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳಲ್ಲಿ ಕಂಡುಬರುವ ದೇವಲೋಕದ ಸ್ತ್ರೀಯರು. ಅರ್ಜುನನು ಇಂದ್ರನೊಡನೆ ದೇವಲೋಕಕ್ಕೆ ಬಂದಾಗ ಇವರಿಬ್ಬರೂ ಅರ್ಜುನನಿಗೆ ಮನಸೋಲುತ್ತಾರೆ. ತಮ್ಮ ಮನದ ಬಯಕೆಯನ್ನು ಅರ್ಜುನನಿಗೆ ತಿಳಿಸುತ್ತಾರೆ. ತಮ್ಮ ಒಲುಮೆಯ ಭಾವವನ್ನು ಆತ ತಿರಸ್ಕರಿಸಿದ ಕಾರಣವಾಗಿ ಇವರಿಬ್ಬರೂ ಆತನಿಗೆ ಒಂದು ವರ್ಷ ಬೃಹಂದಳೆಯಾಗುವಂತೆ ಶಾಪ ನೀಡುತ್ತಾರೆ. ಈ ಹಿನ್ನೆಲೆಯಲ್ಲಿ ಇವರ ಸಂಘರ್ಷಗಳನ್ನು ಅಧ್ಯಯನಕ್ಕೆ ಒಳಗುಮಾಡಲಾಗಿದೆ.

೫.೧.ಅ. ರಂಭೆಯ ಸಂಘರ್ಷಗಳು

ರಂಭೆಯು ದೇವಲೋಕದಲ್ಲಿನ ಒಬ್ಬಳು ಅಪ್ಸರಾ ಕನ್ಯೆ. ತನ್ನ ರೂಪ, ಲಾವಣ್ಯಗಳಿಂದಲೇ ದೇವತೆಗಳಾದಿಯಾಗಿ, ಮಾನವರು, ಋಷಿಮುನಿಗಳನ್ನೂ ಸಹ ತನ್ನೆಡೆಗೆ ಸೆಳೆದುಕೊಳ್ಳುವ ಸಾಮರ್ಥ್ಯ ಉಳ್ಳವಳು. ಇಂತಹ ಚೆಲುವಿನ ಹೆಣ್ಣಾದ ರಂಭೆಯು ಅರ್ಜುನನಿಗೆ ಸೋಲುವುದು ಆಕೆಯ ಹೆಣ್ತನದ ಸಹಜ ಪ್ರಕ್ರಿಯೆಯಾಗಿದೆ. ಅರ್ಜುನನನ್ನು ನೋಡಿ ಮನದಲ್ಲಿಯೇ ಆತನಿಗಾಗಿ ಕಾತರಿಸುವ

ಮತ್ತು ಆತನನ್ನು ಸೇರಬೇಕೆಂದು ಬಯಸುವ ಅಂಶಗಳು ಆಕೆಯ ಮನಸ್ಸಿನ ತಾಕಲಾಟಗಳಾಗಿವೆ. ಈ ಮಾನಸಿಕ ಸಂಘರ್ಷಗಳು ಅವಳ ಮನದ ಅಂತಸ್ತುಮುಲಗಳಿಗೆ ಸಾಕ್ಷಿಯಾಗಿವೆ.

"ಈಕೆ ಒಬ್ಬ ಅಪ್ಸರೆ. ಕಶ್ಯಪ ಮುನಿ ಮತ್ತು ಪ್ರಾಧೆ ಎಂಬಾಕೆಯ ಮಗಳು. ಈಕೆ ತುಂಬುರನೆಂಬ ಗಂಧರ್ವನ ಹೆಂಡತಿ. ಇಂದ್ರನ ಅಪ್ಪಣೆಯಂತೆ ವಿಶ್ವಾಮಿತ್ರನ ತಪಸ್ಸನ್ನು ಕೆಡಿಸುವ ಪ್ರಯತ್ನ ನಡೆಸಲು ಆತನು ಕೋಪಗೊಂಡು ರಂಭೆಗೆ ಶಿಲೆಯಾಗುವಂತೆ ಶಾಪವಿತ್ತನು. ಈಕೆಯು ದೇವಲೋಕದ ವೇಶ್ಯೆಯರಲ್ಲೆಲ್ಲ ಸುಪ್ರಸಿದ್ದಳು"[೧] ಎಂಬ ಅಭಿಪ್ರಾಯಗಳು ರಂಭೆಯ ವೈಯಕ್ತಿಕ ವಿಚಾರಗಳ ಕಡೆ ಬೆಳಕನ್ನು ಚೆಲ್ಲುತ್ತವೆ. ಪುರಾಣ ಪ್ರಸಿದ್ಧಳಾದ ಈಕೆ ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಅರ್ಜುನನಿಗೆ ಮನಸೋತು, ತನ್ನ ಪ್ರೀತಿಯನ್ನು ಆತನಲ್ಲಿ ಪ್ರಕಟಪಡಿಸಲು ಆತ ತಿರಸ್ಕರಿಸುತ್ತಾನೆ. ಇದರಿಂದ ಕೋಪಗೊಂಡ ರಂಭೆ ಆತನಿಗೆ ಒಂದು ವರ್ಷಕಾಲ 'ಬೃಹಂದಳೆ'ಯಾಗು ಎಂದು ಶಾಪವನ್ನು ನೀಡುತ್ತಾಳೆ. ಇದರ ವಿವರ 'ವಿಕ್ರಮಾರ್ಜುನ ವಿಜಯ'ದಲ್ಲಿ ೮ನೆಯ ಆಶ್ವಾಸದ ೨೮ನೆ ಪದ್ಯದಲ್ಲಿ ಕಂಡುಬರುತ್ತದೆ. ಕಠಿಣವಾದ ತಪಸ್ಸನ್ನು ಮಾಡಿ ಹಾಗೂ ಶಿವನೊಡನೆ ಹೋರಾಡಿ ಆತನಿಂದ ಪಾಶುಪತಾಸ್ತ್ರವನ್ನು ಪಡೆದುಕೊಳ್ಳುತ್ತಾನೆ ಅರ್ಜುನ. ಜೊತೆಗೆ ಗೌರಿ ದೇವಿಯು 'ಅಂಜಲಿಕಾಸ್ತ್ರ' ಎಂಬ ಆಯುಧವನ್ನು ವಿಕ್ರಮಾರ್ಜುನನಿಗೆ ನೀಡುತ್ತಾಳೆ. ಅಲ್ಲದೆ ಮೂವತ್ತು ಮೂರು ದೇವರುಗಳು ತಮ್ಮ ತಮ್ಮ ಪ್ರಧಾನಾಸ್ತ್ರಗಳನ್ನು ಕೊಟ್ಟರು. ಇಂದ್ರನು ಅರ್ಜುನನನ್ನು ಹೇಗೆ ಸತ್ಕರಿಸಬೇಕೆಂದು ತಿಳಿಯದೆ ಆಯಾಸ ಪರಿಹಾರ ಮಾಡಿಕೊಳ್ಳುವ ಸಲುವಾಗಿ ಕೆಲಕಾಲ ತನ್ನ ರಾಜಧಾನಿಯಲ್ಲಿ ವಿಶ್ರಾಂತಿ ಪಡೆದು ಬರುವೆಯಂತೆ ಎಂದು ಅರ್ಜುನನನ್ನು ತನ್ನ ರಾಜಧಾನಿಯಾದ ಅಮರಾವತೀ ಪಟ್ಟಣಕ್ಕೆ ಕರೆತಂದನು. ಅಲ್ಲಿ ಇಂದ್ರನ ಆತಿಥ್ಯವನ್ನು ಸ್ವೀಕರಿಸಿ ಇಂದ್ರನಿಗೆ ಕೊಲ್ಲಲು ಅಸಾಧ್ಯವಾದ ನಿವಾತ ಕವಚ, ಕಾಲಕೇಯ, ಪೌಲೋಮ, ತುಳುತಾಳುಕರೆಂಬ ಅರುವತ್ತು ಕೋಟಿ ರಾಕ್ಷಸರನ್ನು ಗೆದ್ದು ಇಂದ್ರನ ಅರ್ಧಾಸನವನ್ನು ಹತ್ತುವ ಸೌಭಾಗ್ಯವನ್ನು ಪಡೆದನು.

> "ಅಂತು ದೇವಲೋಕದೊಳ್ ತನ್ನ ಮಾತೆ ಮಾತಾಗಿರ್ದ ಪರಾಕ್ರಮಧವಳನ
> ಪರಾಕ್ರಮಕ್ಕಂ ಗಂಡಾಗಾಡಿಗಂ ರಂಭೆ ಸೋಲ್ತು ಸೈರಿಸಲಾಱದೇಕಾಂತದೊಳ್
> ಮೇಲೆ ಬಿಟ್ಟೊಡೆ"[೨]

ಆ ರೀತಿಯಾಗಿ ದೇವಲೋಕದಲ್ಲಿ ತನ್ನ ಮಾತೇ ಮಾತಾಗಿದ್ದ ಪರಾಕ್ರಮಧವಳನಾದ ಅರ್ಜುನನ ಪರಾಕ್ರಮಕ್ಕೂ, ಆತನ ಸೌಂದರ್ಯ ರಾಶಿಗೂ ರಂಭೆಯು ಸೋತು ಸಹಿಸಲಾರದೆ ಏಕಾಂತದಲ್ಲಿ ಬಂದು ತಾನೇ ಮೇಲೆ ಬಿದ್ದು ತನ್ನನ್ನು ಸ್ವೀಕರಿಸುವಂತೆ ಅವನಲ್ಲಿ ಪ್ರಾರ್ಥಿಸಿದಳು. ಪಂಪ ಇಲ್ಲಿ ರಂಭೆಯು ಸಹಜವಾಗಿ ಪುರುಷನ ಪೌರುಷ ಹಾಗೂ ಆತನ ರೂಪಿಗೆ ಮನಸೋಲುವ ಹೆಣ್ಣುಗಳಂತೆ ಆಕೆಯು ಸಹ ಅರ್ಜುನನಿಗೆ ಮನಸೋತು ತನ್ನ ಮನದ ಬಯಕೆಯನ್ನು ಅರ್ಜುನನಲ್ಲಿ ಅಭಿವ್ಯಕ್ತಪಡಿಸುವ ವಿಚಾರವನ್ನು ತಿಳಿಸುತ್ತಾನೆ. ಆದರೆ ಅರ್ಜುನ ಇಂತಹ ಮೋಹ ಪಾಶಗಳಿಗೆ ಒಳಗಾಗುವವನಲ್ಲ. ಆತನಿಗೆ ತಾನು ಯಾರು? ಎಂಬ ಅರಿವಿದೆ. ಹಾಗೆಯೆ ತನ್ನ ಹಾಗೂ

ರಂಭೆಯ ಸಂಬಂಧಗಳು ಹಾಗೂ ಸ್ಥಾನಮಾನಗಳನ್ನು ಕುರಿತು ಆಕೆಗೆ ತಿಳುವಳಿಕೆಯನ್ನು ಉಂಟುಮಾಡಲು ಪ್ರಯತ್ನಿಸುತ್ತಾನೆ.

"ಎಂದು ಪುರಂದರನರಸಿಯ
ಯಂದು ದಲೆನಗಬ್ಬೆಯೇ ತೊದಳ್ ನುಡಿಯದೆ ಪೋ ।
ಗೆಂದೊಡದೊಂದಬ್ದದೊಳೆ ಬೃ
ಹಂದಳೆಯಾಗೆಂದು ಮುನಿದು ಶಾಪವನಿತ್ತಳ್ ॥"[೩]

ತನ್ನನ್ನು ಸ್ವೀಕರಿಸಬೇಕೆಂದು ಕೇಳಿಕೊಂಡದ್ದಕ್ಕೆ ಅರ್ಜುನನು ಎಲ್ಲಿಯವರೆಗೆ ನೀನು ಪುರಂದರನ ಅರಸಿಯಾಗಿರುವೆಯೋ ಅಲ್ಲಿಯವರೆಗೆ ನೀನು ನಿಜವಾಗಿಯೂ ನನಗೆ ತಾಯಿಯಾಗಿದ್ದೀಯೆ. ಕೆಟ್ಟ ಮಾತುಗಳನ್ನು ನುಡಿಯದೆ ಹೋಗು ಎಂದು ಅವಳ ಮನದ ಬೇಡಿಕೆಯನ್ನು ಅರ್ಜುನ ತಿರಸ್ಕರಿಸಿದನು. ಇದರಿಂದ ಕುಪಿತಳಾದ ರಂಭೆಯು ಆತನಿಗೆ 'ಒಂದು ವರ್ಷಕಾಲ ನೀನು ಬೃಹಂದಳೆಯಾಗು' ಎಂದು ಶಾಪವನ್ನು ಕೊಟ್ಟಳು. ಇಲ್ಲಿ ರಂಭೆಯ ಕೋಪವು ಅವಳ ಮನದ ಸಂಘರ್ಷವನ್ನು ನಮಗೆ ತಿಳಿಸಿಕೊಡುತ್ತದೆ. ತಾನು ಮೆಚ್ಚಿದ ಪುರುಷನು ತನ್ನನ್ನು ತಿರಸ್ಕರಿಸಿದಾಗ ಸಹಜವಾಗಿಯೇ ಹೆಣ್ಣಿಗೆ ಕೋಪ ಬರುವುದು ಸತ್ಯ. ಇಲ್ಲಿಯೂ ರಂಭೆ ಕೋಪದಿಂದ ಅರ್ಜುನನಿಗೆ ಶಾಪವನ್ನಿತ್ತಳು. ಇಲ್ಲಿ ಅರ್ಜುನ ರಂಭೆಯನ್ನು ತಾಯಿಯೆಂದು ಕರೆದು ತನ್ನ ಔನ್ನತ್ಯವನ್ನು ಪ್ರಕಟಪಡಿಸಿದರೂ ಸಹ ಒಲಿದು ಬಂದ ಒಂದು ಹೆಣ್ಣಿನ ಅಭಿಲಾಷೆಗಳನ್ನು ಈಡೇರಿಸಲಾಗದ ಕ್ಷಾತ್ರಪುರುಷನಾಗುವುದು ಕಂಡು ಬರುತ್ತದೆ.

೫.೧.೬. ಊರ್ವಶಿಯ ಸಂಘರ್ಷಗಳು.

ಊರ್ವಶಿಯು ಕೂಡ ದೇವಲೋಕದಲ್ಲಿನ ಒಬ್ಬಳು ಅಪ್ಸರಾ ಕನ್ಯೆ. ಇಂದ್ರನ ಆಸ್ಥಾನದಲ್ಲಿನ ನರ್ತಕಿಯರಲ್ಲಿ ಅಗ್ರಗಣ್ಯಳಾದ ಈಕೆ ರಂಭೆಯಂತೆಯೆ ಸೌಂದರ್ಯವತಿ. ತನ್ನ ಚೆಲುವಿನ ಕಾರಣದಿಂದಲೇ ಹಲವು ಋಷಿ ಮುನಿಗಳ ಗಮನವನ್ನು ಸೆಳೆದ ಇವಳು ಅರ್ಜುನನನಿಗೆ ಮನಸೋಲುತ್ತಾಳೆ. ತನ್ನ ಮನದ ಬಯಕೆ ಈಡೇರದಿದ್ದಾಗ ಅರ್ಜುನನಿಗೆ ಶಾಪ ನೀಡುವುದು ಆಕೆಯ ಮನದ ಸಂಘರ್ಷದ ಭಾಗವೇ ಆಗಿದೆ.

"ಪುರಾಣ ಪ್ರಸಿದ್ಧಳಾದ ಈಕೆಯೂ ಒಬ್ಬಳು ಅಪ್ಸರೆ. ಈಕೆ ನಾರಾಯಣ ಮುನಿಯ ತೊಡೆಯ (ಊರು) ಪ್ರದೇಶದಿಂದ ಜನಿಸಿದುದರಿಂದ ಊರ್ವಶಿ ಎಂಬ ಹೆಸರನ್ನು ಪಡೆದಳು. ಈಕೆಯು ಸ್ವರ್ಗಕ್ಕೆ ಬಂದ ಅರ್ಜುನನನ್ನು ಮೋಹಿಸಿದರೂ, ಆತನು ಈಕೆಯನ್ನು ಪವಿತ್ರ ಭಾವನೆಯಿಂದ ಕಂಡುದರಿಂದ ಈಕೆಯು ಕೋಪದಿಂದ ಅರ್ಜುನನನಿಗೆ ಷಂಡನಾಗುವಂತೆ ಶಾಪವಿತ್ತಳು"[೪] ಎಂಬ ಅಂಶಗಳು ಊರ್ವಶಿಯ ವೈಯಕ್ತಿಕ ವಿವರಗಳನ್ನು ತಿಳಿಸಿಕೊಡುತ್ತವೆ. ಪಂಪನ ಕೃತಿಯಲ್ಲಿ ಊರ್ವಶಿಯ ಪ್ರಸಂಗವಿಲ್ಲ. ಅದಕ್ಕೆ ಬದಲಾಗಿ ರಂಭೆಯು ಅರ್ಜುನನಿಗೆ ಮನಸೋತು, ಅವನಿಂದ ತಿರಸ್ಕೃತಳಾಗಿ ಶಾಪ ನೀಡುತ್ತಾಳೆ. ಕುಮಾರವ್ಯಾಸನು ಪಂಪನಿಗಿಂತಲೂ ಸುದೀರ್ಘವಾಗಿ ಅರ್ಜುನ

ಹಾಗೂ ಊರ್ವಶಿಯರ ಪ್ರಸಂಗವನ್ನು ತಿಳಿಸಿಕೊಟ್ಟಿದ್ದಾನೆ. ಕುಮಾರವ್ಯಾಸನಲ್ಲಿ ಈ ವಿವರಗಳು ಅರಣ್ಯಪರ್ವದ ೭ನೆ ಸಂಧಿಯ ೯೭ನೆ ಪದ್ಯದಿಂದ ಕಂಡುಬರುತ್ತವೆ. ಕುಮಾರವ್ಯಾಸನಲ್ಲಿ ರಂಭೆಯ ಪ್ರಸಂಗವಿಲ್ಲ.

ಅರ್ಜುನನು ಶಿವನಿಂದ ಪಾಶುಪತಾಸ್ತ್ರವನ್ನು ಪಡೆದು, ಇಂದ್ರನೊಂದಿಗೆ ದೇವಲೋಕಕ್ಕೆ ಬಂದನು. ಅಲ್ಲಿ ಅರ್ಜುನನು ನೃತ್ಯ ಮಾಡುತ್ತಿದ್ದ ಊರ್ವಶಿಯನ್ನೆ ಎವೆಯಿಕ್ಕದೆ ನೋಡುತ್ತಿದ್ದನು. ಆ ನೋಟವನ್ನು ಇಂದ್ರನು ಕಂಡು ಅರ್ಜುನನಿಗೆ ಊರ್ವಶಿಯ ಮೇಲೆ ಮನಸ್ಸಾಗಿದೆ ಎಂದು ತಿಳಿದು ಅವಳನ್ನು ಅರ್ಜುನನಿಗೆ ಮನಸಂತೋಷ ಪಡಿಸುವಂತೆ ಚಿತ್ರಸೇನನ ಮೂಲಕ ಊರ್ವಶಿಗೆ ಹೇಳಿ ಕಳಿಸುತ್ತಾನೆ. ಈ ಸನ್ನಿವೇಷವನ್ನು ಕವಿ ಈ ರೀತಿಯಾಗಿ ಚಿತ್ರಿಸಿದ್ದಾನೆ.

"ಎಮಗೆ ಮಗನರ್ಜುನನು ನೀನಿಂ
ದೆಮಗೆ ಸೊಸೆಯಹುದಾತನಂತ
ಸ್ತಿಮಿರವನು ಕಳೆ ನಿನ್ನ ಕುಚಯುಗ ಕಾಂತಿ ಲಹರಿಯಲಿ
ಕಮಲಮುಖಿ ನೀ ಕಮಲವಾತನು
ಭ್ರಮರ ನೀ ಸುರವನದ ಸಿರಿಮಧು
ಸಮಯವರ್ಜುನನೆಂದು ಬೆಸಸಿದನಮರಪಯಿಯೆಂದ"[೨]

ಇಂದ್ರನು ನಮಗೆ ಈ ರೀತಿಯಾಗಿ ಹೇಳಿ ಕಳುಹಿಸಿದನೆಂದು ಚಿತ್ರಸೇನನು ಹೇಳುತ್ತಾನೆ. ನಮಗೆ ಅರ್ಜುನನು ಮಗ. ನೀನು ಇಂದು ಎಮಗೆ ಸೊಸೆಯಾಗಬೇಕು. ನಿನ್ನ ಕುಚಯುಗ ಕಾಂತಿ ಲಹರಿಯಲಿ ಅರ್ಜುನನ ಮನದ ಅಂತಸ್ತಿಮಿರವನ್ನು ಕಳೆಯಬೇಕು. ಕಮಲಮುಖಿ, ನೀನು ಕಮಲ ಆತನು ಭ್ರಮರ, ನೀನು ಸುರವನದ ಸಿರಿ, ಆತನು ಮಧುಸಮಯ ಎಂದು ಅಮರಪತಿಯು ಆಜ್ಞಾಪಿಸಿದನು ಎಂದನು.

ಪ್ರಧಾನವಾಗಿ ಇಲ್ಲಿ ಇಂದ್ರನ ಮಾತುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಹೆಣ್ಣು ಭೋಗದ ವಸ್ತು. ಅದು ಗಂಡಿಗಾಗಿಯೆ ಇರುವುದು ಎಂಬ ಮನಸ್ಥಿತಿ ಕಂಡುಬರುತ್ತದೆ. ಊರ್ವಶಿ ದೇವಲೋಕದ ಹೆಣ್ಣಾದರೂ ಇದರಿಂದ ಹೊರತೇನೂ ಅಲ್ಲ. ಹೆಣ್ಣು ಪುರುಷನ ಭೋಗಕ್ಕಾಗಿಯೇ ಇರುವವಳು ಮತ್ತು ಅಧೀನೆ ಎಂಬ ಅಂಶಗಳು ನಮಗೆ 'ನೀನಿಂದೆಮಗೆ ಸೊಸೆಯಹುದು' ಎಂಬ ಇಂದ್ರನ ಮಾತುಗಳಿಂದ ಧ್ವನಿತವಾಗುತ್ತವೆ. ಜೊತೆಗೆ ದೇವಲೋಕದ ಸ್ತ್ರೀಯರಿಗೂ ಸ್ವತಂತ್ರವಾದ ಅಸ್ತಿತ್ವಗಳಾಗಲಿ, ಅಭಿಪ್ರಾಯಗಳನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯಗಳಾಗಲಿ ಇಲ್ಲವೆಂಬುದು ಇಲ್ಲಿ ಸ್ಪಷ್ಟವಾಗುತ್ತದೆ. ಚಿತ್ರಸೇನನ ಮಾತುಗಳನ್ನು ಕೇಳುತ್ತಲೆ,

"ಕೇಳುತವೆ ರೋಮಾಂಚ ಲಜ್ಜೆಯ
ಜೋಳಿಯೆದ್ದುದು ಝೋಂಪಿಸಿತು ಪುಳ
ಕಾಳಿ ಭಯವನು ಪಂಟಿಸಿದುದನುರಾಗದಭಿಮಾನ

ಮೇಲೆ ಮೇಲಭಿಲಾಷೆ ಧೈರ್ಯವ
ಜಾಳವಿಸೆ ಪರಿತೋಷ ಪೂರಣ
ದೇಳುಮುಳುಗಾಯ್ತುತ್ತರಕೆ ನಸುಬಾಗಿದಳು ಶಿರವ"[೬]

ಚಿತ್ರಸೇನನು ಹೇಳಿದ ಈ ಮಾತುಗಳನ್ನು ಕೇಳಿದೊಡನೆಯೇ ಊರ್ವಶಿಗೆ ರೋಮಾಂಚ ಲಜ್ಜೆಗಳು ಒಟ್ಟಿಗೆ ಮನದಲ್ಲಿ ಮೂಡಿದವು. ಪುಳಕಾಲಿ ಝೋಂಪಿಸಿತು. ಅನುರಾಗದ ಅಭಿಮಾನ ಭಯವನ್ನು ಹೋಗಲಾಡಿಸಿತು. ಮೇಲೆ ಮೇಲೆ ಮೂಡಿ ಬರುತ್ತಿರುವ ಅಭಿಲಾಷೆ ಧೈರ್ಯವನ್ನು ನಡುಗಿಸಿತು. ಪರಮ ಪರಿತೋಷದ ಏಳು ಮುಳುಗಾಯಿತು. ಉತ್ತರಕ್ಕಾಗಿ ಶಿರವನ್ನು ನಸುಬಾಗಿಸಿದಳು. ಅರ್ಜುನನೊಡನೆ ಸೇರುವ ಅಭಿಲಾಷೆ ಮನದಲ್ಲಿ ಮೂಡಿದುದೇ ತಡ ಊರ್ವಶಿಯ ಮನದಲ್ಲಿ ಮೇಲಿನ ಭಾವಗಳು ಪ್ರಕಟವಾಗುತ್ತವೆ. ಹೆಣ್ಣಿನ ಮನಸ್ಥಿತಿಯ ಹಿನ್ನೆಲೆಯಲ್ಲಿ ಗ್ರಹಿಸಿದರೆ ಊರ್ವಶಿಯ ಈ ಭಾವಗಳು ಸಹಜ ಹಾಗೂ ಸರಿಯೆನಿಸುತ್ತವೆ. ಆದರೆ ಇಂದ್ರನಿಗೆ ಸತಿಯಾಗಿದ್ದವಳು ಇಂದು ಆತನಿಗೆ ಸೊಸೆಯಾಗುವ ಸಂಬಂಧಾಂತರಗಳು ಓದುಗರನ್ನು ಗೊಂದಲ ಹಾಗೂ ವಿವಿಧ ತೆರದ ಚರ್ಚೆಗಳಿಗೆ ಹಚ್ಚುತ್ತವೆ. ಏನೇ ಆದರೂ ಇಲ್ಲಿ ಹೆಣ್ಣಿನ ಮನದಲ್ಲಿ ಮೂಡುವ ನವಿರು ಭಾವಗಳು, ಆ ಸಮಯದ ತಲ್ಲಣಗಳು ಹಾಗೂ ಗೊಂದಲದ ಮನಸ್ಸಿನ ಮೃದು ಚಿಂತನೆಗಳಿಗೆ ಕವಿ ಪ್ರಾಧಾನ್ಯತೆ ಕೊಟ್ಟಿದ್ದಾನೆ.

ಚಿತ್ರಸೇನನಿಗೆ ತನ್ನ ಒಪ್ಪಿಗೆಯನ್ನು ತಿಳಿಸಿ ಕಳುಹಿಸಿದಳು. ಇತ್ತ ಆಕೆ "ಮಹೋತ್ಸವದಿ ನಾರಾಯಣನ ಮೈದುನನ ಬರೆದಳು ಚಿತ್ತಭಿತ್ತಿಯಲಿ"[೭] ಎನ್ನುತ್ತಾನೆ ಕವಿ. ಆಕೆ ಶೃಂಗಾರಪೂರಿತಳಾಗಿ ಬೆಳಗುವ ಚೆಲುವೆಯರ ಸಂಗಡ ಅರ್ಜುನನ ಅರಮನೆಗೆ ಬರುತ್ತಾಳೆ. ಆಕೆಯನ್ನು ಕಂಡ ಅರ್ಜುನ ಇತ್ತ ಬಿಜಯ ಮಾಡಲು ಕಾರಣವೇನು?, ಸುರೇಂದ್ರನ ಮಾನಿನಿಯರು ನಮಗೆ ಅಭಿವಂದನೀಯರು. ನಾವು ಕೃತಾರ್ಥರಾಗಿದ್ದೇವೆ. ನಿಮಗೆ ನಾನು ಮಗ. ಉಪಚಾರವೇಕೆ? ಏನಪ್ಪಣೆ? ಏನಾಗಬೇಕೆಂದು ಅಪ್ಪಣೆ ಮಾಡಿ ಎಂದು ಪ್ರಾರ್ಥಿಸಲು

"ನುಡಿಗೆ ಬೆರಗಾದಳು ಮನೋಜನ
ಸಡಗರಕೆ ತೆಕ್ಕಿದಳು ಪಾರ್ಥನ
ನಡವಳಿಗೆ ಮೆಚ್ಚಿದಳು ಬೆಚ್ಚಿದಳಂಗಜಾಸ್ತ್ರದಲಿ
ಕಡುಗಿದಳು ಖಾತಿಯಲಿ ಲಜ್ಜೆಯ
ಬಿಡೆಯದಲಿ ಭಯಗೊಂಡಳಂಗನೆ
ಮಿಡುಕಿದಳು ವಿವಿಧಾನುಭಾವದ ರಸದ ಭಂಗಿಯಲಿ"[೮]

ಕುಮಾರವ್ಯಾಸ ಶಕ್ತ ಕವಿ ಎಂಬುದಕ್ಕೆ ಈ ಪದ್ಯ ಉತ್ತಮ ಉದಾಹರಣೆ. ಊರ್ವಶಿಯ ಮನದಲ್ಲಿ ಏಕಕಾಲದಲ್ಲಿ ಉದ್ಭವಿಸಿದ ಸಂಕಟ, ಮೆಚ್ಚಿಕೆ, ಅಂಗಜನ ಬಾಣದ ಪೆಟ್ಟಿನ ನೋವು, ಭಯ, ಕೋಪ, ಲಜ್ಜೆಯ ಭಾವಗಳನ್ನೆಲ್ಲ ಒಂದೇ ಪದ್ಯದಲ್ಲಿ ಕವಿ ಹಿಡಿದಿಟ್ಟಿದ್ದಾನೆ. ಅರ್ಜುನನ ಆ

ಮಾತುಗಳಿಗೆ ಬೆರಗಾದಳು. ಮನ್ಮಥನ ಸಡಗರಕ್ಕೆ ಸಿಕ್ಕಿ ಸಂಕಟಪಟ್ಟಳು. ಆ ಸಮಯದಲ್ಲಿನ ಪಾರ್ಥನ ನಡವಳಿಕೆಗೆ ಮೆಚ್ಚಿದಳು. ಅದೇ ರೀತಿ ಅಂಗಜಾಸ್ತ್ರದಿಂದ ಬೆಚ್ಚಿದಳು. ಭಯಪಟ್ಟಳು, ಖಾತಿಯಲಿ ಕುದಿದಳು. ಲಜ್ಜೆಯ ಭಾವದ ಭಂಗಿಯಲಿ ಮಿಡುಕಿದಳು ಎನ್ನುತ್ತಾನೆ ಕವಿ. ಆಕೆಯ ಮನದಲ್ಲಿ ಉದ್ಭವಿಸಿದ ಸಂಘರ್ಷಗಳನ್ನು ಕವಿ ಒಂದೇ ಪದ್ಯದಲ್ಲಿ ಸಮರ್ಥವಾಗಿ ಅಭಿವ್ಯಕ್ತಪಡಿಸಿದ್ದಾನೆ. ಕವಿ ಮುಂದಿನ ಪದ್ಯದಲ್ಲಿ ಆಕೆಯ ತೊಳಲಾಟವನ್ನು ಚಿತ್ರಿಸಿದ್ದಾನೆ.

"ಏಕೆ ನುಡಿದನೊ ಚಿತ್ರಸೇನನ
ದೇಕೆ ನಾ ಕೈಕೊಂಡೆನೆತ್ತಣ
ಕಾಕು ಮೂಳಗೆ ಕೋಳು ಹೋದೆನೊ ಕಾಮನೆಂಬವಗೆ
ಲೋಕ ವರ್ತಕವಲ್ಲದಿವನನ
ದೇಕೆ ವಿಧಿ ನಿರ್ಮಿಸಿದನೋ ನಾ
ನೇಕೆ ನರನೇಕೆನುತ ಸುಯ್ದಳು ಬೈದು ಕಮಲಜನ"[೯]

ಆಕೆ ತನ್ನಷ್ಟಕ್ಕೆ ತಾನೆ ಆ ಸಂದರ್ಭದ ಅಂತರಾವಲೋಕನವನ್ನು ಮಾಡಿಕೊಳ್ಳುತ್ತಾಳೆ. ಈ ಕಾರ್ಯಕ್ಕಾಗಿ ಚಿತ್ರಸೇನನು ನನ್ನ ಬಳಿ ಏಕೆ ನುಡಿದನೋ? ನಾನೇಕೆ ಒಪ್ಪಿಕೊಂಡನೋ? ಕಾಕು ಮೂಳನಾದ ಕಾಮನೆಂಬುವನಿಗೆ ನಾನೇಕೆ ವಶವಾದೆನೋ, ಲೋಕದ ನಡವಳಿಕೆಗಳನ್ನು ಅನುಸರಿಸಿ ವರ್ತಿಸದ ಇವನನ್ನೇಕೆ ವಿಧಿಯು ನಿರ್ಮಿಸಿದನೋ, ನಾನೇಕೆ? ಈ ನರನೇಕೆ ಎಂದು ನೊಂದುಕೊಳ್ಳುತ್ತ ಕಮಲಜನನ್ನು ಬೈದು ನಿಟ್ಟುಸಿರು ಬಿಟ್ಟಳು.

"ವಿಕಳಮತಿಯೋ ಮೇಣಿವ ನಪುಂ
ಸಕನೊ ಜಡನೋ ಶ್ರೋತ್ರಿಯನೋ ಬಾ
ಧಕನೊ ಖಳನೋ ಖೂಳನೋ ಮಾನವ ವಿಕಾರವಿದೊ
ವಿಕಟ ತಪಸಿನ ದೇವ ದೈತ್ಯರ
ಮಕುಟವಾಂತುದು ವಾಮ ಪಾದವ
ನಕಟ ಕೆಟ್ಟೆನಲಾಯೆನುತ ಕರಗಿದಳು ನಳಿನಾಕ್ಷಿ"[೧೦]

ಇವನೇನು ಬುದ್ಧಿಗೆಟ್ಟವನೋ ಅಥವಾ ಇವನು ನಪುಂಸಕನೋ, ಜಡನೋ ಶ್ರೋತ್ರಿಯನೋ, ಭಾಧಕನೊ, ಖಳನೋ, ಮಾನವ ವಿಕಾರವಾಗಿರಬಹುದೇ ವಿಕಟ ತಪಸಿನ ದೇವ ದೈತ್ಯರ ಮಕುಟವಾಂತುದುವಾಮ ಪಾದವ, ಅಯ್ಯೋ ಕೆಟ್ಟೆನಲ್ಲಾ ಎನ್ನುತ್ತ ನಳಿನಾಕ್ಷಿಯು ಚಿಂತೆಯಲ್ಲಿ ತಾನು ಕರಗಿದಳು.

"ಎಲವೊ ರಾಯನ ಹೇಳಿಕೆಯಲಂ
ಡಲೆದನೆನ್ನನು ಚಿತ್ರಸೇನಕ
ನಲುಗಿ ನಟ್ಟವು ಕಾಮಶರವೆನ್ನಂತರಂಗದಲಿ

ಒಲಿದು ಬಂದಬಲೆಯರ ಟೆಕ್ಕರಿ
ಗಳೆವುದೇ ವಿಟ ಧರ್ಮವಕಟಾ
ತಿಳಿಯಲಾ ತಾನಾವಳೆಂಬುದನೆಂದಳಿಂದುಮುಖಿ"[೧೧]

ರಾಯನ ಹೇಳಿಕೆಯಿಂದಾಗಿ ಒತ್ತಾಯಪಡಿಸಿದ ಚಿತ್ರಸೇನಕನ ಮಾತಿನಿಂದ ನನ್ನಂತರಂಗದಲ್ಲಿ ಕಾಮಶರಗಳು ನಾಟಿವೆ. ನಾನು ನಿನಗೆ ಒಲಿದು ಬಂದಿದ್ದೇನೆ. ಒಲಿದು ಬಂದ ಹೆಣ್ಣನ್ನು ಕಡೆಗಣಿಸುವುದು ವಿಟ ಧರ್ಮವಲ್ಲ. ಅಲ್ಲದೆ ನಾನು ಯಾರು ಎಂಬುದನ್ನು ತಿಳಿದು ನೋಡು ಎಂದಳು ಊರ್ವಶಿ. ಇಲ್ಲಿ ಆಕೆ ಹೇಳುವ 'ಒಲಿದು ಬಂದ ಹೆಣ್ಣನ್ನು ಟೆಕ್ಕರಿಗಳೆವುದೇ ವಿಟಧರ್ಮವ' ಎಂದು ಕೇಳುವ ಪ್ರಶ್ನೆ ಪ್ರಮುಖವಾದುದು. ಹೆಣ್ಣು ತಾನಾಗಿಯೇ ಒಲಿದು ಬಂದಾಗ ಅವಳನ್ನು ಸ್ವೀಕರಿಸುವುದು ಒಳಿತು ಎಂಬ ಭಾವವಿದೆ ಇಲ್ಲಿ.

ಈ ಮಾತುಗಳಿಗೆ ಅರ್ಜುನನು ಶಿವ ಶಿವ ಎಂದು, ಕಾಮನ ಬವಣೆಯಿಂದ ಈ ಮಾತುಗಳನ್ನಾಡುತ್ತಿರುವಿರಿ. ನೀನು ನಮ್ಮ ವಂಶೋದ್ಭವಕ್ಕೆ ಜನನನಿಯಲ್ಲವೇ ಎಂದು ವಿನಯದಿಂದ ನುಡಿದು ನೀನು ಪೂರ್ವದಲ್ಲಿ ನಮ್ಮ ಪುರೂರವನ ಸತಿ. ಆಗ 'ಆಯು' ನಿನಗೆ ಹುಟ್ಟಿದ. ಆತನಲ್ಲಿ ನಹುಷ ಉದಿಸಿದ. ಇಂತಹ ವೀರರ ರಾಜ ಪರಂಪರೆಯಲ್ಲಿ ನಾನು ಜನಿಸಿದ್ದೇನೆ. ನಮ್ಮನ್ನು ನೀವು ವಿಚಾರಿಸಲಿಲ್ಲವಲ್ಲ ಎನ್ನುತ್ತಾನೆ ಅರ್ಜುನ. ಈ ಮಾತುಗಳಿಗೆ ಊರ್ವಶಿಯು

"ಪ್ರಣವದರ್ಥ ವಿಚಾರವೆತ್ತಲು
ಗಣಿಕೆಯರಮನೆಯ ಸ್ವರಾಕ್ಷರ
ಗಣಿತ ಲಕ್ಷಣವೆತ್ತ ರತಿಕೇಳೀ ವಿಧಾನದಲಿ
ಬಣಗು ಭಾರತ ವರ್ಷದವದಿರ
ಭಣಿತ ನಮ್ಮಿಾ ದೇವಲೋಕಕೆ
ಸಣಬಿನಾರವೆ ಚೈತ್ರರಥದೊಳಗೆಂದಳಿಂದುಮುಖಿ"[೧೨]

"ಪ್ರಣವದ ಅರ್ಥ ವಿಚಾರವೆತ್ತ, ರತಿಕೇಳೀ ವಿಧಾನದಲ್ಲಿ ಗಣಿಕೆಯರ ಮನೆಯ ಸ್ವರಾಕ್ಷರ ಗಣಿತ ಲಕ್ಷಣವೆತ್ತ? ಬಣಗು ಭಾರತ ವರ್ಷದವರ ನಡವಳಿಕೆಯ ಮಾತು ನಮ್ಮ ಈ ದೇವಲೋಕಕ್ಕೆ ಹೊಂದತಕ್ಕದ್ದಲ್ಲ; ಚೈತ್ರ ರಥದೊಳಗೆ ಶಣಬಿನ ತೋಟವಿದ್ದಂತೆ"[೧೩] ಎಂಬ ಊರ್ವಶಿಯ ಮಾತುಗಳು ಗಮನಿಸುವಂತಹವು. ಬಣಗು ಭಾರತ ವರ್ಷದವರ ನಿಮ್ಮ ಸಂಬಂಧಗಳ ನಡವಳಿಕೆಯ ಮಾತು ನಮ್ಮ ಈ ದೇವಲೋಕಕ್ಕೆ ಹೊಂದತಕ್ಕದ್ದಲ್ಲ ಎಂಬುದು ಮಹತ್ವವಾದುದು.

"ಅಯ್ಯನಯ್ಯನ ನಿಮ್ಮವರ ಮು
ತ್ತಯ್ಯನಾತನ ಭಾವಮೈದುನ
ನಯ್ಯನಗ್ರಜರನುಜರೆಂಬೀ ಜ್ಞಾತಿ ಬಾಂಧವರ

ಕೈಯಲರಿಗಳ ಹೊಯ್ದು ಶಿರನರಿ
ದುಯ್ಯಲಾಡಿದವರ್ಗೆ ಮೇಣ್ ಮುಖ
ದಯ್ಯಗಳಿಗಾನೊಬ್ಬಳೆಂದಳು ನಗುತ ನಳಿನಾಕ್ಷಿ"[೧೪]

"ಅಯ್ಯ, ಅವನಯ್ಯ, ಮುತ್ತಯ್ಯ, ಆತನ ಭಾವ, ಮೈದುನ, ಅಗ್ರಜ, ಅನುಜ ಎಂಬ ಈ ಮೊದಲಾದ ಜ್ಞಾತಿ ಬಾಂಧವ್ಯದ ಲೆಕ್ಕವಿಲ್ಲ ನಮಗೆ. ಇವರು ಯಾರೇ ಆಗಲಿ ರಣರಂಗದಲಿ ಅರಿಗಳನ್ನು ಕೈಯಲ್ಲಿ ಹೊಡೆದು ಶಿರವನ್ನು ಕತ್ತರಿಸಿ ಆ ಅರಿಶಿನದ ಉಯ್ಯಾಲೆಯಾಡಿದವರಿಗೆ ಮತ್ತು ಮುಖದಯ್ಯಗಳಿಗೆ ದೊರೆಯಲಿರುವವಳು ನಾನೊಬ್ಬಳೇ!"[೧೫] ಎಂಬ ಊರ್ವಶಿಯ ಮಾತುಗಳ ಹಿಂದಿನ ಮನಸ್ಥಿತಿ ತನ್ನನ್ನು ಸೀಕರಿಸುವಂತೆ ಅರ್ಜುನನ ಮನಸ್ಸನ್ನು ಒಪ್ಪಿಸುವುದೇ ಆಗಿದೆ. ಅಲ್ಲದೆ ರಣಭೂಮಿಯಲ್ಲಿ ಶತ್ರು ಮುಖ್ಯನೇ ಹೊರತು ಸಂಬಂಧವಲ್ಲ ಎಂಬಂತೆ, ಇಲ್ಲಿ ನನ್ನ ಒಲುಮೆ ಮುಖ್ಯವೇ ಹೊರತು ನಿನ್ನ ಪೂರ್ವದ ಸಂಬಂಧಗಳಲ್ಲ ಎಂಬ ಭಾವ ಆಕೆಯದ್ದಾಗಿದೆ. ಅಂದರೆ ತನ್ನನ್ನು ಸ್ವೀಕರಿಸು ಎಂಬ ಒಳ ಅರ್ಥವನ್ನು ಈ ಮಾತುಗಳ ಮೂಲಕ ತಿಳಿಸುತ್ತಾಳೆ. ಇದಕ್ಕೆ ಅರ್ಜುನನು ಸಮ್ಮತಿಸದಿದ್ದಾಗ ಆಕೆಯ ಮಾತುಗಳು ಕ್ರಮೇಣ ಒರಟು ಸ್ವರೂಪಕ್ಕೆ ತಿರುಗುತ್ತವೆ.

"ಮರೆಯ ಮಾತಂತಿರಲಿ ಸಾಕದ
ಮರೆದು ಕಳೆ ಮಾನಿನಿಯರಿಚ್ಚೆಯ
ನರಿಯದವನು ಸುರೇಂದ್ರನಾಗಲಿ ಚಂದ್ರನಾಗಿರಲಿ
ಕುರಿ ಕಣಾ ಫಡ ಖೂಳ ನೀನೆಂ
ತರಿವೆಯೆನೆ ನಡನಡುಗಿ ಕೈ ಮುಗಿ
ದೆರಗಿ ಮಗುಳೀ ಮಾತನೆಂದನು ಪಾರ್ಥನೂರ್ವಶಿಗೆ"[೧೬]

ಊರ್ವಶಿ ಇಲ್ಲಿ ನಿಷ್ಠೂರವಾಗಿಯೆ ನುಡಿಯುತ್ತಾಳೆ. ಮಾನಿನಿಯರ ಇಚ್ಚೆಯನ್ನು ಅರಿಯದವನು ಸುರೇಂದ್ರನೇ ಆಗಿರಲಿ, ಚಂದ್ರನೇ ಆಗಿರಲಿ ಅವನು ಕುರಿ ಕಣಯ್ಯಾ!. ಅಯ್ಯೋ ಖೂಳ ನೀನು ಇದನ್ನು ಹೇಗೆ ಅರಿತುಕೊಳ್ಳುವೆಯೋ ಎಂದು ನುಡಿದಳು. ಇಲ್ಲಿ ಊರ್ವಶಿಯ ಮಾತುಗಳಲ್ಲಿ ಆಕೆಯ ಬಯಕೆ, ಅದನ್ನು ಈಡೇರಿಸದ ಅರ್ಜುನನ ಬಗೆಗಿನ ವ್ಯಗ್ರತೆ, ಕೋಪದ ಭಾವಗಳು ಸ್ಪಷ್ಟವಾಗಿ ತಿಳಿಯುತ್ತವೆ.

ಈ ಮಾತುಗಳಿಗೆ ಅರ್ಜುನ ಕೈಮುಗಿದು ನನ್ನದು ಮನುಷ್ಯ ಶರೀರ. ಇದನ್ನು ಧರಿಸಿರುವವರೆಗೂ ಇದರ ಧರ್ಮಕ್ಕನುಗುಣವಾಗಿ ನಡೆಯಬೇಕು; ತಪ್ಪಬಾರದು ಎಂದು ಹೇಳಲು ಊರ್ವಶಿಯು

"ಅಹುದಹುದಲೇ ಶ್ರೌತಪಥದಲಿ
ಬಹಿರಿ ನೀವೇ ಸ್ಮಾರ್ತವಿಧಿ ಸ
ನ್ನಿಹಿತರೆಂಬುದನರಿಯದೇ ಮೂಜಗದ ಜನವೆಲ್ಲ
ಮಹಿಳೆಯೊಬ್ಬಳೊಳೈವರೊಡಗೂ
ಡಿಹರು ನೀವೇನಲ್ಲಲೇ ನೀ
ಸ್ಪೃಹರು ನೀವ್ ನಮ್ಮಲ್ಲಿ ಹರಹರಯೆಂದಳಿಂದುಮುಖಿ"[೧೭]

ಊರ್ವಶಿ ಇಲ್ಲಿ ಅರ್ಜುನನನ್ನು ಹಂಗಿಸಿ ಮಾತನಾಡುತ್ತಾಳೆ. ಹೌದು ಹೌದು, ನೀವು ಶ್ರೌತಪಥದಲ್ಲಿ ನಡೆಯುವವರು. ಸ್ಮಾರ್ತವಿಧಿಗಳನ್ನು ಆಚರಿಸುವವರು. ಇದು ಮೂರು ಲೋಕಗಳಿಗೂ ತಿಳಿದಿಲ್ಲವೇನು! ಮಹಿಳೆಯೊಬ್ಬಳಲ್ಲಿ ಐವರು ಒಡಗೂಡಿರುವವರು ನೀವಲ್ಲವೇನು? ನಮ್ಮಲ್ಲಿ ನಿಸ್ಪೃಹರು ನೀವು ಎಂದು ನುಡಿಯುತ್ತಾಳೆ.

ಅರ್ಜುನನು ತಾಯಿಯ ಮಾತಿನಂತೆ ಐವರಿಗೂ ಕಮಲದಳಾಯತಾಕ್ಷಿಯ ಕೂಟವಾಯಿತು. ಅದರಲ್ಲೇನು ತಪ್ಪು? ಜನನಿಯ ನುಡಿ ಅಲಂಘ್ಯವಲ್ಲವೆ? ಅಲ್ಲದೆ ಕಾಮಸುಖದ ಸೆಳೆತಕ್ಕೆ ಬಿದ್ದು ದುರ್ಗತಿಗೆ ದುಮುಕುವವನು ನಾನಲ್ಲ ಎನ್ನುತ್ತಾನೆ. ಅದಕ್ಕೆ ಊರ್ವಶಿಯು

"ತಾಯ ನೇಮದಲೈವರಿಗೆ ಕಮ
ಲಾಯತಾಕ್ಷಿಯ ಕೂಟವೇ ಸುರ
ರಾಯ ನಿಮ್ಮಯ್ಯನು ವಿಲಂಘ್ಯವೆ ನಿನಗೆ ಪಿತೃವಚನ
ರಾಯನಟ್ಟಲು ಬಂದೆನೀ ಕುಸು
ಮಾಯುಧನ ಕಗ್ಗೊಲೆಯ ಕೆದರುವು
ಪಾಯವನು ನೀ ಬಲ್ಲೆಯೆಂದಳು ವನಿತೆ ವಿನಯದಲಿ"[೧೮]

ತಾಯಿಯ ಮಾತಿನಂತೆ ಐವರಿಗೆ ಕಮಲಾಯತಾಕ್ಷಿಯ ಕೂಟವಾಯಿತೆ? ಸುರರಾಯನು ನಿಮ್ಮ ತಂದೆ. ಅವನ ಪಿತೃವಚನ ನಿನಗೆ ಉಲ್ಲಂಘಿಸಬಹುದಾದದ್ದೆ? ಎಂದು ಪ್ರಶ್ನಿಸುತ್ತಾಳೆ. ಅಲ್ಲದೆ ರಾಯನು ಕಳುಹಿಸಿದ್ದರಿಂದ ಬಂದೆ. ಈ ಕುಸುಮಾಯುಧನ ಕಗ್ಗೊಲೆಗೆ ನಾನು ಗುರಿಯಾದೆ. ಇದರಿಂದ ನನ್ನನ್ನು ರಕ್ಷಿಸುವ ಉಪಾಯ ನಿನಗೆ ಗೊತ್ತಿದೆ ಎನ್ನುತ್ತಾಳೆ. ಅಲ್ಲದೆ

"ಸರಸಿಜದ ಮಧು ಮಧುಕರನನನು
ಕರಿಸಿದೊಡೆ ಚಂದ್ರಿಕೆ ಚಕೋರನ
ವರಿಸಿದರೆ ನಿಧಿಲಕ್ಷ್ಮಿ ಸುಳಿದರೆ ನಯನ ವೀಧಿಯಲಿ
ಗರುವೆಯರು ಮೇಲಿಕ್ಕಿ ಪುರುಷನ
ನರಸಿದರೆ ಜಾರುವರೆ ಸುಡಲಾ
ಸರಸಿಜವನಾ ಚಂದ್ರಿಕೆಯನಾ ನಿಧಿಯನಾ ವಧುವ"[೧೯]

ಸರಸಿಜದ ಮಧುಮಧುಕರನನ್ನು ಅನುಸರಿಸಿಕೊಂಡು ಹೋದರೆ, ಚಂದ್ರಿಕೆಯು ಚಕೋರನನ್ನು ವರಿಸಿದರೆ ನಿಧಿ ಲಕ್ಷ್ಮಿಯ ನಯನ ಮಾರ್ಗದಲ್ಲಿ ತಾನಾಗಿಯೇ ಸುಳಿದು ಬಂದರೆ, ಗರುವೆಯರು ತಾವಾಗಿಯೆ ಒಲಿದು ಮೇಲಿಕ್ಕಿ ಪುರುಷನನ್ನು ಅರಸಿಕೊಂಡು ಬಂದರೆ ನಿರಾಕರಿಸಿ ಬೇಡವೆಂದು ಜಾರುವುದು ಸರಿಯೆ? ಅಂತಹವನನ್ನು ಸುಡಬೇಕೆನ್ನುತ್ತಾಳೆ. ಅಲ್ಲದೆ

"ತಿಳುಹಿದೊಡೆ ಸುರ ಲೋಕದವರತಿ
ಗಳಹೆಯರಲಾಯೆಂಬೆ ಮನ್ಮಥ
ಖಳ ಕಣಾ ನಿಷ್ಕರುಣೀ ನೀ ಸೌಭಾಗ್ಯಗರ್ವದಲಿ
ಬಲುಮೆ ಬಿದ್ದುದು ವಾಸಿಯಲಿ ಕಂ
ದೊಳಸುಗೊಂಡುದು ಕಾಮಶರ ಮನ
ವಳುಕೆ ಕೆಡಹಿತು ವಿರಹತಾಪದಲೆಂದಳಿಂದುಮುಖಿ"[೨೦]

ನಿನಗೆ ವಿವರಿಸಿ ತಿಳಿಸಲು ಬಂದರೆ ದೇವಲೋಕದವರು ಅತಿಗಳಹೆಯರು ಎನ್ನುತ್ತಿ. ಮನ್ಮಥನು ಖಳನು ಕಣಯ್ಯ ನೀನು ಸೌಭಾಗ್ಯದ ಗರ್ವದಿಂದ ಕರುಣೆ ಇಲ್ಲದವನಾಗಿದ್ದೀಯೆ. ನಿನ್ನಯ ಖ್ಯಾತಿಯನ್ನು ಕೇಳಿ ನಿನ್ನ ಮೇಲೆ ಒಲುಮೆಯುಂಟಾಗಿದೆ. ಕಾಮಶರ ಬಂದು ನನ್ನನ್ನು ನಾಟಿದೆ. ಅದು ಮನಸ್ಸು ಅಳುಕಿ ಹೋಗುವಂತೆ ವಿರಹದ ತಾಪದಲ್ಲಿ ಕೆಡವಿದೆ ಎಂದು ಹೇಳುತ್ತಾಳೆ. ಇಲ್ಲೆಲ್ಲ ಊರ್ವಶಿ ತನ್ನ ಮನದಲ್ಲಿ ಮೂಡಿರುವ ಆಸೆ ಹಾಗೂ ಅದರಿಂದ ತನಗಾಗುತ್ತಿರುವ ಮಾನಸಿಕ ಹಾಗೂ ದೈಹಿಕ ಕ್ಷೋಭೆಗಳನ್ನು ವಿವರಿಸುತ್ತಿರುವುದು ವೇದ್ಯವಾಗುತ್ತದೆ.

ಈ ಮಾತುಗಳಿಗೆ ಅರ್ಜುನನು ನನ್ನನ್ನು ಕಾಡಬೇಡಿ ನಿಮ್ಮೊಡನೆ ಪ್ರತಿಯಾಗಿ ವಾದ ಮಾಡಲಾರೆ. ತಾಯಿ ಮಕ್ಕಳನ್ನು ನೋಡ ಬಂದರೆ ಬೇರೇ ಭಾವನೆಯ ಕೆಟ್ಟ ಮಾತುಗಳನ್ನು ಆಡುತ್ತಾರೆಯೇ ಬಲ್ಲವರು? ನೀವಿನ್ನು ಬಿಜಯ ಮಾಡಿರಿ ಎನ್ನುತ್ತಾನೆ. ಇದರಿಂದ ರೋಷಗೊಂಡ ಊರ್ವಶಿಯ ಸ್ಥಿತಿಯನ್ನು ಕವಿ ಹೀಗೆ ಚಿತ್ರಿಸಿದ್ದಾನೆ.

"ರೋಷವೀರೆಲೆಯಾಯ್ತು ಲಜ್ಜೆಯ
ಮಿಾಸಲಳಿದುದು ಬಲು ವಿಧದ ಬಹು
ವಾಸಿಗಳು ಪಲ್ಲವಿಸಿದವು ಕೆಲ್ಲವಿಸಿತನುತಾಪ
ಆಶೆ ಪೈಸರವೋಯ್ತು ಕಡು ಝುಳ
ಸೂಸಿದುದು ಸುಯ್ಲಿನಲಿ ಕಂಗಳು
ಕೇಸುರಿಯ ಮುಕ್ಕುಳಿಸಿದವು ಹೆಕ್ಕಳಿಸಿ ಕಾಮಿನಿಯ"[೨೧]

ಊರ್ವಶಿಗೆ ಅರ್ಜುನನ ಮಾತಿನಿಂದ ರೋಷವು ಚಿಗುರಿ ಎರಡೆಲೆಯಾಯಿತು. ಲಜ್ಜೆಯ ಮೀಸಲಳಿಯಿತು. ಬಲು ವಿಧದ ಬಹುವಾಸಿಗಳು ಪಲ್ಲವಿಸಿದವು. ಅನುತಾಪವು ಕಳವಳಕ್ಕೀಡು ಮಾಡಿತು. ಆಸೆಯು ಅಡಗಿತು. ನಿಟ್ಟುಸಿರಿನಲ್ಲಿ ಕಡುಝುಳವು ಸೂಸಿತು. ಕಣ್ಣುಗಳು ಕೇಸುರಿಯನ್ನು ಮುಕ್ಕುಳಿಸಿದವು. ಇಲ್ಲಿ ಕವಿ ಊರ್ವಶಿ ಕೋಪಗೊಂಡ ಪರಿಯನ್ನು ವರ್ಣಿಸುತ್ತಿದ್ದಾನೆ. ಅಲ್ಲದೆ,

"ಸೊಂಪಡಗಿತು ಮುಖೇಂದು ತನುಲತೆ
ಕಂಪಿಸಿದುದಡಿಗಡಿಗೆ ಮೈ ತನಿ
ಗಂಪಿನಲಿ ಮಘಮಘಿಸಿತಮಲ ಸ್ವೇದ ಸಲಿಲದಲಿ

ತಂಪಿನಲಿ ಶಿಖಿ ಮಧುರದಲಿ ಕಟು
ನುಂಪಿನಲಿ ಬಿರಿಸಮೃತದಲಿ ವಿಷ
ಗುಂಪಿನಲಿ ನೆಲೆಯಾದವೋಲ್ ಸತಿಗಾಯ್ತು ಘನರೋಷ"[೨೨]

ಅವಳ ಮುಖದಲ್ಲಿನ ಸೊಗಸು ಅಡಗಿತು, ತನುಲತೆಯು ಅಡಿಗಡಿಗೆ ಕಂಪಿಸಿತು. ಮೈಬೆವರಿ ಆ ಅಮಲ ಸ್ವೇದದ ದನಿ ಗುಂಪಿನಲ್ಲಿ ಮಘಮಘಿಸಿತು. ತಂಪಿನಲ್ಲಿ ಬೆಂಕಿ, ಮಧುರದಲಿ ಕಟುತ್ವ, ನುಂಪಿನಲ್ಲಿ ಬಿರಿಸು, ಅಮೃತದಲ್ಲಿ ವಿಷ ನೆಲೆಯಾದ ಹಾಗೆ ಒಲಿದು ಬಂದಿದ್ದಂತಹ ಆಕೆಗೆ ಘನರೋಷ ಉಕ್ಕಿ ಬಂದಿತು.

"ಕೆತ್ತಿದವು ತುಟಿ ಕದಪಿನಲಿ ಕೈ
ಹತ್ತಿಸುತ ತೂಗಿದಳು ಶಿರವನು
ತತ್ತರೋಷಾಯುಧವ ಮಸೆದಳು ಧಾರೆಗಂಗಳಲಿ
ಎತ್ತಿದುಬ್ಬೇಗದ ವಿಕಾರದ
ಚಿತ್ತ ಬುದ್ಧಿ ಮನಂಗಳಾತ್ಮನ
ಚೊತ್ತಿಸಿದವದ್ಭುತದಹಂಕಾರದಲಿ ಕಾಮಿನಿಯ"[೨೩]

ಊರ್ವಶಿಯ ತುಟಿಗಳು ಅದುರಿದವು. ಕದಪಿನಲ್ಲಿ ಕೈ ಹತ್ತಿಸುತ್ತ ತಲೆಯನ್ನು ತೂಗಿದಳು. ನೀರು ತುಂಬಿದ ಕಣ್ಣುಗಳಲ್ಲಿ ರೋಷಾಯುಧವನ್ನು ಮಸೆದಳು. ಉಕ್ಕಿದ ಉದ್ವೇಗದ ವಿಕಾರದ ಚಿತ್ತ ಬುದ್ಧಿ ಮನಸ್ಸುಗಳು ಕಾಮಿನಿಯ ಆತ್ಮನನ್ನು ಅದ್ಭುತವಾದ ಅಹಂಕಾರದಲ್ಲಿ ಕಟ್ಟಿ ಹಾಕಿದವು. ಇವೆಲ್ಲವು ಊರ್ವಶಿಯಲ್ಲಾಗುತ್ತಿರುವ ಭಾವವ್ಯಾಪಾರಗಳಾಗಿವೆ.

"ಎಲವೊ ಭಂಡರ ಭಾವ ಖೂಳರ
ನಿಳಯ ಖಳರಧಿನಾಥ ವಂಚಕ
ತಿಲಕ ಗಾವಿಲರೊಡೆಯ ಬಂಧುವೆ ದುಷ್ಟ ನಾಯಕರ
ಎಲೆ ಮರುಳೆ ತಾನಾವಳೆಂಬುದ
ತಿಳಿಯಲಾ ನೀನಾವನೆಂಬುದ
ನಿಳೆಯರಿಯದೇ ಭಂಡ ಫಡ ಹೋಗೆಂದಳಿಂದುಮುಖಿ"[೨೪]

ಊರ್ವಶಿ ಅರ್ಜುನನಿಗೆ ಬಿರುಸಾಗಿಯೆ ನುಡಿಯುತ್ತಾಳೆ. ಎಲವೋ ಭಂಡರ ಭಾವ, ಖೂಳರ ನಿಲಯಾ, ಖಳರ ಅಧಿನಾಥ, ವಂಚಕ ತಿಲಕ, ಗಾವಿಲರ ಒಡೆಯ, ದುಷ್ಟ ನಾಯಕರ ಬಂಧುವೆ, ಎಲೆ ಮರುಳೇ ನಾನು ಯಾರೆಂಬುದನ್ನು ನೀನು ತಿಳಿಯೆಯಲ್ಲಾ, ನೀನು ಯಾವನೆಂಬುದನ್ನು ಈ ಭೂಮಿ ಅರಿಯದೇನು? ಭಂಡಾ ಫಡ ಹೋಗು ಎಂದಳು. ಈ ಮಾತುಗಳು ಊರ್ವಶಿಯ ಮನ ಎಷ್ಟು ವ್ಯಗ್ರಗೊಂಡಿದೆ ಎಂಬುದನ್ನು ತಿಳಿಸುತ್ತವೆ. ಜೊತೆಗೆ ಅರ್ಜುನನನ್ನು ಕುರಿತು ಬಳಸುವ ಶಬ್ದಗಳಲ್ಲಡಗಿರುವ ಆಕೆಯ ಮನದ ಸಂಘರ್ಷದ ಭಾವಗಳು ಅರಿವಾಗುತ್ತವೆ.

"ಒಲಿದು ಬಂದವರಾವು ಸೊಬಗಿನೊ
ಳೊಲಿಸಿ ಮರುಗಿಪ ಮಿಂಡ ನೀನತಿ
ಸುಲಭರಾವ್ ದುರ್ಲಭನು ನೀ ದೇವೇಂದ್ರ ಕಟಕದಲಿ
ಎಲೆ ನಪುಂಸಕ ಗಂಡು ವೇಷದ
ಸುಳಿವು ನಿನಗೇಕೆನುತ ಸತಿ ಕಳ
ವಳಿಸಿ ಕರವೆತ್ತಿದಳು ಹಿಡಿ ಹಿಡಿ ಶಾಪವಿದೆಯೆನುತ"[೨೫]

ಒಲಿದು ಬಂದವಳು ನಾನು. ಸೊಬಗಿನಲ್ಲಿ ಒಲಿಸಿ ಮರುಗಿಸುವ ಮಿಂಡನು ನೀನು. ಈ ದೇವೇಂದ್ರ ಕಟಕದಲ್ಲಿ ಅತಿ ಸುಲಭರು ನಾವು, ಅತಿದುರ್ಲಭನು ನೀನು. ಎಲೆ ನಪುಂಸಕ; ಗಂಡುವೇಷದ ಸುಳಿವು ನಿನಗೇತಕ್ಕೆ? ಎನ್ನುತ್ತ ನಿಂದಿಸಿ ಊರ್ವಶಿಯು ಅತಿಯಾಗಿ ಕಳವಳಗೊಂಡು ಹಿಡಿ ಹಿಡಿ ಶಾಪವನ್ನು ಎಂದು ಕೈಯೆತ್ತಿದಳು. ತನ್ನ ಮನದ ಆಸೆ ಈಡೇರಿಸಲಾಗದ ನಪುಂಸಕ ನೀನು? ನಿನ್ನಂತಹವನು ಶಾಪಕ್ಕೆ ಯೋಗ್ಯನು ಎಂಬ ಭಾವ ಇಲ್ಲಿದೆ.

"ತುಳುಕಿತದ್ಭುತ ರೋಷ ಸುಯ್ಲಿನ
ಝಳ ಹೊಡೆದು ಮೂಗುತಿಯ ಮುತ್ತಿನ
ಬೆಳಕು ಕುಂದಿತು ಕುಂದಿತಮಳಚ್ಛವಿ ಮುಖಾಂಬುಜದ
ಹೊಳೆ ಹೊಳೆವ ಕೆಂದಳದ ಸೆಳ್ಳುಗು
ರೊಳ ಮಯೂಖದ ಮಣಿಯ ಮುದ್ರಿಕೆ
ಗಳ ಮರೀಚಿಯಲೆಸೆದುದೆತ್ತಿದ ಹಸ್ತವೂರ್ವಶಿಯ"[೨೬]

ಶಾಪವನ್ನು ಕೊಡಲೆಂದು ಕೈಯೆತ್ತಿ ನಿಂತ ಊರ್ವಶಿಗೆ ಅದ್ಭುತವಾದ ರೋಷವು ತುಳುಕಿತು. ಬಿಸಿಯುಸಿರ ಝಳ ಹೊಡೆದ ಮೂಗುತಿಯ ಮುತ್ತಿನ ಬೆಳಕು ಕುಂದಿತು. ಅಂಬುಜದಂತಹ ಮುಖದ ಕಾಂತಿ ಕಂದಿತು. ಹೊಳೆ ಹೊಳೆಯುವ ಕೆಂಬಣ್ಣದ ಅಂಗೈ, ಸೆಳ್ಳುಗುರು, ಮಯೂಖದ ಮಣಿಯ ಮುದ್ರಿಕೆಗಳು– ಇವುಗಳ ಕಾಂತಿಯಿಂದ ಅವಳು ಎತ್ತಿದ ಹಸ್ತವು ರಂಜಿಸುತ್ತಿತ್ತು. ಅಲ್ಲದೆ ಊರ್ವಶಿಯು ರಾಹು ತುಡುಕಿದ ಶಶಿಯೋ? ಎಂಬಂತೆ, ರೌದ್ರ ಸರ್ಪದ ತಲೆಯಲ್ಲಿರುವ ಮಾಣಿಕ್ಯವೋ, ಕಠಿಣವಾದ ಕಾವಲಿನಲ್ಲಿರುವ ಅಮೃತವೋ, ಕೋಪಿಸಿಕೊಂಡ ಸಿಂಹದ ಗುಹೆಯಲ್ಲಿರುವ ಮೃಗಮದವೊ, ಹಾಲಾಹಲದ ಕಜ್ಜಾಯವೋ ಎನ್ನಿಸಿ ಆ ಸುರಸತಿಯ ರೂಪು ಸುಮನೋಹರ ಭಯಂಕರವಾಯ್ತು. ಕೊನೆಗೆ ಆಕೆ ಅರ್ಜುನನಿಗೆ ಈ ರೀತಿಯಾಗಿ ಶಾಪವನ್ನು ನೀಡುತ್ತಾಳೆ.

"ನರಮೃಗಾಧಮ ನಿಮ್ಮಭಾರತ
ವರುಷ ಭೂಮಿಯೊಳೊಂದು ವರುಷಾಂ
ತರ ನಪುಂಸಕನಾಗಿ ಚರಿಸು ನಿರಂತರಾಯದಲಿ

ಹರಿಯ ಮರೆಯೊಗು ಹರನ ನೀನನು
ಸರಿಸು ನಿಮ್ಮಯ್ಯಂಗೆ ಹೇಳಿದು
ನಿರುತ ತಪ್ಪದು ಹೋಗೆನುತ ಮೊಗದಿರುಹಿದಳು ಚಪಲೆ"[೨೭]

ನರ ಮೃಗಾಧಮ ನಿಮ್ಮ ಭರತ ವರ್ಷದ ಭೂಮಿಯಲ್ಲಿ ಒಂದು ವರುಷದವರೆಗೆ ನೀನು ನಪುಂಸಕನಾಗಿ ಸಂಚರಿಸು. ಹರಿಯ ಮರೆ ಹೋಗು, ಹರನನ್ನು ನೀನು ಅನುಸರಿಸು, ನಿಮ್ಮಯ್ಯನಿಗೆ ಹೋಗಿ ಹೇಳು. ಏನು ಮಾಡಿದರೂ ಈ ಶಾಪವು ತಪ್ಪದು. ಇದು ಖಂಡಿತ ಸತ್ಯ, ಹೋಗು ಎಂದು ನುಡಿಯುತ್ತ ಮುಖವನ್ನು ತಿರುಗಿಸಿದಳು. ಪ್ರೀತಿಯಿಂದ ಆಸೆಪಟ್ಟು ಅರ್ಜುನನಲ್ಲಿಗೆ ಬಂದ ಊರ್ವಶಿ ಅಂತಿಮವಾಗಿ ಆತನಿಗೆ ನಪುಂಸಕನಾಗಿ ಒಂದು ವರ್ಷ ಕಾಲದೂಡುವಂತೆ ಶಾಪ ನೀಡುತ್ತಾಳೆ. ಇಲ್ಲಿ ಆಕೆಯ ಮನದ ದುಃಖ, ತಳಮಳಗಳು ಹಾಗೂ ತನ್ನ ಈಡೇರದ ಮನಸ್ಸಿನ ಬಯಕೆಗಳ ಭಾವ ತೀವ್ರತೆಗಳು ಕಂಡುಬರುತ್ತವೆ.

೫.೨. ಅರ್ಜುನನನ್ನು ನೋಡಿದ ಅಮರಾವತೀ ಪಟ್ಟಣದ ವೇಶ್ಯಾಸ್ತ್ರೀಯರ ಸಂಘರ್ಷಗಳು

'ವಿಕ್ರಮಾರ್ಜುನ ವಿಜಯಂ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳಲ್ಲಿನ ಹೆಣ್ಣುಗಳಲ್ಲಿ ಅರ್ಜುನನನ್ನು ನೋಡಿ ಮರುಳಾಗದವರಿಲ್ಲ. ಆತನ ರೂಪು, ಶೌರ್ಯ, ಸೌಂದರ್ಯಗಳಿಗೆ ಸೋಲದವರಿಲ್ಲ. ಮದನಲತೆ, ದ್ವಾರಾವತಿ ಪಟ್ಟಣದ ಹೆಣ್ಣುಗಳು, ಸುಭದ್ರೆ, ದ್ರೌಪದಿ, ಇಂದ್ರನ ಅಮರಾವತೀ ಪಟ್ಟಣದ ರಂಭೆ, ಊರ್ವಶಿ, ಅಪ್ಸರಾ ಸ್ತ್ರೀಯರು, ದೇವಲೋಕದ ವೇಶ್ಯಾ ಸ್ತ್ರೀಯರಾದಿಯಾಗಿ ಎಲ್ಲರೂ ಆತನ ಸೌಂದರ್ಯಾತಿಶಯಗಳಿಗೆ ಮಾರು ಹೋದವರೆ. ಈ ಹಿನ್ನೆಲೆಯಲ್ಲಿ ಅರ್ಜುನನನ್ನು ನೋಡಿ ಮರುಳಾಗುವ ಅಮರಾವತೀ ಪಟ್ಟಣದ ವೇಶ್ಯಾ ಸ್ತ್ರೀಯರ ವಿವರ ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಕಂಡುಬರುತ್ತದೆ. ಕುಮಾರವ್ಯಾಸನಿಗೆ ಹೋಲಿಸಿದರೆ ಪಂಪ ಈ ರೀತಿಯ ಕೆಲವು ಅಲಕ್ಷಿತ ಹಾಗೂ ಅಂಚಿನಲ್ಲಿನ ಸ್ತ್ರೀಯರನ್ನು ತನ್ನ ಕೃತಿಯಲ್ಲಿ ಪರಿಚಯಿಸುವ ಪ್ರಯತ್ನವನ್ನು ಮಾಡಿದ್ದಾನೆ. ಅಲ್ಲದೆ ಅವರ ಮನದ ಆಸೆ, ಆಕಾಂಕ್ಷೆ, ಬಯಕೆಗಳು, ನೋವು-ನಲಿವಿನ ಭಾವ ತೀವ್ರತೆಗಳ ಕಡೆಗೆ ನಮ್ಮ ಗಮನವನ್ನು ಸೆಳೆಯುತ್ತಾನೆ. ಈ ದೃಷ್ಟಿಯಿಂದ ಪಂಪನ ಪ್ರಯತ್ನ ಗಮನಾರ್ಹವಾದುದು.

ಅರ್ಜುನನು ಕಠಿಣವಾದ ತಪಸ್ಸಿನಿಂದ ಶಿವನನ್ನು ಮೆಚ್ಚಿಸಿ ಪಾಶುಪತಾಸ್ತ್ರವನ್ನು ಪಡೆಯುತ್ತಾನೆ. ಆಗ ಇಂದ್ರನು ಅರ್ಜುನನ ಶೌರ್ಯ ಪರಾಕ್ರಮಗಳಿಗೆ ತಕ್ಕನಾದ ಸತ್ಕಾರ ಮಾಡುವ ಅಭಿಲಾಷೆಯಿಂದ ತನ್ನ ರಾಜಧಾನಿಯಾದ ಅಮರಾವತೀ ಪಟ್ಟಣಕ್ಕೆ ಕರೆತರುತ್ತಾನೆ. ಈ ರೀತಿ ಕರೆತರುವಾಗ ಅರ್ಜುನನನ್ನು ನೋಡಿದ ಆ ಪಟ್ಟಣದ ವೇಶ್ಯಾಸ್ತ್ರೀಯರ ಮನಸ್ಥಿತಿಯನ್ನು ಪಂಪನು ಈ ರೀತಿಯಾಗಿ ಚಿತ್ರಿಸಿದ್ದಾನೆ.

"ಪರಿತಂದಂದಮರಾವತೀ ಪುರದ ವಾರಸ್ತ್ರೀಯರೇನೀತನೇ
ನರನಾ ಖಾಂಡವಮೆಲ್ಲಮಂ ಶಿಖಿಗುಣಲ್ ಕೊಟ್ಟಾತನೀಗಳ್ ಮಹೇ

ಶ್ವರನಂ ಮೆಚ್ಚಿಸಿ ಮಿಕ್ಕ ಪಾಶುಪತಮಂ ಪೆತ್ತಾತನೇ ಸಾಹಸಂ

ಪಿರಿದುಂ ಚೆಲ್ವನುಮನೆಂದು ಮನದೊಳ್ ಸೋಲ್ತಟ್ಟಜೆಂ ನೋಡಿದರ್"[೨೮]

ಅರ್ಜುನನು ಅಮರಾವತೀ ಪಟ್ಟಣವನ್ನು ಪ್ರವೇಶ ಮಾಡಿದನು ಎಂಬುದನ್ನು ತಿಳಿದ ಆ ಪಟ್ಟಣದ ವೇಶ್ಯಾಸ್ತ್ರೀಯರು ಓಡಿ ಬಂದರು. ಇವನೇ ಅರ್ಜುನನೇನು? ಖಾಂಡವ ವನವೆಲ್ಲವನ್ನೂ ಅಗ್ನಿಗೆ ಉಣ್ಣಲು ಕೊಟ್ಟವನು. ಈಗ ಮಹೇಶ್ವರನನ್ನು ಮೆಚ್ಚಿಸಿ ಮಿಕ್ಕ ಪಾಶು ಪತಾಸ್ತ್ರವನ್ನು ಪಡೆದವನೇ? ಈತನು ಸಾಹಸಿಗನೂ, ವಿಶೇಷವಾದ ಸೌಂದರ್ಯವುಳ್ಳವನೂ ಆಗಿದ್ದಾನೆ ಎಂದು ತಮ್ಮ ಮನಸ್ಸಿನಲ್ಲಿಯೆ ಸೋತು ಪ್ರೀತಿಯಿಂದ ಅರ್ಜುನನನ್ನು ನೋಡಿದರು. ಇಲ್ಲಿನ ವೇಶ್ಯಾಸ್ತ್ರೀಯರಲ್ಲಿ ಮೂಡುವ ಬೆರಗು, ಆಶ್ಚರ್ಯ, ಕುತೂಹಲದಿಂದ ನೋಡುವ ಭಾವಗಳು ಅವರ ಮನಸ್ಸಿನಲ್ಲಿ ಉದ್ಭವವಾಗಿರುವ ಸಂಘರ್ಷಗಳನ್ನು ಮನಗಾಣಿಸುತ್ತವೆ. ಆಸೆ, ಆಕಾಂಕ್ಷೆ, ಮನಸ್ಸಿನ ತಳಮಳದ ಭಾವನೆಗಳು ಕೇವಲ ಅರಮನೆ ಸ್ತ್ರೀಯರಿಗೆ ಮಾತ್ರ ಸೀಮಿತವಲ್ಲ. ಅವು ಸಾಮಾನ್ಯ ಸ್ತ್ರೀಯರಾದಿಯಾಗಿ ಎಲ್ಲ ಹೆಣ್ಣುಗಳ ಸಹಜ ಮನಸ್ಥಿತಿ ಎಂಬುದನ್ನು ಪಂಪ ಮತ್ತೆ ಮತ್ತೆ ದೃಢಪಡಿಸುತ್ತಾನೆ.

೫.೩. ಅರ್ಜುನನ ತಪಸ್ಸನ್ನು ಕೆಡಿಸಲು ಬಂದ ಅಪ್ಸರಾ ಸ್ತ್ರೀಯರ ಸಂಘರ್ಷಗಳು

ಪಾಂಡವರು ಹನ್ನೆರಡು ವರ್ಷ ವನವಾಸವನ್ನು ಮುಗಿಸಿದ ನಂತರ ದುರ್ಯೋಧನನು ರಾಜ್ಯವನ್ನು ತಾನಾಗಿ ಕೊಡುವುದಿಲ್ಲವೆಂಬುದು ಖಚಿತವಾಗುತ್ತದೆ. ಈ ಸಮಯದಲ್ಲಿ ವ್ಯಾಸ ಮಹರ್ಷಿಯು ಕೌರವರನ್ನು ಗೆಲ್ಲಬೇಕಾದರೆ ದಿವ್ಯಾಸ್ತ್ರಗಳು ಅಗತ್ಯವಾಗಿ ಬೇಕೆಂಬುದನ್ನು ತಿಳಿಸಿ, ಅವುಗಳನ್ನು ಸಂಪಾದಿಸುವಂತೆ ಅರ್ಜುನನಿಗೆ ಹೇಳಿ ಮಂತ್ರಾಕ್ಷರಗಳನ್ನು ಉಪದೇಶಿಸುತ್ತಾನೆ. ಇತ್ತ ಅರ್ಜುನ ಗುಹ್ಯಕ ಎಂಬುವವನ ಸಹಾಯದಿಂದ ಇಂದ್ರಕೀಲ ಪರ್ವತವನ್ನು ತಲುಪಿ ತಪೋನಿಯಮನಿಷ್ಠನಾಗುತ್ತಾನೆ. ಇದನ್ನು ಕಂಡ ದೇವೇಂದ್ರನಿಗೆ ಎದೆ ನಡುಕ ಹಾಗೂ ಪೀಠದ ನಡುಗುವಿಕೆಯಿಂದ ಭಯಗೊಂಡ ಆತ ಅರ್ಜುನನ ತಪಸ್ಸನ್ನು ಕೆಡಿಸಿ ವಿಘ್ನ ಮಾಡುವಂತೆ ತನ್ನ ಪ್ರೀತಿ ಪಾತ್ರರಾದ ಅಪ್ಸರ ಸ್ತ್ರೀಯರನ್ನು, ಆರು ಋತುಗಳನ್ನೂ, ಗಂಧರ್ವರನ್ನೂ ಹಾಗೂ ಕಾಮದೇವನನ್ನು ದಂಡ ನಾಯಕನನ್ನಾಗಿ ಕಳುಹಿಸಿದನು. ಈ ರೀತಿ ಬಂದ ಅಪ್ಸರಾ ಸ್ತ್ರೀಯರ ಗುಂಪಿನಲ್ಲಿ ಊರ್ವಶಿ, ಮೇನಕೆ, ತಿಲೋತ್ತಮೆ ಮೊದಲಾದವರು ಅರ್ಜುನನ ತಪಸ್ಸನ್ನು ಕೆಡಿಸಲಾಗದೆ ಅವರೇ ಸೋತು ಹೋಗುವ ಅಂಶಗಳು ಕಂಡುಬರುತ್ತವೆ.

"ಅಂತು ನರೇಂದ್ರ ತಾಪಸನಂ ಸೋಲಿಸಲೆಂದು ವಂದಾಕೆಗಳ್ ತಾಮೆ ಸೋಲ್ತು

ಮುಂದು ಮುಂದನೆ ಸುಟಿಯೆ"[೨೯]

ಈ ರೀತಿಯಾಗಿ ರಾಜತಪಸ್ವಿಯನ್ನು ಸೋಲಿಸಲೆಂದು ಬಂದ ಅವರು ತಾವೇ ಸೋತು ಅರ್ಜುನನ ಮುಂದೆ ಸುಳಿದಾಡಿದರು. ಊರ್ವಶಿಯು ದೇಶೀಯ ನೃತ್ಯಕ್ಕಿಂತಲೂ ಮಿಗಿಲಾದ ನೃತ್ಯವನ್ನಾಡಿದಳು. ಸರಸ್ವತಿಯೇ ಬಾಯಿ ತೆರೆದು ಹಾಡಿದ ರೀತಿಯಲ್ಲಿ ಮೇನಕೆಯು ಹಾಡಿದಳು. ಎಲ್ಲರೂ ಆಶ್ಚರ್ಯ ಚಕಿತರಾಗುವಂತೆ ತಿಲೋತ್ತಮೆಯು ನಾಟ್ಯವನ್ನು ಮಾಡಿದಳು. ಇಷ್ಟಾದರೂ ಇವರಾರನ್ನೂ ಕೂಡ

ಅರ್ಜುನನು ಮೋಹಿಸಲಿಲ್ಲ. ಕೊನೆಗೆ ಅಪ್ಸರಾ ಸ್ತ್ರೀಯರೇ ಸೋತು ಹೋಗಿ ಅರ್ಜುನನನ್ನು ಪ್ರಶ್ನಿಸುತ್ತಾರೆ.

"ಅಂತಾಕೆಗಳೆಡೆಯಾಡಿಯುಂ ಮನಂಗೊಳೆ ಪಾಡಿಯುಂ ಮನುಜಮಾಂಧಾತನಂ
ಸೋಲಿಸಲಾಱದೆ ಸಹಜಮನೋಜನ ರೂಪಿಂಗಂ ಸುರತ ಮಕರಧ್ವಜನ ಸೌಂದರ್ಯಕ್ಕಂ
ಗಂಧೇಭವಿದ್ಯಾಧರನ ಗಂಡಗಾಡಿಗಂ ತಾಮ ಸೋಲ್ತೆಯ್ದೆವಂದು"[೩೦]

ಆ ರೀತಿಯಾಗಿ ಅಪ್ಸರಾ ಸ್ತ್ರೀಯರೆಲ್ಲರೂ ಅರ್ಜುನನ ಸಮೀಪದಲ್ಲಿಯೇ ಓಡಾಡಿದರೂ ಆತನ ಮನಸ್ಸನ್ನು ಸೆಳೆಯಲಾಗಲಿಲ್ಲ. ಮನೋಹರವಾಗಿ ಹಾಡಿಯು ಮನುಜ ಮಾಂಧಾತನೆನಿಸಿದ ಅರ್ಜುನನನ್ನು ಸೋಲಿಸಲಾಗದೆ, ಸಹಜ ಮನ್ಮಥನೆನಿಸಿದ ಆತನ ರೂಪಕ್ಕೂ, ಸುರತ ಮಕರಧ್ವಜನಾದ ಅವನ ಸೌಂದರ್ಯಕ್ಕೂ, ಗಂಧೇಭ ವಿದ್ಯಾಧರನ ಪೌರುಷದ ಸೊಬಗಿಗೂ ತಾವೇ ಸೋತು ಅವನ ಸಮೀಪಕ್ಕೆ ಬಂದು ಅವನನ್ನೇ ಪ್ರಶ್ನಿಸುತ್ತಾರೆ.

"ಬೂಧಿ ಜೆಡೆ ಲಕ್ಕಣಂ ತಪ
ಕಾದುವರೆಟ್ಬೊಣೆ ಶರಾಸನಂ ಕವಚಮಿವೆಂ
ತಾದುವೊ ಮುತ್ತುಂ ಮೆಱಸುಂ
ಕೋದಂತುಟೆ ನಿನ್ನ ತಪದ ಪಾಂಗೆಂತು ಗಡಾ"[೩೧]

ಬೂದಿ (ವಿಭೂತಿ) ಮತ್ತು ಜಡೆಯ ಲಕ್ಷಣಗಳು ತಪಸ್ಸಿಗೆ ಹೊಂದಿಕೆಯಾಗುತ್ತವೆ. ಆದರೆ ಎರಡು ಬತ್ತಳಿಕೆ, ಬಿಲ್ಲು ಕವಚಗಳು ಹೇಗೆ ಹೊಂದಿಕೊಳ್ಳುತ್ತವೆ? ಮುತ್ತನ್ನು ಮೆಣಸನ್ನೂ ಕೋದಂತಿರುವ ನಿನ್ನ ತಪಸ್ಸಿನ ರೀತಿ ಅದೆಂತಹದೊ? ಎಂಬಂತಹ ಮಾತುಗಳೆಲ್ಲವು ಅವರ ಮನದ ಸಂಘರ್ಷದಿಂದ ಬಂದವೇ ಆಗಿವೆ. ಅಲ್ಲದೆ

"ಕಡು ತಪದಿಂದೆ ನಿನ್ನ ಪಡೆಪಾವುದೊ ಗಾವಿಲ ಸಗ್ಗಮಲ್ತೆ ಪೋ
ನುಡಿಯವೊ ಮೂರ್ಖ ಸಗ್ಗದಫಲಂ ಸುಖಮಲ್ತೆ ಸುಖಕ್ಕೆ ಪೇಟಿಕೊಡಂ
ಬಡದವರಾರೊ ಪೆಂಡಿರೊಳಗಾರ್ ಪೆಱರಾಮೆ ದಲಾಮೆ ಬಂದು ಕಾ
ಲ್ವಿಡಿದಪೆವಿಂಬುಕೆಯ್ವೊಡಿವು ಮೆಲ್ಲಡಿಗಳ್ ಗಡ ಕರ್ಚು ಬೂದಿಯಂ"[೩೨]

ದಡ್ಡನೆ ತೀವ್ರವಾದಂತಹ ತಪಸ್ಸಿನಿಂದ ನೀನು ಪಡೆಯಬಹುದಾದ ವಸ್ತು ತಾನೆ ಏನು? ಸ್ವರ್ಗವಲ್ಲವೇ? ಹೋಗು ಮಾತನಾಡಬೇಡ ಮೂರ್ಖ. ಸ್ವರ್ಗದ ಫಲವೂ ಸುಖವಲ್ಲವೇ? ಹೇಳು ಸುಖಕ್ಕೆ ಒಡಂಬಡದವರು ಯಾರಿದ್ದಾರೆ. ಸ್ತ್ರೀಯರಲ್ಲಿ ನಮಗಿಂತಲೂ ಸೌಂದರ್ಯವತಿಯರು ಯಾರಿದ್ದಾರೆ? ಆದರೆ ನಾವೇ ಬಂದು ನಿನ್ನ ಕಾಲನ್ನು ಹಿಡಿದಿದ್ದೇವೆ. ಈ ನಿನ್ನ ಮೃದುವಾದ ಕಾಲುಗಳು ನಾವು ಆಶ್ರಯಿಸಲು ಯೋಗ್ಯವಾದುವಲ್ಲವೆ? ಹಾಗಾಗಿ ಬೂದಿಯನ್ನು ತೊಳೆದುಕೊ ಎಂದು ಕೇಳಿಕೊಳ್ಳುತ್ತಾರೆ. ಅಂದರೆ ದೇವಲೋಕದ ಅಪ್ಸರೆಯರಾದರೂ ಸಹ ಅರ್ಜುನನ ರೂಪಿಗೆ ಮರುಳಾಗಿ ಅವನನ್ನು ಮೋಹಿಸುತ್ತಾರೆ. ದೇವಲೋಕದ ಸ್ತ್ರೀಯರಾದರೂ ಕೂಡ ಸಾಮಾನ್ಯ ಸ್ತ್ರೀಯರಂತೆ ಅರ್ಜುನನಲ್ಲಿ ತಮ್ಮ ಪ್ರೇಮ ನಿವೇದನೆಯನ್ನು ಮಾಡಿಕೊಳ್ಳುತ್ತಾರೆ.

೫.೪ ಅರ್ಜುನನ ಮುಂದೆ ನರ್ತಿಸಲು ಬಂದ ದೇವಲೋಕದ ಸ್ತ್ರೀಯರ ಸಂಘರ್ಷಗಳು

'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಲ್ಲಿ ಶಸ್ತ್ರಾಸ್ತ್ರಗಳನ್ನು ಪಡೆಯಲೆಂದು ಬಂದ ಅರ್ಜುನನನ್ನು ಇಂದ್ರನು ತನ್ನ ಅಮರಾವತಿಗೆ ಕರೆತರುತ್ತಾನೆ. ಅಲ್ಲಿ ಆತನ ಸಂತೋಷಕ್ಕಾಗಿ ಇಂದ್ರಲೋಕದ ಸ್ತ್ರೀಯರಿಂದ ನರ್ತನ ಕಾರ್ಯಕ್ರಮವನ್ನು ಏರ್ಪಡಿಸಲಾಗಿರುತ್ತದೆ. ಈ ರೀತಿ ಅರ್ಜುನನ ಮುಂದೆ ನರ್ತಿಸಲು ಬಂದ ಆ ಹೆಣ್ಣುಗಳು ಅರ್ಜುನನ ರೂಪು, ಸೌಂದರ್ಯಕ್ಕೆ ಮರುಳಾಗಿ ಅನುಭವಿಸುವ ಮಾನಸಿಕ ಸಂಘರ್ಷಗಳನ್ನು ಕವಿ ಈ ರೀತಿಯಾಗಿ ತಿಳಿಸುತ್ತಾನೆ.

"ತೊಲಗಿಸೋ ಮಂದಿಯನು ತೆಗೆ ಬಾ
ಗಿಲನೆನಲು ಕವಿದುದು ಸುರೇಂದ್ರನ
ಲಲನೆಯರು ಲಾವಣ್ಯ ಲಹರಿಯ ಲಲಿತ ವಿಭ್ರಮದ
ಸುಳಿಗುರುಳ ನಿಟ್ಟೆಸಳುಗಂಗಳ
ಹೊಳೆವ ಕದಪಿನ ನುಣ್ಗೊರಳ ಬಲು
ಮೊಲೆಯ ಮೋಹರ ನೂಕಿತಮರೀ ವಾರನಾರಿಯರ"[೩೩]

ತೊಲಗಿಸೋ ಮಂದಿಯನು ತೆಗೆ ಬಾಗಿಲನ್ನು ಎನ್ನಲು ಆ ಬಾಗಿಲಿನಿಂದ ಸುರೇಂದ್ರನ ಲಲನೆಯರು ಲಾವಣ್ಯ ಲಹರಿಯನ್ನು ಹರಿಸುತ್ತ ಕವಿದು ಬಂದರು. ಲಲಿತ ವಿಭ್ರಮದ ಸುಳಿಗುರುಳ ನಿಡಿದಾದ ಎಸಳು ಕಣ್ಣುಗಳ, ಹೊಳೆವ ಕದಪಿನ, ನುಣ್ಗೊರಳು, ಬಲು ಮೊಲೆಯ ಮನೋಹರಿಯರಾದ ಆ ಅಮರಾವತಿಯ ಅಮರ ವಾರನಾರಿಯರು ಮೋಹರಿಸಿ ಬಂದರು ಅರ್ಜುನನ್ನು ನೋಡಲು.

"ವರ ತಿಲೋತ್ತಮೆ ರಂಭೆ ಮಧುರ
ಸ್ವರೆ ಘೃತಾಚಿ ಸುಕೇಶಿ ಗೌರೀ
ಶ್ವರಿ ವರೂಥಿನಿ ಪೂರ್ವಚಿತ್ತಿ ಸುಲೇಖೆ ಚಿತ್ರರಥಿ
ಸುರಭಿಗಂಧಿನಿ ಚಾರುಮುಖಿ ಸೌಂ
ದರಿಯನಿಧಿಯೂರ್ವಶಿ ಸುಲೋಚನೆ
ಸುರಸೆಯೆನಿಪಂಗನೆಯರೈದಿತು ಕೋಟಿ ಸಂಖ್ಯೆಯಲಿ"[೩೪]

ವರ ತಿಲೋತ್ತಮೆ, ರಂಭೆ, ಮಧುರಸ್ವರೆ, ಘೃತಾಚಿ, ಸುಕೇಶಿ, ಗೌರಿ, ಈಶ್ವರಿ, ವರೂಥಿನಿ, ಪೂರ್ವಚಿತ್ತಿ, ಸುಲೇಖೆ, ಚಿತ್ರರಥಿ, ಸುರಭಿಗಂಧಿನಿ, ಚಾರುಮುಖಿ, ಸೌಂದರ್ಯ ನಿಧಿಯಾದ ಊರ್ವಶಿ, ಸುಲೋಚನೆ, ಸುರಸೆ ಇನ್ನು ಮೊದಲಾದ ದೇವತಾ ಸ್ತ್ರೀಯರು ಕೋಟಿ ಸಂಖ್ಯೆಯಲ್ಲಿ ಆಸ್ಥಾನಕ್ಕೆ ಆಗಮಿಸಿದರು. ಇಲ್ಲಿ ಅಮರಾವತಿಯ ಅರಮನೆಯನ್ನು ಪ್ರವೇಶಿಸಿದಾಗ ಆತನು ಯಾರೆಂದು ಕುತೂಹಲದಿಂದ ನೋಡಲು ಬಂದ ಅಮರಾವತಿಯ ದೇವಾಂಗನೆಯರನ್ನು ಕುರಿತು ಚರ್ಚಿಸುತ್ತಾನೆ ಕವಿ.

ಇಲ್ಲಿನ ಸ್ತ್ರೀಯರು ಅರ್ಜುನನ್ನು ನೋಡಲು ಕಾತರಿಸುವ ಪರಿ, ಆತನ ರೂಪು, ಸೌಂದರ್ಯಗಳಿಗೆ ಮರುಳಾಗಿರುವುದು ಅವರ ಮಾನಸಿಕ ಸಂಘರ್ಷಗಳಾಗಿವೆ. ಅಲ್ಲದೆ ಅವರು ಮನಸ್ಸಿನಲ್ಲಿ ಎದುರಿಸುವ ವಿರಹದ ಭಾವಗಳು, ಸೇರುವಿಕೆಗಾಗಿ ಹಾತೊರೆಯುವ ಭಾವದೀಪ್ತಿಗಳೆಲ್ಲವು ಆ ಹೆಣ್ಣುಗಳ ಮನದಲ್ಲಿನ ಸಂಘರ್ಷಗಳನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ. ಈ ಭಾವಗಳು ಕಾಮದ ಅರ್ಥ ವ್ಯಾಪ್ತಿಯಲ್ಲಷ್ಟೇ ನಿಲ್ಲದೆ ಅದನ್ನು ಮೀರಿದ ಪ್ರೀತಿಯ ಸಂಕೇತವಾಗಿ ನಿಲ್ಲುವುದು ಇಲ್ಲಿ ಗಮನಿಸುವಂತಹ ಸಂಗತಿಯಾಗಿದೆ. ಅರ್ಜುನನನ್ನು ನೋಡುವ ಅವರ ಕುತೂಹಲದ ಮನಸ್ಥಿತಿ ಅವರ ಭಾವ ತೀವ್ರತೆಯನ್ನು ಮನಗಾಣಿಸುತ್ತದೆ.

ಕೊನೆ ಟಿಪ್ಪಣಿಗಳು

೧. ಪುರಾಣಭಾರತ ಕೋಶ, ಪು.ಸಂ-೫೦೪.

೨. ವಿಕ್ರಮಾರ್ಜುನ ವಿಜಯಂ, ೮/೨೮-ವ.

೩. ವಿಕ್ರಮಾರ್ಜುನ ವಿಜಯಂ, ೮/೨೯.

೪. ಪುರಾಣಭಾರತ ಕೋಶ, ಪು.ಸಂ-೭೪.

೫. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೭/೧೦೧.

೬ ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೭/೧೦೨.

೭ ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೧೦೪.

೮. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೨೦.

೯. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೨೧.

೧೦. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೨೨.

೧೧. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೨೩.

೧೨. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೨೬.

೧೩. ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ, ಪು.ಸಂ-೨೯೮.

೧೪. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೨೭.

೧೫. ಕುಮಾರವ್ಯಾಸ ಮಹಾಕವಿಯ ಕರ್ಣಾಟ ಭಾರತ ಕಥಾಮಂಜರಿ, ಪು.ಸಂ-೨೯೮.

೧೬. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೨೮.

೧೭. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೩೦.

೧೮. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೩೨.

೧೯. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೩೩.

೨೦. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೩೪.

೨೧. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೩೬.

೨೨. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೩೭.

೨೩. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೩೮.

೨೪. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೩೯.

೨೫. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೪೦.

೨೬. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೪೧.

೨೭. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೮/೪೩.

೨೮. ವಿಕ್ರಮಾರ್ಜುನ ವಿಜಯಂ, ೮/೨೭.

೨೯. ವಿಕ್ರಮಾರ್ಜುನ ವಿಜಯಂ, ೭/೮೬–ವ.

೩೦. ವಿಕ್ರಮಾರ್ಜುನ ವಿಜಯಂ, ೭/೯೧.

೩೧. ವಿಕ್ರಮಾರ್ಜುನ ವಿಜಯಂ, ೭/೯೨.

೩೨. ವಿಕ್ರಮಾರ್ಜುನ ವಿಜಯಂ, ೭/೯೩.

೩೩. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೭/೮೮.

೩೪. ಕರ್ಣಾಟ ಭಾರತ ಕಥಾಮಂಜರಿ, ಅರಣ್ಯಪರ್ವ, ೭/೯೧.

ಅಧ್ಯಾಯ : ಆರು

ಅನಾಮಿಕ ಮಹಿಳೆಯರ ಸಂಘರ್ಷಗಳು

ಅಧ್ಯಾಯ : ಆರು

ಅನಾಮಿಕ ಮಹಿಳೆಯರ ಸಂಘರ್ಷಗಳು

ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿನ ಮಹಿಳಾ ಪ್ರಪಂಚ ವೈವಿಧ್ಯಮಯವಾದುದು. ಇವುಗಳಲ್ಲಿ ಹಲವು ಅನಾಮಿಕ ಸ್ತ್ರೀ ಪಾತ್ರಗಳೂ ಇವೆ. ಇವು ಕಾವ್ಯದ ಸಂದರ್ಭದಲ್ಲಿ ನಿರ್ದಿಷ್ಟವಾದ ಹೆಸರುಗಳಿಂದ ಉಲ್ಲೇಖಿತವಾಗದೆ, ಕೃತಿಯ ಕಥಾ ಸಂವಿಧಾನ, ಅದರ ವಸ್ತು ಸ್ಥಿತಿಗೆ ಪೂರಕವಾಗಿ ನಮ್ಮನ್ನು ಎದುರುಗೊಳ್ಳುತ್ತವೆ. ಅರಮನೆಯ ಸ್ತ್ರೀಯರಿಂದಿಡಿದು, ಸಾಮಾನ್ಯ ದಾಸಿಯವರೆಗಿನ ಸ್ತ್ರೀಪಾತ್ರದ ಹರಹು ಇವರಿಬ್ಬರ ಕೃತಿಗಳಲ್ಲಿ ಮುಪ್ಪುರಿಗೊಂಡಿದೆ. ಇದರ ಜೊತೆಗೆ ಹಲವು ಹೆಸರೇ ಇಲ್ಲದ ಅನಾಮಿಕ ಸ್ತ್ರೀಯರೂ ಸಹ ತಮ್ಮ ಸಂಘರ್ಷಗಳ ಇರುವಿಕೆಯನ್ನು ಹೊರಹಾಕಿದ್ದಾರೆ. ಅವರುಗಳಲ್ಲಿ ಸೈನಿಕರ ಹೆಂಡತಿಯರು, ವಿದುರನ ತಾಯಿ, ಗಂಧರ್ವನ ಪತ್ನಿ ಮೊದಲಾದ ಸ್ತ್ರೀಯರಿಗೆ ಹೆಸರುಗಳೇ ಇಲ್ಲ. ಅವರನ್ನು ಪುರುಷರ ಹೆಸರುಗಳ ಮೂಲಕವೇ ಗುರ್ತಿಸುವ ಪ್ರಯತ್ನ ನಡೆದಿದೆ. ಇದೂ ಸಹ ಒಂದು ರೀತಿಯ ಸಾಂಸ್ಕೃತಿಕ ರಾಜಕಾರಣವಾಗಿದೆ. ಹಾಗೆಂದು ಈ ಸ್ತ್ರೀಯರನ್ನು ಕಡೆಗಣಿಸಲು ಸಾಧ್ಯವಿಲ್ಲ. ಇವರು ಕೂಡ ಮನಸ್ಸಿರುವ ಜೈವಿಕ ಜೀವಿಗಳು. ಅನಾಮಿಕ ಸ್ತ್ರೀಯರಾಗಿಯೇ ಇವರು ನಮ್ಮ ಮುಂದೆ ಹಲವು ಪ್ರಶ್ನೆಗಳನ್ನು ಎತ್ತುತ್ತಾರೆ. ಅಲ್ಲದೆ ಅರಮನೆ ಹಾಗೂ ಇತರ ಸ್ತ್ರೀಯರಂತೆಯೆ ಇವರೂ ಕೂಡ ಶೋಷಣೆಗೆ ಒಳಗಾಗಿರುವವರೆ. ಜೊತೆಗೆ ಈ ಸ್ತ್ರೀಯರಿಗೆ ಹೆಸರಿಲ್ಲದಿರುವುದೂ ಕೂಡ ಶೋಷಣೆಯ ಒಂದು ಭಾಗವೇ ಆಗಿದೆ. ಏಕೆಂದರೆ 'ಮಹಾಭಾರತ' ಕೃತಿಯನ್ನು ಅನುಸರಿಸಿ ಕೃತಿ ಬರೆದ ಈ ಇಬ್ಬರೂ ಕವಿಗಳ ಕೃತಿಗಳಲ್ಲಿನ ಸ್ತ್ರೀ ಪ್ರಪಂಚ ವಿಸ್ತಾರವಾದುದು. ಎಲ್ಲ ಜಾತಿಯ, ವರ್ಗದ, ವರ್ಣದ, ಸ್ವಭಾವ ಹಾಗೂ ವಿವಿಧ ಸ್ತರದ ಸ್ತ್ರೀಯರು ಇಲ್ಲಿದ್ದಾರೆ.

ಈ ಹಿನ್ನೆಲೆಯಲ್ಲಿ ಅನಾಮಿಕ ಸ್ತ್ರೀಯರನ್ನು ಹಾಗೂ ಅವರ ಮನದ ಸಂಘರ್ಷಗಳನ್ನು ಇಲ್ಲಿ ಅಧ್ಯಯನಕ್ಕೆ ಒಳಗುಮಾಡಲಾಗಿದೆ. ಪುರುಷನ ಎಲ್ಲ ರೀತಿಯ ಕಾರ್ಯ ಚಟುವಟಿಕೆಗಳಿಗೆ ನೆರವಾಗುವ ಸ್ತ್ರೀಯರಿಗೆ ಹೆಸರನ್ನು ನೀಡದಿರುವುದೂ ಕೂಡ ಆ ಕಾಲಘಟ್ಟದ ಸಾಮಾಜಿಕ ಹಾಗೂ ರಾಜಕೀಯ ಸ್ಥಿತಿಗತಿಗಳನ್ನು ತಿಳಿಸಿಕೊಡುತ್ತವೆ. ಎಲ್ಲಕ್ಕಿಂತ ಮುಖ್ಯವಾಗಿ ಇಲ್ಲಿನ ಅನಾಮಿಕ ಸ್ತ್ರೀಯರಿಗೆ ಯಾವುದೇ ಚರಿತ್ರೆ ಇಲ್ಲ, ದನಿ ಇಲ್ಲ. ಏಕೆಂದರೆ ಇವರೆಲ್ಲ ತಳಸಮುದಾಯದವರು.

ಪ್ರಧಾನ ಭೂಮಿಕೆಯಿಂದ ದೂರ ಸರಿದಿರುವವರು. ಹಾಗಾಗಿ ಈ ರೀತಿಯ ಅಧ್ಯಯನಗಳು ಹೆಚ್ಚು ಸೂಕ್ತವಾದವು.

೬.೧. ಸೈನಿಕರ ಹೆಂಡತಿಯರು

ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಕಂಡುಬರುವ ಅನಾಮಿಕ ಸ್ತ್ರೀಯರಲ್ಲಿ ಸೈನಿಕರ ಹೆಂಡತಿಯರು ಗಮನಿಸುವಂತಹವರು. ಇವರ ಬಗೆಗಿನ ಚರ್ಚೆ ಹಾಗೂ ಅಧ್ಯಯನಗಳು ವಿರಳವಾಗಿವೆ. ಇಲ್ಲಿನವರೆಗಿನ ಅಧ್ಯಯನಗಳಲ್ಲಿ ಅಲಕ್ಷ್ಯಕ್ಕೆ ಒಳಗಾಗಿರುವ ಈ ಸ್ತ್ರೀ ವರ್ಗಕ್ಕೆ ಸಲ್ಲಬೇಕಾದ ನ್ಯಾಯ, ಅಧ್ಯಯನದ ಮಾನ್ಯತೆಗಳು ಅಷ್ಟಾಗಿ ದೊರೆತಿಲ್ಲವೆಂದೇ ಹೇಳಬಹುದು. ಎಲ್ಲ ಅಧ್ಯಯನಗಳೂ ಕೂಡ ಅರಮನೆ ಸ್ತ್ರೀಯರ ಸುತ್ತಲೆ ಗಿರಕಿ ಹೊಡೆದಿರುವುದು ಕಂಡುಬರುತ್ತದೆ. ಆದರೆ ಸೈನಿಕರ ಹೆಂಡತಿಯರಂತಹ ಸಮಾಜದ ಕಟ್ಟಕಡೆಯ ವ್ಯಕ್ತಿಗಳ ಬಗೆಗಿನ ವಿವರಗಳು, ಕೃತಿಗಳಲ್ಲಾಗಲಿ, ಚರಿತ್ರೆಯ ಪುಟಗಳಲ್ಲಾಗಲಿ ನಮಗೆ ದೊರಕದಿರುವುದು ನಮ್ಮ ಚರಿತ್ರೆಯ ಹಾದಿ ತಪ್ಪಿದ ಅಧ್ಯಯನಗಳ ದೌರ್ಭಾಗ್ಯವೇ ಆಗಿದೆ. ಈ ಹಿನ್ನೆಲೆಯಲ್ಲಿ ಪಂಪ ತನ್ನ ಕಾವ್ಯದ ಸಂದರ್ಭದಲ್ಲಿ ಸಂಪೂರ್ಣವಾಗಿ ಅಲ್ಲದಿದ್ದರೂ ಅಲ್ಲಲ್ಲಿ ಇಂತಹ ಸ್ತ್ರೀಯರ ಬಗೆಗಿನ ವಿವರಗಳ ಮೂಲಕ ನಮ್ಮ ಗಮನವನ್ನು ಸೆಳೆಯುತ್ತಾನೆ.

ಇಲ್ಲಿನವರೆಗಿನ ಚರಿತ್ರೆಗಳಲ್ಲಿ ಸೈನ್ಯದಲ್ಲಿ ಸತ್ತ ಯೋಧರ ಹೆಂಡತಿಯರ ಬಗೆಗಾಗಲಿ, ಆ ಹೆಣ್ಣುಗಳ ನೋವು, ಗೋಳಾಟಗಳಂತಹ ಸಂಘರ್ಷಗಳ ಬಗೆಗಾಗಲಿ ಯಾವ ಅಧ್ಯಯನಕಾರರಾಗಲಿ, ಚರಿತ್ರಾಕಾರರಾಗಲಿ ಅಕ್ಷರಗಳಲ್ಲಾದರೂ ದಾಖಲಿಸದೆ ಇರುವುದು ನಿಜಕ್ಕೂ ಇತಿಹಾಸದ ಬರಹಗಳ ಕಡೆಗೆ ಹಳದಿಗಣ್ಣಿನಿಂದ ನೋಡುವಂತೆ ಮಾಡುತ್ತದೆ. ಅವರಿಗೂ ಕೂಡ ಮನಸ್ಸಿದೆ, ಗಂಡನನ್ನು ಸೈನ್ಯಕ್ಕೆ ಕಳುಹಿಸಿದ ಮೇಲೆ ಅವರಲ್ಲಿ ಮೂಡುವ ಆತಂಕ, ಭಯ, ತಲ್ಲಣಗಳು ವರ್ಣಿಸಲಸದಳವಾದವು. ಒಂದೊಮ್ಮೆ ಬದುಕಿ ಬಂದರೆ ಅದು ಅವರ ಪುಣ್ಯ. ಇಲ್ಲದಿದ್ದರೆ ಅದು ಅವರ ಸಹಗಮನದ ಮುಂದಿನ ಹೆಜ್ಜೆಗೆ ದಾರಿ ದೀಪವಾಗುತ್ತಿತ್ತು. ಅವರ ಆಸೆ, ಆಕಾಂಕ್ಷೆಗಳಿಗೆ, ಅವರ ಮುಂದಿನ ಬದುಕಿನ ಕ್ರಮಗಳಿಗೆ ಇಲ್ಲಿನವರೆಗಿನ ಯಾವ ಕೃತಿಗಳಾಗಲಿ, ಅಧ್ಯಯನಗಳಾಗಲಿ, ಬರಹಗಳಾಗಲಿ ಗಮನಕೊಟ್ಟಂತೆ ಕಾಣುವುದಿಲ್ಲ. ಈ ಹಿನ್ನೆಲೆಯಲ್ಲಿ ಪಂಪನು ತನ್ನ 'ವಿಕ್ರಮಾರ್ಜುನ ವಿಜಯ' ಕೃತಿಯ ೧೧ನೇ ಆಶ್ವಾಸದ ಸಂದರ್ಭದಲ್ಲಿ ಸೈನಿಕ ಹಾಗೂ ಆತನ ಮಡದಿ ಮಾತನಾಡಿಕೊಳ್ಳುವ ಪ್ರಸಂಗವೊಂದನ್ನು ತಂದಿದ್ದು, ಅವು ಆ ಕಾಲದ ಸೈನಿಕರ ಹೆಂಡತಿಯರ ಮನಸ್ಥಿತಿ ಹಾಗೂ ಬದುಕಿನ ಕ್ರಮಗಳ ಪರಿಚಯವನ್ನು ನಮಗೆ ಮಾಡಿಕೊಡುತ್ತವೆ.

ಪಾಂಡವರು ಹಾಗೂ ಕೌರವರಲ್ಲಿ ಯುದ್ಧ ನಿಶ್ಚಯವಾಗಿ ಎಲ್ಲರೂ ಅದಕ್ಕೆ ಅಣಿಯಾಗಿದ್ದಾರೆ. ಅದರಂತೆ ಸೈನಿಕರೂ ಸಿದ್ಧರಾಗಿದ್ದಾರೆ. ಎರಡೂ ಸೈನ್ಯದವರೂ ತಮ್ಮ ತಮ್ಮ ಪಕ್ಷಕ್ಕನುಗುಣವಾಗಿ ಹೋರಾಟದಲ್ಲಿ ತೊಡಗಿದ್ದಾರೆ.

"ಅಂತು ನುಡಿದೆರಡುಂ ಬಲಂಗಳುಂ ತಂತಮ್ಮ ವೀರಮಂ ಚಾಗಮಂ ಮೆಱೆದು ತಮ್ಮ ಕೆಯ್ದುಗಳನರ್ಚಿಸಿ ದರ್ಭಶಯನಂ ಮಾಡಿ ಪಲ್ಲಂ ಸುಲಿದು ಶಸ್ತ್ರಸಂಗ್ರಹರಾಗಿ ಪಲರುಂ ವೀರಭಟರ್ ತಮ್ಮಂ ತಾಮೆ ಪರಿಚ್ಛೇದಿಸಿರ್ದರತ್ತ ಮತ್ತಮೊರ್ವಂ ತನ್ನ ನಲ್ಲಳೊಳಿಂತೆಂದನೀ ಪೊಟ್ತೆ ಪೊಟ್ತು ನಾಳೆ ದೇವಲೋಕದ ಕನ್ಯಕೆಯರೋಲಗದೊಳಿರ್ಪೆ ನೆಂದು ನುಡಿಯೆ ನೀನೆಂದಂತು ಪೋಗಲ್ ತೀರದು ನಾಳೆ ಮಗುಟ್ದು ಬಂದೆನ್ನೊಳ್ ನೆರೆವೆಯೆಂದು ಪೇಱ್ ನಿನಗೆಱೆವುಂಟೆ ಎಂದು ಕೇಳೆಯೆನ್ನೋಲೆವಾಗ್ಯ ಮುಂಟೆಂದಳ್ ಮತ್ತಮೊಂದೆಡೆಯೊಳೊರ್ವಳ್ ದರ್ಭಶಯನಸ್ಥನಾದ ನಿಜಪ್ರಾಣೇಶ್ವರನ ಪರಿಚ್ಛೇದಮನಱೆದು ತನ್ನ ಸಾವಂ ಪರಿಚ್ಛೇದಿಸಿ"[೧]

ಈ ರೀತಿಯಾಗಿ ಮಾತನಾಡಿ ಎರಡೂ ಕಡೆಯ ಸೈನ್ಯದವರೂ ತಮ್ಮ ತಮ್ಮ ವೀರವನ್ನೂ, ತ್ಯಾಗವನ್ನೂ ಮೆರೆದು, ತಮ್ಮ ಆಯುಧಗಳನ್ನು ಪೂಜಿಸಿ ದರ್ಭೆಯ ಮೇಲೆ ಮಲಗಿ, ಹಲ್ಲನ್ನು ತೊಳೆದು ಶಸ್ತ್ರಧಾರಿಗಳಾಗಿ ಹಲವಾರು ಜನ ವೀರಭಟರು ತಮ್ಮ ವಿಷಯವನ್ನು ತಾವೇ ನಿಶ್ಚಯಿಸಿಕೊಂಡರು. ಆ ಕಡೆ ಮತ್ತೊಬ್ಬನು ತನ್ನ ನಲ್ಲಳೊಡನೆ ಈ ರೀತಿ ನುಡಿದನು. ಈ ಹೊತ್ತೇ ಹೊತ್ತು. ನಾಳೆ ನಾನು ದೇವಲೋಕದ ಕನ್ಯೆಯರ ಓಲಗದಲ್ಲಿ ಸಂತೋಷದಿಂದಿರುತ್ತೇನೆ ಎಂದು ಹೇಳಿದನು. ಅದಕ್ಕೆ ಅವನ ಪತ್ನಿಯು ನೀನು ಹೇಳಿದ ರೀತಿ ಹೋಗಲು ಸಾಧ್ಯವಿಲ್ಲ. ಏಕೆಂದರೆ ನಾಳೆ ನೀನು ಪುನಃ ಬಂದು ನನ್ನಲ್ಲಿಯೆ ಸೇರುತ್ತೀಯೆ ಎಂದು ನುಡಿಯುತ್ತಾಳೆ. ಅದಕ್ಕೆ ಆತ ಅದು ನಿನಗೆ ಹೇಗೆ ತಿಳಿದಿದೆ? ಎಂದು ಪ್ರಶ್ನಿಸಲು ಅವಳು ಅದಕ್ಕೆ ನನ್ನ ಓಲೆ ಭಾಗ್ಯವುಂಟೆಂದು ಉತ್ತರಿಸುತ್ತಾಳೆ.

ಇಲ್ಲಿ ಪ್ರಮುಖವಾಗಿ ಗಮನಿಸುವಂತಹ ಸಂಗತಿಗಳೆಂದರೆ ಯುದ್ಧಕ್ಕೆ ಹೋಗುವ ವೀರನಿಗೆ ತಾನು ಮರಳಿ ಬದುಕಿ ಬರುವುದಿಲ್ಲವೆಂಬುದು ಗೊತ್ತಿದೆ. ಅದಕ್ಕಾಗಿಯೇ ಆತ ತನ್ನ ಹೆಂಡತಿಗೆ ಹೇಳುವುದು 'ಈ ಪೊಟ್ತೆ ಪೊಟ್ತು ನಾಳೆ ದೇವಲೋಕದ ಕನ್ಯಕೆಯರೋಲಗದೊಳಿರ್ಪೆನು' ಎಂದು. ಅಂದರೆ ಈ ಹೊತ್ತು ಮಾತ್ರವೇ ನಾನು ಬದುಕಿ ನಿನ್ನ ಜೊತೆಯಲ್ಲಿರುವುದು. ನಾಳೆ ಯುದ್ಧದಲ್ಲಿ ಮಡಿದು ದೇವಲೋಕದ ಸ್ತ್ರೀಯರ ಜೊತೆಯಲ್ಲಿರುತ್ತೇನೆ. ಅದಕ್ಕೆ ಆತನ ಪತ್ನಿ ಹೇಳುವ ಮಾತು ಬಹುಮುಖ್ಯವಾದುದು. 'ನಾಳೆ ಮಗುಟ್ದು ಬಂದೆನ್ನೊಳ್ ನೆರೆವೆ' ಅಂದರೆ ನಿನಗಿಂತ ಮೊದಲೇ ನಾನು ಪ್ರಾಣ ತ್ಯಾಗ ಮಾಡಿ ದೇವಲೋಕದಲ್ಲಿ ನಿನಗಾಗಿ ಕಾಯುತ್ತಿರುತ್ತೇನೆ. ಆಕೆ ಹೇಳುವ ಈ ಮಾತುಗಳು ಆ ಕಾಲಘಟ್ಟದ ಸ್ತ್ರೀಯರ ಬದುಕನ್ನು ನಮಗೆ ಮನಗಾಣಿಸುತ್ತವೆ.

ಅಂದರೆ ಸೈನಿಕರ ಹೆಂಡತಿಯರ ಬದುಕು ಆ ಸೈನಿಕರ ಜೊತೆಯಲ್ಲಿಯೆ ಕೊನೆಯಾಗುವುದು ತಿಳಿಯುತ್ತದೆ. ಈ ರೀತಿ ಬದುಕನ್ನು ಕೊನೆಗಾಣಿಸಿಕೊಳ್ಳಲು ಅವರು ಮಾಡಿರುವ ತಪ್ಪಾದರೂ ಏನು? ಸೈನಿಕರಿಗೆ ಹೆಂಡತಿಯರಾದದ್ದೇ? ಮಹಿಳೆಯರಾಗಿ ಜನ್ಮ ತಾಳಿದ್ದೇ? ಆದರೆ ಕವಿ ಇವೆಲ್ಲವುಗಳಿಗೆ ಕೊಡುವ ಉತ್ತರ 'ಓಲೆ ಭಾಗ್ಯ', 'ಮುತ್ತೈದೆತನ'ಗಳು. ಇದು ಎಷ್ಟರಮಟ್ಟಿಗೆ ಆ ಹೆಣ್ಣುಗಳಿಗೆ ನ್ಯಾಯ ದೊರಕಿಸಿಕೊಡುತ್ತದೆಂಬುದು ತಿಳಿಯದ ಸಂಗತಿ. ಇನ್ನೂ ಬಾಳಿ ಬದುಕಬೇಕಾದ

ಜೀವಗಳು, ಇನ್ನೂ ಬದುಕುವ ಆಸೆ ಇರುವ ಮನಸ್ಸುಗಳು. ಮಾನಕ್ಕೆ ಹೆದರಿಯೋ, ಸಮಾಜಕ್ಕೆ ಹೆದರಿಯೋ ಹೀಗೆ ಅರ್ಧದಲ್ಲಿಯೇ ತಮ್ಮ ಜೀವನವನ್ನು ಕೊನೆಗಾಣಿಸಿಕೊಳ್ಳುವುದು ನಿಜಕ್ಕೂ ಮನ ಕರಗಿಸುವಂತಹದ್ದು. ಇದರ ಜೊತೆಗೆ ಈಕೆಯಂತೆಯೆ ಬೇರೊಂದು ಕಡೆಯಲ್ಲಿ ಒಬ್ಬಳು ದರ್ಭೆಯ ಹಾಸಿಗೆಯ ಮೇಲೆ ಮಲಗಿದ್ದ ತನ್ನ ಪತಿಯ ನಿರ್ಧಾರವನ್ನು ತಿಳಿದು ತನ್ನ ಸಾವನ್ನು ನಿಷ್ಕರ್ಷಿಸಿ

> "ತಾಂ ಗಡ ನಾಳೆ ಪೋಗಿ ದಿವಿಜಾಂಗನೆಯೊಳ್ ತೊಡರ್ದಿರ್ಪನಿಲ್ಲಿ ಮಾ
> ಣ್ದಾಂ ಗಡಮಿರ್ಪೆನಂತನಿತು ಬೆಳ್ಳೆನೆ ಮುನ್ನಮೆ ಪೋಗಿ ನಲ್ಮೆಗೆ
> ಲ್ಲಂಗೊಳೆ ದೇವಲೋಕದೊಳಧೀಶನನಾನಿದಿರ್ಗೊಳ್ವೆನೋವೊ ಸ
> ಗ್ಗಂಗಳೊಳಿರ್ಪ ದೇವಡಿತಿ ತೊಟ್ತಿರೊಳಟ್ತಿನಾಗಲೀವೆನೇ"[೨]

ನನ್ನಯ ಪತಿಯು ನಾಳೆ ಹೋಗಿ ದಿವಿಜಾಂಗನೆಯರಲ್ಲಿ ಸೇರುತ್ತಾನೆ. ಆದರೆ ನಾನು ಮಾತ್ರ ಇಲ್ಲಿರುತ್ತೇನೆಯೆ? ನಾನು ಅಷ್ಟು ದಡ್ಡಳೇ? ಮೊದಲೇ ಹೋಗಿ ನನ್ನಯ ಸದ್ಗುಣಗಳು ಪ್ರಕಾಶವಾಗುವ ರೀತಿಯಲ್ಲಿ ದೇವಲೋಕದಲ್ಲಿ ನನ್ನ ಪತಿಯನ್ನು ನಾನು ಇದಿರಿಗೊಳ್ಳುತ್ತೇನೆ. ಓಹೋ ಸ್ವರ್ಗದಲ್ಲಿರುವ ದೇವ ಸ್ತ್ರೀಯರೆಂಬ ತೊಟ್ಟುಗಳಲ್ಲಿ ನನ್ನ ಪತಿಯು ಪ್ರೀತಿಸುವುದಕ್ಕೆ ನಾನು ಅವಕಾಶವನ್ನು ಕೊಡುತ್ತೇನೆಯೇ? ಎಂದು ನಿಶ್ಚಯಿಸುತ್ತಾಳೆ. ಇಲ್ಲಿ ಪತಿ ಯುದ್ಧರಂಗಕ್ಕೆ ಹೊರಟನೆಂದರೆ ಅವರ ಪತ್ನಿಯರು ಸಹಗಮನಕ್ಕೆ ಮಾನಸಿಕವಾಗಿ ಸಿದ್ಧರಾಗುತ್ತಿದ್ದ ಸಂಗತಿಗಳು ತಿಳಿಯುತ್ತವೆ. ಅಲ್ಲದೆ ಆಕೆಯು ನನ್ನ ಪತಿ ದಿವಿಜಾಂಗನೆಯರಲ್ಲಿ ಸೇರಿದರೆ ನಾನು ಮಾತ್ರ ಇಲ್ಲಿರುತ್ತೇನೆಯೆ? ಎಂದು ತನ್ನನ್ನು ತಾನು ಪ್ರಶ್ನಿಸಿಕೊಳ್ಳುವಲ್ಲಿ ಅವರ ಮನಸ್ಥಿತಿಗಳು ನಮಗೆ ತಿಳಿಯುತ್ತವೆ.

> "ಎಂದು ಕೈದವಮಿಲ್ಲದ ನಲ್ಮೆಯಂ ನಾಲಗೆಯ ತುದಿಗೆ ತಂದು ನುಡಿದಳ್
> ಮತ್ತೊರ್ವಳ್ ತನ್ನಾಣ್ಮನ ದೋರ್ವಲದಗುರ್ವಂ ನಚ್ಚಿ"[೩]

ಎಂದು ಕಪಟತನವಿಲ್ಲದ ತನ್ನಯ ಪ್ರೀತಿಯನ್ನು ನಾಲಗೆಯ ತುದಿಗೆ ತಂದು ಸ್ಪಷ್ಟವಾಗಿ ನುಡಿದಳು. ಇತ್ತ ಮತ್ತೊಬ್ಬಳು ತನ್ನ ಪ್ರೀತಿಯ ಗಂಡನ ಬಾಹುಬಲದ ಆಧಿಕ್ಯವನ್ನು ನಂಬಿ

> "ಜಲಧಿಯೊಳಾದ ಮುತ್ತುಗಳವೇಂ ಪೊಸತಾದುವೆ ನಿನ್ನ ತೋಳ ಬಾ
> ಳೊಳೆ ಬಲ ಗರ್ವದಿಂ ತೆಗೆದುದಗ್ರ ವಿರೋಧಿ ಮದೇಭಮಸ್ತಕ
> ಸ್ಥಳ ಜಳರಾಶಿಯೊಳ್ ಬಳೆದ ನಿರ್ಮಳ ನಿರ್ವ್ರಣ ವೃತ್ತಮೌಕ್ತಿಕಾ
> ವಳಿಯನೆ ತರ್ಪುದೆಂದು ನುಡಿದಟ್ಟಿಜೊಳಾಜಿಸಿದಳ್ ನಿಜೇಶನಂ"[೪]

"ಸಮುದ್ರದಲ್ಲಿ ಹುಟ್ಟಿದ ಮುತ್ತುಗಳು ಮಹತ್ತಾದುವೇನು? ನಿನ್ನ ತೋಳೆಂಬ ಕತ್ತಿಯಿಂದ ಬಲಪ್ರದರ್ಶನ ಮಾಡಿ ಉದ್ಧಾರ ಮಾಡಿದ ಭಯಂಕರವಾದ ಶತ್ರುರಾಜರ ಮದ್ದಾನೆಯ ಕುಂಭಸ್ಥಳವೆಂಬ ಮುತ್ತುಗಳೇ ಅನರ್ಘ್ಯವಾದುವು. ಅವು ನಿರ್ಮಲವೂ ಊನವಿಲ್ಲದುದೂ ದುಂಡಾದುದೂ ಆಗಿವೆ. ಆ ಮುತ್ತಿನ ರಾಶಿಯನ್ನೇ ತಂದುಕೊಡಬೇಕು ಎಂದು ಪ್ರೀತಿಯಿಂದ ನುಡಿದು ತನ್ನ ಪತಿಯನ್ನು ಸಮಾಧಾನಪಡಿಸಿದಳು"[೫] ಎಂಬ ಕವಿಯ ಮಾತುಗಳಲ್ಲಿ ಆಕೆಯ ಮನಸ್ಥಿತಿ ಅರಿವಾಗುತ್ತದೆ. ಇಲ್ಲಿ

ಕಂಡುಬರುವ ಮೂವರೂ ಅನಾಮಿಕ ಸೈನಿಕ ಹೆಂಡತಿಯರು ತಮ್ಮ ಪತಿಗಳಿಗಿಂತಲೂ ಮುಂಚೆಯೆ ಸತ್ತು ದೇವಲೋಕದಲ್ಲಿ ತಮ್ಮ ಪತಿಗಳನ್ನು ಮತ್ತೆ ಸೇರುವ ಬಯಕೆಗಳನ್ನು ವ್ಯಕ್ತಪಡಿಸುತ್ತಾರೆ. ಈ ಸಂಗತಿಗಳು ಪಂಪನ ಕಾಲಘಟ್ಟದ ಸಾಮಾನ್ಯ ಮಹಿಳೆಯರ ಸ್ಥಿತಿಗತಿಗಳು ಹೇಗಿದ್ದವು ಹಾಗೂ ಅವರ ಜೀವನ ಎಂತಹ ದುಃಸ್ಥಿತಿಯದ್ದಾಗಿತ್ತು ಎಂಬುದರ ಬಗ್ಗೆ ಬೆಳಕು ಚೆಲ್ಲುತ್ತದೆ. ಅಲ್ಲದೆ ಬದುಕುವ ಆಸೆ ಇದ್ದಾಗ್ಯೂ ಕೂಡ ಮುತ್ತೈದೆತನವೆಂಬ ಸಮಾಜ ರೂಪಿಸಿದ ಮೌಲ್ಯಗಳಿಗೆ ಕಟ್ಟು ಬಿದ್ದೋ, ತಮ್ಮ ಮಾನ, ಕೆಡುಕುಗಳಿಗೆ ಅಳುಕಿಯೋ ತಮ್ಮ ಪತಿಗಳನ್ನೆ ಹಿಂಬಾಲಿಸುವ ಮನಸ್ಥಿತಿಯನ್ನು ಅಂದಿನ ಸಮಾಜ ಆ ಕಾಲಘಟ್ಟದ ಹೆಣ್ಣುಗಳಲ್ಲಿ ರೂಪಿಸಿತ್ತೆಂಬುದು ನಮಗೆ ಸ್ಪಷ್ಟವಾಗುತ್ತದೆ.

೬.೨. ವಿದುರನ ತಾಯಿ

'ವಿಕ್ರಮಾರ್ಜುನ ವಿಜಯಯಂ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳಲ್ಲಿ ಉಲ್ಲೇಖಿತವಾಗಿರುವ ಅನಾಮಿಕ ಸ್ತ್ರೀಯರಲ್ಲಿ ವಿದುರನ ತಾಯಿಯೂ ಒಬ್ಬಳು. ಈಕೆ ಭೀಷ್ಮನು ಸ್ವಯಂವರದಲ್ಲಿ ಗೆದ್ದು ತಂದ ಅಂಬೆ, ಅಂಬಿಕೆ, ಅಂಬಾಲಿಕೆಯರೆಂಬ ಮೂವರು ಸೋದರಿಯರಲ್ಲಿ ಒಬ್ಬಳಾದ ಅಂಬಿಕೆಯ ದಾಸಿ. ಈಕೆಯನ್ನು ಪಂಪನು 'ಸೂಟಾಯ್ತೆ' ಎಂಬ ಹೆಸರಿನಿಂದ ಕರೆದಿದ್ದರೆ, ಕುಮಾರವ್ಯಾಸನು 'ಚಪಲೆ' ಎಂದು ಕರೆದಿದ್ದಾನೆ. ಪಂಪ ಹಾಗೂ ಕುಮಾರವ್ಯಾಸರ ಕೃತಿಗಳಲ್ಲಿ ಉಲ್ಲೇಖಿಸಲಾಗಿರುವ ಅಲಕ್ಷಿತ ಹಾಗೂ ಅವಜ್ಞೆಗೆ ಒಳಗಾಗಿರುವ ಸ್ತ್ರೀಯರಲ್ಲಿ ಈಕೆ ಪ್ರಧಾನವಾಗಿ ಗಮನಿಸುವಂತಹವಳು. ವ್ಯಾಸನ ನಿಯೋಗದಿಂದ ಅಂಬಿಕೆ ಹಾಗೂ ಅಂಬಾಲಿಕೆಯರು ಮಕ್ಕಳ ವರವನ್ನು ಪಡೆಯುವ ಸಂದರ್ಭವನ್ನು ಹೊರತುಪಡಿಸಿದರೆ, ಇನ್ನುಳಿದಂತೆ ಎಲ್ಲಿಯೂ ಈಕೆಯ ಪ್ರಸ್ತಾಪಗಳಿಲ್ಲ. ದಾಸಿಯಾಗಿರುವ ಕಾರಣವಾಗಿ ತನ್ನ ಒಡತಿ ಹೇಳಿದ ಕೆಲಸ ಕಾರ್ಯಗಳನ್ನಷ್ಟೇ ಮಾಡುವುದು ಇವಳ ಕಾಯಕ. ಹಾಗಾಗಿಯೆ ವ್ಯಾಸನಲ್ಲಿ ಹೋಗಿ ಕೂಡುವಂತೆ ಅಂಬಿಕೆ ಹೇಳಿದಾಗ ಯಾವುದೇ ಪ್ರತಿರೋಧಗಳನ್ನಾಗಲಿ, ತಿರಸ್ಕಾರಗಳನ್ನಾಗಲಿ ವ್ಯಕ್ತಪಡಿಸದೆ ಆತನಲ್ಲಿ ಕೂಡಿ ವಿದುರನನ್ನು ಪಡೆಯುತ್ತಾಳೆ.

ವಿದುರನ ತಾಯಿಯ ಮೂಲಕ ಪಂಪ ಹಲವು ನೆಲೆಯ ಚರ್ಚೆಗಳನ್ನು ಹಾಗೂ ಪ್ರಶ್ನೆಗಳನ್ನು ನಮ್ಮ ಮುಂದಿಡುತ್ತಾನೆ. ಭೂಮಿಯ ಒಡೆತನ ಅಥವಾ ರಾಜತ್ವದ ಪದವಿಗಳು ತಾಯಿಯ ಮೂಲದಿಂದ ಬರುವುದನ್ನು ಇಲ್ಲಿ ಗಮನಿಸಬಹುದು. ಏಕೆಂದರೆ ಧೃತರಾಷ್ಟ್ರ, ಪಾಂಡುರಾಜ ಹಾಗೂ ವಿದುರನ ಜನನಗಳಿಗೆ ವ್ಯಾಸ ಮಹರ್ಷಿ ಒಬ್ಬನೇ ಕಾರಣನಾದರೂ ಧೃತರಾಷ್ಟ್ರ ಹಾಗೂ ಪಾಂಡುರಾಜನಿಗೆ ಸಿಕ್ಕ ಗೌರವಗಳಾಗಲಿ, ರಾಜ್ಯಾಧಿಕಾರಗಳಾಗಲಿ ವಿದುರನಿಗೆ ದೊರೆಯಲಿಲ್ಲ. ಈ ಮೂವರಿಗೆ ತಂದೆ ಒಬ್ಬನೇ ಆದರೂ ತಾಯಂದಿರು ಬೇರೆ ಬೇರೆ. ಈ ಕಾರಣವಾಗಿಯೆ ಇಲ್ಲಿ ರಾಜತ್ವ ಎಂಬುದು ತಂದೆ ಮೂಲದಿಂದ ಬರುವಂತಹದ್ದಾಗಿದ್ದರೆ ಧೃತರಾಷ್ಟ್ರ ಮತ್ತು ಪಾಂಡುವಿನಂತೆ ವಿದುರನಿಗೂ ಗೌರವಾದರಗಳು ಸಿಗಬೇಕಿತ್ತು. ಆದರೆ ಇಲ್ಲಿ ವಿದುರ ದಾಸಿಯಲ್ಲಿ ಜನಿಸಿದ ಕಾರಣವಾಗಿ ಹಾಗೂ ದಾಸಿಯ ಮಗನಾದುದರಿಂದ ಆತನನ್ನು ರಾಜ್ಯಾಧಿಕಾರದ ಪ್ರತಿಯೊಂದು ಹಂತದಲ್ಲಿಯೂ ಕಡೆಗಣಿಸಲಾಗಿದೆ.

ಇದೇ ರೀತಿ ವಿದುರನ ತಾಯಿ ಕೂಡ ಅಲಕ್ಷ್ಯಕ್ಕೆ ಒಳಗಾಗಿದ್ದಾಳೆ. ಅವಳಿಗೆ ಇತರರಂತೆ ಸ್ವತಂತ್ರ ತೀರ್ಮಾನಗಳನ್ನು ತೆಗೆದುಕೊಳ್ಳಲಾಗಲಿ, ಮನಸ್ಸಿನ ಬಯಕೆಗಳನ್ನು ವ್ಯಕ್ತಪಡಿಸಲಾಗಲಿ ಅವಕಾಶಗಳಿಲ್ಲ. ಏಕೆಂದರೆ ಅವಳು ಒಬ್ಬಳು ದಾಸಿ. ದಾಸ್ಯತನವೇ ಅವಳ ಬದುಕು. ಆಕೆಗೆ ಸ್ವತಂತ್ರವಾದ ಅಸ್ತಿತ್ವವೆಂಬುದೇ ಇಲ್ಲ. ಅಲ್ಲದೆ ಇಲ್ಲಿ ಹೆಣ್ಣಿನಿಂದ ಮತ್ತೊಂದು ಹೆಣ್ಣಿನ ಮೇಲೆ ಶೋಷಣೆಗಳು ಜರುಗುವುದನ್ನು ಕಾಣಬಹುದು. ಸತ್ಯವತಿ ತನ್ನ ವಂಶವನ್ನು ಮುಂದುವರೆಸಿಕೊಳ್ಳುವ ಸಲುವಾಗಿ ಸೊಸೆಯಂದಿರನ್ನು ಕುರೂಪಿಯಾದ ವ್ಯಾಸನಲ್ಲಿಗೆ ಕಳುಹಿಸುತ್ತಾಳೆ. ಹೀಗೆ ಕಳುಹಿಸುವ ಮುನ್ನ ಅವರಿಗೆ ಆತನಲ್ಲಿಗೆ ಹೋಗಲು ಒಪ್ಪಿಗೆ ಇದೆಯೆ? ಅಥವಾ ಇಲ್ಲವೇ? ಎಂಬಂತಹ ಯಾವುದೇ ಅಭಿಪ್ರಾಯಗಳನ್ನು ಕೇಳುವುದಿಲ್ಲ. ಆದರೂ ಅವರಿಬ್ಬರು ಯಾವುದೇ ರೀತಿಯ ಪ್ರಶ್ನೆಗಳನ್ನು ಎತ್ತದೆ ವ್ಯಾಸನೊಂದಿಗೆ ಕೂಡುತ್ತಾರೆ. ನಂತರ ಅಂಬಿಕೆಗೆ ಮತ್ತೊಬ್ಬ ಮಗನ ವರವನ್ನು ಬೇಡಿಕೊಳ್ಳುವಂತೆ ಹೇಳಿದಾಗ ಆಕೆ ತನ್ನ ದಾಸಿಯನ್ನು ಮುನಿಯ ಬಳಿ ಕಳುಹಿಸುತ್ತಾಳೆ. ಇಲ್ಲಿ ದಾಸಿಯ ಅಭಿಪ್ರಾಯವನ್ನೂ ಕೇಳುವುದಿಲ್ಲ. ಹೀಗೆ ಹೆಣ್ಣಿನಿಂದಲೆ ಮತ್ತೊಂದು ಹೆಣ್ಣಿನ ಮೇಲೆ ಶೋಷಣೆಗಳು ಜರುಗುವುದು ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿ ಕಣ್ಣಿಗೆ ರಾಚುತ್ತದೆ. ಆದರೆ ಇಲ್ಲಿನ ಹೆಣ್ಣುಗಳು ಹೊಂದಿರುವ ಸ್ಥಾನಮಾನಗಳು ಮಾತ್ರ ಬೇರೆ ಬೇರೆಯಾಗಿವೆ ಅಷ್ಟೆ. ಈ ಹಿನ್ನೆಲೆಯಲ್ಲಿ ವಿದುರನ ತಾಯಿಯು ಎಲ್ಲಿಯೂ ಚರ್ಚೆಗೆ ಒಳಪಡುವುದೇ ಇಲ್ಲ. ಈಕೆಯ ವಿವರಗಳನ್ನು ಪಂಪ ತನ್ನ 'ವಿಕ್ರಮಾರ್ಜುನ ವಿಜಯಂ' ಕೃತಿಯ ಪ್ರಥಮಾಶ್ವಾಸದಲ್ಲಿ ಈ ರೀತಿಯಾಗಿ ಕಟ್ಟಿಕೊಟ್ಟಿದ್ದಾನೆ.

"ಅಂತು ದಿವ್ಯ ಸಂಯೋಗದೊಳಿರ್ವರುಂ ಗರ್ಭಮಂ ತಾಳ್ದರ್ ಮತ್ತೊರ್ವ ಮಗನಂ ವರಮಂ ಬೇಡೆಂದಂಬಿಕೆಗೆ ಪೇೞ್ದೊಡಾಕೆಯುಂ ವ್ಯಾಸಭಟ್ಟಾರಕನಲ್ಲಿಗೆ ಪೋಗಲಲಸಿ ತನ್ನ ಸೂೞಾಯ್ತೆಯಂ ತನ್ನವೊಲೆ ಕಯ್ಗೆಯ್ದು ಬರವಂ ಬೇಡಲಟ್ಟಿದೊಡಾಕೆಗೆ ವರದನಾಗಿ ವ್ಯಾಸಮುನೀಂದ್ರಂ ಸತ್ಯವತಿಗಂ ಭೀಷ್ಮಂಗಮಿಂತೆಂದನೆನ್ನ ವರಪ್ರಸಾದ ಕಾಲದೊಳೆನ್ನಂ ಕಂಡಂಬಿಕೆ ಕಣ್ಣಂ ಮುಚ್ಚಿದಳಪ್ಪುದಱಿಂದಾಕೆಗೆ ಧೃತರಾಷ್ಟ್ರನೆಂಬ ಮಗನತ್ಯಂತ ಸುಂದರಾಂಗನಾಗಿಯುಂ ಜಾತ್ಯಂಧನಕ್ಕುಮಂಬಾಲೆ ಮದ್ರೂಪಮಂ ಕಂಡು ಮೊಗಮಂ ಪಾಂಡುರಂ ಮಾಡಿದಳಪ್ಪುದಱಿಂದಾಕೆಗೆ ಪಾಂಡುರೋಗ ಸಂಗತನುಮನೇಕ ಭದ್ರ ಲಕ್ಷಣ ಲಕ್ಷಿತನುಮತ್ಯಂತ ಪ್ರತಾಪನುಮಾಗಿ ಪಾಂಡುರಾಜನೆಂಬ ಮಗನಕ್ಕುಮಂಬಿಕೆಯ ಸೂೞಾಯ್ತೆಯಪ್ಪಾಕೆ ದರಹಸಿತ ವದನಾರವಿಂದೆಯಾಗಿ ಬರವಂ ಕೈಕೊಂಡಳಪ್ಪುದಱಿಂದಾಕೆಯ ಮಗಂ ವಿದುರನೆಂಬನನಂಗಾಕಾರನುಮಾಚಾರವಂತನುಂ ಬುದ್ಧಿವಂತನುಮಕ್ಕುಮೆಂದು ಪೇೞ್ದು ಮುನಿಪುಂಗವಂ ಪೋದನಿತ್ತಂ"[೬]

ಈ ರೀತಿಯಾಗಿ ದಿವ್ಯವಾದ ಋಷಿಯ ಸಂಯೋಗದಿಂದ ಅಂಬಿಕೆ ಹಾಗೂ ಅಂಬಾಲಿಕೆಯರು ಗರ್ಭವನ್ನು ಧರಿಸಿದರು. ಇನ್ನೊಬ್ಬ ಮಗನಾಗುವಂತೆ ವರವನ್ನು ಕೇಳಲು ಸತ್ಯವತಿಯು ಅಂಬಿಕೆಗೆ ಹೇಳಲು ಅವಳು ವ್ಯಾಸನ ಹತ್ತಿರ ಹೋಗಲು ಆಯಾಸಪಟ್ಟು ತನ್ನ ಸೂಳಾಯ್ತೆಯನ್ನು ತನ್ನಂತೆಯೇ ಅಲಂಕರಿಸಿ ಕಳುಹಿಸಿಕೊಡುತ್ತಾಳೆ. ಅವಳಿಗೂ ವ್ಯಾಸನು ವರವನ್ನು ಕೊಟ್ಟು ಕಳುಹಿಸುತ್ತಾನೆ. ನಂತರ

ವ್ಯಾಸನು ತಾನು ವರಗಳನ್ನು ನೀಡುವಾಗಿನ ಸಂದರ್ಭದಲ್ಲಿ ಆ ಸ್ತ್ರೀಯರು ನೀಡಿದ ಪ್ರತಿಕ್ರಿಯೆಗಳಿಗೆ ತಕ್ಕಂತಹ ಮಕ್ಕಳು ಜನಿಸುವರು ಎಂದು ಭೀಷ್ಮ ಮತ್ತು ಸತ್ಯವತಿಗೆ ತಿಳಿಸಿ ತಾನು ಹೊರಟು ಹೋಗುತ್ತಾನೆ.

ಆದರೆ ಇಲ್ಲಿ ಪ್ರಧಾನವಾಗಿ ಗಮನಿಸುವಂತಹದ್ದು ಪಂಪ ಬಳಸುವ ಅಂಬಿಕೆಯ 'ಸೂಟಿಾಯ್ತೆ' ಎಂಬ ಪದ ಪ್ರಮುಖವಾದುದು. ಏಕೆಂದರೆ ಆಕೆಗೆ ಹೆಸರನ್ನು ಸಹ ನೀಡದಿರುವುದು ಆ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿನ ಸಾಮಾನ್ಯ ಸ್ತ್ರೀಯರ ಸ್ಥಿತಿಗತಿಗಳನ್ನು ನಮ್ಮ ಗಮನಕ್ಕೆ ತಂದುಕೊಡುತ್ತದೆ. ಮುಂದುವರೆದು ಇಲ್ಲಿ ವ್ಯಾಸ ಹೇಳುವ 'ಅಂಬಿಕೆಯ ಸೂಟಿಾಯ್ತೆಯಪ್ಪಾಕೆ ದರಹಸಿತ ವದನಾರವಿಂದೆಯಾಗಿ ಬರವಂ ಕೈಕೊಂಡಳ್' ಎಂಬ ಮಾತು ಬೇರೆಯದೇ ಆದ ಚರ್ಚೆಗಳ ಕಡೆ ನಮ್ಮ ಗಮನವನ್ನು ಸೆಳೆಯುತ್ತದೆ. ಏಕೆಂದರೆ ಅಂಬಿಕೆ ಹಾಗೂ ಅಂಬಾಲಿಕೆಯರು ವ್ಯಾಸನ ರೂಪನ್ನು ನೋಡಿ ಹೇಸಿಗೆಯಿಂದ ಅಸಹ್ಯಪಟ್ಟುಕೊಂಡರೆ 'ಸೂಟಿಾಯ್ತೆ' ಮಾತ್ರ ದರಹಸಿತ ವದನಾರವಿಂದೆಯಾಗಿ ವ್ಯಾಸನನ್ನು ಕೂಡಿದಳು ಎಂಬ ಮಾತು ಪಂಪನ ಕಾಲಘಟ್ಟದ ತಳವರ್ಗದ ಮಹಿಳೆಯರ ಸ್ಥಿತಿಗತಿಗಳನ್ನು ತಿಳಿಸಿಕೊಡುತ್ತದೆ. ಏಕೆಂದರೆ ಎಂತಹ ಅಸಹ್ಯ ಹುಟ್ಟಿಸುವಂತೆಯೆ ಇರಲಿ, ಕೊಳಕನಾಗಲಿ ಅಂತಹ ಗಂಡಿನ ಜೊತೆ ದಾಸಿಯರು, ತಳವರ್ಗದ ಹೆಣ್ಣು ಮಕ್ಕಳು ಯಾವುದೇ ರೀತಿಯ ಪ್ರತಿರೋಧಗಳನ್ನು, ತಿರಸ್ಕಾರಗಳನ್ನು ವ್ಯಕ್ತಪಡಿಸದೆಯೇ ಸೇರಬೇಕಿತ್ತು ಎಂಬ ಅಂಶ ನಮಗೆ ಇಲ್ಲಿ ತಿಳಿಯುತ್ತದೆ. ಅಲ್ಲದೆ ಇವರಿಗೆ ಆಯ್ಕೆಯ ಸ್ವಾತಂತ್ರ್ಯಗಳಾಗಲಿ, ಅವಕಾಶಗಳಾಗಲಿ ಇಲ್ಲ. ಮೇಲ್ವರ್ಗದ ಹಾಗೂ ಅರಮನೆಯ ಸ್ತ್ರೀಯರು ಹೇಳಿದಂತೆ ನಡೆದುಕೊಳ್ಳಬೇಕು. ಈ ದೃಷ್ಟಿಯಿಂದ ವಿದುರನ ತಾಯಿ ಇಲ್ಲಿ ಚರ್ಚೆಗೆ ಅರ್ಹಳಾಗಿದ್ದು, ಇಲ್ಲಿನವರೆಗಿನ ಅಧ್ಯಯನ ಹಾಗೂ ಬರಹಗಳಲ್ಲಿ ಅಲಕ್ಷ್ಯಕ್ಕೆ ಒಳಗಾಗಿದ್ದಾಳೆ. ಅಲ್ಲದೆ ಪಂಪ ತನ್ನ ಕೃತಿಯಲ್ಲಿ ಉಲ್ಲೇಖಿಸುವ ಅನೇಕ ಅಲಕ್ಷಿತ ಹಾಗೂ ತಳವರ್ಗದ ಹೆಣ್ಣುಗಳಿಗೆ ಹೆಸರು ಇಲ್ಲದಿರುವ ಅಂಶ ಸೂಕ್ಷ್ಮವಾಗಿ ಗಮನಿಸತಕ್ಕ ಸಂಗತಿಯಾಗಿದೆ.

ಇದರಂತೆಯೆ ಕುಮಾರವ್ಯಾಸನ ಕೃತಿಯಲ್ಲಿಯೂ ವಿದುರನ ತಾಯಿ ಕಡೆಗಣನೆಗೆ ಒಳಗಾಗಿದ್ದು, ತನ್ನ ಒಡತಿಯಾದ ಅಂಬಿಕೆಯ ಆಜ್ಞಾನುಸಾರಿಯಾಗಿ ನಡೆಯುವವಳಾಗಿದ್ದಾಳೆ. ಇವಳಿಗೆ ಇವಳದೇ ಆದ ಸ್ವತಂತ್ರವಾದ ಅಸ್ತಿತ್ವವಾಗಲಿ, ವ್ಯಕ್ತಿತ್ವವಾಗಲಿ ಇಲ್ಲ. ಈಕೆಯ ವಿವರಗಳನ್ನು ಕವಿ ಈ ರೀತಿಯಾಗಿ ತಿಳಿಸುತ್ತಾನೆ.

> "ಬಳಿಕಲಂಬಾಲಿಕೆಯನಲ್ಲಿಗೆ
> ಕಳುಹಲಾಕೆಗೆ ಭಯದಿ ಮುಖದಲಿ
> ಬಿಳುಪು ಮಸಗಿತು ಮುನಿಯ ರೌದ್ರಾಕಾರದರ್ಶನದಿ
> ಲಲನೆ ಮರಳಿದಳೊಬ್ಬ ಸತಿಯನು
> ಕಳುಹಲಾ ವಧು ಚಪಲದೃಷ್ಟಿಯೊ
> ಳಳುಕದೀಕ್ಷಿಸಲಾಯ್ತು ಗರ್ಭಾಧಾನವನಿಬರಿಗೆ"[೭]

ಇಲ್ಲಿ ಕುಮಾರವ್ಯಾಸ ಕೂಡ ಆಕೆಗೆ ಹೆಸರು ನೀಡಿಲ್ಲ. ಆಕೆಗೆ 'ಚಪಲೆ' ಎಂಬ ಪದ ಬಳಸಿ ಆಕೆಯ ವಿವರಗಳನ್ನು ಹೇಳಿದ್ದಾನೆ. ಈ ಎರಡೂ ಕೃತಿಗಳ ಸಂದರ್ಭವನ್ನು ಗಮನಿಸಿದಾಗ ತಳವರ್ಗದ ಹೆಣ್ಣುಗಳು ಇರುವುದು ಅರಮನೆ ಹಾಗೂ ಮೇಲ್ವರ್ಗದ ಸ್ತ್ರೀಯರ ಸೇವೆಗಾಗಿ ಎಂಬ ಧೋರಣೆ ನಮ್ಮ ಗಮನಕ್ಕೆ ಬರುತ್ತದೆ. ಜೊತೆಗೆ ಇದು ಆ ಕಾಲದ ಸಾಮಾಜಿಕ ವ್ಯವಸ್ಥೆಯನ್ನು ತಿಳಿಸಿಕೊಡುತ್ತದೆ. ಅಲ್ಲದೆ ಇಲ್ಲಿ ಆಕೆಗೆ ಒಪ್ಪಿಗೆ ಇತ್ತೆ? ಇರಲಿಲ್ಲವೆ? ಈ ಯಾವ ಅಭಿಪ್ರಾಯಗಳಿಗೂ ಇಲ್ಲಿ ಮನ್ನಣೆ ನೀಡಿಲ್ಲ.

೬.೩. ಗಂಧರ್ವನ ಪತ್ನಿ

'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಲ್ಲಿ ಕಂಡುಬರುವ ಮತ್ತೊಬ್ಬಳು ಅನಾಮಿಕ ಸ್ತ್ರೀ ಗಂಧರ್ವನ ಪತ್ನಿ. ಈಕೆಗೂ ಯಾವುದೇ ಹೆಸರಿಲ್ಲ. ಗಂಧರ್ವ ಸ್ತ್ರೀಯಾದರು ಈಕೆಗೂ ನೋವುಗಳಿವೆ. ಭಯ, ಆತಂಕ, ತಲ್ಲಣಗಳೆಂಬ ಮಾನಸಿಕ ಸಂಘರ್ಷದ ಭಾವಗಳಿವೆ. ಅರಗಿನ ಮನೆಯಿಂದ ತಪ್ಪಿಸಿಕೊಂಡ ಪಾಂಡವರು ಬ್ರಾಹ್ಮಣ ವೇಷದಲ್ಲಿ ಕಾಲ ಕಳೆಯುತ್ತಿರುತ್ತಾರೆ. ಈ ಸಮಯದಲ್ಲಿ ದ್ರೌಪದಿಯ ಸ್ವಯಂವರ ಏರ್ಪಟ್ಟಿರುವ ಸುದ್ಧಿ ತಿಳಿಯುತ್ತದೆ. ಅಲ್ಲಿಗೆ ಹೋಗೋಣವೆಂದು ತೀರ್ಮಾನಿಸಿ ನಟ್ಟ ನಡುರಾತ್ರಿಯಲ್ಲಿ ಕೊಳ್ಳಿಯ ಬಿಂದು ಬೆಳಕಿನ ಸಹಾಯದಿಂದ ಹೇರಡವಿಯಲ್ಲಿ ಮುಂದುವರಿಯುತ್ತಿದ್ದರು.

ಹೀಗೆ ಬರುವಾಗ ಜಲವಿಹಾರದಲ್ಲಿದ್ದ ಗಂಧರ್ವ ವಧುಗಳ ಸಮೂಹವನ್ನು ನೋಡಿದರು. ಪಾಂಡವರನ್ನು ಕಂಡ ಗಂಧರ್ವ ನಾರಿಯರು ಲಜ್ಜಾಭಾವದಿಂದ ದಡಕ್ಕೆ ಬಂದು ತಮ್ಮ ಅಂಗೋಪಾಂಗ ಲತೆಗಳಿಗೆ ಸೀರೆಗಳನ್ನು ತೆರೆ ಹಿಡಿದರು. ಆಗ 'ಅಂಗಾರವರ್ಮ'ನೆಂಬ ಗಂಧರ್ವನು ಪಾಂಡವರನ್ನು ಕುರಿತು ಇಂತಹ ನಟ್ಟ ನಡುವಿರುಳಿನಲ್ಲಿ ದರ್ಪವಿಕಾರದಿಂದ ನುಗ್ಗಿ ಬರುತ್ತಿರುವವರು ಯಾರಿವರು? ಹಿಡಿದುಕೊಳ್ಳಿ ಎಂದು ಕೂಗುತ್ತಾ ಧನುಸ್ಸನ್ನು ಕೈಗೆತ್ತಿಕೊಂಡು ಬಂದು ಅರ್ಜುನನನ್ನು ಪ್ರಶ್ನಿಸಿದನು. ಅದಕ್ಕೆ ಪಾರ್ಥನು ನಮ್ಮ ಕಾರ್ಯವಶದಿಂದ ಹೋಗುತ್ತಿದ್ದೇವೆಂದು ನುಡಿಯಲು ಆ ಗಂಧರ್ವ ರಾಜನು 'ಇರುಳಿನ ಪೂರ್ವಭಾಗದಲ್ಲಿ ನರರು ಸುಳಿಯಬೇಕು, ಉತ್ತರ ಭಾಗದಲ್ಲಿ ಖೇಚರರು ಸುಳಿಯಬೇಕು' ಎಂದು ಬ್ರಹ್ಮಸೃಷ್ಟಿಯ ನಿಯಮವಿದೆ. ಹಾಗಾಗಿ ಇದು ಇರುಳಿನ ಉತ್ತರ ಭಾಗ, ನೀವು ನೋಡಿದರೆ ನರರು. ಈಗ ನೀವು ಬರುವುದು ಉಚಿತವಲ್ಲ ಎಂದು ನುಡಿದು ನಿಮ್ಮ ಉದ್ದಂಡ ದರ್ಪ ಜ್ವರಕ್ಕೆ ಔಷಧಿಯನ್ನೆರೆಯುತ್ತೇನೆ ಎಂದು ಬಾಣ ಹೊಡೆದನು. ಆ ಸಂದರ್ಭವನ್ನು ಕುಮಾರವ್ಯಾಸ ಈ ರೀತಿಯಾಗಿ ಚಿತ್ರಿಸಿದ್ದಾನೆ.

"ಉರಿದುದಾ ರಥವವನ ಮೈಯಲಿ
ಕರಿಕುವರಿತರಲೋಡಿ ಹೊಕ್ಕನು
ಸರಸಿಯನು ಶಿಖಿಯೊಡನೆ ಹೊಕ್ಕುದು ನೀರನುರೆ ಸುರಿದು

ತರುಣಿ ಹಾಹಾ ಕೆಟ್ಟೆನೆಂದ
ಬ್ಬರಿಸಲಾ ಗಂಧರ್ವನಂಗನೆ
ಹರಿದಳೆಡೆಗೈಯಿಂದ ಸಂವರಿಸುತ್ತ ಬಿಡುಮುಡಿಯ"[೮]

ಕೊಳ್ಳಿಯಿಂದ ಹೊಡೆದ ಆ ಕ್ಷಣವೇ ಕಪ್ಪು ಹೊಗೆಯ ಮಬ್ಬಿನಿಂದಲೂ, ಹೊಳೆವ ಕಿಡಿಗಳಿಂದಲೂ ಆ ಅಸ್ತ್ರ ಮುನ್ನುಗ್ಗಿ ಗಂಧರ್ವನ ರಥವನ್ನೂ, ಆತನ ಧನಸ್ಸು, ತನು, ಸರಳು ಹಾಗೂ ಸಾರಥಿಯನ್ನು ಮುತ್ತಲು ರಥ ಉರಿದು ಹೋಯಿತು. ಮೈ ಕರಿಕಾಗಲು ಆತ ಓಡಿ ಹೋಗಿ ಸರೋವರವನ್ನು ಹೊಕ್ಕನು. ಆಗ ಬೆಂಕಿಯೂ ಬೆನ್ನತ್ತಿ ನೀರನ್ನು ಹೊಕ್ಕಲು ಗಂಧರ್ವನು ಉರಿಗೆ ನೀರೆರಚುತ್ತ ತನ್ನ ಹೆಂಡತಿಯನ್ನು ಕುರಿತು ತರುಣಿ ಹಾಹಾ ಕೆಟ್ಟೆನೆಂದು ಕೂಗಿಕೊಳ್ಳಲು ಆತನ ಅಂಗನೆ ಎಡಗೈಯಿಂದ ಬಿಡುಮುಡಿಯನ್ನು ಸಂವರಿಸಿಕೊಳ್ಳುತ್ತ ಓಡಿಬಂದಳು. ಈ ವಿವರಗಳು ಅರ್ಜುನ ಮತ್ತು ಆ ಗಂಧರ್ವನ ನಡುವಿನ ಘರ್ಷಣೆಗಳನ್ನು ತಿಳಿಸುತ್ತವೆ. ಇಲ್ಲಿ ಗಂಧರ್ವನ ಸಾಂಸ್ಕೃತಿಕ ಪರಿಸರಕ್ಕೆ ಅರ್ಜುನ ಮೊದಲಾದವರ ಅತಿಕ್ರಮ ಪ್ರವೇಶವಾಗಿರುವುದು ಇವರಿಬ್ಬರ ಸಂಘರ್ಷಕ್ಕೆ ಕಾರಣವಾಗಿದೆ. ಆದರೆ ಇಲ್ಲಿ ಆತಂಕ ಮತ್ತು ಭಯಗಳಿಗೆ ಒಳಗಾಗುತ್ತಿರುವುದು ಆ ಗಂಧರ್ವನ ಪತ್ನಿ ಎಂಬುದು ಗಮನಿಸತಕ್ಕ ಸಂಗತಿ.

"ಬಂದು ಯಮನಂದನನ ಚರಣ
ದ್ವಂದ್ವದಲಿ ಚಾಚಿದಳು ನೊಸಲನು
ತಂದೆ ಕರುಣಿಸು ಕಾಂತಭಿಕ್ಷವ ಕರುಣಿಸೆನಗೆನಲು
ಮುಂದುವರಿಯದಿರೆಲೆ ಧನಂಜಯ
ಕೊಂದರೆನ್ನಾಣೀಕೆಯರಸನ
ತಂದು ಕೊಡು ಬೇಗದಲಿ ಉಪಸಂಹರಿಸು ಶಿಖಿಶರವ"[೯]

ಬಂದು ಧರ್ಮರಾಯನ ಎರಡೂ ಚರಣದಲ್ಲಿ ತನ್ನ ಹಣೆಯನ್ನು ಚಾಚಿದಳು. ತಂದೇ ಕರುಣಿಸಬೇಕು. ನನಗೆ ಪತಿ ಭಿಕ್ಷೆಯನ್ನು ನೀಡಬೇಕು ಎಂದು ಬೇಡಿಕೊಂಡಳು. ಈ ರೀತಿಯಾಗಿ ಆಕೆ ತನ್ನ ಪತಿಯ ಪ್ರಾಣವನ್ನು ಉಳಿಸಿಕೊಡಬೇಕೆಂದು ಕೇಳಿಕೊಂಡಾಗ ಯಮನಂದನನು ಅರ್ಜುನ ಮುಂದುವರಿಯದಿರು. ಅವನನ್ನು ಕೊಂದರೆ ನನ್ನಾಣೆ. ಆತ ಈಕೆಯ ಅರಸ. ಆತನನ್ನು ತಂದುಕೊಡು. ಬೇಗ ಅಸ್ತ್ರವನ್ನು ಉಪಸಂಹರಿಸು ಎಂದು ತಿಳಿಸಲು ತಕ್ಷಣವೇ ಅರ್ಜುನ ಉರಿಯನ್ನು ನಂದಿಸಿದನು. ಇಲ್ಲಿ ಗಮನಿಸುವ ಸಂಗತಿಯೆಂದರೆ ಗಂಧರ್ವನ ಪತ್ನಿಯಾದರೂ ಆಕೆಯಲ್ಲು ಮನುಷ್ಯತ್ವದ ಭಾವನೆಗಳಿವೆ. ತನ್ನ ಗಂಡನನ್ನು ಉಳಿಸಿಕೊಳ್ಳಬೇಕಾದ ಅನಿವಾರ್ಯತೆ, ನೋವು, ತಲ್ಲಣದ ಭಾವನೆಗಳಿವೆ. ಪ್ರಧಾನವಾಗಿ ಆಕೆ ಕೂಡ ಮನಸ್ಸಿರುವ ಒಂದು ಹೆಣ್ಣು ಎಂಬುದು ನಮಗೆ ಇಲ್ಲಿ ತಿಳಿಯುತ್ತದೆ. ಆಕೆ ಗಂಧರ್ವನ ಪತ್ನಿಯಾದರೂ ಭಾವನೆಗಳ ವಿಚಾರಕ್ಕೆ ಬಂದರೆ ಆಕೆ ಎಲ್ಲ ಜೀವಿಗಳಂತೆ ಮನಸ್ಸಿರುವ ಒಂದು ಜೀವಿ.

ಈಕೆಯಲ್ಲಿಯೂ ದುಃಖ, ಆತಂಕದ ಛಾಯೆಗಳು ಒಡಮೂಡುತ್ತವೆ. ಜೊತೆಗೆ ಗಂಡನಿಗೆ ಆಪತ್ತು ಒದಗಿದಾಗ ತನ್ನ ಅಭದ್ರತೆಯ ಬದುಕಿನ ವಿವರಗಳು ಆಕೆಯನ್ನು ತಲ್ಲಣಕ್ಕೆ ಒಳಗು ಮಾಡುವುದು ಕಂಡುಬರುತ್ತದೆ. ಈಕೆ ಗಂಧರ್ವ ಸ್ತ್ರೀಯಾದರೂ ಸಾಮಾನ್ಯ ಹೆಣ್ಣಿನಂತೆ ತನ್ನ ಪತಿಯನ್ನು ಉಳಿಸಿಕೊಳ್ಳಲು ಧರ್ಮರಾಯನನ್ನು ಬೇಡಿಕೊಳ್ಳುವ ಸಂಗತಿ ಚರ್ಚಾರ್ಹವಾದುದು.

ಕೊನೆ ಟಿಪ್ಪಣಿಗಳು

೧. ವಿಕ್ರಮಾರ್ಜುನ ವಿಜಯಂ, ೧೦/೪೪-ವ.

೨. ವಿಕ್ರಮಾರ್ಜುನ ವಿಜಯಂ, ೧೦/೪೫.

೩. ವಿಕ್ರಮಾರ್ಜುನ ವಿಜಯಂ, ೧೦/೪೫-ವ.

೪. ವಿಕ್ರಮಾರ್ಜುನ ವಿಜಯಂ, ೧೦/೪೬.

೫. ಪಂಪ ಮಹಾಕವಿ ವಿರಚಿತ ಪಂಪಭಾರತಂ, ಮು.ಸಂ-೪೬೭.

೬ ವಿಕ್ರಮಾರ್ಜುನ ವಿಜಯಂ, ೧/೮೫-ವ.

೭ ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ-೩/೭.

೮. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ-೧೧/೩೪.

೯. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ-೧೧/೩೫.

ಅಧ್ಯಾಯ : ಏಳು

ಅಲಕ್ಷಿತ ಹಾಗೂ ಇತರ ಮಹಿಳೆಯರ ಸಂಘರ್ಷಗಳು

೭.೧ ನಿಷಾದಿತಿ

೭.೨ ದುಶ್ಯಳೆ

೭.೩ ಮದನಲತೆ

೭.೪ ಉತ್ತರೆ

೭.೫ ತಾಪಸ ಕನ್ಯೆಯರು

೭.೬ ಶಿಶುಪಾಲಕನ ತಾಯಿ

ಅಧ್ಯಾಯ : ಏಳು

ಅಲಕ್ಷಿತ ಹಾಗೂ ಇತರ ಮಹಿಳೆಯರ ಸಂಘರ್ಷಗಳು

ಪಂಪ ಹಾಗೂ ಕುಮಾರವ್ಯಾಸರು ಚಿತ್ರಿಸಿರುವ ಸ್ತ್ರೀ ಪಾತ್ರ ಪ್ರಪಂಚದಲ್ಲಿ ನಿರ್ಲಕ್ಷ್ಯಕ್ಕೆ ಒಳಗಾದ ಅಲಕ್ಷಿತ ಸ್ತ್ರೀಯರು ಕೂಡ ಗಮನಿಸುವಂತಹ ವರ್ಗ. ತನ್ನ ಜಾತಿ, ವರ್ಗ, ಅಂತಸ್ತು ಹಾಗೂ ಯಾರ ಬೆಂಬಲವೂ ಇಲ್ಲದೆ ಪ್ರಧಾನ ಸ್ತರದಿಂದ ಅಂಚಿಗೆ ತಳ್ಳಲ್ಪಟ್ಟಿರುವುದು ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ 'ವಿಕ್ರಮಾರ್ಜುನ ವಿಜಯಂ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳಲ್ಲಿನ 'ನಿಷಾದಿತಿ', 'ದುಶ್ಯಳೆ', 'ಮದನಲತೆ', 'ಉತ್ತರೆ', 'ತಾಪಸ ಕನ್ಯೆಯರು' ಹಾಗೂ 'ಶಿಶುಪಾಲಕನ ತಾಯಿ' ಮೊದಲಾದ ಅಲಕ್ಷಿತ ಸ್ತ್ರೀಯರನ್ನು ಅಧ್ಯಯನಕ್ಕೆ ಒಳಪಡಿಸುವುದು ಮುಖ್ಯವಾದ ಸಂಗತಿ. ಈ ಇಬ್ಬರೂ ಕವಿಗಳ ಕಾವ್ಯಗಳಲ್ಲಿನ ಪ್ರತಿಯೊಂದು ಹೆಣ್ಣು ಕೂಡ ದುಃಖ, ನೋವು, ಶೋಕ, ಪಶ್ಚಾತ್ತಾಪ, ತಳಮಳ ಹಾಗೂ ಕರುಣೆಯ ಸಾಗರದಲ್ಲಿ ಮಿಂದು ಬಂದವರಾಗಿದ್ದಾರೆ.

ಇಲ್ಲಿನ ಅಲಕ್ಷಿತ ಸ್ತ್ರೀಯರಲ್ಲಿ 'ನಿಷಾದಿತಿ'ಯಂತಹ ತಳವರ್ಗದ ಸ್ತ್ರೀ ಮಾತ್ರವಲ್ಲದೆ, ದುರ್ಯೋಧನನ ತಂಗಿಯಾದ 'ದುಶ್ಯಳೆ', ಅಭಿಮನ್ಯುವಿನ ಪತ್ನಿಯಾದ 'ಉತ್ತರೆ', ಶಿಶುಪಾಲಕನ ತಾಯಿಯಾದ 'ಸಾತ್ವತಿ', ನಾಗ ಕನ್ಯೆಯಾದ 'ಮದನಲತೆ' ಹಾಗೂ 'ತಾಪಸ ಕನ್ಯೆಯರು' ಮೊದಲಾದ ಅರಮನೆ ಹಾಗೂ ನಾಗಲೋಕದ ಸ್ತ್ರೀಯರು ಕೂಡ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು ಕಂಡುಬರುತ್ತದೆ. ಇದಕ್ಕೆ ಆ ಕಾಲದ ಸಮಾಜ ಹೆಣ್ಣನ್ನು ಪರಿಭಾವಿಸಿದ್ದ ಮನಸ್ಥಿತಿ ಹಾಗೂ ಸಾಮಾಜಿಕ, ರಾಜಕೀಯ ಸ್ಥಿತಿಗಳು ಕಾರಣವಾಗಿವೆ. ಅಲ್ಲದೆ ಇಲ್ಲಿಯವರೆಗಿನ ಅಧ್ಯಯನಗಳು ಇಂತಹ ಅಲಕ್ಷಿತ ಸ್ತ್ರೀಯರನ್ನು ಕಡೆಗಣಿಸಿರುವುದು ನಮ್ಮ ಅಧ್ಯಯನಗಳು ಸಾಗುತ್ತಿರುವ ದಿಕ್ಕನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ. ಕೆಲವು ಅಲಕ್ಷಿತ ಸ್ತ್ರೀಯರು ಅಧ್ಯಯನಕ್ಕೊಳಪಟ್ಟಿದ್ದರೂ ಸಂಖ್ಯಾ ಪ್ರಮಾಣದಲ್ಲಿ ವಿರಳವಾಗಿರುವುದು ತಿಳಿಯುತ್ತದೆ. ಈ ಕಾರಣವಾಗಿ ಪ್ರಸ್ತುತ ಅಧ್ಯಯನದಲ್ಲಿ ಇಂತಹ ತಳವರ್ಗದ ಹಾಗೂ ನಿರ್ಲಕ್ಷಿತ ಮಹಿಳೆಯರನ್ನು ಹಾಗೂ ಅವರ ಸಂಘರ್ಷಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.

ಯಾವುದೇ ತಪ್ಪುಗಳಿಲ್ಲದಿದ್ದರೂ ಸಹ ತನ್ನ ಮಕ್ಕಳೊಂದಿಗೆ ಅಕಾಲ ಮರಣಕ್ಕೆ ಒಳಗಾಗುವ 'ನಿಷಾದಿತಿ' ಎಂಬ ಬೇಡತಿಯಾಗಲಿ, ದುರ್ಯೋಧನನ ತಂಗಿಯಾಗಿದ್ದರೂ, ತನ್ನ ಗಂಡನನ್ನು ಉಳಿಸಿಕೊಳ್ಳಲಿಕ್ಕಾಗಿ ಮರುಗುವ 'ದುಶ್ಯಳೆ', ಕೃಷ್ಣನ ಕೋಪದಿಂದ ಮಗನನ್ನು ರಕ್ಷಿಸಿಕೊಳ್ಳಲು

ಪ್ರಯತ್ನಿಸುವ ಶಿಶುಪಾಲಕನ ತಾಯಿ ಇವರೆಲ್ಲರೂ ಕೂಡ ಅಧ್ಯಯನಗಳಿಗೆ ಯೋಗ್ಯರಾಗಿದ್ದಾರೆ. ಅವರ ಆಸೆ, ಆಕಾಂಕ್ಷೆಗಳು, ತಳಮಳಗಳು, ಮನದ ಬಯಕೆಗಳನ್ನು ಅಧ್ಯಯನಕ್ಕೊಳಪಡಿಸುವುದು ಮುಖ್ಯವಾಗಿದೆ.

೭.೧. ನಿಷಾದಿತಿ

ಪಂಪ ಹಾಗೂ ಕುಮಾರವ್ಯಾಸರು ತಮ್ಮ ಕೃತಿಗಳಲ್ಲಿ ಉಲ್ಲೇಖಿಸಿರುವ ನಿರ್ಲಕ್ಷ್ಯಕ್ಕೆ ಒಳಗಾದ ನಿಷಾದಿತಿ ಬೇಡ ಸಮುದಾಯಕ್ಕೆ ಸೇರಿದವಳು. 'ವಿಕ್ರಮಾರ್ಜುನ ವಿಜಯ'ದಲ್ಲಿ ಪಂಪ ಈಕೆಯ ಹೆಸರನ್ನು 'ನಿಷಾದಿತಿ' ಎಂದು ಉಲ್ಲೇಖಿಸಿದ್ದರೆ, 'ಕರ್ಣಾಟಭಾರತ ಕಥಾಮಂಜರಿ'ಯಲ್ಲಿ ಕುಮಾರವ್ಯಾಸ 'ಬೇಡತಿ' ಎಂದು ಉಲ್ಲೇಖಿಸಿದ್ದಾನೆ. 'ವಿಕ್ರಮಾರ್ಜುನ ವಿಜಯ'ದಲ್ಲಿ ಪಾಂಡವರು ಹಾಗೂ ಕೌರವರಿಗೆ ಬಾಲ್ಯದಲ್ಲಿ ಉಂಟಾದ ಮತ್ಸರವು ತೀವ್ರ ಸ್ವರೂಪಕ್ಕೆ ತಿರುಗಿ, ವಿಕೋಪಕ್ಕೆ ಹೋದದ್ದನ್ನು ಗಮನಿಸಿದ ಧೃತರಾಷ್ಟ್ರನು ಪಾಂಡವರು ಹಸ್ತಿನಾವತಿಯಲ್ಲಿದ್ದರೆ ಅವರಿಗೆ ಕೇಡಾಗುವುದೆಂದು ಯೋಚಿಸುತ್ತಾನೆ. ಅವರನ್ನು ರಕ್ಷಿಸಬೇಕೆಂದು ಬಗೆದು ಪಾಂಡವರಿಗೆ, ದುರ್ಯೋಧನನು ಕೆಟ್ಟ ಮನಸ್ಸುಳ್ಳವನು. ನೀವು ಮತ್ತು ಆತ ಒಂದೇ ಸ್ಥಳದಲ್ಲಿದ್ದರೆ ವೈರತ್ವವು ಇಮ್ಮಡಿಸುತ್ತದೆ ಎಂದು ತಿಳಿ ಹೇಳಿ ಕುರುಜಾಂಗಣ ದೇಶಕ್ಕೆ ತಿಲಕದಂತಿರುವ ವಾರಣಾವತವೆಂಬ ಪಟ್ಟಣಕ್ಕೆ ತೆರಳಿ ಅಲ್ಲಿ ಸುಖದಿಂದ ಇರುವಂತೆ ತಿಳಿಸುತ್ತಾನೆ. ಅದರಂತೆಯೆ ಕುಂತಿ ಹಾಗೂ ಪಾಂಡವರೈವರೂ ಪ್ರಯಾಣವನ್ನು ಬೆಳೆಸಿ ವಾರಣಾವತವನ್ನು ತಲುಪುತ್ತಾರೆ. ಈ ನಡುವೆ ದುರ್ಯೋಧನ ಅಲ್ಲಿ ಅರಗಿನ ಅರಮನೆಯೊಂದನ್ನು ನಿರ್ಮಿಸಿ ಪಾಂಡವರನ್ನು ಜೀವಂತವಾಗಿ ಸುಟ್ಟು ಸಾಯಿಸುವ ಯೋಜನೆಯನ್ನು ಹಾಕಿಕೊಂಡು ಅದರ ನೇತೃತ್ವವನ್ನು ಪುರೋಚನನಿಗೆ ವಹಿಸಿರುತ್ತಾನೆ. ಹೀಗಿರುವಾಗ ಅಂದು ಬ್ರಾಹ್ಮಣರಿಗೆ ಭೋಜನ ಮಾಡಿಸುವ ನೆಪದಲ್ಲಿ ತಮ್ಮ ಪರಿವಾರವನ್ನೆಲ್ಲ ಹೊರ ಹೋಗುವ ಹಾಗೆ ಮಾಡಿ 'ನಿಷಾದಿತಿ'ಯೆಂಬ ಬೇಡರವಳಿಗೂ ಅವಳ ಐದು ಜನ ಮಕ್ಕಳಿಗೂ ಊಟ ಮಾಡಿಸಿ ಅವರನ್ನು ಅರಗಿನ ಮನೆಯಲ್ಲಿ ಕೊಲ್ಲುವ ವಿವರಗಳನ್ನು ಪಂಪ ಈ ರೀತಿಯಾಗಿ ತಿಳಿಸುತ್ತಾನೆ.

"ಅದಲ್ಲದೆಯುಮತ್ಯಾದರಸ್ಸಂಭ್ರಮಮುತ್ಪಾದಯತಿಯೆಂಬುದೀ ಪುರೋಚನನೆಂಬ ಬೂತು ಸುಯೋಧನನ ಬೆಸದಿಂ ನಮಗಿನಿತಾದರಂ ಗೆಯ್ವುದೆಲ್ಲಂ ನಮ್ಮಂ ಮೆಳ್ಪಡಿಸಲೆಂದೆ ಮಾಡಿದಂ ನಾಮಿದನಱಿಯದಂತು ಬೇಂಟೆಯ ನೆವದೊಳ್ ಬಟ್ಟೆಗಳಂ ಸೋದಿಸುವುವಮೆಂದು ನಿಚ್ಚಂ ಬೇಂಟೆವೋಗೆ ಪುರೋಚನನುಂ ಪೆಱಗಣ ಕಾಪಂ ಕಣ್ಗಾಪಿ ನಲೆ ಕಾದಿರ್ಪನ್ನೆಗಂ ವಿದುರನ ವಿಶ್ವಾಸ ದಾಸಂ ಕನಕನೆಂಬಂ ಬಂದು ಪಾಂಡುವರಂ ಕಂಡೇಕಾಂತದೊಳ್ ವಿದುರನಟ್ಟಿದ ವಿನ್ನಾಣಂಗಳಂ ಪೇೞ್ದು ನಂಬಿಸಿ ನೀಮೆಂತುಂ ಬಲ್ಲಿರಂತೆ ಪೊಱಮಟ್ಟು ಪೋಗಿಮೆಂದು ಜತುಗೃಹ ಕವಾಟಪುಟ ಸಂಧಿಗಳೊಳ್ ಸುರಂಗಮಂ ಗಂಗೆಯೊಳ್ ಮೂಡುವಂತಾಗೆ ಸಮೆದು ಪೇೞ್ದು ಪೋಪುದುಂ ಪಾಂಡವರುಂ ಪುರೋಚನಂ ತಮ್ಮಂ ಮಱುದಿವಸಂ ಛಿದ್ರಿಸುವನೆನಲುಂ ಮುನ್ನಿನ ದಿವಸಮೊಳಗಣ ಪರಿಜನಮೆಲ್ಲಮಂ ಪಾರ್ವರನೂಡುವ ನೆವದೊಳೆ ಪೊಱಮಡಿಸಿ ಸೂರ್ಯಾಸ್ತಮಯದೊಳ್ ಪಾರ್ವರನೂಡಿ

ನಿಷಾದಿತಿಯೆಂಬ ಬೇಡಿತಿಗಮಯ್ವರ್ ಮಗಂದಿರ್ಗಮುಣಲಿಕ್ಕಿದೊಡೆ ತಣಿಯುಂಡು ಬೆಂಡು ಮರಲ್ದು ಮಱಸುಂದಿದರ್ ಪುರೋಚನನುಮಾ ಮನೆಯೊಳೊಂದೋವರಿಯೊಳ್ ಮಱಕೆಂದಿದನಾ ಪ್ರಸ್ತಾವದೊಳರ್ಧರಾತ್ರಿ ಯಾದಾಗಳ್ ಕೊಂತಿವೆರಸಯ್ವರುಮಂ ಮುನ್ನಮೊಯ್ಯನೊಯ್ಯನೆ ಸುರಂಗದಿಂ ಪೊಱಮಡಿಸಿ ಭೀಮಸೇನಂ ಪುರೋಚನಂ ಮಱಕೆಂದಿರ್ದೋವರಿಯೊಳ್ ಕಿಚ್ಚಂ ಕೊಳಿಸಲೊಡಂ"[೧]

ಪಾಂಡವರಿಗೆ ದುರ್ಯೋಧನನು ಅರಗಿನ ಮನೆಯನ್ನು ನಿರ್ಮಿಸಿ ತಮ್ಮನ್ನು ಕೊಲ್ಲುವ ಯೋಜನೆಯನ್ನು ರೂಪಿಸಿದ್ದಾನೆ ಎಂಬ ಸಂಗತಿ ತಿಳಿಯುತ್ತದೆ. ಈ ವಿಚಾರ ತಿಳಿದ ಮೇಲೆ ಸೂರ್ಯನು ಮುಳುಗುವ ಸಮಯದಲ್ಲಿ ವಿಪ್ರರಿಗೆಲ್ಲ ಭೋಜನವನ್ನು ಮಾಡಿಸಿದರು. ಜೊತೆಗೆ ನಿಷಾದಿತಿಯೆಂಬ ಬೇಡರ ಜಾತಿಯ ಹೆಣ್ಣು ಮಗಳಿಗೂ ಹಾಗೂ ಅವಳ ಐದು ಜನ ಮಕ್ಕಳಿಗೂ ಊಟ ಮಾಡಿಸಿದರು. ಅವರು ತೃಪ್ತಿಯಾಗಿ ತಿಂದು ಬಳಲಿದವರಂತಾಗಿ ಮೈಮರೆತು ಅಲ್ಲಿಯೆ ನಿದ್ರಿಸಿದರು. ಹೀಗಿರುವಾಗ ಅರ್ಧರಾತ್ರಿಯಲ್ಲಿ ಭೀಮಸೇನನು ಕುಂತಿಯೊಡನೆ ತನ್ನ ಅಣ್ಣ ತಮ್ಮಂದಿರನ್ನು ನಿಧಾನವಾಗಿ ಸುರಂಗದಿಂದ ಹೊರಗೆ ತಂದು ಪುರೋಚನನಿದ್ದ ಕೊಠಡಿಗೆ ಬೆಂಕಿ ಹಚ್ಚಿದನು. ವ್ಯಾಪಿಸಿದ ಬೆಂಕಿಯು ಬೇಡತಿಯನ್ನೂ ಒಳಗೊಂಡಂತೆ ಆಕೆಯ ಐದು ಜನ ಮಕ್ಕಳನ್ನೂ ಸುಟ್ಟು ಕರಕಲಾಗಿಸಿತು. ಇದನ್ನು ನೋಡಿದ ಪುರದ ನಿವಾಸಿಗಳು ಕುಂತಿ ಹಾಗೂ ಪಾಂಡವರು ಸತ್ತರೆಂದೆ ನಂಬಿದರು. ಈ ವಿಚಾರವನ್ನು ಧೃತರಾಷ್ಟ್ರನಿಗೆ ಹೇಳಿಕಳುಹಿಸುತ್ತಾರೆ.

ಇಲ್ಲಿ ಸೂಕ್ಷ್ಮವಾಗಿ ಗಮನಿಸುವಂತಹ ಸಂಗತಿ ಎಂದರೆ ಅರಗಿನ ಮನೆಗೆ ಬೆಂಕಿಯನ್ನು ಇಡುವವನು ಭೀಮ. ದುರ್ಯೋಧನನಾಗಲೀ, ಆತನ ಕಡೆಯವರಾಗಲೀ ಅಲ್ಲ. ಅಲ್ಲದೆ ಇಲ್ಲಿ ನಿಷಾದಿತಿ ಮಾಡಿದ ತಪ್ಪಾದರೂ ಏನು? ಪಂಪನಾಗಲಿ, ಆ ನಂತರ ಬಂದ ಅಧ್ಯಯನಕಾರರಾಗಲಿ, ವಿಮರ್ಶಕರಾಗಲಿ ಈ ನಿಷಾದಿತಿಯ ಅನ್ಯಾಯದ ಸಾವನ್ನು ಕುರಿತು ಏಕೆ ಪ್ರಶ್ನೆ ಮಾಡುವುದಿಲ್ಲ? ಆಕೆ ತಳವರ್ಗದ ಸಮುದಾಯದವಳು, ದಿಕ್ಕು ದೆಸೆ ಇಲ್ಲದ ಹೆಂಗಸು ಎಂದೆ? ಅಥವಾ ಆಕೆ ಮತ್ತು ಆಕೆಯ ಮಕ್ಕಳು ಬದುಕಿದ್ದರೂ ಏನು ಪ್ರಯೋಜನ ಎಂದೆ? ಒಟ್ಟಿನಲ್ಲಿ ಪಾಂಡವರು ತಮ್ಮನ್ನು ತಾವು ರಕ್ಷಿಸಿಕೊಳ್ಳಲು ಈ ರೀತಿಯ ಎಷ್ಟು ಅಮಾಯಕ ಜೀವಿಗಳನ್ನು ಬಲಿ ಕೊಟ್ಟಿರಬಹುದು? ಈ ಕುರಿತು ಯಾರೂ ಕೂಡ ಚಕಾರವನ್ನು ಎತ್ತುವುದಿಲ್ಲ. ಏಕೆಂದರೆ ಅವಳು ಒಬ್ಬ ಬೇಡತಿ. ಅಲ್ಲದೆ ಆಕೆ ತನ್ನ ಒಡಲ ಹಸಿವನ್ನು ನೀಗಿಸಿಕೊಳ್ಳಲು ಅಲ್ಲಿಗೆ ಬಂದು ಊಟ ಮಾಡಿದ್ದೇ ತಪ್ಪಾಯಿತೇ? ಇಂತಹ ಅನೇಕ ಪ್ರಶ್ನೆಗಳು ನಮ್ಮ ಮನದಲ್ಲಿ ಮೂಡುತ್ತವೆ. ಒಟ್ಟಿನಲ್ಲಿ ಪಾಂಡವರು ತಾವು ಸುರಕ್ಷಿತವಾಗಿ ಉಳಿಯಲು ನಿಷಾದಿತಿ ಮತ್ತು ಆಕೆಯ ಐದು ಜನ ಮಕ್ಕಳನ್ನು ಬಲಿಕೊಟ್ಟರೆಂಬುದು ಕಟು ಸತ್ಯ.

ಇದರಂತೆಯೆ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯಲ್ಲಿಯೂ ಅಮಾಯಕಳಾದ ಬೇಡತಿ ಹಾಗೂ ಆಕೆಯ ಮಕ್ಕಳ ಹತ್ಯೆ ನಡೆಯುವುದು ಕಂಡುಬರುತ್ತದೆ.

"ಒಂದು ದಿನ ಹಬ್ಬದಲಿ ಭೂಸುರ
ವೃಂದವುಂಡುದು ಪಂಚಪುತ್ರಿಕೆ
ಯೆಂದು ಬೇಡತಿಯೊಬ್ಬಳಿದ್ದಳು ಸುತರು ಸಹಿತಲ್ಲಿ
ಅಂದಿನಿರುಳು ಪುರೋಚನನು ತಾ
ನೊಂದ ನೆನೆದರೆ ದೈವಗತಿ ಬೇ
ರೊಂದ ನೆನೆದುದು ಕೇಳು ಜನಮೇಜಯ ಮಹೀಪಾಲ"[೨]

ಇಲ್ಲಿ ನಮ್ಮನ್ನು ಕಾಡುವ ಪ್ರಶ್ನೆ ಪಾಂಡವರ ನೈತಿಕತೆ ಹಾಗೂ ಬೇಡತಿ ಯಾವ ಕಾರಣಕ್ಕಾಗಿ ಹತಳಾಗುತ್ತಾಳೆ ಎಂಬುದು. ಏಕೆಂದರೆ ಕುಮಾರವ್ಯಾಸ ಕೂಡ ಅರಗಿನ ಮನೆಗೆ ಕಿಚ್ಚನ್ನು ನೀಡುವವನು ಭೀಮನೆಂದೆ ಸ್ಪಷ್ಟವಾಗಿ ತಿಳಿಸುತ್ತಾನೆ.

"ಅವನು ನಿದ್ರೆಯೊಳರಿಯದಿರಲಾ
ಭವನ ಮುಖದಲಿ ಕಿಚ್ಚನೊಟ್ಟಿಸಿ
ಪವನಸುತ ಸಹಿತಿವರು ಹಾಯ್ದರು ಬಿಲದ ಮಾರ್ಗದಲಿ
ಅವರು ಬೆಂದರು ಮುನ್ನ ಬಳಿಕಾ
ಭವನ ಪಂಕ್ತಿಗಳುರಿದು ಕರಗಿದ
ವವನಿಯಲಿ ಹೊನಲಾಯ್ತು ಪುರಜನವೈದೆ ಬೆರಗಾಗೆ"[೩]

ಪುರೋಚನ ನಿದ್ರೆಯಲ್ಲಿ ತಿಳಿಯದವನಂತೆ ಇದ್ದಾಗ ಆ ಭವನಕ್ಕೆ ಭೀಮನು ಕಿಚ್ಚನೊಟ್ಟಿಸಿ ತನ್ನ ತಾಯಿ ಹಾಗೂ ಸಹೋದರರೊಡನೆ ಬಿಲದ ಮಾರ್ಗದಲ್ಲಿ ಹೊರಬಂದು ಬದುಕುಳಿಯುತ್ತಾರೆ. ಉಳಿದವರು ಬೆಂಕಿಯಲ್ಲಿ ಬೆಂದು ಸಾವನ್ನಪ್ಪುತ್ತಾರೆ. ಇಲ್ಲಿ ಭೀಮ ಉದ್ದೇಶಪೂರ್ವಕವಾಗಿಯೇ ಈ ಕಾರ್ಯ ಮಾಡುತ್ತಾನೆ. ಅಲ್ಲದೆ ಆತನಲ್ಲಿ ತಾವು ಮಾತ್ರ ಬದುಕುಳಿಯಬೇಕೆಂಬ ಸ್ವಾರ್ಥವು ಅಡಗಿರುವುದು ತಿಳಿಯುತ್ತದೆ. ಅಲ್ಲದೆ ತಾನು ಮಾಡಿದ ಕಾರ್ಯಕ್ಕಾಗಿ ಆತ ಪಶ್ಚಾತ್ತಾಪವನ್ನಾಗಲೀ, ಚಿಂತೆಯನ್ನಾಗಲಿ ಮಾಡುವುದಿಲ್ಲ. ಆ ರೀತಿ ಮಾಡಿದ್ದರೆ ಬೇಡತಿ ಹಾಗೂ ಆಕೆಯ ಮಕ್ಕಳನ್ನು ಬಲಿ ಕೊಡುತ್ತಿರಲಿಲ್ಲ. ದ್ವೇಷ ಇದ್ದದ್ದು ಪಾಂಡವ ಹಾಗೂ ಕೌರವರಿಗೆ. ಆದರೆ ಸತ್ತದ್ದು ಮಾತ್ರ ಅಮಾಯಕರಾದ ಬೇಡತಿ ಹಾಗೂ ಆಕೆಯ ಮಕ್ಕಳು. ಇದನ್ನು ಯಾರೂ ಕೂಡ ಪ್ರಶ್ನಿಸುವುದಿಲ್ಲ. ಎಲ್ಲರೂ ಪಾಂಡವರು ಒಳ್ಳೆಯವರು. ಅವರಿಗೆ ಒಳಿತಾಗಲಿ ಎಂದು ಅವರ ಪಕ್ಷವನ್ನು ವಹಿಸಿದಂತೆಯೆ, ಅವರು ಮಾಡುವ ತಪ್ಪುಗಳನ್ನು ಖಂಡಿಸುವುದಿಲ್ಲ, ವಿರೋಧಿಸುವುದೂ ಇಲ್ಲ. ಇದು ಆ ಕಾಲದ ಸಮಾಜದಲ್ಲಿನ ಶ್ರೀ ಸಾಮಾನ್ಯರ ಬದುಕು ಮತ್ತು ಅವರ ದಾರುಣ ಸ್ಥಿತಿಯನ್ನು ನಮ್ಮ ಗಮನಕ್ಕೆ ತರುತ್ತದೆ.

೭.೨. ದುಶ್ಯಳೆ

ಈಕೆಯು ಧೃತರಾಷ್ಟ್ರ ಹಾಗೂ ಗಾಂಧಾರಿಯ ಮಗಳು. ದುರ್ಯೋಧನನ ತಂಗಿ. ನೂರು ಜನ ಮಕ್ಕಳಲ್ಲಿ ಇವರೇ ಕಿರಿಯವಳು. ಈಕೆಯನ್ನು ಸಿಂಧು ದೇಶದ ಅಧಿಪತಿಯಾದ ವೃದ್ಧಕ್ಷತ್ರನ

ಮಗನಾದ 'ಜಯದ್ರಥ'ನಿಗೆ ಕೊಟ್ಟು ವಿವಾಹ ಮಾಡಿದ್ದರು. ಪಾಂಡವ-ಕೌರವರಲ್ಲಿ ಉಂಟಾದ ವಿರಸವು ಶಮನವಾಗದೆ ಯುದ್ಧ ಪ್ರಾರಂಭವಾಗುತ್ತದೆ. ಚಕ್ರವ್ಯೂಹವನ್ನು ಪ್ರವೇಶಿಸಿದ ಅಭಿಮನ್ಯುವನ್ನು ಜಯದ್ರಥ, ಕರ್ಣ, ದ್ರೋಣ ಮೊದಲಾದ ಕೌರವ ಪಕ್ಷದವರು ಕೊಲ್ಲುತ್ತಾರೆ. ಮಗನ ಸಾವಿನ ದುಃಖದಿಂದ ವ್ಯಗ್ರನಾದ ಅರ್ಜುನನು ಎಲ್ಲಿದ್ದರೂ ಸೈಂಧವನನ್ನು ಹುಡುಕಿ ಕೊಲ್ಲದೆ ಬಿಡುವುದಿಲ್ಲ ಎಂದು ಅತಿಯಾದ ಕೋಪಾವಿಷ್ಟನಾಗಿ ಪ್ರತಿಜ್ಞೆಯನ್ನು ಮಾಡುತ್ತಾನೆ. ಈ ವಿಷಯವು ದುಶ್ಯಳೆಗೆ ತಿಳಿಯುತ್ತದೆ. ತನ್ನ ಗಂಡನನ್ನು ರಕ್ಷಿಸಿಕೊಳ್ಳುವ ಅನಿವಾರ್ಯತೆಗೆ ಸಿಲುಕಿದ ದುಶ್ಯಳೆ ತನ್ನ ಅಣ್ಣನ ಬಳಿ ಬಂದು ಪತಿಯನ್ನು ರಕ್ಷಿಸಿಕೊಡುವಂತೆ ಬೇಡಿಕೊಳ್ಳುತ್ತಾಳೆ.

ಜಯದ್ರಥ ವೀರಾಧಿವೀರನಾಗಿದ್ದರೂ ಕೂಡ ಅರ್ಜುನನ ಕೋಪಕ್ಕೆ ಹೆದರಿದ್ದಾನೆ. ಅಲ್ಲದೆ ಎಲ್ಲಕ್ಕಿಂತ ಮುಖ್ಯವಾಗಿ ದುಶ್ಯಳೆಯ ಪಾತ್ರ ಇಲ್ಲಿ ಗಮನಿಸುವಂತಹದ್ದು. ಏಕೆಂದರೆ ಎಲ್ಲ ಅನರ್ಥಗಳಿಗೆ ಕಾರಣರಾದವರು ದುಶ್ಯಾಸನ, ಶಕುನಿ, ಕರ್ಣ, ದುರ್ಯೋಧನ ಇವರ ಜೊತೆ ತನ್ನ ಗಂಡನಾದ ಜಯದ್ರಥ ಕೂಡ. ಗಂಡನು ದುರುಳನಾದರೂ ಆತನನ್ನು ಉಳಿಸಿಕೊಳ್ಳಬೇಕಾದ ತೀವ್ರ ಅನಿವಾರ್ಯತೆ ಈಕೆಗುಂಟಾಗಿರುವುದು ನಮ್ಮ ಗಮನವನ್ನು ಸೆಳೆಯುತ್ತದೆ. ಅಲ್ಲದೆ ಈಕೆ ಇಲ್ಲಿ ಬಹಳ ಸಂದಿಗ್ಧತೆಗೆ ಸಿಲುಕಿರುವುದು ಕಂಡುಬರುತ್ತದೆ. ತನ್ನ ಪತಿ ಮಾಡಿರುವ ಕೆಟ್ಟ ಕೆಲಸಗಳು ಗೊತ್ತಿದ್ದರೂ ಆತನ ಪರವಾಗಿ ನಿಲ್ಲಬೇಕಾದ ವಿಚಿತ್ರ ಪರಿಸ್ಥಿತಿಯಲ್ಲಿ ದುಶ್ಯಳೆ ಇದ್ದಾಳೆ. ಆ ಸ್ಥಿತಿಯನ್ನು ಪಂಪ ತನ್ನ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಈ ರೀತಿಯಾಗಿ ಚಿತ್ರಿಸಿದ್ದಾನೆ.

> "ಎಂದು ನೃಪ ಪರಮಾತ್ಮಂ ಕೃತಿಪ್ರತಿಜ್ಞನಾದುದಂ ಸೈಂಧವನ ಸಜ್ಜನಂ ದುರ್ಜೋದನನ ತಂಗೆ ದುಶ್ಯಳೆ ಕೇಳ್ದು ಮಲಮಲ ಮಱುಗಿ ತಮ್ಮಣ್ಣನಲ್ಲಿಗೆ ವಂದು ಕಾಲಮೇಲೆ ಕವಿದು ಪಟ್ಟು"[೪]

ಎಂದು ನೃಪ ಪರಮಾತ್ಮನಾದ ಅರ್ಜುನನು ತಾನು ಮುಂದೆ ಮಾಡುವ ಕಾರ್ಯವನ್ನು ಕುರಿತು ಮಾಡಿದ ಪ್ರತಿಜ್ಞೆಯನ್ನು ಸೈಂಧವನ ಹೆಂಡತಿಯೂ, ದುರ್ಯೋಧನನ ತಂಗಿಯೂ ಆದ ದುಶ್ಯಳೆಯು ಕೇಳಿಸಿಕೊಂಡು ಮಮ್ಮಲ ಮರುಗಿದಳು. ತಮ್ಮಣ್ಣನಲ್ಲಿಗೆ ಬಂದು ಅವನ ಕಾಲ ಮೇಲೆ ಕವಿದು ಬಿದ್ದು,

> "ತನ್ನ ಸುತನಟೆಯಲಟೆಯಲ್
> ನಿನ್ನಯ ಮಯ್ದುನನನರ್ಜುನಂ ಪೂಣ್ದನದ
> ರ್ಕಾನ್ನಡುಗಿ ಬಂದೆನಿನ್ನೀ
> ನೆನ್ನೋಲೆಯ ಕಡಗದಟಿವನೇಂ ನೋಡಿದಪಾ"[೫]

ತನ್ನ ಮಗನು ಸಾಯಲು ಆ ಅರ್ಜುನನು ನಿನ್ನ ಮಯ್ದುನನ ಸಾವಿಗೆ ಪ್ರತಿಜ್ಞೆಯನ್ನು ಕೈಗೊಂಡಿದ್ದಾನೆ. ಅದಕ್ಕಾಗಿ ನಾನು ಭಯದಿಂದ ನಡುಗಿ ಬಂದಿದ್ದೇನೆ. ನೀನು ನನ್ನ ಓಲೆಯ ಹಾಗೂ ಕಡಗದ ಅಳಿವನ್ನು ನೋಡುವೆಯಾ? ಅಂದರೆ ನಾನು ಪತಿಯನ್ನು ಕಳೆದುಕೊಂಡು ನನ್ನ ಸುಮಂಗಳೆತನದ

ನಾಶವನ್ನು ನೋಡಲು ಬಯಸುವೆಯಾ? ಎಂದು ಮೊದಲಾಗಿ ತನ್ನ ದುಃಖವನ್ನು ಅಣ್ಣನಲ್ಲಿ ವ್ಯಕ್ತಪಡಿಸುತ್ತಾಳೆ. ಬಹುಮುಖ್ಯವಾಗಿ ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಯುದ್ಧವು ಕೌರವ ಹಾಗೂ ಪಾಂಡವರಲ್ಲಿ ಜರುಗುತ್ತಿದೆಯಾದರೂ ಸಹ ಅದರ ಪರಿಣಾಮಗಳನ್ನು, ಅನರ್ಥಗಳನ್ನು ಎದುರಿಸುವವರು ಮಹಿಳೆಯರಾಗಿದ್ದಾರೆ ಎಂಬುದು ಇಲ್ಲಿ ಕಟು ವಾಸ್ತವದ ಸಂಗತಿಯಾಗಿದೆ.

ಈ ಹಿನ್ನೆಲೆಯಲ್ಲಿ ದುಶ್ಶಳೆ ತನ್ನದಲ್ಲದ ತಪ್ಪುಗಳಿಗಾಗಿ ನೋವು ಹಾಗೂ ಸಂಕಟಗಳನ್ನು ಅನುಭವಿಸುವುದು ಕಂಡುಬರುತ್ತದೆ. ಯುದ್ಧವಾಗಲಿ, ಜೂಜಾಗಲಿ ಎಲ್ಲದರ ಪರಿಣಾಮಗಳನ್ನು ಎದುರಿಸುವವಳು ಹೆಣ್ಣು ಎಂಬುದು ನಮಗೆ ಇದರಿಂದ ವೇದ್ಯವಾಗುತ್ತದೆ. ಅವಳು ರಾಣಿಯಾಗಲಿ, ದಾಸಿಯಾಗಲಿ ನೋವು, ಸಂಕಟಗಳು ಮಾತ್ರ ಇವರ ಪಾಲಿಗೆ ಉಳಿಯುವುದು ಗಮನಿಸುವಂತಹ ಸಂಗತಿಗಳಾಗಿವೆ.

೭.೩. ಮದನಲತೆ

ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿ ಕಂಡುಬರುವ ಈಕೆ ಒಬ್ಬಳು ನಾಗಕನ್ಯೆ. ಅರ್ಜುನನು ಚೈತ್ಯಯಾತ್ರಾ ಪ್ರಯಾಣಾರ್ಥವಾಗಿ ಹಲವು ಪ್ರದೇಶಗಳಲ್ಲಿ ಸಂಚರಿಸುತ್ತ ಗಂಗಾದ್ವಾರಕ್ಕೆ ಬಂದು ಕೆಲವು ದಿನಗಳನ್ನು ಅಲ್ಲಿ ಕಳೆಯುತ್ತಿದ್ದನು. ಈ ರೀತಿ ಕಾಲ ಕಳೆಯುವಾಗ 'ಮದನಲತೆ' ಎಂಬ ನಾಗಕನ್ಯೆಯು ಆತನನ್ನು ನೋಡಿ ಮೋಹಗೊಂಡು ಅವನನ್ನು ಪ್ರೀತಿಸಿ ತನ್ನ ನಾಗಲೋಕಕ್ಕೆ ಕರೆದುಕೊಂಡು ಹೋಗುತ್ತಾಳೆ. ನಾಗಕನ್ಯೆಯಾಗಿದ್ದರೂ, ನರ ಮಾನವನಾದ ಅರ್ಜುನನನ್ನು ಪ್ರೀತಿಸಿ, ಆತನ ಮೇಲೆ ಮೋಹಗೊಳ್ಳುವುದು ಮದನಲತೆಯ ಮನದ ಬಯಕೆಗಳನ್ನು ತಿಳಿಸಿಕೊಡುತ್ತದೆ. ಮುಖ್ಯವಾಗಿ ಗಮನಿಸಬೇಕಾದದ್ದು ಯಾವ ಲೋಕದವರೇ ಆಗಲಿ ಅವರಿಗೂ ಮನಸ್ಸಿದೆ. ಆ ಮನಸ್ಸಿನಲ್ಲಿ ಪ್ರೀತಿ, ಪ್ರೇಮ, ವಿಶ್ವಾಸ, ಸ್ನೇಹಗಳೆಂಬ ಮಧುರವಾದ ಭಾವನೆಗಳು ಒಡಮೂಡುತ್ತವೆ ಎಂಬುದು. ಅವರಿಗೂ ನೋವು, ದುಃಖಗಳೆಂಬ ಮಾನಸಿಕ ತಳಮಳಗಳು, ಅಸಂತೋಷಗಳು ಇರುತ್ತವೆ ಎಂಬುದು ನಮಗೆ ಇದರಿಂದ ತಿಳಿಯುತ್ತದೆ. ಈ ಹಿನ್ನೆಲೆಯಲ್ಲಿ ಮದನಲತೆ ಅರ್ಜುನನನ್ನು ಮೋಹಿಸಿ ಆತನನ್ನು ತನ್ನ ಲೋಕಕ್ಕೆ ಕರೆದೊಯ್ಯುವ ವಿವರಗಳನ್ನು ಪಂಪನು ಈ ರೀತಿಯಾಗಿ ಚಿತ್ರಿಸಿದ್ದಾನೆ.

"ಎನೆ ಸೊಗಯಿಸುವ ಗಂಗಾದ್ವಾರದೊಳ್ ಮುನಿಜನಂಗಳ ಬೇಳ್ವೆಗಳ್ಗುಪದ್ರವಂಗೆಯ್ವ
ನಿಶಾಟ ಕೋಟಿಯಂ ನಿಶಿತ ಶರಕೋಟಿಯಿಂದಮುಚ್ಚಾಟಿಸಿ ಕೆಲವು ದಿವಸಮಿರ್ದಲ್ಲಿ ಪಡೆಮೆಚ್ಚೆ
ಗಂಡನ ಗಂಡಗಾಡಿಯಂ ಕಂಡು ಫಣೀಂದ್ರನ ಕನ್ನೆ ಮದನಲತೆಯೆಂಬ ನಾಗಕನ್ಯೆ
ಕಣ್ಬೇಟಂಗೊಂಡು ತನ್ನ ಲೋಕಕ್ಕೊಡಗೊಂಡು ಪೋಗಲ್"[೬]

ಈ ರೀತಿಯಾಗಿ ಸೊಗಸಿನಿಂದ ಕೂಡಿರುವ ಗಂಗಾದ್ವಾರದಲ್ಲಿ ಋಷಿ ಮುನಿಗಳ ಯಜ್ಞಕಾರ್ಯಗಳಿಗೆ ಉಪದ್ರವವನ್ನು ಕೊಡುತ್ತಿದ್ದ ರಾಕ್ಷಸ ಸಮೂಹವನ್ನು ತನ್ನ ಹರಿತವಾದ ಶರಕೋಟಿಯಿಂದ ಹೊಡೆದೋಡಿಸಿ ಅಲ್ಲಿ ಕೆಲವು ದಿವಸವಿದ್ದನು. ಹೀಗಿರುವಾಗ ಅಲ್ಲಿಯೆ ಇದ್ದ

ಮದನಲತೆ ಎಂಬ ನಾಗಕನ್ಯೆಯು ಪಡೆಮೆಚ್ಚೆಗಂಡನಾದ ಅರ್ಜುನನ ಸೌಂದರ್ಯವನ್ನು ನೋಡಿ ಮೋಹಗೊಂಡು ಅವನನ್ನು ತನ್ನ ನಾಗಲೋಕಕ್ಕೆ ಕರೆದುಕೊಂಡು ಹೋದಳು. ಈ ರೀತಿ ಕರೆದೊಯ್ದು ಆತನಿಗೆ ತನ್ನ ನಾಗಲೋಕದ ವೈಭವಗಳನ್ನೆಲ್ಲ ತೋರಿಸುತ್ತಾಳೆ. ನಂತರ ತನ್ನ ಅಂತಃಪುರಕ್ಕೆ ಕರೆತಂದು ತನ್ನ ಮನಸ್ಸಿಗೆ ತೃಪ್ತಿಯಾಗುವವರೆಗೆ ಸ್ನಾನ ಮಾಡಿಸಿ ಹಲವು ಹಣ್ಣುಗಳನ್ನು ತಿನ್ನಲು ನೀಡುತ್ತಾಳೆ. ನಂತರ

"ನಾಗವಿಭೂಷಣ ಪ್ರತತಿ ನಾಗರಖಂಡಮಪೂರ್ವಮಪ್ಪ ಪು
ನ್ನಾಗದ ಬಾಸಿಗಂ ಬಗೆದ ಬಣ್ಣದ ಪುಟ್ಟಿಗೆ ನಾಗಜಾಲಮೆಂ
ದಾಗಡೆ ನಾಗಲೋಕ ವಿಭವಂಗಳೊಳಾಟಿಸಿ ನಾಗಶಯ್ಯೆಯೊಳ್
ನಾಗಿಣಿ ನಾಗಬಂಧದೊಳ್ ತಳ್ತು ಗುಣಾರ್ಣವನಂ ಮರುಳ್ಚಿದಳ್"[೭]

ಅರ್ಜುನನನ್ನು ನಾಗರ ಒಡವೆಗಳ ಗುಂಪು, ನಾಗರ ಖಂಡವೆಂಬ ಪ್ರದೇಶ, ಅಪೂರ್ವವೆನಿಸಿದ ಪುನ್ನಾಗ ಹೂಗಳ ಹಾರ, ಬಗೆ ಬಗೆಯ ಬಣ್ಣದ ವಸ್ತ್ರಗಳು, ನಾಗದವಲ್ಲಿ ಮುಂತಾದ ಅನೇಕ ನಾಗಲೋಕದ ವೈಭವಗಳಲ್ಲಿ ಮುಳುಗಿಸಿದಳು. ನಾಗಶಯ್ಯೆಯಲ್ಲಿ ನಾಗಬಂಧವೆಂಬ ರತಿಬಂಧದಲ್ಲಿ ಬಂಧಿಸಿ ಆ ನಾಗಕನ್ಯೆಯು ಅರ್ಜುನನನ್ನು ಮರುಳು ಮಾಡಿದಳು. ಇಲ್ಲಿ ನಾಗಕನ್ಯೆಯು ತನ್ನ ಲೋಕವನ್ನು ಪರಿಚಯಿಸುವ, ನಾಗರ ಒಡವೆಗಳ ಸಮೂಹವನ್ನು ತೋರಿಸುವ ಮೂಲಕ ಅರ್ಜುನನನ್ನು ಒಲಿಸಿಕೊಳ್ಳಬೇಕೆಂಬ ಮನೋಭಾವವು ಅಡಗಿರುವುದು ತಿಳಿಯುತ್ತದೆ. ಇದು ಸಹಜವಾದ ಸ್ತ್ರೀ ಸ್ವಭಾವವನ್ನು ನಮಗೆ ಮನವರಿಕೆ ಮಾಡಿಕೊಡುತ್ತದೆ. ಅಲ್ಲದೆ ಹೆಣ್ಣು ಯಾವ ಲೋಕದವಳೇ ಆದರೂ ಕೂಡ ಆಕೆಗೂ ಮನಸ್ಸಿದೆ. ಆ ಮನಸ್ಸಿನಲ್ಲಿ ಆಸೆ, ಆಕಾಂಕ್ಷೆಗಳಿವೆ. ಬೇಕು, ಬೇಡಗಳೆಂಬ ಆಯ್ಕೆಯ ಸ್ವಾತಂತ್ರ್ಯಗಳಿವೆ ಎಂಬುದು ಮದನಲತೆಯ ಮೂಲಕ ನಮಗೆ ತಿಳಿದುಬರುತ್ತದೆ. ನಾಗಕನ್ಯೆಯಾದರೂ ಆಕೆಯ ಮನದಲ್ಲಿ ಮೂಡುವ ಪ್ರೀತಿ, ಪ್ರೇಮಗಳೆಂಬ ನವಿರು ಭಾವನೆಗಳು ಗಮನಿಸುವಂತಹವು.

೭.೪. ಉತ್ತರೆ

ಈಕೆ ವಿರಾಟ ರಾಜನ ಮಗಳು. ಅಭಿಮನ್ಯುವಿನ ಹೆಂಡತಿ. 'ವಿಕ್ರಮಾರ್ಜುನ ವಿಜಯ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳೆರಡರಲ್ಲಿಯೂ ಅಭಿಮನ್ಯುವಿನ ವಿವಾಹದ ಸಂದರ್ಭದಲ್ಲಿ ಈಕೆಯ ವಿವರಗಳು ಕಂಡುಬರುತ್ತವೆ. ಪಾಂಡವರು ತಮ್ಮ ಅಜ್ಞಾತವಾಸದ ಸಮಯವನ್ನು ವಿರಾಟನ ರಾಜ್ಯದಲ್ಲಿ ಕಳೆಯುತ್ತಾರೆ. ಈ ರೀತಿ ಇರುವಾಗ ವಿರಾಟನಿಗೆ ಪಾಂಡವರ ನಿಜಸ್ಥಿತಿಗಳು ತಿಳಿಯುತ್ತವೆ. ನಂತರದಲ್ಲಿ ಉತ್ತರೆಯ ವಿವಾಹದ ಪ್ರಸ್ತಾಪಗಳು ಕಂಡುಬರುತ್ತವೆ. ಪಂಪನ ಕಾವ್ಯದಲ್ಲಿ ವಿರಾಟನು ಧರ್ಮರಾಜನಲ್ಲಿ ತನ್ನ ಮಗಳಾದ ಉತ್ತರೆಯನ್ನು ಅಭಿಮನ್ಯುವಿಗೆ ಕೊಟ್ಟು ವಿವಾಹ ಮಾಡುವ ವಿಷಯವನ್ನು ಪ್ರಸ್ತಾಪಿಸುತ್ತಾನೆ. ಕುಮಾರವ್ಯಾಸನಲ್ಲಿ ಉತ್ತರ ಕುಮಾರ ಧರ್ಮರಾಯನಲ್ಲಿ ಉತ್ತರೆಯ ವಿವಾಹವನ್ನು ಪ್ರಸ್ತಾಪಿಸುವುದು ತಿಳಿಯುತ್ತದೆ. ಪಂಪನಲ್ಲಿ ಉತ್ತರೆಯ ವಿವಾಹದ ವಿವರಗಳನ್ನು ಗಮನಿಸುವುದಾದರೆ

"ಇರದುಟಿದಾವ ಮಂಡಲದೊಳಂ ನೃಪ ನೀಂ ದಯೆಯಿಂದಮಿಲ್ಲಿ ಬಂ
ದಿರೆ ದೊರೆವೆತ್ತುದೆನ್ನ ಮೆಱೆವಾಳ್ವೆಸನೆನ್ನ ತನೂಜೆಗಂಕದು
ತ್ತರೆಗೆ ವಿವಾಹ ಮಂಗಳಮನಿನ್ನಭಿಮನ್ಯುಗೆ ಮಾಱ್ಪುದುತ್ತರೋ
ತ್ತರಮೆನೆ ಮಾಡು ನಿನ್ನ ದಯೆಯಿಂ ಮೆಱೆವೆಂ ಯಮರಾಜನಂದನಾ"[೮]

ಇಲ್ಲಿಯವರೆಗೆ ತನ್ನ ಆಸ್ಥಾನದಲ್ಲಿದ್ದವರು ಪಾಂಡವರು ಎಂಬುದನ್ನು ತಿಳಿದ ವಿರಾಟನು ಅವರನ್ನು ವಿವಿಧ ರೀತಿಯಲ್ಲಿ ಸತ್ಕರಿಸುತ್ತಾನೆ. ನಂತರ ತನ್ನ ಮಗಳಾದ ಉತ್ತರೆಯನ್ನು ಅಭಿಮನ್ಯುವಿಗೆ ಕೊಟ್ಟು ವಿವಾಹ ಮಾಡುವುದಾಗಿ ತಿಳಿಸುತ್ತಾನೆ. ಅದಕ್ಕೆ ತಾವು ಒಪ್ಪಿಕೊಳ್ಳಬೇಕೆಂದು ಧರ್ಮರಾಯನನ್ನು ಕೇಳಿಕೊಳ್ಳುತ್ತಾನೆ. ಅಭಿಮನ್ಯುವಿನೊಂದಿಗಿನ ವಿವಾಹದ ಸಂದರ್ಭದಲ್ಲಿ ಉತ್ತರೆಯ ಉಲ್ಲೇಖಗಳು ನಮಗೆ ದೊರೆಯುತ್ತವೆ. ಉಳಿದಂತೆ ಆಕೆ ಕೃತಿಯಲ್ಲಿ ಎಲ್ಲಿಯೂ ನೇರವಾಗಿ ಪ್ರವೇಶ ಪಡೆಯದಿರುವುದು ಕಂಡುಬರುತ್ತದೆ. ಜೊತೆಗೆ ಅಭಿಮನ್ಯುವಿನ ಮರಣದ ಸಂದರ್ಭದಲ್ಲಿಯೂ ಈಕೆಯನ್ನು ಕುರಿತ ಹೆಚ್ಚಿನ ವಿವರಗಳಿಲ್ಲ. ಈಕೆಯ ವಿವಾಹವನ್ನು ತಂದೆಯಾದ ವಿರಾಟನು ನಿರ್ಧರಿಸಿರುವುದು ತಿಳಿಯುತ್ತದೆ. ಅಭಿಮನ್ಯುವಿನೊಂದಿಗಿನ ವಿವಾಹವನ್ನು ಕುರಿತು ಉತ್ತರೆಯ ಅಭಿಪ್ರಾಯವನ್ನು ಕೇಳಿಲ್ಲ. ಇದಕ್ಕೆ ಪಂಪನ ಕಾಲಘಟ್ಟದ ಸಾಮಾಜಿಕ ಜೀವನ ಕ್ರಮಗಳು ಕಾರಣವಾಗಿರುವಂತಿವೆ. ಇನ್ನುಳಿದಂತೆ ಪಂಪನಲ್ಲಿ ಉತ್ತರೆಯ ಬಗೆಗಿನ ಚರ್ಚೆಗಳು ವಿರಳ.

ಇಲ್ಲಿ ಗಮನಿಸಬೇಕಾದ ಸಂಗತಿಯೆಂದರೆ ದ್ರೌಪದಿಯ ವಿವಾಹ ಹಾಗೂ ಅಂಬೆ, ಅಂಬಿಕೆ, ಅಂಬಾಲಿಕೆಯರಿಗೆ ವಿವಾಹದ ಸಂದರ್ಭದಲ್ಲಿ ತಮ್ಮ ಮನಸ್ಸಿಗೊಪ್ಪುವ ಗಂಡನ್ನು ಆಯ್ಕೆ ಮಾಡಿಕೊಳ್ಳಲು ಸ್ವಯಂವರವನ್ನು ಏರ್ಪಡಿಸಲಾಗಿದ್ದ ಸನ್ನಿವೇಶ. ಇಲ್ಲಿನ ಹೆಣ್ಣುಗಳಿಗೆ ತಾವು ವಿವಾಹವಾಗುವವರನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶವಿತ್ತು. ಆದರೆ ಇಲ್ಲಿ ಉತ್ತರೆಗೆ ಆ ಅವಕಾಶವನ್ನು ನೀಡದೆ ಪುರುಷ ವ್ಯವಸ್ಥೆಯೆ ನಿರ್ಧಾರವನ್ನು ಪ್ರಕಟಪಡಿಸುವುದು ಕಂಡುಬರುತ್ತದೆ.

ಕುಮಾರವ್ಯಾಸನಲ್ಲಿಯು ಸಹ ವಿರಾಟಪರ್ವದಲ್ಲಿ ಉತ್ತರೆಯ ವಿವರಗಳು ಕಂಡುಬರುತ್ತವೆ. ತನ್ನ ರಾಜ್ಯದಲ್ಲಿರುವವರು ಪಾಂಡವರು ಎಂಬುದು ತಿಳಿದ ನಂತರ ಉತ್ತರ ಕುಮಾರ ಹಾಗೂ ವಿರಾಟ ರಾಜನು ಪಾಂಡವರನ್ನು ಹಲವು ರೀತಿಯಲ್ಲಿ ಉಪಚರಿಸುವರು. ಈ ಸಂದರ್ಭದಲ್ಲಿ

"ಎಂದನುತ್ತರನರಸನಂಘ್ರಿಯೊ
ಳಂದು ಮಕುಟವ ಚಾಚಿ ಬಿನ್ನಹ
ವಿಂದು ನೇಮವ ಕೊಡಿ ಕುಮಾರಿಯನೀವೆನರ್ಜುನಗೆ
ಎಂದಡೇಳೇಳೆಂದು ನಸು ನಗೆ
ಯಿಂದ ಪಾರ್ಥನ ನೋಡೆ ಕೈ ಮುಗಿ
ದೆಂದನಾತನು ಮನದ ನಿಶ್ಚಯವನು ಯುಧಿಷ್ಠಿರಗೆ"[೯]

ಉತ್ತರನು ಧರ್ಮರಾಜನಲ್ಲಿ ಕುಮಾರಿಯಾದ ಉತ್ತರೆಯನ್ನು ಅರ್ಜುನನಿಗೆ ವಿವಾಹ ಮಾಡಿಕೊಡುವೆವು. ತಾವು ಅನುಮತಿ ನೀಡಬೇಕೆಂದು ಕೇಳುವ ಸಂಗತಿಗಳು ಗಮನಾರ್ಹವಾದವು. ಉತ್ತರೆಯ ವಿವಾಹವನ್ನು ಕುರಿತ ನಿರ್ಧಾರಗಳೆಲ್ಲವನ್ನೂ ತೆಗೆದುಕೊಳ್ಳುವವರು ಪುರುಷರೆ. ಉತ್ತರೆಉ ಇಷ್ಟಾನಿಷ್ಟಗಳಿಗೆ ಬೆಲೆ ಇಲ್ಲದಿರುವುದು ತಿಳಿಯುತ್ತದೆ. ಅಲ್ಲದೆ ಈ ಮಾತುಗಳಿಗೆ ಅರ್ಜುನನು ಒಪ್ಪದೆ ಒಂದು ವರ್ಷ ಕಾಲ ತಾನು ಉತ್ತರೆಗೆ ನಾಟ್ಯವಿದ್ಯೆಯನ್ನು ಕಲಿಸಿದ್ದೇನೆ. ಆಕೆ ತನ್ನನ್ನು ತಂದೆಯ ಭಾವದಿಂದ ಭಜಿಸಿದ್ದಾಳೆ. ಆಕೆಯನ್ನು ಅರಸಿಯೆಂದು ಒಪ್ಪಿಕೊಳ್ಳಲು ಸಾಧ್ಯವಿಲ್ಲ. ವಿವಾಹ ಮಾಡಿಕೊಡುವುದಾದರೆ ಈಕೆಯನ್ನು ನನ್ನ ಮಗನಾದ ಅಭಿಮನ್ಯುವಿಗೆ ಕೊಡಲಿ ಎಂದು ತಿಳಿಸುತ್ತಾನೆ. ನಂತರ ಅಭಿಮನ್ಯುವಿನೊಂದಿಗೆ ಉತ್ತರೆಯ ವಿವಾಹ ಕಾರ್ಯಗಳು ಜರುಗುತ್ತವೆ. ಇಲ್ಲೆಲ್ಲಿಯೂ ಉತ್ತರೆಯ ಅಭಿಪ್ರಾಯವನ್ನು ಕೇಳಿಯೇ ಇಲ್ಲ. ಅಲ್ಲದೆ ಅರ್ಜುನ ಹಾಗೂ ಅಭಿಮನ್ಯುವಿನ ಮೇಲೆ ಆಕೆಗೆ ಯಾವ ರೀತಿಯ ಭಾವನೆಗಳಿದ್ದವು ಎಂಬದೂ ಸಹ ಕೃತಿಗಳಿಂದ ತಿಳಿದುಬರುವುದಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಪುರುಷ ಪ್ರಧಾನ ಸಮಾಜದ ಆಲೋಚನೆಗಳು ಇಲ್ಲಿ ಕಂಡುಬರುತ್ತವೆ. ವಿರಾಟ, ಅರ್ಜುನ, ಧರ್ಮರಾಯ, ಉತ್ತರನ ನಿರ್ಣಯಗಳೇ ಅಂತಿಮವಾಗಿವೆ. ಉತ್ತರೆಯ ಮನಸ್ಸಿನ ಅಭಿಲಾಷೆಗಳು ಏನಿತ್ತೆಂಬುದನ್ನು ತಿಳಿದುಕೊಳ್ಳಲು ಪ್ರಯತ್ನಿಸಿಲ್ಲ. ಅಲ್ಲದೆ ಆ ವಿವಾಹಕ್ಕೆ ಸಂಬಂಧಿಸಿದ ಆಕೆಯ ಅಂತರಂಗ ಯಾರಿಗೂ ಕಾಣದಿರುವುದು ಪರಂಪರಾಗತ ಮನಸ್ಥಿತಿಗೆ ಹಿಡಿದ ಕೈಗನ್ನಡಿಯಾಗಿದೆ. ಗುರುವಿನ ಬದಲಿಗೆ ಆತನ ಮಗನನ್ನು ವಿವಾಹವಾಗಬೇಕೆಂದಾಗ ಆಕೆಯ ಮನದಲ್ಲಿ ಮೂಡುವ ಭಾವನೆಗಳನ್ನು ಯಾರೂ ಗಮನಿಸಿದಂತೆ ಕಾಣುವುದಿಲ್ಲ.

ಈ ಸಂದರ್ಭವನ್ನು ಹೊರತುಪಡಿಸಿದರೆ ಕುಮಾರವ್ಯಾಸನಲ್ಲಿ ಮತ್ತೆ ಉತ್ತರೆಯ ವಿವರಗಳು ಕಂಡುಬರುವುದು ಗದಾಪರ್ವದ ಕೊನೆಯಲ್ಲಿ.

"ಅರಸ ಕೇಳ್ ಧೃತರಾಷ್ಟ್ರ ಸಂಜಯ
ವರ ಮುನಿಪ ವಿದುರಾದಿ ಪರಿಜನ
ಪುರಜನಾವಳಿಯಿದ್ದುದುಪವನದೊಂದು ಬಾಹೆಯಲಿ
ನೆರೆದುದೀಚೆಯಲೊಂದೆಸೆಯಲು
ತ್ತರೆ ಸುಭದ್ರೆಯರಾದಿ ಯಾದವ
ರರಸಿಯರು ಸಹಿತೊರಲುತಿರ್ದಳು ದ್ರೌಪದೀದೇವಿ"[೧೦]

ಧೃತರಾಷ್ಟ್ರ, ಸಂಜಯ, ವರ ಮುನೀಶ್ವರ ಹಾಗೂ ವಿದುರರೇ ಮೊದಲಾದ ಪರಿಜನಗಳು, ಪುರಜನಗಳು ಉಪವನದ ಒಂದು ಪಕ್ಕದಲ್ಲಿದ್ದರು. ಉಪವನದ ಇನ್ನೊಂದು ಪಕ್ಕದಲ್ಲಿ ಉತ್ತರೆ, ಸುಭದ್ರಾದೇವಿ ಮೊದಲಾದ ಅರಸಿಯರು ಸಹಿತ ದ್ರೌಪದಾದೇವಿಯು ಗೋಳಾಡುತ್ತಿದ್ದಳು. ಇಲ್ಲಿ ಅಭಿಮನ್ಯುವನ್ನು ಕಳೆದುಕೊಂಡು ದುಃಖಿಸುತ್ತಿರುವ ಸಂಗತಿಗಳು ತಿಳಿದುಬರುತ್ತವೆ. ಈ ಸಂದರ್ಭವನ್ನು

ಬಿಟ್ಟರೆ ಉಳಿದಂತೆ ಉತ್ತರೆಯ ವಿವರಗಳು ಕಡಿಮೆ. ಹೀಗಾಗಿ ಆಕೆಯ ಮಾನಸಿಕ ತೊಳಲಾಟಗಳತ್ತ ಇನ್ನಷ್ಟು ಬೆಳಕು ಚೆಲ್ಲುವ ಅಧ್ಯಯನಗಳು ನಡೆಯಬೇಕಿದೆ.

೭.೫. ತಾಪಸ ಕನ್ಯೆಯರು

ಅಲಕ್ಷಿತ ಸ್ತ್ರೀಯರಲ್ಲಿ ಪಂಪನು ಉಲ್ಲೇಖಿಸುವ 'ತಾಪಸ ಕನ್ಯೆಯರು' ಒಬ್ಬರು. ಇವರ ಬಗೆಗಿನ ಅಧ್ಯಯನಗಳು ಕೂಡ ವಿರಳ. ಪಂಪ ತನ್ನ ಕಾವ್ಯದ ಸಂದರ್ಭದಲ್ಲಿ ತಾಪಸಕನ್ಯೆಯರು ಎಂಬ ಉಲ್ಲೇಖವನ್ನು ತರುತ್ತಾನೆಯೇ ಹೊರತು ಇನ್ನುಳಿದ ಇತರ ಯಾವುದೇ ವಿವರಗಳನ್ನು ತಿಳಿಸಿಲ್ಲ. ಪಾಂಡುರಾಜನು ಬೇಟೆಗೆಂದು ಕಾಡಿಗೆ ಹೋಗಿ ಅಲ್ಲಿ 'ಕಿಂದಮ'ನೆಂಬ ಋಷಿಯಿಂದ ಶಾಪಗ್ರಸ್ತನಾಗುತ್ತಾನೆ. ಆ ಕಾರಣವಾಗಿ ವನವಾಸಕ್ಕೆ ಕಾಡಿಗೆ ಬರುವ ಪಾಂಡುರಾಜನು ಶತಶೃಂಗ ಪರ್ವತವನ್ನು ಬಂದು ಸೇರುತ್ತಾನೆ. ಈ ಸಂದರ್ಭದಲ್ಲಿ ಕವಿ ತಾಪಸಕನ್ಯೆಯರನ್ನು ಉಲ್ಲೇಖಿಸುತ್ತಾನೆ.

> "ಆ ಪರ್ವತದ ವಿಪುಳ ವನೋಪಕಂಠಂಗಳೊಳ್ ತಾಪಸಕನ್ಯೆಯರ್
> ನಡಪಿದೆಳಲತೆಗಳೊಳೆಱಗಿ.."[೧೧]

ಆ ಶತಶೃಂಗ ಪರ್ವತದ ತಪ್ಪಲು ಪ್ರದೇಶದಲ್ಲಿ ತಾಪಸ ಕನ್ಯೆಯರು ನೆಟ್ಟು ಬೆಳೆಸಿದ ಬಳ್ಳಿಗಳನ್ನು ಮುತ್ತಿದ ದುಂಬಿಗಳು ಸಾಮವೇದದ ಧ್ವನಿಯನ್ನು ಮಾಡುತ್ತಿದ್ದವೆಂಬ ವಿವರಗಳನ್ನು ಪಂಪ ನೀಡುತ್ತಾನೆ. ಇದರ ಹೊರತಾದ ವಿವರಗಳಿಲ್ಲ. ತಾಪಸಕನ್ಯೆಯರು ಎಂದರೆ ಯಾರು? ಅವರು ಶತಶೃಂಗ ಪರ್ವತದ ತಪ್ಪಲಿಗೆ ಏಕೆ ಬಂದಿದ್ದರು? ಅವರು ಆ ತಪ್ಪಲು ಪ್ರದೇಶದಲ್ಲಿ ಲತೆಗಳನ್ನು ಬೆಳೆಸಲು ಕಾರಣವೇನು? ಎಂಬಂತಹ ಯಾವುದೇ ಪ್ರಶ್ನೆಗಳಿಗೆ ಪಂಪನ ಕಾವ್ಯದಲ್ಲಿ ಉತ್ತರವಿಲ್ಲ. ಜೊತೆಗೆ ಅವರು ದೇವತಾ ಸ್ತ್ರೀಯರೆ, ದಾಸಿಯರೆ ಅಥವಾ ಯಾರಿಂದಲಾದರೂ ಅಪಹರಣಕ್ಕೊಳಗಾಗಿ ಅಲ್ಲಿ ಸೇರಿದವರೇ ಮೊದಲಾದ ಪ್ರಶ್ನೆಗಳು ನಮ್ಮನ್ನು ಕಾಡುತ್ತವೆ. ಕೃತಿಯಲ್ಲಿ ಇವುಗಳಿಗೆ ಸಂಬಂಧಿಸಿದ ಯಾವುದೇ ವಿವರಗಳಿಲ್ಲ. ಕೇವಲ ತಾಪಸಕನ್ಯೆಯರು ನೆಟ್ಟು ಬೆಳೆಸಿದ ಲತೆಗಳ ವಿವರಗಳನ್ನಷ್ಟೆ ಕವಿ ನೀಡಿದ್ದಾನೆ.

೭.೬. ಶಿಶುಪಾಲಕನ ತಾಯಿ

ಶಿಶುಪಾಲನ ತಾಯಿ ಹಾಗೂ ಕುಂತಿ ಅಕ್ಕತಂಗಿಯರು. ಪಂಪ ತನ್ನ ಕೃತಿಯಾದ 'ವಿಕ್ರಮಾರ್ಜುನ ವಿಜಯಂ'ನಲ್ಲಿ ಇವಳ ಹೆಸರನ್ನು 'ಸಾತ್ವತಿ' ಎಂದು ಕರೆದಿದ್ದರೆ, 'ಪುರಾಣನಾಮ ಚೂಡಾಮಣಿ' ಕೃತಿಯಲ್ಲಿ "ಶ್ರುತಶ್ರವೆ"[೧೨] ಎಂದು ಕರೆಯಲಾಗಿದೆ. ಕುಮಾರವ್ಯಾಸ ಈಕೆಗೆ ಯಾವುದೆ ಹೆಸರು ನೀಡಿಲ್ಲ. 'ಚೇದಿ' ದೇಶದ ಅರಸನಾದ 'ಶಿಶುಪಾಲ' ಈಕೆಯ ಮಗ. ಈತನು ಹಿರಣ್ಯ ಕಶಿಪುವಿನ ಅಂಶದಿಂದ ಜನಿಸಿದ ಕಾರಣವಾಗಿ ಹುಟ್ಟುವಾಗಲೆ ಇವನಿಗೆ ಮೂರು ಕಣ್ಣುಗಳೂ, ನಾಲ್ಕು ತೋಳುಗಳೂ ಇದ್ದವು. ಕುಮಾರವ್ಯಾಸ ಈತನ ವಿವರಗಳನ್ನು ಕುರಿತು ತಿಳಿಸುವಾಗ ಈ ರೀತಿ ಹುಟ್ಟಿದ ಮಗುವಿನಿಂದಾಗಿ ಜನ ಹಾಗೂ ತಾಯ್ತಂದೆಗಳು ಭಯದಿಂದ ಇರುತ್ತಾರೆ. ಈ ನಡುವೆ ಇವರ ಮನೆಗೆ ಬಂದ ನಾರದ ಋಷಿಗೆ ಶಿಶುಪಾಲನ ವಿವರಗಳನ್ನು ತಿಳಿಸಿದಾಗ ಆತ 'ಈ ಮಗುವು

ವಿಖ್ಯಾತನಾಗುತ್ತಾನೆ. ಇದನ್ನು ಯಾರ ಕೈಗೆ ಕೊಟ್ಟಾಗ ಇವನ ಹಣೆಗಣ್ಣು ಹಾಗೂ ಹೆಚ್ಚಿನ ಭುಜಗಳು ನಾಶವಾಗುತ್ತವೋ ಅವನಿಂದಲೇ ಇವನಿಗೆ ಸಾವು ಸಂಭವಿಸುವುದು' ಎಂದು ಹೇಳಿ ಹೊರಟು ಹೋಗುತ್ತಾನೆ. ಇದರ ನಂತರದ ವಿವರಗಳನ್ನು ಕುಮಾರವ್ಯಾಸ ಈ ರೀತಿಯಾಗಿ ಚಿತ್ರಿಸಿದ್ದಾನೆ.

"ಇವನ ಕಾಣಲು ಬಂದರವನಿಪ
ರವರವರ ಕೈಗಳಲಿ ತಾಯ್ತಂ
ದಿವನನಿತ್ತಲು ಮಾಣವಿವನಧಿಕಾಕ್ಷಿ ಬಾಹುಗಳು
ಇವನ ತಾಯ್ ತಮ್ಮತ್ತೆಯೆಂದು
ತ್ಸವದೊಳೀ ಮುರವೈರಿ ಬರಲಂ
ದಿವನ ತಂದಿವನವ್ವೆ ಕೊಟ್ಟಳು ಹರಿಯ ಹಸ್ತದಲಿ"೧೩

ಇಲ್ಲಿ ಶಿಶುಪಾಲನ ತಾಯಿಯ ಸಂಘರ್ಷಗಳು ಗಮನಿಸತಕ್ಕವು. ತಾನು ಹೆತ್ತ ಮಗುವು ಎಷ್ಟೇ ವಿಕಾರವಾಗಿದ್ದರೂ, ಮುಂದೆ ಅದು ದುಷ್ಟನಾಗಿ ಬೆಳೆಯುವನೆಂದು ತಿಳಿದಿದ್ದರೂ ಆತನನ್ನು ರಕ್ಷಿಸಿಕೊಳ್ಳಲು ಹಾಗೂ ಆತನ ವಿಕಾರ ರೂಪವನ್ನು ಕಳೆಯಲು ತಾನು ಮಾಡುವ ಪ್ರಯತ್ನಗಳು ಆಕೆಯ ತಾಯ್ತನದ ಬಯಕೆಗಳೇ ಆಗಿವೆ. ಈ ಕಾರಣವಾಗಿ ಶಿಶುಪಾಲನ ತಾಯಿ ಇವನನ್ನು ನೋಡಲು ಬಂದ ಅವನಿಪರ ಕೈಗಳಿಗೆಲ್ಲ ಆ ಮಗುವನ್ನು ತಂದುಕೊಡುತ್ತಿದ್ದಳು. ಆದರೆ ಇವನ ಅಧಿಕ ಕಣ್ಣು ಹಾಗೂ ಕೈಗಳು ಮರೆಯಾಗಲಿಲ್ಲ. ಒಮ್ಮೆ ಇವನ ತಾಯಿ ತನಗೆ ಅತ್ತೆಯಾಗಬೇಕು ಎಂಬ ಸಂತೋಷದಿಂದ ಈ ಮುರವೈರಿ ಅಲ್ಲಿಗೆ ಬರಲು ಅಂದು ತಾಯಿಯು ಆ ಮಗುವನ್ನು ತಂದು ಹರಿಯ ಕೈಗೆ ಕೊಟ್ಟಳು.

"ಆಗಳಿವನಧಿಕಾಕ್ಷಿ ಬಾಹುವು
ನೀಗಿದೊಡನಿವನವ್ವೆ ಕಂಡು
ಬ್ಬೇಗದಲಿ ಕಮಲಾಕ್ಷನಂಘ್ರಿಯಲೆರಗಿ ಕೈ ಮುಗಿದು
ಮೇಗರೆಯ ಮಾತಲ್ಲ ಬಾಲಕ
ನಾಗುಹೋಗಿನ ಕೊರತೆ ನಿನ್ನನು
ತಾಗುವುದು ನೀ ಸೈರಿಸೆಂದಭಯವನು ಬೇಡಿದಳು"೧೪

ಆಗ ಈ ಮಗುವಿನ ಅಧಿಕ ಕಣ್ಣು ಹಾಗೂ ಬಾಹುಗಳು ನೀಗಿ ಹೋದವು. ಇವರಮ್ಮ ಅದನ್ನು ಕಂಡು ಉದ್ವೇಗಗೊಂಡು ಕಮಲಾಕ್ಷನ ಕಾಲಿಗೆರಗಿ ಕೈಮುಗಿದಳು. ಹರಿಯೇ ಇದು ಮೇಲುಪಚಾರದ ಮಾತು ಎಂದು ತಿಳಿಯಬೇಡ. ಇವನ ಆಗು ಹೋಗಿನ ಕೊರತೆ ನಿನಗೆ ಸೇರಿದ್ದು. ನೀನೇ ಈತನನ್ನು ಸೈರಿಸಬೇಕು ಎಂದು ಹೇಳಿ ಕೃಷ್ಣನಲ್ಲಿ ಅಭಯವನ್ನು ಬೇಡಿದಳು. ಇಲ್ಲಿ ಶಿಶುಪಾಲನ ತಾಯಿಗೆ ಒಂದು ವಿಧದಲ್ಲಿ ಸಂತೋಷವಾದರೂ, ಮತ್ತೊಂದು ವಿಧದಲ್ಲಿ ದುಃಖ, ಭಯಗಳು ಆವರಿಸುತ್ತವೆ. ಏಕೆಂದರೆ ಮಗುವಿನ ವಿಕಾರತೆ ಕಳೆದದ್ದು ಸಂತೋಷದ ಸಂಗತಿಯಾದರೆ,

ಕೃಷ್ಣನೇ ತನ್ನ ಮಗನಿಗೆ ಶತ್ರುವೆಂಬುದನ್ನು ತಿಳಿದು ಹೆದರುತ್ತಾಳೆ. ಕೊನೆಗೆ ತನ್ನ ಮಗನನ್ನು ರಕ್ಷಿಸೆಂದು ಕೇಳಲು ಕೃಷ್ಣನು ಇವನ ಅಪರಾಧ ಶತವನ್ನು ಸೈರಿಸುತ್ತೇನೆಂದು ಅಭಯ ಹಸ್ತವನ್ನು ಕೊಟ್ಟು ಅವಳನ್ನು ಸಂತೈಸುತ್ತಾನೆ.

ನಂತರದ ದಿನಗಳಲ್ಲಿ ಶಿಶುಪಾಲಕನು ಬೆಳೆದು ದೊಡ್ಡವನಾಗುತ್ತಾನೆ. ಹೀಗಿರುವಾಗ ಪಾಂಡವರು ಮಾಡಿದ ರಾಜಸೂಯ ಯಾಗವು ಮುಗಿಯುತ್ತದೆ. ಆ ಯಾಗದ ಅಗ್ರ ಪೂಜೆಯನ್ನು ಭೀಷ್ಮನು ಕೃಷ್ಣನಿಗೆ ಮಾಡಿಸಿದ್ದರಿಂದ ರೋಷಭರಿತನಾದ ಶಿಶುಪಾಲಕ ಭೀಷ್ಮನನ್ನು ನಿಂದಿಸುತ್ತಾನೆ. ಇದರಿಂದ ಕೋಪಗೊಂಡ ಭೀಮನು ಶಿಶುಪಾಲಕನನ್ನು ಕೊಲ್ಲಲು ಹೋದಾಗ ಭೀಷ್ಮ ಅವನನ್ನು ತಡೆಯುತ್ತಾನೆ. ನಂತರ ಶಿಶುಪಾಲಕ ಕೃಷ್ಣನನ್ನು ನಿಂದಿಸುತ್ತಾನೆ. ಈ ವಿಚಾರಗಳನ್ನು ಕೇಳಿ ತಿಳಿದ ಶಿಶುಪಾಲಕನ ತಾಯಿ ಕೃಷ್ಣನಲ್ಲಿ ಬಂದು ಬೇಡಿಕೊಳ್ಳುತ್ತಾಳೆ. ಇಲ್ಲಿ ಆಕೆಯ ಮನದ ಆತಂಕ, ತಲ್ಲಣಗಳನ್ನು ಕಾಣಬಹುದು.

> "ಅಂದಿನಲಿ ಶಿಶುಪಾಲಕನ ತಾ
> ಯ್ಬಂದು ಮಗನಪರಾಧ ಶತದಲಿ
> ಕಂದಲಾಗದು ಚಿತ್ತವೆಂದಳು ನಮ್ಮನನುಸರಿಸಿ
> ಇಂದು ಖತಿಯಿಲ್ಲೆಮಗೆ ಸೈರಿಸ
> ಬಂದುದಿಲ್ಲವಗೆರಡು ತಪ್ಪಿನೊ
> ಳೆಂದು ಮುರಹರ ನಗುತ ನುಡಿದನು ನಾರದಾದ್ಯರಿಗೆ"[೧೫]

ಕೃಷ್ಣನು ಯುದ್ಧಭೂಮಿಗೆ ತೆರಳುವಾಗ ನಾರದಾದಿಗಳನ್ನು ಕುರಿತು ಈ ರೀತಿಯಾಗಿ ಹೇಳುತ್ತಾನೆ. ಅಂದು ಶಿಶುಪಾಲಕನ ತಾಯಿ ಬಂದು ನನ್ನನ್ನು ಅನುಸರಿಸಿ ಮಗನ ನೂರು ಅಪರಾಧ ಶತದಲ್ಲೂ ಚಿತ್ತ ಕಂದಬಾರದು ಎಂದು ಕೇಳಿಕೊಂಡಳು. ಇಂದು ಈತನು ನನ್ನನ್ನು ನಿಂದಿಸಿದರೆ ಅದರಿಂದ ನನಗೆ ಖತಿಯಿಲ್ಲ. ಆದರೆ ಇವನ ಎರಡು ತಪ್ಪುಗಳನ್ನು ಮಾತ್ರ ಸೈರಿಸಲು ಸಾಧ್ಯವಿಲ್ಲ ಎಂದು ನುಡಿಯುತ್ತಾನೆ.

ತನ್ನ ಮಗನನ್ನು ರಕ್ಷಿಸಿಕೊಳ್ಳಲಿಕ್ಕಾಗಿ ಇಲ್ಲಿ ಶಿಶುಪಾಲಕನ ತಾಯಿ ಮಾಡುವ ಪ್ರಯತ್ನಗಳು ತಾಯಿಯ ಸಹಜ ಆಸೆ, ಆಕಾಂಕ್ಷೆಗಳನ್ನು ನಮ್ಮ ಗಮನಕ್ಕೆ ತರುತ್ತವೆ. ಮಗನಾದವನು ದುಷ್ಟನಾಗಲಿ, ಕ್ರೂರಿಯಾಗಲಿ ತಾಯಿ ಹೃದಯ ಅಷ್ಟು ಸುಲಭವಾಗಿ ಆತನ ಸಾವನ್ನು ಬಯಸುವುದಿಲ್ಲ. ಇದು ನಮ್ಮ ಭಾರತೀಯ ಸಂಸ್ಕೃತಿಯ ಎಲ್ಲ ಹೆಣ್ಣುಗಳ ಮನದ ತಾಕಲಾಟವೇ ಆಗಿದೆ. ಆತನಿಂದ ಮಾನಸಿಕವಾಗಿ ಎಷ್ಟೇ ನೋವು, ಅಪಮಾನಗಳನ್ನು ಅನುಭವಿಸಿದರೂ ಸರಿ ತಾಯಿಯಾದವಳು ಅವನ ಏಳ್ಗೆ, ಅಭ್ಯುದಯವನ್ನೆ ಬಯಸುತ್ತಾಳೆ ಎಂಬುದು ಇಲ್ಲಿ ಗಮನಿಸತಕ್ಕ ಸಂಗತಿ. ಆ ಕಾರಣವಾಗಿಯೆ ಶಿಶುಪಾಲಕನ ತಾಯಿ ಆತನ ನೂರು ಅಪರಾಧಗಳನ್ನು ಕ್ಷಮಿಸುವಂತೆ ಕೇಳಿಕೊಳ್ಳುವುದು. ಅಲ್ಲದೆ ಚರ್ಚಿಸತಕ್ಕ ಮತ್ತೊಂದು ಸಂಗತಿ ಇಲ್ಲಿ ಶಿಶುಪಾಲಕನ ತಾಯಿಗೂ ಕೂಡ ಹೆಸರಿಲ್ಲ.

ಕುಮಾರವ್ಯಾಸ ಆಕೆಯನ್ನು ಶಿಶುಪಾಲಕನ ತಾಯಿ ಎಂದೇ ಉಲ್ಲೇಖಿಸುತ್ತಾನೆಯೇ ಹೊರತು ಆಕೆಗೊಂದು ಹೆಸರು ನೀಡಿಲ್ಲ. ಇದು ಹಲವು ಪ್ರಶ್ನೆಗಳನ್ನು ನಮ್ಮಲ್ಲಿ ಮೂಡಿಸುತ್ತದೆ. ಅಲ್ಲದೆ ಇದರ ಹಿಂದಿನ ರಾಜಕೀಯ ತಂತ್ರಗಾರಿಕೆಗಳೇನೆಂಬುದನ್ನು ಸಹ ಪತ್ತೆ ಹಚ್ಚಬೇಕಾದ್ದು ಮುಖ್ಯವಾದುದು.

ಪಂಪ ತನ್ನ 'ವಿಕ್ರಮಾರ್ಜುನ ವಿಜಯಂ' ಕೃತಿಯಲ್ಲಿಯು ಕೃಷ್ಣನಲ್ಲಿ ತನ್ನ ಮಗನ ನೂರು ತಪ್ಪುಗಳನ್ನು ಕ್ಷಮಿಸುವಂತೆ ಬೇಡಿಕೊಳ್ಳುವ ಪ್ರಸಂಗವಿದೆ.

"ನೆಱೆದುದನಱೆದೀ ಕಿಱೆಯವ
ನಱೆಯದೆ ಕೆಡೆ ನುಡಿದನಪ್ಪೊಡಂ ನೂಱುವರಂ
ನೆಱೆ ಸಲಿಸುವುದೆಂದುದನಾಂ
ಮಱೆವೆನೆ ಬಯ್ ಬಯ್ಯೆ ಸಲಿಸುವೆಂ ನೂಱುವರಂ"[೨೬]

ನೆರೆದಿರುವ ಈ ಸಭಾಮಧ್ಯದಲ್ಲಿ ಈ ಕಿರಿಯವನು ತಪ್ಪಾಗಿ ನುಡಿದನಾದರೂ ಅವನ ನೂರು ತಪ್ಪುಗಳನ್ನು ಮನ್ನಿಸಬೇಕೆಂದು ಆಕೆ ಕೇಳಿಕೊಳ್ಳುತ್ತಾಳೆ. ಅದಕ್ಕೆ ಕೃಷ್ಣನು ಆಗಲಿ ಅದರಂತೆಯೆ ಈ ಮಾತನ್ನು ನಾನು ಮರೆಯುವುದಿಲ್ಲ. ಆತನ ನೂರು ಬಯ್ಗುಳಗಳನ್ನು ಸಹಿಸಿಕೊಳ್ಳುತ್ತೇನೆಂದು ಆಕೆಗೆ ಅಭಯ ಹಸ್ತವನ್ನು ನೀಡುತ್ತಾನೆ. ಇಲ್ಲಿ ತನ್ನ ಮಗನ ನೂರು ತಪ್ಪುಗಳಾಗುವವರೆಗೆ ಆತನನ್ನು ಕೊಲ್ಲಬೇಡೆಂದು ಕೇಳಿಕೊಳ್ಳುವುದರ ಹಿಂದೆ ಎಂದಿದ್ದರೂ ಕೃಷ್ಣ ಆತನನ್ನು ಕೊಂದೆ ಕೊಲ್ಲುತ್ತಾನೆ. ಕೊನೆಯ ಪಕ್ಷ ನೂರು ತಪ್ಪುಗಳನ್ನು ಮಾಡುವಷ್ಟು ಸಮಯವಾದರೂ ಬದುಕುವನಲ್ಲ ಎಂಬ ಮನೋಭಾವ ಇಲ್ಲಿ ತಾಯಿಯದ್ದಾಗಿದೆ.

ಈ ರೀತಿಯಾಗಿ ಪಂಪ ಹಾಗೂ ಕುಮಾರವ್ಯಾಸರ ಕೃತಿಗಳಲ್ಲಿನ ಅಲಕ್ಷಿತ ಹಾಗೂ ಇತರ ಸ್ತ್ರೀಯರ ಸಂಘರ್ಷಗಳನ್ನು ಚರ್ಚಿಸಬಹುದಾಗಿದೆ. ಇಲ್ಲಿನ ಸ್ತ್ರೀಯರ ಸಂಘರ್ಷಗಳು ವಿಭಿನ್ನವಾದವುಗಳಾಗಿದ್ದು, ಬಹಳಷ್ಟು ಸ್ತ್ರೀಯರು ತಮ್ಮದಲ್ಲದ ತಪ್ಪುಗಳಿಗೆ ಶಿಕ್ಷೆಯನ್ನು ಅನುಭವಿಸುವ ಹಾಗೂ ನೋವು, ಸಂಕಟಗಳಿಗೆ ಒಳಗಾಗುವುದು ಕಂಡುಬರುತ್ತದೆ. ನಿಷಾದಿತಿ ಮತ್ತು ಆಕೆಯ ಮಕ್ಕಳು ಯಾವುದೇ ತಪ್ಪುಗಳನ್ನು ಮಾಡದಿದ್ದರೂ ವಿನಾಕಾರಣ ತಮ್ಮ ಜೀವವನ್ನು ತೆತ್ತಿದ್ದಾರೆ. ದುಶ್ಯಳೆಯು ತನ್ನ ಗಂಡನ ಕ್ರೂರತ್ವ, ಅಹಂಮಿಕೆಗಳ ಕಾರಣವಾಗಿ ಹುಟ್ಟಿದ ಅನರ್ಥಗಳಿಂದ ಆತನನ್ನು ಉಳಿಸಿಕೊಳ್ಳಲು ಮಾನಸಿಕವಾಗಿ ನೋವುಗಳನ್ನು ಅನುಭವಿಸುವವಳಾಗಿದ್ದಾಳೆ. ಮದನಲತೆ ನಾಗಕನ್ಯೆಯಾದರೂ ಅರ್ಜುನನಲ್ಲಿ ತನ್ನ ಪ್ರೀತಿಯನ್ನು ವ್ಯಕ್ತಪಡಿಸುವ ಮುಖೇನ ತನ್ನ ಮನದ ಬಯಕೆಗಳನ್ನು ಹೊರಹಾಕುವುದು ತಿಳಿಯುತ್ತದೆ. ತಾಪಸ ಕನ್ಯೆಯರ ವಿವರ ವಿರಳವಾಗಿದ್ದು, ಅವರ ಉಲ್ಲೇಖವಷ್ಟೇ ನಮಗೆ ಕೃತಿಯಲ್ಲಿ ಕಂಡುಬರುತ್ತದೆ. ಉತ್ತರೆಯ ಸಂಘರ್ಷಗಳು ಸಹ ವೈಯಕ್ತಿಕ ನೆಲೆಯವಾಗಿದ್ದು, ಪತಿಯನ್ನು ಕಳೆದುಕೊಂಡ ನೋವಿನ ನೆಲೆಯವಾಗಿವೆ. ಶಿಶುಪಾಲಕನ ತಾಯಿ ಎದುರಿಸುವ ಸಂಘರ್ಷಗಳು ತನ್ನ ಮಗನ ಪ್ರಾಣವನ್ನು ಉಳಿಸಿಕೊಳ್ಳಲು ನಡೆಸುವ ಪ್ರಯತ್ನಗಳ ಭಾಗವಾಗಿವೆ. ಹೀಗೆ ಇಲ್ಲಿನ ಸ್ತ್ರೀ ಸಂಘರ್ಷಗಳು ವೈಯಕ್ತಿಕ ನೆಲೆಯ ಸಂಘರ್ಷಗಳಾಗಿರುವುದು ತಿಳಿಯುತ್ತದೆ.

ಕೊನೆ ಟಿಪ್ಪಣಿಗಳು

೧. ವಿಕ್ರಮಾರ್ಜುನ ವಿಜಯಂ, ೩/೪-ವ.

೨. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೮/೮೭.

೩. ಕರ್ಣಾಟ ಭಾರತ ಕಥಾಮಂಜರಿ, ಆದಿಪರ್ವ, ೮/೮೮.

೪. ವಿಕ್ರಮಾರ್ಜುನ ವಿಜಯಂ, ೧೧/೧೨೨-ವ.

೫. ವಿಕ್ರಮಾರ್ಜುನ ವಿಜಯಂ, ೧೧/೧೨೩.

೬ ವಿಕ್ರಮಾರ್ಜುನ ವಿಜಯಂ, ೪/೧೫-ವ.

೭ ವಿಕ್ರಮಾರ್ಜುನ ವಿಜಯಂ, ೪/೧೭.

೮. ವಿಕ್ರಮಾರ್ಜುನ ವಿಜಯಂ, ೯/೭.

೯. ಕರ್ಣಾಟ ಭಾರತ ಕಥಾಮಂಜರಿ, ವಿರಾಟಪರ್ವ, ೧೦/೨೫.

೧೦. ಕರ್ಣಾಟ ಭಾರತ ಕಥಾಮಂಜರಿ, ಗದಾಪರ್ವ, ೧೧/೩೦.

೧೧. ವಿಕ್ರಮಾರ್ಜುನ ವಿಜಯಂ, ೧/೧೧೫-ವ.

೧೨. ಪುರಾಣನಾಮ ಚೂಡಾಮಣಿ, ಪು.ಸಂ-೫೭೦.

೧೩. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೦/೩೪.

೧೪. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೦/೩೫

೧೫. ಕರ್ಣಾಟ ಭಾರತ ಕಥಾಮಂಜರಿ, ಸಭಾಪರ್ವ, ೧೦/೬೨.

೧೬. ವಿಕ್ರಮಾರ್ಜುನ ವಿಜಯಂ, ೬/೬೧.

ಅಧ್ಯಾಯ : ಎಂಟು

ಪಂಪ – ಕುಮಾರವ್ಯಾಸರ ಕಾವ್ಯಗಳ ಸ್ತ್ರೀಪಾತ್ರಗಳ ವರ್ತಮಾನದ ಗ್ರಹಿಕೆಗಳು

ಅಧ್ಯಾಯ : ಎಂಟು

ಪಂಪ – ಕುಮಾರವ್ಯಾಸರ ಕಾವ್ಯಗಳ ಸ್ತ್ರೀಪಾತ್ರಗಳ ವರ್ತಮಾನದ ಗ್ರಹಿಕೆಗಳು

ವರ್ತಮಾನದ ಸಂದರ್ಭದಲ್ಲಿನ ಮಹಿಳೆಯರ ಸ್ಥಿತಿಗಳು ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿನ ಸ್ತ್ರೀಯರ ಸ್ಥಿತಿಗಳಿಗಿಂತ ಹೊರತಾಗಿಲ್ಲ. ಅವರು ಎದುರಿಸಿದ್ದ ಬಿಕ್ಕಟ್ಟುಗಳು, ನೋವು, ತಲ್ಲಣ, ಅವಮಾನ, ಹತಾಶೆಗಳನ್ನೆ ಇಂದಿನ ಸ್ತ್ರೀಯರೂ ಅನುಭವಿಸುತ್ತಿರುವುದು ಕಂಡುಬರುತ್ತದೆ. ಹೆಣ್ಣಿನ ಕಷ್ಟಗಳು, ನೋವುಗಳು, ಅವಳ ಮೇಲೆ ನಡೆಯುತ್ತಿರುವ ನಿರಂತರ ಕ್ರೌರ್ಯಗಳು ನಿಲ್ಲದೆ ಮತ್ತೆ ಮತ್ತೆ ಅವು ಪುನರಾವರ್ತನೆಯಾಗುತ್ತಿವೆ. ಇಂದಿನ ಬಹುಪಾಲು ಸಂದರ್ಭ, ಘಟನೆಗಳಲ್ಲಿ ಗಂಡು ಹೆಣ್ಣನ್ನು ತನ್ನಂತೆಯೆ ಇರುವ ಮತ್ತೊಂದು ಜೈವಿಕ ಜೀವಿ ಎಂದು ಭಾವಿಸದೆ ಇರುವ ಸಂಗತಿಗಳು ವರ್ತಮಾನದ ಈ ಹೊತ್ತಿನಲ್ಲಿ ಘಟಿಸುತ್ತಿರುವ ಮಹಿಳೆಯರ ಮೇಲಿನ ಅತ್ಯಾಚಾರ, ಕೊಲೆ, ಲೈಂಗಿಕ ದೌರ್ಜನ್ಯಗಳಂತಹ ಶೋಷಣೆಗಳ ಮೂಲಕ ಮನವರಿಕೆಯಾಗುತ್ತಿವೆ.

ಆಧುನಿಕ ಕಾಲಘಟ್ಟದಲ್ಲಿ ಬ್ರಿಟೀಷರು ಜಾರಿಗೆ ತಂದ ಸಾರ್ವತ್ರಿಕ ಶಿಕ್ಷಣ ಪದ್ಧತಿಯು ಮಹಿಳಾ ಲೋಕಕ್ಕೆ ಬದುಕಿನ ಭರವಸೆಯ ಹೊಸ ಬೆಳಕಿನ ಕಿರಣದ ಬಾಗಿಲನ್ನು ತೆರೆಯಿತು. ಆದರೆ ಇಂದಿಗೂ ಕುಟುಂಬಗಳಲ್ಲಿ ಶಿಕ್ಷಣ ಕೊಡಿಸುವ ವಿಚಾರದಲ್ಲಿ ಗಂಡು ಹೆಣ್ಣು ಎಂಬ ಭೇದಭಾವ ಕಾಣಬಹುದು. ಹೆಣ್ಣು ಮಕ್ಕಳಿಗೆಂದು ಸರ್ಕಾರ, ಕಾನೂನು ಏನೇ ಸೌಲಭ್ಯಗಳನ್ನು ನೀಡಿದ್ದರೂ ಅದನ್ನು ಪಡೆಯುವುದರಲ್ಲಿ ತಮ್ಮ ಕುಟುಂಬಗಳಿಂದಲೇ ಹೆಣ್ಣು ವಂಚಿತಳಾಗುತ್ತಿದ್ದಾಳೆ. ಜೊತೆಗೆ ಹೆಣ್ಣನ್ನು ನೋಡುವ ದೃಷ್ಟಿಕೋನ ಪರಂಪರಾಗತವಾದ ಭೋಗದ ದೃಷ್ಟಿಯೇ ಆಗಿದೆ. ಇಂದಿಗೂ ಕೂಡ ಹೆಣ್ಣನ್ನು ಒಂದು ಜೈವಿಕ ಜೀವಿ, ಮನಸ್ಸಿರುವ ವ್ಯಕ್ತಿ ಎಂಬ ಮನಸ್ಥಿತಿಗೆ ಬರಲಾಗಿಲ್ಲ. ಹೆಣ್ಣು ಒಂದು ಭೋಗದ ವಸ್ತು ಎಂಬ ಮನಸ್ಥಿತಿಯಲ್ಲಿಯೆ ಆಕೆಯನ್ನು ನೋಡುವ ನೋಟಗಳು ಮುಂದುವರೆದಿವೆ. ಹೆಣ್ಣು ಶಿಕ್ಷಣ ಕಲಿತು, ಆರ್ಥಿಕವಾಗಿ ಸಬಲಳಾಗಿ ಸ್ವಾವಲಂಬನೆಯ ಕಡೆ ಹೆಜ್ಜೆ ಇಟ್ಟಿದ್ದರೂ ಕೂಡ ಪುರುಷ ಪ್ರಧಾನ ಸಮಾಜ ಮಾತ್ರ ಆಕೆಯನ್ನು ಇನ್ನೂ ಲೈಂಗಿಕ ವಸ್ತು, ಭೋಗದ ಪರಿಧಿಯಲ್ಲಿಯೆ ನೋಡಲಾಗುತ್ತಿದೆ. ಲಿಂಗ ಭೇದವಿಲ್ಲದೆ, ವರ್ಣ ಭೇದವಿಲ್ಲದೇ ಶಿಕ್ಷಣ ಕಲಿತು ಅಕ್ಷರಸ್ಥರಾಗುತ್ತಿದ್ದರೂ ಹೆಣ್ಣನ್ನು ಲಿಂಗದ ಕಾರಣವಾಗಿ ಕೀಳಾಗಿ ಕಾಣುವ ಪರಿಪಾಠ ಇನ್ನೂ ಮುಂದುವರೆದಿದೆ. ಉತ್ತಮ ಸಾಧನೆ ಮಾಡುವ ಸಾಮರ್ಥ್ಯ, ಶಕ್ತಿ, ಮನಸ್ಸುಗಳು ಅವರಲ್ಲಿದ್ದರೂ ಸಹ ಇವರುಗಳ ಸಾಧನೆಯಲ್ಲಿ ಅವರ ಕುಟುಂಬ ವರ್ಗದ ಸಹಕಾರ ಹಾಗೂ ಪರಿಸ್ಥಿತಿಯ ಸಹಕಾರಗಳು ಎಲ್ಲಾ ಮಹಿಳೆಯರಿಗೂ ಸಿಗುತ್ತಿಲ್ಲದಿರುವುದು ಗಮನಿಸುವಂತಹ ಸಂಗತಿಯಾಗಿದೆ.

ಪ್ರಾಚೀನ ಕಾಲದಿಂದಲೂ ಪುರುಷ ಪ್ರಧಾನ ಸಮಾಜವು ಗಂಡು – ಹೆಣ್ಣಿನ ಸ್ಥಾನಮಾನಗಳನ್ನು ಏಕರೀತಿಯಿಂದ ನೋಡಿಲ್ಲ. ಇವರಿಬ್ಬರ ನಡುವೆ ಅಂತರ ಹಾಗೂ ನಿರ್ಬಂಧಗಳಿರುವುದು ತಿಳಿಯುತ್ತದೆ. ಈ ಕಾರಣವಾಗಿಯೆ ಇವರಿಬ್ಬರ ನಡುವಿನ ಸಂಬಂಧಗಳನ್ನು ಯಜಮಾನ – ಸೇವಕ, ಪ್ರಧಾನ – ಅಧೀನ ಹಾಗೂ ಶೋಷಕ – ಶೋಷಿತ ಎಂಬ ಸಾಮಾಜಿಕ ಅಂತರಗಳಿಂದ ಗ್ರಹಿಸಿರುವುದು ಕಂಡುಬರುತ್ತದೆ. ದೈಹಿಕ ಭಿನ್ನತೆಗಳನ್ನು ಹೊರತುಪಡಿಸಿದರೆ ಹೆಣ್ಣು – ಗಂಡುಗಳಿಬ್ಬರೂ ಸಮಾನ ಜೈವಿಕ ಜೀವಿಗಳೆ. ಆದರೆ ಈ ಅಂಶವನ್ನು ಒಪ್ಪದ ಪುರುಷ ಪ್ರಧಾನ ಸಮಾಜವು ಗಂಡನ್ನು ಅಧಿಕಾರದ ಕೇಂದ್ರ ಸ್ಥಾನದಲ್ಲಿಯು, ಹೆಣ್ಣನ್ನು ಆ ಅಧಿಕಾರದ ಅಡಿಯಲ್ಲಿಯು ನೋಡುವ ಪರಂಪರೆಯನ್ನು ಚಾಲ್ತಿಗೆ ತಂದಿತು.

ಇದರ ಪರಿಣಾಮವಾಗಿ ಹೆಣ್ಣು ಗಂಡಿನ ಅಧೀನದಲ್ಲಿರಬೇಕು ಎಂಬಂತಹ ಹಲವು ಕಟ್ಟುಪಾಡುಗಳು ಜಾರಿಗೆ ಬಂದ ನಂತರ ಹೆಣ್ಣು ಸಾಹಿತ್ಯ ಮತ್ತು ಸಮಾಜಗಳೆರಡರಲ್ಲಿಯೂ ಮೂಲೆಗುಂಪಾಗಿ ಮೌನಕ್ಕೆ ಶರಣಾಗಬೇಕಾಯಿತು. ತನ್ನ ಮನದ ನೋವು, ದುಗುಡ ಹಾಗೂ ಅಭಿಪ್ರಾಯಗಳನ್ನು ಸಹ ಮುಕ್ತವಾಗಿ ಹಂಚಿಕೊಳ್ಳಲಾಗದ ಸಂದಿಗ್ಧತೆಯ ಪರಿಸ್ಥಿತಿಗೆ ಒಳಗಾಗಬೇಕಾಯಿತು. ಹೆಣ್ಣು ಸಾಮಾಜಿಕ ಬದುಕಿನಲ್ಲಿ ಸದಾ ಬಂಧನದಲ್ಲಿ ಇರುವಂತಾಯಿತು. ಎಲ್ಲವನ್ನು ಮೀರುವ ಮನಸ್ಸಿದ್ದರೂ ಅವುಗಳನ್ನು ಮೀರಲಾಗದ ಅಸಹಾಯಕ ಪರಿಸ್ಥಿತಿಯಲ್ಲಿರುವುದು ತಿಳಿಯುತ್ತದೆ.

ಇಂದಿನ ಸಂದರ್ಭದಲ್ಲಿ ಹೆಣ್ಣಿಗೆ ಅನ್ಯಾಯ ಮಾಡುತ್ತಿರುವವರ ಪಟ್ಟಿಯಲ್ಲಿ ಪುರುಷ ಮಾತ್ರವೇ ಇಲ್ಲ. ಅವನೊಂದಿಗೆ ಅವನು ಜೀವಿಸುತ್ತಿರುವ ಕುಟುಂಬ, ಸಮಾಜ, ಅದು ರೂಪಿಸಿರುವ ನಿಯಮಗಳು ಕೂಡ ಸೇರಿರುವುದು ಕಂಡುಬರುತ್ತದೆ. ಅಂದಿಗೂ ಇಂದಿಗೂ ಕುಟುಂಬಗಳಲ್ಲಿ ಹೆಣ್ಣೆ ಹೆಣ್ಣನ್ನು ಶೋಷಿಸುತ್ತಿರುವುದನ್ನು ಕಾಣಬಹುದು. ಅಜ್ಜಿ, ತಾಯಿ, ಅತ್ತೆ ಹೀಗೆ ಮನೆಯ ಹಿರಿಯ ಹೆಣ್ಣು ಜೀವಗಳು ಕುಟುಂಬದ ಹೆಣ್ಣು ಮಗುವನ್ನು ಬೆಳೆಸುವ ಕ್ರಮಗಳು ಬದಲಾವಣೆಗೊಂಡಿಲ್ಲ. ಮೊದಲಿಗೆ ಕುಟುಂಬದಿಂದಲೇ ಹೆಣ್ಣು ಶೋಷಣೆಗೊಳಪಡುತ್ತಿದ್ದಾಳೆ. ನಮ್ಮ ಇಂದಿನ ಪುರುಷ ಪ್ರಧಾನ ಸಮಾಜದಲ್ಲಿ ಗಂಡು ಹೆಣ್ಣಿಗಿಂತ ಅನೇಕ ರಿಯಾಯ್ತಿಗಳನ್ನು ಪಡೆದಿದ್ದಾನೆ. ಉಂಡ ತಟ್ಟೆ ಎತ್ತದೆ ಮೇಲೇಳುವ ಅಧಿಕಾರ ಪಡೆದಿದ್ದಾನೆ. ರಾತ್ರಿ ಹೊತ್ತು ಮೀರಿ ಮನೆಗೆ ಬರುವ ಹಕ್ಕೂ ಈತನಿಗಿದೆ. ಆದರೆ ಹೆಣ್ಣಿಗೆ ಈ ರೀತಿಯ ಯಾವುದೇ ಅವಕಾಶಗಳಿಲ್ಲ. ಕಾರಣ ಹೆಣ್ಣಿಗೆ ಶೀಲ ಎಂಬ ಒತ್ತಾಯ ಪೂರ್ವಕವಾದ ಮೌಲ್ಯದ ಹೇರಿಕೆ ಇದ್ದು, ಇದು ಗಂಡಿಗೆ ಇಲ್ಲದಿರುವುದು ಕೂಡ ಮಹಿಳೆಯರ ಮೇಲೆ ಆಧುನಿಕ ಸಂದರ್ಭದಲ್ಲಿಯೂ ಶೋಷಣೆಗಳು ಮುಂದುವರೆದಿರುವುದನ್ನು ತಿಳಿಸುತ್ತದೆ. ಹೆಣ್ಣು ಮನೆಯಲ್ಲಿದ್ದಾಗ ಜೋರಾಗಿ ನಗುವಂತಿಲ್ಲ, ಮೌನವಾಗಿರಬೇಕು. ಅನಿಸಿದ್ದನ್ನು ಹೇಳುವಂತಿಲ್ಲ. ಹೀಗೆ ಇಂದಿನ ಸಮಾಜದಲ್ಲಿ ಸಂಸ್ಕೃತಿ ಹೆಸರಿನಲ್ಲಿ ಸಾಂಪ್ರದಾಯಿಕ ಕಟ್ಟುಪಾಡುಗಳನ್ನು ಮಹಿಳೆಯರ ಮೇಲೆ ಹೇರಲ್ಪಡುತ್ತಿರುವುದನ್ನು ಕಾಣುತ್ತಿದ್ದೇವೆ. ಇಂತಹ ಸಂದರ್ಭದಲ್ಲಿ ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿನ ಸ್ತ್ರೀಯರಿಗೂ ಇಂದಿನ ಆಧುನಿಕ ಕಾಲಘಟ್ಟದ ಸ್ತ್ರೀಯರಿಗು

ಯಾವುದೇ ವ್ಯತ್ಯಾಸಗಳಿಲ್ಲ. ಕಾಲಘಟ್ಟಗಳು ಮಾತ್ರ ಬದಲಾಗಿವೆ. ಮಹಿಳೆಯರು ಅನುಭವಿಸುವ ನೋವು, ತಲ್ಲಣಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳಾಗಿಲ್ಲ.

ಇದರ ಜೊತೆಗೆ ಇಂದಿನ ಆಧುನಿಕ ಸಮೂಹ ಮಾಧ್ಯಮಗಳು ಸಹ ಸೇರಿಕೊಂಡು ಮಹಿಳೆಯರನ್ನು ಶೋಷಣೆಗೆ ಗುರಿಪಡಿಸುತ್ತಿರುವುದು ನಮಗೆ ತಿಳಿದಿರುವ ಸಂಗತಿಯೆ. ಇಂದಿನ ಜಾಹೀರಾತು, ಆ ಜಾಹೀರಾತುಗಳಲ್ಲಿ ಹೆಣ್ಣನ್ನು ತೋರಿಸುವ ರೀತಿ, ಅವರ ಉಡುಗೆ – ತೊಡುಗೆ ಇವೆಲ್ಲವು ಕೂಡ ಹೆಣ್ಣನ್ನು ಭೋಗದ ವಸ್ತು ಎಂಬಂತೆಯೆ ಚಿತ್ರಿಸುತ್ತವೆ. ಇಂದಿನ ದೃಶ್ಯ ಮಾಧ್ಯಮಗಳು, ಚಲನಚಿತ್ರ ಮಾಧ್ಯಮಗಳೂ ಕೂಡ ಇದರಿಂದ ಹೊರತಾಗಿಲ್ಲ. ಹೆಣ್ಣನ್ನು ಕಾಮೋತ್ತೇಜಕ ಭಾವ ಭಂಗಿಗಳಲ್ಲಿಯೆ ಕಾಣಲು ಬಯಸುತ್ತವೆ. "ಬಾಲ್ಯ ವಿವಾಹದಂತಹ ಅನಿಷ್ಟಕ್ಕೆ ಗುರಿಯಾಗಿ, ಚಿಕ್ಕ ವಯಸ್ಸಿಗೇ ಗಂಡನನ್ನು ಕಳೆದುಕೊಂಡು, ಸುಧಾರಣೆಯ ಪರಿಣಾಮವಾಗಿ ಸತೀ ಹೋಗುವ ಪದ್ಧತಿಯಿಂದಲೂ ವಂಚಿತಳಾಗಿ, ವಾರಣಾಸಿಯಾಗಿ, ಉಡುಪಿಯ ಕೃಷ್ಣ ದೇವಾಲಯದಲ್ಲಿ ನಾಲ್ಕು ಗಂಟೆ ಹಾಕಿ ಎರಡು ಹಿಡಿ ಅಕ್ಕಿ ಪಡೆದು ಹೊಟ್ಟೆ ಹೊರೆಯುವ ಸಾಲು ಸಾಲು ವಿಧವೆಯರಿದ್ದಾರಂತೆ. ಅನೇಕ ಶ್ರೀಮಂತ ಕುಟುಂಬಗಳು ವಿಧವೆಯರ ಜವಾಬ್ದಾರಿ ಹೊರಲಾರದೇ ಇಲ್ಲಿಗೆ ದೂಡಿವೆಯಂತೆ. ಇನ್ನು ಬಡವರ ಗತಿ ಸರಿಯೇ ಸರಿ. ಇದರ ಮೇಲೆ ಪುರೋಹಿತರ, ಪಂಡರ, ಧರ್ಮ ದರ್ಶಿಗಳ ಕಾಮುಕ ಕಣ್ಣೋಟ, ಲೈಂಗಿಕ ಶೋಷಣೆಯ ಕಾಟ ಬೇರೆ"[೧] ಎಂಬಂತಹ ಮಾತುಗಳು ಆಧುನಿಕ ಕಾಲಘಟ್ಟದಲ್ಲಿನ ವರ್ತಮಾನದ ಸ್ತ್ರೀಯರು ಎದುರಿಸುತ್ತಿರುವ ಬಿಕ್ಕಟ್ಟುಗಳ ಕ್ರೂರ ವಾಸ್ತವತೆಯನ್ನು ನಮ್ಮ ಗಮನಕ್ಕೆ ತಂದುಕೊಡುತ್ತವೆ.

ಇಂದಿಗೂ ಅನೇಕ ಬಾಲ್ಯವಿವಾಹ ಪ್ರಕರಣಗಳನ್ನು ನಾವು ಕಾಣುತ್ತಿದ್ದೇವೆ. ಹೀಗೆ ವಿಧವೆಯಾದ ಹೆಣ್ಣನ್ನು ಕೆಲವು ಜನಾಂಗಗಳಲ್ಲಿ 'ಕೂಡಿಕೆ' ಎಂಬ ಸಾಂಪ್ರದಾಯಿಕ ಪದ್ಧತಿಯಿಂದ ಅವಳು ವೈವಾಹಿಕ ಜೀವನವನ್ನು ನಡೆಸುವುದನ್ನು ಕಾಣಬಹುದು. ಆದರೆ ಇಲ್ಲಿಯೂ ಅವಳ ಇಷ್ಟ ಕಷ್ಟಗಳನ್ನು ಪರಿಗಣಿಸುವುದಿಲ್ಲ. ಇನ್ನು ಹಾಗೆಯೇ ಉಳಿದ ವಿಧವೆಯನ್ನು ಸಮಾಜವಿರಲಿ, ಕುಟುಂಬವೇ ಅವಳನ್ನು ನಡೆಸಿಕೊಳ್ಳುವ ರೀತಿ ಶೋಚನೀಯವಾದುದು. ಶುಭ ಸಮಾರಂಭಗಳಲ್ಲಿ ಅವಳ ಮುಖವೇ ಕುಟುಂಬದವರಿಗೆ, ಸಮಾಜಕ್ಕೆ ಅಪಶಕುನವಾಗಿ ಪರಿಣಮಿಸುತ್ತದೆ. ಅವಳಿಗೆ ಅನೇಕ ಕಟ್ಟುಪಾಡುಗಳನ್ನು ಹೇರಿ ಬದುಕೇ ಬೇಡವಾಗಿತ್ತು, ಸತೀ ಹೋಗಬೇಕಿತ್ತು ಎನ್ನುವ ಮನಸ್ಥಿತಿಗೆ ಅವಳನ್ನು ತಂದು ನಿಲ್ಲಿಸುವ ಕ್ರೂರ ವಾಸ್ತವತೆಯನ್ನು ನಮ್ಮ ಗಮನಕ್ಕೆ ತಂದುಕೊಡುತ್ತವೆ.

"ಬೇಂದ್ರೆಯವರ ಪುಟ್ಟ ವಿಧವೆ ಬಾಲ್ಯವಿವಾಹ, ಅದರ ದುರಂತ, ವೈಧವ್ಯದ ದಾರುಣತೆಯನ್ನು ಕಲಾತ್ಮಕವಾಗಿ ತೆರೆದಿಟ್ಟರೆ ವೀಸೀಯವರ 'ಸೆಳೆ' ವಿವಾಹ ಬಾಹಿರ ಸಂಬಂಧಕ್ಕೆ ಒಂದು ಹೆಣ್ಣು ಬಹು ಹಿಂದೆ ತಾನು ಪ್ರೀತಿಸಿದ್ದ ಆದರೆ ಈಗ ವಿವಾಹಿತನಾಗಿರುವ ಗಂಡನನ್ನು ಕರೆಯುವಂತಿದ್ದು ರೋಚಕವಾಗಿದೆ. ಪು.ತಿ.ನರ 'ಗೋಕುಲ ನಿರ್ಗಮನ' ಮತ್ತು 'ಶ್ರೀ ಹರಿಚರಿತೆ'ಯ ಗೋಪಿಕಾ ಸ್ತ್ರೀಯರು 'ಅಹಲ್ಯಾ' ನಾಟಕದ ಅಹಲ್ಯೆ – ಎಲ್ಲ ಹೊಸ ಬೆಳಕಿನಲ್ಲಿ ಮಿಂದವರೇ. ಡಿ.ವಿ.ಜಿ

ಯವರು 'ಶ್ರೀ ರಾಮ ಪರೀಕ್ಷಣಂ' ಮೂಲಕ ಅಹಲ್ಯಾ, ಮಂಡೋದರಿ, ತಾರೆಯರ ಪ್ರಶ್ನೆಗಳನ್ನೆತ್ತುವ ಸೌಜನ್ಯ ತೋರುತ್ತಾರೆ. ಕಡೆಂಗೋಡ್ಲು ಶಂಕರಭಟ್ಟರ 'ಮಾದ್ರಿಯ ಚಿತೆ' ಮತ್ತು ರಾಮಚಂದ್ರಶರ್ಮರ 'ಪಾಂಡು – ಮಾದ್ರಿ' ಪದ್ಯಗಳು ಮಹಾಭಾರತದ ಮಾದ್ರಿಯ ದುರಂತವನ್ನು ಚಿತ್ರಿಸುತ್ತವೆ"[೨] ಎಂಬ ಮಾತುಗಳು ಬದಲಾಗುತ್ತಿರುವ ಸಾಹಿತ್ಯದ ವಸ್ತುವನ್ನು ಕುರಿತು ನಮ್ಮ ಗಮನವನ್ನು ಸೆಳೆಯುತ್ತವೆ. ಕೇವಲ ಭೋಗದ ವಸ್ತು ಎಂತಲೆ ಗುರ್ತಿಸಿದ್ದ ಹೆಣ್ಣಿನ ನೋವುಗಳಿಗೆ ಸಾಹಿತ್ಯದ ಮೂಲಕ ಸ್ಪಂದಿಸುವ ಹಾಗೂ ಆ ನೋವಿಗೆ ಕಾರಣವಾದ ಕೆಲವೊಂದು ಸಾಂಸ್ಕೃತಿಕ ಪರಿಸರದಲ್ಲಿ ಹುಟ್ಟಿಕೊಂಡ ಮೌಲ್ಯಗಳು ಎನಿಸಿದ ಪರಿಕಲ್ಪನೆಗಳನ್ನು ಪ್ರಶ್ನಿಸುವ ಮತ್ತು ವಿಮರ್ಶೆಯ ಒರೆಗಲ್ಲಿಗೆ ಹಚ್ಚುವ ಪ್ರಯತ್ನಗಳು ಈ ಕಾಲಘಟ್ಟಗಳಲ್ಲಿ ನಡೆಯುತ್ತಿವೆ.

ಪ್ರಾಚೀನ ಕಾಲದಲ್ಲಿಯಂತೆಯೆ ಗಂಡು ತನಗಿಷ್ಟ ಬಂದ ಮಹಿಳೆಯೊಂದಿಗೆ ಬದುಕುವ ಅವಕಾಶ ಇಂದಿನ ಆಧುನಿಕ ಪುರುಷನಿಗೂ ಇದೆ. ಇದರಿಂದ ಹೆಣ್ಣು ಅನ್ಯಾಯಕ್ಕೊಳಗಾದರೂ ಅದನ್ನು ಪ್ರತಿಭಟಿಸಲಾಗದ ಇಕ್ಕಟ್ಟಿನಲ್ಲಿ ಮೌನ ಸಮ್ಮತಿಯನ್ನು ಸೂಚಿಸುತ್ತ ಬದುಕುವ ಹಲವಾರು ಉದಾಹರಣೆಗಳು ನಮ್ಮ ಕಣ್ಣೆದುರಿಗೆ ಕಂಡುಬರುತ್ತವೆ. ಹೆಣ್ಣಿಗೆ ತನ್ನ ಅಭಿಪ್ರಾಯ, ಸಲಹೆ, ಸೂಚನೆಗಳನ್ನು ನೀಡುವ ಅವಕಾಶಗಳೂ ಇಲ್ಲ. ಸಾಧ್ಯವಾದಷ್ಟೂ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ಗಂಡಿನ ಅಧೀನದಲ್ಲಿಡಲು ಬಯಸುತ್ತದೆ. ಭೂಮಿ, ಸಂಪತ್ತುಗಳೊಂದಿಗೆ ಹೆಣ್ಣನ್ನು ಸೇರಿಸಿರುವುದರಿಂದಾಗಿ ಅವುಗಳಿಂದ ಆಕೆಯನ್ನು ಬೇರ್ಪಡಿಸಿ ಆಕೆಯೂ ಒಂದು ಜೈವಿಕ ಜೀವಿ ಎಂದು ತೋರ್ಪಡಿಸುವುದು ಇಂದಿನ ಬಹುಮುಖ್ಯ ತುರ್ತಿನ ಕಾರ್ಯವಾಗಿದೆ. ಆಕೆ ಚಂಚಲೆ, ನಿಂದನೆ, ಬೈಗುಳಗಳಿಗಷ್ಟೇ ಆಕೆ ಸೀಮಿತ ಎಂಬ ಮನೋಭಾವವೂ ನಮ್ಮಲ್ಲಿದೆ. ಗಂಡು ಎಷ್ಟು ಹೆಣ್ಣುಗಳ ಸಹವಾಸ ಬೇಕಾದರೂ ಮಾಡಬಹುದು. ಆದರೆ ಸ್ತ್ರೀಗೆ ಆ ಅವಕಾಶಗಳಿಲ್ಲ. ಒಂದು ವೇಳೆ ಸ್ತ್ರೀ ಆ ಕಾರ್ಯಕ್ಕಿಳಿದರೆ ಆಕೆಯನ್ನು ವೇಶ್ಯೆ, ಕುಲಟೆ, ಜಾರ ಸ್ತ್ರೀಯರ ವರ್ಗಕ್ಕೆ ಸೇರಿಸಿ ಅವಳನ್ನು ಮಾನಸಿಕವಾಗಿಯೂ, ದೈಹಿಕವಾಗಿಯೂ ಹಿಂಸೆಗೆ ಒಳಪಡಿಸಲಾಗುತ್ತದೆ.

"ಮಹಿಳೆಯರ ಚಿತಾ ಪ್ರವೇಶ ಅಂದಿನ ಮಹಾಮೌಲ್ಯಗಳಲ್ಲಿ ಒಂದು. ಮಾರ್ಗ ಸಾಹಿತ್ಯದಲ್ಲಿ ಮಾದ್ರಿಯಂಥ ಪೌರಾಣಿಕ ಪಾತ್ರಗಳು, ಗುಂಡಮಬ್ಬೆಯಂಥ ಐತಿಹಾಸಿಕ ಪಾತ್ರಗಳು, ಸೈನಿಕರ ಹೆಂಡತಿಯರಂಥ ಕಾಲ್ಪನಿಕ ಪಾತ್ರಗಳು ಈ ವ್ಯವಸ್ಥೆಯನ್ನು ವೈಭವೀಕರಿಸುತ್ತದೆ"[೩] ಎಂಬ ಮಾತುಗಳು ಹೆಣ್ಣಿಗೆ ವಿಧವೆಯಾದ ನಂತರ ಬದುಕುವ ಹಕ್ಕಿಲ್ಲ ಎಂಬುದನ್ನು ತಿಳಿಸುವ ಜೊತೆಗೆಯೆ ಸೈನಿಕರ ಹೆಂಡತಿಯರಂತಹ ಪಾತ್ರಗಳನ್ನು ಕಾಲ್ಪನಿಕ ಪಾತ್ರಗಳು ಎಂದು ಪರಿಭಾವಿಸಿರುವ ಕ್ರಮಗಳು ಕೂಡ ಆ ಕಾಲಘಟ್ಟದ ಸಾಮಾಜಿಕ ರಾಜಕಾರಣಕ್ಕೆ ಹಿಡಿದ ಕೈಗನ್ನಡಿಯಾಗಿವೆ. ಅಲ್ಲದೆ ಹೆಣ್ಣನ್ನು ಜೈವಿಕ ಜೀವಿಯೆಂದು ಒಪ್ಪಲೂ ಕೂಡ ಸಿದ್ಧವಿಲ್ಲದ ಮನಸ್ಥಿತಿಯನ್ನು ನಮ್ಮ ಗಮನಕ್ಕೆ ತಂದುಕೊಡುತ್ತದೆ. ಜೊತೆಗೆ "ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಹೆಣ್ಣು ಭೋಗದ ಭಾಗವಾಗಿ ಅದೇ ಸಂದರ್ಭದಲ್ಲಿ ಮೋಕ್ಷ ಸಾಧನೆಯ ದಾರಿಯಲ್ಲಿ ಅಡ್ಡ ಬಂದ ಸಂಸಾರದ ಕೇಂದ್ರವಾಗಿ ಮಾತ್ರವೇ ಕಾಣಿಸಿಕೊಂಡಿದ್ದಾಳೆ"[೪]

ಎಂಬ ಮಾತನ್ನು ಒಪ್ಪಬಹುದಾದರೂ ಅದರ ಜೊತೆಗೆ ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಒಡಮೂಡಿರುವ ಮಹಿಳೆಯರ ಪ್ರತಿಭಟನಾತ್ಮಕ ಮನಸ್ಸನ್ನು, ಪ್ರತಿರೋಧವನ್ನು ಕಡೆಗಣಿಸುವಂತಿಲ್ಲ. ಅದು ಕೆಲವೊಮ್ಮೆ ದೈಹಿಕವಾಗಿ ತೋರ್ಪಟ್ಟರೆ, ಕೆಲವೊಮ್ಮೆ ಮಾನಸಿಕವಾಗಿ ರೋಷ, ಕೋಪ, ತಿರಸ್ಕಾರಗಳೆಂಬ ಪ್ರತಿಕ್ರಿಯೆಗಳ ಮೂಲಕ ಅಭಿವ್ಯಕ್ತಿತವಾಗುತ್ತದೆ.

ಹೆಣ್ಣಿಗೆ ಅವಳದೇ ಆದ ಸ್ವತಂತ್ರ ವ್ಯಕ್ತಿತ್ವ ಹಾಗೂ ಮನಸ್ಸಿದೆ ಎಂಬುದನ್ನು ಮರೆತ ನಮ್ಮ ಪುರುಷ ಪ್ರಧಾನ ಸಮಾಜ ಆಕೆಯ ನಡೆ, ನುಡಿ, ಬಾಳುವ ಕ್ರಮದಲ್ಲಿ ಅನೇಕ ನೀತಿಗಳನ್ನು, ಕಟ್ಟುಪಾಡುಗಳನ್ನು ರೂಪಿಸಿ ಅವಳನ್ನು ನಿರ್ಬಂಧದಲ್ಲಿ ಇರಿಸಿರುವುದು ಕಂಡುಬರುತ್ತದೆ. ಕುಂತಿ ಪಾತ್ರವನ್ನು ವಿಶ್ಲೇಷಣೆಗೆ ಒಳಪಡಿಸಿರುವ ಸಂದರ್ಭದಲ್ಲಿ "ಮಹಾಭಾರತದಲ್ಲಿಯ ಹೆಂಗಸರ ಜೀವನವು ಇದೇ ತರಹ ಪರಾಧೀನವಾಗಿತ್ತು. ಅವರ ಸುಖ ದುಃಖಗಳು, ಅವರು ಅವಲಂಬಿಸಿದ್ದ ಪುರುಷರ ಕೈಯಲ್ಲಿ ಇದ್ದವು. ಪುರುಷರು ಕಾರ್ಯ – ಕಾರಣ ನಿಪುಣರು. ಕಾರ್ಯಗಳನ್ನು ಮಾಡುವವರು ಪುರುಷರು. ಅದರ ಪರಿಣಾಮಗಳನ್ನು ಅನುಭವಿಸುವವರು ಹೆಂಗಸರು... ಕುಂತಿಯ ಸಂದರ್ಭದಲ್ಲಿ ಸುಖವು ಎಳ್ಳಷ್ಟಾದರೂ ಇತ್ತೋ ಇಲ್ಲವೋ"[೮] ಎಂಬ ಇರಾವತಿ ಕರ್ವೆಯವರ ಮಾತುಗಳು ಗಮನಾರ್ಹವಾದವು.

ಹೆಣ್ಣು ಎನಿಸಿಕೊಂಡವಳು ಯಾವಾಗಲೂ ಗಂಡಿನ ಆಶ್ರಯದಲ್ಲಿಯೆ ಬದುಕಬೇಕು. ಅವನಿಗೆ ವಿಧೇಯಳಾಗಿರಬೇಕು, ತಗ್ಗಿ ಬಗ್ಗಿ ನಡೆಯಬೇಕು. ಗಂಡಿನ ಯಶಸ್ಸಿನಲ್ಲಿ ಪಾಲುದಾರಳಾಗಿ ಸಹನಶೀಲಳು, ಗೃಹ ಜೀವಿಯೂ ಆಗಿ ಬದುಕಬೇಕು. ಇದು ಆದರ್ಶ ಸ್ತ್ರೀಯಾದವಳ ಕರ್ತವ್ಯ. ಇಂತಹ ಕಟ್ಟುಪಾಡುಗಳನ್ನು ಪುರುಷ ಪ್ರಧಾನ ಪರಂಪರೆ ಹೆಣ್ಣಿನ ಮೇಲೆ ಹೊರಿಸಿ ನಡೆಸಿಕೊಂಡು ಬಂದಿದೆ. ತಮ್ಮದಲ್ಲದ ತಪ್ಪುಗಳಿಗೆ ತಮ್ಮ ಬದುಕಿನುದ್ದಕ್ಕೂ ನರಳಬೇಕಾದ ದುಸ್ಥಿತಿಯಲ್ಲಿ ಬದುಕನ್ನು ಸಾಗಿಸುತ್ತಿದ್ದಾರೆ. ಎಂದಿಗೂ ಹೆಣ್ಣು ಗಂಡಿಗೆ ಸಮಾನಳಾಗಲಾರಳು ಎಂಬ ದೃಢ ಮನಸ್ಸು ನಮ್ಮ ಸಮಾಜದ್ದಾಗಿದೆ. ಹೆಣ್ಣಿನ ಏಳ್ಗೆಯನ್ನು ಒಪ್ಪಿಕೊಳ್ಳುವ ಹಾಗೂ ಪುರಸ್ಕರಿಸುವ ಮನಸ್ಥಿತಿಯಲ್ಲಿಯೂ ಇಲ್ಲ. ಸಹಿಸಿಕೊಳ್ಳಲಾರದ ಸ್ಥಿತಿ ತಲುಪಿ ಗಂಡುಬೀರಿ, ಲಜ್ಜೆಗೆಟ್ಟವಳು ಎಂಬ ಪಟ್ಟಕಟ್ಟಿ ತುಳಿತಕ್ಕೊಳಪಡಿಸುತ್ತದೆ.

ನಮಗೆ ತಿಳಿದಿರುವಂತೆ ಭಾರತೀಯ ಸಮಾಜದಲ್ಲಿ ಶೂದ್ರರು ಮತ್ತು ಸ್ತ್ರೀಯರು ಸಮಾಜದ ಅತ್ಯಂತ ಕೆಳಸ್ತರದಲ್ಲಿರುವವರು. ಮಹಿಳೆಯರ ಸ್ಥಿತಿಯಂತೂ ಶೂದ್ರರಿಗಿಂತ ಕೆಳಮಟ್ಟದ್ದು. ಯಾವುದೇ ರೀತಿಯ ಸ್ವಾತಂತ್ರ್ಯಗಳಿಲ್ಲದೆ, ಪರಂಪರಾಗತವಾದ ನಿಯಮಗಳಿಗೆ ಅನುಗುಣವಾಗಿ ಬದುಕನ್ನು ಸಾಗಿಸುತ್ತಿದ್ದವರು. ಆಧುನಿಕ ಶಿಕ್ಷಣದ ಕಾರಣವಾಗಿ ಮಹಿಳೆ ಹಿಂದಿಗಿಂತ ಸ್ವಲ್ಪ ಸುಧಾರಿಸಿದ್ದರೂ ಕೂಡ ಅವಳನ್ನು ನೋಡುವ ದೃಷ್ಟಿಕೋನ ಮಾತ್ರ ಬದಲಾಗಿಲ್ಲ. ಹೆಣ್ಣು ರಾಜಕೀಯ ಕ್ಷೇತ್ರ, ವಿಜ್ಞಾನ, ಸಾಹಿತ್ಯ ಮೊದಲಾದ ಕ್ಷೇತ್ರಗಳಲ್ಲಿ ತನ್ನ ಛಾಪನ್ನು ಮೂಡಿಸುತ್ತಿರುವಂತೆಯೇ ಅಲ್ಲಿಯೂ ಅನೇಕ ರೀತಿಯ ಶೋಷಣೆಗಳಿಗೆ ಒಳಗಾಗಿರುವುದು ದಿನ ನಿತ್ಯದ ಸುದ್ದಿ ಮಾಧ್ಯಮಗಳಲ್ಲಿ ಗಮನಿಸುವ ಸಂಗತಿಯೇ ಆಗಿದೆ. ಕೂಲಿ ಕಾರ್ಮಿಕ ಮಹಿಳೆ, ರೈತಾಪಿ ಮಹಿಳೆಯಿಂದ ಹಿಡಿದು

ಐ.ಟಿ, ಬಿ.ಟಿ ಕಂಪನಿಯ ಉದ್ಯೋಗಿಯವರೆಗೂ ಹೆಣ್ಣು ಕೆಲಸ ಮಾಡುವ ಸ್ಥಳಗಳಲ್ಲಿ ಪುರುಷರಿಂದ ಎದುರಿಸುತ್ತಿರುವ ಕಿರುಕುಳದ ಅನೇಕ ಪ್ರಕರಣಗಳು ನಮ್ಮ ಕಣ್ಮುಂದೆ ಇರುವುದನ್ನು ಗಮನಿಸಿದಾಗ ಇತ್ತೀಚಿನ ಜಾಗತೀಕರಣ ಸಂದರ್ಭ ಕೂಡ ಇದಕ್ಕೆ ಹೊರತಾಗಿಲ್ಲ. ಜಾಗತೀಕರಣದ ಕಾರಣವಾಗಿ ಹುಟ್ಟಿಕೊಂಡಿರುವ ಐ.ಟಿ, ಬಿ.ಟಿ ಸೆಂಟರ್‌ಗಳು, ಕಾಲ್ ಸೆಂಟರ್ ಮೊದಲಾದ ಸ್ಥಳಗಳಲ್ಲಿ ದುಡಿಯುತ್ತಿರುವ ಹೆಣ್ಣುಗಳ ಸ್ಥಿತಿಗಳನ್ನು ಗಮನಿಸಿದಾಗ ಪ್ರಾಚೀನ ಕಾಲಘಟ್ಟದ ಸ್ತ್ರೀಯರ ಸ್ಥಿತಿಗೂ, ಇಂದಿನ ಆಧುನಿಕ ಕಾಲದ ಮಹಿಳೆಯರ ಸ್ಥಿತಿಗೂ ಅಂತಹ ದೊಡ್ಡ ವ್ಯತ್ಯಾಸಗಳಿಲ್ಲದೆ ಇರುವುದು ಕಂಡುಬರುತ್ತದೆ. ಇದಕ್ಕೆ ಇಂದು ಮಹಿಳೆಯರ ಮೇಲೆ ನಡೆಯುತ್ತಿರುವ ಅತ್ಯಾಚಾರ, ಕೊಲೆ, ಲೈಂಗಿಕ ದೌರ್ಜನ್ಯಗಳಂತಹ ಘಟನೆಗಳೇ ಸಾಕ್ಷಿಯಾಗಿವೆ.

ಇಂದಿನ ಕೋಮುವಾದಿ ಘರ್ಷಣೆಗಳೂ ಸಹ ಮಹಿಳೆಯರನ್ನೇ ಕೇಂದ್ರವಾಗಿರಿಸಿಕೊಂಡಿರುವುದು ಕೂಡ ಮತ್ತೊಂದು ಆಘಾತಕಾರಿ ಬೆಳವಣಿಗೆಯಾಗಿದೆ. ಅನ್ಯ ಕೋಮುಗಳ ನಡುವೆ ವಿವಿಧ ಕಾರಣಗಳಿಗಾಗಿ ನಡೆಯುವ ಜಗಳ, ಘರ್ಷಣೆ, ಹೊಡೆದಾಟಗಳು ಅಂತಿಮವಾಗಿ ಹೆಣ್ಣನ್ನೇ ಗುರಿಯಾಗಿಸಿಕೊಳ್ಳುತ್ತಿವೆ. ತನ್ನ ಎದುರಾಳಿ ವ್ಯಕ್ತಿಯನ್ನು ಹಣಿಯುವ ಸಮಯದಲ್ಲಿ ಆತನ ತಾಯಿ, ತಂಗಿ, ಹೆಂಡತಿ, ಮಗಳು ಹೀಗೆ ಆತನಿಗೆ ಸಂಬಂಧಿಸಿದ ಸ್ತ್ರೀಯರ ಮೇಲೆ ನಡೆಸಲಾಗುವ ದೈಹಿಕ ಹಲ್ಲೆಗಳು, ಬಯ್ಗುಳಗಳು, ಅತ್ಯಾಚಾರ, ಕೊಲೆ ಮೊದಲಾದಂತಹ ಘಟನೆಗಳು ಹೆಣ್ಣನ್ನು ಗಂಡಿನ ಆಸ್ತಿ, ಉಪಭೋಗದ ಪರಿಕರ ಎಂದು ಭಾವಿಸಿದ್ದ ಪ್ರಾಚೀನ ಕಾಲಘಟ್ಟದ ಸಮಾಜವನ್ನೇ ಪ್ರತಿನಿಧಿಸುತ್ತವೆ. ನಮ್ಮಲ್ಲಿ ಬಳಕೆಯಲ್ಲಿರುವ ಸ್ತ್ರೀ ಕೇಂದ್ರಿತ ಬೈಗುಳಗಳೂ ಇದರಿಂದ ಹೊರತಾಗಿಲ್ಲ. ಹೆಣ್ಣು ಮಕ್ಕಳನ್ನು ರೇಗಿಸುವ, ಚುಡಾಯಿಸುವ ಹಾಗೂ ಶಾಲಾ ಕಾಲೇಜುಗಳಲ್ಲಿ ಪ್ರಚಲಿತದಲ್ಲಿದ್ದ ರ್‍ಯಾಗಿಂಗ್‌ನಂತಹ ಪಿಡುಗುಗಳು ಕೂಡಾ ಇದೇ ವ್ಯಾಪ್ತಿಗೆ ಬರುತ್ತವೆ.

ಈ ಹಿನ್ನೆಲೆಯಲ್ಲಿ ಆಧುನಿಕ ಸ್ತ್ರೀ ಕೂಡ ವರ್ತಮಾನದ ಸಂದರ್ಭದಲ್ಲಿ ಪ್ರಾಚೀನ ಕಾಲಘಟ್ಟದ ಸ್ತ್ರೀಯಂತೆ ಅಷ್ಟು ಸುರಕ್ಷಿತವಾಗಿಲ್ಲ ಎಂದೇ ಹೇಳಬಹುದು. ಇಂದು ಕಾನೂನುಗಳು, ಪೋಲೀಸ್ ಠಾಣೆ, ನ್ಯಾಯಾಲಯಗಳು ಇದ್ದಾಗ್ಯೂ ಮಹಿಳೆಯರ ಮೇಲಿನ ಅತ್ಯಾಚಾರ, ಕೊಲೆ, ಲೈಂಗಿಕ ದೌರ್ಜನ್ಯಗಳಂತಹ ಪ್ರಕರಣಗಳನ್ನು ನಿಯಂತ್ರಿಸುವಲ್ಲಿ ನಾವು ಸೋತಿದ್ದೇವೆ. ಇದಕ್ಕೆ ನಮ್ಮ ಇಚ್ಛಾಶಕ್ತಿ ಹಾಗೂ ಪರಂಪರಾಗತವಾದ ಮನಸ್ಥಿತಿ ಕೂಡ ಕಾರಣವಾಗಿದೆ. ಅಲ್ಲದೆ ಸಮಾಜದಲ್ಲಿ ಸಂಭವಿಸುವ ಎಲ್ಲ ಘಟನಾವಳಿಗಳು ತಮ್ಮ ಸೇಡು, ಕ್ರೌರ್ಯಗಳನ್ನು ತೀರಿಸಿಕೊಳ್ಳಲು ಹೆಣ್ಣನ್ನು ಒಂದು ಮಾಧ್ಯಮವನ್ನಾಗಿ ಮಾಡಿಕೊಳ್ಳುತ್ತಿರುವುದು ನಿಜಕ್ಕೂ ಶೋಚನೀಯ ವಿಚಾರವಾಗಿದೆ. ಇಂದು ನಡೆಯುತ್ತಿರುವ ಲೈಂಗಿಕ ದೌರ್ಜನ್ಯ, ಕಿರುಕುಳ, ಸೀಮೆ ಎಣ್ಣೆ ಸುರಿದು ಸುಡುತ್ತಿರುವ ಪಾಶವೀ ಕೃತ್ಯಗಳು, ಬೆತ್ತಲೆ ಮೆರವಣಿಗೆಗಳು, ಆಸಿಡ್ ದಾಳಿ, ಸಾಮೂಹಿಕ ಅತ್ಯಾಚಾರವೆಸಗಿ ಜೀವಂತವಾಗಿ ಸುಡುವುದು, ಚಿಕ್ಕ ಹೆಣ್ಣು ಮಗುವಿನ ಮೇಲೆ ಆಗುತ್ತಿರುವ ಅತ್ಯಾಚಾರಗಳು ಆಧುನಿಕ ಕಾಲದ ಸ್ತ್ರೀಯರು ವರ್ತಮಾನದ ಸಮಯದಲ್ಲಿ ತಾವು ಎದುರಿಸುತ್ತಿರುವ ಬಿಕ್ಕಟ್ಟುಗಳಾಗಿದ್ದು,

ನಾಗರೀಕ ಸಮಾಜ ತಲೆ ತಗ್ಗಿಸುವಂತಾಗಿದೆ. ಅಲ್ಲದೆ ಮಾನವೀಯತೆಯ ಮೌಲ್ಯಗಳ ಅವಸಾನಕ್ಕೆ ಹಿಡಿದ ಕನ್ನಡಿಯಾಗಿದೆ. ಇಂದು ಈ ಕಾರಣವಾಗಿ ಹಲವಾರು ಅಮಾಯಕ ಹಾಗೂ ಅಸಹಾಯಕ ಹೆಣ್ಣು ಜೀವಗಳು ಬಲಿಯಾಗುತ್ತಿವೆ. ಇದು ಆಘಾತಕಾರಿ ಬೆಳವಣಿಗೆಯಾಗಿದ್ದು, ಆತಂಕವನ್ನು ಹುಟ್ಟಿಸುತ್ತಿದೆ.

ಈ ಸಂದರ್ಭದಲ್ಲಿ ಸಿಮೋನ್ ದ ಬೋವಾ ಹೇಳುವ ಈ ಮಾತುಗಳು ಗಮನಿಸತಕ್ಕವು. "ಸಮಸ್ತ ಮನುಕುಲವೇ ಗಂಡಾಗಿ ಬಿಟ್ಟಿದೆ. ಆತ ಹೆಣ್ಣನ್ನು, ಹೆಣ್ಣಿನ ಸ್ವಾಯತ್ತತೆಯಲ್ಲಿ ವಿವರಿಸದೆ, ತನಗೆ ಸಂಬಂಧಿಸಿದಂತೆ, ತನ್ನ ದೃಷ್ಟಿಕೋನಕ್ಕೆ ಅನುಗುಣವಾಗಿ ವ್ಯಾಖ್ಯಾನಿಸುತ್ತಾನೆ. ಹೆಣ್ಣು ಸ್ವತಂತ್ರ ವ್ಯಕ್ತಿಯಲ್ಲ. ಆಕೆಯ ಅಸ್ತಿತ್ವ ಗಂಡಿನ ಅಪ್ಪಣೆಯಲ್ಲಿದೆ. ಆದ್ದರಿಂದಲೇ ಆಕೆಯನ್ನು 'ಲೈಂಗಿಕತೆ' ಎನ್ನಲಾಗಿದೆ. ಅಂದರೆ ಅವಳು ಗಂಡಿಗೆ ಕಾಮದ ಜೀವ ಮಾತ್ರ. ಅವನ ದೃಷ್ಟಿಯಲ್ಲಿ ಆಕೆ ಕಾಮದ ಮುದ್ದೆ, ಆಕೆಯನ್ನೆಂದೂ ಆಕೆಗೆ ಸಂಬಂಧಿಸಿದಂತೆ ಇದುವರೆಗೆ ವ್ಯಾಖ್ಯಾನಿಸಲೇ ಇಲ್ಲ. ಆಕೆ ಬಹುಮಟ್ಟಿಗೆ ಕೇವಲ ಒಂದು ಆಕಸ್ಮಿಕ"[೬] ಎಂಬ ಮಾತುಗಳು ಹೆಣ್ಣಿನ ಜೀವನ ತಂದೆ, ಗಂಡ, ಮಗ ಹೀಗೆ ಪುರುಷರ ಅಧೀನಕ್ಕೆ ಒಳಪಟ್ಟಿರುವುದು ಮತ್ತು ಹೆಣ್ಣನ್ನು ಭೋಗದ ವಸ್ತುವೆಂಬಂತೆ ನೋಡುತ್ತಿರುವ ಪರಂಪರಾನುಗತ ಸಮಾಜಕ್ಕೆ ಹಿಡಿದ ಕನ್ನಡಿಯಾಗಿವೆ.

ಆಧುನಿಕ ಸಂದರ್ಭದಲ್ಲಿ ಹೆಣ್ಣು ಗಂಡಿನಷ್ಟೇ ಸಮರ್ಥವಾಗಿ ಎಲ್ಲ ಕ್ಷೇತ್ರಗಳಲ್ಲಿ ತನ್ನ ಸಾಮರ್ಥ್ಯವನ್ನು ಅಭಿವ್ಯಕ್ತಪಡಿಸಿದ್ದಾಳೆ. ಇಷ್ಟಾದರೂ ಹೆಣ್ಣು ಶೋಷಣೆಗಳಿಂದ ಮುಕ್ತಳಾಗಿಲ್ಲ. ಅಸುರಕ್ಷತೆ, ಶೋಷಣೆ, ಲೈಂಗಿಕ ದೌರ್ಜನ್ಯ, ಮಾನಸಿಕ ಹಾಗೂ ದೈಹಿಕ ಹಿಂಸೆ ಮೊದಲಾದ ಸಮಸ್ಯೆಗಳು ಅವಳನ್ನು ಕಾಡುತ್ತಿವೆ. ಇವು ಅವಳ ಆಶಾದಾಯಕ ಬದುಕಿನೊಳಗೆ ಕಪ್ಪು ಚುಕ್ಕೆಗಳ ಶೋಚನೀಯ ಸ್ಥಿತಿಯನ್ನು ತಂದೊಡ್ಡಿವೆ. ಗಂಡು ಹೆಣ್ಣುಗಳಿಬ್ಬರೂ ಸಮಾನರು ಎಂಬ ಪ್ರಜಾಪ್ರಭುತ್ವವಾದಿ ಆಶಯದ ದೃಷ್ಟಿಕೋನಗಳು ಒಡಮೂಡದ ಹೊರತು ಹೆಣ್ಣು ಪುರುಷ ಪ್ರಧಾನ ವ್ಯವಸ್ಥೆ ನಿರ್ಮಿಸಿರುವ ಸಂಕೋಲೆಗಳಿಂದ ಹೊರಬರಲು ಸಾಧ್ಯವಿಲ್ಲ. ಸಮಾನತೆಯ ಮೌಲ್ಯಗಳು ಒಡಮೂಡಬೇಕಿದೆ.

ಕೊನೆ ಟಿಪ್ಪಣಿಗಳು

೧. ಸಮದರ್ಶಿ, ಪು.ಸಂ-೧೦೨.

೨. ಕನ್ನಡ ಮಹಿಳಾ ಸಾಹಿತ್ಯದಲ್ಲಿ ಸ್ತ್ರೀವಾದಿ ನೆಲೆಗಳು, ಪು.ಸಂ-೧೩೨.

೩. ಸಂವೇದನೆ, ಪು.ಸಂ-೮೫.

೪. ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿಗೆ-೧, ಪು.ಸಂ-೧೨೧.

೫. ಯುಗಾಂತ, ಪು.ಸಂ-೪೧.

೬. ಕನ್ನಡ ಸಾಹಿತ್ಯ ಮತ್ತು ಮಹಿಳೆ, ಪು.ಸಂ-೧೧೭.

ಅಧ್ಯಾಯ : ಒಂಬತ್ತು

ಸಮಾರೋಪ

ಅಧ್ಯಯನದ ಫಲಿತಗಳು

ಅಧ್ಯಯನದ ಹೊಸ ಸಾಧ್ಯತೆಗಳು

ಅಧ್ಯಾಯ : ಒಂಬತ್ತು

ಸಮಾರೋಪ

'ವಿಕ್ರಮಾರ್ಜುನ ವಿಜಯಂ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳನ್ನು ಗಮನಿಸಿದರೆ ಇಲ್ಲಿನ ಸ್ತ್ರೀಯರು ಪುರುಷನ ಭೋಗದ ವಸ್ತು ಮಾತ್ರವಾಗಿದ್ದರು ಎಂಬುದು ಸ್ಪಷ್ಟವಾಗುತ್ತದೆ. ಪ್ರಾಚೀನ ಕಾಲಘಟ್ಟದಲ್ಲಿಯಂತೆಯೆ ಪಿತೃ ಪ್ರಧಾನ ಕುಟುಂಬ ವ್ಯವಸ್ಥೆ ಜಾರಿಯಲ್ಲಿರುವ ಇಂದಿನ ಸಮಾಜದಲ್ಲಿಯೂ ಕೂಡ ಹೆಣ್ಣು ವಿವಾಹವಾಗಿ ಗಂಡನ ಮನೆ ಸೇರಿದರೆ ಆಕೆ ಗಂಡನ ಮನೆಯ ಆಸ್ತಿ ಹಾಗೂ ಸಂಪತ್ತಾಗುತ್ತಾಳೆ. ಕುಟುಂಬದ ಸಂತಾನ ಪ್ರಕ್ರಿಯೆಯ ಮೂಲ ನೆಲೆಯಾಗಿದ್ದಾಳೆ. ಒಂದು ವೇಳೆ ಚಿಕ್ಕ ವಯಸ್ಸಿನಲ್ಲಿಯೆ ಪತಿಯನ್ನು ಕಳೆದುಕೊಂಡರೆ ಅವಳ ಮೈದುನ ಅಥವಾ ಗಂಡನ ಹತ್ತಿರದ ಸಂಬಂಧಿಗಳ ಜೊತೆ ನಿಯೋಗ ಪದ್ಧತಿಯ ಮೂಲಕ ಆಕೆ ಮಕ್ಕಳನ್ನು ಪಡೆಯುತ್ತಿದ್ದ ಪದ್ಧತಿ ಜಾರಿಯಲ್ಲಿತ್ತು. ಈ ವಿವರಗಳು ನಮಗೆ ಈ ಎರಡೂ ಕೃತಿಗಳಲ್ಲಿಯು ಕಂಡುಬರುತ್ತವೆ. ಅಂಬಿಕೆ ಹಾಗೂ ಅಂಬಾಲಿಕೆಯರು ಮಕ್ಕಳನ್ನು ಪಡೆಯುವುದು ಈ ರೀತಿಯ ನಿಯೋಗದ ಮೂಲಕವೇ. ಈ ಎರಡೂ ಕೃತಿಗಳ ಸಂದರ್ಭದಲ್ಲಿ ಬಹು ಪತ್ನಿತ್ವ ಮತ್ತು ಬಹು ಪತಿತ್ವದ ಎರಡೂ ಪದ್ಧತಿಗಳು ಜಾರಿಯಲ್ಲಿದ್ದುದು ತಿಳಿದುಬರುತ್ತದೆ. ಈ ಎರಡೂ ಪದ್ಧತಿಗಳಲ್ಲೂ ಹೆಣ್ಣನ್ನು ಚರಾಸ್ತಿಯೆಂಬಂತೆ ಪರಿಗಣಿಸಲಾಗಿದೆ. ಜೊತೆಗೆ ಇಲ್ಲಿನ ಎರಡೂ ಪದ್ಧತಿಗಳ ಸಂದರ್ಭದಲ್ಲಿಯೂ ತಲ್ಲಣ, ನೋವು, ಹತಾಶೆ ಮೊದಲಾದ ಸಂಘರ್ಷಗಳಿಗೆ ಒಳಗಾಗುವವರು ಮಹಿಳೆಯರೇ ಆಗಿದ್ದಾರೆ.

ಗಂಡನ ಮೃತ ದೇಹದೊಂದಿಗೆ ಜೀವಂತ ಹೆಂಡತಿಯು ಚಿತೆಯೇರುವ, ಸ್ತ್ರೀಯು ಮತ್ತೊಬ್ಬ ಸ್ತ್ರೀಯನ್ನು ದಾಸಿಯನ್ನಾಗಿ ಇಟ್ಟುಕೊಳ್ಳುವ ಪದ್ಧತಿ ಹಾಗೂ ಮಕ್ಕಳಿಲ್ಲದ ಹೆಣ್ಣುಗಳು ಅಥವಾ ವಿಧವೆಯರಾದ ಹೆಣ್ಣುಗಳು ತನ್ನ ಗಂಡನ ಸೋದರ ಅಥವಾ ಪರ ಪುರುಷನೊಡನೆ ಲೈಂಗಿಕ ಸಂಬಂಧವನ್ನು ಹೊಂದಿ ಮಕ್ಕಳನ್ನು ಪಡೆದುಕೊಳ್ಳುವ ಕ್ರಮಗಳು ಇಲ್ಲಿಯೂ ಚಾಲ್ತಿಯಲ್ಲಿರುವುದು ಕಂಡುಬರುತ್ತದೆ. ಇಂತಹ ಯಾವುದೇ ಸಂದರ್ಭದಲ್ಲಿಯೂ ಕೂಡ ಹೆಣ್ಣಿನ ಭಾವನೆಗಳಿಗೆ, ಆಕೆಯ ಅಭಿಪ್ರಾಯಗಳಿಗೆ, ಇಷ್ಟಾನಿಷ್ಟಗಳಿಗೆ ಮನ್ನಣೆ ಇಲ್ಲದೆ ಇರುವುದು ಆ ಕಾಲಘಟ್ಟದ ಸಮಾಜ ಒಪ್ಪಿ ರೂಪಿಸಿಕೊಂಡಿದ್ದ ಸಾಮಾಜಿಕ ನಿಯಮಗಳಾಗಿವೆ. ಈ ಮೂಲಕ ಮಹಿಳೆಯನ್ನು ಲೈಂಗಿಕವಾಗಿ ಶೋಷಣೆಗೆ ಒಳಪಡಿಸುವ ಕ್ರಿಯೆಗಳು ಇಲ್ಲಿದ್ದು, ಅವರನ್ನು ಅಮಾನವೀಯವಾಗಿ ನಡೆಸಿಕೊಳ್ಳುವುದು ಕಂಡುಬರುತ್ತದೆ.

ಇಲ್ಲಿನ ಹೆಣ್ಣುಗಳಿಗೆ ತಮ್ಮ ದೇಹದ ಮೇಲೆ ಹೇಗೆ ಯಾವುದೇ ರೀತಿಯ ಸ್ವಾತಂತ್ರ್ಯ, ಹಕ್ಕುಗಳಿಲ್ಲವೋ ಹಾಗೆಯೇ ಅವರ ಮನಸ್ಸಿನ ಅಭಿಪ್ರಾಯಗಳಿಗೂ ಇಲ್ಲಿ ಬೆಲೆ ಇಲ್ಲ. ಯಾವುದೇ ಗಂಡಿನೊಡನೆ ಕೂಡಬೇಕೆಂದರೆ ಅದನ್ನು ಪ್ರತಿಭಟಿಸುವಂತಿಲ್ಲ, ವಿರೋಧಿಸುವಂತಿಲ್ಲ. ಆಕೆ ಗಂಡಿನ ಆಸ್ತಿ ಎಂಬಂತೆ ಪರಿಗಣಿತವಾಗುತ್ತಿದ್ದಳು. ಈ ಹಿನ್ನೆಲೆಯಲ್ಲಿ ಪಂಪ ಹಾಗೂ ಕುಮಾರವ್ಯಾಸರ ಕಾವ್ಯಗಳಲ್ಲಿನ ಮತ್ಸ್ಯಗಂಧಿ, ಅಂಬಿಕೆ, ಅಂಬಾಲಿಕೆ, ಸತ್ಯವತಿ, ವಿದುರನ ತಾಯಿ, ದ್ರೌಪದಿ, ಸುಭದ್ರೆ, ಭಾನುಮತಿ ಮೊದಲಾದ ಹೆಣ್ಣುಗಳಿಗೆ ಸ್ವತಂತ್ರವಾದ ಅಸ್ತಿತ್ವವಿಲ್ಲ. ಅವರು ಗಂಡು ಹಾಕಿದ ಚೌಕಟ್ಟಿನಲ್ಲಿಯೆ ತಮ್ಮ ಬದುಕನ್ನು ಕಳೆದಿರುವ ವಿವರಗಳನ್ನು ಪಂಪ ಮತ್ತು ಕುಮಾರವ್ಯಾಸರ ಕೃತಿಗಳಲ್ಲಿ ಕಾಣಬಹುದಾಗಿದೆ. ಇಲ್ಲಿನ ಹೆಣ್ಣುಗಳು ಪರಿಸ್ಥಿತಿಯ ಹಿಡಿತಕ್ಕೆ ಸಿಕ್ಕಿ, ಕೈಗೊಂಬೆಗಳಂತೆ ಜೀವನ ಸಾಗಿಸುತ್ತಿರುವುದು ತಿಳಿಯುತ್ತದೆ. ಗಂಡು ಹೇಳಿದ್ದೇ ಅಂತಿಮ ಎಂಬ ಸ್ವಯಂ ಘೋಷಿತ ನಿಯಮಾವಳಿಗಳು ಆ ಕಾಲಘಟ್ಟದ ಸಮಾಜದ ಬಗೆಗೆ ಬೆಳಕನ್ನು ಚೆಲ್ಲುತ್ತವೆ.

ಹೆಣ್ಣನ್ನು ಅಡುಗೆ ಮನೆಯ ಕೆಲಸಗಳಿಗೆ ಸೀಮಿತಗೊಳಿಸಿ ನಾಲ್ಕು ಗೋಡೆಗಳ ನಡುವೆಯೆ ತಮ್ಮ ಜೀವಿತಾವಧಿಯನ್ನು ಕಳೆಯುವಂತೆ ಮಾಡಿದ್ದು ಪುರುಷ ಪ್ರಧಾನ ಸಮಾಜ. ಆಕೆಯನ್ನು ಕೌಟುಂಬಿಕವಾಗಿ ನಿಯಂತ್ರಿಸಿದಂತೆಯೇ ಸಾಮಾಜಿಕವಾಗಿ, ಆರ್ಥಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ ಹಾಗೂ ಧಾರ್ಮಿಕವಾಗಿ ಹಲವು ಕ್ಷೇತ್ರಗಳಲ್ಲಿ ಆಕೆಯ ಸುತ್ತ ಕೆಲವೊಂದು ಮಿತಿಗಳನ್ನು ಹಾಕುತ್ತ ನಿಯಂತ್ರಿಸಿರುವುದು ಕಂಡುಬರುತ್ತದೆ. ಆಹಾರ ತಯಾರಿಕೆಯ ವಿಚಾರವನ್ನು ಅವಳ ಕೈಗಿತ್ತ ಪುರುಷ ತಾನು ಆರ್ಥಿಕ ಚಟುವಟಿಕೆಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳುವ ಮೂಲಕ ಸಮಾಜದಲ್ಲಿ ಪ್ರಬಲವಾದ ಶಕ್ತಿ ಕೇಂದ್ರವಾಗಿ ಬೆಳೆದನು. ಆರ್ಥಿಕ ವ್ಯವಹಾರಗಳು ಗಂಡಿನ ಕೈ ಸೇರಿದ ನಂತರ ಹೆಣ್ಣಿನ ಯಾವುದೇ ಆಲೋಚನೆ, ಅಭಿಪ್ರಾಯಗಳಿಗೆ ಮನ್ನಣೆ ಇಲ್ಲದಂತಾಗಿ ಆಕೆ ಮಕ್ಕಳನ್ನು ಹೆರುವ, ಅವುಗಳನ್ನು ಪೋಷಿಸುವ ಜವಾಬ್ದಾರಿಗಷ್ಟೇ ಸೀಮಿತವಾದಳು. ಅದರಾಚೆಗಿನ ಯಾವುದೇ ಲೋಕಗಳಿಗೆ ಅವಳಿಗೆ ಪ್ರವೇಶ ಇಲ್ಲದಂತಾಯಿತು. ತನ್ನ ದುಃಖವನ್ನು ಸಹ ನೇರವಾಗಿ ವ್ಯಕ್ತಪಡಿಸಲಾಗದೆ ಒತ್ತಡದ ನಿಟ್ಟುಸಿರ ಬದುಕು ಆಕೆಯದಾಯಿತು. ಇದಕ್ಕೆ ಧರ್ಮವೂ ಕೈ ಜೋಡಿಸಿದಾಗ ಮಹಿಳೆಯ ಸ್ಥಾನಮಾನಗಳು ಇನ್ನಷ್ಟು ಅಧಃಪತನಕ್ಕೆ ಇಳಿದವು.

ಗಂಡೇ ಶ್ರೇಷ್ಠ ಎಂಬ ಪರಿಕಲ್ಪನೆ ಬೆಳೆದಂತೆ ಹೆಣ್ಣು ಮತ್ತಷ್ಟು ಮೂಲೆಗುಂಪಾದಳು. ಆಕೆಯ ದೈಹಿಕ ಬದಲಾವಣೆಗಳಿಗೆ ಅನುಸಾರವಾಗಿ ಆಕೆಗೆ ಹೊಲೆತನ ಹಾಗೂ ಸೂತಕದ ಪಟ್ಟಿಗಳು ಬೆಳೆದವು. ವಿಧವೆಯಾದ ಹೆಣ್ಣಿನ ಸ್ಥಿತಿ ಕರಣಾಜನಕವಾಯಿತು. ಆಕೆ ಅಶುಭ, ಅಮಂಗಳಕಾರಿ ಎಂಬ ಪರಿಕಲ್ಪನೆಗಳು ಬೆಳೆದು ಯಾವುದೇ ಶುಭ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶಗಳನ್ನು ಕಳೆದುಕೊಂಡಳು. ಜೀವಮಾನವೆಲ್ಲ ಕತ್ತಲೆಯ ಕೋಣೆಯಲ್ಲಿ ಏಕಾಂಗಿಯಾಗಿ ಬದುಕುವ ನಿರ್ವಿಣ್ಣ ಬದುಕು ಆಕೆಯದಾಯಿತು. ತಾಯ್ತನದ ಸಂಕೇತವಾದ 'ಮುಟ್ಟು' ಎಂಬ ಪರಿಕಲ್ಪನೆ 'ಅಶುದ್ಧತೆ'ಯಾಗಿ ಮಾರ್ಪಟ್ಟು ಆಕೆಯನ್ನು ಮಾನಸಿಕವಾಗಿ ಹಾಗೂ ದೈಹಿಕವಾಗಿ ಇನ್ನಷ್ಟು ಕುಗ್ಗಿಸಲಾಯಿತು. ಎಲ್ಲ

ನೆಲೆಗಳಲ್ಲಿಯೂ ಹೆಣ್ಣನ್ನು ವಂಚಿಸುವ ಪ್ರಕ್ರಿಯೆಗಳು ನಡೆದವು. ಹೆಣ್ಣು ಗಂಡಿಗೆ 'ಸಂಗಾತಿ'ಯಾಗಿ ಕಾಣುವಾಗಲೇ 'ರಾಕ್ಷಸಿ'ಯಾಗಿಯೂ ಅವಳನ್ನು ಕಾಣುವುದರ ಹಿಂದೆ ಪುರುಷ ಪ್ರಧಾನ ಸಮಾಜದ ರಾಜಕಾರಣಗಳು ಕೆಲಸ ಮಾಡುವುದು ಕಂಡುಬರುತ್ತದೆ.

ಹೆಣ್ಣಿಂದಲೇ ಜನ್ಮ ಪಡೆದ ಗಂಡು ನಂತರ ತಾನು ಅದೇ ಹೆಣ್ಣನ್ನು ತನ್ನ ಅಂಕೆಯಲ್ಲಿಟ್ಟುಕೊಂಡಿದ್ದಾನೆ. ನೀನು ಹೀಗೆಯೇ ಬಾಳಬೇಕು, ನಿನ್ನಯ ಆಸೆ ಆಕಾಂಕ್ಷೆಗಳು ಇಂತಹವೇ ಆಗಿರಬೇಕೆಂದು ಅವಳ ಮೇಲೆ ನಿಯಮಗಳನ್ನು ಹೇರುವಂತಹ ಪರಿಸ್ಥಿತಿ ಇಂದಿನ ಸಮಾಜದ್ದಾಗಿದೆ. ಪುರುಷ ಪ್ರಧಾನ ಸಮಾಜದಿಂದ ಸ್ಥಾಪಿತವಾಗಿರುವ ಮೌಲ್ಯಗಳು ಯಾವಾಗಲೂ ಹೆಣ್ಣನ್ನು ದ್ವಿತೀಯ ದರ್ಜೆಯ ಪ್ರಜೆಯಾಗಿಯೆ ಕಾಣುತ್ತವೆ. ಅವಳನ್ನು ಪ್ರಧಾನ ನೆಲೆಗೆ ಬರಲು ಬಿಡುವುದೇ ಇಲ್ಲ. ಎಲ್ಲ ನಿರ್ಧಾರ, ತೀರ್ಮಾನಗಳು ಏನಿದ್ದರೂ ಗಂಡು ತೆಗೆದುಕೊಳ್ಳುವುದೇ ಆಗಿದ್ದವು. ಹೆಣ್ಣಿನ ರಜಸ್ವಲೆತನ, ಮಕ್ಕಳನ್ನು ಹಡೆಯುವ ಕ್ರಿಯೆಯಿಂದಾಗಿಯೆ ಅವರನ್ನು ಮೈಲಿಗೆಯ ಹೆಸರಲ್ಲಿ ದೂರವಿಟ್ಟ ಸಮಾಜ ಆಕೆಯ ದೇಹದಾಚೆಗಿನ ಅವಳ ಮನಸ್ಸು, ಆ ಮನಸ್ಸಿನ ಭಾವನೆಗಳನ್ನು ಗಣನೆಗೆ ತೆಗೆದುಕೊಳ್ಳದಿರುವುದು ನಮ್ಮ ಸಮಾಜದ ಆಲೋಚನಾ ಕ್ರಮದ ದಾರಿದ್ರ್ಯತೆಯನ್ನು ತೋರಿಸುತ್ತದೆ. ಹೆಣ್ಣಿನ ದುಗುಡ, ಆತಂಕ, ಗೊಂದಲ, ಹತಾಶೆ, ಆಸೆ, ಆಕಾಂಕ್ಷೆಗಳಿಗೆ ಬೆಲೆ ಇಲ್ಲ. ಜೈನ ಧರ್ಮ ಹೆಣ್ಣಿಗೆ ಮೋಕ್ಷವಿಲ್ಲ ಎಂದು ಹೇಳುತ್ತದೆ. ಹೆಣ್ಣನ್ನು ಹೆಣ್ಣು ಎಂದು ಗುರ್ತಿಸಬೇಕಾದದ್ದು ಜೈವಿಕ ಭಿನ್ನತೆಯಿಂದಲೇ ಹೊರತು ಸಾಂಸ್ಕೃತಿಕ ರಚನೆಗಳಿಂದಲ್ಲ ಎಂಬುದನ್ನು ಗಂಭೀರವಾಗಿ ಅವಲೋಕಿಸಬೇಕಿದೆ. ಮಹಿಳೆಗೆ ಆಯ್ಕೆಯ ಸ್ವಾತಂತ್ರ್ಯವಿಲ್ಲ. ಅಡುಗೆ ಮನೆ, ಶಯ್ಯಾಗೃಹಗಳೆಂಬ ಸಂಸಾರದ ಬಂಧನದಲ್ಲಿ ಕಟ್ಟಿಹಾಕಲಾಗಿತ್ತು. ಇಂದಿನ ಹೆಣ್ಣಿನ ಸ್ಥಿತಿಯೂ ಇದಕ್ಕೆ ಹೊರತಾಗಿಲ್ಲ.

ಹೆಣ್ಣೊಬ್ಬಳಿಗೇ ಅರಿವಾಗಬಹುದಾದ ಮತ್ತೊಂದು ಹೆಣ್ಣಿನ ನೋವಿನ ಅನುಭವಗಳು 'ವಿಕ್ರಮಾರ್ಜುನ ವಿಜಯಂ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಗಳ ಸಂದರ್ಭದಲ್ಲಿ ಗೌಣವಾಗಿದ್ದು, ವ್ಯಂಗ್ಯ ಹಾಗೂ ವಿರೋಧಾಭಾಸಗಳಿಗೆ ಒಳಗಾಗಿವೆ. ಏಕೆಂದರೆ ಇಲ್ಲಿ ಹೆಣ್ಣಿನಿಂದಲೇ ಮತ್ತೊಂದು ಹೆಣ್ಣಿನ ಮೇಲೆ ಶೋಷಣೆಗಳು ಜರುಗಿರುವುದು ತಿಳಿಯುತ್ತದೆ. ಇದಕ್ಕೆ ಸತ್ಯವತಿ – ಅಂಬಿಕೆ, ಅಂಬಾಲಿಕೆಯರು, ಅಂಬಿಕೆ – ವಿದುರನ ತಾಯಿ, ಸುದೇಷ್ಣೆ – ದ್ರೌಪದಿಯಂತಹ ಸ್ತ್ರೀ ಪಾತ್ರಗಳೇ ಸಾಕ್ಷಿಯಾಗಿವೆ. ಗಂಡಿನ ಮಾನ, ಮರ್ಯಾದೆ, ಪ್ರತಿಷ್ಠೆ, ಕುಟುಂಬ ಹಾಗೂ ಮನೆತನಗಳ ಹೆಗ್ಗಳಿಕೆಗಳ ನಡುವೆ ಹೆಣ್ಣಿನ ಅಂತರಂಗದ ಧ್ವನಿ ಯಾರಿಗೂ ಕೇಳದೆ ಇರುವುದು ಹೆಣ್ಣಿನ ದುರಂತವಾಗಿದೆ. ಪುರಾಣ, ಚರಿತ್ರೆಗಳಾಗಲಿ ಹೆಣ್ಣಿನ ಅಂತರಂಗವನ್ನು ಹೊಕ್ಕಿ ನೋಡುವಲ್ಲಿ ವಿಫಲವಾಗಿವೆ. ಆ ಪ್ರಯತ್ನವನ್ನೂ ಸಹ ಮಾಡಿಲ್ಲ.

ಶೀಲ, ಪಾತಿವ್ರತ್ಯ, ಪಾವಿತ್ರ್ಯ, ತಾಯ್ತನ, ವೈಧವ್ಯ, ಆದರ್ಶ ನಾರಿ ಮೊದಲಾದ ಪರಿಕಲ್ಪನೆಗಳ ಚೌಕಟ್ಟಿನೊಳಗೆಯೆ ಹೆಣ್ಣನ್ನು ನೋಡಲು ಹೊರಟಿರುವುದು ಈ ಎರಡೂ ಕೃತಿಗಳ ಸಂದರ್ಭದಲ್ಲಿ

ಕಂಡುಬರುತ್ತದೆ. ಇದರಾಚೆಗಿನ ಹೆಣ್ಣಿನ ಮನಸ್ಸು, ಆಕೆಯ ಅಂತರಂಗದ ತಹತಹಿಕೆಗಳು, ಬಯಕೆಗಳೆಂಬ ಸ್ವಾಭಾವಿಕ ಭಾವನೆಗಳಿಗೆ ಮನ್ನಣೆ ನೀಡಲಾಗಿಲ್ಲ. ನಮ್ಮಲ್ಲಿನ ಸಾಮಾಜಿಕ ವ್ಯವಸ್ಥೆ ಸ್ತ್ರೀಯನ್ನು ಆದರ್ಶ ನಾರಿಯಾಗಿ, ಗೃಹಿಣಿಯಾಗಿ, ಪುರುಷನ ಏಳ್ಗೆಗಾಗಿ ಶ್ರಮಿಸುವ ವ್ಯಕ್ತಿಯಾಗಿಯೆ ಪರಿಭಾವಿಸಿದೆ. ಇದರ ಆಚೆಗೆ ಹೆಣ್ಣಿಗೂ ಇರುವ ಅವಳ ಸ್ವತಂತ್ರ ಅಸ್ತಿತ್ವ ಹಾಗೂ ವ್ಯಕ್ತಿತ್ವಗಳನ್ನು ಪರಿಗಣಿಸಿಲ್ಲ ಹಾಗೂ ಅವುಗಳಿಗೆ ಮನ್ನಣೆ ನೀಡಿಲ್ಲ.

ಇಷ್ಟರ ನಡುವೆಯೂ ಪಂಪ ಹಾಗೂ ಕುಮಾರವ್ಯಾಸರಿಬ್ಬರು ತಮ್ಮ ಸಮಕಾಲೀನ ಸಾಮಾಜಿಕ ವ್ಯವಸ್ಥೆಯಲ್ಲಿ ವಂಚಿತರಾಗಿದ್ದ ಹಲವಾರು ಸ್ತ್ರೀಯರಿಗೆ ದನಿಯಾಗಿ ಅವರ ನೋವು, ನಲಿವು, ಹತಾಶೆ, ಆಸೆ, ಆಕಾಂಕ್ಷೆ, ಮನಸ್ಸಿನ ತುಮುಲಗಳು ಮೊದಲಾದವುಗಳನ್ನು ಹೊರ ಹಾಕುವ ಸೇತುವೆಗಳಾಗಿದ್ದಾರೆ. ಆ ಮೂಲಕ ಸ್ತ್ರೀಯರ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕರಾಗಿದ್ದು ಸ್ತ್ರೀಯರ ವ್ಯಕ್ತಿತ್ವಕ್ಕೆ ಘನತೆಯನ್ನು ತಂದುಕೊಟ್ಟಿದ್ದಾರೆ ಎಂದರೆ ತಪ್ಪಾಗಲಾರದು.

'ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿ ಮಹಿಳಾ ಸಂಘರ್ಷದ ನೆಲೆಗಳು' ಎಂಬ ಶೀರ್ಷಿಕೆಯಡಿಯಲ್ಲಿ ಅಧ್ಯಯನವನ್ನು ಕೈಗೊಂಡಿದ್ದು, ಅದಕ್ಕೆ ಸಂಬಂಧಿಸಿದಂತೆ ಪರಿವಿಡಿಯನ್ನು ಮಾಡಿಕೊಂಡಿದ್ದು, ಒಂಭತ್ತು ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ.

ಮೊದಲನೆ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಅಧ್ಯಯನದ ವಿಧಾನಗಳು ಹಾಗೂ ಇದುವರೆಗಿನ ಅಧ್ಯಯನಗಳ ಸಮೀಕ್ಷೆಯನ್ನು ಕುರಿತು ಚರ್ಚಿಸಲಾಗಿದೆ.

ಎರಡನೆ ಅಧ್ಯಾಯದಲ್ಲಿ 'ಸಂಘರ್ಷ' ಪರಿಕಲ್ಪನೆಯ ಅರ್ಥ ಮತ್ತು ವ್ಯಾಖ್ಯಾನಗಳು, ಸಂಘರ್ಷದ ವಿಕಾಸದ ನೆಲೆಗಳನ್ನು ಹಾಗೂ ಮಹಿಳಾ ಸಂಘರ್ಷದ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ. 'ಸಂಘರ್ಷ'ವೆಂಬ ಪರಿಕಲ್ಪನೆಯು 'ಕಾದಾಟ', 'ಬಡಿದಾಟ' ಎಂಬಂತಹ ಅರ್ಥಗಳಿಗಷ್ಟೇ ಸೀಮಿತವಾಗದೆ, ವಿಶಾಲವಾದ ಅರ್ಥದಲ್ಲಿ ನೋವು, ಯಾತನೆಗಳು, ತಾಕಲಾಟ, ಸಿಟ್ಟು, ಪ್ರತಿರೋಧ, ಅಸಹನೆ, ತಿರಸ್ಕಾರ ಮೊದಲಾದ ಮಾನಸಿಕ ಪ್ರತಿಕ್ರಿಯೆಗಳವರೆಗೂ ತನ್ನ ವಿಶಾಲ ಅರ್ಥವನ್ನು ಒಳಗೊಂಡಿರುವುದನ್ನು ಕಾಣಬಹುದಾಗಿದೆ. ಅಸ್ತಿತ್ವ, ರಾಜಕೀಯ, ಆರ್ಥಿಕ, ಸಾಮಾಜಿಕ ಮೊದಲಾದ ನೆಲೆಗಳಲ್ಲಿ ಮಹಿಳೆಯರು ಎದುರಿಸುವ ಸಂಘರ್ಷಗಳನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಮಹಿಳಾ ಸಂಘರ್ಷದ ಸ್ವರೂಪವನ್ನು ಕುರಿತು ವಿಶ್ಲೇಷಿಸಲಾಗಿದೆ.

ಅಧ್ಯಾಯ ಮೂರರಲ್ಲಿ ಪಂಪ-ಕುಮಾರವ್ಯಾಸರ ಕಾವ್ಯಗಳಲ್ಲಿನ ಮಹಿಳೆಯರ ನಿರ್ಣಯಾತ್ಮಕ ಆಶಯಗಳನ್ನು ಕುರಿತು ಚರ್ಚಿಸಲಾಗಿದೆ. ಇಲ್ಲಿ ಮತ್ಸ್ಯಗಂಧಿ ಹಾಗೂ ಕುಂತಿಯರು ತಮ್ಮ ತಾಯ್ತನದ ಸಂಘರ್ಷಗಳ ಮೂಲಕ ವ್ಯಕ್ತಪಡಿಸುವ ನಿರ್ಧಾರಗಳು, ಅಂಬಿಕೆ ಮತ್ತು ಅಂಬಾಲಿಕೆಯರ ತಿರಸ್ಕಾರಾತ್ಮಕ ನಿಲುವುಗಳು, ಅಂಬೆ ಹಾಗೂ ದ್ರೌಪದಿಯರ ಪ್ರತಿಭಟನಾತ್ಮಕ ನಿಲುವಿನ ಸಂಘರ್ಷಗಳನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಗಾಂಧಾರಿ, ಸುದೇಷ್ಣೆ ಹಾಗೂ ಭಾನುಮತಿಯರಂತಹ ಅಸಹಾಯಕ

ಸ್ತ್ರೀ ಸಂಘರ್ಷಗಳು ಮತ್ತು ಸುಭದ್ರೆ ಹಾಗೂ ಮಾದ್ರಿಯರ ವಿರಹ ಮತ್ತು ಮರಣದ ಸಂದರ್ಭದಲ್ಲಿನ ನಿರ್ಣಯಾತ್ಮಕವಾದ ಆಶಯದ ಸಂಘರ್ಷಗಳನ್ನು ಕುರಿತು ವಿಶ್ಲೇಷಣೆಗೆ ಒಳಗುಮಾಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಹಿಡಿಂಬೆಯ ಪ್ರೇಮ ನಿವೇದನೆಯನ್ನು, ದ್ವಾರಾವತಿ ಪಟ್ಟಣ ನಿವಾಸಿ ಹೆಣ್ಣುಗಳು ಹಾಗೂ ತಂಟಲು ದಾಸಿಯರ ಸಂಘರ್ಷಗಳನ್ನು ಕುರಿತು ಚರ್ಚಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ರಂಭೆ ಹಾಗೂ ಊರ್ವಶಿಯರು ಅರ್ಜುನನಲ್ಲಿ ತಮ್ಮ ಮನದ ಬಯಕೆಗಳನ್ನು ವ್ಯಕ್ತಪಡಿಸಿ, ಅದನ್ನು ಅರ್ಜುನನು ನಿರಾಕರಿಸಿದ ಕಾರಣವಾಗಿ ಆತನಿಗೆ ಶಾಪ ನೀಡುವಲ್ಲಿನ ಅವರ ಮನದ ಸಂಘರ್ಷಗಳನ್ನು ವಿವರಿಸಲಾಗಿದೆ. ಜೊತೆಗೆ ಅರ್ಜುನನನ್ನು ನೋಡಿದ ಅಮರಾವತೀ ಪಟ್ಟಣದ ವೇಶ್ಯಾ ಸ್ತ್ರೀಯರ ಮನದಲ್ಲಿ ಮೂಡುವ ನವಿರು ಭಾವನೆಗಳು, ಅವರ ಕಾತರದ ಮನಸ್ಥಿತಿಗಳನ್ನು ವಿವರಿಸಲಾಗಿದೆ. ಅರ್ಜುನನ ತಪಸನ್ನು ಕೆಡಿಸಲು ಬರುವ ಅಪ್ಸರಾ ಸ್ತ್ರೀಯರು ಹಾಗೂ ಆತನ ಮುಂದೆ ನರ್ತಿಸಲು ಬರುವ ದೇವಲೋಕದ ಸ್ತ್ರೀಯರ ಮನದ ಸಂಘರ್ಷಗಳನ್ನು ಚರ್ಚಿಸಲಾಗಿದೆ.

ಆರನೇ ಅಧ್ಯಾಯದಲ್ಲಿ ಹೆಸರಿಲ್ಲದೆ ಪುರುಷರ ಹೆಸರಿನ ಮೂಲಕ ಉಲ್ಲೇಖಿತಗೊಳ್ಳುವ ಸೈನಿಕರ ಹೆಂಡತಿಯರು, ವಿದುರನ ತಾಯಿ ಹಾಗೂ ಗಂಧರ್ವನ ಪತ್ನಿಯಂತಹ ಅನಾಮಿಕ ಮಹಿಳೆಯರ ಸಂಘರ್ಷಗಳನ್ನು ವಿಶ್ಲೇಷಣೆಗೊಳಪಡಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ವಿರಳ ಚರ್ಚೆ ಹಾಗೂ ಅಧ್ಯಯನಗಳಿಗೆ ಒಳಗಾಗಿರುವ ನಿಷಾದಿತಿ, ದುಶ್ಶಳೆ, ಮದನಲತೆ, ಉತ್ತರೆ, ತಾಪಸ ಕನ್ಯೆಯರು ಮತ್ತು ಶಿಶುಪಾಲಕನ ತಾಯಿಯರಂತಹ ಅಲಕ್ಷಿತ ಹಾಗೂ ಇತರ ಮಹಿಳೆಯರ ಸಂಘರ್ಷಗಳನ್ನು ಚರ್ಚಿಸಲಾಗಿದೆ.

ಎಂಟನೆ ಅಧ್ಯಾಯದಲ್ಲಿ ಪಂಪ-ಕುಮಾರವ್ಯಾಸರ ಕಾವ್ಯಗಳ ಸ್ತ್ರೀಪಾತ್ರಗಳ ವರ್ತಮಾನದ ಗ್ರಹಿಕೆಗಳನ್ನು ಕುರಿತು ಚರ್ಚಿಸಲಾಗಿದೆ.

ಒಂಭತ್ತನೆಯ ಅಧ್ಯಾಯ ಸಮಾರೋಪದಲ್ಲಿ ಅಧ್ಯಯನದ ಫಲಿತಗಳು ಹಾಗೂ ಅಧ್ಯಯನದ ಹೊಸ ಸಾಧ್ಯತೆಗಳನ್ನು ನೀಡಲಾಗಿದೆ.

ಅನುಬಂಧದಲ್ಲಿ ಪಂಪ-ಕುಮಾರವ್ಯಾಸರ ಕಾವ್ಯಗಳ ಮೇಲೆ ವಿವಿಧ ವಿಶ್ವವಿದ್ಯಾಲಯಗಳಲ್ಲಿ ರಚಿತವಾಗಿರುವ ಪಿಎಚ್.ಡಿ., ಮಹಾಪ್ರಬಂಧಗಳ ಪಟ್ಟಿ ಹಾಗೂ ಪರಾಮರ್ಶನ ಗ್ರಂಥಗಳನ್ನು ನೀಡಲಾಗಿದೆ.

ಅಧ್ಯಯನದ ಫಲಿತಗಳು

೧. ಈ ಅಧ್ಯಯನದ ಸಂದರ್ಭದಲ್ಲಿ ಮಹಿಳೆಯರ ವೈಯಕ್ತಿಕ ಸಂಘರ್ಷಗಳಿಗಿಂತ ಸಾಮುದಾಯಿಕ ಹಿತಾಸಕ್ತಿಯನ್ನು ಹಾಗೂ ಸ್ತ್ರೀ ಸಂಕುಲವನ್ನು ಪ್ರತಿನಿಧಿಸುವ ಸಂಘರ್ಷಗಳನ್ನು ಗುರುತಿಸಲಾಗಿದೆ. ಉದಾಹರಣೆಗೆ ದ್ರೌಪದಿ, ಅಂಬೆ ಮೊದಲಾದ ಸ್ತ್ರೀಯರ ಸಂಘರ್ಷಗಳು ವೈಯಕ್ತಿಕ

ನೆಲೆಯಲ್ಲಿ ನಿಲ್ಲದೆ ಸಂಪೂರ್ಣವಾಗಿ ಎಲ್ಲ ಸ್ತ್ರೀಯರ ನೋವು ಹಾಗೂ ತಲ್ಲಣಗಳನ್ನು ಪ್ರತಿನಿಧಿಸುವ ವ್ಯಕ್ತಿಗಳಾಗಿರುವುದು ಕಂಡುಬರುತ್ತದೆ.

೨. ಪಂಪನ 'ವಿಕ್ರಮಾರ್ಜುನ ವಿಜಯಂ'ನ ದ್ರೌಪದಿಗಿಂತ ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ'ಯ ದ್ರೌಪದಿಯ ಸಂಘರ್ಷಗಳು ಅತ್ಯಂತ ಪರಿಣಾಮಕಾರಿಯಾಗಿವೆ. ಈಕೆ ಪಂಪನ ದ್ರೌಪದಿಗಿಂತ ಹೆಚ್ಚು ಪ್ರತಿರೋಧಾತ್ಮಕವಾಗಿ ಹಾಗೂ ಪ್ರತಿಭಟನಾತ್ಮಕವಾಗಿ ತನ್ನ ನೋವು, ಅಸಮಾಧಾನ ಹಾಗೂ ಪ್ರತಿಕ್ರಿಯೆಗಳನ್ನು ಹೊರಹಾಕಿದ್ದಾಳೆ.

೩. ಈ ಎರಡೂ ಕೃತಿಗಳಲ್ಲಿ ಕಂಡುಬರುವ ರಾಕ್ಷಸ ಹಾಗೂ ಸಾಮಾನ್ಯ ವರ್ಗದ ಸ್ತ್ರೀಯರುಗಳಾದ ಹಿಡಿಂಬೆ, ದ್ವಾರಾವತಿ ಪಟ್ಟಣ ನಿವಾಸಿ ಹೆಣ್ಣುಗಳು, ತಂಟಲು ದಾಸಿಯರು, ಸೈನಿಕರ ಹೆಂಡತಿಯರಂತಹ ಸ್ತ್ರೀಯರಲ್ಲಿಯೂ ಸಹ ಮಧುರವಾದ ಭಾವನೆಗಳಿವೆ ಎಂಬುದು ತಿಳಿಯುತ್ತದೆ.

೪. ಹೆಣ್ಣಿನಿಂದ ಅಥವಾ ಹೆಣ್ಣಿನ ಮೂಲಕ ಮತ್ತೊಂದು ಹೆಣ್ಣಿನ ಮೇಲೆ ಶೋಷಣೆಗಳು ಜರುಗುತ್ತವೆ. ಇಲ್ಲಿ ಹೆಣ್ಣು ಶೋಷಣೆ ಮಾಡುವ ಹಾಗೂ ಶೋಷಣೆಗೆ ಒಳಗಾಗುವ ಎರಡೂ ನೆಲೆಗಳಲ್ಲಿ ಪ್ರಮುಖ ಪಾತ್ರ ವಹಿಸುವುದು ಕಂಡುಬರುತ್ತದೆ.

೫. ಸಂದರ್ಭದ ಪರಿಣಾಮಗಳನ್ನು ಬೇರೆಯವರ ಮೇಲೆ ಹಾಕುವುದು ಕಂಡುಬರುತ್ತದೆ. ಈ ಎರಡೂ ಕೃತಿಗಳಲ್ಲಿ ಗಾಂಧಾರಿ ತನ್ನ ಮಕ್ಕಳು ಹಾಗೂ ಚತುರಂಗ ಬಲದ ರಾಜರ ಸಾವಿಗೆ ಕೃಷ್ಣನು ಕಾರಣ ಎಂದು ಹೇಳಿದರೆ, ಆ ಕಡೆ ಕರ್ಣನ ಸಾವಿಗೆ ಕುಂತಿ ಕಾರಣಳು ಎಂದು ಧರ್ಮರಾಯ ಹೇಳುತ್ತಾನೆ. ಕೀಚಕನ ಸಾವಿಗೆ ಸೈರಂಧ್ರಿ ಕಾರಣಳೆಂದು ವಿರಾಟನು ನುಡಿದರೆ, ಕರ್ಣನ ಸಾವಿಗೆ ಮಧುಸೂದನ ಕಾರಣನೆಂದು ಕುಂತಿ ಹೇಳುತ್ತಾಳೆ.

೬. ದ್ರೌಪದಿಯ ಪಾತ್ರ ಇಲ್ಲಿ ಪ್ರಮುಖವಾಗಿ ಸಂಬಂಧಗಳನ್ನು ಕಾಪಿಟ್ಟುಕೊಳ್ಳುವ ಹಾಗೂ ಅದನ್ನು ಪ್ರತಿ ಸಂದರ್ಭದಲ್ಲಿಯೂ ಎಲ್ಲರಿಗೆ ನೆನಪಿಸುವ ಕಾರ್ಯವನ್ನು ಮಾಡುತ್ತಾ ಹೋಗುತ್ತಾಳೆ.

೭. ರಾಜತ್ವದ ಪದವಿಯು ತಾಯಿಯ ಮೂಲಕ ನಿರ್ಧಾರಿತವಾಗುವ ಅಂಶಗಳು ಅಂಬಿಕೆ – ಅಂಬಾಲಿಕೆ – ವಿದುರನ ತಾಯಿ ಹಾಗೂ ದ್ರೌಪದಿ ಹಾಗೂ ಸುಭದ್ರೆಯರ ಪಾತ್ರ ವಿಶ್ಲೇಷಣೆಯ ಸಂದರ್ಭದಲ್ಲಿ ಸ್ಪಷ್ಟವಾಗುತ್ತವೆ. ಆ ಮೂಲಕ ಪ್ರಾಚೀನ ಭಾರತದಲ್ಲಿ ಮಾತೃಪ್ರಧಾನ ಕುಟುಂಬ ವ್ಯವಸ್ಥೆಗೆ ಪ್ರಾಮುಖ್ಯತೆ ಇತ್ತು ಎಂಬುದನ್ನು ನಾವು ಗಮನಿಸಬಹುದಾಗಿದೆ.

೮. ಪಂಪ ಹಾಗೂ ಕುಮಾರವ್ಯಾಸರು ತಮ್ಮ ಕೃತಿಗಳ ಸಂದರ್ಭದಲ್ಲಿ ಸ್ತ್ರೀಯರನ್ನು ಕುರಿತು ಬಳಸಿರುವ ವಿಶೇಷಣಗಳು, ಪದಗಳು ಅವರನ್ನು ಕೀಳಾಗಿಯೇ ಕಾಣುವ ಹಾಗೂ ಭೋಗದ ವಸ್ತುವಾಗಿಯೇ ಪರಿಭಾವಿಸಿವೆ.

ಅಧ್ಯಯನದ ಹೊಸ ಸಾಧ್ಯತೆಗಳು

೧. 'ವಿಕ್ರಮಾರ್ಜುನ ವಿಜಯಂ' ಹಾಗೂ 'ಕರ್ಣಾಟ ಭಾರತ ಕಥಾಮಂಜರಿ' ಈ ಕೃತಿಗಳ ಸ್ತ್ರೀ ಪಾತ್ರಗಳನ್ನು ರಾಜಕೀಯ ಮುತ್ಸದ್ಧೀತನದ ಹಿನ್ನೆಲೆಯಲ್ಲಿ ಅಧ್ಯಯನ ಮಾಡಬಹುದು.

೨. ಈ ಎರಡೂ ಕೃತಿಗಳಲ್ಲಿನ ಜಾನಪದೀಯ ಅಂಶಗಳನ್ನು ಕುರಿತು ಅಧ್ಯಯನ ಮಾಡಬಹುದು.

೩. ಸ್ತ್ರೀ ಸಂಬಂಧಗಳು ಹಾಗೂ ಸಂಬಂಧಗಳನ್ನು ಅರ್ಥೈಸಿಕೊಳ್ಳುವಿಕೆಯ ಹಿನ್ನೆಲೆಯಲ್ಲಿ ಪಂಪ ಹಾಗೂ ಕುಮಾರವ್ಯಾಸರ ಕೃತಿಗಳ ಮರು ಅಧ್ಯಯನ.

೪. ಪಂಪ ಹಾಗೂ ಕುಮಾರವ್ಯಾಸರ ಕೃತಿಗಳಲ್ಲಿ ಬಳಸಲ್ಪಟ್ಟಿರುವ 'ಧರ್ಮ', 'ಪಾತಿವ್ರತ್ಯ' ಮುಂತಾದ ಪರಿಕಲ್ಪನೆಗಳ ಪರಿಕಲ್ಪನಾತ್ಮಕ ಅಧ್ಯಯನಗಳನ್ನು ಕೈಗೊಳ್ಳಬಹುದು.

೫. ಪಂಪ ಹಾಗೂ ಕುಮಾರವ್ಯಾಸರಿಬ್ಬರೂ ತಮ್ಮ ಕೃತಿಗಳಲ್ಲಿ ಮಹಿಳೆಯರನ್ನು ಕುರಿತು ಬಳಸಿರುವ ಪದ ಸಂಪತ್ತನ್ನು ಮುಖ್ಯವಾಗಿರಿಸಿಕೊಂಡು ಭಾಷಿಕ ಅಧ್ಯಯನಗಳನ್ನು ಕೈಗೊಳ್ಳಬಹುದು.

೬. ಪಂಪನ 'ವಿಕ್ರಮಾರ್ಜುನ ವಿಜಯಂ' ಕೃತಿಯ ಸ್ತ್ರೀ ಪಾತ್ರಗಳ ಸಂಘರ್ಷ ಹಾಗೂ 'ಆದಿಪುರಾಣ' ಕೃತಿಯ ಸ್ತ್ರೀ ಪಾತ್ರಗಳ ಸಂಘರ್ಷಗಳ ಸ್ವರೂಪವನ್ನು ತೌಲನಿಕವಾಗಿ ಅಧ್ಯಯನಕ್ಕೊಳಪಡಿಸಬಹುದು.

೭. ಕೃಷ್ಣನ ಮೂಲಕ ಕುಮಾರವ್ಯಾಸನ 'ಕರ್ಣಾಟ ಭಾರತ ಕಥಾಮಂಜರಿ' ಕೃತಿಯನ್ನು ನೋಡುವ ಬದಲು ದ್ರೌಪದಿಯ ದೃಷ್ಟಿಯ ಮೂಲಕ ಅಧ್ಯಯನಕ್ಕೊಳಪಡಿಸಿ ನಮ್ಮ ಮಹಾಕಾವ್ಯಗಳ ಓದನ್ನು ವಿಸ್ತರಿಸಿಕೊಳ್ಳಬಹುದು.

ಅನುಬಂಧ

ಪಿಎಚ್.ಡಿ., ಮಹಾಪ್ರಬಂಧಗಳ ಪಟ್ಟಿ

ಪರಾಮರ್ಶನ ಗ್ರಂಥಗಳು

ಮಹಾಪ್ರಬಂಧಗಳ ಪಟ್ಟಿ

ಪಂಪ-ಕುಮಾರವ್ಯಾಸರ ಕಾವ್ಯಗಳ ಮೇಲೆ ಬಂದಿರುವ ಪಿಎಚ್.ಡಿ ಸಂಶೋಧನಾ ಮಹಾಪ್ರಬಂಧಗಳು

ಕ್ರಸಂ.	ಸಂಶೋಧಕರು	ಸಂಶೋಧನಾ ಮಹಾಪ್ರಬಂಧದ ಶೀರ್ಷಿಕೆ	ಮಾರ್ಗದರ್ಶಕರು	ವಿ.ವಿ	ವರ್ಷ
೦೧.	ರಾಮಚಂದ್ರರಾವ್.ಬಿ	A Descriptive Grammar Of Pampa Bharata	--	ಮೈಸೂರು ವಿ.ವಿ	೧೯೭೨
೦೨.	ರತ್ನಾವಳಿ	ಪಂಪ-ನನ್ನಯ್ಯ : ತೌಲನಿಕ ಅಧ್ಯಯನ	--	ಬನಾರಸ್ ಹಿಂದೂ ವಿವಿ	೧೯೭೮
೦೩.	ಶಾಂತಿನಾಥ ದಿಬ್ಬದ,	ಪಂಪಭಾರತ : ಒಂದು ಸಾಂಸ್ಕೃತಿಕ ಅಧ್ಯಯನ	ಎಂ.ಬಿ.ಕೊಟ್ರಾಶೆಟ್ಟಿ	ಕರ್ನಾಟಕ ವಿ.ವಿ	೧೯೮೧
೦೪.	ರೇಣುಕಾರಾಧ್ಯ.ಎಸ್.ಎಸ್	ಪಂಪನನ್ನು ಕುರಿತ ವಿಮರ್ಶೆ :ಒಂದು ಅಧ್ಯಯನ	ಕೆ.ಮರುಳಸಿದ್ದಪ್ಪ,	ಬೆಂಗಳೂರು ವಿ.ವಿ	೧೯೮೬
೦೫.	ಪ್ರಭಾವತಿ ಎಸ್.ವಿ	ಕನ್ನಡ ಸಾಹಿತ್ಯದಲ್ಲಿ ದ್ರೌಪದಿ	ಎಂ.ವಿ.ಸೀತಾರಾಮಯ್ಯ	ಬೆಂಗಳೂರು ವಿ.ವಿ	೧೯೯೨
೦೬.	ಮಾಳಿ.ವಿ.ಎಸ್	ಕನ್ನಡ ಸಾಹಿತ್ಯದಲ್ಲಿ ಕರ್ಣ	ಬಿ.ಆರ್.ಹಿರೇಮಠ	ಕರ್ನಾಟಕ ವಿ.ವಿ	೧೯೯೨
೦೭.	ನಾಲವಾರ ಪ್ರಶಾಂತ.ಭೀ	ಆದಿಪುರಾಣ ಒಂದು ಅಧ್ಯಯನ	ಎಸ್.ಪಿ.ಪಾಟೀಲ	ಕರ್ನಾಟಕ ವಿ.ವಿ	೧೯೯೬
೦೮.	ಪಾಂಡುರಂಗ ವಿಠಲ.ಎಚ್	ಪಂಪ, ರನ್ನ, ಕುಮಾರವ್ಯಾಸರಲ್ಲಿ ಗದಾಯುದ್ಧ ಪ್ರಸಂಗ : ಒಂದು ತೌಲನಿಕ ಅಧ್ಯಯನ	ಕೆ.ಜಿ.ನಾರಾಯಣ ಪ್ರಸಾದ	ಉಸ್ಮಾನಿಯಾ ವಿ.ವಿ	೨೦೦೧
೦೯.	ಶಿವಸ್ವಾಮಿ.ಡಿ	ರನ್ನನ ಮೇಲೆ ಪಂಪನ ಪ್ರಭಾವ : ಒಂದು ಅಧ್ಯಯನ	....	ಬೆಂಗಳೂರು ವಿ.ವಿ	೨೦೦೨
೧೦.	ನಳಿನಿ ವೆಂಕಟೇಶ್.ಕೆ.ಎಸ್	ರನ್ನನ ಮೇಲೆ ಪಂಪನ ಪ್ರಭಾವ : ಒಂದು ಅಧ್ಯಯನ	ಕೆ.ಗೋಕುಲನಾಥ	ಬೆಂಗಳೂರು ವಿ.ವಿ	೨೦೦೨

೧೧.	ಪೂರ್ಣಿಮಾ.ಬಿ.ಎನ್	ಸ್ತ್ರೀವಾದಿ ನೆಲೆಯಿಂದ ಪಂಪ ಕುಮಾರವ್ಯಾಸ ಕೃತಿಗಳ ಪುನರ್ ಅಧ್ಯಯನ	ಎಚ್.ಎಸ್.ವೆಂಕಟೇಶಮೂರ್ತಿ	ಬೆಂಗಳೂರು ವಿ.ವಿ	೨೦೦೫
೧೨.	ಶಂಕರನಾರಾಯಣ ಭಟ್ಟ	ಪಂಪನ ಕೃತಿಗಳ ಛಂದಸ್ಸಿನ ಶಿಲ್ಪ : ಒಂದು ಅಧ್ಯಯನ	ಟಿ.ವಿ.ವೆಂಕಟಾಚಲಶಾಸ್ತ್ರೀ	ಮೈಸೂರು ವಿ.ವಿ	೨೦೦೫
೧೩.	ಕೋಕಿಲ.ಪಿ	ಜನಪದ ಮಹಾಭಾರತ, ಪಂಪಭಾರತ ಮತ್ತು ಕುಮಾರವ್ಯಾಸ ಭಾರತ ಒಂದು ತೌಲನಿಕ ಅಧ್ಯಯನ	ಎ.ಆರ್.ಮದನ ಕುಮಾರ್	ಕನ್ನಡ ವಿ.ವಿ	೨೦೧೩
೧೪.	ಜಯಪ್ರಕಾಶ್ ಶೆಟ್ಟಿ. ಎಚ್.	ಪಂಪನ ಕಾವ್ಯಗಳ ವಿಭಿನ್ನ ಓದುಗಳು : ತಾತ್ವಿಕ ವಿಶ್ಲೇಷಣೆ	ರಹಮತ್ ತರೀಕೆರೆ	ಕನ್ನಡ ವಿ.ವಿ	೨೦೧೪
೧೫.	ಹೆಗಡೆ.ಎಲ್.ಆರ್	ಕುಮಾರವ್ಯಾಸನ ಪಾತ್ರ ಸೃಷ್ಟಿ	ಆರ್.ಸಿ.ಹಿರೇಮಠ	ಕರ್ನಾಟಕ ವಿ.ವಿ	೧೯೬೮
೧೬.	ಶ್ರೀನಿವಾಸಮೂರ್ತಿ.ಕೆ.ವಿ	ಕುಮಾರವ್ಯಾಸ ಮತ್ತು ಕರ್ಣಾಟ ಭಾರತ ಕಥಾಮಂಜರಿ : ಒಂದು ವಿಮರ್ಶಾತ್ಮಕ ಅಧ್ಯಯನ	ಲಕ್ಷ್ಮೀನಾರಾಯಣ ಭಟ್.	ಬೆಂಗಳೂರು ವಿ.ವಿ	೧೯೯೧
೧೭.	ಮಾಡಳ್ಳಿ. ಎಸ್	ಕರ್ನಾಟಕ ಭಾರತ ಕಥಾಮಂಜರಿ ಪದ್ಯಾಂತ ಶೈಲಿ		ಕರ್ನಾಟಕ ವಿ.ವಿ	೧೯೯೧
೧೮.	ಶ್ರೀನಿವಾಸ ಕುಲಕರ್ಣಿ	ಕುಮಾರವ್ಯಾಸನ ರೂಪಕಗಳು ಒಂದು ಅಧ್ಯಯನ	ಎಂ.ಎಂ.ಕಲ್ಬುರ್ಗಿ	ಕರ್ನಾಟಕ ವಿ.ವಿ	೧೯೯೨
೧೯.	ಹಾವಜಗೋಳ ಡಿ.ಜಿ	ಕುಮಾರವ್ಯಾಸ ಭಾರತದ ವಿರಾಟಪರ್ವ : ಒಂದು ಸಾಂಸ್ಕೃತಿಕ ಅಧ್ಯಯನ	ಬಿ.ವಿ.ಶಿರೂರ	ಕರ್ನಾಟಕ ವಿ.ವಿ	೧೯೯೪
೨೦.	ಶೋಭಾಶೇರಿಕಾರ ಎನ್.ವಿ	ಪಂಪಭಾರತ ಮತ್ತು ಕುಮಾರವ್ಯಾಸ ಭಾರತದಲ್ಲಿ ಕರ್ಣಪರ್ವ : ಒಂದು ತೌಲನಿಕ ಅಧ್ಯಯನ	ಕೆ.ಜಿ.ನಾರಾಯಣ ಪ್ರಸಾದ	ಉಸ್ಮಾನಿಯಾ ವಿ.ವಿ	೧೯೯೬

೨೧.	ಪಾಂಡುರಂಗವಿಠಲ. ಎಚ್.	ಪಂಪಭಾರತ ಮತ್ತು ಕುಮಾರವ್ಯಾಸ ಭಾರತದ ಅರಣ್ಯ ಪರ್ವ – ಒಂದು ತೌಲನಿಕ ಅಧ್ಯಯನ	ಕೆ.ಜಿ.ನಾರಾಯಣ ಪ್ರಸಾದ	ಉಸ್ಮಾನಿಯಾ ವಿ.ವಿ	೧೯೯೬.
೨೨.	ವೈಜನಾಥ ಕಾಳೆ	ಪಂಪಭಾರತ ಕುಮಾರವ್ಯಾಸ ಭಾರತಗಳಲ್ಲಿ ಭೀಷ್ಮಪರ್ವ : ಒಂದು ತೌಲನಿಕ ಅಧ್ಯಯನ	ಕೆ.ಜಿ.ನಾರಾಯಣ ಪ್ರಸಾದ	ಉಸ್ಮಾನಿಯಾ ವಿ.ವಿ	೧೯೯೬
೨೩.	ಬೋರೇಗೌಡ ಚಿಕ್ಕಮರಳಿ	ಕುಮಾರವ್ಯಾಸ : ಒಂದು ಅಧ್ಯಯನ	ರಾಮೇಗೌಡ (ರಾಗೌ)	ಮೈಸೂರು ವಿ.ವಿ	೧೯೯೮
೨೪.	ವಸಂತಕುಮಾರ ಕೆ.ಎನ್	ಪಂಪ ಮತ್ತು ಕುಮಾರವ್ಯಾಸರು ಚಿತ್ರಿಸಿರುವ 'ಆದಿಪರ್ವ' : ಒಂದು ತೌಲನಿಕ ಅಧ್ಯಯನ	ಕೆ.ಜಿ.ನಾರಾಯಣ ಪ್ರಸಾದ	ಉಸ್ಮಾನಿಯಾ ವಿ.ವಿ	೧೯೯೯
೨೫.	ಬಮ್ಮನಗೌಡ್ರ ಎನ್.ಸಿ	ಕುಮಾರವ್ಯಾಸ ಭಾರತ : ಸಭಾಪರ್ವ ಸಾಂಸ್ಕೃತಿಕ ಒಳನೋಟ	ಸೋಮಶೇಖರ ಇಮ್ರಾಪೂರ	ಕರ್ನಾಟಕ ವಿ.ವಿ	೨೦೦೧
೨೬.	ಜಯಣ್ಣ ಸಿ.ಟಿ	ಕನ್ನಡ ಭಾರತದಲ್ಲಿ ಭೀಮ ಮತ್ತು ದುರ್ಯೋಧನರು	ಶ್ರೀ ಕೃಷ್ಣಭಟ್	ಮದ್ರಾಸ್ ವಿ.ವಿ	೨೦೦೩
೨೭.	ಸುನಂದಾ. ಎನ್.	ಕುಮಾರವ್ಯಾಸ ಭಾರತದಲ್ಲಿ ಭಗವದ್ಗೀತೆ : ಒಂದು ಅಧ್ಯಯನ	ಕೆ.ಗೋಕುಲನಾಥ	ಬೆಂಗಳೂರು ವಿ.ವಿ	೨೦೦೫
೨೮.	ಓಂಕಾರಪ್ಪ. ಸಿ	ಕುಮಾರವ್ಯಾಸ ಭಾರತದ ಭಾಷಾ ವೈಜ್ಞಾನಿಕ ವಿಶ್ಲೇಷಣೆ	ಎಚ್.ಎಸ್.ಬಿಳಿಗಿರಿ	ಪುಣೆ ವಿ.ವಿ	೨೦೦೫
೨೯.	ಜಿಡ್ಡಿಮನಿ ಮಹಾದೇವ	ಕುಮಾರವ್ಯಾಸನ ಭೀಷ್ಮ	ಎಂ.ಎಂ.ಕಲ್ಬುರ್ಗಿ	ಕರ್ನಾಟಕ ವಿ.ವಿ	೨೦೦೫
೩೦.	ಧನಂಜಯ ಕುಂಬ್ಳೆ	ಅರುಣಾಬ್ಜ ಮತ್ತು ಕುಮಾರವ್ಯಾಸ ತೌಲನಿಕ ಅಧ್ಯಯನ	ಪಿ.ಕೃಷ್ಣಭಟ್	ಕಣ್ಣೂರು ವಿ.ವಿ (ಕೇರಳ)	೨೦೧೨
೩೧.	ನಯನ	ಪಂಪ ಕುಮಾರವ್ಯಾಸರ ಮಹಾಕಾವ್ಯಗಳಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು	ಪರಶುರಾಮ್	ಮೈಸೂರು ವಿ.ವಿ	೨೦೧೯

೩೨.	ಸುಬ್ರಹ್ಮಣ್ಯಂ. ನ	ವ್ಯಾಸ, ಪಂಪ ನಾರಾಣಪ್ಪರ ಮಹಾಭಾರತಗಳು : ಒಂದು ತೌಲನಿಕ ವಿಮರ್ಶೆ	ಡಿ.ಎಲ್.ನರಸಿಂಹಾಚಾರ್.	ಮೈಸೂರು ವಿ.ವಿ	
೩೩.	ಕಾಂಚನ ಪರಾಂಜಪೆ	ಕನ್ನಡ ಸಾಹಿತ್ಯದಲ್ಲಿ ಕುಂತಿ : ಒಂದು ಅಧ್ಯಯನ	ಮಾಧು ವೆಂಕರೆಡ್ಡಿ	ಮೈಸೂರು ವಿ.ವಿ	
೩೪.	ರವಿ. ಎಸ್.ಆರ್	ವ್ಯಾಸಭಾರತ ಮತ್ತು ಕುಮಾರವ್ಯಾಸಭಾರತದ ಹಿನ್ನೆಲೆಯಲ್ಲಿ ಎಸ್.ಎಲ್.ಭೈರಪ್ಪನವರ 'ಪರ್ವ' ಒಂದು ಅಧ್ಯಯನ.	ಮಂಜುನಾಥ. ಎಂ.ಜಿ	ಮೈಸೂರು ವಿ.ವಿ.	
೩೫.	ರವಿರಾಜ ಶೆಟ್ಟಿ	ಕನ್ನಡ ಸಾಹಿತ್ಯದಲ್ಲಿ ದುರ್ಯೋಧನ		ಕರ್ನಾಟಕ ವಿ.ವಿ	
		ಡಿ.ಲಿಟ್ ಮಹಾಪ್ರಬಂಧ			
೦೧.	ಎ.ವಿ.ಪ್ರಸನ್ನ	ಕುಮಾರವ್ಯಾಸನ ಕಾವ್ಯಚಿತ್ರಗಳು : ಒಂದು ಅಧ್ಯಯನ.	--	ಕನ್ನಡ ವಿ.ವಿ	೧೯೯೫
		ಎಂ.ಫಿಲ್ ಸಂಪ್ರಬಂಧಗಳು			
೦೧	ಹೇಮಾವತಿ ಸಿ.ಎಚ್	ಕುಮಾರವ್ಯಾಸನ ಸ್ತ್ರೀ ಪಾತ್ರಗಳು : ಸ್ತ್ರೀವಾದಿ ಅಧ್ಯಯನ.	ಎಚ್.ಎಸ್.ರಾಘವೇಂದ್ರರಾವ್	ಕನ್ನಡ ವಿ.ವಿ	೧೯೯೪
೦೨	ವಸಂತ್‌ಕುಮಾರ್ ಕೆ.ಎನ್.	ಪಂಪಭಾರತ ಹಾಗೂ ಕುಮಾರವ್ಯಾಸ ಭಾರತದ ಅರಣ್ಯ ಪರ್ವ – ಒಂದು ತೌಲನಿಕ ಅಧ್ಯಯನ	ಕೆ.ಜಿ.ನಾರಾಯಣಪ್ರಸಾದ್	ಉಸ್ಮಾನಿಯಾ ವಿ.ವಿ	೧೯೯೯
೦೨	ರೇಖಾ ಎಂ.	ಕುಮಾರವ್ಯಾಸ ಭಾರತದ ಆದಿಪರ್ವದಲ್ಲಿ ಪಾಠಾಂತರ ವಿಶ್ಲೇಷಣೆ	ಕೆ.ವಿ.ಶ್ರೀನಿವಾಸಮೂರ್ತಿ	ಕನ್ನಡ ವಿ.ವಿ	೨೦೦೮
೦೩	ಗೀತಾ. ಆರ್	ಕುಮಾರವ್ಯಾಸನ ಉದ್ಯೋಗಪರ್ವದ ಗ್ರಂಥ ಸಂಪಾದನೆಗಳ ಸಮೀಕ್ಷೆ	ಕೆ.ಎಸ್.ಮಧುಸೂದನ	ಕನ್ನಡ ವಿ.ವಿ	೨೦೦೮
೦೪	ಸಂಧ್ಯ. ವಿ	ಕುಮಾರವ್ಯಾಸನ ವಿರಾಟಪರ್ವದ ವಿವಿಧ ಆವೃತ್ತಿಗಳು– ಒಂದು ಅಧ್ಯಯನ	ಜಿ.ಅಶ್ವತ್ಥ ನಾರಾಯಣ	ಕನ್ನಡ ವಿ.ವಿ	೨೦೦೯
೦೫	ಮಾಡಳ್ಳಿ, ಎಸ್.ಡಿ	ಕರ್ನಾಟಕ ಭಾರತ ಕಥಾ ಮಂಜರಿ – ಪದ್ಯಾಂತ ಶೈಲಿ	ಕೆ.ಅನ್ಬನ್	ಕರ್ನಾಟಕ ವಿ.ವಿ	

ಆಕರ ಗ್ರಂಥಗಳು

ಪಠ್ಯಗಳು

೧. ಅನಂತರಂಗಾಚಾರ್.ಎನ್, (ಗ) ಪಂಪ ಮಹಾಕವಿ ವಿರಚಿತ ಪಂಪಭಾರತಂ, ೨೦೦೭, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨. ಕುವೆಂಪು ಮತ್ತು ಮಾಸ್ತಿ ವೆಂಕಟೇಶ ಅಯ್ಯಂಗಾರ್, (ಸಂ) ಕರ್ಣಾಟ ಭಾರತ ಕಥಾಮಂಜರಿ, ೧೯೮೮, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೩. ಪುಟ್ಟಪ್ಪ ಕೆ. (ಪ್ರ.ಸಂ), ಪಂಪಭಾರತಂ ಎಂಬ ವಿಕ್ರಮಾರ್ಜುನ ವಿಜಯಂ, ೨೦೧೩, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಬೆಳ್ಳಾವೆ ವೆಂಕಟನಾರಾಣಪ್ಪ (ಸಂ), ವಿಕ್ರಮಾರ್ಜುನ ವಿಜಯಂ, ೨೦೧೮, ಪೊಡವಿ ಪ್ರಕಾಶನ, ೧೨೬೭, ೧ನೇ ತಿರುವು, ಶ್ರೀರಾಂಪುರ ೨ನೇ ಹಂತ, ಮೈಸೂರು–೨೩.

ಪರಾಮರ್ಶನ ಗ್ರಂಥಗಳು

೧. ಇರಾವತೀ ಕರ್ವೆ, ಅನು : ಸರಸ್ವತೀ ಗಜಾನನ ರಿಸಬೂಡ, ಯುಗಾಂತ, ೨೦೦೭, ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು.

೨. ಓಂಕಾರಪ್ಪ.ಸಿ, ಕುಮಾರವ್ಯಾಸ ಭಾರತದ ಭಾಷಾ ವೈಜ್ಞಾನಿಕ ವಿಶ್ಲೇಷಣೆ, ೧೯೯೫, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು–೧೮.

೩. ಕಲ್ಬುರ್ಗಿ ಎಂ.ಎಂ, ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ, ಕನ್ನಡ ಸಾಹಿತ್ಯದಲ್ಲಿ ಪ್ರತಿಭಟನೆಯ ಅಂಶಗಳು, ಕರ್ನಾಟಕ ಸಾಹಿತ್ಯ ಅಕಾಡೆಮಿ. ಬೆಂಗಳೂರು.

೪. ಕಾಳೇಗೌಡ ನಾಗವಾರ, ಬೇಕಾದ ಸಂಗಾತಿ, ೧೯೮೦, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫. ಕಿಟೆಲ್ ರೆವರೆಂಡ್. ಎಫ್, ಕನ್ನಡ – ಇಂಗ್ಲಿಷ್ ಡಿಕ್ಷನರಿ (೧೮೯೪), ೨೦೧೫, ಏಸಿಯನ್ ಎಜುಕೇಷನಲ್ ಸರ್ವೀಸ್, ಆರ್.ಝುಡ್–೨೫೬, ಸ್ಟ್ರೀಟ್ ನಂ–೧೯, ತುಘಲಕಾಬಾದ್ ಎಕ್ಸ್‌ಟೆನ್ಷನ್, ನ್ಯೂ ಡೆಲ್ಲಿ–೧೧೦೦೧೯. ಕೀರ್ತಿನಾಥ ಕುರ್ತಕೋಟಿ, ಕುಮಾರವ್ಯಾಸ ಭಾರತ ಕಥೆ ಮತ್ತು ಕಾವ್ಯ, ೨೦೧೦,

೬. ಕುರ್ತಕೋಟಿ ಮೆಮೋರಿಯಲ್ ಟ್ರಸ್ಟ್, ದೇಸಾಯಿ ಕಾಲನಿ, ಯುನಿವರ್ಸಿಟಿ ಕ್ರಾಸ್, ಧಾರವಾಡ–೫೮೦೦೦೩.

೭. ಕೀರ್ತಿನಾಥ ಕುರ್ತಕೋಟಿ (ಲೇ), ಕುಮಾರವ್ಯಾಸ, ೧೯೮೯, ಸಾಹಿತ್ಯ ಅಕಾಡೆಮಿ, ರವೀಂದ್ರ ಭವನ, ೩೫, ಫಿರೋಜ್ ಶಾಹ ರಸ್ತೆ, ನವದೆಹಲಿ–೧೧೦೦೦೧.

೮. ಕುವೆಂಪು, ದ್ರೌಪದಿಯ ಶ್ರೀಮುಡಿ, ೧೯೬೦, ಉದಯರವಿ ಪ್ರಕಾಶನ, ವಾಣಿವಿಲಾಸ ಪುರಂ, ಮೈಸೂರು–೦೨.

೯. ಕುಲಕರ್ಣಿ ಬಿ.ಆರ್, ಕುಮಾರವ್ಯಾಸ ವಚನಾಮೃತ, ೨೦೦೭, ಕರ್ನಾಟಕ ಗಮಕ ಕಲಾ ಪರಿಷತ್ತು (ರಿ) ನಂ.೪೬, ಮಹಡಿ ಮೇಲೆ, ಸಿಂಡಿಕೇಟ್ ಬ್ಯಾಂಕ್ ಪಕ್ಕ, ೫ನೇ ಕ್ರಾಸ್, ಮಹಾಕವಿ ಕುವೆಂಪು ರಸ್ತೆ, ಮಲ್ಲೇಶ್ವರಂ, ಬೆಂಗಳೂರು-೫೬೦೦೦೩.

೧೦. ಕುಲಕರ್ಣಿ ಎನ್ಕೆ, ಕುಮಾರವ್ಯಾಸ ಮತ್ತು ಕೃಷ್ಣಕಥೆ, ೧೯೬೮, ಕರ್ನಾಟಕ ಸಹಕಾರೀ ಪ್ರಕಾಶನ ಮಂದಿರ, ಬೆಂಗಳೂರು.

೧೧. ಕೃಷ್ಣಕುಮಾರ್ ಸಿ.ಪಿ, ಕುಮಾರವ್ಯಾಸ ಸಮೀಕ್ಷೆ, ೨೦೦೬, ಚೇತನ ಬುಕ್ ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಲಕ್ಷ್ಮೀ ಟಾಕೀಸ್ ಹಿಂಭಾಗ, ಮೈಸೂರು-೫೭೦೦೨೪.

೧೨. ಕೃಷ್ಣಕುಮಾರ್ ಸಿ.ಪಿ, ಪಂಪ : ಕೆಲವು ಮುಖಗಳು, ೨೦೦೧, ಭಾರತೀ ಪ್ರಕಾಶನ, ಸರಸ್ವತೀಪುರಂ, ಮೈಸೂರು-೯.

೧೩. ಕೋಕಿಲ ಪಿ, ಜನಪದ ಮಹಾಭಾರತ, ಪಂಪಭಾರತ ಮತ್ತು ಕುಮಾರವ್ಯಾಸ ಭಾರತ ಒಂದು ತೌಲನಿಕ ಅಧ್ಯಯನ, ೨೦೧೩, ಕನ್ನಡ ವಿಶ್ವವಿದ್ಯಾಲಯ ಗ್ರಂಥಾಲಯ ಪ್ರತಿ.

೧೪. ಗಾಯತ್ರಿ ಪ್ರಕ್ಯ, ದ್ರೌಪದಿಯ ಛಲಸಾಧನೆ, ೧೯೯೮, ಕಲಾಮಯೂರಿ ಪ್ರಕಾಶನ, ಬೆಂಗಳೂರು.

೧೫. ಗಿರಡ್ಡಿ ಗೋವಿಂದರಾಜು (ಸಂ), ಕುಮಾರವ್ಯಾಸ ವಿಮರ್ಶೆ ಸಂಪುಟ-೩, ೨೦೧೨, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೧೬. ಗೀತಾ ಆರ್, ಕುಮಾರವ್ಯಾಸನ ಉದ್ಯೋಗಪರ್ವದ ಗ್ರಂಥಸಂಪಾದನೆಗಳ ಸಮೀಕ್ಷೆ, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರು ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ.

೧೭. ಗುಂಡಪ್ಪ. ಎಲ್, (ಗ) ಕುಮಾರವ್ಯಾಸ ಮಹಾಕವಿಯ ಕರ್ಣಾಟಕ ಭಾರತ ಕಥಾಮಂಜರಿ, ೨೦೧೩, ಹೇಮಂತ ಸಾಹಿತ್ಯ, ೯೭೨-ಸಿ, ೪ನೇ ಬ್ಲಾಕ್, 'ಇ' ವಿಭಾಗ, ಶ್ರೀ ವೆಂಕಟೇಶ್ವರಸ್ವಾಮಿ ದೇವಸ್ಥಾನದ ಸಮೀಪ, ೧೦-ಎ, ಮುಖ್ಯರಸ್ತೆ, ರಾಜಾಜಿ ನಗರ, ಬೆಂಗಳೂರು-೫೬೦೦೧೦.

೧೮. ಗುರುಲಿಂಗ ಕಾಪಸೆ, ಪಂಪ ೧೧೦೦, ೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೧೯. ಚನ್ನಬಸಪ್ಪ ಬೆಟ್ಟದೂರು, ಕುಮಾರವ್ಯಾಸ-ಪುನರ್ ಪರಿಶೀಲನೆ, ೨೦೦೬, ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾಮ, ಗುಲ್ಬರ್ಗಾ-೫೮೫೧೦೧.

೨೦. ಜಯಪ್ರಕಾಶ್‌ಶೆಟ್ಟಿ. ಎಚ್, ಪಂಪನ ಕಾವ್ಯಗಳ ವಿಭಿನ್ನ ಓದುಗಳು : ತಾತ್ವಿಕ ವಿಶ್ಲೇಷಣೆ, ೨೦೧೩-೧೪, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಅಪ್ರಕಟಿತ ಪಿಎಚ್.ಡಿ ಪ್ರತಿ.

೨೧. ಜವರೇಗೌಡ ದೇ, ಗದುಗಿನ ಭಾರತ : ಒಂದು ಸಾಂಸ್ಕೃತಿಕ ಅಧ್ಯಯನ, ೧೯೭೮, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೨. ಜವಳಿ ಬಿ.ಸಿ., ಕುಮಾರವ್ಯಾಸ ಭಾರತದಲ್ಲಿ ಕೃಷ್ಣಸಂಧಾನದ ಸನ್ನಿವೇಶ, ೧೯೯೧, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೩. ತಾರಾನಾಥ ಎನ್.ಎಸ್, ಪಂಪನ ಅಧ್ಯಯನಗಳು, ೨೦೧೧, ಸಂವಹನ, ೧೨/೧ಎ, ಈರ್ವಿನ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು-೫೭೦೦೦೧.

೨೪. ದಿವ್ಯ ಕೆ.ಎಲ್, ಮಧ್ಯಕಾಲೀನ ಸಾಹಿತ್ಯದಲ್ಲಿ ಸ್ತ್ರೀ ಪಾತ್ರಾಭಿವ್ಯಕ್ತಿ, ೨೦೧೮, ದೇಸಿ ಪುಸ್ತಕ, ವಿಜಯ ನಗರ, ಬೆಂಗಳೂರು-೫೬೦೦೪೦.

೨೫. ಧನಂಜಯ ಕುಂಬ್ಳೆ, ಅರುಣಾಬ್ಜ ಮತ್ತು ಕುಮಾರವ್ಯಾಸ ತೌಲನಿಕ ಅಧ್ಯಯನ, ೨೦೧೨, ಚಿಂತನ ಬಯಲು ಪ್ರಕಾಶನ, ಅನಿಕೇತನ, ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ-೫೭೪೨೧೯.

೨೬. ಧನವಂತ ಹಾಜವಗೋಳ, ವಿರಾಟಪರ್ವ : ಸಾಂಸ್ಕೃತಿಕ ನೆಲೆ, ೨೦೦೫, ಸಿವಿಜಿ ಪಬ್ಲಿಕೇಷನ್ಸ್ ಬೆಂಗಳೂರು.

೨೭. ನಳಿನಿ ವೆಂಕಟೇಶ್ ಕೆ.ಎಸ್, ರನ್ನನ ಮೇಲೆ ಪಂಪನ ಪ್ರಭಾವ-ಒಂದು ಅಧ್ಯಯನ, ೨೦೧೦, ಭಾರತೀ ಪ್ರಕಾಶನ, ಸರಸ್ವತೀ ಪುರಂ, ಮೈಸೂರು-೫೭೦೦೦೯.

೨೮. ನಾಗರಾಜಶಾಸ್ತ್ರಿ.ಡಿ, ಜಿ.ಬ್ರಹ್ಮಪ್ಪ (ಅನು), ಪಂಪನ ಆದಿಪುರಾಣ, ೧೯೯೬, ರತ್ನತ್ರಯ ಪ್ರಕಾಶನ, ೭೧೩ ಇ & ಎಫ್ ಬ್ಲಾಕ್, ಕುವೆಂಪುನಗರ, ಮೈಸೂರು-೫೭೦೦೨೩.

೨೯. ನಾಯಕ ಜಿ.ಎಚ್, ಮತ್ತೆ ಮತ್ತೆ ಪಂಪ, ೨೦೦೮, ಅಹರ್ನಿಶಿ ಪ್ರಕಾಶನ, ೪ನೆಯ ತಿರುವು, ಜ್ಯೋತಿರಾವ್ ಬೀದಿ, ವಿದ್ಯಾ ನಗರ, ಶಿವಮೊಗ್ಗ.

೩೦. ನಾರಾಯಣ ಪಿ.ವಿ, ಪಂಪ ಕಾವ್ಯಸಾರ, ೨೦೧೩, ಕಾಮಧೇನು ಪುಸ್ತಕ ಭವನ, ನಂ.೫/೧, ನಾಗಪ್ಪ ಸ್ಟ್ರೀಟ್, ಶೇಷಾದ್ರಿಪುರ, ಬೆಂಗಳೂರು-೫೬೦೦೨೦.

೩೧. ನಾರಾಯಣ ಪಿ.ವಿ, ಹಳಗನ್ನಡ ಪದ ಸಂಪದ, ೨೦೧೦, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.

೩೨. ನಾರಾಯಣಶೆಟ್ಟಿ, ಎಸ್ (ಸುಜನಾ), ಭಾರತ ಕಥಾಮಂಜರಿ, ೧೯೬೪, ಸರಸ ಸಾಹಿತ್ಯ ಪ್ರಕಾಶನ, ಮೈಸೂರು-೪.

೩೩. ಪ್ರಭಾವತಿ ಎಸ್.ವಿ, ದ್ರೌಪದಿ-ಒಂದು ಅಧ್ಯಯನ, ೧೯೯೬, ಅಪರ್ಣಾ ಪ್ರಕಾಶನ, ೪೬೮, ೨೫ನೇ ಮುಖ್ಯ ರಸ್ತೆ, ಬಿ.ಟಿ.ಎಂ. ಬಡಾವಣೆ, ಬೆಂಗಳೂರು-೫೬೦೦೭೬.

೩೪. ಪ್ರಭಾವತಿ ಎಸ್.ವಿ, ಕನ್ನಡ ಸಾಹಿತ್ಯದಲ್ಲಿ ದ್ರೌಪದಿ, ೧೯೮೩, ಬೆಂಗಳೂರು ವಿಶ್ವವಿದ್ಯಾನಿಲಯ ಸಂಶೋಧನಾ ಪ್ರಬಂಧ.

೩೫. ಪ್ರಸನ್ನ ಎ.ವಿ, ಕುಮಾರವ್ಯಾಸನ ಕಾವ್ಯ ಚಿತ್ರಗಳು : ಒಂದು ಅಧ್ಯಯನ, ೨೦೦೫, ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನ (ರಿ), ೩೧, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೩೬. ಪಾದೇಕಲ್ಲು ವಿಷ್ಣುಭಟ್ಟ (ಸಂ), ಭಾನುಮತಿಯ ನೆತ್ತ, ೨೦೧೨, ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ.

೩೭. ಬಸವರಾಜು. ಎಲ್, ಹಳಗನ್ನಡ ವಿಶೇಷ ಶಬ್ದಕೋಶ, ೨೦೧೨, ಅಭಿರುಚಿ ಪ್ರಕಾಶನ, ನಂ.೩೮೬,೧೪ನೆಯ ಮುಖ್ಯರಸ್ತೆ, ೩ನೆಯ ಅಡ್ಡರಸ್ತೆ, ಸರಸ್ವತೀಪುರ, ಮೈಸೂರು-೯.

೩೮. ಬಸವಾರಾಧ್ಯ ಎನ್ (ಪ್ರಸಂ), ಸಂಕ್ಷಿಪ್ತ ಕನ್ನಡ ನಿಘಂಟು, ೧೯೭೫, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.

೩೯. ಬಸವಾರಾಧ್ಯ ಎನ್ (ಪ್ರಸಂ), ಕನ್ನಡ ನಿಘಂಟು, (ಎಂಟನೆಯ ಸಂಪುಟ), ೨೦೧೦, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.

೪೦. ಬಸವಾರಾಧ್ಯ ಎನ್, ಅ.ರಾ.ಮಿತ್ರ, ಹಂ.ಪ.ನಾ (ಸಂಗ್ರಹಕಾರರು), ಪಂಪಭಾರತ ಸಂಗ್ರಹ, ೧೯೬೪, ಪ್ರಾಚ್ಯ ಕಾವ್ಯ ಪ್ರಕಾಶ ಮಂದಿರ, ೭೪೩, ಮೂರನೆಯ ಬ್ಲಾಕು, ರಾಜಾಜಿನಗರ, ಬೆಂಗಳೂರು-೧೦.

೪೧. ಬೆನಗಲ್ ರಾಮರಾವ್, ಪಾನ್ಯಂ ಸುಂದರಶಾಸ್ತ್ರಿ, ಪುರಾಣನಾಮ ಚೂಡಾಮಣಿ, ೨೦೦೩, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.

೪೨. ಮಹಾದೇವ ಜಿಡ್ಡಿಮನಿ, ಕುಮಾರವ್ಯಾಸನ ಭೀಷ್ಮ, ೨೦೦೪, ಸ್ನೇಹ ಸಂಕುಲ ಪ್ರಕಾಶನ, ಮೂಡಲಗಿ-೫೯೧೩೧೨.

೪೩. ಮಣಿಮಾಲಿನಿ.ವಿ.ಕೆ, ದ್ರೌಪದಿಯ ಸಮೀಕ್ಷೆ, ೧೯೯೬, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ.

೪೪. ಮುಗಳಿ ರಂ.ಶ್ರೀ, ಕನ್ನಡ ಸಾಹಿತ್ಯ ಚರಿತ್ರೆ, ೨೦೦೮, ಗೀತಾ ಬುಕ್ ಹೌಸ್ : ಪ್ರಕಾಶಕರು : ಮೈಸೂರು-೫೭೦೦೦೧.

೪೫. ಯಜ್ಞನಾರಾಯಣ ಉಡುಪ, ಪುರಾಣ ಭಾರತ ಕೋಶ, ೨೦೦೩, ಕನ್ನಡ ಪುಸ್ತಕ ಪ್ರಾಧಿಕಾರ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೫೬೦೦೦೧೮.

೪೬. ರಂಗಣ್ಣ ಎಸ್.ವಿ, ಕುಮಾರವ್ಯಾಸ ವಾಣಿ, ೧೯೪೨, ಶ್ರೀ ಪಂಚಾಚಾರ್ಯ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

೪೭. ರವಿ ಚಲವಾದಿ, 'ಪ್ರಾಚೀನ ಕನ್ನಡ ಸಾಹಿತ್ಯ-ಸಂಘರ್ಷ', ೨೦೦೯, ದೇಸಿ ಪುಸ್ತಕ, ವಿಜಯ ನಗರ, ಬೆಂಗಳೂರು-೫೬೦೦೪೦.

೪೮. ರಾಜರತ್ನಂ ಜಿ.ಪಿ. (ಸಂಗ್ರಾಹಕ), ಪಂಪಕವಿಯ ಕರ್ಣರಸಾಯನಂ, ೧೯೫೦, ಬಿ.ಬಿ.ಡಿ. ಪವರ್ ಪ್ರೆಸ್, ಬೆಂಗಳೂರು ನಗರ.

೪೯. ರಾಜಶೇಖರಯ್ಯ ಎಲ್, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ವಿವಾಹ ಪದ್ಧತಿ, ೨೦೦೨, ಅಭಿರುಚಿ ಪ್ರಕಾಶನ, ನಂ.೪, ೨ನೆಯ ಅಂತಸ್ತು, ಕ.ರಾ.ರ.ಸಾ.ಸಂ. ಕಟ್ಟಡ, ಕೆ.ಆರ್.ಸರ್ಕಲ್, ಮೈಸೂರು.

೫೦. ರಾಠೋಡ.ಕೆ, ಕರ್ನಾಟಕದಲ್ಲಿ ಧಾರ್ಮಿಕ ಸಂಘರ್ಷ, ೨೦೧೮, ಅರವಿಂದ್ ಇಂಡಿಯಾ, ೬೪೫/ಎ, ೬ನೇ ಮುಖ್ಯರಸ್ತೆ, ೫ನೇ ಅಡ್ಡ ರಸ್ತೆ, ವಿಜಯ ನಗರ, ಬೆಂಗಳೂರು-೫೬೦೦೪೦.

೫೧. ರಾಧಾಕೃಷ್ಣ ಕೆ.ಈ (ಸಂ), ಪಂಪಾಧ್ಯಯನ, ೨೦೧೦, ಸ್ವಪ್ನ ಬುಕ್ ಹೌಸ್, ಗಾಂಧಿ ನಗರ, ಬೆಂಗಳೂರು.

೫೨. ರಾಮಕೃಷ್ಣ ಹೆಚ್.ಎನ್, ಪಂಪ ಮತ್ತು ರತ್ನಾಕರವರ್ಣಿಯ ಕಾವ್ಯಗಳಲ್ಲಿ ಭರತ-ಬಾಹುಬಲಿಯ ಪ್ರಸಂಗ, ೨೦೧೦-೧೧, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರು ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ.

೫೩. ರೇಖಾ ಎಂ, ಕುಮಾರವ್ಯಾಸ ಭಾರತದ 'ಆದಿಪರ್ವ'ದಲ್ಲಿ ಪಾಠಾಂತರ ವಿಶ್ಲೇಷಣೆ, ೨೦೦೮, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರು ಅಪ್ರಕಟಿತ ಎಂ.ಫಿಲ್ ಸಂಪ್ರಬಂಧ.

೫೪. ರೇಣುಕಾರಾಧ್ಯ ಎಸ್.ಎಸ್, ಪಂಪನನ್ನು ಕುರಿತ ವಿಮರ್ಶೆ : ಒಂದು ಅಧ್ಯಯನ, ೧೯೮೬, ಕನ್ನಡ ವಿಶ್ವವಿದ್ಯಾಲಯ ಗ್ರಂಥಾಲಯ ಪ್ರತಿ.

೫೫. ಲತಾ ಅಭಯ್, ಕಲ್ಲು ಬೆಂಕಿಗಳಿಂದ ನಲಿವು ಬೆಳಕಿನೆಡೆಗೆ, ೨೦೦೮, ಸತ್ಯ ಎಂಟರ್ ಪ್ರೈಸಸ್, ಬೆಂಗಳೂರು.

೫೬. ಲಕ್ಷ್ಮೀದೇವಿ ಎಂ.ಆರ್, ಕುಮಾರವ್ಯಾಸ ಮತ್ತು ಜಾನಪದ, ೧೯೯೭, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು-೫೬೦೦೦೨.

೫೭. ವಸಂತಕುಮಾರ್ ಬಿ.ವಿ, ಪಂಪ ಪದ ಪ್ರಪಂಚ ಭಾಗ-೧, ೨೦೧೧, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲ ಮೊದಲನೆಯ ಹಂತ, ಮೈಸೂರು-೦೨.

೫೮. ವಸಂತಕುಮಾರ್ ಹ್ಯಾರಾನೆ, ಪಂಪ ಒಂದು ಅವಲೋಕನ, ೨೦೦೬, ಹ್ಯಾರಾನೆ ಮಿತ್ರ ಪ್ರಕಾಶನ, ಹಾಸನ.

೫೯. ವಿವಿಧ ಲೇಖಕರು, ಕುಮಾರವ್ಯಾಸ ಪ್ರಶಸ್ತಿ, ೧೯೭೮, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು-೧೮.

೬೦. ವಿವಿಧ ವಿದ್ವಾಂಸರು, ಮಹಾಕವಿ ಪಂಪ ಹಾಗೂ ಅವನ ಕೃತಿಗಳು, ೧೯೬೬, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೬೧. ವೀರಣ್ಣ.ಸಿ, ಕನ್ನಡ ಸಾಹಿತ್ಯ ಚಾರಿತ್ರಿಕ ಬೆಳವಣಿ, ಸಂಪುಟ-೧, ೨೦೧೭, ನಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – ೫೬೦೦೦೧.

೬೨. ವೆಂಕಟೇಶಮೂರ್ತಿ ಎಚ್.ಎಸ್, ಪಂಪನ ವಿಕ್ರಮಾರ್ಜುನ ವಿಜಯ ತಿಳಿಗನ್ನಡ ಅವತರಣ, ೨೦೧೪, ಅಭಿನವ, ೧೭/೧೮-೨, ಮೊದಲನೆಯ ಮುಖ್ಯರಸ್ತೆ, ಮಾರೇನಹಳ್ಳಿ, ವಿಜಯನಗರ, ಬೆಂಗಳೂರು-೫೬೦೦೪೦.

೬೩. ವೆಂಕಟಾಚಲಶಾಸ್ತ್ರೀ ಟಿ.ವಿ, ಪಂಪ, ೧೯೮೭, ಸಾಹಿತ್ಯ ಅಕಾಡೆಮಿ, ಬೆಂಗಳೂರು.

೬೪. ವೆಂಕಟನಾರಾಣಪ್ಪ.ಬಿ, ಶ್ರೀನಿವಾಸಮೂರ್ತಿ.ಎಂ.ಆರ್, (ಪ್ರಸಂ) ಮೈಸೂರು ವಿಶ್ವವಿದ್ಯಾನಿಲಯದ ಇಂಗ್ಲಿಷ್ – ಕನ್ನಡ ನಿಘಂಟು (ಪರಿಷ್ಕೃತ), ಸಂಪುಟ ೧-೪ (ಏಕೀಕೃತ ಸಂಪುಟ), ೨೦೦೭, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬೫. ವೆಂಕಟಸುಬ್ಬಯ್ಯ.ಜಿ (ಸಂ), ಪ್ರಿಸಮ್ ಇಂಗ್ಲಿಷ್-ಕನ್ನಡ ನಿಘಂಟು, ೨೦೦೬, ಪ್ರಿಸಮ್ ಬುಕ್ಸ್ ಪ್ರೈವೆಟ್ ಲಿಮಿಟೆಡ್, ಬೆಂಗಳೂರು.

೬೬. ವೆಂಕಟಸುಬ್ಬಯ್ಯ.ಜಿ (ಸಂ), ಇಗೋ ಕನ್ನಡ, ಸಾಮಾಜಿಕ ನಿಘಂಟು (ಸಂಯುಕ್ತ ಸಂಪುಟ), ೨೦೧೩, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು-೫೬೦೦೦೧.

೬೭. ಶಂಕರನಾರಾಯಣ ಭಟ್ಟ. ಯು, ಪಂಪನ ಕೃತಿಗಳ ಛಂದಃಶಿಲ್ಪ, ೨೦೧೩, ಅಭಿರುಚಿ ಪ್ರಕಾಶನ, ನಂ.೪. ನಗರ ಸಾರಿಗೆ ಸಂಸ್ಥೆ ಕಟ್ಟಡ, ಕೆ.ಆರ್.ಸರ್ಕಲ್, ಮೈಸೂರು-೧.

೬೮. ಶಂಕರರಾವ್ ಚ.ನ, ಸಮಾಜಶಾಸ್ತ್ರದ ಪರಿಚಯ, ೨೦೧೩-೨೦೧೪, ಜೈ ಭಾರತ್ ಪ್ರಕಾಶನ, ಮಂಗಳೂರು.

೬೯. ಶಶಿಕಲಾ.ಎಸ್.ಡಿ, ರತ್ನಮ್ಮ.ಕೆ.ಎಸ್, ಮಂಜುಳಾ ಹುಲ್ಲಹಳ್ಳಿ, ವಿಜಯಾನ್ವೇಷಣ, ೨೦೦೪, ಡಾ.ವಿಜಯಾದಬ್ಬೆ ಅಭಿನಂದನ ಗ್ರಂಥ ಸಮಿತಿ, ೬೯೭/೮, ಶ್ರೀ ಭೈರವೇಶ್ವರ ಕೃಪಾ, ವಿಶ್ವಮಾನವ ಜೋಡಿ ರಸ್ತೆ, ಸರಸ್ವತಿ ಪುರಂ, ಮೈಸೂರು-೫೭೦೦೦೯.

೭೦. ಶಶಿಕಲಾ ವೀರಯ್ಯಸ್ವಾಮಿ (ಸಂ), ಸಂವೇದನೆ, ೧೯೫೫, ಕನ್ನಡ ಸಾಹಿತ್ಯ ಪರಿಷತ್ತು, ಪಂಪ ಮಹಾಕವಿ ರಸ್ತೆ, ಬೆಂಗಳೂರು.

೭೧. ಶಾಂತಿನಾಥ ದಿಬ್ಬದ, ಪಂಪಭಾರತ ಒಂದು ಸಾಂಸ್ಕೃತಿಕ ಅಧ್ಯಯನ, ೧೯೯೪, ಶ್ರೀ ಸಿದ್ದಲಿಂಗೇಶ್ವರ ಬುಕ್ ಡಿಪೋ ಮತ್ತು ಪ್ರಕಾಶನ, ಮುಖ್ಯಬೀದಿ, ಗುಲಬರ್ಗಾ-೫೮೫೧೦೧.

೭೨. ಶಾಮರಾಯ ತ.ಸು, ಕುಮಾರವ್ಯಾಸ ನಿಘಂಟು, ೧೯೮೧, ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಗೋಕುಲಂ ಮೂರನೆಯ ಹಂತ, ಮೈಸೂರು-೦೨.

೭೩. ಶ್ಯಾಮಸುಂದರ ಬಿದರಕುಂದಿ, ಕುಮಾರವ್ಯಾಸನ-ಕನ್ನಡ ಭಾರತ, ೨೦೦೪, ಕರ್ನಾಟಕ ಸಾಹಿತ್ಯ ಅಕಾಡೆಮಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೭೪. ಶಿವರಾಮಕಾರಂತ.ಕೆ, ಸಿರಿಗನ್ನಡ ಅರ್ಥಕೋಶ, ೨೦೧೨, ಸಪ್ನ ಬುಕ್ ಹೌಸ್, ೩ನೇ ಮುಖ್ಯ ರಸ್ತೆ, ಗಾಂಧಿ ನಗರ, ಬೆಂಗಳೂರು-೫೬೦೦೦೯.

೭೫. ಶಿವರುದ್ರಪ್ಪ ಜಿ.ಎಸ್, ಪಂಪ ಒಂದು ಅಧ್ಯಯನ, ಸ್ವಪ್ನ ಬುಕ್ ಹೌಸ್ ಗಾಂಧಿನಗರ, ಬೆಂಗಳೂರು.

೭೬. ಶ್ರೀಕಂಠಯ್ಯ. ತೀ.ನಂ, ಪಂಪ, ೧೯೫೩, ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾಲಯ, ಮೈಸೂರು-೦೬.

೭೭. ಶ್ರೀನಿವಾಸ ಕುಲಕರ್ಣಿ, ಕುಮಾರವ್ಯಾಸನ ರೂಪಕಗಳು, ೧೯೯೫, ಶ್ರೀ ವೀರನಾರಾಯಣ ಸಂಸ್ಕೃತಿ ಪ್ರತಿಷ್ಠಾನ, ಗದಗ.

೭೮. ಶ್ರೀನಿವಾಸ ಮೂರ್ತಿ ಕೆ.ವಿ, ಕುಮಾರವ್ಯಾಸ, ೧೯೯೮, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ ಬೆಂಗಳೂರು-೫೬೦೦೦೧.

೭೯. ಶ್ರೀನಿವಾಸಶರ್ಮ ಎಚ್.ವಿ, (ಗ) ಪಂಪ ಮಹಾಕವಿಯ ವಿಕ್ರಮಾರ್ಜುನ ವಿಜಯ, ೨೦೧೦, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು-೦೨.

೮೦. ಶ್ರೀನಿವಾಸ ಹಾವನೂರ (ಸಂ), ಡಾ.ರಂ.ಶ್ರೀ.ಮುಗಳಿ ಚಿತ್ರಿಸಿದ ಪಂಪ-ರನ್ನರು, ೨೦೦೬, ಅತ್ತಿಮಬ್ಬೆ ಪ್ರಕಾಶನ, ಮೈಸೂರು.

೮೧. ಶ್ರೀನಿವಾಸ ಹಾವನೂರ (ಸಂ), ಶಬ್ದಮಂಜರಿ ಕೋಶ, ೧೮೬೯, ಕರ್ನಾಟಕ ಸರ್ಕಾರ, ಕನ್ನಡ ಪುಸ್ತಕ ಪ್ರಾಧಿಕಾರ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು-೧೮.

೮೨. ಶೇಷಗಿರಿರಾವ್ ಡಿ.ವಿ (ಸಂ), ಕುಮಾರವ್ಯಾಸ ಸರಸವಾಣಿ, ೧೯೭೬, ಜಯನಗರ, ೮ನೆಯ ಬ್ಲಾಕ್, ಬೆಂಗಳೂರು-೪೧.

೮೩. ಶೇಷಗಿರಿರಾವ್.ಎಲ್.ಎಸ್ (ಸಂ), ಇಂಗ್ಲಿಷ್-ಇಂಗ್ಲಿಷ್-ಕನ್ನಡ ನಿಘಂಟು, ೨೦೦೮, ಸುಭಾಷ್ ಸ್ಟೋರ್ಸ್, ಬುಕ್ಸ್ ಕಾರ್‌ನರ್, # ೨೨-೨೩, ಕೃಷ್ಣ ಬಿಲ್ಡಿಂಗ್ಸ್, ಅವಿನ್ಯೂ ರಸ್ತೆ, ಬೆಂಗಳೂರು-೦೨.

೮೪. ಸಂಧ್ಯ. ವಿ, ಕುಮಾರವ್ಯಾಸನ ವಿರಾಟಪರ್ವದ ವಿವಿಧ ಆವೃತ್ತಿಗಳು-ಒಂದು ಅಧ್ಯಯನ, ೨೦೦೯, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಅಪ್ರಕಟಿತ ಎಂ.ಫಿಲ್ ಪ್ರತಿ.

೮೫. ಸಣ್ಣಯ್ಯ ಬಿ.ಎಸ್, ಪಂಪ ಮಹಾಕವಿ, ೨೦೦೭, ಸಂವಹನ, ೧೨/೧ಎ, ಈವ್ನಿಂಗ್ ಬಜಾರ್ ಹಿಂಭಾಗ, ಶಿವರಾಂ ಪೇಟೆ, ಮೈಸೂರು-೫೭೦೦೦೧.

86. ಸಿದ್ಧಲಿಂಗಯ್ಯ ಎಚ್, ವಚನ ಪಂಪ ಭಾರತ -೨೦೦೧, ಸಂವಹನ, ೧೨/೧ಎ, ಈವನಿಂಗ್ ಬಜಾರ್ ಹಿಂಭಾಗ, ಶಿವರಾಂಪೇಟೆ, ಮೈಸೂರು-೫೭೦೦೦೧.

೮೭. ಸಿಮೋನ್ ದ ಬೋವಾ, ಕನ್ನಡ ಓದು : ಡಾ.ಎಚ್.ಎಸ್.ಶ್ರೀಮತಿ, ೨೦೧೧, ಕೆ.ಬಿ.ಪ್ರಗತಿ, ಬರಹ ಪಬ್ಲಿಷಿಂಗ್ ಹೌಸ್, ನಂ.೧೧೯, ೩ನೇ ತಿರುವು, ೮ನೇ ಮುಖ್ಯ ರಸ್ತೆ, ಹಂಪಿನಗರ, ಬೆಂಗಳೂರು-೫೬೦೧೦೪.

೮೮. ಸೀತಾರಾಮ ಜಾಗೀರ್‌ದಾರ್, ಸಾಪೇಕ್ಷ, ೧೯೯೦, ಅತ್ತಿಮಬ್ಬೆ ಪ್ರಕಾಶನ ೭೧೩, ಇ ಮತ್ತು ಎಫ್ ಬ್ಲಾಕ್, ಕುವೆಂಪು ನಗರ, ಮೈಸೂರು.

೮೯. ಸೀತಾರಾಮಯ್ಯ. ವಿ, ಪಂಪ, ೧೯೭೭, ಐ.ಬಿ.ಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು-೫೬೦೦೦೯.

೯೦. ಸೀತಾರಾಮಯ್ಯ. ವಿ, ಮಹಾಕವಿ ಪಂಪ, ೧೯೭೫, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೯೧. ಸೀತಾರಾಮಯ್ಯ. ವಿ (ಸಂ), ಕುಮಾರವ್ಯಾಸ, ೧೯೭೩, ಸಪ್ನ ಬುಕ್ ಹೌಸ್, ೩ನೇ ಮುಖ್ಯ ರಸ್ತೆ, ಗಾಂಧಿ ನಗರ, ಬೆಂಗಳೂರು—೫೬೦೦೦೯.

೯೨. ಸೀತಾರಾಮಯ್ಯ ಎಂ.ವಿ, (ಸಂ) ಕವಿರಾಜಮಾರ್ಗಂ, ೨೦೧೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨.

೯೩. ಹರಿದಾಸ ಎಂ.ಎಚ್, ಮಹಾಕವಿ ಕುಮಾರವ್ಯಾಸ, ೨೦೦೯, ವಿಕ್ರಮ ಪ್ರಕಾಶನ, ಕೆ.ಸಿ.ರೋಡ್, ಗದಗ-೫೮೨೧೦೧.

೯೪. ಹೆಗಡೆ ಎಲ್.ಆರ್, ಕುಮಾರವ್ಯಾಸನ ಪಾತ್ರ ಸೃಷ್ಟಿ, ೧೯೭೮, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೯೫. ಹೆಗಡೆ ಎಲ್.ಆರ್, ಕುಮಾರವ್ಯಾಸ, ೧೯೮೨, ಜ್ಞಾನ ಸಾಧನ ಗ್ರಂಥಮಾಲೆ, ಹೆಗಡೆ, ಕುಮಟಾ.

೯೬. ಹೇಮಾವತಿ ಸಿ.ಎಚ್, ಕುಮಾರವ್ಯಾಸನ ಸ್ತ್ರೀಪಾತ್ರಗಳು : ಸ್ತ್ರೀವಾದಿ ಅಧ್ಯಯನ, ೨೦೦೯, ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿರುವ ಎಂ.ಫಿಲ್ ಪ್ರತಿ.

* * * *



ಜಾನಪದ ಅಧ್ಯಯನ ವಿಭಾಗ